ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)



1016-1020

ಸಂಶೋಧಕರು

ಗಣೇಶ ಹೆಗಡೆ

ಮಾರ್ಗದರ್ಶಕರು

ಡಾ. ಸ.ಚಿ. ರಮೇಶ

ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ ೫೮೩೨೭೬

೨೦೨೦

307.77
HEG







ಪರಾಮರ್ಶನ ಗ್ರಂಥ
ಅಕ್ಷರ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

Shri Mahantesh
BOOK BINDING
Digital Colour Print
Laser Prints & Xerox

ಅಕ್ಷರ ಗ್ರಂಥಾಲಯ
ಕನ್ನಡ ವಿ.ವಿ. ಹಂಪಿ

ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ
ಸಲ್ಲಿಸಿರುವ ಮಹಾಪ್ರಬಂಧ)

ಸಂಶೋಧಕರು
ಗಣೇಶ ಹೆಗಡೆ

ಮಾರ್ಗದರ್ಶಕರು
ಡಾ. ಸ.ಚಿ. ರಮೇಶ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೨೦

ಅಕ್ಷರ ಗ್ರಂಥಾಲಯ

141336

307.77
HEG 8

ಮಾರ್ಗದರ್ಶಕರ ದೃಢೀಕರಣ ಪತ್ರ

ಗಣೇಶ ಹೆಗಡೆ ಇವರು **ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳು** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಸಮಾಜ ವಿಜ್ಞಾನಗಳ ನಿಕಾಯದ **ಜಾನಪದ ಅಧ್ಯಯನ ವಿಭಾಗಕ್ಕೆ** ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ :
ಸ್ಥಳ : ವಿದ್ಯಾರಣ್ಯ

(ಡಾ. ಸ.ಚಿ. ರಮೇಶ)
ಮಾರ್ಗದರ್ಶಕರು ಹಾಗೂ ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಸಂಶೋಧಕರ ಪ್ರಮಾಣ ಪತ್ರ

ಗಣೇಶ ಹೆಗಡೆ ಇವರು **ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳು** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ಸ.ಚಿ. ರಮೇಶ,** ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಸಮಾಜ ವಿಜ್ಞಾನಗಳ ನಿಕಾಯದ **ಜಾನಪದ ಅಧ್ಯಯನ ವಿಭಾಗಕ್ಕೆ** ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ :
ಸ್ಥಳ : ವಿದ್ಯಾರಣ್ಯ

ಗಣೇಶ ಹೆಗಡೆ
ಸಂಶೋಧಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

೧.೧. ವಿಷಯ ಪ್ರವೇಶ
೧.೨. ಅಧ್ಯಯನದ ಉದ್ದೇಶ
೧.೩. ಅಧ್ಯಯನದ ವ್ಯಾಪ್ತಿ ಮತ್ತು ಮಹತ್ವ
೧.೪. ಅಧ್ಯಯನದ ವಿಧಿ ವಿಧಾನಗಳು
೧.೫. ಅಧ್ಯಯನದ ಸ್ವರೂಪ
೧.೬. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

೧.೧. ವಿಷಯ ಪ್ರವೇಶ

ಭಾರತ ಬಹು ಭಾಷೆ, ಸಾಹಿತ್ಯ, ಸಂಸ್ಕೃತಿ, ಸಂಪ್ರದಾಯ, ಸಾಂಸ್ಕೃತಿಕ ಆಚರಣೆಗಳನ್ನು ಹೊಂದಿದ ಸಮುದಾಯಗಳನ್ನು ತನ್ನಲ್ಲಿರಿಸಿಕೊಂಡಿದೆ. "ಭಾರತೀಯ ಸಂಸ್ಕೃತಿಯಲ್ಲಿ ಅನೇಕ ಜಾತಿಯ ಬುಡಕಟ್ಟು ಸಮುದಾಯಗಳೇ ಮೂಲವಾಗಿ ಪರಿಣಮಿಸಿವೆ. ಬುಡಕಟ್ಟು ಸಮುದಾಯದ ಬೆಳೆವಣಿಗೆಯ ಬಳಿಕವೇ ಅನೇಕ ಜಾತಿಗಳು ತಲೆದೋರಿದವು ಎನ್ನಬಹುದು. ಭಾರತದಲ್ಲಿ ಉದ್ಭವಿಸಿದ್ದ ಜಾತಿ ಸಮಸ್ಯೆ ಬೇರಾವ ಕಡೆ ಕಾಣಿಸಿಗಲಾರದು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಜಾತಿಯ ಕಟ್ಟುಪಾಡುಗಳೊಂದಿಗೆ ಜಾತಿಯಾದ ಪಂಚಮ ಜಾತಿಯೂ ಇತ್ತೆಂದು ತಿಳಿದುಬರುತ್ತದೆ".[೧] ಪಂಚಮ ಜಾತಿಯವರು ಮೇಲಿನ ನಾಲ್ಕು ಜಾತಿಯವರ ಸೇವೆ ಮಾಡಿಕೊಂಡು ಸಾಗುವ ಅನಿವಾರ್ಯ ಪರಿಸ್ಥಿತಿ ಉಂಟಾಗಿತ್ತು ಎಂಬುದು ಚರಿತ್ರೆಯಿಂದ ತಿಳಿದು ಬಂದ ಸಂಗತಿಯಾಗಿದೆ. ಮೊದಮೊದಲು ಕೇವಲ ವೃತ್ತಿಯಾಗಿಸಿಕೊಂಡು ಬಂದ ಜನವರ್ಗಗಳು ಜಾತಿಯ ಹಣೆಪಟ್ಟಿಯಿಂದ ಹಲವಾರು ಜಾತಿ ವರ್ಗಗಳಾಗಿ ಬೆಳೆದು ಬಂದ ಸಂಗತಿ ವಿಸ್ಮಯಕರವಾಗಿದೆ. ಹೀಗೆ ಪುರೋಹಿತಶಾಹಿಗಳ ದಬ್ಬಾಳಿಕೆಗೆ ಒಳಗಾದ ಕೆಳಸ್ತರದವರ ಬದುಕು ಅತ್ಯಂತ ಶೋಚನಿಯವಾಗಿತ್ತು. ಪಂಚಮ ಜಾತಿಗಳೊಂದಿಗೆ ಬುಡಕಟ್ಟು ವಾಸಿಗಳೆಂಬ ಮತ್ತೊಂದು ಗುಂಪು ಮೇಲಿನ ಐದು ಜಾತಿಗಳೊಂದಿಗೆ ಬೆರೆಯದೇ ತಮ್ಮದೇ ಆದ ವಿಶಿಷ್ಟ ಪರಂಪರೆ, ರೀತಿ ನೀತಿಯನ್ನು ಒಳಗಾಗಿಸಿಕೊಂಡು ಸಾಗಿಬಂದ ಸಂಸ್ಕೃತಿಯೇ ಅಲಕ್ಷಿತ ಸಮುದಾಯಗಳ ಸಂಸ್ಕೃತಿಯಾಗಿದೆ.

ಈಗಲೂ ಅಲಕ್ಷಿತ ಸಮುದಾಯಗಳಲ್ಲಿ ಮೂಲ ಸಂಸ್ಕೃತಿಯ ಅಂಶಗಳು ಅಚ್ಚಳಿಯದೇ ಉಳಿದುಕೊಂಡಿವೆ. ಕಾರಣ ಜನಸಂಪರ್ಕದಿಂದ ದೂರಾಗಿ ಬೆಟ್ಟಗುಡ್ಡ-ಪರ್ವತದ ತಪ್ಪಲು ಪ್ರದೇಶದಲ್ಲಿ ವಾಸಿಸುತ್ತಿರುವುದಾಗಿದೆ. ಇವರ ಬದುಕಿನಲ್ಲಿ ದೊಡ್ಡ ಕಂದರ ಹಾಗೂ ಇವರ ಮೇಲೆ ಗುಮಾನಿಗಳು ಶುರುವಾದದ್ದು ಇಂಗ್ಲೀಷರ ಆಡಳಿತದ ಕಾಲಾವಧಿಯಲ್ಲಿ. ಇಂಗ್ಲೀಷರು

ಭಾರತಕ್ಕೆ ಬಂದ ಬಳಿಕ ಅಲಕ್ಷಿತ ಸಮುದಾಯಗಳ ಸಂಸ್ಕೃತಿಯವರ ಮೇಲೆ ಹಲವು ರೀತಿಯ ಕಾನೂನುಗಳು ಜಾರಿಗೆ ತಂದರು. ಅಲಕ್ಷಿತ ಸಮುದಾಯಗಳ ಜನರು ಜಾರಿಯಾದ ಕಾನೂನಿನಿಂದ ತಲ್ಲಣಗೊಂಡರು. ಇದರಿಂದ ಅಲಕ್ಷಿತರ ನೆಮ್ಮದಿಯ ಬದುಕಿಗೆ ಭಂಗ ಬಂದಿತು. ಬ್ರಿಟೀಷರು ಜಾರಿಗೆ ತಂದ ಕೈಗಾರಿಕಾ ಕ್ರಾಂತಿ ಮತ್ತು ನಗರೀಕರಣ ಅಭಿವೃದ್ಧಿಯಿಂದ ಕಾಡುನಾಶ ಮಾಡಲು ತೊಡಗಿದ ಅಂಶವೇ ಅಲಕ್ಷಿತ ಸಮುದಾಯಗಳ ಜನರಿಗೆ ತೊಡಕಾಗಿ ಪರಿಣಮಿಸಿತೆನ್ನಬಹುದು. ಇದರಿಂದಾಗಿ ಅಲಕ್ಷಿತ ಸಮುದಾಯಗಳು ಇಂಗ್ಲಿಷ್‌ರೊಂದಿಗೆ ಸಂಘರ್ಷಕ್ಕೆ ಇಳಿದಿದ್ದು ಕಂಡುಬರುತ್ತದೆ. ಜೊತೆಗೆ ಅಲಕ್ಷಿತ ಸಮುದಾಯಗಳು ದರೋಡೆ ಕಾರ್ಯದಲ್ಲಿ ತೊಡಗಿಸಿಕೊಂಡರು. ಇಂಗ್ಲೀಷರು ಅಲಕ್ಷಿತ ಸಮುದಾಯಗಳನ್ನು ಅಪರಾಧಿ ಬುಡಕಟ್ಟುಗಳೆಂದು ಗುರುತಿಸಿ ಅವರನ್ನು ಅವಮಾನಗೊಳಿಸಿದ್ದು ತಿಳಿದುಬರುತ್ತದೆ. ಇದೇ ವೇಳೆಯಲ್ಲಿ ಹಲವು ಪಾಶ್ಚಾತ್ಯ ವಿದ್ವಾಂಸರು ಕಟ್ಟಕಡೆಯ ಬದುಕನ್ನು ಸಾಗಿಸುತ್ತಿದ್ದ ಅಲಕ್ಷಿತ ಜನರ ಜೀವನ ವಿಧಾನವನ್ನು ತಮ್ಮ ಅಧ್ಯಯನಕ್ಕೆ ಬಳಸಿಕೊಂಡರು. ಅವರ ಬದುಕಿನ ಸ್ಥರಗಳ ಬಗ್ಗೆ ವಿಶೇಷ ಅಧ್ಯಯನ ಮಾಡಿ ಕೃತಿ ರಚನೆ ಕೈಗೊಂಡು ಮಾನವ ವಿಜ್ಞಾನಿಗಳಾದರು. ಬುಡಕಟ್ಟು ಜನರ ಜೀವನ ವಿಧಾನದ ಅಧ್ಯಯನದೊಂದಿಗೆ ಜಾತಿಗಳ ಕುರಿತಾದ ಅಧ್ಯಯನಗಳು ನಡೆದವು ಎನ್ನಬಹುದು. ಮಾನವ ವಿಜ್ಞಾನಿಗಳ ಹೇಳಿಕೆ ಪ್ರಕಾರ ಬುಡಕಟ್ಟು ಎಂದರೆ ನಗರ ಮತ್ತು ಗ್ರಾಮಗಳಲ್ಲಿ ವಾಸವಾಗಿರುವವರನ್ನು ಬಿಟ್ಟು ಬೆಟ್ಟ–ಗುಡ್ಡ–ಕಾಡು–ಮೇಡುಗಳಲ್ಲಿ ವಾಸಿಸಿ, ಪ್ರತ್ಯೇಕವಾದ ಸಂಸ್ಕೃತಿಯನ್ನು ಉಳಿಸಿಕೊಂಡವರು.

ಭಾರತಕ್ಕೆ ಸ್ವಾತಂತ್ರ್ಯ ಬಂದು ಏಳು ದಶಕಗಳು ಕಳೆದರೂ ಅನೇಕ ಸಮುದಾಯಗಳು ಇನ್ನೂ ಮುಖ್ಯವಾಹಿನಿಗೆ ಬರಲೇ ಇಲ್ಲ. ಆಧುನಿಕತೆಯಿಂದ ದೂರದಲ್ಲಿದ್ದಾರೆ. ಇವರನ್ನು ಹಿಂದುಳಿದ ಅಥವಾ ಅಲಕ್ಷಿತ ಸಮುದಾಯಗಳೆಂದು ಹೇಳಬಹುದು. ೨೧ನೇ ಶತಮಾನದಲ್ಲಿ ಸಮೂಹ ಮಾಧ್ಯಮ ಕ್ಷಿಪ್ರವಾಗಿ ಅಭಿವೃದ್ಧಿ ಹೊಂದಿದ್ದು ಅದನ್ನು ಭಾರತದ ನಾಲ್ಕನೇ ಅಂಗವೆಂದು ಕರೆಯುತ್ತಾರೆ. ದೇಶದ ಯಾವುದೇ ಭಾಗದಲ್ಲಿ ನಡೆದ ಸುದ್ದಿಯು ಕ್ಷಣಾರ್ಧದಲ್ಲಿ ಮಾಹಿತಿ ಇಡಿ ವಿಶ್ವದ ತುಂಬ ರವಾನೆಯಾಗುತ್ತದೆ. ಇಷ್ಟೊಂದು ತಂತ್ರಜ್ಞಾನ, ಆವಿಷ್ಕಾರ ಸಮೂಹ ಮಾಧ್ಯಮದಲ್ಲಿಯಾದರೂ, ಅಲಕ್ಷಿತ ಸಮುದಾಯಗಳ ಮೇಲೆ ಮಾಧ್ಯಮದ ಪ್ರಭಾವ ಕಡಿಮೆ ಎಂದೇ ಹೇಳಬಹುದು. ಸಮೂಹ ಮಾಧ್ಯಮ ತನ್ನ ಧ್ಯೇಯೋದ್ದೇಶಗಳನ್ನು ಗಣನೆಯಲ್ಲಿಟ್ಟುಕೊಂಡು, ನಿರ್ಲಕ್ಷಿತ ಸಮುದಾಯಗಳ ಅಭಿವೃದ್ಧಿಯ ಬಗ್ಗೆ ಸರ್ಕಾರಕ್ಕೆ ಮನವರಿಕೆ ಮಾಡಿ, ಸೂಕ್ತ ಯೋಜನೆಗಳನ್ನು ರೂಪಿಸಿ (ಸರ್ಕಾರದಿಂದ), ಅನುಷ್ಠಾನಕ್ಕೆ ತಂದು, ಅದರ ಗುಣಾವಗುಣಗಳ ಮೇಲೆ ಲಕ್ಷ್ಯವಿರಿಸಿ, ಸರಿಯಾದ ಮಾರ್ಗದರ್ಶನ ನೀಡಿದ್ದಲ್ಲಿ ನಿರ್ಲಕ್ಷಿತ ಸಮುದಾಯಗಳು ಮುಖ್ಯವಾಹಿನಿಗೆ ಬಂದು ಆಧುನಿಕ ನಾಗರಿಕತೆಯನ್ನು ಅಳವಡಿಸಿಕೊಳ್ಳುತ್ತಿದ್ದರು. ಇಂದಿನ ದಿನದಲ್ಲಿ, ಸರ್ಕಾರ ಯಾವುದಾರೂ ಜನವಿರೋಧಿ ನಿರ್ಣಯ ತೆಗೆದುಕೊಂಡಲ್ಲಿ ಕೂಡಲೇ ಮಾಧ್ಯಮಗಳು ಎಚ್ಚೆತ್ತು ಸರ್ಕಾರದ ಜನವಿರೋಧಿ ನೀತಿಯನ್ನು ಬಿತ್ತರಿಸಿದಾಗ ಜನತೆ

ಎಚ್ಚೆತ್ತು, ಚಳುವಳಿ, ಆಂದೋಲನಗಳನ್ನು ನಡೆಸಿ ಸರ್ಕಾರದ ಧೋರಣೆಯನ್ನು ಪ್ರತಿಭಟಿಸುತ್ತಾರೆ. ಕೂಡಲೇ ಜನತೆಗೆ ಮತ್ತು ಮಾಧ್ಯಮಗಳಿಗೆ ಮಣಿದು ಸರ್ಕಾರ ತನ್ನ ನಿಲುವನ್ನು ಕೈಬಿಟ್ಟಿರುವ ಎಷ್ಟೋ ಸಂದರ್ಭಗಳಿವೆ. ಸಮೂಹ ಮಾಧ್ಯಮಗಳ ಭರಾಟೆಯಲ್ಲಿ ಸರ್ಕಾರ ತನ್ನ ಆಡಳಿತದಲ್ಲಿ ಲೋಪದೋಷಗಳಾಗದಂತೆ ಹೆಚ್ಚಿನ ನಿಗಾ ವಹಿಸುತ್ತದೆ. ಸಮೂಹ ಮಾಧ್ಯಮಗಳನ್ನು ವಿರೋಧ ಪಕ್ಷ, ಕಾವಲು ನಾಯಿ ಎಂದೆಲ್ಲಾ ಕರೆಯುತ್ತಾರೆ. ಮಾಧ್ಯಮಗಳಿಗೆ ಇಷ್ಟೊಂದು ಪ್ರಭಾವವಿರುವಾಗ ನಿರ್ಲಕ್ಷಿತ ಸಮುದಾಯಗಳನ್ನು ಮುಖ್ಯವಾಹಿನಿಗೆ ತರುವುದು ಅಸಾಧ್ಯವೇನಲ್ಲ. ಆದರೆ ಮಾಧ್ಯಮಗಳು ಮಾಡುತ್ತಿಲ್ಲ? ಅಥವಾ ಮಾಧ್ಯಮಗಳಿಂದ ಸಾಧ್ಯವಿಲ್ಲವೇ? ನಿರ್ಲಕ್ಷಿತ ಸಮುದಾಯಗಳೇ ಮಾಧ್ಯಮವನ್ನು ಕಡೆಗಣಿಸಿವೆಯೇ? ಎಂಬೆಲ್ಲಾ ಪ್ರಶ್ನೆಗಳು ಹುಟ್ಟುತ್ತವೆ. ಎಷ್ಟೋ ನಿರ್ಲಕ್ಷಿತ ಸಮುದಾಯಗಳು ಮಾಧ್ಯಮದ ಮುಖಾಂತರವೇ ಬೆಳಕಿಗೆ ಬಂದಿದೆ. ಆದರೆ ಪರಿಸ್ಥಿತಿ ಮಾತ್ರ ಸುಧಾರಿಸಿಲ್ಲ. ಇದಕ್ಕೆ ಸರ್ಕಾರದ ಕ್ರಮಬದ್ಧವಲ್ಲದ ಯೋಜನೆಗಳು, ಭ್ರಷ್ಟ ಅಧಿಕಾರಿಗಳು, ವಾಣಿಜ್ಯೀಕರಣಗೊಂಡಿರುವ ಸಮೂಹ ಮಾಧ್ಯಮಗಳು, ನಿರ್ಲಕ್ಷಿತ ಸಮುದಾಯಗಳ ಜನತೆಯ ಅನಕ್ಷರತೆ ಮುಂತಾದವುಗಳು ಕಾರಣವಾಗಿದೆ. ಸಮೂಹ ಮಾಧ್ಯಮಗಳು ಇಂದು ವಾಣಿಜ್ಯೀಕರಣ ಗೊಂಡು ಮೂಲ ಧ್ಯೇಯೋದ್ದೇಶಗಳನ್ನು ಮರೆತಿವೆ. ಅಧಿಕಾರದಲ್ಲಿರುವ ರಾಜಕಾರಣಿಗಳು ಮತ್ತು ಶ್ರೀಮಂತರ ಹಿಡಿತದಲ್ಲಿ ಮಾಧ್ಯಮಗಳಿವೆ. ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಮಾಧ್ಯಮವನ್ನು ಹಿಡಿತದಲ್ಲಿ ಇಟ್ಟುಕೊಂಡಿದ್ದಾರೆ. ಮಾಧ್ಯಮಗಳು ಕೇವಲ ಲಾಭ ಪ್ರವೃತ್ತಿಯನ್ನು ಬೆಳೆಸಿಕೊಂಡಿವೆ. ನಿರ್ಲಕ್ಷಿತ ಸಮುದಾಯಗಳ ಮೇಲೆ ಬೆಳಕು ಚೆಲ್ಲಲು ಮುಂದಾದರೆ ಅದರಿಂದ ಬರುವ ಲಾಭ ಮಾತ್ರ ಶೂನ್ಯ ಎಂದು ಮಾಧ್ಯಮಗಳು ಅರಿತಿದ್ದಾರೆ. ನಿರ್ಲಕ್ಷಿತ ಸಮುದಾಯಗಳಾದರೂ ಮುಖ್ಯವಾಹಿನಿಗೆ ಬರಬೇಕೆಂಬ ಹಠ ಅಥವಾ ನಿಲುವನ್ನು ಹೊಂದಿಲ್ಲ. ಇದ್ದಲ್ಲೇ ಇದ್ದು, ಸಿಕ್ಕಿದ್ದನ್ನು ತಿಂದು ಬದುಕುತ್ತಿದ್ದಾರೆ. ಸರ್ಕಾರವೂ ಸಹ ಇವರನ್ನು ತಮ್ಮ ವೋಟ್‌ಬ್ಯಾಂಕ್ ಆಗಿ ಬಳಸಿಕೊಳ್ಳುತ್ತಿದ್ದಾರೆ. ಇದರಿಂದಾಗಿ ಅಲಕ್ಷಿತ ಸಮುದಾಯಗಳು ಇಂದಿಗೂ ಸೂಕ್ತ ಆದಾಯವಿಲ್ಲದೇ, ಮೂಲಭೂತ ಸೌಕರ್ಯಗಳಿಲ್ಲದೇ, ಆಧುನಿಕ ನಾಗರಿಕತೆಗೆ ಪ್ರವೇಶಿಸದೇ ವಿರುದ್ಧ ದಿಕ್ಕಿನಲ್ಲೇ ಸಾಗುತ್ತಿದ್ದಾರೆ. ಸಮುದಾಯಗಳು ಅನುಭವಿಸುವ ಶೋಷಣೆಯ ಕರಾಳತೆಯನ್ನು ಮಾಧ್ಯಮಗಳು ಚಿತ್ರಿಸಿ ಸರ್ಕಾರದ ಮುಂದೆ ತಂದಾಗ, ಸರ್ಕಾರ ನ್ಯಾಯಯುತವಾಗಿ ಇವರ ಅಭಿವೃದ್ಧಿಗೆ ಪ್ರಯತ್ನಿಸಿದಾಗ ಮಾತ್ರ ಆಧುನಿಕ ನಾಗರಿಕತೆಗೆ ಕಾಲಿಡಲು ಸಾಧ್ಯವಾಗುತ್ತದೆ. ಇದು ಒಂದೆರಡು ದಿನದ ಕೆಲಸವಲ್ಲ. ನಿಧಾನವಾಗಿ, ಕ್ರಮಬದ್ಧವಾಗಿ ಆಗಬೇಕಿದೆ. ಸರ್ಕಾರ, ಮಾಧ್ಯಮ ಮತ್ತು ನಿರ್ಲಕ್ಷಿತ ಸಮುದಾಯದ ಜನತೆ ಎಲ್ಲರೂ ಕೈ ಜೋಡಿಸಿದಲ್ಲಿ ಮಾತ್ರ ಸಾಧ್ಯವಾಗುತ್ತದೆ.

೧.೨. ಅಧ್ಯಯನದ ಉದ್ದೇಶ

ಈ ಅಧ್ಯಯನದಲ್ಲಿ ಅಲಕ್ಷಿತ ಸಮುದಾಯಗಳ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಯನ್ನು, ಅವರ ಚಾರಿತ್ರಿಕ ಬೆಳವಣಿಗೆಯನ್ನು, ಮಾಧ್ಯಮಗಳ ಜೊತೆಗಿನ ಸಂಬಂಧವನ್ನು, ಮಾಧ್ಯಮದ ಜೊತೆಗಿನ ಬಿಕ್ಕಟ್ಟುಗಳನ್ನು, ಅದಕ್ಕೆ ಪರಿಹಾರಗಳನ್ನು, ವರ್ತಮಾನದ ಸ್ಥಿತಿಗತಿಗಳನ್ನು ವಿವರಿಸಲು ಪ್ರಯತ್ನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಉದ್ದೇಶಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

೧. ಅಲಕ್ಷಿತ ಸಮುದಾಯಗಳ ಚಾರಿತ್ರಿಕ ಬೆಳವಣಿಗೆಯನ್ನು ವಿವರಿಸುವುದು.

೨. ಸಮುದಾಯಗಳ ವಾಸ್ತವ ಸಾಮಾಜಿಕ, ಆರ್ಥಿಕ ಸ್ಥಿತಿಗಳನ್ನು ಚರ್ಚಿಸುವುದು.

೩. ಮಾಧ್ಯಮಗಳ ಧ್ಯೇಯೋದ್ದೇಶಗಳನ್ನು ತಿಳಿಯುವುದು.

೪. ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳ ಪರಸ್ಪರ ಮುಖಾಮುಖಿ ಮಾಡುವುದು.

೫. ಸಮೂಹ ಮಾಧ್ಯಮಗಳು ಅಲಕ್ಷಿತ ಸಮುದಾಯಗಳನ್ನು ಯಾವ ದೃಷ್ಟಿಕೋನದಿಂದ ನೋಡುತ್ತಿದೆ ಎಂದು ತಿಳಿಯವುದು.

೬. ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳ ನಡುವಿನ ಬಿಕ್ಕಟ್ಟುಗಳನ್ನು ಕಂಡುಹಿಡಿಯುವುದು ಹಾಗೂ ಅದಕ್ಕೆ ಪರಿಹಾರ ಹುಡುಕುವುದು.

೭. ವರ್ತಮಾನದಲ್ಲಿ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳ ನಡುವಿನ ಸಂಬಂಧಗಳ ಬಗ್ಗೆ ವಿವರಿಸುವುದು ಹಾಗೂ ವರ್ತಮಾನದಲ್ಲಿ ಎದುರಿಸುತ್ತಿರುವ ತಲ್ಲಣಗಳಿಗೆ ಉತ್ತರ ಕಂಡುಕೊಳ್ಳುವುದು.

೮. ಅಲಕ್ಷಿತ ಸಮುದಾಯಗಳನ್ನು ಸಮೂಹ ಮಾಧ್ಯಮ ಏಕೆ ನಿರ್ಲಕ್ಷ್ಯಕ್ಕೆ ಒಳಪಡಿಸುತ್ತಿದೆ? ಮತ್ತು ಇದರ ಪರಿಣಾಮಗಳೇನು? ಎನ್ನುವುದನ್ನು ಅಧ್ಯಯನ ಮಾಡುವುದು.

೯. ಸಮೂಹ ಮಾಧ್ಯಮದಿಂದ ಅಲಕ್ಷಿತ ಸಮುದಾಯಗಳು ಇಲ್ಲಿಯತನಕ ಯಾವ ರೀತಿಯ ಪ್ರಯೋಜನಗಳನ್ನು ಪಡೆದಿವೆ ಎಂದು ನೋಡುವುದು.

೧೦. ವರ್ತಮಾನದಲ್ಲಿ ಸಮೂಹ ಮಾಧ್ಯಮಗಳು ಅಲಕ್ಷಿತ ಸಮುದಾಯಗಳ ಮೇಲೆ ಯಾವ ರೀತಿಯಿಂದ ಪ್ರಭಾವ ಬೀರಬಲ್ಲವು ಅಥವಾ ಇವುಗಳ ಸಂಬಂಧ ಯಾವ ರೀತಿಯಲ್ಲಿ ಮುಂದುವರಿಯಬಹುದು ಎನ್ನುವುದನ್ನು ಅಭ್ಯಸಿಸುವುದು. ವರ್ತಮಾನದ ಸಮಸ್ಯೆಗೆ/ಸವಾಲುಗಳಿಗೆ ಪರಿಹಾರದ ಕ್ರಮಗಳನ್ನು ಹುಡುಕುವುದು ಹಾಗೂ ಪರಿಹಾರವನ್ನು ಕಾರ್ಯಗತಗೊಳಿಸಲು ಅಳವಡಿಸಿಕೊಳ್ಳಬೇಕಾದ ರೀತಿ ನೀತಿಗಳನ್ನು ಹುಡುಕುವುದು ಈ ಅಧ್ಯಯನದ ಉದ್ದೇಶವಾಗಿದೆ.

ಪ್ರತಿ ಅಲಕ್ಷಿತ ಸಮುದಾಯವೂ ಸಹ ಹಲವು ಸಮಸ್ಯೆಗಳನ್ನು ತನ್ನ ಒಡಲಿನಲ್ಲಿ ಇಟ್ಟುಕೊಂಡಿದೆ. ಭದ್ರತೆಯಿಲ್ಲದ ಉದ್ಯೋಗವಿಲ್ಲದೆ ಅಥವಾ ಅದನ್ನು ಸೃಷ್ಟಿಸಿಕೊಳ್ಳಲು ಅಗತ್ಯವಾದ ಸಂಖ್ಯಾ ಬಾಹುಳ್ಯವಿಲ್ಲದೆ ನರಳಾಡುತ್ತಿದೆ. ಸಾಂವಿಧಾನಿಕ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ಅಗತ್ಯವಾದ ದಾರಿ ಕಾಣದೆ ಅಥವಾ ಸಿಕ್ಕ ಸೌಲಭ್ಯಗಳಿಂದ ಭವಿಷ್ಯ ರೂಪಿಸಿಕೊಳ್ಳಲಾಗದೆ ಚಡಪಡಿಸುತ್ತಿದೆ. ಮಾಧ್ಯಮದ ಮುಖಾಂತರವಾದರೂ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಚಿಕ್ಕ ಪ್ರಯತ್ನವನ್ನು ಅಧ್ಯಯನದಲ್ಲಿ ಮಾಡಲಾಗಿದೆ.

೧.೩. ಅಧ್ಯಯನದ ವ್ಯಾಪ್ತಿ ಮತ್ತು ಮಹತ್ವ

ಯಾವುದೇ ಒಂದು ಸಂಶೋಧನಾ ಅಧ್ಯಯನ ನಡೆಸಬೇಕಾದರೆ ಅದರ ಆಳ ಹರವು, ವಿಸ್ತಾರಗಳನ್ನು, ವ್ಯಾಪ್ತಿಯನ್ನು ನಿಗದಿ ಪಡಿಸಿಕೊಳ್ಳಬೇಕು. ಹಾಗಾದಾಗ ಮಾತ್ರ ಅಧ್ಯಯನಕ್ಕೆ ಒಂದು ನಿರ್ದಿಷ್ಟ ಗುರಿಗಳು ಸಿಗುತ್ತದೆ. ಆಗ ಮಾತ್ರ ಅಧ್ಯಯನಕ್ಕೆ ನ್ಯಾಯ ಒದಗಿಸಲು ಸಾಧ್ಯವಾಗುತ್ತದೆ. ಪ್ರಸ್ತುತ ಅಧ್ಯಯನವು ಉತ್ತರ ಕನ್ನಡ, ದಕ್ಷಿಣ ಕನ್ನಡ, ಹುಬ್ಬಳ್ಳಿ-ಧಾರವಾಡ, ಬೆಂಗಳೂರು ಜಿಲ್ಲೆಗಳ ಆಯ್ದ ಅಲಕ್ಷಿತ ಸಮುದಾಯಗಳನ್ನು ಬಳಸಿಕೊಳ್ಳಲಾಗಿದೆ. ಜಿಲ್ಲೆಗಳ ಆಯ್ದ ಅಲಕ್ಷಿತ ಸಮುದಾಯಗಳನ್ನು ಗಣನೆಗೆ ತೆಗೆದುಕೊಂಡು ಅಧ್ಯಯನ ನಡೆಸಲಾಗಿದೆ.

ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳ ಅಧ್ಯಯನ ಸೂಕ್ಷ್ಮಾತಿಸೂಕ್ಷ್ಮ ಅಧ್ಯಯನ. ಶೈಕ್ಷಣಿಕ ಹಾಗೂ ಸಮುದಾಯಗಳ ಅಭಿವೃದ್ಧಿ, ಆಶಯಗಳು ಇದಕ್ಕೆ ಪ್ರೇರಣೆಯಾಗಿವೆ. ಇದುವರೆಗಿನ ಅಧ್ಯಯನಗಳು ಸಮುದಾಯದ ವಿವರಗಳನ್ನು ಮಾತ್ರ ದಾಖಲಿಸಿವೆ. ಆದರೆ ಅಧ್ಯಯನದಲ್ಲಿ ಸಮುದಾಯಗಳ ಜ್ಞಾನಪರಂಪರೆಯನ್ನು ಮತ್ತು ವರ್ತಮಾನದಲ್ಲಿ ಮುಖ್ಯವಾಹಿನಿಗೆ ಮುಂದುವರೆದು ಆಧುನಿಕ ನಾಗರಿಕತೆಯನ್ನು ಅಳವಡಿಸಿಕೊಳ್ಳಲು ಬೇಕಾದ ಕ್ರಮಗಳನ್ನು ಅನ್ವೇಷಿಸಬೇಕಾಗಿದೆ. ತನ್ನ ಮೇಲೆ ನಡೆಯುತ್ತಿರುವ ಶೋಷಣೆಗಳನ್ನು ಪ್ರಶ್ನಿಸುತ್ತಲೇ ಅವುಗಳನ್ನು ಆಧುನಿಕತೆಗೆ ಅಳವಡಿಸಿಕೊಂಡು ವಿಷಯದ ಮಹತ್ವವನ್ನು ಅಳವಡಿಸಿಕೊಳ್ಳುವ ಮಾರ್ಗಗಳನ್ನು ಅಧ್ಯಯನದಲ್ಲಿ ಮಾಡಲಾಗಿದೆ.

ಪ್ರತಿ ಸಮುದಾಯಗಳು ತಮ್ಮ ಮೇಲೆ ಪ್ರಭುತ್ವ ನಡೆಸಿದ ದೌರ್ಜನ್ಯದ ವಿರುದ್ಧ ಬದುಕಿನಲ್ಲಿ ಕಂಡುಕೊಂಡ ಸತ್ಯಗಳನ್ನು ಮುಖಾಮುಖಿ ಮಾಡಲು ಸಿದ್ಧವಿರುತ್ತದೆ. ಆದರೆ ಅವರ ಅಸ್ಥಿರ ಆರ್ಥಿಕತೆ ತಡೆಯುತ್ತದೆ. ಆದಿಮ ಬದುಕಿನ ಕುರುಹುಗಳು ಇವರಲ್ಲಿ ಗೋಚರಿಸಿದರೂ ಅವುಗಳನ್ನು ವ್ಯಕ್ತಪಡಿಸುತ್ತ ಪ್ರಭುತ್ವವರ್ಗ ತಡೆಯುತ್ತದೆ. ಪ್ರಭುತ್ವವನ್ನು ಧಿಕ್ಕರಿಸುವ ಶಕ್ತಿ ಇನ್ನೂ ಸಾಧ್ಯವಾಗಿಲ್ಲ. ಸ್ವತಂತ್ರ ಭಾರತವು ಆ ಶಕ್ತಿಯನ್ನು ನೀಡಿಲ್ಲ. ಸಂವಿಧಾನವು ಸಮಾಜವಾದಿ ರಾಷ್ಟ್ರದ ಕಲ್ಪನೆಗಳನ್ನಿಟ್ಟುಕೊಂಡು ನಡೆಯುತ್ತಿದ್ದರೆ, ಪ್ರಭುತ್ವವು ಅಸಮಾನ ಭಾರತದೆಡೆಗೆ ಕರೆದೊಯ್ಯಲು ತವಕಿಸುತ್ತಿದೆ.

ಸ್ವತಂತ್ರ ಭಾರತದ ಸರ್ಕಾರಗಳು ನಿರ್ಲಕ್ಷಿತ ಸಮುದಾಯಗಳನ್ನು ಪ್ರಗತಿ ಪಥಕ್ಕೆ ಒಯ್ಯಲು ಅಗತ್ಯವಾದ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸುತ್ತಲೇ ಇರುತ್ತದೆ. ಆದರೆ ಜನತಂತ್ರ ವ್ಯವಸ್ಥೆಯಲ್ಲಿ ಹಿರಿಯ ಪಾಲನ್ನು ಬಹುಸಂಖ್ಯಾತ ಸಮುದಾಯಗಳು ಪಡೆಯುತ್ತವೆ. ಅದೇ ಸಂದರ್ಭದಲ್ಲಿ ಅಲ್ಪಸಂಖ್ಯಾತ ಸಮುದಾಯಗಳು ತಮಗೆ ಸಿಗಬೇಕಾದ ಪಾಲನ್ನು ಪಡೆಯದೇ ವಂಚಿತರಾಗುತ್ತಾರೆ. ಮೊದಲಿಂದಲೂ ಸಂವಿಧಾನಬದ್ಧ ಸವಲತ್ತುಗಳು ಅಸಮಾನ ನೆಲೆಯಿಂದಲೇ ಹಂಚಿಕೆಯಾಗಿದೆ. ಅದನ್ನು ಸರಿಪಡಿಸಲಾಗದಷ್ಟು ವ್ಯವಸ್ಥೆ ಮುಂದುವರೆದಿದೆ. ಆದ್ದರಿಂದ ನಿರ್ಲಕ್ಷಿತ

ಸಮುದಾಯಗಳು ಶೋಷಣೆಯ ಜಗತ್ತಿನಲ್ಲೇ ಉಳಿದಿವೆ. ತಮ್ಮ ಪಾಲನ್ನು ಪಡೆಯಲು ಬೇಕಾದ ರಾಜಕೀಯ ಪ್ರಭುತ್ವ ಇಲ್ಲದ್ದರಿಂದ ಅದನ್ನು ಪಡೆಯಲು ಸಮೂಹ ಮಾಧ್ಯಮಗಳು ಪ್ರಯತ್ನಿಸಬೇಕಾಗಿದೆ.

ಪ್ರಸ್ತುತ ಅಧ್ಯಯನವು ಸಮುದಾಯಗಳ ಹಾಗೂ ಮಾಧ್ಯಮಗಳ ಜೊತೆ ನಿರಂತರ ಒಡನಾಟದೊಂದಿಗೆ ರೂಪುಗೊಂಡಿದ್ದೂ, ಸಮುದಾಯಗಳು ಮತ್ತು ಮಾಧ್ಯಮಗಳು ಎದುರಿಸುತ್ತಿರುವ ಸಮಸ್ಯೆಗಳು ಅವುಗಳಿಗೆ ಸಿಗಬಹುದಾದ ಪರಿಹಾರಗಳನ್ನು, ಅಡ್ಡಿ ಆತಂಕಗಳ ಬಗ್ಗೆ ಚರ್ಚಿಸಲಿದೆ. ಈ ಮೂಲಕವಾಗಿ ನಿರ್ಲಕ್ಷಿತ ಸಮುದಾಯಗಳ ಬದುಕಿನಲ್ಲಿ ಒಂದು ಆಶಾಭಾವನೆಯನ್ನು ತರುವ ಕೆಲಸ ಮಾಡಬೇಕಾಗಿದೆ. ವ್ಯವಸ್ಥೆಯೊಳಗಿನ ಅಸಮಾನತೆಯನ್ನು ಸಂಗ್ರಹಿಸಿ ಅವುಗಳನ್ನು ಎದುರಿಸಲು ಸಮೂಹ ಮಾಧ್ಯಮಗಳು ಹೇಗೆ ಸಹಕಾರಿಯಾಗುತ್ತವೆ. ಯಾವ ಕ್ರಮಗಳನ್ನು ಅಳವಡಿಸಿಕೊಂಡರೆ ಗುರಿ ತಲುಪಬಹುದು ಎಂಬುದನ್ನು ಸೂಚಿಸುತ್ತವೆ. ಹಾಗೆ ಮಾಡುವುದರಿಂದ ಪ್ರಜಾಪ್ರಭುತ್ವದಲ್ಲಿ ನಿರ್ಲಕ್ಷಿತ ಸಮುದಾಯಗಳು ತಮ್ಮ ಸಮಪಾಲು ಪಡೆದು ಮುಖ್ಯವಾಹಿನಿಗೆ ಇಡೀ ನಾಗರಿಕ ಜೀವನ ಸಾಗಿಸುವುದು ತುಂಬ ಮಹತ್ವದ್ದಾಗಿದೆ.

೧.೪. ಅಧ್ಯಯನದ ವಿಧಿ ವಿಧಾನಗಳು

ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳು ಪ್ರಬಂಧ ಕ್ಷೇತ್ರಕಾರ್ಯ ಆಧಾರಿತ ಅಧ್ಯಯನ. ಈಗಾಗಲೇ ಈ ಸಮುದಾಯಗಳ ಕುರಿತು ನಡೆದ ಅಧ್ಯಯನಗಳನ್ನು ಗಮನಿಸಲಾಗಿದೆ. ಸೂಕ್ಷ್ಮ, ಅತಿಸೂಕ್ಷ್ಮ, ಅಲೆಮಾರಿ ಸಮುದಾಯಗಳನ್ನು ಅವರು ವಾಸಿಸುವ ಪ್ರದೇಶದ ಆಧಾರದ ಮೇಲೆ ಗಮನದಲ್ಲಿಟ್ಟುಕೊಂಡು ಚರ್ಚಿಸಲಾಗಿದೆ. ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳ ಸಂಬಂಧ, ಜಿಕ್ಕಟ್ಟುಗಳು, ಅದಕ್ಕೆ ಪರಿಹಾರ ಮತ್ತು ವರ್ತಮಾನದಲ್ಲಿ ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳ ಸಂಬಂಧಗಳ ಬಗ್ಗೆ ವಿವರಿಸಲು ಪ್ರಯತ್ನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವ ಸಲುವಾಗಿ ಕೆಳಗಿನ ವಿಧಾನಗಳನ್ನು ಅನುಸರಿಸಲಾಗಿದೆ.

ಚಾರಿತ್ರಿಕ ವಿಧಾನ

ಪ್ರಸ್ತುತ ಅಧ್ಯಯನದಲ್ಲಿ ಅಲಕ್ಷಿತ ಸಮುದಾಯದ ಹಾಗೂ ಮಾಧ್ಯಮಗಳ ಚಾರಿತ್ರಿಕ ಬೆಳವಣಿಗೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ನಿರ್ಲಕ್ಷಿತ ಸಮುದಾಯಗಳು ಭಾರತದ ಪಾರಂಪರಿಕ ಸಮಾಜದಲ್ಲಿ ರೂಪುಗೊಂಡ ಬಗೆ ಅವುಗಳ ಸ್ಥಾನಮಾನಗಳ ಬಗ್ಗೆ ಗಮನಿಸಲಾಗಿದೆ. ಇಲ್ಲಿಯವರೆಗೆ ನಡೆದ ಅಧ್ಯಯನಗಳಲ್ಲಿ ಅಲಕ್ಷಿತ ಸಮುದಾಯಗಳ ಹಿನ್ನೆಲೆಯನ್ನು ಗಮನಿಸಲಾಗಿದೆ. ಭೂತ ಮತ್ತು ಭವಿಷ್ಯದ ದಿನಗಳನ್ನು ಗಮನಿಸಬೇಕಾದರೆ ನಾವು ವರ್ತಮಾನದೊಂದಿಗೆ ಮುಖಾಮುಖಿಗೊಳಿಸಿ ಅವುಗಳ ಚಾರಿತ್ರಿಕ ದಾಖಲೆಗಳನ್ನು ಗ್ರಹಿಸಬೇಕಾಗಿದೆ. ಮಾಧ್ಯಮ ಮತ್ತು ಅಲಕ್ಷಿತರ ಸಂಬಂಧಗಳು, ಜಿಕ್ಕಟ್ಟುಗಳು ಮತ್ತು ಅವುಗಳ ಪರಿಹಾರದ ಕಡೆಗೂ ಗಮನಹರಿಸಬೇಕಾಗಿದೆ.

ಪ್ರಶ್ನಾವಳಿ ವಿಧಾನ

ಅಲಕ್ಷಿತ ಸಮುದಾಯಗಳ ವರ್ತಮಾನದ ಸ್ಥಿತಿಗತಿಗಳನ್ನು ಕಂಡುಕೊಳ್ಳಲು ಕೆಲವು ಮಾದರಿಗಳನ್ನು ಆಯ್ಕೆ ಮಾಡಿಕೊಂಡು ಸಮುದಾಯಗಳ ಸಂಪೂರ್ಣ ಚಿತ್ರಣವನ್ನು ಕಲೆಹಾಕುವ ಪ್ರಯತ್ನ ಮಾಡಲಾಗಿದೆ. ಸದರಿ ಪ್ರಶ್ನಾವಳಿಯಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕುಟುಂಬಗಳ ಬಗ್ಗೆ ಸಮಗ್ರ ವಿವರಗಳನ್ನು ಸಂಗ್ರಹಿಸಲಾಗಿದೆ. ಹಾಗೆ ಮಾಧ್ಯಮಗಳ ವಿಧಿವಿಧಾನ, ಆಶಯ, ಧ್ಯೇಯೋದ್ದೇಶ, ಸವಾಲುಗಳ ಬಗ್ಗೆಯೂ ಪ್ರಶ್ನಾವಳಿ ಸಿದ್ಧಪಡಿಸಿ ಮಾಧ್ಯಮಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಮಾಧ್ಯಮ ಮತ್ತು ಅಲಕ್ಷಿತರ ಸಂಬಂಧ, ಬಿಕ್ಕಟ್ಟು, ಪರಿಹಾರಗಳ ಬಗ್ಗೆಯೂ ಸಮಗ್ರ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ವ್ಯಕ್ತಿ ಸಂದರ್ಶನ

ಅಲೆಮಾರಿ ಸಮುದಾಯಗಳನ್ನು ಗಮನದಲ್ಲಿರಿಸಿಕೊಂಡು ಅವರು ವಾಸಿಸುವ ಪ್ರದೇಶದ ಕೆಲವು ವಿವಿಧ ವಯೋಮಾನದ ಜನರನ್ನು ಪ್ರಶ್ನೋತ್ತರಗಳ ಮೂಲಕವಾಗಿ ವಕ್ತೃಗಳೊಂದಿಗೆ ಚರ್ಚಿಸಲಾಗಿದೆ. ಸಮುದಾಯದ ಸಂಪೂರ್ಣ ಮಾಹಿತಿ ತಿಳಿದಿರುವ ಪ್ರಮುಖರನ್ನು ಸಂದರ್ಶಿಸಿ ಸಮುದಾಯದ ಸಮಗ್ರ ತಿಳುವಳಿಕೆಯನ್ನು ಕೂಡಿಹಾಕಲಾಗಿದೆ. ಸಮುದಾಯದ ವ್ಯಕ್ತಿಗಳ ಪ್ರಸ್ತುತ ಅನುಭವವನ್ನು ಪ್ರಧಾನವಾಗಿ ಸ್ವೀಕರಿಸಲಾಗಿದೆ. ಹಾಗೆಯೇ ಮಾಧ್ಯಮವರನ್ನು ಸಂದರ್ಶಿಸಿ ಮಾಧ್ಯಮಗಳ ಸಮಗ್ರ ಮಾಹಿತಿ ಕಲೆಹಾಕಲಾಗಿದೆ. ಮಾಧ್ಯಮದಲ್ಲಿನ ಅಲಕ್ಷಿತ ಸಮುದಾಯಗಳ ವ್ಯಕ್ತಿಗಳನ್ನೂ ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಗಿದೆ.

ಧ್ವನಿ ಮುದ್ರಣ ಮತ್ತು ಛಾಯಾಚಿತ್ರ ವಿಧಾನ

ಆಯ್ದ ಅಲಕ್ಷಿತ ಸಮುದಾಯಗಳು ವಾಸಿಸುವ ಪ್ರದೇಶವನ್ನು ಆಯ್ಕೆ ಮಾಡಿಕೊಂಡು ಕ್ಷೇತ್ರಾಧ್ಯಯನ ಮಾಡಲಾಗಿದೆ. ಹೋಗುವಾಗ ಜೊತೆಗೆ ಜಂಗಮವಾಣಿಯ (ಮೊಬೈಲ್) ಸಹಾಯದಿಂದ ಅಲಕ್ಷಿತ ಸಮುದಾಯದ ವಕ್ತೃಗಳ ಧ್ವನಿಯನ್ನು ಧ್ವನಿಮುದ್ರಣ ಮಾಡಿ ಪರಿಷ್ಕರಿಸಿ ಅಧ್ಯಯನಕ್ಕೆ ಅನುಕೂಲವಾಗುವಂತೆ ಬಳಸಿಕೊಳ್ಳಲಾಗಿದೆ. ಅಲಕ್ಷಿತ ಸಮುದಾಯದವರು ವಾಸಿಸುವ ಮನೆ ಅಥವಾ ಗುಡಾರ, ಕೂಲಿ ಕಾರ್ಮಿಕರಾಗಿ ದುಡಿಯುತ್ತಿರುವ (ಕ್ಷೇತ್ರಕಾರ್ಯದ ಸಮಯದಲ್ಲಿ ಸಿಕ್ಕಿರುವ) ಛಾಯಾಚಿತ್ರಗಳನ್ನು ಅಧ್ಯಯನದಲ್ಲಿ ಬಳಸಲಾಗಿದೆ.

ಅಧ್ಯಯನಕ್ಕೆ ಆಯ್ದುಕೊಂಡ ಅಲಕ್ಷಿತ ಸಮುದಾಯಗಳು ಕರ್ನಾಟಕದ ವಿವಿಧ ಭಾಗಗಳಲ್ಲಿ ವಾಸಿಸುತ್ತಿದ್ದಾರೆ. ಆದ್ದರಿಂದ ಉತ್ತರ ಕರ್ನಾಟಕದಲ್ಲಿ ಕೆಲವು (ಹುಬ್ಬಳ್ಳಿ-ಧಾರವಾಡ, ಕುಂದಗೋಳ, ಗದಗ), ಕರಾವಳಿ ತೀರದಿಂದ ಕೆಲವು (ಉತ್ತರ ಕನ್ನಡ ಜಿಲ್ಲೆಯ ಸಿರಸಿ, ಸಿದ್ದಾಪುರ, ಕುಮಟಾ, ಹೊನ್ನಾವರ, ಅಂಕೋಲ ಹಾಗೂ ಉಡುಪಿ ಜಿಲ್ಲೆಯ ಕುಂದಾಪುರ) ಹಾಗೂ ಬೆಂಗಳೂರಿನಲ್ಲಿ ವಾಸಿಸುತ್ತಿರುವ ಆಯ್ದ ಸಮುದಾಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದರಿಂದ

ಕರ್ನಾಟಕದ ಎಲ್ಲಾ ಭೌಗೋಳಿಕ ಪ್ರದೇಶದ ಅಲಕ್ಷಿತರ ಜೀವನ ವಿಧಾನ, ವೃತ್ತಿ, ಆಹಾರ ಪದ್ಧತಿ, ಭಾಷೆ, ಕಲೆ ಇತ್ಯಾದಿ ಮಾಹಿತಿಗಳನ್ನು, ಸಮಸ್ಯೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಮನಃ ಶಾಸ್ತ್ರೀಯ ವಿಧಾನದಲ್ಲಿ ಅಧ್ಯಯನಕ್ಕೆ ಒಳಪಡಿಸಿರುವ ವ್ಯಕ್ತಿ ನೀಡುವ ಮಾಹಿತಿಯಲ್ಲಿ ಹೊಸತನವಿದೆಯೇ ಅಥವಾ ಕೇಳಿದ ಪ್ರಶ್ನೆಗೆ ಮಾತ್ರ ಉತ್ತರ ನೀಡುತ್ತಿದ್ದಾನೆಯೇ, ವ್ಯಕ್ತಿಯ ಜ್ಞಾನ ಹೇಗಿದೆ?, ವ್ಯಕ್ತಿ ಸಮರ್ಥನೋ ಅಥವಾ ಉದಾಸಿನ ಮನೋಭಾವದವನೋ, ಸಂಕೋಚದ ಸ್ವಭಾವದವನೋ ಅಥವಾ ಸ್ನೇಹಮಯಿಯೋ, ಬೇರೆಯವರ ಬಗ್ಗೆ ಅನುಕಂಪ ಹೊಂದಿದ್ದಾನೋ, ಸೂಕ್ಷ್ಮವೇದಿಯೋ ಅಥವಾ ಸುಭದ್ರನೋ ಎಂಬುದನ್ನು ಗಮನವಿರಿಸಿ, ಅವನು ನೀಡುವ ಹೊಸತನದ ಉತ್ತರವನ್ನು ಅಧ್ಯಯನದಲ್ಲಿ ಬಳಸಿಕೊಳಲಾಗಿದೆ.

ಮಾನವಶಾಸ್ತ್ರೀಯ ಅಧ್ಯಯನದ ಮುಖಾಂತರ ಅಲಕ್ಷಿತ ಸಮುದಾಯಗಳ ಜನರ ವರ್ತನೆ, ಹಿಂದಿನ ಮತ್ತು ಪ್ರಸ್ತುತದ ಬಗ್ಗೆ ತಿಳಿಯಲು ಸಹಾಯವಾಯಿತು. ಸಮುದಾಯಗಳ ಸಂಸ್ಕೃತಿ, ಸಾಮಾಜಿಕ ಜೀವನದ ಮೇಲಾದ ಪರಿಣಾಮಗಳನ್ನು ತಿಳಿದು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಕ್ಷೇತ್ರಕಾರ್ಯದ ಸಮಯದಲ್ಲಿ ಅನಿರೀಕ್ಷಿತವಾಗಿ ಕೆಲವು ಸಮುದಾಯಗಳ ವಿಶೇಷ ಆಚರಣೆಗಳು ಹಾಗೂ ಹೆಚ್ಚಿನ ಮಾಹಿತಿಗಳು ಲಭ್ಯವಾಗಿವೆ. ಕೆಲವು ಸಮುದಾಯಗಳನ್ನು ವಿಶೇಷ ಸಂದರ್ಭಗಳಲ್ಲಿ ಸಂಪರ್ಕಿಸಿ ಮಾಹಿತಿ ಕಲೆಹಾಕಿ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಆಯ್ದ ಅಲಕ್ಷಿತ ಸಮುದಾಯಗಳ ಆಚರಣೆಗಳ ಬಗ್ಗೆ, ಅದರಲ್ಲೂ ಜನಪದೀಯ ಆಚರಣೆಗಳಾದ ಉಡುಗೆ-ತೊಡುಗೆ, ಆಚಾರ-ವಿಚಾರ, ಅಹಾರ, ದೈವಾರಾಧನೆ, ಧಾರ್ಮಿಕ, ವಾರ್ಷಿಕಾವರ್ತನೆಯ ಆಚರಣೆಗಳು, ಕೃಷಿ, ಪಶುಪಾಲನೆ ಮುಂತಾದ ಸಮಗ್ರ ವಿಷಯಗಳ ಮಾಹಿತಿಗಳನ್ನು ಸಮುದಾಯದ ಪ್ರಮುಖರ ಮುಖಾಂತರ ತಿಳಿದು ಸಾಂಪ್ರದಾಯಿಕ ವಿಧಾನವನ್ನು ಅಧ್ಯಯನದಲ್ಲಿ ವಿವರಿಸಲಾಗಿದೆ.

ಅಲಕ್ಷಿತ ಸಮುದಾಯಗಳ ಜನರಲ್ಲಿರುವ ಪ್ರದರ್ಶನ ಕಲೆಗಳು ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗಿರುತ್ತದೆ. ಆಯ್ದ ಅಲಕ್ಷಿತರ ವಿಚಾರದ ನಿಲುವುಗಳನ್ನು, ಅವರ ಜ್ಞಾನ ಪರಂಪರೆಯನ್ನು ಗಮನಿಸಿ ಪ್ರಸ್ತುತ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಕರ್ನಾಟಕದ ವಿವಿಧ ಭೌಗೋಳಿಕ ನೆಲೆಯಿಂದ ಆಯ್ದ ಅಲಕ್ಷಿತ ಸಮುದಾಯಗಳ ವೃತ್ತಿಗಳು, ಧಾರ್ಮಿಕ ಆಚರಣೆಗಳು, ಸಾಮಾಜಿಕ ಜೀವನ ಪದ್ಧತಿ ವಿಭಿನ್ನವಾಗಿದೆ. ಉದಾಹರಣೆಗೆ ವಾಸ್ತವ್ಯಕ್ಕೆ ಗುಡಾರ ಅಥವಾ ಡೇರೆಗಳನ್ನು ನಿರ್ಮಿಸುವ ವಿಧಾನ ಪ್ರತಿ ಅಲಕ್ಷಿತ ಸಮುದಾಯದಲ್ಲೂ ಬೇರೆ ಬೇರೆ ರೀತಿಯಿಂದ ಕೂಡಿದೆ. ಹಾಗೆಯೇ ವಿಭಿನ್ನ ಸಂಸ್ಕೃತಿಗಳನ್ನು ಹೊಂದಿರುವ ಅಲಕ್ಷಿತ ಸಮುದಾಯಗಳನ್ನು, ಅವರ ಪರಿಣಿತಿಯನ್ನು ಪರಿಗಣಿಸಿ ಬಳಸಲಾಗಿದೆ.

ಭಾರತವು ಒಂದು ವಿಶಿಷ್ಟವಾದ ಜಾತಿ ವ್ಯವಸ್ಥೆಯ ಸಮಾಜವನ್ನು ಹೊಂದಿದೆ. ಇಲ್ಲಿ ಅನೇಕ ವೈವಿಧ್ಯಮಯ ಭಾಷೆ, ಆಚರಣೆ, ಸಂಸ್ಕೃತಿಯನ್ನು ಹೊಂದಿರುವ ಸಮುದಾಯಗಳಿವೆ. ಅಲಕ್ಷಿತ ಸಮುದಾಯಗಳು ಹಿಂದಿನಿಂದ ಇಲ್ಲಿಯವರೆಗೆ ನಡೆದು ಬಂದ ಹಾದಿಯನ್ನು ನೋಡಿದಾಗ ಬ್ರಿಟೀಷರು ಭಾರತಕ್ಕೆ ಬರುವ ಮುನ್ನ ದೇಶದ ಸಮುದಾಯಗಳಲ್ಲಿ ಒಂದು ಬಗೆಯ ಸಾಮರಸ್ಯವಿತ್ತು. ಬ್ರಿಟೀಷರು ಬಂದ ನಂತರ ಜಾತಿ ಪದ್ಧತಿಯನ್ನು ತಮ್ಮ ವರ್ಗದ ಶ್ರೇಣಿಗೆ ಬದಲಾಯಿಸಲು ಪ್ರಯತ್ನಿಸಿದರು. ನಂತರ ಜಾತಿ ಪದ್ಧತಿಯಿಂದಾಗಿ ಮೇಲ್ವರ್ಗ ಹಾಗೂ ಕೆಳವರ್ಗ ಎಂಬ ತಾರತಮ್ಯ ಉಂಟಾಯಿತು. ಸ್ವಾತಂತ್ರ್ಯಾನಂತರ ಇಂದಿನವರೆಗೆ ಅಲಕ್ಷಿತರ ಜೀವನ ವಿಧಾನವನ್ನು ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಒಂದು ಪ್ರದೇಶದ ಚರಿತ್ರೆ ತಿಳಿಯಲು ಅನೇಕ ಬಗೆಯ ಸಾಮಗ್ರಿಗಳ ಮೊರೆಹೋಗುವುದು ಅನಿವಾರ್ಯ. ಒಂದು ನಾಡಿನ ಇತಿಹಾಸ ರಚನೆಗೆ ಸಂಬಂಧಿಸಿದ ಮಾಹಿತಿಯನ್ನು ಮುಖ್ಯವಾಗಿ ಪ್ರಾಚ್ಯವಸ್ತು ಮತ್ತು ಸಾಹಿತ್ಯಕ ಆಕರಗಳು ಒದಗಿಸುತ್ತವೆ. ಪ್ರಾಚ್ಯವಸ್ತುಗಳಲ್ಲಿ ಶಾಸನ ಹಾಗೂ ಸ್ಮಾರಕಗಳು ಸೇರ್ಪಡೆಯಾದರೆ, ಸಾಹಿತ್ಯಕ ಆಕರಗಳಲ್ಲಿ ದೇಶಿಯ ಹಾಗೂ ವಿದೇಶಿಯರ ಬರವಣಿಗೆಗಳು ಮುಖ್ಯವಾಗಿರುತ್ತವೆ. ಪ್ರಸ್ತುತ 'ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳು" ಶೀರ್ಷಿಕೆಯ ಅಧ್ಯಯನದಲ್ಲಿ ದೇಶಿ, ವಿದೇಶಿ ಬರವಣಿಗೆಗಳು, ಅಲ್ಲಿನ ವಕ್ತೃಗಳ ಮಾಹಿತಿಗಳು, ಛಾಯಾಚಿತ್ರಗಳನ್ನು ಆಕರವಾಗಿ ಬಳಸಿಕೊಂಡಿದ್ದೇನೆ.

೧.೫. ಅಧ್ಯಯನದ ಸ್ವರೂಪ

ಪ್ರಸ್ತುತ ಅಲಕ್ಷಿತರನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡಲು ಅಧ್ಯಯನ ಅನುಕೂಲಕ್ಕಾಗಿ ಹಲವು ಭಾಗಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ.

"ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳು" ಎಂಬ ಶೀರ್ಷಿಕೆಯಡಿಯಲ್ಲಿ ಅಧ್ಯಯನವನ್ನು ಕೈಗೊಂಡಿದ್ದು, ಅದಕ್ಕೆ ಸಂಬಂಧಿಸಿದಂತೆ ಪರಿವಿಡಿಯನ್ನು ಮಾಡಿಕೊಂಡಿದ್ದು, ಏಳು ಅಧ್ಯಾಯಗಳಾಗಿ ವಿಂಗಡಿಸಿಕೊಂಡಿರುತ್ತೇನೆ. ಪ್ರಸ್ತುತ ಅಧ್ಯಯನದಲ್ಲಿ ಕರ್ನಾಟಕದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಹುಬ್ಬಳ್ಳಿ-ಧಾರವಾಡ ಜಿಲ್ಲೆಯ ಆಯ್ದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಅಲೆಮಾರಿ, ಅರೆಅಲೆಮಾರಿ ಸಮುದಾಯದವರನ್ನು ಮತ್ತು ಸಮೂಹ ಮಾಧ್ಯಮಗಳ ಕುರಿತು ಅಧ್ಯಯನ ಮಾಡಲಾಗಿದೆ.

ಮೊದಲನೇ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಮಹತ್ವ, ವಿಧಿ ವಿಧಾನ ಮತ್ತು ಅಧ್ಯಯನದ ವ್ಯಾಪ್ತಿ, ಸ್ವರೂಪ, ಸಮೀಕ್ಷೆಗಳನ್ನೊಳಗೊಂಡಿದೆ.

ಎರಡನೇ ಅಧ್ಯಾಯದಲ್ಲಿ ಸಮೂಹ ಮಾಧ್ಯಮದ ಪರಿಕಲ್ಪನೆಗಳಿವೆ. ಇಲ್ಲಿ ಮಾಧ್ಯಮದ ಹುಟ್ಟು, ವ್ಯಾಖ್ಯೆಗಳು, ಅರ್ಥಗಳನ್ನು ಒಳಗೊಂಡಿದೆ.

ಮೂರನೇ ಅಧ್ಯಾಯದಲ್ಲಿ ಅಲಕ್ಷಿತ ಸಮುದಾಯಗಳ ವಿಕಾಸದ ನೆಲೆ, ಅಲಕ್ಷಿತರ ಬದುಕಿನ ಹರವುಗಳು, ಗುಣಲಕ್ಷಣಗಳು, ಅಲಕ್ಷಿತ ಸಮುದಾಯ ಮತ್ತು ಜಾಗತೀಕರಣ ಪ್ರಜ್ಞೆ ಹಾಗೂ ಆಯ್ದ ಅಲಕ್ಷಿತ ಸಮುದಾಯಗಳ (ಚಪ್ಪರಬಂದ್, ಭಿಲ್ಲವ, ಚೆನ್ನದಾಸರ್, ಮೊಗವೀರ, ಮುಕ್ರಿ, ಶೀಲಿಗರು ಮತ್ತು ಆಗೇರ ಸಮುದಾಯಗಳು) ಹುಟ್ಟು, ಪದದ ಅರ್ಥ, ಉಡುಗೆ-ತೊಡುಗೆ, ಬಳಿಗಳು, ಶಾರೀರಿಕ ದೇಹದಾಢ್ಯತೆ, ವೃತ್ತಿ, ವಸತಿ ವ್ಯವಸ್ಥೆ, ನಂಬಿಕೆ ಮತ್ತು ಆಚರಣೆಗಳು, ಸಾಮಾಜಿಕ ವ್ಯವಸ್ಥೆ, ರಾಜಕೀಯ ವ್ಯವಸ್ಥೆ, ಶೈಕ್ಷಣಿಕ ಸ್ಥಿತಿಗತಿಗಳು ಮುಂತಾದವುಗಳ ಮೇಲೆ ಬೆಳಕು ಚೆಲ್ಲಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳ ಮುಖಾಮುಖಿ, ಮಾಧ್ಯಮದ ಹೊಣೆಗಾರಿಕೆ, ಆಶಯಗಳು ಮತ್ತು ಅಲಕ್ಷಿತ ಸಮುದಾಯಗಳನ್ನು ಮುಖ್ಯವಾಹಿನಿಗೆ ಪರಿಚಯಿಸುವಲ್ಲಿ ಸಮೂಹ ಮಾಧ್ಯಮದ ಪಾತ್ರವೇನು ಎಂಬುದನ್ನು ವಿವರಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳ ನಡುವಿನ ಸಮಸ್ಯೆಗಳು, ಪರಿಣಾಮಗಳು ಹಾಗೂ ಪರಿಹಾರದ ಸಾಧ್ಯತೆಯ ಬಗ್ಗೆ ಚರ್ಚಿಸಲಾಗಿದೆ.

ಆರನೇ ಅಧ್ಯಾಯದಲ್ಲಿ ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳ ನಡುವಿನ ವರ್ತಮಾನದ ಪಲ್ಲಟಗಳ ಬಗ್ಗೆ ಮತ್ತು ಆಧುನಿಕ ಜಗತ್ತು ಮತ್ತು ಸಮೂಹ ಮಾಧ್ಯಮಗಳ ಬಗ್ಗೆ ಚರ್ಚಿಸಲಾಗಿದೆ.

ಏಳನೇ ಅಧ್ಯಾಯ ಸಮಾರೋಪವಾಗಿದ್ದು, ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ನೀಡಲಾಗಿದೆ.

ಅನುಬಂಧದಲ್ಲಿ ಪರಾಮರ್ಶನ ಗ್ರಂಥಗಳನ್ನು, ವಕ್ತೃವಿವರಗಳನ್ನು ನೀಡಲಾಗಿದೆ. ಅಧ್ಯಯನಕ್ಕೆ ಸಂಬಂಧಿಸಿದ ಛಾಯಾಚಿತ್ರಗಳನ್ನು ನೀಡಲಾಗಿದೆ.

೧.೬. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಸಾಮಾಜಿಕ ಮಾನವಶಾಸ್ತ್ರದ ಮೂಲಕ ವಿವಿಧ ಸಮುದಾಯಗಳ ಜೀವನ ಕ್ರಮವನ್ನು ಅರ್ಥ ಮಾಡಿಕೊಳ್ಳಲು ಸಮುದಾಯಗಳ ಸಾಮಾಜಿಕ, ಸಾಂಸ್ಕೃತಿಕ ರಚನೆಗಳನ್ನು ಅರಿಯುವ ಪ್ರಯತ್ನಗಳಿಗೆ ಸಂಶೋಧಕರು ಮುಂದಾದರು. ಭಾರತೀಯ ಮಾನವಶಾಸ್ತ್ರಜ್ಞರು ಭಾರತದ ಬುಡಕಟ್ಟು ಸಂಸ್ಕೃತಿಗಳನ್ನು ಶೋಧಿಸತೊಡಗಿದಂತೆ ಸ್ಥಳೀಯ ಸಾಮಾಜಿಕ, ಸಾಂಸ್ಕೃತಿಕ ವಿಚಾರಗಳನ್ನು ಗ್ರಹಿಸುವ ಮತ್ತು ಅರಿತುಕೊಳ್ಳುವ ಹೊಸ ಬೆಳಕಿನ ಕಿಂಡಿಗಳು ತೆರೆದುಕೊಂಡವು. ಸ್ಥಳೀಯ ವಿದ್ವಾಂಸರ ಪ್ರವೇಶಿಕೆಯೊಂದಿಗೆ ವೈಜ್ಞಾನಿಕ ಮಾನವಶಾಸ್ತ್ರವೆಂಬ ಜ್ಞಾನಶಾಖೆಯಲ್ಲಿ ಸ್ಥಳೀಯ ಅಧ್ಯಯನಕಾರರಿಂದಲೇ ಬುಡಕಟ್ಟುಗಳ ಸ್ವಭಾವವನ್ನು ಅರಿಯುವ ಬಗೆಯೊಂದು ಹುಟ್ಟಿಕೊಂಡಿತು.

ಇದರ ಫಲವಾಗಿ ಭಾರತದಲ್ಲಿ ವಿಶೇಷವಾಗಿ ಕರ್ನಾಟಕ, ಆಂಧ್ರ, ತಮಿಳುನಾಡಿನ ಮೂಲನಿವಾಸಿಗಳ ಬಗ್ಗೆ ಸಿ. ಹಯವದನರಾವ್, ಅನಂತಕೃಷ್ಣ ಅಯ್ಯರ್, ಕೆ. ರಂಗಾಚಾರಿ, ಹೆಚ್. ವಿ ನಂಜುಂಡಯ್ಯ, ಎಡ್ಗರ್ ಥರ್ಸ್ಟನ್, ಎಂ.ಎನ್. ಶ್ರೀನಿವಾಸ್, ಕೆ.ಎಸ್. ಸಿಂಗ್, ಟಿ.ಆರ್. ಸಿಂಗ್, ಫ್ರಾನ್ಸಿಸ್ ಬುಕಾನನ್, ಮೆಕೆಂಜಿ, ಎಮ್ಮಾ ರೋಶಾಂಬು ಕ್ಲೌ, ಸೈಮನ್ ಚಾರ್ಸ್ಲೆ ಮುಂತಾದವರು ಬಿಡಿ ಬಿಡಿಯಾಗಿ ಅಧ್ಯಯನ ಮಾಡಲು ಸಾಧ್ಯವಾಯಿತು. ಕರ್ನಾಟಕದಲ್ಲಿ ಕನ್ನಡ ಭಾಷೆಯಲ್ಲಿ ಜನಾಂಗಿಕ ಅಧ್ಯಯನಗಳು ಅನೇಕ ವಿಶ್ವವಿದ್ಯಾನಿಲಯಗಳಲ್ಲಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಉಪಸಂಸ್ಕೃತಿ ಅಧ್ಯಯನ ಮಾಲೆಯ ಯೋಜನೆಯಡಿಯಲ್ಲಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ ಯೋಜನೆಯಡಿಯಲ್ಲಿ ಈಗಾಗಲೇ ಸಾಕಷ್ಟು ಮಾಡಲಾಗಿದೆ; ಇಂದಿಗೂ ಮುಂದುವರೆಯುತ್ತಿದೆ.

'ಅಲಕ್ಷಿತ' ಪದವನ್ನು ಆದಿವಾಸಿ ಆಖ್ಯಾನ ಭಾಗ-೧ರಲ್ಲಿ ಸಬಾಲ್ಟ್ರನ್ ಸ್ಟಡೀಸ್‌ನ ಐದು ಸಂಪುಟಗಳಲ್ಲಿ ವೀಣಾದಾಸ್ ಅವರು ಸ್ಪಷ್ಟನೆ ನೀಡಿದ್ದಾರೆ. ಅಲಕ್ಷಿತರ ಅಧ್ಯಯನ ಅತ್ಯಂತ ಮಹತ್ವದ, ಹೊಸತರದ ಉಗಮವನ್ನು ಕುರಿತವೇ ಆಗಿದೆ. ಇದು ದೈನಿಕಕ್ಕೂ, ಚಾರಿತ್ರಿಕಕ್ಕೂ ಇರುವ ಸಂಬಂಧವನ್ನು ಗ್ರಹಿಸುವ ತಾತ್ವಿಕ ಚಿಂತನೆಯ ಮುಂದಿನ ಕಾಲಘಟ್ಟವಾಗಿದೆ ಎಂದು ಹೇಳಿದ್ದಾರೆ.

ಹರಿಣಶಿಕಾರ್ ಕುರಿತಂತೆ ಎಡ್ಗರ್ ಥರ್ಸ್ಟನ್ ಅವರ ಮ್ಯಾನ್ಯುಯಲ್ ಆಫ್ ಸೌತ್ ಕೆನರ-೧೯೦೫ದಲ್ಲಿ ಹರಿಣಶಿಕಾರ್ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಳು ಭಾಷೆ ಮಾತನಾಡುವ ಜೋಗಿ ಪುರುಷ ಮತ್ತು ಮರಾಠಿ ಭಾಷೆ ಮಾತನಾಡುವ ಜೋಗಿ ಪುರುಷರು ವಾಸಮಾಡುವ ಉಲ್ಲೇಖವಿದೆ. ಹರಿಣಶಿಕಾರ್ ಸಮುದಾಯವನ್ನು ಅಪರಾಧಿ ಬುಡಕಟ್ಟು ಪಟ್ಟಿಯಲ್ಲಿ ಸೇರಿಸಿರುವುದನ್ನು ೧೯೫೦ ಐಯ್ಯಂಗಾರ್ ವರದಿ(೧೯೪೯-೫೦, ಪು ೨೨)ಯಲ್ಲಿ ಹರಿಣಶಿಕಾರ್, ಹಂದಿ ಜೋಗಿಗಳ ಬಗ್ಗೆ ಉಲ್ಲೇಖವಿದೆ.

ಚಪ್ಪರಬಂದ್ ಸಮುದಾಯದ ಬಗ್ಗೆ ಎಂ ಕೆನಡಿ ಅವರು ಬ್ರಿಟಿಷ್ ಆಡಳಿತದಲ್ಲಿ ಬಾಂಬೆ ಪ್ರೆಸಿಡೆನ್ಸಿಯ ಡೆಪ್ಯುಟಿ ಇನ್ಸಪೆಕ್ಟರ್ ಆಫ್ ಪೋಲೀಸ್ ರೈಲ್ವೇ ಮತ್ತು ಕ್ರಿಮಿನಲ್ ಇನ್ವೆಸ್ಟಿಗೇಷನ್ ಆಫೀಸರ್ ಆಗಿದ್ದರು. ಇವರು ಚಪ್ಪರ್‌ಬಂದ್ ಸಮುದಾಯದ ಬಗ್ಗೆ ತಮ್ಮ ಕೃತಿಯಲ್ಲಿ ೧೫ ಪುಟಗಳ ದಾಖಲಿಸಿದ್ದಾರೆ.

ಆಡಮ್ ಹೆಚ್.ಎಲ್. ಅವರ The Indian Criminal (೧೯೦೯) ಎನ್ನುವ ಕೃತಿಯಲ್ಲಿ ಭಾರತೀಯ ಅಪರಾಧಗಳ ಸ್ವರೂಪ, ಅಪರಾಧಗಳನ್ನು ಮಾಡುವ ಸಮುದಾಯಗಳ ಕುರಿತು ಸಂಕ್ಷಿಪ್ತ ಮಾಹಿತಿ ದೊರೆಯುತ್ತದೆ.

ಎಡ್ಗರ್ ಥರ್ಸ್ಟನ್. Castes and Tribes of Southern India (Madrss: Government Press, ೧೯೦೯ : rpt. ೧೯೭೫, Delhi: Cosmo Publications) ೭ vols. ಎಡ್ಗರ್ ಥರ್ಸ್ಟನ್

ಅವರು ಚಪ್ಪರ್‌ಬಂದ್ ಎನ್ನುವ ಹೆಸರಿನ ಹಿನ್ನೆಲೆ ಮತ್ತು ಚಪ್ಪರ್‌ಬಂದ್ ಸಮುದಾಯದವರು ಹಿಂದೆ ನಕಲಿ ನಾಣ್ಯವನ್ನು ತಯಾರಿಸುವುದರ ಬಗ್ಗೆ ಮಾಹಿತಿ ನೀಡಿದ್ದಾರೆ. ಹಾಗೂ ಚೆನ್ನದಾಸರ್ ಸಮುದಾಯದ ಬಗ್ಗೆ ವಿವರ ನೀಡಿದ್ದಾರೆ.

ಗಯೆರ್ ಜಿ. ಡಬ್ಲ್ಯೂ Some Criminaltribes Of India, ಬ್ರಿಟಿಷ್ ಅಧಿಕಾರಿಯಾಗಿದ್ದ ಗಯೆರ್ ತಮ್ಮ ವರದಿಯಲ್ಲಿ ಭಾರತದ ಚಪ್ಪರ್‌ಬಂದ್ ಸಮುದಾಯದ ಭಾಷೆ ಮತ್ತು ಬೆಡಗುಗಳ ಕುರಿತು ದಾಖಲಿಸಿದ್ದಾರೆ ಹಾಗೂ ಕಳ್ಳತನ ಮಾಡಿ ಸಿಕ್ಕಿಹಾಕಿಕೊಂಡಿರುವ ಪೊಲೀಸ್ ವರದಿ ಅಂಶವನ್ನು ಉಲ್ಲೇಖಿಸಿದ್ದಾರೆ.

ಜ್ಞಾನ್ ನಿಕೋಲ್ ಫಾರ್ಕರ್ ಎನ್ನುವ ಮದ್ರಾಸ್ ಪ್ರೆಸಿಡೆನ್ಸಿಗೆ ಬಂದ ಸ್ಕಾಟಿಷ್ ಎಜ್ಯುಕೇಷನ್ ಮಿಷನರಿ ಕೃತಿಯಲ್ಲಿ ೧೯೧೫, ಬಾಂಬೆ ಪ್ರೆಸಿಡೆನ್ಸಿಯಲ್ಲಿ ವಾಸವಾಗಿರುವ ಚಪ್ಪರ್‌ಬಂದ್ ಮತ್ತು ಹರಿಣಶಿಕಾರ್ ಸಮುದಾಯದ ಕುರಿತು ಉಲ್ಲೇಖವಿದೆ.

STARTE O.H.B., ಅವರು ಹುಬ್ಬಳ್ಳಿಯ ಸೆಟ್ಲ್‌ಮೆಂಟ್ ಅಧಿಕಾರಿಯಾಗಿದ್ದವರು. ಅವರು ತಮ್ಮ ವರದಿಯಲ್ಲಿ ಚಪ್ಪರ್‌ಬಂದ್ ಒಳಗೊಂಡಂತೆ ಕ್ರಿಮಿನಲ್ ಟ್ರೈಬ್ಸ್‌ಗೆ ಹಗಲು ಮತ್ತು ರಾತ್ರಿ ಶಾಲೆಗಳನ್ನು ತೆರೆದು ಶಿಕ್ಷಣಕ್ಕೆ ತೊಡಗಿಸಿದ್ದನ್ನು ದಾಖಲಿಸಿದ್ದಾರೆ. ಹಾಗೂ ಗದಗ ಸೆಟ್ಲ್‌ಮೆಂಟಲ್ಲಿ ಗಿರಣಿಯನ್ನು ಕ್ಲೋಸ್ ಮಾಡಿದ್ದನ್ನು ಉಲ್ಲೇಖಿಸಿದ್ದಾರೆ. ಹಾಗೆಯೇ ಇವರ ೧೯೩೧ರ ವರದಿಯಲ್ಲಿ ಗದಗ ಸೆಟ್ಲ್‌ಮೆಂಟಲ್ಲಿ ಸ್ಪಿನ್ನಿಂಗ್ ಮಿಲ್ ಪುನಃ ಪ್ರಾರಂಭವಾಗಿದ್ದನ್ನು ದಾಖಲಿಸಿದ್ದಾರೆ.

ಬ್ರಿಟಿಷ್ ಅಧಿಕಾರಿಯಾಗಿದ್ದ ಸಿ.ಎಮ್. ಎಡ್ವರ್ಡ್‌ರವರು ಕ್ರಿಮಿನಲ್ ಟ್ರೈಬ್ಸ್ ಆಫ್ ಹುಬ್ಬಳ್ಳಿ ೧೯೨೦-೧೯೩೦. ಎಂಬ ಪುಸ್ತಕದಲ್ಲಿ ಸೆಟ್ಲ್‌ಮೆಂಟ್ ಜೀವನ ಕ್ರಮದ ಬಗ್ಗೆ ದಾಖಲಿಸಿದ್ದಾರೆ.

ಭಾರ್ಗವ ಬಿ. ಎಸ್ ಅವರ The Criminal Tribes A Socio-Economic Study Of the Principal Criminal Tribes and Castes in Northern India.(೧೯೪೯) ಕೃತಿಯಲ್ಲಿ ಅಪರಾಧಿ ಬುಡಕಟ್ಟುಗಳು ಹಾಗೂ ಜಾತಿಗಳ ಸಮಾಜೋ, ಆರ್ಥಿಕ ಸ್ವರೂಪದ ಬಗ್ಗೆ ವಿವರಣೆ ಮಾಡಿದ್ದಾರೆ.

ಮೆಹ್ತಾ ಬಿ.ಎಚ್. ಅವರ ಇಂಡಿಯನ್ ಜರ್ನಲ್ ಆಫ್ ಸೋಷಿಯಲ್ ವರ್ಕ್ Vol-೧೬, Ex-Criminal groups in India ೧೯೫೫ರ ಕೃತಿಯಲ್ಲಿ ಭಾರತದ ಅಪರಾಧಿ ಸಮುದಾಯಗಳ ಬಗ್ಗೆ ವಿವರಿಸಿದ್ದಾರೆ.

ಷಾ. ಪಿ.ಜಿ. ಅವರ 'Vimukta Jati: De-notified Communities in Western India ೧೯೬೭ ಕೃತಿಯಲ್ಲಿ ಭಾರತದ ವಿಮುಕ್ತ ಬುಡಕಟ್ಟುಗಳ ಕುರಿತು ವಿವರಣೆ ಮಾಡಿದ್ದಾರೆ.

ಜಿ.ಎನ್. ದೇವಿ ಅವರ A Nomad Called Thief, Orient logman publication, Delhi-೨. ೨೦೦೬ರಲ್ಲಿ ಭಾರತದ ವರ್ತಮಾನದ ಬುಡಕಟ್ಟು ಅಧ್ಯಯನಗಳನ್ನು ಸೂಕ್ಷ್ಮವಾಗಿ ದಾಖಲಿಸಿದ್ದಾರೆ.

ಮೇತ್ರಿ ಕೆ.ಎಂ. ಅವರ ಬುಡಕಟ್ಟು ಕುಲಕಸುಬುಗಳು ಎಂಬ ಗ್ರಂಥದಲ್ಲಿ ಕರ್ನಾಟಕದ ೪೯ ಬುಡಕಟ್ಟುಗಳ ಕುಲಕಸುಬುಗಳ ಮಾಹಿತಿ ನೀಡಿದ್ದಾರೆ.

ಎಂ.ಈ. ಹುದ್ದಾರ ಅವರ Antropo- Criminological Study of Chapparaband of Bijapur and Dharward Districts of Karnataka ಮಹಾಪ್ರಬಂಧದಲ್ಲಿ ಚಪ್ಪರ್‌ಬಂದ್ ಸಮುದಾಯದ ಮಾಹಿತಿ ಇದೆ.

ಎಡ್ಗರ್ ಥರ್ಸ್ಟನ್ ಅವರ The Scheduled Caste ಎಂಬ ಕೃತಿಯಲ್ಲಿ ಸಿಂಧೋಳ್ಳು ಸಮುದಾಯ ಮಾದಿಗ ಸಮುದಾಯಕ್ಕೆ ಸೇರಿದ್ದಾರೆ ಎಂಬ ಉಲ್ಲೇಖವಿದೆ.

ಎಚ್.ಎ. ರೋಸ್ ಎಂಬವರು "Glossary of the tribes and caste of the Punjab and N.W.F province (Vol-II ೧೯೧೯) ಎಂಬ ಗ್ರಂಥದಲ್ಲಿ ಅಗೇರ ಸಮುದಾಯದ ಪರಿಚಯ ಮಾಡಿರುತ್ತಾರೆ.

ವಿಕಾಸ ಪಬ್ಲಿಷಿಂಗ್ ಹೌಸ್ (೧೯೭೮) ದಿಲ್ಲಿ, ಪ್ರಕಾಶನ ಸಂಸ್ಥೆಯವರು ಹೊರತಂದಿರುವ 'Tribalism in India' ಎನ್ನುವ ಗ್ರಂಥದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರು 'The agarias of Madhya pradesh' ಎನ್ನುವ ಲೇಖನದಲ್ಲಿ, ಅಗಾರಿಯಾ ಎನ್ನುವ ಶಬ್ದದ ಉತ್ಪತ್ತಿ ಕುರಿತು ಹೇಳಿದ್ದಾರೆ

ಎಮ್.ಎ. ಶೇರಿಂಗ್ ಅವರು 'Hindu tribes and castes as represented in Benares (೧೯೭೪) ಗ್ರಂಥದಲ್ಲಿ ಅಗೇರರು ರಾಜಸ್ಥಾನ, ದಿಲ್ಲಿ, ದಾದರ, ನಗರ ಹವೇಲಿ, ಗುಜರಾತ್ ಹಾಗೂ ಮಹಾರಾಷ್ಟ್ರಗಳಲ್ಲಿ ಚದುರಿಕೊಂಡಿದ್ದಾರೆ ಎಂದು ಹೇಳುತ್ತಾರೆ.

ಆರ್.ಈ. ಎಂಥೋವನ್ ಅವರು Caste and tibes of Bombay ಗೆಜೆಟಿಯರ್ ಮೊದಲ ಸಂಪುಟದಲ್ಲಿ ಶುದ್ಧ ಅಗ್ರಿಸ್ ಇವರಿಗೆ ಮಿಠ ಅಗ್ರಿಸ್ ಎಂತಲೂ ಕರೆಯುತ್ತಾರೆ. ಮರಾಠಿ ಭಾಷೆಯಲ್ಲಿ 'ಮಿಠ್' ಎಂದರೆ ಉಪ್ಪು, ಇವರು ಉಪ್ಪು ತಯಾರಿಸುವವರು ಆಗಿರುವುದರಿಂದ ಮಿಠ್ ಅಗ್ರಿಸ್ ಎಂದು ಕರೆದಿರಬೇಕು ಎಂದು ತಿಳಿಸಿದ್ದಾರೆ.

ಕೆ.ಎಸ್. ಸಿಂಗ್ ಅವರ People of India-Karnataka ಗ್ರಂಥದಲ್ಲಿ ಚೆನ್ನದಾಸರ್ ಬಗ್ಗೆ ವಿವರಣೆ ನೀಡಿದ್ದಾರೆ. ಯಾದಗಿರಿ ಶರ್ಮಾ ಅವರು ಉಸ್ಮಾನಿಯಾ ವಿ.ವಿ.ಗೆ ಸಲ್ಲಿಸಿರುವ ಅಪ್ರಕಟಿತ ಸಂಶೋಧನಾ ಪ್ರಬಂಧ ಜಾನಪದ ಭಿಕ್ಷುಕ ಗಾಯಕಲುದಲ್ಲಿ (ಪು. ೫೫೯) ಆಂಧ್ರದ ತೆಲಂಗಾಣದಲ್ಲಿ ಇವರನ್ನು ಸಿಂಧೋಳ್ಳು ಎಂದರೆ, ಉಳಿದ ಪ್ರಾಂತ್ಯದಲ್ಲಿ ಮಾದಿಗ ಜೋಗಲು ಎಂದು ಕರೆಯುತ್ತಾರೆ. ಗೀತಾ ನಾಗಭೂಷಣ ಅವರ ದುರುಗಮುರುಗ ಸಂಸ್ಕೃತಿ-೧೯೯೩ ಪು. ೫ರಲ್ಲಿ ದುರುಗಮುರುಗ ಸಮುದಾಯದ ಸಂಸ್ಕೃತಿಯ ಬಗ್ಗೆ ಮಾಹಿತಿ ನೀಡಿದ್ದಾರೆ. ಚಂದ್ರಶೇಖರ ಕಂಬಾರ ಅವರು ಕನ್ನಡ ಜಾನಪದ ವಿಶ್ವಕೋಶದಲ್ಲಿ ೧೯೮೦, ಪು. ೧೦೩೮-೩೯ರಲ್ಲಿ ದುರುಗಮುರುಗ ಸಮುದಾಯದ ಕುರಿತು ಉಲ್ಲೇಖಿಸಿದ್ದಾರೆ.

ಭಾರತದ ಮೂಲ ನಿವಾಸಿ ಬುಡಕಟ್ಟುಗಳ ಬಗ್ಗೆ ಭಾರತೀಯ ವಿದ್ವಾಂಸರು ಅಧ್ಯಯನ ನಡೆಸಿದ್ದಕ್ಕಿಂತ ಪಾಶ್ಚಿಮಾತ್ಯರು ನಡೆಸಿದ ಅಧ್ಯಯನಗಳೇ ಹೆಚ್ಚು. ವೆರಿಯರ್ ಎಲ್ವಿನ್, ಫ್ರಾನ್ಸಿಸ್ ಬುಕಾನನ್, ಮೇಜರ್ ಕಾಲಿನ್ ಮೆಕೆಂಜಿ, ಎಡ್ಗರ್ ಥರ್ಸ್ಟನ್ ಮುಂತಾದವರು ಭಾರತದ ಬುಡಕಟ್ಟುಗಳನ್ನು ಕುರಿತು ನಡೆಸಿದ ಅಧ್ಯಯನಗಳ ಫಲಶ್ರುತಿಯಿಂದಾಗಿ ಜನಾಂಗೀಯ ಅಧ್ಯಯನದ ಮಹತ್ವ ಅರಿಯಲಾಯಿತು. ಆದಿಮ ಬುಡಕಟ್ಟುಗಳ ಭಾಷೆ, ಜೀವನ ವಿಧಾನ, ದೇವರ ಕಲ್ಪನೆ, ನ್ಯಾಯ ಪದ್ಧತಿ, ಆಡಳಿತ ವ್ಯವಸ್ಥೆ, ಆಧ್ಯಾತ್ಮಿಕತೆ, ಆಹಾರ ಪದ್ಧತಿ, ಆಚರಣೆಗಳು ಮುಂತಾದವುಗಳನ್ನೆಲ್ಲ ಅಧ್ಯಯನ ಮಾಡಿದ ನಂತರ ಮೂಲ ಬುಡಕಟ್ಟುಗಳ ಈ ರಚನೆಗಳು ಸ್ಥಿರ ಸಮುದಾಯಗಳಲ್ಲಿ ಅವಸ್ಥಾಂತರಗೊಂಡು ಈಗಲೂ ಅಸ್ತಿತ್ವದಲ್ಲಿರುವುದನ್ನು ಗುರುತಿಸುವ ಕೆಲಸಗಳಾಗಿವೆ.

ಇಂದು ಮಾನವ ಸಮಾಜವು ಮತೀಯವಾದ, ಕೋಮುವಾದ, ಅಸ್ಪೃಶ್ಯತೆ, ರಾಜಕೀಯ ಅಪರಾಧೀಕರಣ, ಲಿಂಗತಾರತಮ್ಯ, ಸಾಮಾಜಿಕ, ಆರ್ಥಿಕ ಅಸಮಾನತೆ ಮುಂತಾದ ಬಿಕ್ಕಟ್ಟನ್ನು ಎದುರಿಸುತ್ತಿದೆ. ಸಮೂಹ ಮಾಧ್ಯಮಗಳು ಬಲಿಷ್ಠವಾಗಿದ್ದು ಪ್ರಜಾಪ್ರಭುತ್ವದ ನಾಲ್ಕನೆಯ ಅಂಗ ಅಥವಾ ಕಾವಲು ನಾಯಿ ಎಂದೇ ಪ್ರಸಿದ್ಧಿಯಾಗಿದೆ. ಸಮೂಹ ಮಾಧ್ಯಮಗಳು ದೇಶದ ಸರ್ಕಾರವನ್ನು ಉಳಿಸುವ ಅಥವಾ ಅಳಿಸುವ ಸಾಮರ್ಥ್ಯವನ್ನು ಹೊಂದಿದೆ. ಇಂದಿನ ದಿನದಲ್ಲಿ ಸಮೂಹ ಮಾಧ್ಯಮಗಳಿಗೆ ಎಲ್ಲಾ ಬಿಕ್ಕಟ್ಟನ್ನು ಸರಿಪಡಿಸುವ ಶಕ್ತಿ ಇದೆ. ಆದರೆ ಸಮೂಹ ಮಾಧ್ಯಮಗಳಲ್ಲೂ ಅನೇಕ ಬಿಕ್ಕಟ್ಟುಗಳಿವೆ. ಸ್ವಾತಂತ್ರ್ಯ ಬಂದು ಏಳು ದಶಕ ಕಳೆದರೂ ಅಲಕ್ಷಿತ ಸಮುದಾಯಗಳು ಮುಖ್ಯವಾಹಿನಿಗೆಯತ್ತ ಕಾಲಿಡುತ್ತಿಲ್ಲ. ಮಾನವ ಸಮಾಜವು ಇಂತಹ ಬಿಕ್ಕಟ್ಟುಗಳಿಗೆ ಸಿಲುಕಿರುವಾಗ, ಬಿಕ್ಕಟ್ಟುಗಳ ಕಾರಣವನ್ನು ಶೋಧಿಸುವುದು ಹಾಗೂ ಪರಿಹಾರವನ್ನು ಕಂಡುಕೊಳ್ಳುವುದು ಸಮಕಾಲೀನ ಸಂದರ್ಭದಲ್ಲಿ ಬಹುಮುಖ್ಯವೂ, ಅಗತ್ಯವೂ ಆಗಿದೆ. ಅಸಮಾನತೆಯಿಂದ ನರಳುತ್ತಿರುವ ಅಲಕ್ಷಿತ ಸಮುದಾಯಗಳನ್ನು ಸಮಾನತೆಯೆಡೆಗೆ ಕೊಂಡೊಯ್ಯುವ ಪ್ರಯತ್ನಗಳನ್ನು ಮಾಡಬೇಕಾಗಿದೆ. ಸಾಂಸ್ಕೃತಿಕ ದಬ್ಬಾಳಿಕೆಯಿಂದ ಅಲಕ್ಷಿತವಾಗಿರುವ ನಿರ್ಗತಿಕ ನೆಲೆಯ ಜನಸಮುದಾಯಗಳಿಗೆ ಸಾಮಾಜಿಕ ಸ್ಥಾನಮಾನ ಹಾಗೂ ಮೂಲಭೂತ ಸೌಕರ್ಯ ಒದಗಿಸುವ ಆಶಯ ಅಧ್ಯಯನಕ್ಕಿದೆ. ಇದರಿಂದ ಸಿಗಬಹುದಾದ ಪ್ರಜಾಸತ್ತಾತ್ಮಕ ಹಕ್ಕು ಮತ್ತು ಸವಲತ್ತುಗಳನ್ನು ದೊರಕಿಸಿಕೊಡುವ ದಾರಿಗಳನ್ನು ಪರಿಚಯಿಸುವ ಹಾಗೂ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾನತೆ ಮತ್ತು ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವುದು ಸಮೂಹ ಮಾಧ್ಯಮದ ಕರ್ತವ್ಯವಾಗಿದೆ. ರಾಜಕೀಯ, ಆರ್ಥಿಕ ಪಾಲುದಾರಿಕೆಯನ್ನು ಪಡೆಯಲು ಸಮೂಹ ಮಾಧ್ಯಮಗಳು ಅಗೋಚರ ಸಮುದಾಯಗಳಿಗೆ ಗೋಚರ ಗುರುತುಗಳ ಮೂಲಕ ಚೈತನ್ಯ ತುಂಬುವುದು ಅಧ್ಯಯನದ ಉದ್ದೇಶವಾಗಿದೆ.

ಕೊನೆ ಟಿಪ್ಪಣಿ

೧. ಹರಿಲಾಲ ಪವಾರ, ೨೦೧೬, 'ಅಗೇರ ಸಮುದಾಯ', ಪು. ೨.

◆◆◆

ಅಧ್ಯಾಯ : ಎರಡು

ಸಮೂಹ ಮಾಧ್ಯಮದ ಪರಿಕಲ್ಪನೆ

ಅಧ್ಯಾಯ : ಎರಡು

ಸಮೂಹ ಮಾಧ್ಯಮದ ಪರಿಕಲ್ಪನೆ

ಮಾತು, ಅಂಗಚೇಷ್ಟೆಗಳು, ಹಾವಭಾವ, ಭಂಗಿಗಳು, ನೃತ್ಯ, ಮುದ್ರೆಗಳು, ಪ್ರಾಣಿಪಕ್ಷಿಗಳ ಕೂಗು-ಕಲರವ, ಹಾರಾಟ-ಚೀರಾಟಗಳು, ಸಂಜ್ಞೆ-ಚಿನ್ಹೆಗಳು ಮುಂತಾದವುಗಳನ್ನು 'ಪ್ರಾಥಮಿಕ ಮಾಧ್ಯಮ' ಎಂದು ಕರೆಯಲಾಗುವುದು. ಅಂದರೆ ಒಬ್ಬನ ಅನಿಸಿಕೆ ಮತ್ತೊಬ್ಬನಿಗೆ/ಇತರರಿಗೆ ತಲುಪಲು ಬಳಕೆಯಾಗುವ ಕ್ರಮವೇ ಮಾಧ್ಯಮ. ಪ್ರಾಥಮಿಕ ಮಾಧ್ಯಮಗಳು 'ಅಭಿವ್ಯಕ್ತ ಮಾಧ್ಯಮಗಳು' ಎನಿಸಿಕೊಳ್ಳುತ್ತವೆ.

"ಜನರ ಸಮೂಹದೊಂದಿಗೆ ಸಮೂಹ ಸಂವಹನ ಏರ್ಪಡಿಸಲು ಒಂದು ಸಾಧನದ ಅವಶ್ಯಕತೆ ಇರುತ್ತದೆ. ಜನರ ಸಮೂಹದೊಂದಿಗೆ ಏಕಮುಖಿಯ ಸಂವಹನವನ್ನು ಏರ್ಪಡಿಸಲು ಬಳಸುವ ಸಾಧನಗಳನ್ನೇ "ಸಮೂಹ ಸಂವಹನ ಮಾಧ್ಯಮಗಳೆಂದು" ಕರೆಯಲಾಗುತ್ತದೆ. ಇದನ್ನೇ ವಿಲ್ಬರ್ ಶ್ರಾಮ್ ಅವರು ದೊಡ್ಡ ಸಂಖ್ಯೆಯ ಜನರಿಗೆ, ಏಕಕಾಲದಲ್ಲಿ ಒಂದೇ ತೆರನಾದ ಸಂದೇಶವನ್ನು ಪ್ರಸರಣ ಮಾಡುವ ಸಾಧನಗಳನ್ನು 'ಸಮೂಹ ಮಾಧ್ಯಮ'ಗಳೆಂದು ಹೇಳುತ್ತಾರೆ".[೧] ಪತ್ರಿಕೋದ್ಯಮ ಶಬ್ದಕೋಶದಲ್ಲಿ, ಸಮೂಹ ಸಂವಹನವನ್ನು ಪ್ರಸರಣ ಮಾಡುವ ಟೆಲಿವಿಷನ್, ರೇಡಿಯೊ, ಚಲನಚಿತ್ರ, ಪತ್ರಿಕೆಗಳು, ದೊಡ್ಡ ಪ್ರಸಾರ ಸಂಖ್ಯೆಯನ್ನು ಹೊಂದಿರುವ ನಿಯತಕಾಲಿಕೆಗಳಂತಹ ಸಾಧನಗಳನ್ನು 'ಸಮೂಹ ಮಾಧ್ಯಮ'ಗಳೆಂದು ಉಲ್ಲೇಖಿಸಲಾಗಿದೆ.

ಮನುಷ್ಯ ಸಂಘಜೀವಿ, ಒಬ್ಬಂಟಿಯಾಗಿ ಬದುಕಲಾರ, ಸಂಘಜೀವಿಯಾಗಿ ಬದುಕಲು ಮನುಷ್ಯನಿಗೆ ಸಂಪರ್ಕ ಬೇಕೆ ಬೇಕು. ಹೀಗಾಗಿ ಮನುಷ್ಯ ಹೊಸ ಸಂಪರ್ಕ ಸಾಧನಗಳನ್ನು ಅರಸುತ್ತಲೇ ಇದ್ದಾನೆ. ತನ್ನ ಭಾವನೆಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ಮನುಷ್ಯ ಮೊದಲು ಕಂಡುಕೊಂಡಿದ್ದು ಸನ್ನೆ ಮಾತುಗಾರಿಕೆ. ಮನುಷ್ಯನ ಬುದ್ಧಿವಂತಿಕೆ ಬೆಳೆದಂತೆ ಸಂವಹನಕ್ಕಾಗಿ ಮನುಷ್ಯ ಬೇರೆ ಬೇರೆ ಸಾಧನೆಗಳನ್ನು ಬಳಸತೊಡಗಿದನು. ತಂತ್ರಜ್ಞಾನದ ಕೊರತೆ ಇದ್ದ ಕಾಲದಲ್ಲೂ ಸಮೂಹ ಮಾಧ್ಯಮಗಳ ಅಸ್ತಿತ್ವವನ್ನು ಅಲ್ಲಗಳೆಯುವಂತಿಲ್ಲ. ಪುರಾತನ ಕಾಲದಲ್ಲಿ ಮಾತುಗಾರಿಕೆ, ಡಂಗೂರ, ನಗಾರಿ ಗಂಟೆಗಳೂ ಮಾಧ್ಯಮಗಳಾದ್ದವು. ಸಾಹಿತ್ಯ, ಜನಪದ ಸಾಹಿತ್ಯ, ರಂಗಭೂಮಿ ನಂತರದ ಸೇರ್ಪಡೆಗಳಾದರೆ ಇತ್ತೀಚಿಗೆ ವೃತ್ತ ಪತ್ರಿಕೆಗಳು, ನಿಯತಕಾಲಿಗಳು,

ಜಾಹುಲಿ, ದೂರದರ್ಶನ ಸೇರ್ಪಡೆಗೊಂಡಿವೆ. ದಿನೇ ದಿನೇ ಸಮೂಹ ಮಾಧ್ಯಮಗಳ ವ್ಯಾಪ್ತಿ ವಿಸ್ತೀರ್ಣಗೊಳ್ಳುತ್ತಲೇ ಇದೆ. ಕಂಪ್ಯೂಟರ್, ಇಂಟರ್ನೆಟ್, ಮೊಬೈಲ್, ಫೇಸ್‌ಬುಕ್‌ನಂಥ ಸಾಮಾಜಿಕ ತಾಣಗಳೂ ಸಮೂಹ ಮಾಧ್ಯಮಗಳ ಸಾಲಿಗೆ ಸೇರುತ್ತವೆ. ಇದೀಗ ಸಮೂಹ ಮಾಧ್ಯಮಗಳ ವ್ಯಾಪ್ತಿ ದೊಡ್ಡವಾಗಿದೆ. ಸಮೂಹ ಮಾಧ್ಯಮಗಳು ಒಂದು ವ್ಯವಸ್ಥೆ ಹಾಗೂ ಮತ್ತೊಂದು ವ್ಯವಸ್ಥೆಯ ಸಂಪರ್ಕದ ಕೊಂಡಿಯಾಗಿರುತ್ತವೆ. ಸಮೂಹ ಮಾಧ್ಯಮಗಳು ಸರಕಾರ ಹಾಗೂ ಜನರ ನಡುವೆ, ಆಡಳಿತ ಹಾಗೂ ಜನರ ನಡುವೆ ಸಂಪರ್ಕದ ಕೊಂಡಿಗಳಾಗಿ ನಿಲ್ಲುತ್ತವೆ.

ಮಾಧ್ಯಮಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿರುವುದು ಪ್ರಜಾಪ್ರಭುತ್ವದ ಮೂಲಕ ಸಮಾಜದ ಉಳಿವಿಗೆ ಕಾರಣವಾಗಿದೆ; ಇಂದು ಸಂವಿಧಾನದ ನಾಲ್ಕನೇ ಅಂಗ ಎಂಬ ಖ್ಯಾತಿಗಳಿಸಿವೆ. ಕಾರ್ಯಾಂಗ, ನ್ಯಾಯಾಂಗ ಹಾಗೂ ಶಾಸಕಾಂಗಗಳ ಕಾರ್ಯ ವಿಮರ್ಶೆ ಮಾಡುವ ಮೂಲಕ ಪ್ರಜಾಪ್ರಭುತ್ವದ ಕಾವಲುಗಾರನಾಗಿ ಮಾಧ್ಯಮ ಕಾರ್ಯನಿರ್ವಹಿಸುತ್ತಿದೆ. ರಚನಾತ್ಮಕ ವಿರೋಧ ಪಕ್ಷ ಎಂದು ಹೊಗಳಿಸಿಕೊಂಡಿರುವ ಮಾಧ್ಯಮಗಳಿಗೆ ಸಾಮಾಜಿಕ ಬದ್ಧತೆಯೂ ಇದೆ. ಪ್ರಸ್ತುತ ಸನ್ನಿವೇಶದಲ್ಲಿ ಸಮೂಹ ಮಾಧ್ಯಮಗಳು ಸಮಾಜದ ಎಲ್ಲ ಆಗುಹೋಗುಗಳ ಮೇಲೆ ಪರಿಣಾಮ ಬೀರುವ ಸಾಮರ್ಥ್ಯ ಹೊಂದಿದ್ದು, ಮಾಧ್ಯಮಗಳ ಜವಾಬ್ದಾರಿ ಮೊದಲಿಗಿಂತಲೂ ಅಧಿಕವಾಗಿದೆ.

ಸಮೂಹ ಮಾಧ್ಯಮಗಳು ಕಾರ್ಯನಿರ್ವಹಿಸಲು ಭಾರತದಲ್ಲಿ ದೊಡ್ಡ ಸವಾಲನ್ನು ಎದುರಿಸುತ್ತಿದೆ. ಭಾರತ ಬಹುಭಾಷಾ ದೇಶ. ಎಲ್ಲರನ್ನೂ ಒಂದೇ ತೆಕ್ಕೆಗೆ ತೆಗೆದುಕೊಳ್ಳುವ ಭಾಷೆಯ ಕೊರತೆ ಇನ್ನೂ ನಮ್ಮ ದೇಶದಲ್ಲಿದೆ. ಭೌಗೋಳಿಕ ಪರಿಸರವೂ ಒಂದೇ ರೀತಿಯಲ್ಲಿ ಇಲ್ಲ. ದೇಶದ ಸಾವಿರಾರು ಹಳ್ಳಿಗಳಿಗೆ ರಸ್ತೆಗಳಿಲ್ಲ, ವಿದ್ಯುತ್ ಸೌಕರ್ಯ ಇಲ್ಲ. ಹೀಗಾಗಿ ವೃತ್ತ ಪತ್ರಿಕೆಗಳು, ದೂರದರ್ಶನಗಳು ತಲುಪುವುದು ಕಷ್ಟ. ಎಲ್ಲಕ್ಕಿಂತ ಹೆಚ್ಚಿನದಾಗಿ ಅನಕ್ಷರತೆ ಮುದ್ರಣ ಮಾಧ್ಯಮಕ್ಕೆ ಶಾಪವಾಗಿ ಕಾಡಿದರೆ, ದೃಶ್ಯ ಮತ್ತು ಶ್ರವಣ ಮಾಧ್ಯಮಗಳಿಗೆ ಬಡತನ ಗುಮ್ಮವಾಗಿ ಕಾಡುತ್ತಿದೆ. ಬಹುಸಂಖ್ಯಾತ ಹಳ್ಳಿ ಜನ ಬಿಡುವಿಲ್ಲದ ದುಡಿಮೆಯಿಂದಾಗಿ ಸಂಜೆ ವೇಳೆ ಸಮೂಹ ಮಾಧ್ಯಮಗಳಿಂದ ಶುದ್ಧ ಮನರಂಜನೆಯನ್ನು ಮಾತ್ರ ಬಯಸುತ್ತಾರೆ. ಇಂತಹ ಹತ್ತು ಹಲವು ಕಾರಣಗಳಿಂದ ಸಮೂಹ ಮಾಧ್ಯಮಗಳು ದೇಶದ ಪ್ರತಿಯೊಬ್ಬರನ್ನು ತಲುಪಲು ಸಾಧ್ಯವಾಗುತ್ತಿಲ್ಲ. ಜೊತೆಗೆ ಸಾಮಾಜಿಕ ಕಳಕಳಿ ಇಟ್ಟುಕೊಂಡಿರೋ ಸಮೂಹ ಮಾಧ್ಯಮಗಳ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಸರ್ಕಾರ ಹೇರಿರೋ ಕೆಲ ಕಟ್ಟುಪಾಡುಗಳು ಕೂಡ ಸಮೂಹ ಮಾಧ್ಯಮಗಳ ಹಿನ್ನೆಡೆಗೆ ಕಾರಣವಾಗಿದೆ.

೨.೧. ಹುಟ್ಟು, ಶಬ್ದದ ಅರ್ಥ, ವ್ಯಾಖ್ಯಾನಗಳು

"ಮನುಷ್ಯ ಮನುಷ್ಯನ ನಡುವೆ ಸಂಪರ್ಕ ವ್ಯವಸ್ಥೆಗೊಳ್ಳುವ ಸಾಧನಗಳನ್ನೇ ಸಾಮಾನ್ಯವಾಗಿ ಸಮೂಹ ಮಾಧ್ಯಮಗಳೆಂದು ಕರೆಯಲಾಗುತ್ತದೆ. ಮಾಧ್ಯಮಗಳು ಬರುವುದಕ್ಕೆ ಮೊದಲು ಸಮಾಜದಲ್ಲಿ

ಸಂವಹನ ನಡೆಯುತ್ತಿತ್ತು. ಈಗಲೂ ನಿತ್ಯ ಜೀವನದಲ್ಲಿ ಹಲವು ರೀತಿಯಲ್ಲಿ ಸಂವಹನ ನಡೆಯುತ್ತದೆ".[೨] ಮಾಧ್ಯಮಗಳ ಬಗೆಗಿನ ಚರ್ಚೆಗೆ ಮೊದಲು ಸಂವಹನ ಎಂದರೆ ಏನು? ಎಂಬುದು ತಿಳಿಯುವುದು ಅವಶ್ಯಕವಾಗಿರುತ್ತದೆ.

ಮನುಷ್ಯನ ಉಗಮದೊಂದಿಗೆ ಸಂವಹನ ಪ್ರಕ್ರಿಯೆಯೂ ಪ್ರಾರಂಭವಾಗಿದೆ. ಆಗಷ್ಟೇ ಕಣ್ತೆರೆದು ಅಳುವ ಮಗುವು ತನ್ನ ಸುತ್ತಲಿನ ಪರಿಸರದೊಂದಿಗೆ ಅಳುವಿನ ಮೂಲಕವೇ ಸ್ಪಂದಿಸುವುದು ಸಂವಹನ ಕ್ರಿಯೆಯ ಮೊದಲ ಹೆಜ್ಜೆ. ಮನುಷ್ಯ ಮನುಷ್ಯನ ನಡುವಿನ 'ಹೇಳಿಕೆ-ಕೇಳಿಕೆಗಳು' ಸೇತುವಾಗುವುದರಿಂದ ಇದಕ್ಕೆ 'ಸಂಪರ್ಕ' ಎಂಬ ಪದ ಚಾಲ್ತಿಯಲ್ಲಿತ್ತು. 'ಸೇರಿಸು', 'ಸಂಬಂಧವನ್ನು ಏರ್ಪಡಿಸುವುದು', 'ಮಿಳಿತಗೊಳ್ಳು', 'ಸ್ಪರ್ಶಿಸು' ಎನ್ನುವ ಅರ್ಥಗಳಿಗೆ ಸಂಪರ್ಕದ ಸೀಮಿತಗೊಳ್ಳುವುದರಿಂದಲೂ ಹೊಸ ತಾಂತ್ರಿಕ ಸಾಧನಗಳ ಆವಿಷ್ಕಾರದ ಫಲವಾಗಿಯೂ ಆ ಪದವನ್ನು ಚ್ಯುತಿಗೊಳಿಸಿ 'ಸಂವಹನ' ಎಂಬ ಶಬ್ದ ಸ್ಥಾಪಿತವಾಗಿದೆ.

"ಸಂವಹನ ಪದವನ್ನು ಇಂಗ್ಲಿಷ್‌ನ ಕಮ್ಯುನಿಕೇಶನ್ (communication) ಪದದ ಸಮನಾರ್ಥದಲ್ಲಿ ಉಪಯೋಗಿಸಲಾಗಿದೆ. ಇಂಗ್ಲಿಷ್ ಪದದ ಮೂಲ 'Communies', ಅದರ ಅರ್ಥ ಸಮಾನವಾಗಿರುವ ಅಂಶಗಳನ್ನು ಕಂಡುಕೊಳ್ಳುವುದು. ಸಂವಹನವನ್ನು ಇಬ್ಬರ ನಡುವೆ ಸಮಾನವಾಗಿರುವ ಅಂಶಗಳನ್ನು ಕಂಡುಕೊಳ್ಳುವುದು, ಇರುವುದನ್ನು ಹಂಚಿಕೊಳ್ಳುವುದು ಎಂದು ಅರ್ಥೈಸಬಹುದು."[೩]

ಕನ್ನಡ ರತ್ನಕೋಶದ ಪ್ರಕಾರ, 'ವಾಹಕ', 'ವಾಹನ' ಎನ್ನುವ ಪದಗಳು 'ಸಾಗಿಸುವ ಸಾಧನ', 'ಒಯ್ಯುವ ಸಾಧನ' ಎಂಬರ್ಥಗಳನ್ನು ಹೊಂದಿವೆ. ಹಾಗೆ ವಾಹಿನಿ=ನದಿ= ಹರಿಯುವಂಥದ್ದು ಎನ್ನುವ ಅರ್ಥವ್ಯಾಪ್ತಿಯಲ್ಲಿ, ವಿಚಾರ ಒಂದೆಡೆಯಿಂದ ಮತ್ತೊಂದೆಡೆಗೆ ಹರಿಯುತ್ತದೆ ಎನ್ನುವ ಹಿನ್ನೆಲೆಯಲ್ಲಿ 'ಸಂವಹನ' ಶಬ್ದದ ಬಳಕೆಯಿದೆ. 'ಸಂಕ್ಷಿಪ್ತ ಕನ್ನಡ ನಿಘಂಟು'ವಿನ ಪ್ರಕಾರ 'ವರಿಸು' ಎಂಬ ಕ್ರಿಯಾಪದಕ್ಕೆ 'ಹರಿ', 'ಒಪ್ಪಿಸು' ಎಂಬರ್ಥಗಳೂ, 'ವಾಹ' ಪದಕ್ಕೆ 'ಪ್ರವಹಿಸು', 'ಹರಿ' ಎಂಬರ್ಥವೂ, 'ವಾಹಕ', 'ವಾಹನ' ಪದಗಳಿಗೆ 'ಒಯ್ಯುವ ಮಾಧ್ಯಮ', 'ಸಾಗಿಸುವ ಮಾಧ್ಯಮ' ಎಂಬರ್ಥಗಳೂ ಇವೆ. ಇದೇ ನಿಘಂಟುವಿನಲ್ಲಿ 'ಸಂವಾಹ" ಎಂಬ ಪದಕ್ಕೆ 'ಹಳ್ಳಿ', 'ಗ್ರಾಮ' ಎಂಬರ್ಥಗಳನ್ನು ನೀಡಲಾಗಿದೆ. ಈ ಪದಗಳು 'ಜನ ಸಮುದಾಯ', 'ಸಮೂಹ', 'ಗುಂಪು ಎಂಬುದನ್ನು ಸಂಕೇತಿಸುವುದರಿಂದಲೂ, ವಿಚಾರಗಳು ಹರಿದು ಹೋಗಬೇಕಾದ್ದು ಜನ-ಜನರ ನಡುವೆ, ಜನ ಸಮುದಾಯಕ್ಕೆ, ಜನರ ಗುಂಪಿಗೆ ಎಂಬ ಮೂಲಕಲ್ಪನೆ ಇರುವುದರಿಂದಲೂ 'ಸಂವಹನ' ಎನ್ನುವ ಪದ 'ಸಂಪರ್ಕ' ಪದಕ್ಕಿಂತ ಹೆಚ್ಚು ವಿಸ್ತಾರವಾದ ಅರ್ಥವನ್ನು ನೀಡುವುದರಿಂದಲೂ ಅದು ವ್ಯಾಪಕ ಬಳಕೆಗೆ ಒಳಗಾಗಿದೆ.

ಸಂವಹನ ಎನ್ನುವುದು ವಿವಿಧ ಮಾಧ್ಯಮ ಸಂಕೇತಗಳ ಮೂಲಕ ಒಬ್ಬರಿಂದ ಮತ್ತೊಬ್ಬರಿಗೆ ವಿಷಯಗಳು ತಿಳಿಯಪಡಿಸುವ ಕ್ರಿಯೆ ಎನ್ನಿಸಿಕೊಳ್ಳುತ್ತದೆ. ಡಿ.ವಿ. ಪರಮಶಿವಮೂರ್ತಿ ಅವರು

ಹೇಳುವ ಹಾಗೆ "ಒಂದು ಕಡೆಯಿಂದ ಮತ್ತೊಂದು ಕಡೆಗೆ ಅಥವಾ ಒಬ್ಬರಿಂದ ಮತ್ತೊಬ್ಬರಿಗೆ ವಿವಿಧ ರೀತಿಯ ಸಂಕೇತಗಳ ಮೂಲಕ ವಿಚಾರಗಳು ಹರಡುವ ರೀತಿ ಸಂವಹನ".[೪] ಈ ವ್ಯಾಖ್ಯೆಯ ಪ್ರಕಾರ ವಿಚಾರ ಒಂದೆಡೆಯಿಂದ ಮತ್ತೊಂದೆಡೆಗೆ ಪ್ರವಹಿಸುತ್ತದೆ. ಅದು ಶಿಲ್ಪಕಲೆಗಳಂತಹ ದೃಗ್ಗೋಚರ ಸಂಕೇತವಾಗಿರಬಹುದು. ಸಾಹಿತ್ಯ, ಸಂಗೀತ, ಧ್ವನಿ ಅಥವಾ ಶ್ರವ್ಯ ಸಂಕೇತವಾದರೆ, ನೃತ್ಯ, ಹಾವಭಾವ-ಭಂಗಿಗಳು, ಆಂಗಿಕ ಸಂಕೇತವಾಗಿರಬಹುದು. ಹಾಗೆ ದೃಷ್ಟಿಗೊದಗುವ ಚಿತ್ರ, ಶಿಲ್ಪ ಕಲೆಗಳೂ ಸಂವಹನೆಗೆ ಬಳಸುವ ಸಂಕೇತಗಳೇ ಆಗಿರುತ್ತವೆ. ಸಂಕೇತಗಳ ವಿನಃ ಸಂವಹನ ಸಾಧ್ಯವೇ ಇಲ್ಲ. ಹಾಗಾಗಿ ಸಂಕೇತಗಳು ಅಭಿವ್ಯಕ್ತಿ ಮಾಧ್ಯಮಗಳೆನಿಸಿಕೊಳ್ಳುತ್ತವೆ. ಸಂವಹನ ಕ್ರಿಯೆಯ ಪ್ರಮುಖ ಕೀಲಿಕೈಯಾಗುತ್ತವೆ. ಇದೇ ಅರ್ಥದಲ್ಲಿ ಇನ್ನೊಬ್ಬ ವಿದ್ವಾಂಸರು "ಒಂದು ವ್ಯಕ್ತಿಯಿಂದ ಇನ್ನೊಬ್ಬರಿಗೆ ಮಾಹಿತಿ, ವಿಚಾರ ಮತ್ತು ಮನೋಭಾವನೆಗಳನ್ನು ರವಾನಿಸುವ ಕ್ರಿಯೆಯೇ 'ಸಂವಹನ"[೫] ಎಂದು ಅಭಿಪ್ರಾಯಪಡುತ್ತಾರೆ. ಸ್ಕ್ಯಾಮ್ ವಿಲಬರ್ ಕೂಡ ಮಾಹಿತಿ, ಅಭಿಪ್ರಾಯ ಅಥವಾ ಮನೋಭಾವಗಳನ್ನು ಹಂಚಿಕೊಳ್ಳುವುದೇ ಸಂವಹನ"[೬] ಎನ್ನುತ್ತಾರೆ.

ಸಂವಹನ ಸಾಧ್ಯವಾಗಬೇಕಾದರೆ ಅತ್ಯವಶ್ಯಕವಾದ ಯಾವುದಾದರೂ ಒಂದು ಮಾಧ್ಯಮವು ಇರಬೇಕು. ಒಂದು ನಿರ್ದಿಷ್ಟ ಕೇಂದ್ರದಿಂದ ಹೊರಟ ಯಾವುದೇ ಸಂಕೇತ ಅಥವಾ ಸಂದೇಶವು ನಿಗದಿತ ಮಾಧ್ಯಮದ ಮೂಲಕ ಸಾಗಿ ತಲುಪುವ ಗುರಿಯನ್ನು ತಲುಪಿ ಪ್ರಕ್ರಿಯೆ ಸೃಜಿಸಿದರೆ ಸಂವಹನ ಕ್ರಿಯೆ ಸಂಪೂರ್ಣಗೊಳ್ಳುತ್ತದೆ. ಸಂವಹನ ಮಾಧ್ಯಮದ ಮೂಲಕ ಸಂದೇಶ ಮತ್ತು ಸಂದರ್ಭಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದರಿಂದ ನಾವು ಒಂದು ವಿಚಾರವನ್ನು ಮಾಹಿತಿಯನ್ನು ಹಂಚಿಕೊಳ್ಳುತ್ತೇವೆ. ಹೀಗೆ ಹಂಚಿಕೊಂಡ ಮಾಹಿತಿಯಿಂದ ಸಂಸ್ಕೃತಿ, ಸಂಸ್ಕಾರಗಳನ್ನು ಅನುಭವಿಸುತ್ತೇವೆ. ಜ್ಞಾನ, ಅನುಭವ ಅನಿಸಿಕೆಗಳ ವ್ಯಾಪ್ತಿ ಹೆಚ್ಚಿಸಿಕೊಳ್ಳುವ ಅವಕಾಶ ದೊರಕಿಸಿ ಕೊಳ್ಳುತ್ತೇವೆ.

ಸಂವಹನದ ವಿವಿಧ ಹಂತಗಳಲ್ಲಿ 'ಸಮೂಹ ಸಂವಹನ'ವೂ ಒಂದು. ಯಾಂತ್ರಿಕ ಸಲಕರಣೆಗಳ ಮೂಲಕ ಸಂದೇಶಗಳನ್ನು ಏಕಕಾಲದಲ್ಲಿ ಅನೇಕರಿಗೆ ತಲುಪಿಸಿದಾಗ 'ಸಮೂಹ ಸಂವಹನ' ಆಗುತ್ತದೆ ಎಂದು ಹೇಳಬಹುದು. ಇಲ್ಲಿ 'ಸಮೂಹ' ಪದವನ್ನು ಅದರ ಸಮಾಜ ಶಾಸ್ತ್ರೀಯ ಅರ್ಥದಲ್ಲಿ ಬಳಸಲಾಗಿದೆ. ಸಮಾಜಶಾಸ್ತ್ರದಲ್ಲಿ ಸಮೂಹ (Mass), ಸಾರ್ವಜನಿಕರು (Public), ಸಮುದಾಯ (Community), ಗುಂಪು (Group) ಪದಗಳಿಗೆ ಭಿನ್ನ ಭಿನ್ನ ಅರ್ಥಗಳಿವೆ ಎನ್ನುವುದನ್ನು ಗಮನಿಸಬಹುದು.

ಒಂದು ಸಮೂಹಕ್ಕೆ ಭಾಷಣದ ಮೂಲಕ ವಿಷಯವನ್ನು ತಿಳಿಸುವುದು. ಒಂದು ಚಲನೆಯಲ್ಲಿ ಸಮುದಾಯ ಪಾಲ್ಗೊಳ್ಳುವ ಹಾಗೆ ಪ್ರಚೋದನೆ ನೀಡುವುದು. ಇದು ಒಮ್ಮುಖವಾದ ಸಂವಹನ ಕ್ರಿಯೆ. ಕ್ರಿಯೆ ಮಾತ್ರ ಜರುಗುತ್ತದೆ. ಪ್ರತಿಕ್ರಿಯೆ ನಿಧಾನವಾದುದು. ವಿಷಯವನ್ನು ಮಾಹಿತಿಸುವವರ ಮತ್ತು ಆಲಿಸುವವರ ಅಥವಾ ಓದುವವರ, ನೋಡುವವರ ನಡುವೆ ಸಂವಾದ ಏರ್ಪಡುವುದಿಲ್ಲ. ಒಂದು ಲಾಭದ ದೃಷ್ಟಿಯನ್ನು ಇಟ್ಟುಕೊಂಡು ಪ್ರಚಾರಪಡಿಸುವುದು ಒಂದು ಸಮುದಾಯಕ್ಕೆ

ಏಕಕಾಲಕ್ಕೆ ಒಂದು ಸಂದೇಶವನ್ನು ಮುಟ್ಟಿಸುವುದು, ಜ್ಞಾನವನ್ನು ಹಂಚುವುದು ಸಮೂಹ ಮಾಧ್ಯಮದ ವ್ಯಾಪ್ತಿಯಲ್ಲಿ ಬರುತ್ತದೆ. ಸಮೂಹ ಸಂವಹನವನ್ನು ಮುದ್ರಣ ಮಾಧ್ಯಮದ ಮೂಲಕ, ಸಾರ್ವಜನಿಕ ಸಭೆ, ಸಮಾರಂಭ ಏರ್ಪಡಿಸಿ ಭಾಷಣ ಮಾಡುವ ಮೂಲಕ, ರೇಡಿಯೋದಲ್ಲಿ ಪ್ರಸಾರ ಮಾಡುವ ಮೂಲಕ, ಕರಪತ್ರಗಳ ಮೂಲಕ, ಫಲಕಗಳ ಪ್ರದರ್ಶನಗಳ ಮೂಲಕ ಸಾಧಿಸಬಹುದು.

೨.೨. ಸಮೂಹ ಮಾಧ್ಯಮದ ವಿಕಾಸದ ನೆಲೆ

ಸಮೂಹ ಮಾಧ್ಯಮಗಳ ವ್ಯಾಪ್ತಿ ಬಹಳ ವಿಶಾಲವಾಗಿರುವುದರಿಂದ ಅಧ್ಯಯನದಲ್ಲಿ ಪತ್ರಿಕೆ, ರೇಡಿಯೋ, ಟೆಲಿವಿಷನ್ ಮತ್ತು ಚಲನಚಿತ್ರ, ಅಂತರ್ಜಾಲಗಳೆಂದು ಕೇವಲ ನಾಲ್ಕು ಮಾಧ್ಯಮವನ್ನು ಮಾತ್ರ ಈ ಸಮೂಹ ಮಾಧ್ಯಮಗಳ ವ್ಯಾಪ್ತಿಗೆ ಸೇರಿಸಲಾಗಿದೆ. ಅಂದರೆ ಸಮೂಹ ಮಾಧ್ಯಮಗಳೆಂದರೆ ಇಲ್ಲಿ ಉಲ್ಲೇಖಿಸಿದ ಕೇವಲ ನಾಲ್ಕು ಮಾಧ್ಯಮಗಳಿಗೆ ಮಾತ್ರ ಅನ್ವಯಿಸುತ್ತದೆಂದು ಅರ್ಥೈಸಲಾಗಿದೆ.

'ಮಾಧ್ಯಮಗಳ ಗುಣಸ್ವರೂಪದ ಆಧಾರದ ಮೇಲೆ ಸಮೂಹ ಮಾಧ್ಯಮವನ್ನು ಮೂರು ವಿಭಾಗಗಳನ್ನಾಗಿ ವಿಂಗಡಿಸಬಹುದು. ಅಂದರೆ ೧. ಕೇವಲ ನೋಟಕ್ಕೆ ಲಭ್ಯವಾಗುವಂತಹದ್ದು, ದೃಶ್ಯ ಮಾಧ್ಯಮವೆಂದು. ೨. ಕಿವಿಯಿಂದ ಕೇಳಲ್ಪಟ್ಟು ವಿಷಯದ ಗ್ರಹಣ ಮಾಡುವುದು, ಇದು ಶ್ರವ್ಯ ಮಾಧ್ಯಮ. ೩. ಕಿವಿಗೂ ಕೇಳಿಸಿ, ಕಣ್ಣಿಗೂ ಗೋಚರವಾಗುವ ಮೂರನೆಯ ವರ್ಗ ಶ್ರವ್ಯ ಮತ್ತು ದೃಶ್ಯ ಮಾಧ್ಯಮಗಳೆಂದು ವಿಂಗಡಿಸಬಹುದಾಗಿ, ಇಲ್ಲಿ ಪತ್ರಿಕೆ ದೃಶ್ಯ ಮಾಧ್ಯಮವಾಗಿ, ರೇಡಿಯೋ ಶ್ರವ್ಯ ಮಾಧ್ಯಮವಾಗಿ, ಟೆಲಿವಿಷನ್ ಮತ್ತು ಚಲನಚಿತ್ರಗಳನ್ನು ಶ್ರವ್ಯ ಹಾಗೂ ದೃಶ್ಯಮಾಧ್ಯಮಗಳನ್ನಾಗಿ ವಿಂಗಡಿಸಲಾಗಿದೆ'.[೭]

ದೃಶ್ಯ ಮಾಧ್ಯಮವಾಗಿ ಪತ್ರಿಕೆಗಳು

ಪತ್ರಿಕೆ ಎಂಬ ಈ ಶಬ್ದಕ್ಕೆ ಸಂಸ್ಕೃತದಲ್ಲಿ ಎಲೆ, ರೆಕ್ಕೆ, ಬರೆಯುವ ಕಾಗದ, ವ್ಯವಹಾರದ ಹಾಳೆ, ಹೂವಿನ ದಳ ಇತ್ಯಾದಿ ಅರ್ಥಗಳಿವೆ. ಆದರೆ ಪತ್ರಿಕಾ ಎಂಬ ಶಬ್ದಕ್ಕೆ ಬರೆಯುವ ಕಾಗದ, ಕ್ಷೇಮ ಸಮಾಚಾರದ ಕಾಗದ ಎಂದು ಮಾತ್ರ ಅರ್ಥ. ಇದನ್ನೇ ಕನ್ನಡದಲ್ಲಿ ಪತ್ರಿಕೆ ಎಂದಾಗಿದೆ.

ಆದರೆ ಕನ್ನಡದಲ್ಲಿ ವಾರ್ತಾ ಪತ್ರಿಕೆ, ವೃತ್ತಾಂತ ಪತ್ರಿಕೆ, ಸಮಾಚಾರ ಪತ್ರಿಕೆ, ವರ್ತಮಾನ ಪತ್ರಿಕೆ ಮುಂತಾದ ಹೆಸರುಗಳಿಂದ ಸುದ್ದಿಯನ್ನು ಹರಡುವ ಪತ್ರಿಕೆಗಳು ಮುದ್ರಣವಾಗಿ ಪ್ರಚಾರಕ್ಕೆ ಸಿಕ್ಕಿದಾಗ ಆ ಎಲ್ಲಾ ಹೆಸರುಗಳಿಗೆ ಒಂದೇ ಪದ ಪ್ರಯೋಗವಾಗತೊಡಗಿತು. ಅದೇ 'ಪತ್ರಿಕೆ' ಈಗ ಪತ್ರಿಕೆ ಎಂಬ ಶಬ್ದಕ್ಕೆ ಇಂಗ್ಲಿಷಿನ news paper ಎಂಬ ಶಬ್ದಕ್ಕೆ ಇರುವ ಅರ್ಥವೇ ಅನ್ವಯಿಸುತ್ತದೆ. ಕನ್ನಡದಲ್ಲಿ ಪತ್ರಿಕೆಗಳಲ್ಲಿ, ಪತ್ರಿಕೆಗಳಿಂದ ಮುಂತಾದ ಶಬ್ದಗಳಿಗೆ ಅರ್ಥ ವರ್ತಮಾನ ಪತ್ರಿಕೆಗಳಿಗೆ ಸಂಬಂಧಿಸಿದ್ದೇ ಆಗಿದೆ. ಈಗಂತೂ ಯಾರೂ ವರ್ತಮಾನ ಪತ್ರಿಕೆ ಎಂದು ಹೇಳುವುದೇ ಇಲ್ಲ. 'ಪತ್ರಿಕೆ' ಶಬ್ದ ಈ ಜಾಗವನ್ನು ಆಕ್ರಮಿಸಿದೆ.

ವರ್ತಮಾನ ಸ್ಥಿತಿಯಲ್ಲಿ ಒಟ್ಟಾರೆಯಾಗಿ ಪತ್ರಿಕೆ ಎಂದರೆ ಸಮಾಜದ ಮುಖವಾಣಿ. ಸಾಮಾಜಿಕ ಕಳಕಳಿ ಪ್ರತಿಬಿಂಬಿಸುವ ಸಾಧನ. ಇಡೀ ಸಮಾಜದ, ಇಡೀ ಬದುಕಿನ, ಇಡೀ ಪ್ರಪಂಚದ ಆಗುಹೋಗುಗಳನ್ನು ಸಾಮೂಹಿಕವಾಗಿ ಮಾಹಿತಿಸುವ ಸುದ್ದಿಪತ್ರ, ಒಂದು ನಿಗದಿತ ಪ್ರದೇಶದಲ್ಲಿ ವಿವಿಧ ಮೂಲಗಳಿಂದ, ವಿವಿಧ ಪ್ರದೇಶಗಳಿಂದ ಸಂಗ್ರಹಿಸಿದ ಹೊಸ ಘಟನೆಗಳು, ಹೊಸ ವಿಚಾರಗಳು, ಹೊಚ್ಚ ಹೊಸದಾದ ಸವಾಲುಗಳು ಸೇರಿದಂತೆ ಒಂದು ಸಮೂಹಕ್ಕೆ ಬೇಕಾದ ಮಾರ್ಗದರ್ಶನ ಹಾಗೂ ಶಿಕ್ಷಣ ಮತ್ತು ಜ್ಞಾನ ನೀಡುವ ಸಾಧನವಾಗಿದೆ. ಪತ್ರಿಕೆ ಸಮೂಹ ಸಂವಹನಕ್ಕೆ ದಾಖಲೆಯ ಆಧಾರವಾಗಿದೆ.

ಪತ್ರಿಕೆಯ ಪ್ರಕಾರಗಳು

ಪತ್ರಿಕೆಗಳನ್ನು ನಾವು ಮುಖ್ಯವಾಗಿ ಮೂರು ವಿಧಗಳಲ್ಲಿ ವಿಂಗಡಿಸಬಹುದು. ಅವು-

೧. ಹೊರಡುವ ಸಮಯದ ಆಧಾರದ ಮೇಲೆ.

೨. ಅವು ಆವರ್ತತಗೊಳ್ಳುವ ಸಂಖ್ಯೆಯ ಆಧಾರದ ಮೇಲೆ.

೩. ಅವು ನೀಡುವ ವಸ್ತು ವಿಷಯದ ಮೇಲೆ.

ಹೊರಡುವ ಸಮಯದ ಆಧಾರದ ಮೇಲೆ

ಮುಖ್ಯ ಪತ್ರಿಕೆಗಳು ಸಾಧಾರಣವಾಗಿ ಪ್ರಕಟಗೊಳ್ಳುವುದು ಬೆಳಿಗ್ಗೆಯೇ. ಪ್ರಾತಃಕಾಲದಲ್ಲೇ ನಿದ್ದೆಯಿಂದೆದ್ದ ಜನತೆಗೆ ಹೊಸ ಸುದ್ದಿಗಳನ್ನು ತಲುಪಿಸುವುದರಿಂದಲೇ ಅವು ಪ್ರಾತಃಸ್ಮರಣೀಯ ವೆಂದೆನಿಸಿಕೊಳ್ಳುತ್ತವೆ. ಬೆಳಗಿನ ಪತ್ರಿಕೆಗಳಲ್ಲದೆ, ಸಂಜೆ ಪತ್ರಿಕೆಗಳು ಜನರನ್ನು ತಲುಪುತ್ತವೆ. ಆದರೆ ಸಹಜವಾಗಿಯೇ ಸಂಜೆ ಪತ್ರಿಕೆಗಳ ಆವರ್ತನೆ ಹೆಚ್ಚಾಗಿರುವುದಿಲ್ಲ.

ಹೊರಡುವ ಸಮಯವನ್ನಾಧರಿಸಿ, ದೈನಂದಿನ ಪತ್ರಿಕೆಗಳನ್ನು ಬೆಳಗಿನ ಮತ್ತು ಸಂಜೆಯ ಪತ್ರಿಕೆಗಳೆಂದು ಒಟ್ಟು ಎರಡು ರೀತಿಯಲ್ಲಿ ವಿಂಗಡಿಸಬಹುದಾಗಿದೆ.

ಬೆಳಗಿನ ಹಾಗೂ ಸಂಜೆ ಪತ್ರಿಕೆಗಳಲ್ಲದೆ, ಅವು ಪ್ರಕಟಗೊಳ್ಳುವ ಅವಧಿಯ ಆಧಾರದ ಮೇಲೆ ನಿಯತಕಾಲಿಕೆಗಳನ್ನು ಗುರುತಿಸಬಹುದು. ವಾರಕ್ಕೊಮ್ಮೆ ಪ್ರಕಟವಾಗುವ ಸಾಪ್ತಾಹಿಕ ಪತ್ರಿಕೆಗಳು, ಹದಿನೈದು ದಿನಗಳಿಗೊಮ್ಮೆ ಹೊರಬರುವ ಪಾಕ್ಷಿಕ, ತಿಂಗಳ ಪತ್ರಿಕೆ, ಮಾಸಿಕ ಅಲ್ಲದೆ ಸಾಂದರ್ಭಿಕವಾಗಿ ಹೊರಬರುವ ವಿಶೇಷ ಸಂಚಿಕೆಗಳನ್ನು ಈ ಗುಂಪಿನಲ್ಲಿ ಗಮನಿಸಬಹುದು.

ಆವರ್ತನ ಸಂಖ್ಯೆಯ ಆಧಾರದ ಮೇಲೆ

ಪತ್ರಿಕೆಗಳ ಆವರ್ತನ ಸಂಖ್ಯೆಯನ್ನಾಧರಿಸಿ ದೈನಂದಿನ ಪತ್ರಿಕೆಗಳನ್ನು ಸಣ್ಣ ಪತ್ರಿಕೆ, ಮಧ್ಯಮ ಪತ್ರಿಕೆ ಮತ್ತು ದೊಡ್ಡ ಪತ್ರಿಕೆಗಳೆಂದು ಮುಖ್ಯವಾಗಿ ಮೂರು ವರ್ಗಗಳಾಗಿ ಮಾಡಬಹುದು.

ಪ್ರಕಟಣಾ ದಿನವೊಂದಕ್ಕೆ ೨೫೦೦೦ ಪ್ರತಿಗಳವರೆಗೆ ಆವರ್ತನ ಹೊಂದುವ ಪತ್ರಿಕೆಗಳನ್ನು ಸಣ್ಣ ಪತ್ರಿಕೆಗಳೆಂದು, ಪ್ರಕಟಣಾ ದಿನವೊಂದಕ್ಕೆ ೨೫೦೦೦ದಿಂದ ೭೫೦೦೦ ಪ್ರತಿಗಳಷ್ಟು ಆವರ್ತನೆಗೊಳ್ಳುವ ಪತ್ರಿಕೆಗಳು ಮಧ್ಯಮ ಪತ್ರಿಕೆಗಳೆಂದು ಮತ್ತು ಪ್ರಕಟಣಾ ದಿನವೊಂದಕ್ಕೆ ೭೫೦೦೦ಕ್ಕೂ ಹೆಚ್ಚು ಪ್ರತಿಗಳು ಆವರ್ತನೆಗೊಳ್ಳುತ್ತಿದ್ದರೆ ಅವುಗಳನ್ನು ದೊಡ್ಡ ಪತ್ರಿಕೆಗಳೆಂದು ಕರೆಯಲಾಗುತ್ತದೆ.

ವಸ್ತು ವಿಷಯದ ಆಧಾರದ ಮೇಲೆ

ಪತ್ರಿಕೆಗಳು ಒಳಗೊಳ್ಳುವ ವಿಷಯಗಳ ಆಧಾರದ ಮೇಲೆಯೂ ಅವನ್ನು ಗುರುತಿಸಬಹುದು. ವಿಶೇಷ ಓದುಗರನ್ನು ಸೆಳೆಯುವ ನಿಟ್ಟಿನಲ್ಲಿ ಇಂತಹ ಪತ್ರಿಕೆಗಳು ಪ್ರಕಟಗೊಳ್ಳುತ್ತದೆ. ಸಾಧಾರಣವಾಗಿ ಇವು ನಿಯತಕಾಲಿಕೆಗಳು, ಮಹಿಳೆ, ಮಕ್ಕಳು, ಕ್ರೀಡಾಪ್ರೇಮಿಗಳು ಮುಂತಾದ ನಿರ್ದಿಷ್ಟ ವರ್ಗಗಳನ್ನು ಇವು ತಲುಪಿಸುತ್ತವೆ. ಇವನ್ನು ಕ್ರೀಡಾಪತ್ರಿಕೆ, ಆರ್ಥಿಕ ಪತ್ರಿಕೆ, ಸಿನೇಮಾ ಪತ್ರಿಕೆ, ಮಕ್ಕಳ ಮನರಂಜನಾ ಪತ್ರಿಕೆ, ಆರೋಗ್ಯ ಪತ್ರಿಕೆ, ಮಹಿಳಾ ಪತ್ರಿಕೆ, ಕೃಷಿ ಪತ್ರಿಕೆ ಮುಂತಾಗಿ ಗುರುತಿಸಬಹುದು.

ಶ್ರವ್ಯ ಮಾಧ್ಯಮವಾಗಿ ಆಕಾಶವಾಣಿ

ಕರ್ತೃ ಅದೃಶ್ಯನಾಗಿದ್ದು ಆತನ ವಾಣಿ ಕಿವಿಗೆ ಬೀಳುವಂತಿದ್ದರೆ ಅದನ್ನು ಆಕಾಶವಾಣಿ, ಅಶರೀರವಾಣಿ ಎಂದು ಕರೆಯುವುದು ವಾಡಿಕೆ. ಪುರಾಣೇತಿಹಾಸಗಳಿಂದ ಈ ಪದ ಬಂದಿದೆ. ಈಗ ಇದನ್ನು 'ಬ್ರಾಡ್‌ಕ್ಯಾಸ್ಟಿಂಗ್' ಎಂಬ ಅರ್ಥದಲ್ಲಿ ಬಳಸಲಾಗುತ್ತದೆ. ಆಲ್ ಇಂಡಿಯಾ ರೇಡಿಯೋ ಸಂಸ್ಥೆಯ ಬಹುಪಾಲು ಶಾಖೆಗಳು ಇದೇ ಪದವನ್ನು ಬಳಸುತ್ತವೆ. ತಮಿಳುನಾಡಿನ ಶಾಖೆ ಮಾತ್ರ ವಾನುಲಿ (ಬಾನುಲಿ) ಎಂಬ ಅಚ್ಚ ದ್ರಾವಿಡ ಪದವನ್ನು ಪರ್ಯಾಯವಾಗಿ ಬಳಸುತ್ತದೆ. ಇಲ್ಲಿ ರೇಡಿಯೋ ಪದವನ್ನು ಅದರ ಇಂಗ್ಲೀಷ್ ಅರ್ಥದಲ್ಲಿಯೇ ಬಳಸಲಾಗಿದೆ. ಆಕಾಶವಾಣಿ ಭಾರತದ ರಾಷ್ಟ್ರೀಯ ರೇಡಿಯೋವನ್ನು ಶ್ರವ್ಯ ಮಾಧ್ಯಮವೆಂದು ಕರೆಯಲಾಗುತ್ತದೆ. "ಸಂಗೀತ ಪೆಟ್ಟಿಗೆ ಎಂದೇ ಜನಪ್ರಿಯವಾಗಿರುವ ರೇಡಿಯೋ ಎಂದು ತ್ವರಿತ, ಸುಲಭ ಮಾಧ್ಯಮ ಎಂದು ಎನಿಸಿಕೊಂಡಿರುವುದಕ್ಕೆ ಅದರ ಶ್ರಾವಕ ಶಕ್ತಿಯೇ ಕಾರಣ ಎನ್ನಬಹುದು."[೮]

ಶ್ರವ್ಯ-ದೃಶ್ಯ ಮಾಧ್ಯಮಗಳಾಗಿ ಟೆಲಿವಿಷನ್ ಮತ್ತು ಚಲನಚಿತ್ರ

ಟೆಲಿವಿಷನ್ ಮತ್ತು ಸಿನೇಮಾ ಮಾಧ್ಯಮಗಳು ದೃಶ್ಯ-ಶ್ರವ್ಯ ಮಾಧ್ಯಮಗಳಾಗಿವೆ. ವಿದ್ಯುನ್ಮಾನ ತಂತ್ರದ ಮೂಲಕ ದೃಶ್ಯ ಹಾಗೂ ಶ್ರವಣ ಶಕ್ತಿಯ ಚಲನೆ ಹಾಗೂ ಧ್ವನಿಯನ್ನು ಚಿತ್ರಿಸುವ ಒಂದು ಉಪಕರಣ ದೂರದರ್ಶನ. (Dictionary of journalism) ಉಪಗ್ರಹ ಸಂವಹನ ಅಭಿವೃದ್ಧಿ ಹೊಂದಿದಾಗ ಜನ್ಮತಾಳಿದ ತಂತ್ರಜ್ಞಾನದ ಆವಿಷ್ಕಾರವೇ ದೂರದರ್ಶನ. ಇಂಗ್ಲಿಷ್‌ನ Tele ಮತ್ತು vision ಎಂಬ ಎರಡು ಪದಗಳಿಂದ ಕೂಡಿದ Television ಮಾಧ್ಯಮವು ಭಾರತದಲ್ಲಿ ದೂರದರ್ಶನ ಎಂಬ ಹೆಸರಿನೊಂದಿಗೆ ಪ್ರವೇಶವಾಗಿತ್ತು. ಆದರೆ ಇಂದು ಟೆಲಿವಿಷನ್

ಹಲವಾರು ಚಾನಲ್‌ಗಳಲ್ಲಿ 'ದೂರದರ್ಶನವು' ಕೂಡ ಸರಕಾರಿ ಒಡೆತನದಲ್ಲಿ ನಡೆಯುವ ಒಂದು ಚಾನಲ್ ಆಗಿ ಬಿಟ್ಟಿದೆ. Televisionಗೆ ಸಂಕ್ಷಿಪ್ತವಾಗಿ ಟಿ.ವಿ ಎಂತಲೂ ಕರೆಯಲಾಗುತ್ತದೆ. ಸಧ್ಯದಲ್ಲಿ ಟಿ.ವಿ. ಹೆಸರೇ ಜನಪ್ರಿಯವಾಗಿದೆ. ಮತ್ತು ಖಾಸಗಿ ಚಾನಲ್‌ಗಳ (ವಾಹಿನಿಗಳ) ಸಂಪರ್ಕವನ್ನು ಹೊಂದಿದ್ದರೆ ಅದನ್ನು cable ಟಿ.ವಿ ಎಂದು ಕರೆಯಲಾಗುತ್ತದೆ. ನೂರಾರು ಖಾಸಗಿ ಚಾನಲ್‌ಗಳೊಂದಿಗೆ ಸವಾಲು ಒಡ್ಡುವುದು ಇಂದು 'ದೂರದರ್ಶನಕ್ಕೆ' ಅನಿವಾರ್ಯವೇ ಆಗಿದೆ.

ಚಲನಚಿತ್ರ ಮಾಧ್ಯಮವು ಸಹ ದೃಶ್ಯ ಮತ್ತು ಶ್ರವ್ಯ ಶಕ್ತಿಯನ್ನು ಹೊಂದಿರುವ ಮಾಧ್ಯಮವಾಗಿರುತ್ತದೆ. ಸ್ತಬ್ಧ ಚಿತ್ರಗಳಿಗೆ ತಾಂತ್ರಿಕತೆಯ ಫಲದಿಂದ ಚಲನ ಶಕ್ತಿ ದೊರೆತಾಗ ಅದನ್ನು ಇಂಗ್ಲಿಷ್‌ನಲ್ಲಿ Motion Picture ಎಂದು ಕರೆಯಲಾಗಿತ್ತು. ಅದನ್ನೇ ಕನ್ನಡದಲ್ಲಿ ಸಂವಾದಿ ಪದವಾಗಿ 'ಚಲನಚಿತ್ರ'ವೆಂದು ಕರೆಯಲಾಗಿದೆ. ಆದರೆ ಈಗ ಇಂಗ್ಲಿಷ್‌ನಲ್ಲಿ Motion Picture ಎಂದು ಕರೆಯದೆ ಕೇವಲ Picture ಎಂದು ಸಾಮಾನ್ಯವಾಗಿ ಕರೆಯುತ್ತಾರೆ. ಇದಕ್ಕೆ ಸಮಾನ ಪದಗಳಾಗಿ Movie, Films ಮತ್ತು Cinemaವೆಂತಲೂ ಬಳಸಲಾಗುತ್ತದೆ.

ದೂರದರ್ಶನ ಮತ್ತು ಚಲನಚಿತ್ರ ಮಾಧ್ಯಮಗಳಲ್ಲಿ ಹೇಳಕೊಳ್ಳುವಂತಹ ಅಂತರಗಳೇನಿಲ್ಲ. ಎರಡೂ ಒಂದೇ ಮಾಧ್ಯಮದ ಭಿನ್ನರೂಪಗಳು; ಚಲನಚಿತ್ರ ಭಾಷೆಯ ಇನ್ನೊಂದು ರೂಪವಾಗಿ ದೂರದರ್ಶನ ಬೆಳದುಕೊಂಡುಬಂದಿದೆ.

ಅಂತರ್ಜಾಲ

ಅಂತಜಾಲದಲ್ಲಿ ಕನ್ನಡದ ಬಗ್ಗೆ ಸಾಕಷ್ಟು ಮಾಹಿತಿ ಲಭ್ಯವಿದೆ. ಕನ್ನಡದ ಬಗ್ಗೆ ಮತ್ತು ಕರ್ನಾಟಕದ ಬಗ್ಗೆ ಇಂಗ್ಲೀಷಿನ ಹಲವಾರು ವೆಬ್‌ಸೈಟ್‌ಗಳಿವೆ. ಅಂತರ್ಜಾಲದ ವ್ಯಾಪ್ತಿ ಈಗ ೧೨ ಮಿಲಿಯನ್‌ಗೂ ಅಧಿಕವಾಗಿದೆ. ದಿನದಿನವೂ ಇದರ ಬೇಡಿಕೆ ಹೆಚ್ಚುತ್ತಿದ್ದು, ಓದುಗರ ಸಂಖ್ಯೆಯು ಹೆಚ್ಚುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಇದರ ಬಳಕೆ ಬಹಳ ಕಡಿಮೆ. ಇಂದಿನ ದಿನದಲ್ಲಿ ಹೆಚ್ಚು ಅವಕಾಶಗಳಿರುವ ಅಂತರ್ಜಾಲವನ್ನು ಕನ್ನಡ ಮಾಧ್ಯಮ ಸಂಸ್ಥೆಗಳು ಸಮರ್ಪಕವಾಗಿ ಬಳಸಿಕೊಳ್ಳಬೇಕಿದೆ.

ಮಾಧ್ಯಮ ಇಂದು ಉದ್ಯಮವಾಗಿ ಪರಿವರ್ತನೆಯಾಗಿ ಜನರಿಗೆ ಹತ್ತಿರವಾಗುತ್ತಿದೆ. ಮಾಧ್ಯಮದ ಮೂಲಕ ವಿವಿಧ ಸಂಸ್ಥೆಗಳ ದಾಖಲೆಗಳನ್ನು ಶೇಖರಣೆ ಮಾಡಬಹುದು. ನೌಕರಿಗಾಗಿ ಅರ್ಜಿಗಳನ್ನು ಅಂತರ್ಜಾಲದ ಮೂಲಕ ಸಲ್ಲಿಸಬಹುದಾಗಿದೆ. ಬ್ಯಾಂಕಿನ ಎಲ್ಲಾ ವ್ಯವಹಾರಗಳನ್ನು ಅಂತರ್ಜಾಲದ ಮೂಲಕ ಕುಳಿತಲ್ಲೇ ನಡೆಸಬಹುದಾಗಿದೆ. ಬೇಕಾದ ಮಾಹಿತಿಯನ್ನು ಪಡೆದುಕೊಳ್ಳಬಹುದು. ೧೯೯೫ರಲ್ಲಿ ಭಾರತ ಅಂತರ್ಜಾಲವನ್ನು ಕಂಡುಕೊಂಡಿತು. ಆರಂಭದಲ್ಲಿ ಕೇವಲ ದೇಶದ ಪ್ರಮುಖ ನಗರಗಳಲ್ಲಿ ಮಾತ್ರ ಬಳಕೆಯಲ್ಲಿತ್ತು. ಆದರೆ ಇಂದು ದೇಶದ ಮೂಲೆ ಮೂಲೆಯ ಹಳ್ಳಿಗಳಲ್ಲೂ ಬಳಸಬಹುದಾಗಿದೆ.

೨.೩. ಸಮೂಹ ಮಾಧ್ಯಮದ ಗುರಿಗಳು ಮತ್ತು ಮಿತಿಗಳು

ತಂತ್ರಜ್ಞಾನದ ಆವಿಷ್ಕಾರದಲ್ಲಿ ಪೈಪೋಟಿ ಮಾಡದೇ ಕೆಲವು ಮಾಧ್ಯಮಗಳು ತೆರೆ ಮರೆಗೆ ಸರಿಯತೊಡಗಿದ್ದರೂ ಸಮಾಜ ಕಟ್ಟುವಲ್ಲಿ ಅವುಗಳು ನಿರ್ವಹಿಸಿದ ಪಾತ್ರವನ್ನು ಎಂದೂ ಮರೆಯಲು ಸಾಧ್ಯವಿಲ್ಲ. ಸಾಮಾಜಿಕ ಕಳಕಳಿ ಹೊಂದಿರುವ ಸಮೂಹ ಮಾಧ್ಯಮಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಿರುವುದು ಪ್ರಜಾಪ್ರಭುತ್ವದ ಮೂಲಕ ಸಮಾಜದ ಉಳಿವಿಗೆ ಕಾರಣವಾಗಿದೆ. ಸಾಮಾಜಿಕ ಕಳಕಳಿಯೇ ಸಮೂಹ ಮಾಧ್ಯಮಗಳ ಮುಖ್ಯ ಗುರಿ. ಸಮಾಜದ ಶಾಂತಿ ಭಂಗವಾಗದಂತೆ ನೋಡಿಕೊಂಡು, ಸಮಾಜ ಸರಿಯಾದ ಮಾರ್ಗದಲ್ಲಿ ಸಾಗುವಂತೆ ಮಾಡುವುದು, ಸಮಾಜದಲ್ಲಿನ ಅಪರಾಧ ಮನೋಭಾವನೆಗಳನ್ನು ತೊಡೆದುಹಾಕುವುದು, ಜನಸಾಮಾನ್ಯರಿಗೆ ಸಾಮಾಜಿಕ ಸ್ಥಾನಮಾನ ಒದಗಿಸುವುದು, ಸರ್ಕಾರದ ಸವಲತ್ತುಗಳು ಜನಸಾಮಾನ್ಯರು ಪಡೆಯಲು ಬೇಕಾದ ಪರಿಸರವನ್ನು ನಿರ್ಮಾಣ ಮಾಡುವುದು, ಅಲಕ್ಷಿತ ಸಮುದಾಯಗಳಿಗೆ ಸರ್ಕಾರದಿಂದ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತೆ ಮಾಡುವುದು, ಭ್ರಷ್ಟಾಚಾರ, ರಾಜಕೀಯ ಕುತಂತ್ರ, ಅಧಿಕಾರಿಗಳಿಂದ ಅಧಿಕಾರದ ದುರುಪಯೋಗವಾಗುತ್ತಿರುವುದನ್ನು ಜನತೆಗೆ ತಿಳಿಸಿ ಅದರ ಮೂಲವನ್ನೇ ಕಿತ್ತೆಸೆಯುವುದು, ಸರ್ಕಾರದ ಸಂಘ ಸಂಸ್ಥೆಗಳು ತೆಗೆದುಕೊಳ್ಳುವ ನಿರ್ಧಾರಗಳನ್ನು ಸಮಾಜಕ್ಕೆ ತಿಳಿಯಪಡಿಸಿ, ಸರಿ ಇದ್ದಲ್ಲಿ ಪ್ರೋತ್ಸಾಹಿಸಿ, ತಪ್ಪಿದ್ದಲ್ಲಿ ವಿರೋಧಿಸಿ ನಿರ್ಧಾರವನ್ನು ಕೈಬಿಡುವಂತೆ ಮಾಡುವುದು, ದೇಶ, ವಿದೇಶಗಳಲ್ಲಿನ ಪ್ರತಿಯೊಂದು ಘಟನೆಗಳನ್ನು ನೈಜವಾಗಿ ವರದಿ ಮಾಡುವುದು ಮಾಧ್ಯಮಗಳ ಪ್ರಮುಖ ಕರ್ತವ್ಯಗಳಾಗಿವೆ.

ಸಮೂಹ ಮಾಧ್ಯಮಗಳ ಬೆಳವಣಿಗೆ ಮತ್ತು ಪ್ರಭಾವಗಳು ಹಿಂದೆಂದೂ ಕಾಣಲಾರದಷ್ಟು ಮತ್ತು ಇಪ್ಪತ್ತೊಂದನೇ ಶತಮಾನದಲ್ಲಿ ಗುರುತಿಸಲ್ಪಡುವ ಗುಣಲಕ್ಷಣಗಳಲ್ಲೊಂದಾಗಿದೆ. ಮಾಧ್ಯಮಗಳ ಪ್ರಭಾವಗಳು ಧನಾತ್ಮಕವಾಗಿರಬಹುದು ಅಥವಾ ಋಣಾತ್ಮಕವಾಗಿರಬಹುದು. ಅವುಗಳನ್ನು ಸದ್ಯದಲ್ಲಿ ಸಾಮಾಜಿಕ ಸಂಶೋಧನೆಯ ಸಾಮಾನ್ಯ ಪದ್ಧತಿಗಳಿಂದ ಕಂಡುಹಿಡಿಯಲು ಸಾಧ್ಯವಿಲ್ಲವೆಂದು ಹಲವಾರು ತಜ್ಞರು ಅಭಿಪ್ರಾಯಪಡುತ್ತಾರೆ. ಸಮೂಹ ಮಾಧ್ಯಮ ಕ್ಷೇತ್ರದಲ್ಲಿ ಆಗಿರುವ ಅಭೂತಪೂರ್ವವಾದ ಬೆಳವಣಿಗೆಯಿಂದಾಗಿ ವ್ಯಕ್ತಿ ಮತ್ತು ಸಮಾಜದ ಮೇಲೆ ಹಲವಾರು ರೀತಿಯಿಂದ ಪರಿಣಾಮಗಳು ಉಂಟಾಗಿವೆ.

ಶಿಕ್ಷಣ, ಪ್ರಚಾರ ಮತ್ತು ಮನರಂಜನೆ ಎನ್ನುವುದು ಸಮೂಹ ಮಾಧ್ಯಮದ ಮುಖ್ಯ ಕಾರ್ಯಗಳು. ಜ್ಞಾನ ಎಂಬುದು ಅತ್ಯಂತ ಸಂಕೀರ್ಣ; ಏಕೆಂದರೆ ಜ್ಞಾನ ಮತ್ತು ತಿಳುವಳಿಕೆ ಎಂದರೆ ಏನು ಎಂದು ವ್ಯಾಖ್ಯಾನ ನೀಡುವುದು ತುಂಬಾ ಕಷ್ಟದ ಕೆಲಸ. ಒಬ್ಬನಿಗೆ ಗೊತ್ತಿರದ ಸಂಗತಿ ಬೇರೊಬ್ಬ ವ್ಯಕ್ತಿಗೆ ಗೊತ್ತಿದ್ದರೆ ಅದೇ ಜ್ಞಾನ ಎಂದು ಸರಳವಾಗಿ ಹೇಳಲಾಗದು. ನೇರವಾಗಿ ಹೇಳುವುದಾದರೆ ಗೊತ್ತಿಲ್ಲದ ಸಂಗತಿಯನ್ನು ತಿಳಿಸುವುದೇ ಜ್ಞಾನ. ಮಾಧ್ಯಮಗಳು ಕೂಡ ಜಗತ್ತಿನ ಆಗುಹೋಗುಗಳ ಮಾಹಿತಿಯನ್ನು ನೀಡುವ ಉದ್ದೇಶವನ್ನು ಹೊಂದಿರುತ್ತವೆ.

ಈ ಕಾರಣವನ್ನು ಪ್ರಧಾನವಾಗಿಟ್ಟುಕೊಂಡು ಗ್ರಾಹಕರ ಮನ ಗೆಲ್ಲಲು ಮಾಧ್ಯಮಗಳು ಸ್ಪರ್ಧೆಗಿಳಿದಿವೆ. ಮನುಷ್ಯ ಜ್ಞಾನದಾಹಿ. ತನ್ನ ಜ್ಞಾನ ಸೀಮೆಯ ವಿಸ್ತಾರಕ್ಕೆ ಸಮೂಹ ಮಾಧ್ಯಮಗಳಿಗೆ ಮಾರು ಹೋಗಿದ್ದಾನೆ. ಮಾಧ್ಯಮಗಳು ಸಹ ಗ್ರಾಹಕರ ಜ್ಞಾನ ದಾಹವನ್ನು ತೀರಿಸಲು ಹೊಸ ಹೊಸ ವಿಷಯಗಳ ಮಾಹಿತಿಗಳನ್ನು ನೀಡುತ್ತಿವೆ. ಜ್ಞಾನ ಒದಗಿಸಬಲ್ಲ ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಚಿತ್ರರಿಸುತ್ತಿವೆ. ಸಮೂಹ ಮಾಧ್ಯಮಗಳು ಸಮಾಜವನ್ನು ತಿದ್ದುವ ಕೆಲಸವನ್ನು ಮಾಡುತ್ತವೆ ಅಂದಮಾತ್ರಕ್ಕೆ ಸಾಂಪ್ರದಾಯಿಕ ಶಿಕ್ಷಣ ಕೇಂದ್ರಗಳಂತೆ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಮಾಹಿತಿ ನೀಡುವುದಿಲ್ಲ. ವಿದ್ಯಾರ್ಥಿಗಳನ್ನು ಒಳಗೊಂಡಂತೆ ಸಮಾಜದ ಪ್ರತಿಯೊಬ್ಬ ಸದಸ್ಯರನ್ನು ಗಮನವಿರಿಸಿ ಜ್ಞಾನದ ತಿಳುವಳಿಕೆಯನ್ನು ಚಿತ್ರರಿಸುತ್ತದೆ. ಗ್ರಾಮೀಣ ಭಾಗದ ಬೆಳವಣಿಗೆಗಳು ಹಾಗೂ ಅಲ್ಲಿಯ ಬಡ ಜನರ ಸಮಸ್ಯೆಗಳು ಮಾಧ್ಯಮದ ಪ್ರಧಾನ ಆದ್ಯತೆಯಾಗಬೇಕು. ಆಗ ಮಾತ್ರ ಮಾಧ್ಯಮ ಎಲ್ಲಾ ಕಡೆ ತಲುಪಿ ತನ್ನ ಗುರಿ ಸಾಧಿಸುವತ್ತ ಸಾಗುತ್ತದೆ.

ಮಾನವ ಅಭ್ಯುದಯ ಸಾಧನೆಯೇ ಹೊರತು ಅಂಕಿಅಂಶಗಳ ಪ್ರಗತಿ ಮಾಧ್ಯಮದ ಗುರಿಯಾಗಿರಬಾರದು. ಅಭಿವೃದ್ಧಿ ಹೆಸರಿನಲ್ಲಿ ಸರ್ಕಾರವು ನೀರಿನಂತೆ ಖರ್ಚು ಮಾಡುವ ಹಣವನ್ನು ಮಾಧ್ಯಮ ಕಾವಲು ನಾಯಿಯಂತೆ ಕಾಪಾಡಬೇಕು. ಪ್ರತಿ ಪೈಸೆಯೂ ಸರಿಯಾದ ಉದ್ದೇಶಕ್ಕೆ ಖರ್ಚಾಗುವಂತೆ ನಿಗಾ ವಹಿಸಬೇಕು. ಸೆಲಿಬ್ರಿಟಿಗಳು, ರಾಜಕಾರಣಿಗಳು, ಕ್ರೀಡಾಪಟುಗಳು, ಸಿನಿಮಾ ತಾರೆಯರ ಮೇಲೆ ಮಾಧ್ಯಮ ನಿಗಾ ಇಡುತ್ತದೆಯೇ ಹೊರತು ಸಾಮಾನ್ಯ ವ್ಯಕ್ತಿಗೆ ಏನಾಯಿತು ಎಂಬುದನ್ನು ಎಂದಿಗೂ ನೋಡುವುದಿಲ್ಲ. ಯಾವ ಪತ್ರಕರ್ತನೂ ಸಹ ಹಳ್ಳಿಗೆ ಹೋಗಿ ವರದಿ ಮಾಡುವುದಿಲ್ಲ. ಮಾಧ್ಯಮಗಳು ಸಾಮಾನ್ಯ ಜನರ ಬಗ್ಗೆ ಮೊದಲು ಗಮನ ವಹಿಸುವ ಗುರಿ ಹೊಂದಿರಬೇಕು.

ಪ್ರಜಾಪ್ರಭುತ್ವ ಇದ್ದ ನೆಲದಲ್ಲಿ ಮಾಧ್ಯಮ ಬೆಳೆಯುತ್ತದೆ. ಸರ್ಕಾರದ ಆಕೃತಿ ನಿರ್ಧರಿಸುವಲ್ಲಿ ಮಾಧ್ಯಮದ ಪಾತ್ರ ಪ್ರಮುಖವಾಗಿರುತ್ತದೆ. ಸರ್ಕಾರದ ಯೋಜನೆಗಳಿಗೆ ಸಹಕಾರ, ಮಾರ್ಗದರ್ಶನ ನೀಡುವುದು ಮತ್ತು ಅಗತ್ಯ ಬಿದ್ದಾಗ ಖಂಡಿಸುವುದು ಮಾಧ್ಯಮಗಳ ಗುರಿಗಳಾಗಿವೆ. ಪತ್ರಕರ್ತರು ತಮ್ಮನ್ನು ಆಮಿಷಗಳಿಗೆ ಒಡ್ಡಿಕೊಳ್ಳುವ ಪರಿಸ್ಥಿತಿ ನಿರ್ಮಿಸಿಕೊಳ್ಳಬಾರದು. ಪರ್ತಕರ್ತರಿಗೆ ಮೇಧಾಶಕ್ತಿ, ಬುದ್ಧಿಶಕ್ತಿ, ಕೌಶಲ್ಯ, ನೈಪುಣ್ಯತೆ, ಸಾವಧಾನ, ಸಮಾಧಾನ, ವ್ಯವಧಾನ ಬಹಳ ಮುಖ್ಯವಾಗಿಬೇಕು. ಪ್ರತಿ ಹಂತದಲ್ಲಿ ಎಚ್ಚರ, ಜಾಗೃತಿ ಕಾಯ್ದುಕೊಳ್ಳಬೇಕು. ಮಾಧ್ಯಮಗಳು ಜನರ ಕಷ್ಟ ಕಾರ್ಪಣ್ಯ ಪರಿಹರಿಸಲಿಕ್ಕೆ ಇದ್ದೇವೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಸಮೂಹ ಮಾಧ್ಯಮಗಳ ಗುಣಲಕ್ಷಣಗಳನ್ನು ನಾಲ್ಕು ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ. ಅವುಗಳೆಂದರೆ ಸಂದೇಶ, ಸಾರ್ವತ್ರಿಕತೆ, ಏಕಮುಖಿ ಸಂವಹನ ಮತ್ತು ಸಂವಹನ ವ್ಯವಸ್ಥೆ. ಸಮೂಹ ಮಾಧ್ಯಮಗಳಲ್ಲಿ ಸಂದೇಶಗಳು ಸಾರ್ವತ್ರಿಕವಾಗಿ ಪ್ರಸಾರವಾಗುತ್ತವೆ. ವೇಗವಾಗಿ

ಪ್ರಸಾರವಾಗುತ್ತದೆ. ಹಾಗೂ ಹೆಚ್ಚಿನ ಸಂದೇಶಗಳು ತಕ್ಷಣದ ಆಸಕ್ತಿಯ ವಿಷಯಗಳ ಕಡೆಗೆ ಗಮನಹರಿಸುತ್ತವೆ. ಇಲ್ಲಿ ಸಾರ್ವಜನಿಕ ಎಂದಾಗ, ಎಲ್ಲರಿಗೂ ಅಲ್ಲದಿದ್ದರೂ ಒಂದು ಸಣ್ಣ ಬೆಲೆ ಕೊಡಲು ಸಿದ್ಧರಿರುವವರಿಗೆ ಎಂದು ತಿಳಿಯಬೇಕು. ಯಾರಿಗೆ ಬೇಕಾದರೂ ಮಾಧ್ಯಮದ ವಸ್ತು ಲಭ್ಯ ಎನ್ನುವ ಕಾರಣಕ್ಕೆ ಬಹಳ ಜನರ ಆಸಕ್ತಿಯ ವಿಷಯಗಳಿಗೆ ಇಲ್ಲಿ ಪ್ರಾಶಸ್ತ್ಯ ಸಿಗುತ್ತದೆ. ಕೆಲವೇ ಕೆಲವು ಜನರ ಅಭಿರುಚಿಗಳಿಗೆ ಸಾಧಾರಣವಾಗಿ ಅವಕಾಶವಿರುವುದಿಲ್ಲ. ಚಿತ್ರಗೀತೆ ಬಯಸುವವರು ಬಹು ಮಂದಿ, ಶಾಸ್ತ್ರೀಯ ಸಂಗೀತ ಕೆಲವರಿಗೆ ಬೇಕು. ವ್ಯಾಪಾರಿ ಚಾನಲ್‌ಗಳು ಹೆಚ್ಚಿನ ಸಮಯ ಚಿತ್ರಗೀತೆಯನ್ನೇ ಪ್ರಸಾರ ಮಾಡುತ್ತವೆ. ಸಂವಹನದಲ್ಲಿ ವೇಗ ತಾಂತ್ರಿಕ ಪ್ರಗತಿಯಿಂದ ಬಂದದ್ದು ಇದು ಸುದ್ದಿ ಕೊಡುವುದರಲ್ಲಿ ನಾವೇ ಮೊದಲಿಗರಾಗಬೇಕು ಎನ್ನುವ ಪೈಪೋಟಿಯನ್ನು ಹುಟ್ಟಿಸಿದೆ.

ಸಮೂಹ ಸಂವಹನ ಮಾಧ್ಯಮಗಳಲ್ಲಿ ಸಂದೇಶಗಳಿಗೆ ಸಾಧಾರಣವಾಗಿ ಒಂದು ನಿರ್ದಿಷ್ಟವಾದ ವೇಳಾಪಟ್ಟಿಯಿರುತ್ತದೆ. ಮಾಧ್ಯಮ ನಿಶ್ಚಯಿಸಿದ ಈ ವೇಳಾಪಟ್ಟಿಗೆ ಶ್ರೋತೃಗಳು ತಮ್ಮ ಇತರ ಕಾರ್ಯಕ್ರಮಗಳನ್ನು ಹೊಂದಿಸಿಕೊಳ್ಳಬೇಕು ಎಂದು ನಿರೀಕ್ಷಿಸಲಾಗುತ್ತದೆ.

ಸಮೂಹ ಮಾಧ್ಯಮವು ಕಲಿಯುವ ವ್ಯಕ್ತಿಯ ಮೇಲೆ ತಮ್ಮ ಪ್ರಭಾವವನ್ನು ಬೀರುವುವು. ಇವು ಸಹ ವ್ಯಕ್ತಿಗೆ ಶಿಕ್ಷಣ ನೀಡುವಲ್ಲಿ ಮಹತ್ವಪೂರ್ಣ ಪಾತ್ರವಹಿಸುತ್ತವೆ. ಸಮೂಹ ಮಾಧ್ಯಮದ ಕೆಲವೊಂದು ಗುರಿಗಳು ಈ ಕೆಳಗಿನಂತಿದೆ.

ವಿಷಯ ಮಂಡಿಸುವ ಹಾಗೂ ಕೇಳುಗರ, ಓದುಗರ, ನೋಡುಗರ ನಡುವೆ ಮಧ್ಯವರ್ತಿಯಾಗಿ ಮಾಧ್ಯಮ ಸಂಪರ್ಕ ಕಲ್ಪಿಸುವುದರಿಂದ ವಿಷಯ ಮಂಡಿಸುವ ಹಾಗೂ ಸಮಾನಮನಸ್ಕರ ನಡುವೆ ನೇರ ಸಂಪರ್ಕ ಇರುವುದಿಲ್ಲ. ಯಾಂತ್ರಿಕ ಉಪಕರಣದ ಸಹಾಯದಿಂದ ಸಂವಹನ ಮಾಡುವುದರಿಂದ ತಕ್ಷಣದ ಪ್ರತಿಕ್ರಿಯಾತ್ಮಕ ಸಂವಹನ ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸಮೂಹ ಮಾಧ್ಯಮ ತಾತ್ಕಾಲಿಕವಾಗಿ ಏಕಮುಖವಾಗಿ ವ್ಯವಹರಿಸುತ್ತದೆ. ಜಗತ್ತಿನ ಯಾವುದೇ ಮೂಲೆಯಲ್ಲಿ ಸಂಭವಿಸುವ ಘಟನೆಯ ವಿವರಗಳನ್ನು ಕೆಲ ಕ್ಷಣಗಳಲ್ಲಿಯೇ ನೀಡುವಲ್ಲಿ ಸಮೂಹ ಮಾಧ್ಯಮ ಯಶಸ್ವಿಯಾಗಿರುವುದರಿಂದ ಅದರ ಪ್ರಭಾವ ತೀವ್ರ ವ್ಯಾಪಕತೆಯನ್ನು ಪಡೆದಿದೆ. ಸಮೂಹ ಮಾಧ್ಯಮ ಖಾಸಗಿ ಒಡೆತನದಲ್ಲಿರಲಿ, ಸರ್ಕಾರಿ ಸಾಮ್ಯದಲ್ಲಿರಲಿ ಅದು ಬಿತ್ತರಿಸುವ ಸುದ್ದಿ, ವಿಷಯ, ಸಂಗತಿ ಸಾರ್ವತ್ರಿಕವಾಗಿರುತ್ತದೆ. ಅಂದರೆ ಯಾವುದೇ ಕಾರಣಕ್ಕೂ ಅದು ವೈಯಕ್ತಿಕ ವಿಷಯವನ್ನು ಸಂವಹನ ಮಾಡಲು ಇಚ್ಛಿಸುವುದಿಲ್ಲ. ಸಾರ್ವತ್ರಿಕ ಮಾಹಿತಿಯನ್ನು ಮಾತ್ರ ಬಿತ್ತರಿಸುವುದು ಮಾಧ್ಯಮದ ಗುರಿಯಾಗಿರುತ್ತದೆ.

ಸಮೂಹ ಮಾಧ್ಯಮಗಳಿಗೆ ರಾಜ್ಯ, ದೇಶಗಳೆಂಬ ಗಡಿರೇಖೆಗಳಿಲ್ಲ. ತನ್ನ ಸಮುದಾಯಗಳಿಗೆ ಮಾಹಿತಿ ಬಿತ್ತರಿಸುವಾಗ ಲಿಂಗ, ಜಾತಿ, ಧರ್ಮಗಳ ಭೇದವನ್ನು ಮಾಡುವುದಿಲ್ಲ. ವಿಶಾಲವಾದ ಮನೋಭಾವನೆ ಇಟ್ಟುಕೊಂಡು ಸಂವಹನ ಮಾಡುತ್ತದೆ. ಹೊಸ ಹೊಸ ವೈಜ್ಞಾನಿಕ ಆವಿಷ್ಕಾರಗಳು

ಸಮೂಹ ಮಾಧ್ಯಮ ಕ್ಷೇತ್ರದಲ್ಲಿ ಹೊರಹೊಮ್ಮುತ್ತಿರುವುದರಿಂದ ಅವುಗಳನ್ನು ಅಳವಡಿಸಿ ಕೊಳ್ಳಬೇಕಾಗಿರುತ್ತದೆ. ಯಂತ್ರಗಳಿದ್ದರೂ ಅದರ ನಿರ್ವಹಣೆಗೆ, ಸಂವಹನಕ್ಕೆ ಮಾನವ ಸಂಪನ್ಮೂಲಗಳ ಅವಶ್ಯಕತೆ ಇದೆ. ಇದನ್ನು ಹೊಂದಲು ಮಾಧ್ಯಮಗಳು ಹೆಚ್ಚಿನ ಬಂಡವಾಳವನ್ನು ತನ್ನ ಕಾರ್ಯಕ್ಷೇತ್ರಕ್ಕೆ ಹೂಡಬೇಕಾಗುತ್ತದೆ. ಸಂವಹನ ಮಾಧ್ಯಮ ಉದ್ಯಮ ಎಂಬ ಮಾತ್ರಕ್ಕೆ ತನ್ನ ಕೆಲಸಕಾರ್ಯಗಳನ್ನು ಲಾಭ ನಷ್ಟ ದೃಷ್ಟಿಯಿಂದ ನೋಡುವುದಿಲ್ಲ. ಮಾಧ್ಯಮ ತನ್ನ ಕಾರ್ಯಕ್ರಮಗಳಲ್ಲಿ ಸಮೂಹದ ಜನರು ಮಾನವೀಯ ಮೌಲ್ಯ, ನೈತಿಕತೆ, ರಾಷ್ಟ್ರೀಯ ಏಕತೆ, ಸತ್ಯನಿಷ್ಠೆಯನ್ನು ಅಳವಡಿಸಿಕೊಳ್ಳುವಂತಹ ಸಂದೇಶಗಳನ್ನು ಚಿತ್ತರಿಸಿ, ಪ್ರಜಾಪ್ರಭುತ್ವ ಸಮಾಜದ ಮೌಲ್ಯಗಳನ್ನು ಎತ್ತಿ ಓಡಿಯುತ್ತದೆ ಮತ್ತು ಜನತೆ ಅದನ್ನು ನಿತ್ಯಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುತ್ತದೆ.

ಸಮೂಹ ಮಾಧ್ಯಮ ಆರಂಭದಲ್ಲಿಯೇ ತನ್ನದೇ ಆದ ನಿರ್ದಿಷ್ಟ ಗುರಿಗಳನ್ನು ಹೊಂದಿರುತ್ತದೆ. ಮಾಧ್ಯಮಕ್ಕೆ ಸಾಮಾಜಿಕ ಸ್ವಾಸ್ಥ್ಯ, ವ್ಯಕ್ತಿ ಸ್ವಾತಂತ್ರ್ಯ ಮುಖ್ಯವಾದುದರಿಂದ ಭ್ರಷ್ಟಾಚಾರ ನಿರ್ಮೂಲನೆ, ಮೂಢನಂಬಿಕೆಗಳನ್ನು ಕಿತ್ತೆಸೆಯುವಲ್ಲಿ ತನ್ನದೇ ಆದ ಗುರಿಗಳನ್ನು ಹೊಂದಿರುತ್ತದೆ. ಸಮೂಹ ಮಾಧ್ಯಮಗಳು ಯಂತ್ರದ ಮೂಲಕ ವ್ಯವಹರಿಸುವುದರಿಂದ ಏಕಕಾಲಕ್ಕೆ ಕೋಟ್ಯಾಂತರ ಜನರನ್ನು ತಲುಪುವ ಶಕ್ತಿ ಸಾಮರ್ಥ್ಯವನ್ನು ಹೊಂದಿರುತ್ತದೆ.

ಸಾಮಾನ್ಯವಾಗಿ ಸಮೂಹ ಮಾಧ್ಯಮಗಳ ಸುದ್ದಿ ತಾತ್ಕಾಲಿಕ ಆಸಕ್ತಿಯನ್ನು ಕೆರಳಿಸುತ್ತದೆ. ಕೆಲಹೊತ್ತು ಕಳೆದ ನಂತರ ವಿಷಯ ಮೇಲಿನ ಆಸಕ್ತಿ ಕ್ಷೀಣವಾಗುತ್ತದೆ. ಇದು ಸಮೂಹ ಮಾಧ್ಯಮಗಳಿಗೆ ದೊಡ್ಡ ಸವಾಲಾಗಿದೆ. ಆದ್ದರಿಂದ ಹೊಸ ಹೊಸ ಕಾರ್ಯಕ್ರಮಗಳನ್ನು ಚಿತ್ತರಿಸಬೇಕಾಗಿರುತ್ತದೆ. ವಿಷಯ ತಾಜಾತನದಿಂದ ಕೂಡಿರಬೇಕಾಗಿರುತ್ತದೆ. ಆಧುನಿಕ ಸಮಾಜದಲ್ಲಿ ಯಾವುದೇ ಅಭಿಪ್ರಾಯ ಮೂಡಿಸುವಲ್ಲಿ ಮಾಧ್ಯಮಗಳು ನಿರ್ಣಾಯಕ ಪಾತ್ರವಹಿಸುತ್ತವೆ. ಪ್ರಭಾವಿ, ಪರಿಣಾಮಕಾರಿ, ವಿಶ್ವ ವ್ಯಾಪಕ, ಅಗ್ಗ ಹಾಗೂ ಕ್ಷಿಪ್ರ ಕಾರ್ಯಾಚರಣೆಯಿಂದಾಗಿ ಮಾಧ್ಯಮಗಳ ಮಹತ್ವ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಬಹುತೇಕ ಸಾರ್ವಜನಿಕ ನಿರ್ಧಾರಗಳು ಮಾಧ್ಯಮಗಳಿಂದಲೇ ರೂಪಿಸಲ್ಪಡುತ್ತದೆ. ಸುದ್ದಿ ಸಂಗ್ರಹ ಮತ್ತು ಪ್ರಸಾರವೇ ಮಾಧ್ಯಮಗಳ ಪ್ರಮುಖ ಕಾರ್ಯವಾಗಿದ್ದು, ಸೌಹಾರ್ದತೆ ಕಾಪಾಡುವಲ್ಲಿ ಇದು ಮಹತ್ವದ್ದು. ಲೇಖನಿ ಖಡ್ಗಕ್ಕಿಂತಲೂ ಹರಿತ ಎನ್ನುವುದು ಹಳೆಯ ನಾಣ್ಣುಡಿಯಾದರೂ, ಇಂದಿಗೂ ಪ್ರಸ್ತುತ. ಇದೇ ಕಾರಣದಿಂದ ಆಧುನಿಕ ಸಮಾಜದಲ್ಲಿ ಮಾಧ್ಯಮ ಪ್ರಭಾವಶಾಲಿ.

ಟೆಲಿವಿಷನ್, ಸುದ್ದಿವಾಹಿನಿಗಳು, ಪತ್ರಿಕೆ, ನಿಯತಕಾಲಿಕ, ರೇಡಿಯೋ, ಮೊಬೈಲ್, ವೆಬ್‌ಪೋರ್ಟೆಲ್, ಇಂಟರ್‌ನೆಟ್, ಇ-ಮೇಲ್ ಹೀಗೆ ಸಾಂಪ್ರದಾಯಿಕ ಹಾಗೂ ಆಧುನಿಕ ಮಾಧ್ಯಮಗಳು ಜಗತ್ತನ್ನು ಕಿರಿದುಗೊಳಿಸಿವೆ. ಆದ್ದರಿಂದಲೇ ೨೧ನೇ ಶತಮಾನ ಸಂಪರ್ಕಯುಗ. ಈ ಕಾರಣದಿಂದ ಸಣ್ಣ ಸುದ್ದಿಯೂ ಸಮಾಜದ ಮೇಲೆ ದೊಡ್ಡ ಪರಿಣಾಮ ಬೀರುವ ಸಾಮರ್ಥ್ಯ ಹೊಂದಿದೆ. ಭಾರತದಂತ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರ ಮತ್ತು

ಸಾರ್ವಜನಿಕರ ನಡುವಿನ ಕೊಂಡಿಯೇ ಮಾಧ್ಯಮ. ಸಂಘರ್ಷ ಮತ್ತು ಅಶಾಂತಿಯ ಸಂದರ್ಭದಲ್ಲಿಂತೂ ಮಾಧ್ಯಮಗಳ ಪಾತ್ರ ಇನ್ನಷ್ಟು ಮಹತ್ತರ. ದೇಶದ ಏಕತೆ, ಸಮಗ್ರತೆ ಕಾಪಾಡುವಲ್ಲಿ ಮಾಧ್ಯಮ ಅನಾದಿ ಕಾಲದಿಂದಲೂ ತನ್ನ ಕೊಡುಗೆ ನೀಡುತ್ತಾ ಬಂದಿದೆ. ಇತ್ತೀಚೆಗೆ ಅಲಕ್ಷಿತ ಸಮುದಾಯಗಳನ್ನು ಮಾಧ್ಯಮ ಗುರುತಿಸಿ ಅವುಗಳ ಸಮಸ್ಯೆ, ಬಿಕ್ಕಟ್ಟುಗಳ ಪರಿಹಾರಕ್ಕೆ ಹೋರಾಟ ನಡೆಸುತ್ತಿದೆ.

ಮಾಧ್ಯಮಗಳು ವಸ್ತುನಿಷ್ಠ ವರದಿ ಮಾಡಬೇಕಿರುತ್ತದೆ. ಆದರೆ ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಸಮೂಹ ಮಾಧ್ಯಮಗಳು ಪ್ರಭಾವಿ ರಾಜಕೀಯ ವ್ಯಕ್ತಿಗಳ ಹಿಡಿತದಲ್ಲಿದ್ದು ಕುತಂತ್ರದಿಂದ ವಸ್ತುನಿಷ್ಠ ವರದಿಯನ್ನು ತಡೆಹಿಡಿದು, ಮಾಧ್ಯಮದವರಿಗೆ ವಿವಿಧ ಆಮಿಷಗಳನ್ನು ತೋರಿಸಿ ಸತ್ಯವನ್ನು ಮರೆಮಾಚಲಾಗುತ್ತದೆ. ಇದರಿಂದ ಜನಸಾಮಾನ್ಯರಿಗೆ ಅನ್ಯಾಯವಾಗಿ ಮಾನಹಾನಿ, ಜೀವಹಾನಿಯಾಗಿರುವುದು ಉಂಟು. ಇಂತಹ ಪರಿಸ್ಥಿತಿಯನ್ನು ಎದುರಿಸಿ ದಿಟ್ಟತನದಿಂದ ವಸ್ತುಸ್ಥಿತಿಯನ್ನು ವಿತರಿಸುವಂತಹ ಹೊಣೆಯನ್ನು ಸಮೂಹ ಮಾಧ್ಯಮಗಳು ಹೊರಬೇಕಾಗಿರುತ್ತದೆ.

ಒಳಿತನ್ನು ಮಾಡುವ ಪ್ರಜ್ಞೆಯನ್ನು ಸಮೂಹ ಮಾಧ್ಯಮಗಳು ಅಳವಡಿಸಿಕೊಳ್ಳಬೇಕಿದೆ. ಸಮಾಜದ ಅಂಕುಡೊಂಕುಗಳನ್ನು ತಿದ್ದಿ, ತೀಡಿ ಸಮಸ್ಯೆಗಳನ್ನು ಪರಿಹರಿಸುವ ಕಾರ್ಯಗಳನ್ನು ಸಮೂಹ ಮಾಧ್ಯಮಗಳು ಇಂದು ಮಾಡಬೇಕಿದೆ.

ಮಾಧ್ಯಮಗಳಿಗೆ ತಮ್ಮದೇ ಆದ ಮಿತಿಗಳಿವೆ.

* ಮಾಧ್ಯಮಗಳು ಅಭಿವ್ಯಕ್ತಿ ಸ್ವಾತಂತ್ರ್ಯದ ಮಿತಿಯನ್ನು ಹೊಂದಿರಬೇಕು. ವಿಮರ್ಶೆಗಳಿಗಿಂತ ಆರೋಪಗಳೇ ಮಾಧ್ಯಮದಲ್ಲಿ ವಿಜೃಂಭಿಸುತ್ತವೆ. ಯಾವುದೇ ವ್ಯಕ್ತಿಯನ್ನು ವಿಮರ್ಶಿಸುವಾಗ ಅಥವಾ ಸುದ್ದಿಯನ್ನು ಪ್ರಕಟಿಸುವಾಗ ಅವರ ವೈಯಕ್ತಿಕ ಭಾವನೆಗಳಿಗೆ ನೋವುಂಟಾಗದಂತೆ ನೋಡಿಕೊಳ್ಳಬೇಕಾಗಿರುತ್ತದೆ. ಇಂತಹ ವಿಚಾರಗಳಲ್ಲಿ ಮಾಧ್ಯಮಗಳು ಸ್ವಯಂ ನಿಯಂತ್ರಣ ಮತ್ತು ಸ್ವಯಂ ನಿರ್ಬಂಧಗಳನ್ನು ಪಾಲಿಸಬೇಕಾಗಿರುತ್ತದೆ.
* ಇಂದಿನ ಪ್ರಪಂಚದಲ್ಲಿ ಮಾಧ್ಯಮಗಳು ಯಾವ ಆಧಾರದ ಮೇಲೆ ಸುದ್ದಿ ಪ್ರಸಾರ ಮಾಡುತ್ತಾರೆ ಎಂದು ತಿಳಿಯುವುದು ಕಷ್ಟವಾಗಿದೆ. ಅದರಲ್ಲೂ ವಿದ್ಯುನ್ಮಾನ ಮಾಧ್ಯಮಗಳು ಬಹಳಷ್ಟು ಕಡೆ ವ್ಯಕ್ತಿಯ ಖಾಸಗಿತನಕ್ಕೆ ಧಕ್ಕೆ ತರುತ್ತಾರೆ. ಪ್ರತಿಯೊಬ್ಬರಿಗೂ ಅವರದೇ ಆದ ಗೌರವ ಇರುತ್ತದೆ. ಅದು ಹಾಳಾಗದಂತೆ ಎಚ್ಚರ ವಹಿಸಬೇಕಾದುದು ಅತ್ಯವಶ್ಯಕ. ಈ ನಿಟ್ಟಿನಲ್ಲಿ ಮಾಧ್ಯಮಗಳು ತಮ್ಮ ಮಿತಿ ಅರಿತು ವರ್ತಿಸಬೇಕು.
* ಮಾಧ್ಯಮ ಕ್ಷೇತ್ರದಲ್ಲಿ ವಿದೇಶಿ ಹೂಡಿಕೆಗೆ ಒಂದು ಮಿತಿಯಿದೆ. ಇದನ್ನು ಮಾಧ್ಯಮಗಳು ಮೀರಬಾರದು. ಹಾಗೆಯೇ ಮಾಧ್ಯಮಗಳು ರಾಜಕಾರಣಿಗಳ, ಆಡಳಿತಗಾರರ ಹಾಗೂ ಉದ್ಯಮ ಪ್ರಭುಗಳ ಹಿಡಿತಕ್ಕೆ ಒಳಗಾಗಿರಬಾರದು.

* ನಮ್ಮ ದೇಶದಲ್ಲಿ ಮಾಧ್ಯಮ ವೃತ್ತಿ ಸಾಕಷ್ಟು ಬೆಳೆದಿದೆ. ಜನಮಾನಸದ ಮೇಲೆ ದೊಡ್ಡ ಮಟ್ಟದಲ್ಲಿಯೇ ಪ್ರಭಾವ ಬೀರುವ ಶಕ್ತಿಯಾಗಿದೆ. ಆದ್ದರಿಂದ ಮಾಧ್ಯಮ ವೃತ್ತಿಗೆ ಸಾಗುವವರು ನಿರ್ದಿಷ್ಟ ಅರ್ಹತೆ ಹೊಂದಿರಬೇಕಾಗಿರುತ್ತದೆ.
* ಮಾಧ್ಯಮಕ್ಕೆ ಬರುವವರಿಗೆ ಭಾರತೀಯ ಸಂಸ್ಕೃತಿಯ ಮೂಲ ಅರಿವಿರಬೇಕು. ಇಂದು ಮುಖ್ಯವಾಹಿನಿಯ ಜನರು ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಅನುಕರಣೆ ಮಾಡುತ್ತಿರುವುದರಿಂದ ಶಿಕ್ಷಣವೂ ಪಾಶ್ಚಿಮಾತ್ಯ ಸಂಸ್ಕೃತಿಯನ್ನೇ ಬಿಂಬಿಸುವಂತಾಗಿದೆ. ಆದರೆ ಭಾರತದಲ್ಲಿ ಅನೇಕ ಅಲಕ್ಷಿತ ಸಮುದಾಯದವರಿದ್ದು ಇವರಲ್ಲಿ ನಮ್ಮ ಮೂಲ ಪರಂಪರೆಯನ್ನು ಕಾಣಬಹುದಾಗಿದೆ. ಇವರನ್ನು ಮುಖ್ಯವಾಹಿನಿಗೆ ತರಲು ಭಾರತೀಯ ಸಂಸ್ಕೃತಿಯ ಶಿಕ್ಷಣ ಬೇಕಾಗಿರುತ್ತದೆ. ಇದು ಮಾಧ್ಯಮದವರಿಗೆ ಅರಿವಿರಬೇಕು.
* ಮಾಧ್ಯಮವು ವಸ್ತುನಿಷ್ಠ ವರದಿ ಮಾಡಬೇಕು. ಜನಸಾಮಾನ್ಯರಿಗೆ ಜೀವಹಾನಿ, ಮಾನಹಾನಿ, ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ಜನರಿಗೆ ಒಳಿತು ಮಾಡುವ ಧ್ಯೇಯ ಹೊಂದಿರಬೇಕು. ಜನರ ಮನಸ್ಥಿತಿಗೆ ಅನುಗುಣವಾದ ಸುದ್ದಿ ನೀಡಬೇಕು.
* ಮಾಧ್ಯಮಗಳು ಸಮಾಜದ, ಸರ್ಕಾರದ ತಪ್ಪುಗಳನ್ನು ತಿದ್ದಬೇಕು. ಮಾಧ್ಯಮದ ನೀತಿ ನಿಯಮಗಳನ್ನು ಮೀರದೇ ಕಾರ್ಯ ನಿರ್ವಹಿಸಬೇಕು. ತಮ್ಮ ಹೊಣೆಗಾರಿಕೆ ಅರಿತು ವರ್ತಿಸಬೇಕು.
* ಮಾಧ್ಯಮದಲ್ಲಿ ಕೆಲಸ ಮಾಡುವವರಿಗೆ ಜನರ ಗಮನಸೆಳೆಯುವ ಸುದ್ದಿ ನೀಡುವ ಕೌಶಲ್ಯ ಇರಬೇಕು. ನಿರ್ದಿಷ್ಟ ಸಮಯದಲ್ಲಿ ಪರಿಣಾಮಕಾರಿ ಸುದ್ದಿ ನೀಡುವ ಕಲೆ ಗೊತ್ತಿರಬೇಕು. ಸಮಸ್ಯೆ ಪರಿಹರಿಸುವ ಸಾಮರ್ಥ್ಯವಿರಬೇಕು. ಮಾಧ್ಯಮದಲ್ಲಿ ಕೆಲಸ ಮಾಡುವವರಿಗೆ ತಾಳ್ಮೆ, ಸಹನೆ, ಬುದ್ಧಿವಂತಿಕೆ ಅಗತ್ಯವಾಗಿರಬೇಕು.

ಕೊನೆ ಟಿಪ್ಪಣಿಗಳು

೧. Wilber Scram, Mass Media and National Development, ೧೯೬೪, p. ೨೦.

೨. ನಿರಗುಡಿ ಬಿ.ಎಚ್., ಮಾಧ್ಯಮ ಲೋಕ, ೨೦೧೨, ಪು. ೭.

೩. ಚಂದ್ರಶೇಖರ ಬಿ.ಎಸ್., ಸಮೂಹ ಮಾಧ್ಯಮಗಳು, ೨೦೦೧, ಪು. ೧೪.

೪. ಪರಮಶಿವಮೂರ್ತಿ ಡಿ.ವಿ., ಸಂವಹನ ಕನ್ನಡ, ೧೯೯೭, ಪು. ೬.

೫. Werren K Agi, Introduction to Mass Communication. 1988, p. ೧೨.

೬. Wilber Scram, Mass Media and National Development, ೧೯೬೪, p. ೯.

೭. ನಿರಗುಡಿ ಬಿ.ಎಚ್., ಮಾಧ್ಯಮ ಲೋಕ, ೨೦೧೨, ಪು. ೨೬.

೮. Dictionary of Journalisam, p. ೫೪.

• • •

ಅಧ್ಯಾಯ : ಮೂರು

ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳು

ಅಧ್ಯಾಯ : ಮೂರು

ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳು

ಭಾರತ ಬಹುತ್ವ ಭಾಷೆ, ಸಾಹಿತ್ಯ, ಸಂಸ್ಕೃತಿ, ವೇಷಭೂಷಣ, ಕಥೆ, ಸಂಪ್ರದಾಯ ಸಾಂಸ್ಕೃತಿಕ ಆಚರಣೆಗಳನ್ನು ಒಳಗೊಂಡ ಅನೇಕ ಸಮುದಾಯಗಳನ್ನು ಒಳಗೊಂಡಿದೆ. ಇಂದು ೨೧ನೇ ಶತಮಾನದ ಅಂಚಿನಲ್ಲಿದ್ದೇವೆ. ಇಂದಿಗೂ ಅಲಕ್ಷಿತ, ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ದಲಿತರು ಭೂ ಒಡೆತನ, ಬಂಡವಾಳಶಾಹಿ, ಯಜಮಾನಿಕೆ, ಪುರೋಹಿತಶಾಹಿ ನೆರಳಿನಲ್ಲಿಯೇ ಜೀವನ ನಡೆಸುತ್ತಿದ್ದು, ಇವರ ನೆರಳಿನಲ್ಲಿಯೇ ಇಂದಿಗೂ ಮುಂದುವರಿಯುವಂತೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಕೆಲಸ ಮಾಡುತ್ತಿವೆ. ಇಂತಹ ಸಂದರ್ಭದಲ್ಲಿ ಅಲ್ಪಸಂಖ್ಯಾತ ಸಮುದಾಯಗಳನ್ನು ಸಮಾಜದ ಮುಖ್ಯವಾಹಿನಿಗೆ ತರುವ ಕೆಲಸವನ್ನು ಇತ್ತೀಚೆಗೆ ಸಮೂಹ ಮಾಧ್ಯಮ ಮಾಡುತ್ತಿದೆ ಎಂದರೆ ಅತಿಶಯೋಕ್ತಿಯೇನಲ್ಲ.

ಉತ್ಪಾದಕ ವರ್ಗದವರು ಮುಖ್ಯವಾಗಿ ವ್ಯಾಪಾರದಲ್ಲಿ ತೊಡಗಿ ಸಮಾಜದಲ್ಲಿ ನೆಲೆ ನಿಲ್ಲಬೇಕಿತ್ತು. ಆದರೆ ಖರೀದಿದಾರರು ಉತ್ಪಾದಕರ ವಸ್ತುವನ್ನು ಬಳಸಿಕೊಂಡು ವ್ಯಾಪಾರ ನಡೆಸಿ ಶ್ರೀಮಂತ ವ್ಯಾಪಾರಿ ವರ್ಗವಾಗಿ ಹೊರಹೊಮ್ಮಿದರು. ಉತ್ಪಾದಕರು ಕೂಲಿ ಕೆಲಸದಾಳಾಗಿ ಚರಿತ್ರೆಯಲ್ಲಿ ಬರುವ ಕಥೆಗಳಲ್ಲಿಯೂ ಸ್ಥಳ ಸಿಗದೆ ನಾಪತ್ತೆಯಾಗಿ ಹೋದರು. ವ್ಯಾಪಾರಿ ವರ್ಗ ಚರಿತ್ರೆಯ ಕಥೆಗಳಲ್ಲಿ ಮತ್ತೆ ಮತ್ತೆ ವಿಜೃಂಬಿಸಿ ಭದ್ರಸ್ಥಾನವನ್ನು ಕಲ್ಪಿಸಿಕೊಂಡರು. ವ್ಯಾಪಾರಿ ವರ್ಗಗಳ ಅಧಿಕಾರ ಭದ್ರವಾದಂತೆ ಉತ್ಪಾದಕ ವರ್ಗಗಳ ಮೇಲೆ ತಮ್ಮ ದರ್ಪದ ಕರಿನೆರಳನ್ನು ಬೀರತೊಡಗಿ ಈ ಸಮುದಾಯಗಳನ್ನು ಹಿಂಡಿ ಹಿಪ್ಪೆ ಮಾಡಿದರು. ಉತ್ಪಾದಕ ವರ್ಗದವರಿಗೆ ಆರ್ಥಿಕ ಸಂಕಷ್ಟವನ್ನುಂಟುಮಾಡಿ ತಮ್ಮ ಹಿಡಿತದಲ್ಲಿ ಇಟ್ಟುಕೊಂಡು ತಮ್ಮ ಪ್ರಭುತ್ವವನ್ನು ಮುಂದುವರೆಸಿದರು. ಶ್ರಮಿಕ ವರ್ಗಕ್ಕೆ ನೆಲೆ ನಿಲ್ಲಲು ಸ್ವಲ್ಪ ಭೂಮಿ ಮತ್ತು ಅವರ ಉತ್ಪಾದನ ವಸ್ತುಗಳಿಗೆ ಮಾರುಕಟ್ಟೆಯ ಸೌಲಭ್ಯ ದೊರೆತಿದ್ದರೆ ಇಂದು ಸಮಾಜದಲ್ಲಿ ಗೌರವ ದೊರಕಿಸಿಕೊಂಡು ಬದುಕಿ ಬಾಳುತ್ತಿದ್ದರು. ಆದರೆ ವ್ಯಾಪಾರಿ ವರ್ಗದ ಷಡ್ಯಂತ್ರದಿಂದ ಇವರ ಬದುಕು ತುಂಬಾ ಹೀನಾಯ ಸ್ಥಿತಿಗೆ ತಲುಪಿತು.

ಯಾವ ಸಮುದಾಯಗಳು ಈ ದೌರ್ಜನ್ಯವನ್ನು ಪ್ರತಿಭಟಿಸಿದವೋ ಅವರನ್ನು ಅಪರಾಧಿಗಳೆಂದು ಕರೆಯಲಾಯಿತು. ಯಾವ ಸಮುದಾಯಗಳು ಶರಣಾದವೋ ಆ ಸಮುದಾಯಗಳನ್ನು, ಅವುಗಳ

ವಿವೇಕವನ್ನು, ತಾತ್ವಿಕತೆಯನ್ನು ದೇವರು, ಧರ್ಮದ ಹೆಸರಿನಲ್ಲಿ ಮಲೀನಪಡಿಸಲಾಯಿತು. ಒಟ್ಟಿನಲ್ಲಿ ಉತ್ಪಾದನಾ ವರ್ಗವನ್ನು ಆಳುವ ವರ್ಗ ತಮ್ಮ ಕರಿನೆರಳಿನಲ್ಲಿ ಇರುವಂತೆ ಮಾಡಿದರು. ಈ ವರ್ಗಗಳ ಸಾಂಸ್ಕೃತಿಕ ಜಗತ್ತನ್ನು ನಾಶ ಮಾಡಿದ ಮೇಲೆ ಅವರ ಉತ್ಪಾದನೆಗಳಿಗೆ ವ್ಯಾಪಾರಿ ವರ್ಗವು ತಾವೇ ಹಕ್ಕುದಾರರೆಂಬಂತೆ ಬಿಂಬಿಸಿ ಉತ್ಪಾದಕ ಸಮುದಾಯಗಳನ್ನು ಕೇವಲ ದುಡಿಯುವ ವರ್ಗಗಳನ್ನಾಗಿ ಮಾಡಲಾಯಿತು.

ಸಮಕಾಲೀನ ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಸಮುದಾಯಗಳ ಬದುಕು ಇಂದಿನ ಆಧುನಿಕ ವ್ಯವಸ್ಥೆಯಲ್ಲಿಯೂ ಅತ್ಯಂತ ಶೋಚನಿಯ ಸ್ಥಿತಿಯಲ್ಲಿರುವುದು ಬೇಸರದ ಸಂಗತಿ. ಇದು ನಿನ್ನೆ-ಮೊನ್ನೆಯದಲ್ಲ. ಅನಾದಿಕಾಲದಿಂದಲೂ ವ್ಯವಸ್ಥಿತವಾಗಿ ನಡೆದುಕೊಂಡು ಬಂದಿದೆ. ಸಮಾಜದ ವ್ಯವಸ್ಥೆಯ ಹುಟ್ಟಿನ ಮೂಲಾಧಾರದಿಂದ ಜಾತಿ ಆಧಾರಿತ ಸಮಾಜ ರಚನೆ ದೇಶದ ಪ್ರಗತಿಗೆ ಮಾರಕವಾಗಿರುವ ದುರಂತ ಸತ್ಯ ನಮಗೆ ಇತಿಹಾಸದಿಂದ ತಿಳಿದುಬರುತ್ತದೆ.

ಜಾತಿ ವ್ಯವಸ್ಥೆಯಿಂದ ಅಲೆಮಾರಿ, ಅರೆ ಅಲೆಮಾರಿ, ಪರಿಶಿಷ್ಟ ಜಾತಿಯ ಜನರು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ದೃಷ್ಟಿಯಿಂದ ಇತರೆ ಸಮುದಾಯಗಳಿಗಿಂತಲೂ ತೀರಾ ಹಿಂದುಳಿದಿವೆ ಎಂಬುದು ಸರ್ವಕಾಲಕ್ಕೂ ಜ್ವಲಂತ ಸತ್ಯ. ಪರಿಶಿಷ್ಟ ಜಾತಿಯ ಅಲೆಮಾರಿಗಳ ಕಷ್ಟ ಕಾರ್ಪಣ್ಯಗಳು ಭಾರತೀಯ ಸಮಾಜಕ್ಕೆ ಅಂಟಿಕೊಂಡ ಶಾಪ. ಅಸ್ಪೃಶ್ಯರು ಅಸ್ಪೃಶ್ಯರಾಗಿಯೇ, ಅಲೆಮಾರಿಗಳಾಗಿಯೇ ನಮ್ಮ ನಡುವೆ ಇರುವ ಜೀವಂತ ಶವಗಳ ಸಾಲಿನಲ್ಲಿ ಈ ಅಲಕ್ಷಿತ ಸಮುದಾಯಗಳಿವೆ.

ಅಸಹಾಯಕ ಸ್ಥಿತಿಯಲ್ಲಿ ಬಾಳಿ ಬದುಕುತ್ತಿರುವ ಸಮುದಾಯಗಳ ಮೇಲೆ ತಮ್ಮ ಪುರಾಣಗಳನ್ನು ಹೇರಿ ಅವರು ಇನ್ನೆಂದೂ ಮೇಲೇಳದಂತೆ ಅವರನ್ನು ಶರಣಾಗತಗೊಳಿಸಲಾಯಿತು. ಭಾರತದ ಚರಿತ್ರೆಯಲ್ಲಿ ತಮ್ಮ ಉತ್ಪಾದನಾ ಕೌಶಲ್ಯದಿಂದ ಹಾಗೂ ಶ್ರಮದ ಶಕ್ತಿಯ ಬಲದಿಂದ ಪ್ರಧಾನವಾಗಿ ಕಾಣಿಸಿಕೊಳ್ಳಬೇಕಿತ್ತೋ ಅಂತಹ ಸಮುದಾಯಗಳು ಆಳುವ ವರ್ಗದ ಪ್ರಭಾವದಿಂದಾಗಿ ಮೂಲೆ ಗುಂಪಾಗಿವೆ. ಇಂದು ಮನುಷ್ಯ ತನ್ನ ಬುದ್ಧಿವಂತಿಕೆ ಮತ್ತು ಶಕ್ತಿ ಸಾಮರ್ಥ್ಯ ಉಪಯೋಗಿಸಿ ಜಗತ್ತಿನ ನಿಗೂಢ ರಹಸ್ಯವನ್ನು ಭೇದಿಸುವಲ್ಲಿ ಯಶಸ್ವಿಯಾಗಿ ಆಧುನಿಕತೆಯತ್ತ ಸಾಗುತ್ತಿದ್ದಾನೆ. ಅವನಿಗೆ ಈ ಶಕ್ತಿ ಪ್ರಕೃತಿಯೇ ನೀಡಿದೆಯೋ ಎಂಬ ವಾತಾವರಣ ನಿರ್ಮಾಣವಾಗಿದೆ.

ಈ ಜಾತಿ ಉಪಜಾತಿಯಲ್ಲಿಯೇ ಮತ್ತೆ ವಿವಿಧ ಏರಿಳಿತಗಳಿವೆ. ಮೇಲ್ವರ್ಗದ ಜಾತಿಗಳು ಒಂದೆಡೆಯಾದರೆ, ಕೆಳವರ್ಗದ ಜಾತಿಗಳು ಮೇಲ್ವರ್ಗದವರ ಶೋಷಣೆಯಿಂದ ನರಳುತ್ತ ಬದುಕುತ್ತಿದ್ದಾರೆ. ಈ ಸಮುದಾಯಗಳಿಗೆ ಅವರದೇ ಆದ ನಂಬಿಕೆಗಳು, ಸಂಪ್ರದಾಯಗಳಿವೆ. ಆದಿಕಾಲದಲ್ಲಿ ಆಯಾ ವೃತ್ತಿ ವೈವಿಧ್ಯತೆಗಳ ಆಧಾರದ ಮೇಲೆ ರೂಪುಗೊಂಡ ಜಾತಿ ವ್ಯವಸ್ಥೆಯು, ಕಾಲಾನಂತರದಲ್ಲಿ ವಿವಿಧ ರೂಪಗಳನ್ನು ತಾಳಿ ಸಾಮಾಜಿಕ ಶೋಷಣೆಯ ಸಾಧನವಾಗಿ ಶ್ರಮ ವಿಭಜನೆಯ ಬದಲಾಗಿ ಸಮಾಜ ವಿಭಜನೆಯಾಗಿ ಬೆಳೆದು ಬಂದಿದೆ.

ತಮ್ಮ ಜೀವನದ ಜೊತೆಯಾಗಿ ಬಂದಿರುವ ವೃತ್ತಿಯನ್ನು ಬಿಟ್ಟುಕೊಡಲಾರದೆ, ಹೊಸ ವೃತ್ತಿಯನ್ನು ಕಂಡುಕೊಳ್ಳಲಾರದೆ, ಅವರ ಬದುಕನ್ನು ಅವರೇ ನರಕವನ್ನಾಗಿಸಿಕೊಂಡರು. ಇದಲ್ಲದೇ ಪರಂಪರಾಗತವಾಗಿ ಬಂದಿರುವ ವೃತ್ತಿ ಮತ್ತು ಕುಲಕಸುಬುಗಳನ್ನು ಇಟ್ಟುಕೊಂಡಿರುವ ಸಮುದಾಯಗಳ ಸ್ಥಿತಿ ಒಂದು ತರಹವಾದರೆ, ಇದ್ಯಾವುದೂ ಇಲ್ಲದೇ ಬದುಕುತ್ತಿರುವ ಸಮುದಾಯಗಳು ನಮ್ಮಲ್ಲಿವೆ. ಅಂದರೆ ಯಾವುದೇ ವೃತ್ತಿ ಇಲ್ಲದೇ ಬದುಕಿನ ದಾರಿಯೂ ಕಾಣದೆ, ಭವಿಷ್ಯವಿಲ್ಲದೇ ಕಂಗಾಲಾಗಿರುವ ಸಮುದಾಯಗಳು. ಪ್ರತಿ ಸಮುದಾಯವು ತಾನು ರೂಪಿಸಿಕೊಂಡ ವೃತ್ತಿಗಳಿಗೆ ಅನುಗುಣವಾಗಿ ಅವುಗಳ ಸ್ವರವಿನ್ಯಾಸವನ್ನು ರೂಪಿಸಲಾಯಿತು. ಬದುಕಿಗೆ ಅನಿವಾರ್ಯವಾಗಿ ನಿಶ್ಚಿತ ವೃತ್ತಿಗಳನ್ನು ಅವಲಂಬಿಸಬೇಕಾದ ಅನಿವಾರ್ಯತೆಗೆ ಒಳಗಾದ ಸಮುದಾಯಗಳು ಭಿನ್ನ ಭಿನ್ನ ಕಾಲದಲ್ಲಿ ಕೆಲವು ಸಮುದಾಯಗಳು ಮನರಂಜನೆಯ ವೃತ್ತಿಯಲ್ಲಿ ತೊಡಗಿಕೊಳ್ಳುತ್ತಾ ಕಲಾ ಪ್ರಪಂಚದಲ್ಲಿ ಸಾಗಿದರೆ, ಇನ್ನುಳಿದ ಕೆಲ ಸಮುದಾಯಗಳು ಕುಶಲಕರ್ಮಿಗಳಾಗಿ ಆಳುವ ವರ್ಗಗಳನ್ನು ಅವಲಂಬಿಸಿ ಬದುಕಿದರು. ಕೆಲ ಸಮುದಾಯಗಳು ಮನೆ ಮಕ್ಕಳಂತೆ ಊಳಿಗದಾಳುಗಳಾಗಿ ಉಳಿದುಕೊಂಡರೆ, ಇನ್ನೂ ಕೆಲ ಸಮುದಾಯಗಳು ಕುಶಲಕರ್ಮಿಗಳು ಅಲ್ಲದೆ, ಯಾವ ಮನರಂಜನೆಯ ಚಟುವಟಿಕೆಯೂ ಇರದೆ, ಕಲಾ ಪ್ರಪಂಚದಲ್ಲಿ ಕಾಣಿಸಿಕೊಳ್ಳದೆ, ಪ್ರಭುತ್ವದಿಂದ ದೂರ ಇದ್ದು ಅವರ ಸೇವಕ ಸಮುದಾಯದವರಾಗಿ ಕಾಣಿಸಿಕೊಂಡರು. ನಿಕೃಷ್ಟ ಕೆಲಸಗಳಿಗಷ್ಟೇ ಈ ಸಮುದಾಯಗಳನ್ನು ಸೀಮಿತಗೊಳಿಸಲಾಯಿತು. ಆರ್ಥಿಕ ಬೆಂಬಲವಿಲ್ಲದೆ, ಆಳುವ ವರ್ಗದವರ ಸೇವೆ ಮಾಡುವ ಮೂಲಕವಾಗಿ ಅನಿವಾರ್ಯವಾಗಿ ಆಳುವ ವರ್ಗವನ್ನು ಆಶ್ರಯಿಸಿದರು. ಇದನ್ನೇ ಉಪಯೋಗಿಸಿಕೊಂಡ ಆಳುವ ವರ್ಗ ಇವರನ್ನು ಬಿಟ್ಟಿ ಆಳುಗಳಂತೆ ನಡೆಸಿಕೊಂಡರು. ಆಳುವ ವರ್ಗದವರ ಆರ್ಥಿಕ ಸ್ಥಿತಿಗತಿಗಳು ಬದಲಾದಂತೆ ಅವರನ್ನು ನಂಬಿದ ಈ ಸಮುದಾಯಗಳು ಇನ್ನೂ ನಿಕೃಷ್ಟವಾಯಿತು ಮತ್ತು ನಿರಾಶ್ರಿತವಾಯಿತು. ಕೆಲವು ಕಡೆ ಒಡೆಯರು ಆಳುಗಳನ್ನು ಮಾರಾಟ ಮಾಡಿದ ದಾಖಲೆಗಳು ಕೂಡ ಲಭ್ಯವಾಗಿವೆ.

ಭಾರತದ ಶ್ರೇಣೀಕರಣ ವ್ಯವಸ್ಥೆಯಲ್ಲಿ ಅತ್ಯಂತ ವ್ಯವಸ್ಥಿತವಾಗಿ ತಳಕ್ಕೆ ತಳ್ಳಲ್ಪಟ್ಟ ಸಮಾಜದ ಅಂಚಿನ ಸಮುದಾಯಗಳ ಅಧ್ಯಯನಗಳ ಅಗತ್ಯತೆ ತೀರ ಅನಿವಾರ್ಯವೆಂಬಂತೆ ಇಂದು ಸೃಷ್ಟಿಯಾಗಿದೆ. ಅನೇಕ ಸಮುದಾಯಗಳಿಗೆ ಇಂದಿಗೂ ತನ್ನ ಜಾತಿಯ 'ಅಸ್ಮಿತೆ'ಗಳು ಇಲ್ಲದೆ ಬದುಕುತ್ತಿರುವುದು ಶೋಚನೀಯ. ಹೀಗೆ ವಿಸ್ಮೃತಿಗೆ ತಳ್ಳಲ್ಪಟ್ಟ ಸಮುದಾಯಗಳ ಜ್ಞಾನಕೋಶಗಳ ತಿಳುವಳಿಕೆಗಳು ಭಾರತೀಯ ಬಹು ಸಂಸ್ಕೃತಿಯನ್ನು ಅಭಿವ್ಯಕ್ತಿಸುತ್ತವೆ ಎನ್ನುವುದು ಮಾತ್ರ ಸತ್ಯ.

ಸಮುದಾಯದಗಳ ಜ್ಞಾನ ಪರಂಪರೆಗಳ ಮೇಲೆ ಆಗಿಂದಾಗ್ಗೆ ಅನೇಕ ದಬ್ಬಾಳಿಕೆಗಳು ನಡೆದರೂ ಊರಿಂದ ಆಚೆಯೆ ನಿಂತು ಅವುಗಳನ್ನು ಕಾಪಾಡಿಕೊಂಡು ಬಂದಿವೆ. ಆದರೆ ಈ ಜ್ಞಾನ ಪರಂಪರೆಗಳನ್ನು ಮುಖ್ಯವಾಹಿನಿಯ ಕಡೆ ಕರೆಯದೇ, ಮುಖ್ಯವಾಹಿನಿಯೇ ಅವುಗಳೆಡೆಗೆ ಚಲಿಸುವುದು ಮುಖ್ಯವಾಗಿದೆ.

'ಮುಖ್ಯವಾಹಿನಿ' ಎಂದರೇನು? ಎಂಬ ಪ್ರಶ್ನೆ ಹುಟ್ಟುತ್ತದೆ. ಅದಕ್ಕೆ ಉತ್ತರವಾಗಿ-ಪಶಹಾತುಶಾಹಿ, ಪುರೋಹಿತಶಾಹಿಯು ನಿರ್ಮಿಸಿದ ಕಾಲ್ಪನಿಕ, ಹುಸಿತನದ ಚಿಂತನೆಗಳೇ ಮುಖ್ಯವಾಹಿನಿಯ ಗುರುತುಗಳಾಗಿದ್ದು, ಇವುಗಳಿಂದ ಹೊರಬರಲು ಮಾರ್ಗಗಳೇ ಇಲ್ಲ. ಸಮಾಜದಲ್ಲಿ ಇದ್ದುಕೊಂಡೇ ಅಂಚಿನಲ್ಲಿ ಬದುಕುತ್ತಿರುವ, ದಲಿತರು, ಅಸ್ಪೃಶ್ಯರು ಸಮಾಜದಿಂದ ದೂರ ಸರಿದು ಕಾಡುಮೇಡುಗಳಲ್ಲಿ ಬದುಕುತ್ತಿರುವ ಬುಡಕಟ್ಟುಗಳು ಮತ್ತು ಅವುಗಳ ಶ್ರಮಿಕ ಜ್ಞಾನ ಪರಂಪರೆಗಳ ಕಡೆ ನಮ್ಮ ನಡಿಗೆ ಆರಂಭವಾಗಬೇಕು.

ಈ ಆದಿಮ ಜ್ಞಾನ ಪರಂಪರೆಗಳಲ್ಲಿರುವ ಒಳ್ಳೆಯದನ್ನು ಸಮಾಜದಲ್ಲಿ ಮುಂದೆ ತಂದು ಅದನ್ನೇ ಮುಖ್ಯವಾಹಿನಿಯಾಗಿ ನಿರ್ಮಿಸಿಕೊಳ್ಳಬೇಕಿದೆ. ಈ ಶ್ರಮಿಕ ಜ್ಞಾನ ಪರಂಪರೆಗಳು ತನ್ನ ಬಾಳುವೆಯನ್ನು ಕಟ್ಟಿಕೊಳ್ಳುವಾಗ ಯಾವ ಜೀವಿಗೂ, ಪ್ರಕೃತಿಗೂ ಉಪದ್ರವವಾಗದೆ, ಹೀಗೆ ಬದುಕಿದ ಅವರ ಜೀವನವೇ ನಮಗೆ ಆದರ್ಶವಾಗಬೇಕಿದೆ. ಈ ಶ್ರಮಿಕ ಸಮುದಾಯದಲ್ಲಿರುವ ವರದಕ್ಷಿಣೆಗೆ ವಿರುದ್ಧವಾಗಿ-ಕನ್ಯಾತೆರ ಪದ್ಧತಿ, ಏಕದೇವೋಪಾಸನೆಗೆ ಬದಲಾಗಿ-ಬಹುದೇವತಾರಾಧನೆ ಪದ್ಧತಿ, ಕೂಡುಕುಟುಂಬ ಸಮಷ್ಠಿ ಪ್ರಜ್ಞೆ, ಒಳಜಾತಿಗಳ ಅದಲುಬದಲಿಕೆ ಈ ಮುಂತಾದ ವಿಷಯಗಳು ಇಂದು ನಾಗರಿಕ ಸಮಾಜಕ್ಕೆ ಆದರ್ಶವಾಗಬೇಕಿದೆ. ಜೊತೆಗೆ ಇವುಗಳ ಸಂಸ್ಕೃತಿಯೆಲ್ಲವೂ ಶ್ರೇಷ್ಠ ಎಂಬ ವಿಚಾರಕ್ಕೂ ಒಳಗಾಗದೆ ಒಳ್ಳೆಯದನ್ನು ಮಾತ್ರ ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಿದೆ.

ಸಮಕಾಲೀನ ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ಪರಿಶಿಷ್ಟ ಜಾತಿಯ ಸೂಕ್ಷ್ಮ, ಅತಿ ಸೂಕ್ಷ್ಮ ಸಮುದಾಯಗಳ ಬದುಕು ಇಂದಿನ ಆಧುನಿಕ ವ್ಯವಸ್ಥೆಯಲ್ಲಿಯೂ ಅತ್ಯಂತ ಶೋಚನಿಯ ಸ್ಥಿತಿಯಲ್ಲಿರುವುದು ಬೇಸರದ ವಿಷಯ. ಇದು ನಿನ್ನೆ-ಮೊನ್ನೆಯದಲ್ಲ. ಶತಮಾನಗಳಿಂದಲೂ ವ್ಯವಸ್ಥಿತವಾಗಿ ನಡೆದುಕೊಂಡು ಬಂದಿದೆ. ಸಮಾಜದ ವ್ಯವಸ್ಥೆಯ ಹುಟ್ಟಿನ ಮೂಲಾಧಾರದಿಂದ ಜಾತಿ ಆಧಾರಿತ ಸಮಾಜ ರಚನೆ ದೇಶದ ಪ್ರಗತಿಗೆ ಮಾರಕವಾಗಿರುವ ದುರಂತ ಸತ್ಯ ನಮಗೆ ಇತಿಹಾಸದಿಂದ ತಿಳಿದುಬರುತ್ತದೆ.

ಎಷ್ಟೋ ದಲಿತ ಸಂಘಟನೆಗಳು, ಅಲೆಮಾರಿ, ಅರೆ ಅಲೆಮಾರಿ ಒಕ್ಕೂಟಗಳು, ಜಾತ್ಯಾತೀತ ಸಂಘಟನೆಗಳು ಹಾಗೂ ಎಡಪಂಥೀಯ ಸಂಘಟನೆಗಳು ರಾಜ್ಯ, ಜಿಲ್ಲೆ, ತಾಲೂಕು, ಹೋಬಳಿ ಮಟ್ಟದಲ್ಲಿ ಮಾಡಿದ ಜನಪರ ಚಳುವಳಿಗಳು ಆಳುವ ವರ್ಗದ ಮೇಲಾಗಲಿ, ಪರಿಶಿಷ್ಟ ಜಾತಿಯ ನಾಯಕರ ಮೇಲಾಗಲಿ ಯಾವುದೇ ರೀತಿಯ ಪ್ರಭಾವವನ್ನು ಬೀರಿಲ್ಲ. ರಾಜಕೀಯ ಪಕ್ಷಗಳು ರಾಜಕೀಯ ಲಾಭಕ್ಕಾಗಿ ಅಲೆಮಾರಿ, ಅರೆ-ಅಲೆಮಾರಿ ಸಮುದಾಯಗಳನ್ನು ಬಳಸಿಕೊಳ್ಳುತ್ತಿವೆ. ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ಅಲೆಮಾರಿಗಳ ಸಮಸ್ಯೆಯನ್ನು ಆಲಿಸಿ ಚುನಾವಣಾ ಪ್ರಣಾಳಿಕೆಯಲ್ಲಿ ದೊಡ್ಡ ಘೋಷಣೆಯನ್ನು ಪ್ರಕಟಿಸುತ್ತಾರೆ. ಆಡಳಿತ ನಡೆಸುವವರ ಸುಳ್ಳು ಆಶ್ವಾಸನೆಗಳ ಬಗ್ಗೆ ಅಲೆಮಾರಿ ಪ್ರಜ್ಞಾವಂತ ಯುವ ಜನಾಂಗದಲ್ಲಿ

ಆಕ್ರೋಶ ಮಡುಗಟ್ಟಿದೆ. ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಲೂ ಆಡಳಿತಶಾಹಿ ಮತ್ತು ಅಧಿಕಾರಿಗಳ ಅಸಡ್ಡೆ ವರ್ತನೆಯೇ ಮೂಲ ಕಾರಣವಾಗಿದೆ. ಆದರೆ ಈ ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಅಲೆಮಾರಿ ಸಮುದಾಯಗಳು ಸರ್ಕಾರದ ಸೌಲಭ್ಯವನ್ನು ಜಾತಕದ ಪಕ್ಷಿಯಂತೆ ನೋಡುತ್ತಿದ್ದಾರೆ.

ಯಾರು ಅಸ್ಪೃಶ್ಯರಲ್ಲ. ಯಾರು ಮೇಲಲ್ಲ. ಯಾರು ಕೀಳಲ್ಲ. ಇಲ್ಲಿ ಎಲ್ಲರೂ ಸ್ವತಂತ್ರರು, ಸಮಾನರು. ಆದ್ದರಿಂದ ಎಲ್ಲರಿಗೂ ಬದುಕುವ ಹಕ್ಕಿದೆ. ಸ್ವಾತಂತ್ರ್ಯ ಮತ್ತು ಸಮಾನತೆಯ ಮೂಲಭೂತ ಹಕ್ಕುಗಳನ್ನು ಎಲ್ಲರೂ ಅನುಭವಿಸಬೇಕು ಎಂಬ ಆಶಯ ಇಂದಿಗೂ ಕೇವಲ ಸಂವಿಧಾನದ ಪುಟಗಳಿಗೆ ಮಾತ್ರ ಮೀಸಲಾಗಿರುವುದು. ಸ್ವಾತಂತ್ರ್ಯೋತ್ತರ ಭಾರತ ಸಾಧಿಸಿದ ಪ್ರಗತಿಗೆ ಹಿಡಿದ ಕನ್ನಡಿಯಾಗಿದೆ. ಆದ್ದರಿಂದ ಈ ನೆಲದಲ್ಲಿ ವಾಸಿಸುತ್ತಿರುವ ಪ್ರತಿಯೊಬ್ಬ ನಾಗರಿಕನೂ ಯಾರಿಗೂ ಅಂಜಿ-ಅಳುಕಿ ಬಾಳುವ ಅವಶ್ಯಕತೆ ಇಲ್ಲ. ಸಮಗ್ರತೆಯ ದೃಷ್ಟಿಯಿಂದ ಅಸ್ಪೃಶ್ಯತೆಯನ್ನು ಕಿತ್ತು ಹಾಕಿ ಸಮಾನತೆ ಅನುಸರಿಸಬೇಕು ಎಂಬುದು ಕೇವಲ ಸಂವಿಧಾನಾತ್ಮಕ ಕಾನೂನಾಗಿ ವಿಜೃಂಭಿಸಿ ಸುಧಾರಣಾವಾದಿಗಳನ್ನು ಅಣಕಿಸುತ್ತದೆ. ಕಾಯ್ದೆ-ಕಟ್ಟಳೆ-ನೀತಿ-ನಿಯಮಗಳೇನೇ ಇದ್ದರೂ ಅವು ಗ್ರಂಥಕ್ಕೆ ಮಾತ್ರ ಸೀಮಿತ ಎನ್ನುವ ವಿಚಾರ ಖಂಡನೀಯ. ವೇದ-ಶಾಸ್ತ್ರ-ಪುರಾಣಗಳಂತೆ ಸಂವಿಧಾನವೂ ಪವಿತ್ರವೆನ್ನುವ ಗಾಂಧಿ-ಅಂಬೇಡ್ಕರ್-ಶಾಸ್ತ್ರಿಗಳೊಂದಿಗೆ ಸಮಾಧಿ ಸೇರಿರುವುದು ಕಟು ಸತ್ಯ

೩.೧. ಅಲಕ್ಷಿತ ಸಮುದಾಯಗಳ ವಿಕಾಸದ ನೆಲೆ

ಭಾರತದ ಜಾತಿವ್ಯವಸ್ಥೆಯು ವಿಶಿಷ್ಟವಾಗಿದ್ದು ಸಾಮಾಜಿಕ ಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಇಲ್ಲಿಯ ಸಾಮಾಜಿಕ ಸ್ತರವಿನ್ಯಾಸದ ಒಂದು ರೂಪವಾಗಿ, ಸ್ವಾಭಾವಿಕವಾಗಿಯೇ ಬೆಳೆದಂತಹ ಜಾತಿ ಪದ್ಧತಿಯು ಭಾರತಕ್ಕೆ ಮಾತ್ರ ಸೀಮಿತವಾದ ಒಂದು ವಿಶಿಷ್ಟ ಪದ್ಧತಿಯಾಗಿದೆ. ಜಾತಿ ವ್ಯವಸ್ಥೆಗೆ ಸರಿಸಮಾನವಾದ ವ್ಯವಸ್ಥೆಯನ್ನು ಪ್ರಪಂಚದ ಇನ್ನಾವುದೇ ಸಮಾಜದಲ್ಲಿ ಕಾಣಲು ಸಾಧ್ಯವಿಲ್ಲ. "ಜಾತಿ ವ್ಯವಸ್ಥೆಯು ಭಾರತೀಯ ಸಾಮಾಜಿಕ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಹಾಸುಹೊಕ್ಕಾಗಿದೆ. ಅಂದರೆ ರೂಢಿ, ಸಂಪ್ರದಾಯ, ಆಚಾರ-ವಿಚಾರ, ವೇಷ ಭೂಷಣ, ಆಹಾರ-ಅಭ್ಯಾಸ, ವ್ಯಾಪಾರ-ವ್ಯವಹಾರ, ಉದ್ಯೋಗ, ವಿವಾಹ-ಕುಟುಂಬ, ಹುಟ್ಟು-ಸಾವು ಮುಂತಾದವುಗಳಲ್ಲಿ ಸೇರಿಹೋಗಿದೆ. ಸಾಮಾಜಿಕ ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಆಳವಾಗಿ ಬೇರೂರಿರುವ ಜಾತಿ ಪದ್ಧತಿಯು ಬಹು ದೀರ್ಘವಾದ ಹಿನ್ನೆಲೆಯನ್ನು ಹೊಂದಿದೆ. ಇದು ಪ್ರತ್ಯೇಕವಾದ ಸಂಗತಿಯಾಗಿರದೆ, ವ್ಯಾಪಕವಾಗಿ ಎಲ್ಲೆಡೆ ಕಂಡುಬರುವ ವ್ಯವಸ್ಥೆಯಾಗಿದೆ. ಜಾತಿಗೆ ಇರುವ ಕೆಲವು ಆಚರಣೆ, ಪದ್ಧತಿ, ನಂಬಿಕೆ, ಆಲೋಚನೆ ಮುಂತಾದವುಗಳ ಹಿನ್ನೆಲೆಯಲ್ಲಿ ಜಾತಿಯನ್ನು ವ್ಯವಸ್ಥೆ ಎಂದು ವಸಾಹತು ಕಾಲದಿಂದಲೇ ಕರೆಯಲಾಗಿದೆ."[೧] ೪೬೦೦ಕ್ಕೂ ಅಧಿಕ ಜಾತಿ ಉಪಜಾತಿಗಳನ್ನು ಹಾಗೂ ಅವುಗಳ ವಿಶಿಷ್ಟತೆಯನ್ನು ಹೊಂದಿರುವ ಭಾರತವು ಜಾತಿ ವ್ಯವಸ್ಥೆಯ ಏಕ ಮಾತ್ರ ದೇಶ.

ಹಿಂದೂ ಧರ್ಮಶಾಸ್ತ್ರಗಳಲ್ಲಿ ಜನರಲ್ಲಿ ಸಮಾನತೆ ಇತ್ತು ಎಂಬ ಉಲ್ಲೇಖವಿದೆ. ವರ್ಣ ಅಂದರೆ 'ವ್ರಿ' ಸಂಸ್ಕೃತದ ಪದದಿಂದ ಬಂದಿದೆ. ಇದರ ಅರ್ಥ ಆರಿಸು, ಆಯ್ಕೆ ಮಾಡು. ವರ್ಣವೆಂದರೆ ವ್ಯಕ್ತಿಯು ತನ್ನ ಪ್ರತಿಭೆ, ಸಾಮರ್ಥ್ಯದ ಗುಣಗಳಿಗೆ ಅನುಸಾರವಾಗಿ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುವುದು ಎಂದಾಗಿತ್ತು. ವೇದಗಳ ಕಾಲದಿಂದಲೂ ಜಾತಿ, ಮನುಷ್ಯನ ಉದ್ಯೋಗ, ಸಾಮರ್ಥ್ಯಗಳನ್ನು ಆಧರಿಸಿ ನಿರ್ಣಯವಾಗುತ್ತಿತ್ತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳಿದ್ದು ವ್ಯಕ್ತಿಯ ಗುಣ ಮತ್ತು ಕರ್ಮಗಳ ಮೂಲಕ ವರ್ಣ ನಿರ್ಧಾರವಾಗುತ್ತಿತ್ತು. ಕಾಲ ಕಳೆದಂತೆ ಹೆಚ್ಚಿನ ವೃತ್ತಿ ನೈಪುಣ್ಯತೆ ಹೊಂದಿದ ಅಲ್ಪಸಂಖ್ಯಾತ ಗುಂಪುಗಳು ಸಮಾಜದ ಮುಂದಾಳತ್ವವನ್ನು ವಹಿಸಿಕೊಂಡವು. ಅಸಹಜವಾದ ಬಲಾಢ್ಯತನವನ್ನು ಉಳಿಸಿಕೊಳ್ಳಲು ಈ ವೃತ್ತಿ ನೈಪುಣ್ಯತೆ ಹೊಂದಿದ ಅಲ್ಪಸಂಖ್ಯಾತ ಗುಂಪುಗಳು ಹೊರರೂಪದಲ್ಲಿ ಬಹು ನಯವಾದ ಜನರಾಗಿ ಕಡಿಮೆ ಕೌಶಲ್ಯದ ಶ್ರಮದ ವೃತ್ತಿಯನ್ನು ಇತರ ವರ್ಣಗಳಿಗೆ ಮೀಸಲಾಗಿಸಿದರು. ಬುದ್ಧಿ ಬಲದ ಕೆಲಸ ಮತ್ತು ದೈಹಿಕ ಬಲದ ಕೆಲಸಗಳು ಸೃಷ್ಟಿಯಾದವು. ಈ ಕಾರಣದಿಂದಲೇ ಶೂದ್ರರು ಸಾಮಾಜಿಕ ಶ್ರೇಣೀಕರಣದಲ್ಲಿ ತಳಮಟ್ಟಕ್ಕೆ ಇಳಿಯಬೇಕಾಯಿತು.

ಭಾರತೀಯ ಸಮಾಜದಲ್ಲಿ ಹುಟ್ಟು ಜಾತಿಯನ್ನು ನಿರ್ಧರಿಸುತ್ತದೆ. ವ್ಯಕ್ತಿ ಯಾವ ಜಾತಿಯಲ್ಲಿ ಹುಟ್ಟುವನೋ ಆ ಜಾತಿಯ ಸದಸ್ಯತ್ವ ಪಡೆಯುತ್ತಾನೆ. ಜಾತಿ ಪದ್ಧತಿಯು ಜಾತಿ ಉಪಜಾತಿಗಳಾಗಿ ವಿಭಾಗಗಳಾಗಿವೆ. ಪ್ರತಿಯೊಂದು ವಿಭಾಗವು ಚಿಕ್ಕದಾದ ಜಗತ್ತಿನಂತಿದೆ. ಸಾಮಾಜಿಕ ಸ್ತರವಿನ್ಯಾಸದ ಒಂದು ರೂಪವಾಗಿ ಜಾತಿಯು ಕಾಣಿಸಿಕೊಳ್ಳುತ್ತದೆ. ಪವಿತ್ರ, ಅಪವಿತ್ರರು ಎಂಬ ಶ್ರೇಣಿಗಳಿವೆ. ಇವರಲ್ಲಿ ಆಹಾರದ ನಿರ್ಬಂಧಗಳಿವೆ. ಯಾವ ಜಾತಿಯ ಜನರು ಹೇಗೆ ಆಹಾರ ಸ್ವೀಕರಿಸಬೇಕು ಎಂಬ ನಿಯಮಗಳಿವೆ. ಮೇಲು-ಕೀಳು ಎಂಬ ಶ್ರೇಣಿಯಲ್ಲಿ ಸಾಂಪ್ರದಾಯಿಕ ವೃತ್ತಿಗಳನ್ನು ಅನುಸರಿಸಲಾಗುತ್ತದೆ. ಜಾತಿಗಳಲ್ಲಿಯೇ ಒಳಬಾಂಧವ್ಯ ವಿವಾಹ ನಡೆಯುತ್ತವೆ. ಇವುಗಳ ಜೊತೆ ಧಾರ್ಮಿಕ ವಿಧಿ ವಿಧಾನಗಳನ್ನು ಮತ್ತು ಸಾಮಾಜಿಕ ನಿಯಂತ್ರಣ ಮಾಡುವ ಜಾತಿ ಪಂಚಾಯಿತಿಗಳು ನ್ಯಾಯಾಲಯದಂತೆ ಕಾರ್ಯ ನಿರ್ವಹಿಸುತ್ತದೆ. ಈ ಗುಣಲಕ್ಷಣಗಳ ಸ್ಥೂಲ ಅಧ್ಯಯನವು ಜಾತಿ ವ್ಯವಸ್ಥೆಯ ಸರಿಯಾದ ಅರ್ಥವನ್ನು ತಿಳಿಸುತ್ತದೆ. ಆಧುನಿಕ ಸಮಾಜದಲ್ಲಿ ಜನರಿಗೆ ತಮ್ಮ ಜೀವನಮಟ್ಟವನ್ನು ಹೆಚ್ಚಿಸಿಕೊಳ್ಳಲು ಶಿಕ್ಷಣ, ಉದ್ಯೋಗ ಮುಂತಾದ ಅವಕಾಶಗಳು ಸಿಗುವಂತೆ ಆಯಿತು. ಇದರಿಂದ ಶತಮಾನಗಳಿಂದಲೂ ಅಸ್ತಿತ್ವದಲ್ಲಿರುವ ಜಾತಿ ವ್ಯವಸ್ಥೆಯು ಹಿಂದೆಂದೂ ಕಂಡಿರದ ಪರಿವರ್ತನೆಗಳಿಗೆ ಒಳಗಾಗಿದೆ. ಜಾತಿಯು ದೈವ ಸೃಷ್ಟಿ ಎಂಬ ನಂಬಿಕೆಯು ನಶಿಸಿದೆ. ಕುಲಕಸುಬುಗಳು, ರೂಢಿ-ಸಂಪ್ರದಾಯ, ಆಹಾರ, ಜೀವನಕ್ರಮ, ಶಿಷ್ಟಾಚಾರ ಜಾತಿಯ ಹಿಡಿತದಿಂದ ಸಡಿಲಗೊಳ್ಳುತ್ತಿದೆ. ಆದರೂ ಭಾರತೀಯ ಸಮಾಜದಲ್ಲಿ ಜಾತೀಯತೆಯು ಪ್ರಬಲವಾಗುತ್ತಿದೆ. ಜಾತಿಯು ಭಾರತೀಯರ ಜೀವನದ ಎಲ್ಲೆಡೆ ಆವರಿಸಿಕೊಂಡಿರುವ ಅತ್ಯಂತ ದುರ್ದಮ್ಯ ಸಂಗತಿ. ಅದನ್ನು ಸೈದ್ಧಾಂತಿಕವಾಗಿ ಅಲ್ಲಗಳೆಯುವರೂ ಕೂಡ ವಾಸ್ತವ ಬದುಕಿನಲ್ಲಿ ಸ್ವೀಕರಿಸಿದ್ದಾರೆ. ಇಲ್ಲಿನ ಬದುಕೆಲ್ಲ ಜಾತಿಯ ಪರಿಧಿಯೊಳಗೆ ನಡೆಯುತ್ತದೆ. ಸುಸಂಸ್ಕೃತರು

ನಾಜೂಕಾಗಿ ಜಾತಿ ವ್ಯವಸ್ಥೆಯ ವಿರುದ್ಧ ಮಾತನಾಡಿದರು. "ಜಾತಿ ವ್ಯವಸ್ಥೆಯು ಯಾವುದೇ ನಿಯಮಿತ ಕಂತುಗಳಿಲ್ಲದ ಜಗತ್ತಿನ ಅತಿ ದೊಡ್ಡ ವಿಮೆಯಾಗಿದೆ ಎಂಬುದು ಸತ್ಯ ಸಂಗತಿಯಾಗಿದೆ."[3] ಎಂ.ಎನ್. ಶ್ರೀನಿವಾಸ್ ಅವರು "ಹಿಂದೂಗಳಲ್ಲಿ ಬಹುಸಂಖ್ಯಾತ ಜನರು ಜಾತಿ ಮರೆಯಾಗುವುದನ್ನು ಇಚ್ಛಿಸಲಾರರು, ಕಾರಣ ಜಾತಿಯ ಹೊರತಾದ ಸಾಮಾಜಿಕ ವ್ಯವಸ್ಥೆಯನ್ನು ಕಲ್ಪಿಸಿಕೊಳ್ಳುವುದು ಅವರಿಗೆ ಅಸಾಧ್ಯವೆಂದು ತಿಳಿಸಿದ್ದಾರೆ."[4] ಇದೆಲ್ಲವನ್ನು ಗಮನಿಸಿದರೆ ಭಾರತೀಯ ಸಮಾಜವು ಜಾತಿರಹಿತವಾಗುವುದು ಸಾಧ್ಯವಿಲ್ಲ. ಬದಲಾದ ಸಾಮಾಜಿಕ ಚಲನೆಯಿಂದಾಗಿ ಜಾತಿವ್ಯವಸ್ಥೆ ಮೇಲ್ನೋಟಕ್ಕೆ ನಶಿಸುತ್ತಿದೆ ಎನ್ನಿಸುತ್ತದೆ. ವಾಸ್ತವದಲ್ಲಿ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಾದ ಪರಿವರ್ತನೆಗಳು ಜಾತಿ ವ್ಯವಸ್ಥೆಯನ್ನು ಸಡಿಲಿಸಿವೆ ಎನ್ನಬಹುದು. ಅಂತಿಮವಾಗಿ ಹೇಳುವುದಾದರೆ ಭಾರತೀಯರು ಜಾತಿ ವ್ಯವಸ್ಥೆಯ ಕಟ್ಟುಪಾಡುಗಳನ್ನು, ನಿರ್ಬಂಧನೆಗಳನ್ನು ಅನುಸರಿಸಲಾಗದೆ, ಜಾತಿಯನ್ನು ಬಿಡಲಾಗದೇ ಬದಲಾದ ಪರಿಸ್ಥಿತಿಯಲ್ಲಿ ಮುಂದುವರಿಸಿಕೊಂಡು ಬಂದಿದ್ದಾರೆ. ಭಾರತದಲ್ಲಿ ಜಾತಿಯು ದುರ್ಬಲವಾಗದೇ ಮತ್ತಷ್ಟು ಬಲಯುತವಾಗುತ್ತಾ ಆಧುನಿಕ ಶಸ್ತ್ರಾಸ್ತ್ರಗಳಿಗೂ ಭಾಗದೇ ಗಟ್ಟಿಯಾಗಿಯೇ ಉಳಿದಿದೆ ಎಂದು ಸಮಾಜಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ಒಟ್ಟಿನಲ್ಲಿ ಬದಲಾಗುವ ಪರಿಸ್ಥಿತಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತ ಜಾತಿ ವ್ಯವಸ್ಥೆಯು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಮುಂದುವರೆಯುತ್ತಿದೆ.

ಬ್ರಿಟಿಷರು ಭಾರತಕ್ಕೆ ಬಂದ ನಂತರ ಜಾತಿ ಪದ್ಧತಿಯ ಪ್ರಕ್ರಿಯೆಗೆ ಕೆಲ ಮಟ್ಟಿಗೆ ವ್ಯತಿರಿಕ್ತ ಪರಿಣಾಮ ಉಂಟಾಯಿತು. ಅದಕ್ಕಿಂತ ಮುಂಚೆ ಜಾತಿವರ್ಗಗಳ ಶ್ರೇಣೀಕರಣವು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿತ್ತು. ಜಾತಿಗಳು ವೃತ್ತಿಪರತೆಯನ್ನು ಅಷ್ಟಾಗಿ ಪ್ರಭಾವಿಸಿರಲಿಲ್ಲ ಅಥವಾ ಸಾಮಾಜಿಕ ಸ್ಥಾನಮಾನದ ಗುಂಪುಗಳನ್ನು ಸೃಷ್ಟಿಸಿರಲಿಲ್ಲ. ಭಾರತದ ಜಾತಿ ಪದ್ಧತಿಯನ್ನು ತಮ್ಮ ವರ್ಗದ ಶ್ರೇಣಿಗೆ ಬದಲಾಯಿಸಲು ಬ್ರಿಟಿಷರು ಯತ್ನಿಸಿದರು. ಜಾತಿಯು ಅವರ ವೃತ್ತಿ ಸೂಚಕವಾಗಿರಲಿ ಎಂದು ಅವರು ಭಾವಿಸಿದರು. ವೃತ್ತಿಯು ಸಾಮಾಜಿಕ ದರ್ಜೆ ಮತ್ತು ಬುದ್ಧಿಮತ್ತೆಯನ್ನು ಸಾಮರ್ಥ್ಯ ತೋರಲಿ ಎಂದು ಅವರು ವಿವರಿಸುತ್ತಿದ್ದರು. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಡಳಿತದಲ್ಲಿ ಆರಂಭಿಕವಾಗಿ ಜಾತಿಯ ಸೂಚಕಗಳು ಮತ್ತು ಆಚರಣೆಗಳಿಗೆ ಅವರು ಒತ್ತು ನೀಡಿದರು. ಆದರೆ ಕೆಳದರ್ಜೆಯ ಜಾತಿಗಳೊಂದಿಗಿನ ತಾರತಮ್ಯವನ್ನು ಬ್ರಿಟೀಷ್ ಕಾನೂನು ಒಪ್ಪಲಿಲ್ಲ. ಹೇಗಾದರೂ ಬ್ರಿಟಿಷರ ಒಡೆದು ಆಳುವ ನೀತಿಯೊಂದಿಗೆ ಜನರನ್ನು ಜಾತಿ ಕಟ್ಟಳೆಗೆ ಈಡು ಮಾಡಿದ್ದ ಬಗ್ಗೆ ಬ್ರಿಟಿಷರ ೧೦ ವರ್ಷಗಳ ಜನಗಣತಿಯ ಆಧಾರವು ತೋರ್ಪಡಿಸುತ್ತದೆ. ಬ್ರಿಟಿಷ್ ಆಡಳಿತ ವೇಳೆಯಲ್ಲಿ ಭಾರತದಲ್ಲಿ ಹಲವಾರು ಕೆಳದರ್ಜೆಯ ಜಾತಿ ಜನಾಂಗವು ಸಿಡಿದೆದ್ದವು. ಬಹುಮುಖ್ಯವಾಗಿ ಬುಡಕಟ್ಟು ಜನಾಂಗದವರು ಬ್ರಿಟಿಷರ ವಿರುದ್ಧ ತಿರುಗಿ ಬಿದ್ದರು. ಇದರಿಂದ ಬ್ರಿಟಿಷರು ಈ ಬುಡಕಟ್ಟುಗಳನ್ನು ಅಪರಾಧಿಗಳೆಂದು ಪರಿಗಣಿಸಿ ಅವರನ್ನು ಅಪರಾಧಿ ಸಮುದಾಯವನ್ನಾಗಿಸಿದರು. ಇದರಿಂದ ಈ ಸಮುದಾಯಗಳು ಅಪರಾಧಿ ಹಣೆಪಟ್ಟಿ ಹೊತ್ತುಕೊಂಡು, ಬ್ರಿಟಿಷರ ನೀತಿಯಿಂದ ಕಷ್ಟಕ್ಕೆ ಗುರಿಯಾಗಿ ಒಂದು ಕಡೆಯಿಂದ

ಮತ್ತೊಂದೆಡೆಗೆ ವಲಸೆ ಹೋಗುತ್ತ ನರಕದ ಸ್ಥಿತಿಯನ್ನು ಅನುಭವಿಸಲು ಪ್ರಾರಂಭಿಸಿದರು. ಇವರು ಮುಖ್ಯವಾಹಿನಿಗೆ ಬರಲಾಗದೇ, ಕಾಡಿನಲ್ಲೂ ಜೀವನ ಸಾಗಿಸಲು ಸಾಧ್ಯವಾಗದೆ ತ್ರಿಶಂಕುಗಳಾಗಿ ಎಲ್ಲರಿಂದ ಅಲಕ್ಷಿಸಲ್ಪಟ್ಟು ಅಲಕ್ಷಿತ ಅಥವಾ ನಿರ್ಲಕ್ಷಿತ ಸಮುದಾಯಗಳಾಗಿ ಬದುಕಲು ಪ್ರಾರಂಭಿಸಿದರು.

೩.೨. ಅಲಕ್ಷಿತ ಸಮುದಾಯಗಳ ಬದುಕಿನ ಹರವುಗಳು

ಪ್ರತಿಯೊಂದು ಅಲಕ್ಷಿತ ಸಮುದಾಯಗಳಿಗೆ ಅವರ ವೃತ್ತಿಯನ್ನಾಧರಿಸಿ ಹೆಸರು ಬಂದಿರುವುದನ್ನು ಗಮನಿಸಬಹುದಾಗಿದೆ. ಸಮುದಾಯದ ಹೆಸರು ಇವರ ಕಾಯಕ ಜೀವನವನ್ನು ನಿರ್ಣಯಿಸುತ್ತದೆ. ಅಲಕ್ಷಿತರು ಮೌಖಿಕವಾಗಿ ಬಂದಂತಹ ಪೌರಾಣಿಕ ಕಥನವನ್ನು ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಿಕೊಂಡು ಬಂದಿರುತ್ತಾರೆ. ಪೌರಾಣಿಕ ಕಥನಕ್ಕೆ ಹೆಚ್ಚಿನ ಮಹತ್ವವನ್ನು ನೀಡುತ್ತಾರೆ. ಇವರ ಮೂಲಸ್ಥಾನ ಒಂದು ಕಡೆಯಾದರೆ ಪರಿಸರದ ಸನ್ನಿವೇಶ ಹಾಗೂ ಜೀವನಾಧಾರಕ್ಕಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ವಲಸೆ ಬಂದಿರುತ್ತಾರೆ. ಇವರು ಹೆಚ್ಚಾಗಿ ಕಾಡುಗಳು, ಕಾಡಿನ ಅಂಚು, ಮೈದಾನ, ಊರಿನ ಹೊರಗೆ ನದಿ ಸಮೀಪ ವಾಸ್ತವ್ಯ ಮಾಡುತ್ತಾರೆ. ಮೇಲ್ವರ್ಗದ ಸಮುದಾಯಗಳು ವಾಸಿಸುವ ಪ್ರದೇಶದಿಂದ ದೂರದಲ್ಲಿ ಜೀವನ ನಿರ್ವಹಣೆ ಮಾಡುತ್ತಾರೆ. ಇವರ ಜನಸಂಖ್ಯಾ ಪ್ರಮಾಣ ಕಡಿಮೆ ಇದ್ದು, ಅಲ್ಲಲ್ಲಿ ಹರಿದುಹಂಚಿ ಹೋಗಿರುತ್ತಾರೆ. ಇವರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭೌಗೋಳಿಕ ಹಿನ್ನೆಲೆ, ಕಾಲಮಾನವನ್ನು ಆಧರಿಸಿ ಅಲೆಮಾರಿತನವನ್ನು ನಡೆಸುತ್ತಾ ಜೀವಿಸುತ್ತಿದ್ದಾರೆ.

ಸಾಮಾಜಿಕ ಬದುಕಿನ ಹರವುಗಳು

ಅಲಕ್ಷಿತರ ಕುಟುಂಬಗಳು ಮೂಲಸ್ಥಾನದ ಆಧಾರದ ಮೇಲೆ ವಂಶಾವಳಿ ಉಪನಾಮವನ್ನು ಹೊಂದಿರುತ್ತಾರೆ. ಇವರಲ್ಲಿನ ಬಳಿಗಳು/ಉಪಪಂಗಡಗಳು ಹೆಚ್ಚಾಗಿ ನಿಸರ್ಗದಲ್ಲಿನ ಪ್ರಾಣಿ, ಪಕ್ಷಿ, ಮರ ಮುಂತಾದವುಗಳ ಹೆಸರನ್ನು ಹೊಂದಿರುತ್ತದೆ. ಇವರು ವಿಧಿ-ನಿಷೇಧಗಳನ್ನು ಕಟ್ಟುನಿಟ್ಟಾಗಿ ಆಚರಿಸುತ್ತಾರೆ. ಮೂಢನಂಬಿಕೆಯಲ್ಲಿ ಅತಿಯಾದ ನಂಬಿಕೆಯುಳ್ಳವರಾಗಿರುತ್ತಾರೆ. ಅಲಕ್ಷಿತ ಸಮುದಾಯಗಳು ಸುಸೂತ್ರವಾಗಿ ಜೀವನ ನಿರ್ವಹಣೆ ಮಾಡಲು ತಮ್ಮದೇ ಆದ ನ್ಯಾಯ ಪಂಚಾಯತಿಯನ್ನು ಹೊಂದಿರುತ್ತವೆ. ನ್ಯಾಯ ತೀರ್ಮಾನ ಮಾಡುವ ಬಗೆಗಳು ಸಮುದಾಯದಿಂದ ಸಮುದಾಯಕ್ಕೆ ವ್ಯತ್ಯಾಸವಿರುತ್ತದೆ. ಆದರೆ ಸಮುದಾಯದ ಜನರು ನ್ಯಾಯ ತೀರ್ಮಾನಕ್ಕೆ ತಲೆಬಾಗುತ್ತಾರೆ. ಒಂದು ವೇಳೆ ನ್ಯಾಯ ಪಂಚಾಯತಿಯ ತೀರ್ಮಾನವನ್ನು ತಿರಸ್ಕರಿಸಿದರೆ ಅವರನ್ನು ಸಮುದಾಯದಿಂದ ಬಹಿಷ್ಕರಿಸುತ್ತಾರೆ.

ಮಾನವ ಜೀವನ ನಂಬಿಕೆಯ ಆಧಾರದ ಮೇಲೆ ನಿಂತಿದೆ. ಅಲಕ್ಷಿತರೂ ಇದಕ್ಕೆನೂ ಹೊರತಲ್ಲ. ಇವರಲ್ಲಿ ಅತಿಯಾದ ಮೂಢನಂಬಿಕೆಗಳಿರುತ್ತದೆ. ಇವರಿಗೆ ನಂಬಿಕೆ ಮತ್ತು ಮೂಢ ನಂಬಿಕೆಯ ವ್ಯತ್ಯಾಸ ತಿಳಿಯದ ಸ್ಥಿತಿಗೆ ತಲುಪಿದ್ದಾರೆ. ಇದರಿಂದಾಗಿ ಮೇಲ್ವರ್ಗದ ಸಮುದಾಯಗಳು

ಅಲಕ್ಷಿತರ ಮೇಲೆ ದೌರ್ಜನ್ಯವೆಸಗಲು ಸಹಾಯಕಾರಿಯಾಗಿದೆ. ಆರೋಗ್ಯದ ವಿಚಾರದಲ್ಲೂ ಭೂತ, ಪಿಶಾಚಿ, ದೆವ್ವಗಳ ಕಾಟವೆಂದು ಮಾಟ, ಮಂತ್ರ, ಮರೂಢಿಗಳತ್ತ ಸಾಗುತ್ತಾರೆ. ಆಧುನಿಕ ಸಮಾಜದ ವೈದ್ಯಕೀಯ ವ್ಯವಸ್ಥೆ ಇನ್ನೂ ಇವರಿಂದ ದೂರದಲ್ಲಿದೆ.

ಧಾರ್ಮಿಕ ಬದುಕಿನ ಹರವುಗಳು

ಹಿಂದುಗಳ ಹಬ್ಬಗಳಾದ ಗಣೇಶ ಹಬ್ಬ, ಸಂಕ್ರಾಂತಿ, ಆಷಾಢಹಬ್ಬ, ದೀಪಾವಳಿ, ತುಳಸಿ ಪೂಜೆ ಹಾಗೂ ಮುಸ್ಲಿಂ ಹಬ್ಬಗಳಾದ ರಂಜಾನ್, ಮೊಹರಂ ಮುಂತಾದವುಗಳನ್ನು ಆಚರಿಸುವ ಅಲಕ್ಷಿತ ಸಮುದಾಯಗಳಿವೆ. ಭೌಗೋಳಿಕ ಸ್ಥಿತಿಗೆ ಅನುಗುಣವಾಗಿ ಸಮುದಾಯಗಳಲ್ಲಿಯೇ ಆಚರಣೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಅಲಕ್ಷಿತರು ಹುಟ್ಟಿನಿಂದ ಸಾವಿನವರೆಗಿನ ಆಚರಣೆಗಳನ್ನು ಆಚರಿಸುತ್ತಾರೆ. ಇದು ಪ್ರತಿ ಅಲಕ್ಷಿತ ಸಮುದಾಯಗಳಲ್ಲಿ ವಿಭಿನ್ನವಾಗಿರುತ್ತದೆ ಹಾಗೂ ಅನೇಕ ಧಾರ್ಮಿಕ ಹಬ್ಬಗಳು, ದೇವತೆಗಳ ಆರಾಧನೆ, ವಾರ್ಷಿಕ ಆವರ್ತನೆಯ ಆಚರಣೆಗಳನ್ನು ಆಚರಿಸುತ್ತಾರೆ. ಅಲಕ್ಷಿತರ ಆಹಾರ ಪದ್ಧತಿಯೂ ವಿಭಿನ್ನವಾಗಿರುತ್ತದೆ. ಇವರು ಕಾಡಿನಲ್ಲಿ ದೊರೆಯುವ ಗಡ್ಡೆ, ಗೆಣಸು, ಪಶು, ಪಕ್ಷಿ, ಪ್ರಾಣಿಗಳನ್ನು ಆಹಾರವಾಗಿ ಬಳಸುತ್ತಾರೆ. ಕಾಡಿನ ವಿವಿಧ ಸಸ್ಯಗಳು, ಅವುಗಳ ಬೇರು, ತೊಗಟೆಗಳನ್ನು ನಾಟಿವೈದ್ಯ ಪದ್ಧತಿಯಲ್ಲಿ ಬಳಸಿಕೊಂಡು ರೋಗಗಳನ್ನು ಗುಣಪಡಿಸಿಕೊಳ್ಳುತ್ತಾರೆ.

ರಾಜಕೀಯ ಮತ್ತು ಶೈಕ್ಷಣಿಕ ಹರವುಗಳು

ಅಲಕ್ಷಿತರಲ್ಲಿ ಸಂಘಟನೆಗಳಿಲ್ಲ. ಸರ್ಕಾರದ ಸೌಲಭ್ಯಗಳನ್ನು ಪಡೆಯುವಲ್ಲಿ ವಿಫಲರಾಗಿದ್ದಾರೆ. ರಾಜಕೀಯ ಕ್ಷೇತ್ರಕ್ಕೆ ಕಾಲಿಡಲು ಸಾಧ್ಯವಾಗುತ್ತಿಲ್ಲ. ಇವರಿಗೆ ಅವಕಾಶಗಳ ಕೊರತೆಯೂ ಇದೆ. ಇಂದಿನ ದಿನದಲ್ಲಿ ಕೇವಲ ಮೀಸಲಾತಿಯ ಆಧಾರದ ಮೇಲೆ ಗ್ರಾಮ ಪಂಚಾಯತಿ, ಪಟ್ಟಣ ಪಂಚಾಯತಿಯ ಸದಸ್ಯರಾಗಿರುವುದನ್ನು ಅಲ್ಲೊಂದು ಇಲ್ಲೊಂದು ಕಾಣಬಹುದಾಗಿದೆ. ಇಲ್ಲಿಯೂ ಇವರಿಗೆ ಯಾವುದೇ ಸ್ವಾತಂತ್ರ್ಯವಿಲ್ಲ. ಉಳಿದ ಮೇಲ್ವರ್ಗದ ಸದಸ್ಯರ ತೀರ್ಮಾನಕ್ಕೆ ತಲೆದೂಗುವ ಕೆಲಸ ಮಾಡಬೇಕಾಗಿರುತ್ತದೆ. ಅಲಕ್ಷಿತರಲ್ಲಿ ಒಳ್ಳೆಯ ರಾಜಕೀಯ ಮುತ್ಸದ್ದಿಗಳು ಇನ್ನೂ ಚಾಲ್ತಿಗೆ ಬಂದಿಲ್ಲ.

ಅಲಕ್ಷಿತರು ಶಿಕ್ಷಣ ವಂಚಿತರು. ಇವರು ದಿನದ ಊಟಕ್ಕೆ ಹೊಂದಿಸುವಲ್ಲಿ ಹೆಣಗಾಡುತ್ತಿರುವಾಗ ಶಿಕ್ಷಣಕ್ಕೆ ಮಹತ್ವ ನೀಡುವುದಾದರೂ ಹೇಗೆ?. ಚಿಕ್ಕ ಮಕ್ಕಳನ್ನು ತಮ್ಮ ಜೊತೆ ಕೂಲಿಗೆ, ಭಿಕ್ಷೆಗೆ ಕರೆದೊಯ್ಯುತ್ತಾರೆ. ಅಲೆಮಾರಿಗಳಾದ ಇವರು ಒಂದು ಕಡೆ ನೆಲೆ ನಿಲ್ಲದ್ದರಿಂದ ಇವರ ಮಕ್ಕಳು ಶಿಕ್ಷಣದಿಂದ ದೂರ ಇರುತ್ತಾರೆ. ಇಂದಿನ ಸರ್ವಶಿಕ್ಷಣ ಅಭಿಯಾನದಿಂದ ಹಲವು ಮಕ್ಕಳು ಶಿಕ್ಷಣದತ್ತ ಬರುತ್ತಿದ್ದಾರೆ.

ಕೃಷಿ-ಭೂ ಹಿಡುವಳಿ- ಪಶುಪಾಲನೆಯ ಹರವುಗಳು

ಕೃಷಿಯಲ್ಲಿ ನಿಪುಣತೆಯನ್ನು ಹೊಂದಿರುವ ಭಾರತದ ಸಮುದಾಯಗಳಿಗೆ ಸ್ವಲ್ಪವೂ ಭೂ ಒಡೆತನವಿರುವುದಿಲ್ಲ. ಹಾಗೆಯೇ ಅಲಕ್ಷಿತರೂ ಸಹ ಭೂ ಒಡೆತನದ ವಂಚಿತರು. ಸರ್ಕಾರಿ

ಸೌಮ್ಯ ದೊರೆಯದೆ ಇನ್ನೂ ಕೂಲಿಯನ್ನೇ ಅವಲಂಬಿಸಿದ ಕುಟುಂಬಗಳಿವೆ. ಇಂದಿನ ದಿನದಲ್ಲಿ ಯುವ ಪೀಳಿಗೆ ವ್ಯಾಪಾರಿ ಮಳಿಗೆಯಲ್ಲಿ, ಕೈಗಾರಿಕೆಯಲ್ಲಿ, ಹೋಟೆಲ್‌ಗಳಲ್ಲಿ ದಿನಗೂಲಿಗಳಾಗಿ ದುಡಿಯುತ್ತಿದ್ದಾರೆ. ಅಲಕ್ಷಿತರು ಇಂದಿನ ದಿನಗಳಲ್ಲಿ ಕೋಳಿ, ಕುರಿ, ಎಮ್ಮೆ, ಹಸು, ಹಂದಿಗಳನ್ನು ಸಾಕುತ್ತಾರೆ. ಹಿಂದೆ ಕತ್ತೆ ಮತ್ತು ನಾಯಿಯನ್ನು ಸಾಕುತ್ತಿದ್ದರು. ಕೆಲವರು ಹಸು, ಎಮ್ಮೆ, ಕುರಿಗಳನ್ನು ಸಾಕಿ ಜೀವನ ನಿರ್ವಹಣೆ ಮಾಡಿಕೊಳ್ಳುತ್ತಿದ್ದಾರೆ.

ಅಲಕ್ಷಿತರ ಅಭಿವೃದ್ಧಿಗಾಗಿ ರೂಪಿಸಿದ ಸರ್ಕಾರದ ಯೋಜನೆಗಳು ಫಲಪ್ರದವಾಗಿಲ್ಲ. ಸರ್ಕಾರದ ಯಾವ ಸೌಲಭ್ಯಗಳೂ ಸರಿಯಾಗಿ ಅಲಕ್ಷಿತರನ್ನು ತಲುಪುತ್ತಿಲ್ಲ. ಅಲಕ್ಷಿತರ ಪ್ರಗತಿಯ ಹೆಸರಿನಲ್ಲಿ ನಿರಂತರ ಶೋಷಣೆಗಳು ನಡೆಯುತ್ತವೆ. ಇದರಿಂದ ಅಲಕ್ಷಿತರ ಜೀವನಮಟ್ಟ ಉನ್ನತಮಟ್ಟದಲ್ಲಿಲ್ಲ.

ವೃತ್ತಿ ಜೀವನ ಹಾಗೂ ಆಹಾರ ಸಂಗ್ರಹಣೆಯ ಹರವುಗಳು

ಅಲಕ್ಷಿತ ಸಮುದಾಯ ಬರುಬರುತ್ತ ಅಲೆಮಾರಿತನ ಬಿಟ್ಟು ಅರೆ ಅಲೆಮಾರಿಗಳಾಗುತ್ತಿದಂತೆಯೇ ಕೂಲಿ ಕೆಲಸಗಳಿಗೆ, ಕೃಷಿ ಒಕ್ಕಲುತನಕ್ಕೆ ಮುಂದಾಗತೊಡಗಿದರು. ಹೆಂಗಸರು ಹೆಚ್ಚಾಗಿ ಕೌದಿಯನ್ನು ಹೊಲಿಯುತ್ತಾರೆ. ಸಮುದಾಯದಲ್ಲಿ ನೀರಾವರಿ ಬೇಸಾಯ, ಒಣಬೇಸಾಯ ಮಾಡುವ ಜನರಿದ್ದಾರೆ. ಬೆಂಗಳೂರಿನಂತಹ ನಗರಗಳಲ್ಲಿ ಹೋಟೆಲ್ ಉದ್ದಿಮೆಗೆ ಇಳಿದಿರುವವರು ಇದ್ದಾರೆ. ಚಿಕ್ಕಪುಟ್ಟ ಅಂಗಡಿಳನ್ನಿಟ್ಟುಕೊಂಡು ಕಿರಾಣಿ ವ್ಯಾಪಾರ ಮಾಡುವವರು ಇದ್ದಾರೆ. ಶಿಕ್ಷಣದ ಸವಲತ್ತು ಮೀಸಲಾತಿಯ ಲಾಭದಿಂದಾಗಿ ಸರ್ಕಾರದ ಬೇರೆ ಬೇರೆ ಇಲಾಖೆಗಳಲ್ಲಿ, ಖಾಸಗಿ ಉದ್ದಿಮೆಗಳಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ ಅನೇಕರು ಇಂದು ವೃತ್ತಿಜೀವನಕ್ಕೆ ಇಳಿದಿದ್ದಾರೆ. ಭಿಕ್ಷಾಟನೆ ಪೂರ್ತಿ ಮರೆಯಾಗದಿದ್ದರೂ ಬಹುತೇಕರು ಅದರಿಂದ ಹಿಂದೆ ಸರಿಯುತ್ತಿದ್ದಾರೆ. ಮೂಲ ಕಸುಬು ಬಿಟ್ಟು ಕೂಲಿ, ಕೃಷಿ, ಸಣ್ಣಪುಟ್ಟ ವ್ಯಾಪಾರ, ಚಿಂದಿ ಪ್ಲಾಸ್ಟಿಕ್ ಆರಿಸುವುದು ಇನ್ನಿತರ ಉದ್ಯೋಗಗಳಿಗೆ ಸ್ಥಿತ್ಯಂತರಗೊಳ್ಳುತ್ತಿದ್ದಾರೆ.

ಮೊದಲು ಅಲೆಮಾರಿಗಳಾಗಿದ್ದ ಸಮಯದಲ್ಲಿ ಭಿಕ್ಷೆ ಬೇಡುತ್ತಿದ್ದಾಗ ಆಹಾರ ಪದಾರ್ಥಗಳ ಸಂಗ್ರಹವೇ ಆಗುತ್ತಿರಲಿಲ್ಲ. ಅಂದಂದಿನ ಗಳಿಕೆ ಅಂದಂದಿಗೆ ಸಾಕಾಗುತ್ತಿತ್ತು. ಹೆಚ್ಚೆಂದರೆ ಒಡವೆ, ವಸ್ತ್ರಗಳನ್ನು ಜೋಪಾನವಾಗಿ ಇಟ್ಟುಕೊಳ್ಳುತ್ತಿದ್ದರು. ಅದಕ್ಕೆ ಅರಿವೆಯ ಗಂಟು ಇಲ್ಲವೇ ಕಟ್ಟಿಗೆಯ ಸಂದೂಕ ಇರುತ್ತಿತ್ತು. ಅದರಲ್ಲಿಯೇ ಆಹಾರಕ್ಕೆ ಬೇಕಾಗುವ ಹೆಚ್ಚಾಗಿ ಬೇಳೆ ಕಾಳು ಮತ್ತು ಪದಾರ್ಥಗಳನ್ನು ಇಟ್ಟುಕೊಳ್ಳುತ್ತಿದ್ದರು ಮತ್ತು ಅರೆಅಲೆಮಾರಿಗಳಾಗಿ ನಿಂತ ಸಮಯದಲ್ಲಿ ಸಂಗ್ರಹಕ್ಕೆ ಮಹತ್ವ ನೀಡತೊಡಗಿದರು. ಆಹಾರ ಸಂಗ್ರಹಣೆಯಷ್ಟೇ ಸಂರಕ್ಷಣೆಯೂ ಅಗತ್ಯವಾದುದಾಗಿದೆ. ಸುರಕ್ಷಿತ ಮನೆ, ಅಗತ್ಯವಾದ ಸಲಕರಣೆಗಳು ಇಲ್ಲದ ಇವರಿಗೆ ತಮ್ಮದೇ ರೀತಿಯಲ್ಲಿ ಆಹಾರ ಪದಾರ್ಥಗಳನ್ನು ಸಂರಕ್ಷಿಸಿಡುವ ಕೆಲವು ವಿಧಾನಗಳಿವೆ. ಭತ್ತ, ಗೋಧಿ ಮತ್ತು ಸದುಕನ್ನು ಕುಟ್ಟಿ ಅಕ್ಕಿ ತೆಗೆಯದೇ ಕಾಳುಗಳ ಸಹಿತ ಹಾಗೇ ಗಡಿಗೆ, ಬಿಸ್ಕಟ್ ಡಬ್ಬಿ, ಗೋಣಿಚೀಲಗಳಲ್ಲಿ ತುಂಬಿಡುತ್ತಿದ್ದರು. ಕುಟ್ಟಿ ಕಾಳು ಮಾಡಿಟ್ಟರೆ ಅವು ನುಸಿ ಇಲ್ಲವೇ ಬಾಲಹುಳು ತಿಂದು ಹಾಳಾಗುತ್ತಿದ್ದವು. ಅದಕ್ಕಾಗಿ ಕಾಳುಗಳನ್ನು ಕುಟ್ಟದೇ ತಮಗೆ ಬೇಕಾದಾಗ ಕುಟ್ಟಿ ಕಾಳು

ಮಾಡಿಕೊಳ್ಳುತ್ತಾರೆ. ಇವರಲ್ಲಿ ಮತ್ತೊಂದು ತರಹದ ಸಂಗ್ರಹಣಾ ವಿಧಾನವಿದೆ. ಇದು ಸಂಗ್ರಹಣೆ ಇಲ್ಲದಿದ್ದರೂ ಸಂರಕ್ಷಣೆಯ ವಿಧಾನವಾಗಿದೆ. ತಮ್ಮಲ್ಲಿರುವ ಕಾಳು-ಕಡಿ, ಹಿಟ್ಟು-ನುಚ್ಚು ಮುಂತಾದವುಗಳನ್ನು ತಮ್ಮ ನೆರೆಹೊರೆಯವರು ಬೇಡಿದಾಗ ಕೊಡುವುದು ಹಾಗೂ ತಮಗೆ ಬೇಕಾದಾಗ ಪಡೆಯುವುದು. ಹೀಗೆ ಅನೇಕ ತಿಂಗಳುಗಳು ನಡೆಯುತ್ತದೆ. ಇದರಿಂದ ಎಲ್ಲರೂ ಹಂಚಿ ತಿಂದಹಾಗೆ ಆಗುತ್ತದೆ.

೩.೩. ಅಲಕ್ಷಿತ ಸಮುದಾಯಗಳ ಗುಣಲಕ್ಷಣಗಳು

ಅಲಕ್ಷಿತ ಸಮುದಾಯಗಳು ತಮ್ಮದೇ ಆದ ಅನೇಕ ಗುಣ ಲಕ್ಷಣಗಳನ್ನು ಹೊಂದಿದ್ದಾರೆ. ಅವುಗಳು

* ಅಲಕ್ಷಿತರು ಸರಳ ಜೀವಿಗಳು. ಇವರು ಹೆಚ್ಚಾಗಿ ಕಾಡಿನಲ್ಲಿ, ಕಾಡಿನ ಅಂಚಿನಲ್ಲಿ, ಹಾಳು ಗುಡಿ ಗುಂಡಾರಗಳಲ್ಲಿ, ಬಯಲಿನಲ್ಲಿ, ಗಿಡಮರಗಳ ಕೆಳಗೆ, ನಗರದ ಕೊಳಚೆ ಪ್ರದೇಶದಲ್ಲಿ ಗುಡಾರಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಾರೆ.
* ಅಲಕ್ಷಿತರು ಹೆಚ್ಚಾಗಿ ಮರಗು ಭಾಷೆಯನ್ನು ಆಡುತ್ತಾರೆ. ಇದು ಅವರ ಮಾತೃ ಭಾಷೆಯಾಗಿರುತ್ತದೆ.
* ಸರ್ವಚೇತನವಾದಿಗಳು, ಪ್ರಕೃತಿಯೊಂದಿಗೆ ನಿಕಟ ಸಂಬಂಧ ಹೊಂದಿದವರು ಹಾಗೂ ಅಗೋಚರ ಶಕ್ತಿಗಳ ಸಿದ್ಧಿ ಪಡೆದವರಾಗಿರುತ್ತಾರೆ.
* ಪಾರಂಪರಿಕ ವೃತ್ತಿಗಾಗಿ ವನ್ಯಜೀವಿಗಳ ಬೇಟೆ, ಪಳಗಿಸುವಿಕೆ ಮತ್ತು ಪ್ರದರ್ಶನ ಮಾಡುವುದು ಇವರ ಕುಲ ಕಸುಬಾಗಿರುತ್ತದೆ.
* ಪಶುಪಾಲನೆ, ನಾಟಿವೈದ್ಯ, ಕಲಾ ಪ್ರದರ್ಶನ, ದೈವಾರಾಧನೆ, ಪ್ರದರ್ಶನ ಮತ್ತು ಭಿಕ್ಷಾಟನೆ ಇತ್ಯಾದಿಗಳಿಗಾಗಿ ಅಲೆಮಾರಿತನವನ್ನು ನಡೆಸುತ್ತಾರೆ. ಉದಾಹರಣೆಗೆ ಕರಡಿ, ಕೋತಿ, ಹಾವು, ನಂದಿಗಳ ಪ್ರದರ್ಶನ, ಕುರಿ, ಕತ್ತೆ, ಮೇಕೆ, ಹಂದಿ, ಒಂಟೆಗಳ ಪಾಲನೆ, ಹಗಲುವೇಷ, ಬುರ್ರಾಕಥೆ, ತೊಗಲುಗೊಂಬೆಯಾಟ, ದೊಂಬರಾಟ, ಗೋಂಧಳ, ದಾಸರಪದ, ಯಕ್ಷಗಾನ, ಬಯಲಾಟ, ದೈವಾರಾಧನೆಯಂಥ ಪ್ರದರ್ಶನ.
* ನಾಟಿವೈದ್ಯ, ವಿವಿಧ ಗಿಡಮೂಲಿಕೆಗಳ ಮಾರಾಟ, ಸಣ್ಣಮಟ್ಟ ವಸ್ತುಗಳ ಮಾರಾಟ ಮತ್ತು ರಿಪೇರಿ, ಚಿಂದಿ ಆಯುವುದು ಹಾಗೂ ಪ್ಲಾಸ್ಟಿಕ್ ವಸ್ತುಗಳನ್ನು ಆಯ್ದು ಮಾರಾಟ ಮಾಡಲು ಅಲೆಮಾರಿತನ ನಡೆಸುವುದು.
* ಬಡತನದಿಂದ ಹೊಟ್ಟೆ, ಬಟ್ಟೆಗಾಗಿ ಭಿಕ್ಷೆ ಬೇಡುತ್ತ ಅಲೆಯುವುದು.
* ನಿರಾಡಂಬರ ಜೀವನಶೈಲಿಯನ್ನು ಹೊಂದಿರುವುದು.
* ನಿರಕ್ಷರಸ್ಥರೂ ಹಾಗೂ ಕಪಟ ಮನಸ್ಸನ್ನು ಹೊಂದಿಲ್ಲದವರು.

* ಬಂಡವಾಳ ಶೂನ್ಯ ಅಥವಾ ಅಲ್ಪ ಬಂಡವಾಳದ ಶ್ರಮ ಜೀವಿಗಳು.
* ಆರ್ಥಿಕ ಭದ್ರತೆ ಹೊಂದಿಲ್ಲದವರು.
* ರಾಜಕೀಯ ಹಾಗೂ ಸಾಮಾಜಿಕ ಅಭದ್ರತೆಯಿಂದ ಬಾಳ್ವೆ ನಡೆಸುವವರು.
* ಅಪರಾಧಿ ಸಮುದಾಯಗಳೆಂದು ಹೆಸರಾದವರು.
* ಕಡಿಮೆ ಜನಸಂಖ್ಯೆಯನ್ನು ಹೊಂದಿದವರು ಹಾಗೂ ಸಂಘಟನಾ ವ್ಯವಸ್ಥೆಯಿಂದ ದೂರವಿರುವವರು.
* ಮೌಖಿಕ ಕಲೆ, ಕಾವ್ಯ, ನೃತ್ಯಗಳ ಪರಿಣಿತರು.
* ಮೂಢನಂಬಿಕೆಯಲ್ಲಿ ಅತಿಯಾದ ಶ್ರದ್ಧೆಯನ್ನು ಹೊಂದಿದವರು.
* ಮೇಲ್ವರ್ಗದ ಸಮುದಾಯಗಳಿಂದ ಅಸ್ಪೃಶ್ಯರೆನಿಸಿಕೊಂಡವರು.
* ಕೃಷಿಭೂಮಿಯನ್ನು ಹೊಂದಿಲ್ಲದವರು.
* ಆಧುನಿಕ ಸಮಾಜದಿಂದ ದೂರ ಇರುವವರು.
* ಭಾರತ ದೇಶದ ಮೂಲಭೂತ ನಾಗರಿಕ ಸೌಲಭ್ಯಗಳಿಂದ ಹಾಗೂ ಹಕ್ಕುಗಳಿಂದ ವಂಚಿತರಾದವರು.
* ಸಮಾಜದ ಮೇಲ್ವರ್ಗದ ಸಮುದಾಯಗಳಿಂದ ಶೋಷಣೆಗೆ ಒಳಗಾದವರು.
* ವಿಭಿನ್ನ ಶಾರೀರಿಕ ಲಕ್ಷಣ, ವಿಭಿನ್ನ ಉಡುಗೆ-ತೊಡುಗೆ, ವಿಭಿನ್ನ ಸಾಮಾಜಿಕ ಜೀವನ ನಡೆಸುವ ಹಾಗೂ ವಿಭಿನ್ನ ಆಹಾರ ಪದ್ಧತಿಯನ್ನು ಹೊಂದಿದವರು.
* ಪೂರ್ವಜರಲ್ಲಿ ನಂಬಿಕೆಯುಳ್ಳವರು.
* ತಮ್ಮ ಒಳಪಂಗಡಗಳಲ್ಲಿ ವಿವಾಹವನ್ನು ಮಾಡಿಕೊಳ್ಳುವವರು.
* ತಮ್ಮದೇ ಆದ ನ್ಯಾಯ ಪಂಚಾಯತಿಯನ್ನು, ಸಾಂಪ್ರದಾಯಿಕ ಆಡಳಿತವನ್ನು ಹೊಂದಿದವರು.

ಅಲಕ್ಷಿತರಲ್ಲಿ ಇನ್ನೂ ಅನೇಕ ವಿಭಿನ್ನ ಲಕ್ಷಣಗಳನ್ನು ಕಾಣಬಹುದಾಗಿದೆ.

೩.೪. ಅಲಕ್ಷಿತ ಸಮುದಾಯಗಳು ಮತ್ತು ಜಾಗತೀಕರಣದ ಪ್ರಜ್ಞೆ

ಜಾಗತೀಕರಣ ಎನ್ನುವುದು ಇಂದಿನ ಕಾಲದ ಬಹುದೊಡ್ಡ ಪ್ರಭಾವ ಮತ್ತು ಪ್ರಕ್ರಿಯೆ. ಜಾಗತೀಕರಣ ಮೊದಲು ಕೇವಲ ಆರ್ಥಿಕತೆಗೆ ಮಾತ್ರ ಸೀಮಿತವಾಗಿತ್ತು. ನಂತರ ಸಾಂಸ್ಕೃತಿಕ ವಲಯಕ್ಕೂ ಕಾಲಿರಿಸಿದೆ. ಇದು ಜಗತ್ತನ್ನು ಚಿಕ್ಕದಾಗಿಸುವುದರ ಜೊತೆಗೆ ವಿಶ್ವವೇ ಒಂದು ಎನ್ನುವ ಪ್ರಜ್ಞೆಯನ್ನು ಮಾಡಿಸಿದೆ. ಜಾಗತೀಕರಣದಿಂದಾಗಿ ಇಂದು ಪ್ರತಿಯೊಂದು ರಾಷ್ಟ್ರಗಳ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ವಿನಿಮಯ ಪ್ರಕ್ರಿಯೆ ನಡೆಯುತ್ತದೆ. ನಮ್ಮ ದೇಶದ

ಮುಖ್ಯವಾಹಿನಿಯ ಸಮುದಾಯಗಳು ಜಾಗತೀಕರಣದಿಂದ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿದ್ದಾರೆ. ಆಹಾರ, ಉಡುಗೆ, ತೊಡುಗೆ, ಜೀವನ ಶೈಲಿ ಎಲ್ಲವೂದರ ಮೇಲೂ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವವಾದುದನ್ನು ಕಾಣಬಹುದಾಗಿದೆ. ನಮ್ಮ ದೇಶದ ಮೂಲ ಸಂಸ್ಕೃತಿಗಳೂ ಮರೆಯಾಗತೊಡಗಿದೆ.

ಅಲಕ್ಷಿತರು ಇಂದಿಗೂ ಮುಖ್ಯವಾಹಿನಿಗೆ ಬರದೆ ಹಿಂದೆ ಸಾಗುತ್ತಿದ್ದಾರೆ. ಇವರಿಗೆ ಮುಖ್ಯವಾಹಿನಿಯ ಸಂಸ್ಕೃತಿಯೇ ದೊರಕಿಲ್ಲ. ಹೀಗಿರುವಾಗ ಇವರು ಜಾಗತೀಕರಣಕ್ಕೆ ಹೊಂದಿಕೊಳ್ಳುವುದು ಕಷ್ಟಸಾಧ್ಯ. ಆದರೂ ಜಾಗತೀಕರಣದ ಬಿಸಿ ಅಲಕ್ಷಿತ ಸಮುದಾಯಗಳನ್ನು ತಟ್ಟಿದೆ. ಇಂದು ಅಲಕ್ಷಿತ ಸಮುದಾಯದ ಜನರು ಜಂಗಮವಾಣಿಯನ್ನು ಬಳಸುವುದು, ಟಿ.ವಿ ನೋಡುವುದು, ಸಿನಿಮಾಗಳನ್ನು ನೋಡುವುದು, ಆಧುನಿಕ ವಿದ್ಯುತ್ ಉಪಕರಣಗಳನ್ನು ಬಳಸಲು ಪ್ರಾರಂಭಿಸಿದ್ದಾರೆ. ಆದರೆ ಇದರಿಂದ ಅಲಕ್ಷಿತರ ಜೀವನ ಮಟ್ಟವೇನು ಬದಲಾಗಿಲ್ಲ. ಹೊರತು ಕೆಲವರು ಆಧುನಿಕತೆಯ ಅನುಕರಣೆಗೆ ತೊಡಗಿದ್ದಾರೆ. ಕೆಲವು ಅಲಕ್ಷಿತರು ಇಂದು ಉನ್ನತ ವಿದ್ಯಾಭ್ಯಾಸದತ್ತ ಒಲವು ತೋರಿಸುತ್ತಿದ್ದಾರೆ.

ಅತ್ಯಂತ ಅಪರಿಚಿತವಾದ ಭಾಷೆ, ಆಹಾರ, ವೇಷಭೂಷಣ, ಬಳಕೆಯ ವಸ್ತುಗಳು ಜಾಗತಿಕ ಮಾರುಕಟ್ಟೆಯ ಮೂಲಕ ಸ್ಥಳೀಯ ಸಂಸ್ಕೃತಿಯನ್ನು ಕೆಳಮಟ್ಟಕ್ಕೆ ತಳ್ಳುತ್ತಿದೆ. ಭೋಗ ಸಂಸ್ಕೃತಿ ಮತ್ತು ಭೌತ ಸಂಸ್ಕೃತಿಗಳ ಅಬ್ಬರಕ್ಕೆ ಅಭೌತ ಸಂಸ್ಕೃತಿ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿದೆ.

ಜಾಗತೀಕರಣದಿಂದಾಗಿ ಅಲಕ್ಷಿತ ಸಮುದಾಯಗಳ ಸಂಸ್ಕೃತಿಯ ಮೂಲ ನಾಶವಾಗುತ್ತಿದೆ. ಅಲಕ್ಷಿತರ ಬದುಕಿನ ಪ್ರತಿ ಸ್ತರದಲ್ಲೂ ಜಾನಪದೀಯ ಅಂಶ ಅಡಗಿದೆ. ಶುಭ, ಅಶುಭ ಕಾರ್ಯಗಳಲ್ಲಿ, ಕೃಷಿ ಚಟುವಟಿಕೆ ಹಾಗೂ ಕಾಯಕದಲ್ಲಿ ಜಾನಪದ ಸಂಸ್ಕೃತಿ ಬೇರುಬಿಟ್ಟಿದೆ. ಆದರೆ ಜಾಗತೀಕರಣದ ಪ್ರಭಾವದಿಂದಾಗಿ ಅಲಕ್ಷಿತರ ಜಾನಪದ ಸಂಸ್ಕೃತಿ ಮಾಯವಾಗುತ್ತಿದೆ. ಸಮಾಜದಲ್ಲಿ ಭಯೋತ್ಪಾದನೆ, ಭ್ರಷ್ಟಾಚಾರದಂತಹ ದುಷ್ಟ ಶಕ್ತಿಗಳು ಅಟ್ಟಹಾಸದಿಂದ ಮೆರೆಯುತ್ತಿದ್ದಾರೆ. ಇಂದಿನ ಮುಖ್ಯ ಸಮಾಜವೇ ದಿಕ್ಕು ದೆಸೆ ಇಲ್ಲದೆ ದಾರಿ ತಪ್ಪುತ್ತಿರುವಾಗ, ಅಲಕ್ಷಿತರಿಗೆ ಮೊದಲೇ ಸುಗಮವಾದ ದಾರಿ ಇಲ್ಲದ್ದರಿಂದ ಇವರ ಜಾನಪದೀಯ ಸಂಸ್ಕೃತಿಯೂ ವಿನಾಶದ ಅಂಚಿನಲ್ಲಿದೆ. ಜಾಗತೀಕರಣದಿಂದಾಗಿ ಅಲಕ್ಷಿತರಲ್ಲಿರುವ ಕಲೆ, ನೃತ್ಯ, ವಿಭಿನ್ನ ಕರಕುಶಲ ಕಲೆಗಳು, ವಿವಿಧ ಜಾನಪದೀಯ ಗಾಯನ ಕಲೆಗಳು, ಜಾನಪದೀಯ ಆಟಗಳು, ಆಚರಣೆಗಳು ಮಾಯವಾಗತೊಡಗಿದೆ.

ಜಾಗತೀಕರಣದ ಪ್ರಭಾವದಿಂದಾಗಿ ಅಲಕ್ಷಿತ ಸಮುದಾಯದವರು ಶೋಷಣೆಗೆ ಒಳಗಾಗುತ್ತಿದ್ದಾರೆ. ಸಮಾಜದ ಮೇಲ್ವರ್ಗದ ಅಥವಾ ಶ್ರೀಮಂತರು ಹಾಗೂ ಅಲಕ್ಷಿತರ ನಡುವಿನ ಅಂತರ ಹೆಚ್ಚುತ್ತಿದೆ. ಅಲಕ್ಷಿತರ ಶೋಷಣೆ ಇಂದು ನಿನ್ನೆಯದಲ್ಲ. ಶತಮಾನಗಳಿಂದ ಅನುಭವಿಸುತ್ತಾ ಬಂದಿದ್ದಾರೆ. ಅಲಕ್ಷಿತರಲ್ಲಿ ಸಂಘಟನೆಗಳ ಕೊರತೆ ಇದೆ. ಜಾಗತೀಕರಣದಿಂದಾದ ಅಪಾಯಗಳು ಮತ್ತು ಸವಾಲಿನ ವಿರುದ್ಧ ಹೋರಾಟ ನಡೆಸಲು ಅಲಕ್ಷಿತರಲ್ಲಿನ ಸಂಘಟನೆಗಳು ಒಂದಾಗಬೇಕು.

ಜಾಗತೀಕರಣದ ಪ್ರಭಾವದಿಂದ ಸಮಾಜದ ಕ್ರಿಯಾಶೀಲ ಮತ್ತು ಪ್ರಭಾವಿ ವಲಯದಲ್ಲಿ ಕೆಲಸ ಮಾಡಲು ಅವಕಾಶಗಳು ದೊರೆಯಬೇಕಾದರೆ ಸಂಪನ್ಮೂಲ, ವಿದ್ಯಾರ್ಹತೆ ಬೇಕಾಗಿರುತ್ತದೆ. ಆಗ ನಗರ ಪ್ರದೇಶದಲ್ಲಿ ವಾಸ, ಇಂಗ್ಲೀಷ್ ತಾಂತ್ರಿಕ ಶಿಕ್ಷಣ, ಆಸ್ತಿ ಒಡೆತನ ಮುಂತಾದವುಗಳು ಬೇಕು. ಈ ಹಿನ್ನೆಲೆಯಲ್ಲಿ ಅಲಕ್ಷಿತರು ಜಾಗತೀಕರಣದಿಂದಾಗಿ ದೂರ ಉಳಿಯುತ್ತಿದ್ದಾರೆ.

ಜಾಗತೀಕರಣದಿಂದಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳು ಎಲ್ಲೆಡೆ ತಲೆ ಎತ್ತಿವೆ. ಇಲ್ಲಿ ಶಿಕ್ಷಣ ಪಡೆಯಲು ಆರ್ಥಿಕ ಮಟ್ಟ ಉತ್ತಮವಾಗಿರಬೇಕು. ಅಲಕ್ಷಿತರ ಆರ್ಥಿಕ ಸ್ಥಿತಿ ಹೀನಾಯವಾಗಿರುವಾಗ ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ಶಿಕ್ಷಣ ಪಡೆಯಲು ಸಾಧ್ಯವಾಗುತ್ತಿಲ್ಲ. ಇದರಿಂದ ಅಲಕ್ಷಿತರಲ್ಲಿ ಶೈಕ್ಷಣಿಕ ಹಿನ್ನಡೆ ಉಂಟಾಗುತ್ತಿದೆ.

ಜಾಗತೀಕರಣದಿಂದಾಗಿ ಅಲಕ್ಷಿತ ಸಮುದಾಯಗಳ ಮೂಲ ಸಂಸ್ಕೃತಿಯ ನಾಶವಾಗಿ, ಅವರಲ್ಲಿ ಇದ್ದ ಮಾನವೀಯ ಅಂಶಗಳಾದ ಪರಸ್ಪರ ಹೊಂದಾಣಿಕೆ, ಭ್ರಾತೃತ್ವ, ಸಹಬಾಳ್ವೆಯ ಮೇಲೆ ವ್ಯತಿರಿಕ್ತ ಪ್ರಭಾವ ಬೀರಿ, ಭೇದ ದೃಷ್ಟಿ, ಸ್ವಾರ್ಥ, ವಂಚನೆಯನ್ನು ಹೆಚ್ಚಿಸುವ ಹಾಗೆ ಮಾಡುತ್ತಿದೆ.

೩.೫. ಅಲಕ್ಷಿತ ಸಮುದಾಯಗಳು

ಚಪ್ಪರ್‌ಬಂದ್ ಸಮುದಾಯ

ಕರ್ನಾಟಕ ರಾಜ್ಯದಲ್ಲಿ ಒಂದು ಲಕ್ಷ ಜನಸಂಖ್ಯೆಯನ್ನು ಹೊಂದಿರುವ ಚಪ್ಪರ್‌ಬಂದ್ ಸಮಾಜವು ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಶೈಕ್ಷಣಿಕವಾಗಿ ಅತಿ ಹಿಂದುಳಿದ ಬುಡಕಟ್ಟು ಜನಾಂಗವೆಂದು ಪರಿಗಣಿಸಲಾಗಿದೆ. ವಿಜಯಪುರ, ಬಾಗಲಕೋಟೆ, ಧಾರವಾಡ, ಹುಬ್ಬಳ್ಳಿ, ಗದಗ, ಬೆಂಗಳೂರು, ದಾಂಡೇಲಿ ತಾಲೂಕಿನ ೪೦ ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಈ ಸಮುದಾಯ ಇನ್ನೂ ಎಲೆಮರೆಯ ಕಾಯಿಯಂತೆ ನಾಗರಿಕ ಸಮಾಜದ ಕರಿನೆರಳಲ್ಲಿಯೇ ಮುದುಡಿ ಕುಳಿತು ನರಳುತ್ತಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದು ಎಪ್ಪತ್ತು ವರ್ಷಗಳಾದರೂ ಈ ಸಮುದಾಯಕ್ಕೆ ಇನ್ನೂ ಭಾರತ ದೇಶದಲ್ಲಿ ಸರಿಯಾದ ಸಾಮಾಜಿಕ ಮನ್ನಣೆಯಾಗಲಿ, ಮೂಲಭೂತ ಸೌಕರ್ಯಗಳಾಗಲಿ, ಸರ್ಕಾರದ ಕೃಪಾಕಟಾಕ್ಷಗಳಾಗಲಿ ದೊರೆಯದೆ ಅತಿ ಹೀನಾಯ ಸ್ಥಿತಿಯಲ್ಲಿ ಮೌನವಾಗಿ ರೋಧಿಸುತ್ತಿರುವ ಸಮುದಾಯವಾಗಿದೆ. ಇವರು ಮೂಲತಃ ಹಿಂದೂ ಧರ್ಮದಿಂದ ಮುಸಲ್ಮಾನ (ಇಸ್ಲಾಂ) ಧರ್ಮಕ್ಕೆ ಮತಾಂತರಗೊಂಡವರು. ಮುಸಲ್ಮಾನರಲ್ಲಿ ಸುನ್ನಿ ಮತ್ತು ಶಿಯಾ ಎಂಬ ಎರಡು ಗುಂಪುಗಳಿವೆ. ಚಪ್ಪರ್‌ಬಂದ್ ಸುನ್ನಿ ಮುಸ್ಲಿಂ ಪಂಗಡದವರು. ಉಳಿದ ಮುಸಲ್ಮಾನರಲ್ಲಿ ಚಪ್ಪರ್‌ಬಂದ್ ಅತಿ ಕೀಳಾದ ಜಾತಿ ಎಂದು ಅವರಿಂದಲೂ ಅಲಕ್ಷಿಸಲ್ಪಟ್ಟು ದಿಕ್ಕು ದೆಸೆ ಇಲ್ಲದೇ ಜೀವನ ನಡೆಸುತ್ತಿರುವ ಮಾನವ ಸಮುದಾಯವಾಗಿದೆ.

ಚಪ್ಪರ್‌ಬಂದ್ ಶಬ್ದದ ವಿವೇಚನೆ

ಮೊಘಲರ ಕಾಲದಲ್ಲಿ ಮೊಘಲ್ ಅರಸರು ದಂಡೆತ್ತಿ ಹೋಗುವಾಗ ಸೈನ್ಯದೊಡನೆ ಅಲ್ಲಲ್ಲಿ ಬೀಡು ಬಿಡುತ್ತಿದ್ದರು. ತಾತ್ಕಾಲಿಕ ವಸತಿ ವ್ಯವಸ್ಥೆ (ಚಪ್ಪರ, ಸೂರು) ಮಾಡಲು ಕೆಲವು ಮುಸ್ಲಿಂ

ಸಮುದಾಯದ ಜನರನ್ನು ಕರೆದುಕೊಂಡು ಹೋಗುತ್ತಿದ್ದರು. ಮೊಘಲರ ದಂಡನಾಯಕನು ಜನರನ್ನು ಕರೆದು ನಿಗದಿಪಡಿಸಿದ ಸ್ಥಳದಲ್ಲಿ ಚಪ್ಪರ ಹಾಕಲು ಆದೇಶಿಸುತ್ತಿದ್ದನು. (ಹಿಂದಿಯಲ್ಲಿ ಚಪ್ಪರ್‌ಬಾಂದ್). ಇವರು ಹಾಕಿದ ಚಪ್ಪರದ ಅಡಿಯಲ್ಲಿ ಮೊಘಲರ ರಾಜರು, ದಂಡನಾಯಕರು, ಸೈನಿಕರು ಮತ್ತು ಕುದುರೆ ಇತ್ಯಾದಿಗಳು ವಸತಿ ಮಾಡುತ್ತಿದ್ದವು. ತದ ನಂತರ ಇದೇ ವೃತ್ತಿಯನ್ನು ಮುಂದುವರೆಸಿಕೊಂಡು ಬಂದ ಈ ಜನಾಂಗಕ್ಕೆ ಚಪ್ಪರ್‌ಬಂದ್ ಸಮಾಜವೆಂಬ ಹೆಸರು ಶಾಶ್ವತವಾಯಿತು. ಇವರ ಈ ಚಪ್ಪರ ನಿರ್ಮಿಸುವ ಕೆಲಸವೇ ತದನಂತರ ಸಮುದಾಯದ ಹೆಸರಾಗಿ ಮಾರ್ಪಾಡಾಯಿತು.

ಭಾರತಕ್ಕೆ ಬ್ರಿಟಿಷರ ಆಗಮನದ ನಂತರ ಬುಡಕಟ್ಟು ಸಮುದಾಯಕ್ಕೆ ಜೀವನ ಸಾಗಿಸುವುದು ಕಷ್ಟಸಾಧ್ಯವಾಯಿತು. ಅದರಲ್ಲೂ ಈ ಚಪ್ಪರ್‌ಬಂದ್ ಸಮುದಾಯವು Criminal tribe ಎಂದು ಕರೆಯಲ್ಪಟ್ಟಿತು. ಯಾಕೆಂದರೆ ಆರ್ಥಿಕ ಸ್ಥಿತಿ ತೀರಾ ಕೆಳಮಟ್ಟದಲ್ಲಿರುವುದರಿಂದ ಇವರು ಖೋಟಾ ನಾಣ್ಯಗಳನ್ನು ಸಿದ್ಧಪಡಿಸಿ, ಅದರ ಚಲಾವಣೆ ಮಾಡಲು ಪ್ರಾರಂಭಿಸಿದರು. ವೃತ್ತಿಯೇ ಅವರಿಗೆ ಅಪರಾಧಿ ಜನಾಂಗವೆಂಬ ಹೆಸರನ್ನು ತಂದಿತು. ತಯಾರಿಸಿದ ಖೋಟಾ ನಾಣ್ಯವನ್ನು ಕಾಡಿನಿಂದ ನಾಡಿಗೆ ತಂದು ಅದನ್ನು ಚಲಾವಣೆ ಮಾಡಿ ತಮಗೆ ಬೇಕಾದ ದೈನಂದಿನ ಸಾಮಾನು-ಸರಕುಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಇವರ ಮೇಲೆ ನಿಗಾ ಇರಿಸಿದ ಬ್ರಿಟಿಷರ ಕಣ್ಣು ತಪ್ಪಿಸಿ ಅಲೆದಾಡುತ್ತಿದ್ದರು. ಬ್ರಿಟಿಷರು ಇವರನ್ನು ಅಪರಾಧಿಗಳೆಂದು ಪರಿಗಣಿಸಿದರು. ಇದೇ ರೀತಿ ಚಪ್ಪರ್‌ಬಂದ್ ಸಮುದಾಯದವರು ಅಲೆಮಾರಿ ಸಮುದಾಯವಾಗಿ ಊರಿಂದ ಊರಿಗೆ ಅಲೆಯುತ್ತ ಜೀವನ ನಡೆಸಲು ಪ್ರಾರಂಭಿಸಿದರು. ಚಪ್ಪರ್‌ಬಂದ್ ಭಾಷೆ ಹಿಂದುಸ್ತಾನಿ, ಗುಜರಾತಿ, ಮರಾಠಿ, ಕನ್ನಡ ಉರ್ದು ಇವೆಲ್ಲವುಗಳ ಮಿಶ್ರಣವಾಗಿದೆ. ಈ ಹೊಸ ಭಾಷೆಗೆ ಚಪ್ಪರ್‌ಬಂದಿ ಭಾಷೆ ಎನ್ನುತ್ತಾರೆ. ಇದಕ್ಕೆ ಲಿಪಿ ಇಲ್ಲ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಚಪ್ಪರ್‌ಬಂದ್ ಸಮುದಾಯ ಉತ್ತರ ಭಾರತದಿಂದ ದಕ್ಷಿಣಕ್ಕೆ ವಲಸೆ ಬಂದವರೆಂದು ತಿಳಿಯುತ್ತದೆ.

ಸಾಮಾಜಿಕ ವ್ಯವಸ್ಥೆ

ಒಳಪಂಗಡಗಳು

ಚಪ್ಪರ್‌ಬಂದ್ ಸಮುದಾಯವು ಸುನ್ನಿ ಇಸ್ಲಾಂ ಜನಾಂಗಕ್ಕೆ ಸೇರಿದವರು. ಅದರಲ್ಲೂ ಇವರು ಚಪ್ಪರ್‌ಬಂದ್ ಜಮಾತ್ ಎಂಬ ಇಸ್ಲಾಂ ಜಾತಿ ಪಂಗಡಕ್ಕೆ ಸೇರಿರುತ್ತಾರೆ. ಇವರಲ್ಲಿ ಮುಖ್ಯವಾಗಿ ನಾಲ್ಕು ಒಳ ಪಂಗಡಗಳಿವೆ. ಅವುಗಳು ೧. ಬಡೆಬಾಯ್. ೨. ಸನ್ನೆಬಾಯ್. ೩. ಚೆಂಗಾಡೆ. ೪. ಬರ್‌ಗಂಡೆ. ಈ ನಾಲ್ಕು ಪಂಗಡಗಳು ಸಮಾಜದಲ್ಲಿ ಸಮಾನ ಸ್ಥಾನದಲ್ಲಿವೆ. ಚಪ್ಪರ್‌ಬಂದ್ ಸಮುದಾಯ ಈ ಒಳಪಂಗಡಗಳಲ್ಲಿ ಮಾತ್ರ ವಿವಾಹ ಸಂಬಂಧಗಳನ್ನು ಮಾಡಿಕೊಳ್ಳುತ್ತಾರೆ. ಇಂದಿನ ದಿನಗಳಲ್ಲಿ ಬೆರಳೆಣಿಕೆಯಷ್ಟು ಮಾತ್ರ ಶಿಯಾ ಮುಸ್ಲಿಂ ಸಮುದಾಯಗಳ ನಡುವೆಯೂ ವಿವಾಹವಾದ ಉದಾಹರಣೆಗಳಿವೆ. ಆದರೆ ಈ ರೀತಿಯ ವಿವಾಹಕ್ಕೆ ಚಪ್ಪರ್‌ಬಂದ್ ಸಮುದಾಯದ ಹಿರಿಯರು ಹಾಗೂ ಧಾರ್ಮಿಕ ಮುಖಂಡರ ತೀವ್ರ ವಿರೋಧವಿದೆ.

ಚಪ್ಪರ್‌ಬಂದ್‌ಲ್ಲಿ ಎರಡು ವಿಭಾಗಗಳಿವೆ. ಇವರನ್ನು ನನ್ನೆಬಾಯಿ ಮತ್ತು ಬಡೇಬಾಯಿ ಎಂದು ಕರೆದುಕೊಳ್ಳುತ್ತಾರೆ. ಅವುಗಳನ್ನು ಛೇ ಗಂಡ, ಬಾರ ಗಂಡ ಎಂದೂ ಕರೆಯುತ್ತಾರೆ. ಬಡೇ ಬಾಯಿ ಬಾರ ಗಂಡದವರಾದರೆ, ನನ್ನೆಬಾಯಿ ಛೇ ಗಂಡದವರಾಗಿರುತ್ತಾರೆ. ಬಾರ ಗಂಡ ಹಾಗೂ ಛೇಗಂಡಗಳ ಮಧ್ಯ ಬೆಡಗುಗಳ ವಿಚಾರವಾಗಿ ಯಾವುದೇ ಅಂತರವಿಲ್ಲ. ಬಾರ ಗಂಡದಲ್ಲಿರುವ ಬೆಡಗುಗಳೇ ಛೇ ಗಂಡದಲ್ಲೂ ಇವೆ. ಬೆಡಗುಗಳು ತಂದೆಯ ಮೂಲಕ ತನ್ನ ವಂಶದ ಮುಂದಿನ ಪೀಳಿಗೆಗೆ ಹೋಗುವುದರಿಂದ ಎರಡೂ ಪಂಗಡಗಳ ಬೆಡಗುಗಳಲ್ಲಿ ಅಂತಹ ವ್ಯತ್ಯಾಸವಿಲ್ಲ. "ಎರಡೂ ಪಂಗಡಗಳಿಗೆ ಸೇರಿ ಇರುವ ಒಟ್ಟು ಬೆಡಗುಗಳು ಕ್ರಮವಾಗಿ ಈ ಕೆಳಗಿನಂತಿದೆ.

೧. ಅಚ್ಚಗರವಾಲೆ. ೨. ಅಡಗಾರೆವಾಲೆ. ೩. ಆಗವಾಲೆ. ೪. ಅಳೆದ್ವಾಲೆ. ೫. ಬಕ್ಕಾವಾಲೆ. ೬. ಬಂಗಾಳಿವಾಲೆ. ೭. ಬಡೇಗಾರೆ. ೮. ಬನ್ನಿವಾಲೆ. ೯. ಬಸ್ಸಿವಾಲೆ. ೧೦. ಬಳ್ಳಾರಿ ವಾಲೆ. ೧೧. ಬಿರದಿವಾಲೆ. ೧೨. ಭಂಡಾರೆವಾಲೆ. ೧೩. ಭೋಲೆವಾಲೆ. ೧೪. ಚೌಕ್ಲೆವಾಲೆ. ೧೫. ಚೋಡಕಿವಾಲೆ. ೧೬. ದತ್ತುರವಾಲೆ. ೧೭. ಗಾರೆವಾಲೆ. ೧೮. ಗುಡುವಾಲೆ. ೧೯. ಹರಿಯಾವಾಲೆ. ೨೦. ಜಾದೂವಾಲೆ. ೨೧. ಜೋತಿವಾಲೆ. ೨೨. ಕಂಬಳಿವಾಲೆ. ೨೩. ಕಾರಾವಾಲೆ. ೨೪. ಕೆಡಗಿವಾಲೆ. ೨೫. ಲಂಬುವಾಲೆ. ೨೬. ತಿಗಳವಾಲೆ. ೨೭. ಮುಳ್‌ವಾಲೆ. ೨೮. ಮುತುಡ್‌ವಾಲೆ. ೨೯. ನಾಚಿವಾಲೆ. ೩೦. ಪಿರ್‌ಜಾದೆವಾಲೆ. ೩೧. ಫಿರ್‌ಭಾಯಿ. ೩೨. ಪಿರ್‌ಪೀಜ್ಞರ್‌ವಾಲೆ. ೩೩. ಪುಂಗಿವಾಲೆ. ೩೪. ರಗ್ಡೆವಾಲೆ. ೩೫. ರಾವತ್‌ವಾಲೆ. ೩೬. ರಾವತ್. ೩೭. ಸತ್ಬಾಯಿವಾಲೆ. ೩೮. ಶಾವಿಗರ್‌ವಾಲೆ. ೩೯. ಶೆಹಿಖ್‌ವಾಲೆ. ೪೦. ಸೂಜಿವಾಲೆ. ೪೧. ತಳತಿಗರೆವಾಲೆ. ೪೩. ಓಟವಾಲೆ. ೪೪. ಘೋರಿವಾಲೆ. ಹೀಗೆ ೪೪ ಬೆಡಗುಗಳನ್ನು ಗುರುತಿಸಲಾಗಿದ".[೪]

ಈ ಬೆಡಗುಗಳಲ್ಲಿ ಸಜಾತಿ ಬೆಡಗಿನವರು ವಿವಾಹವಾಗುವುದಿಲ್ಲ. ವಿಜಾತಿ ಬೆಡಗುಗಳೊಂದಿಗೆ ಸಂಬಂಧ ಬೆಳೆಸುತ್ತಾರೆ. ಆದರೆ ಬೆಡಗು ನೋಡುವ ಪೂರ್ವದಲ್ಲಿ ಅವರು ಬಡೇ ಭಾಯಿಯೋ, ನನ್ನೆ ಭಾಯಿಯೋ ಎಂಬುದನ್ನು ತಿಳಿದ ತರುವಾಯ ಬೆಡಗನ್ನು ಕೇಳಿ ಹೆಣ್ಣನ್ನು ನೋಡುವ ಕಾರ್ಯ ಮಾಡುತ್ತಾರೆ.

ನೆಲೆ

ಚಪ್ಪರ್‌ಬಂದಿಗಳು ಮೂಲತ: ಅಲೆಮಾರಿ ಜನಾಂಗದವರು. ಮೊದಲು ಹೆಚ್ಚಾಗಿ ಅವಿಭಕ್ತ ಕುಟುಂಬಗಳಲ್ಲಿ, ಗುಂಪು ಗುಂಪಾಗಿ ವಾಸಿಸುತ್ತಿದ್ದ ಚಪ್ಪರ್‌ಬಂದುಗಳು ಇಂದು ಸಣ್ಣ, ಸಣ್ಣ ಕುಟುಂಬಗಳಾಗಿರುವುದನ್ನು ಕಾಣಬಹುದಾಗಿದೆ. ವಿಭಕ್ತ ಕುಟುಂಬಗಳಾಗಿ ಬದಲಾದರೂ ಪರಸ್ಪರ ಸಹಕಾರ ಮತ್ತು ಸಹಬಾಳ್ವೆಯ ಮನಸ್ಸಿನಿಂದ ಬಾಳತೊಡಗಿದ್ದಾರೆ. ಊರ ಹೊರಗೆ ಪ್ಲಾಸ್ಟಿಕ್ ಟೆಂಟ್, ಡೇರೆಗಳನ್ನು ನಿರ್ಮಿಸಿಕೊಂಡು ಕುರಿ–ನಾಯಿ, ಪಶು–ಪಕ್ಷಿಗಳೊಂದಿಗೆ ಅಲ್ಲಿಯೇ ವಾಸಿಸುತ್ತಿದ್ದರು. ಅಲ್ಲಿಂದ ಮತ್ತೊಂದೆಡೆಗೆ ಹೋಗುವಾಗ ಎಲ್ಲವನ್ನೂ ಕಿತ್ತು ಹೊತ್ತು ಒಯ್ಯುತ್ತಿದ್ದರು.

ಇಂದು ಒಂದೇ ಕಡೆ ನೆಲೆನಿಂತು ತಮ್ಮದೇ ಆದ ಸೂರನ್ನು ನಿರ್ಮಿಸಿಕೊಳ್ಳುತ್ತಿದ್ದಾರೆ. ಒಂದಕ್ಕೊಂದು ಜೆಸೆದುಕೊಂಡಿರುವ ಚಿಕ್ಕ ಮನೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದಾರೆ. ಮನೆಗಳು ಜೋಪಡಿಯಂತೆ ಕಂಡುಬರುತ್ತಿವೆ. ಆಧುನಿಕ ಮನೆಗಳನ್ನು ಕಲ್ಲಿನಿಂದ, ಮಣ್ಣಿನಿಂದ ನಿರ್ಮಿಸುತ್ತಾರೆ. ಮೇಲ್ಛಾವಣಿಗೆ ಹಂಚು, ಸಿಮೆಂಟ್ ತಗಡುಗಳನ್ನು ಬಳಸುತ್ತಾರೆ. ಇವರ ಮನೆಗಳು ವ್ಯವಸ್ಥಿತ ರೀತಿಯಲ್ಲಿ ಇರುವುದಿಲ್ಲ.

ನಿಲುವು ಮತ್ತು ಸ್ವಭಾವ

ಚಪ್ಪರ್‌ಬಂದ್ ಸಮುದಾಯದವರು ಇತರ ಮುಸ್ಲಿಂ ಸಮುದಾಯದವರಂತೆ ಉದ್ದನೆಯ ಗಡ್ಡ ಬಿಡುತ್ತಾರೆ. ಅಂತಹ ದೃಢಕಾಯದವರಲ್ಲ. ಶ್ರಮವಹಿಸಿ ದುಡಿಯುವರಾದರೂ ದಷ್ಟ-ಪುಷ್ಟರಲ್ಲ. ಇವರು ಸೌಮ್ಯ ಸ್ವಭಾವದವರು. ಇತರ ಸಮುದಾಯಗಳೊಂದಿಗೆ ಬೇಗನೆ ಬೆರೆಯುವ ಗುಣವನ್ನು ಹೊಂದಿದ್ದಾರೆ. ತೀರಾ ಮಾತುಗಾರರಲ್ಲ. ತಮ್ಮ ಸಮುದಾಯದ ಹಿರಿಯರಲ್ಲಿ ತುಂಬಾ ವಿನಯವಾಗಿ ನಡೆದುಕೊಂಡು ಗೌರವ ಆದರಗಳಿಂದ ಕಾಣುತ್ತಾರೆ. ಕುಟುಂಬದ ಪ್ರತಿಯೊಬ್ಬ ಸದಸ್ಯರೂ ಕೂಲಿ ಮಾಡಲು ಹೋಗುತ್ತಾರೆ. ಹೆಂಗಸರು ಹೆಚ್ಚಾಗಿ ಚೂಡಿದಾರ ತರಹದ ಬಟ್ಟೆಯನ್ನು ಧರಿಸಿ ಬುರ್ಖಾ ಹಾಕಿಕೊಳ್ಳುತ್ತಾರೆ. ಇವರು ಸೋಮಾರಿಗಳಲ್ಲ. ತುಂಬಾ ಚಟುವಟಿಕೆಗಳಿಂದ ಕೆಲಸ ಮಾಡುತ್ತಾರೆ. ಇವರಿಗೆ ಯಾವುದೇ ರೀತಿಯ ಆಸ್ತಿಪಾಸ್ತಿ ಇಲ್ಲದ್ದರಿಂದ ಇವರು ಕೂಲಿಯನ್ನು ನಂಬಿಯೇ ಜೀವನ ನಡೆಸುತ್ತಾರೆ. ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಚಿಕ್ಕಪುಟ್ಟ ಉದ್ಯಮಗಳನ್ನು ನಡೆಸುತ್ತಿದ್ದಾರೆ. ಹೆಂಗಸರು ಆಸ್ಪತ್ರೆಗಳಲ್ಲಿ, ಗಾರ್ಮೆಂಟ್ಸ್‌ಗಳಲ್ಲಿ, ಕಸೂತಿ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಚಪ್ಪರ್‌ಬಂದ್ ಸಮುದಾಯದವರು ಇಂದಿನ ದಿನಗಳಲ್ಲಿ ಇತರೇ ವೃತ್ತಿಗಳಲ್ಲಿ ತೊಡಗುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ವಾಹನ ಚಾಲಕರಾಗಿ, ಕೈಗಾರಿಕೆಗಳಲ್ಲಿ, ಚಹಾ ಅಂಗಡಿ, ಬೀಡಾ ಅಂಗಡಿ, ಕಿರಾಣಿ ಅಂಗಡಿ, ಹಣ್ಣು-ತರಕಾರಿ ಮಾರಾಟ ಮಾಡುವುದು, ಮಾಂಸದ ಅಂಗಡಿ ನಡೆಸುವುದು ಇತ್ಯಾದಿ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ.

ಉಡುಗೆ-ತೊಡುಗೆ

ಚಪ್ಪರ್‌ಬಂದ್ ಸಮುದಾಯದವರ ಆರ್ಥಿಕ ಪರಿಸ್ಥಿತಿ ತೀರಾ ಕೆಳಮಟ್ಟದಲ್ಲಿರುವುದರಿಂದ ಇವರ ಉಡುಗೆ-ತೊಡುಗೆ ಸರಳವಾಗಿರುತ್ತದೆ. ಗಂಡಸರು ಹೆಚ್ಚಾಗಿ ಲುಂಗಿ, ಪೈಜಾಮ್ ತೊಟ್ಟು ತಲೆಯ ಮೇಲೆ ಟೋಪಿಯನ್ನು ಧರಿಸುತ್ತಾರೆ. ಇಂದಿನ ಯುವ ಪೀಳಿಗೆ ಪ್ಯಾಂಟ್-ಶರ್ಟ್‌ಗಳನ್ನು, ೩/೪ನ್ನು ಧರಿಸುತ್ತಾರೆ. ಇವರು ಮಕ್ಕಳಿಗೂ ಪೈಜಾಮ್, ಜುಬ್ಬಾ ಮತ್ತು ಟೋಪಿಯನ್ನು ತೊಡಿಸುತ್ತಾರೆ. ಹೆಣ್ಣುಮಕ್ಕಳು ಲಂಗ ಧರಿಸಿ ಸೆರಗನ್ನು ತಲೆಯ ಮೇಲೆ ಹೊದ್ದುಕೊಳ್ಳುತ್ತಾರೆ. ಅದರ ಮೇಲಿಂದ ಬುರ್ಖಾವನ್ನು ಧರಿಸುತ್ತಾರೆ. ಇವರು ಮೂಗಿಗೆ ನತ್ತು, ಕೈಗೆ ವಿವಿಧ ರೀತಿಯ ಬಳೆಗಳನ್ನು, ಕಾಲಿಗೆ ಬೆಳ್ಳಿಯ ಗೆಜ್ಜೆಯನ್ನು ಧರಿಸುತ್ತಾರೆ. ಹಣೆಗೆ ಸಿಂಧೂರವನ್ನು

ಇಡುವುದಿಲ್ಲ. ಮದುವೆಯಾದ ಹೆಂಗಸರು ಹೆಚ್ಚಾಗಿ ಕರಿಮಣಿಯಿಂದ ತಯಾರಿಸಿದ ಮಂಗಳಸೂತ್ರವನ್ನು ಧರಿಸುತ್ತಾರೆ. ಪುರುಷರು ಮತ್ತು ಸ್ತ್ರೀಯರು ಹೆಚ್ಚಾಗಿ ಸುಗಂಧ ದ್ರವ್ಯಗಳನ್ನು ಬಳಸುತ್ತಾರೆ. ಸ್ತ್ರೀಯರು ಕಿವಿಗೆ ವಿವಿಧ ಬಗೆಯ ಓಲೆಯನ್ನು ಧರಿಸುತ್ತಾರೆ. ಇವರಿಗೆ ಆಭರಣ ಧರಿಸುವುದೆಂದರೆ ತುಂಬಾ ಇಷ್ಟ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕೆಲವು ಸ್ತ್ರೀಯರು ಸೀರೆಯನ್ನು ಉಟ್ಟಿದ್ದು ಕಂಡುಬಂದಿದೆ. ಸ್ತ್ರೀಯರು ಇತರ ಸಮುದಾಯದ ಪುರುಷರೊಂದಿಗೆ ಹೆಚ್ಚಾಗಿ ಮಾತನಾಡಲು ಇಷ್ಟಪಡುವುದಿಲ್ಲ. ಪುರುಷರೂ ಅಷ್ಟೇ; ಇತರ ಸಮುದಾಯದವರೊಡನೆ ಮುಕ್ತವಾಗಿ ಬೆರೆಯುವುದಿಲ್ಲ.

ಆಡಳಿತ ವ್ಯವಸ್ಥೆ

ಪ್ರತಿಯೊಂದು ಸಮುದಾಯದಲ್ಲೂ ಶಾಂತಿಯುತವಾದ ಜೀವನ ಸಾಗಿಸಲು ಅವರದೇ ಆದ ಒಳಾಡಳಿತ ವ್ಯವಸ್ಥೆ ಇರುತ್ತದೆ. ಪ್ರತಿನಿತ್ಯದಲ್ಲಿ ನಡೆಯುವ ಸಣ್ಣಪುಟ್ಟ ಜಗಳ, ಕುಟುಂಬಗಳ ಸಮಸ್ಯೆ, ಆಸ್ತಿ ವಿಚಾರ, ಊರು, ಕೇರಿಗಳ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಾರೆ. ಚಪ್ಪರ್‌ಬಂದ್ ಸಮುದಾಯದ ಒಳಾಡಳಿತ ವ್ಯವಸ್ಥೆ ಬುಡಕಟ್ಟು ಮಾದರಿಯನ್ನು ಹೋಲುತ್ತದೆ. "ಚಪ್ಪರ್‌ಬಂದ್ ಸಮುದಾಯದಲ್ಲಿ ಏನಾದರು ಸಮಸ್ಯೆ ಬಂದರೆ ಅವರು ತಮ್ಮ ಊರಿನ ಮುಖ್ಯಸ್ಥರಲ್ಲಿ ಹೋಗುತ್ತಾರೆ. ಅವರನ್ನು "ಮುತ್ವಲ್ಲಿ" ಎಂದು ಕರೆಯುತ್ತಾರೆ. ಇವರು ಎರಡು ಪಾರ್ಟಿಯವರ ಅಹವಾಲನ್ನು ಸ್ವೀಕರಿಸಿ ನ್ಯಾಯ ತೀರ್ಮಾನ ನೀಡುತ್ತಾರೆ. ಇವರ ತೀರ್ಮಾನವೇ ಅಂತಿಮ. ಅವರನ್ನು ಮತ್ತೆ ಯಾರು ಪ್ರಶ್ನಿಸುವುದಿಲ್ಲ. ಬೇರೆ ಬೇರೆ ಪಂಗಡಗಳಲ್ಲಿ ಭಿನ್ನಾಭಿಪ್ರಾಯ ಬಂದಾಗ 'ಚೆರ್‌ಮನ್' ಎನ್ನುವವರ ಬಳಿ ನ್ಯಾಯತೀರ್ಮಾನ ನಡೆಸಲಾಗುತ್ತದೆ".[8] ಹೆಚ್ಚಾಗಿ ಇವರು ಇಲ್ಲೇ ನ್ಯಾಯ ತೀರ್ಮಾನಗಳನ್ನು ನೀಡಿ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳುತ್ತಾರೆ. ಅದು ಸಾಧ್ಯವಾಗದಿದ್ದಾಗ ಮಾತ್ರ ಇಂದಿನ ದಿನಗಳಲ್ಲಿ ಕೋರ್ಟು, ಕಛೇರಿಗಳಿಗೆ ಹೋಗುತ್ತಾರೆ. ಆಧುನಿಕ ಕಾನೂನು, ನ್ಯಾಯ ವ್ಯವಸ್ಥೆ ಶಾಸನಗಳ ಬಗ್ಗೆ ತಿಳುವಳಿಕೆ ಇಲ್ಲದಿದ್ದರೂ ತಮ್ಮದೇ ಆದ ತಿಳುವಳಿಕೆಯಿಂದ, ಹಿಂದಿನಿಂದ ಬಂದ ಪದ್ಧತಿಯ ಪ್ರಕಾರವೇ ನ್ಯಾಯ ತೀರ್ಮಾನ ನೀಡುತ್ತಾರೆ. ಸಮುದಾಯದ ಒಳಗಡೆ ನಡೆಯುವ ತಂಟೆ-ತಕರಾರು, ಹೊಲ ಮನೆಗೆ ಸಂಬಂಧಿಸಿದ ಭಿನ್ನಾಭಿಪ್ರಾಯಗಳನ್ನು ತಮ್ಮ ಒಳಾಡಳಿತದ ಮೂಲಕವೇ ಸರಿಪಡಿಸಿಕೊಳ್ಳುತ್ತಾರೆ. ಒಳಾಡಳಿತದಲ್ಲಿ ಮೌಲ್ವಿ, ಅಸರತ್, ಮೌಸಿಮ್ ಪ್ರಮುಖರಾಗಿರುತ್ತಾರೆ.

ವೈದ್ಯ ಪದ್ಧತಿ

ಅಲೆಮಾರಿ ಸಮುದಾಯವಾದ "ಚಪ್ಪರ್‌ಬಂದ್" ಜನಾಂಗ ಹೆಚ್ಚಾಗಿ ಕಾಡಿನ ಸಂಪರ್ಕ ಹೊಂದಿರುವುದರಿಂದ ಕಾಡಿನ ಅಥವಾ ದೂರದ ಗುಡ್ಡ ಬೆಟ್ಟದ ವಿವಿಧ ಸಸ್ಯಗಳನ್ನು ತಮ್ಮ ಔಷಧ ಪದ್ಧತಿಯಲ್ಲಿ ಉಪಯೋಗಿಸುತ್ತಾರೆ. ಈ ಸಮುದಾಯದ ಹಿರಿಯರು ಹೀಗೆ ಹೇಳುತ್ತಾರೆ.

"ಯಾವ ರೋಗಕ್ಕೆ ಔಷಧವಿಲ್ಲವೋ ಅಂತಹ ರೋಗವನ್ನು ಅಲ್ಲಾನು ನೀಡುವುದಿಲ್ಲ" ಎಂದು. ಪ್ರತಿಯೊಂದು ರೋಗಕ್ಕೂ ಅಲ್ಲಾನು ಔಷಧವನ್ನು ಸೃಷ್ಟಿಸಿದ್ದಾನೆ ಎಂಬುದು ಚಪ್ಪರ್‌ಬಂದ್ ಸಮುದಾಯದವರ ನಂಬಿಕೆ. ಹೆಚ್ಚಾಗಿ ಇವರು ಕರಿಜೀರಿಗೆಯನ್ನು ಎಲ್ಲಾ ತರಹದ ನೋವಿನ ಶಮನಕ್ಕೆ ಬಳಸುತ್ತಾರೆ. ಆದರೆ ಸಾವಿನ ಸಮಯದ ನೋವಿಗೆ ಕರಿಜೀರಿಗೆಯಿಂದ ಉಪಯೋಗವಿಲ್ಲ ಎಂಬ ನಂಬಿಕೆ ಇದೆ. ಉಸಿರಾಟದ ತೊಂದರೆ, ಜೀರ್ಣ ತೊಂದರೆ ಮತ್ತು ರೋಗ ನಿರೋಧಕ ಶಕ್ತಿ ಹೆಚ್ಚಿಸಲು ಕರಿಜೀರಿಗೆಯನ್ನು ಬಳಸುತ್ತಾರೆ. ಜೇನುತುಪ್ಪ ಇದು ಅಲ್ಲಾನು ಕೊಟ್ಟ ವರ. ಇದೊಂದು ಉತ್ತಮವಾದ ಔಷಧ. ಇದು ಎಲ್ಲಾ ರೀತಿಯಿಂದ ಆರೋಗ್ಯವನ್ನು ರಕ್ಷಿಸುತ್ತದೆ ಎಂಬ ನಂಬಿಕೆ ಇವರದು. ಖರ್ಜೂರ ಸೇವನೆಯನ್ನು ಈ ಸಮುದಾಯ ಹೆಚ್ಚಾಗಿ ಮಾಡುತ್ತದೆ. ರಂಜಾನ್ ತಿಂಗಳಿನಲ್ಲಿ ದಿನದ ಉಪವಾಸವನ್ನು ಖರ್ಜೂರ ತಿಂದೇ ಮುಗಿಸುತ್ತಾರೆ. ಖುರಾನಿನ ಪ್ರಕಾರ ಹಣ್ಣುಗಳಾದ ದ್ರಾಕ್ಷಿ, ಖರ್ಜೂರ, ಅಂಜೂರ, ದಾಳಿಂಬೆ ಇವೆಲ್ಲಾ ದೇವತಾ ಫಲಗಳು. ಇವು ನಮ್ಮ ದೇಹಕ್ಕೆ ಬೇಕಾದ ಪೌಷ್ಟಿಕಾಂಶಗಳನ್ನು ನೀಡುತ್ತದೆ. ಆದರೆ ಸಮುದಾಯದ ಆರ್ಥಿಕ ಪರಿಸ್ಥಿತಿ ತುಂಬಾ ಹೀನಾಯವಾಗಿರುವುದರಿಂದ ಈ ಹಣ್ಣುಗಳನ್ನು ಉಪಯೋಗಿಸುವುದು ಕಷ್ಟಸಾಧ್ಯ. ಇಂದಿನ ಜನಾಂಗ ಹೆಚ್ಚಾಗಿ ಯುನಾನಿ ಔಷಧವನ್ನು ಬಳಸುತ್ತಾರೆ ಎಂದು ಸಮುದಾಯದ ಹಿರಿಯರು ಹೇಳುತ್ತಾರೆ. ಚಪ್ಪರ್‌ಬಂದ್ ಸಮುದಾಯದ ಪ್ರಕಾರ ರೋಗ ಚಿಕಿತ್ಸೆಯನ್ನು ಔಷಧಗಳ ಮೂಲಕವಾಗಿ ಮಾಡಲು ಸಾಧ್ಯವಾಗುತ್ತದೆ. ಹಾಗೆ ಆತ್ಮ ಚಿಕಿತ್ಸೆಯನ್ನು ಅಲ್ಲಾನ ಪ್ರಾರ್ಥನೆ ಮಾಡುವುದರಿಂದ ಸಾಧ್ಯ ಎಂಬ ಬಲವಾದ ನಂಬಿಕೆ ಇದೆ.

ಆಹಾರ ಪದ್ಧತಿ

ಉತ್ತರ ಕರ್ನಾಟಕದ ಜನರ ಹಾಗೆ ಚಪ್ಪರ್‌ಬಂದ್‌ರು ಜೋಳವನ್ನು ತಮ್ಮ ಮುಖ್ಯ ಆಹಾರವಾಗಿ ಬಳಸುತ್ತಾರೆ. ಪ್ರತಿನಿತ್ಯ ಆಹಾರದಲ್ಲಿ ಜೋಳದ ರೊಟ್ಟಿ ಹಾಗೂ ಅನ್ನವನ್ನು ಬಳಸುತ್ತಾರೆ. ಗ್ರಾಮೀಣ ಭಾಗದಲ್ಲಿ ವಾಸಿಸುವ ಚಪ್ಪರ್‌ಬಂದ್‌ರು ಕೇವಲ ಅನ್ನವನ್ನು ಬಳಸುತ್ತಾರೆ. ಬೇಳೆಗಳಾದ ತೊಗರಿ, ಹೆಸರು, ಚನ್ನಂಗಿ ಮತ್ತು ಇತರೆ ಬೇಳೆಗಳನ್ನು ಬಳಸುತ್ತಾರೆ. ತರಕಾರಿಗಳಾದ ಬದನೆ, ಸೌತೆ, ಆಲೂಗಡ್ಡೆ, ಟೊಮೇಟೊ, ಬೆಂಡೆ ಮುಂತಾದವುಗಳನ್ನು ಬಳಸುತ್ತಾರೆ. ಕೋಳಿ, ಕುರಿ, ದನದ ಮಾಂಸವನ್ನು ಹೇರಳವಾಗಿ ಬಳಸುತ್ತಾರೆ. ಆದರೆ ಹಂದಿಯ ಮಾಂಸವನ್ನು ಬಹಿಷ್ಕರಿಸುತ್ತಾರೆ. ಹಣ್ಣುಗಳಾದ ಬಾಳೆಹಣ್ಣು, ಮಾವಿನ ಹಣ್ಣು, ದ್ರಾಕ್ಷಿ, ಕಿತ್ತಳೆ ಮುಂತಾದವುಗಳನ್ನು ಸಾಂದರ್ಭಿಕವಾಗಿ ಬಳಸುತ್ತಾರೆ. ಚಹಾ ಗ್ರಾಮೀಣ ಹಾಗೂ ಪಟ್ಟಣದಲ್ಲಿರುವ ಚಪ್ಪರ್‌ಬಂದ್‌ಗೆ ಇಷ್ಟವಾದ ಪಾನೀಯ. ಹಾಲು ಮತ್ತು ಅದರ ಉತ್ಪನ್ನಗಳನ್ನು ಇವರು ಉಪಯೊಗಿಸುತ್ತಾರೆ. ಪಟ್ಟಣದ ಚಪ್ಪರ್‌ಬಂದ್‌ಗಳು ಸಾರಾಯಿ, ವಿಸ್ಕಿ, ಬ್ರಾಂದಿಗಳನ್ನು ಉಪಯೋಗಿಸುತ್ತಾರೆ. ಬಹುತೇಕ ಚಪ್ಪರ್‌ಬಂದ್‌ರು ವೀಳ್ಯದೆಲೆ, ಅಡಿಕೆಯನ್ನು ಜಗಿಯುತ್ತಾರೆ. ಗ್ರಾಮೀಣ ಹಾಗೂ ಪಟ್ಟಣದ ಪುರುಷರು ಬೀಡಿ, ಸಿಗರೇಟು ಸೇವನೆ ಸರ್ವೇಸಾಮಾನ್ಯವಾಗಿದೆ.

ಚಪ್ಪರ್‌ಬಂದ್ ಸಮುದಾಯದ ವಿಶಿಷ್ಟ ನಂಬಿಕೆಗಳು

೧. "ತಾಯಿತ"ವನ್ನು ಕಟ್ಟುವುದರಿಂದ ಮಗುವಿಗೆ ಕೆಟ್ಟ ದೃಷ್ಟಿ ತಾಗುವುದಿಲ್ಲವೆಂಬ ನಂಬಿಕೆಯಿದೆ.

೨. ಕಾಗೆಯ ತಲೆ ಬುರುಡೆ ಮತ್ತು ಸತ್ತ ಕತ್ತೆಯ ಮುಖದ ಭಾಗವನ್ನು ಏಳು ಬಣ್ಣದ ದಾರದಲ್ಲಿ ಸುತ್ತಿ ಅದಕ್ಕೆ ಏಳು ಗುಂಡುಸೂಜಿಯನ್ನು ಚುಚ್ಚಿ ಮಗುವಿಗೆ ತೊಡಿಸಿದಾಗ ಮಗುವಿನ ಆಯುಷ್ಯ ವೃದ್ಧಿಯಾಗಿ ಕೆಟ್ಟ ದೃಷ್ಟಿಯ ದೋಷ ಪರಿಹಾರವಾಗುತ್ತದೆ.

೩. ತಾಳೆಗರಿಯ ಮೇಲೆ ಖುರಾನಿನ ಹೇಳಿಕೆಗಳನ್ನು ಬರೆದು ಮಗುವಿಗೆ ಕಟ್ಟಿದಾಗ ಕೆಮ್ಮು ಉಪಶಮನವಾಗುತ್ತದೆ.

೪. ವಿಶಿಷ್ಟ ಬಗೆಯ ಶಂಖವನ್ನು ಮಗುವಿಗೆ ಕಟ್ಟಿದಾಗ ನಾಯಿಕೆಮ್ಮು ಕಡಿಮೆಯಾಗುತ್ತದೆ.

೫. ಮೂರು ಸಣ್ಣ ಚೀಲಗಳಲ್ಲಿ, ಒಂದರಲ್ಲಿ ಮಗುವಿನ ಕರುಳ ಬಳ್ಳಿ ಇಟ್ಟು ಮಗುವಿನ ಕತ್ತಿಗೆ ಕಟ್ಟುವುದರಿಂದ ದೀರ್ಘಾಯುಷ್ಯದ ರಕ್ಷಣೆಯಾಗುತ್ತದೆ ಎಂಬ ನಂಬಿಕೆ.

೬. ಮೂರು ಸಣ್ಣ ಚೀಲಗಳಲ್ಲಿ, ಒಂದರಲ್ಲಿ ಹಾವಿನ ಚರ್ಮವಿಟ್ಟು ಮಗುವಿನ ಕತ್ತಿಗೆ ಕಟ್ಟುವುದರಿಂದ ಆಯುಷ್ಯ ಹೆಚ್ಚಾಗುತ್ತದೆಂಬ ನಂಬಿಕೆ.

೭. ಮಸೀದಿಯ/ ದರ್ಗಾದ "ಮುಲ್ಲಾ" ಅಥವಾ "ಮೌಲ್ವಿ"ಯು ಮಂತ್ರಿಸಿಕೊಟ್ಟ ಸಕ್ಕರೆ ತಿನ್ನಿಸಿ ತಾಯತ ಕಟ್ಟುವುದರಿಂದ ಮಗುವಿಗೆ ಹಸಿವು ಹೆಚ್ಚಾಗಿ ಜೀರ್ಣ ತೊಂದರೆ ಸರಿಯಾಗುತ್ತದೆಂಬ ನಂಬಿಕೆ.

೮. ಧೂಪದ ಹೊಗೆಯನ್ನು ಹಾಕುವುದರಿಂದ ಮನೆಯಲ್ಲಿ ಯಾವುದೇ ಕೆಟ್ಟ ಶಕ್ತಿಗಳು ಬರುವುದಿಲ್ಲ ಹಾಗೂ ಸಂಪತ್ತು ಹೆಚ್ಚುತ್ತದೆ ಎಂಬ ನಂಬಿಕೆ ಇದೆ.

ಹೀಗೆ ಅನೇಕ ರೀತಿಯ ವಿಶಿಷ್ಟ ನಂಬಿಕೆಗಳನ್ನು ಹಿಂದಿನಿಂದಲೂ ನಡೆಸಿಕೊಂಡು ಬಂದಿರುವ ಚಪ್ಪರ್‌ಬಂದ್ ಸಮಾಜ ಇನ್ನೂ ಆಚರಿಸುತ್ತಿರುವುದು ವಿಶೇಷದ ಸಂಗತಿಯಾಗಿದೆ.

ಸಂಪ್ರದಾಯ ಮತ್ತು ಆಚರಣೆಗಳು

ಹಖೀಖಾ

ಹಖೀಖಾ ಎಂದರೆ ಕನ್ನಡದಲ್ಲಿ ಕೂದಲು ತೆಗೆಸುವುದೆಂದರ್ಥ. ಈ ಆಚರಣೆಯನ್ನು ಮಗು ಹುಟ್ಟಿದ ೭ನೇ ದಿನ ಆಚರಿಸುತ್ತಾರೆ. ಆರಂಭದಲ್ಲಿ ಮಗುವಿನ ತಲೆ ಬೋಳಿಸುವರು. ಬೋಳಿಸಿದ ನಂತರ ಆ ಮಗುವಿನ ಕೂದಲಿನ ತೂಕದಷ್ಟು ಬೆಳ್ಳಿಯನ್ನು ಬೇರೆಯವರಿಗೆ ದಾನ ಮಾಡುತ್ತಾರೆ. ಇವರಲ್ಲಿ ಮತ್ತೊಂದು ವಿಶೇಷವಾದ ಆಚರಣೆಯನ್ನು ಆಚರಿಸುತ್ತಾರೆ. ಗಂಡು ಮಗುವಿಗೆ ಎರಡು ಕುರಿಯನ್ನು, ಹೆಣ್ಣು ಮಗುವಿಗೆ ಒಂದು ಕುರಿಯನ್ನು(ಊನವಿಲ್ಲದ್ದು) ಮಗುವಿನ ಮುಂದೆ ನಿವಾಳಿಸಿ, ಮಹಮದ್ ಪೈಗಂಬರ್ ಹೆಸರಿನಲ್ಲಿ ಕೊಯ್ದು, ಅದರ ಮಾಂಸವನ್ನು ಮೂರು ಪಾಲು ಮಾಡಿ, ಬಡವರಿಗೆ, ಸಂಬಂಧಿಕರಿಗೆ ಹಂಚಿ ಒಂದು ಪಾಲನ್ನು

ಮಾತ್ರ ತಾವು ಉಪಯೋಗಿಸುತ್ತಾರೆ ಅಥವಾ ಅಡುಗೆ ಮಾಡಿ ಸಂಬಂಧಿಕರಿಗೆ ಹಾಗೂ ಒಡವರಿಗೆ ಬಡಿಸುತ್ತಾರೆ. ಈ ಮಾಂಸವನ್ನು ಮಗುವಿನ ಅಜ್ಜ-ಅಜ್ಜಿ, ತಂದೆ-ತಾಯಿ ತಿನ್ನುವುದಿಲ್ಲ. ಒಂದು ವೇಳೆ ತಂದೆ-ತಾಯಿ ಈ ಆಚರಣೆ ಮಾಡದಿದ್ದ ಮಕ್ಕಳಿಗೆ ತಿಳುವಳಿಕೆ ಬಂದಾಗ ತಮ್ಮ ಹಖೀಖಾ ತಾವೇ ಮಾಡಿಕೊಳ್ಳುತ್ತಾರೆ. ಇಲ್ಲವಾದಲ್ಲಿ ಹಜ್ ಯಾತ್ರೆ ಕೈಗೊಳ್ಳುವವರು ಮೊದಲು ಹಖೀಖಾ ಆಚರಣೆ ಮಾಡಿ ನಂತರ ಹಜ್‌ಯಾತ್ರೆಗೆ ಹೊರಡುತ್ತಾರೆ.

ಮಗು ಹೊರಳಿದಾಗ ಮತ್ತು ಹೊಸ್ತಿಲು ದಾಟಿದಾಗ ಆಚರಿಸುವ ಪದ್ಧತಿ

ಮಗು ಮೊದಲ ಬಾರಿ ಹೊರಳಿದಾಗ (ಮಗುಚಿಕೊಂಡಾಗ) ಜೋಡಿ ತೆಂಗಿನಕಾಯಿಯಿಂದ ನಿವಾಳಿಸಿ ಒಡೆದು, ತೆಂಗಿನ ಚೂರನ್ನು ಸಕ್ಕರೆಯೊಂದಿಗೆ ಸೇರಿಸಿ ಹಂಚುತ್ತಾರೆ. ಹಾಗೂ ತವರಿಗೆ ಸುದ್ದಿ ಮುಟ್ಟಿಸಲಾಗುತ್ತದೆ. ತವರಿನಿಂದ ಹೊಸಬಟ್ಟೆ, ತಿಂಡಿ, ಉಡುಗೊರೆಯನ್ನು ಕೊಡುತ್ತಾರೆ.

ಮಗುವಿಗೆ ಊಟ ಮಾಡಿಸುವ ಪದ್ಧತಿ

ಮಗು ಹುಟ್ಟಿ ನಾಲ್ಕು ತಿಂಗಳು ತುಂಬಿದ ಸಮಯದಲ್ಲಿ ಮಗುವಿಗೆ ಊಟ ಮಾಡಿಸುತ್ತಾರೆ. ಅಂದು ಮಗುವಿನ ಸೋದರಮಾವ ಮಗುವಿಗೆ ಉಡುಗೊರೆಯನ್ನು ತರುತ್ತಾನೆ. ಹಾಗೂ ಬಲ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ರವೆ ಮತ್ತು ಹಾಲಿನಿಂದ ಮಾಡಿದ ತಿಂಡಿಗಳನ್ನು ಬಿಸ್ಮಿಲ್ಲಾ ಎಂದು ಹೇಳುತ್ತಾ ತಿನ್ನಿಸುತ್ತಾನೆ. ನಂತರ ಸೇರಿದ ಜನರೆಲ್ಲಾ ಮಗುವಿಗೆ ಉಡುಗೊರೆಯನ್ನು ನೀಡುತ್ತಾರೆ.

ಮಕ್‌ತಬ್

ಚಪ್ಪರ್‌ಬಂದ್ ಸಮುದಾಯದ ಮಗುವಿಗೆ ವಿದ್ಯಾಭ್ಯಾಸ ಮಾಡಿಸುವ ಮಂಗಲಕಾರ್ಯಕ್ಕೆ ಮಕ್‌ತಬ್ ಅಥವಾ ಬಿಸ್ಮಿಲ್ಲಾಖಾನಿ ಎಂದು ಕರೆಯುತ್ತಾರೆ. ಇಂದು ಮುಸ್ಲಿಮರಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆದ್ಯತೆ ಕೊಡಲಾಗಿದೆ. ಗಂಡು, ಹೆಣ್ಣು ಎಂಬ ಭೇದವಿಲ್ಲದೆ ಎಲ್ಲರಿಗೂ ಜ್ಞಾನಾರ್ಜನೆ ಮಾಡುವ ಸಮಾನ ಅವಕಾಶ ಒದಗಿಸಿ ಕೊಡಲಾಗಿದೆ. ಸಾಮಾನ್ಯವಾಗಿ ಮಗುವಿಗೆ ನಾಲ್ಕು ವರ್ಷ, ನಾಲ್ಕು ತಿಂಗಳು, ನಾಲ್ಕು ದಿನ, ನಾಲ್ಕು ಗಂಟೆ, ನಾಲ್ಕು ನಿಮಿಷ ತುಂಬುವಂತಹ ಕ್ಷಣದಲ್ಲಿ ಅದಕ್ಕೆ ಹೊಸ ಬಟ್ಟೆ ಉಡಿಸಿ, ಹೂವಿನ ಹಾರಹಾಕಿ ಶೃಂಗರಿಸಿ ಕೈಗೆ ಲಾಡನ್ನು ಕೊಟ್ಟು ಸಂಬಂಧಿಕರು-ನೆಂಟರಿಷ್ಟರು ಮಸೀದಿಯ ಪೇಶಿಮಾಮ್ ಅಥವಾ ತಿಳಿದವರಿಂದ ಖುರಾನಿನ "ಇಖ್ ರಾ-ಬಿಸ್ಮಿಕಾ" ಸೂರ ಹೇಳಿಕೊಡಲಾಗುವುದು. ಮಗು ಸೂರ ಹೇಳಿದ ಮೇಲೆ ಬಂದವರು ಮಗುವಿಗೆ ಉಡುಗೊರೆ ನೀಡುತ್ತಾರೆ. ನಂತರ ಮಾಂಸದೂಟ ನಡೆಯುತ್ತದೆ.

ರೋಜ್ಜರಖೀ

"ರಮ್‌ಜಾನ್" ತಿಂಗಳಿನಲ್ಲಿ ಮಗು ಮೊದಲಬಾರಿ ಉಪವಾಸವಿದ್ದರೆ ಮಗುವಿಗೆ ಹೊಸ ಬಟ್ಟೆ ಉಡಿಸುತ್ತಾರೆ. ಸಂಜೆ "ಇಫ್‌ತೀಯಾರ್" ಹೊತ್ತಿಗೆ ಸರಿಯಾಗಿ ಅಡುಗೆ ಮಾಡಿ ಸಂಬಂಧಿಕರಿಗೆ, ಬಡ ಬಗ್ಗರಿಗೆ ಊಟ ಬಡಿಸುತ್ತಾರೆ. ಇದನ್ನು ರೋಜ್ಜರಖೀ ಎಂದು ಹೇಳುತ್ತಾರೆ.

ಖತ್ನಾ

"ಖತ್ನಾ"ವನ್ನು ಮುಲ್ಲಾ(ಮುಂಜಿಸಾಬ್) ಮಾಡುತ್ತಾರೆ. ಗಂಡುಮಗು ಹುಟ್ಟಿದ ಏಳು ಅಥವಾ ನಲವತ್ತು ದಿವಸಕ್ಕೆ ಅಥವಾ ಮೂರು, ಐದು, ಏಳು, ಒಂಬತ್ತು, ಹನ್ನೊಂದು ವರ್ಷ ತುಂಬುವ ಮೊದಲು ಮಾಡಿಸಲಾಗುತ್ತದೆ. ಹನ್ನೊಂದು ವರ್ಷ ತುಂಬುವುದರ ಒಳಗೆ "ಖತ್ನಾ" ಮಾಡಿಸುವುದರಿಂದ ಜನನಾಂಗ ಎಳೆಯದಾಗಿದ್ದು ಅದಕ್ಕೆ ಹೆಚ್ಚು ತೊಂದರೆಯಾಗುವುದಿಲ್ಲ ಎಂಬ ನಂಬಿಕೆ ಇವರದು. ಹುಡುಗನಿಗೆ "ಖತ್ನಾ" ಮಾಡಿಸುವ ಮೊದಲು ಮೈತುಂಬ ಮಲ್‌ವಟ್, ಚಿಕ್ಸಾ, ಅರಿಶಿಣ ಹಚ್ಚಿ ಸ್ನಾನ ಮಾಡಿಸುತ್ತಾರೆ. ನಂತರ ಹೊಸ ಬಟ್ಟೆ ತೊಡಿಸಿ ಹೂವಿನ ಹಾರ ಹಾಕಿ ಸಂಬಂಧಿಕರ ಎದುರು "ಕಾಬಾ" ದಿಕ್ಕಿಗೆ ಮುಖಮಾಡಿ "ಮಸ್ನತ್" ಮೇಲೆ ಕೂರಿಸಲಾಗುತ್ತದೆ. ಸಾಮಾನ್ಯವಾಗಿ ಈ ಶಾಸ್ತ್ರದಲ್ಲಿ ಹಸಿರು ಗಿಡವನ್ನು ಇಡಲಾಗುತ್ತದೆ. ಹಸಿರು ಗಿಡ ಸಮೃದ್ಧಿಯ ಸಂಕೇತ ಎಂಬ ನಂಬಿಕೆಯಿಂದ. ಮಗುವಿನ ಅಜ್ಜಿ ಮೊಮ್ಮಗನಿಗೆ ಹಾರಹಾಕಿ, ಕೈಗೆ ಗಜ್‌ರೇ, ತಲೆಗೆ ಸಹೇರ ಕಟ್ಟಿ, ಕುತ್ತಿಗೆಗೆ ಗಂಧಹಚ್ಚಿ ಉಡುಗೊರೆಯನ್ನು ನೀಡುತ್ತಾಳೆ. ನಂತರ ಹುಡುಗನನ್ನು ಮೆರವಣಿಗೆ ಮಾಡಿಕೊಂಡು ಬರುತ್ತಾರೆ. ಬೆತ್ತಲೆಯಾದ ಹುಡುಗನ ಶಿಶ್ನದ ನೇರಕ್ಕೆ ಸರಿಯಾಗಿ ಹಿತ್ತಾಳೆಯ ತಟ್ಟೆಯಲ್ಲಿ ಬೂದಿ ಇಡುವರು. ಹೆದರುತ್ತಿರುವ ಹುಡುಗನಿಗೆ ಧೈರ್ಯ ತುಂಬುತ್ತ ನಾಲ್ಕು ಅಥವಾ ಐದು ಜನ ಪುರುಷರು ಹುಡುಗನನ್ನು ಹಿಡಿದುಕೊಳ್ಳುವರು. ಆಗ ಮುಲ್ಲಾನು ಶಿಶ್ನದ ತುದಿಯ ಚರ್ಮವನ್ನು ಎಳೆದು ಕತ್ತರಿಸಿ, ತಕ್ಷಣ ಚರ್ಮ ಹಿಂದಕ್ಕೆ ಸರಿಸಿ ಔಷಧ ಹಚ್ಚುತ್ತಾನೆ. "ಖತ್ನಾ" ಆದ ಮೇಲೆ ಹುಡುಗ ಮುಸ್ಲಿಂ ಆದ ಎಂಬ ನಂಬಿಕೆ ಇವರದು. ಇಲ್ಲದಿದ್ದಲ್ಲಿ ಅವನನ್ನು "ಕಾಫರ್" ಎಂದು ಪರಿಗಣಿಸುತ್ತಾರೆ. ಹುಡುಗನ ಕುಟುಂಬ ತೀರಾ ಬಡತನದಲ್ಲಿದ್ದರೆ ಮಸೀದಿಯ "ಜಮಾತ್" ಕಡೆಯಿಂದ "ಖತ್ನಾ" ಮಾಡಿಸುತ್ತಾರೆ".[೬]

ಕಿವಿ ಚುಚ್ಚುವ ಶಾಸ್ತ್ರ

ಹೆಣ್ಣು ಮಕ್ಕಳಿಗೆ ವಿಶೇಷವಾಗಿ ೧೦-೧೨ ವಯಸ್ಸಿನಲ್ಲಿ ಕಿವಿ ಚುಚ್ಚುವ ಶಾಸ್ತ್ರ ಮಾಡುತ್ತಾರೆ. ಹುಡುಗಿಗೆ ಕಿವಿಚುಚ್ಚುವ ದಿನ ಅಜ್ಜಿ (ಹುಡುಗಿಯ ತಾಯಿಯ ತವರುಮನೆಯವರು) ತನ್ನ ಮೊಮ್ಮಗಳಿಗೆ ಹೊಸ ಬಟ್ಟೆ, ಕಿವಿಯ ಆಭರಣ, ಹೂವಿನ ಹಾರ, ಬಳೆ ಮುಂತಾದವುಗಳನ್ನು ತರುತ್ತಾಳೆ. ಹುಡುಗಿಯನ್ನು ಶೃಂಗರಿಸಿ "ಮಸ್ನತ್" ಮೇಲೆ "ಕಾಬಾ" ದಿಕ್ಕಿಗೆ ಮುಖಮಾಡಿ ಕೂರಿಸುತ್ತಾರೆ. ಎಲೆ, ಅಡಿಕೆ, ಬಾಳೆಹಣ್ಣು, ಸಕ್ಕರೆ, ಸುಗಂಧದೆಣ್ಣೆ, ಹೂವಿನ ಹಾರದ ತಟ್ಟೆಗಳ ಮೇಲೆ "ಸರ್‌ಪೋಷ್" ಎಂಬ ಬಟ್ಟೆ ಮುಚ್ಚಿ ಹುಡುಗಿಯ ಮುಂದೆ ಇಡುತ್ತಾರೆ. ಅಜ್ಜಿ ಮೊಮ್ಮಗಳಿಗೆ ಮೊದಲು ಹೂವಿನ ಹಾರ ಹಾಕಿ, ಗಜ್‌ರೇ ಕಟ್ಟಿ, ಹೂ ಮುಡಿಸಿ, ಬಾಳೆಹಣ್ಣು, ಸಕ್ಕರೆ, ಎಲೆ ಅಡಿಕೆಯೊಂದಿಗೆ ಮಡಿಲು ತುಂಬಿ, ಕುತ್ತಿಗೆಗೆ ಗಂಧ ಹಚ್ಚಿ ಕಿವಿಯ ಆಭರಣವನ್ನು ಉಡುಗೊರೆಯಾಗಿ ನೀಡುತ್ತಾಳೆ. ಬಂದ ನೆಂಟರಿಷ್ಟರೆಲ್ಲರೂ ಹುಡುಗಿಯ ಕುತ್ತಿಗೆಗೆ ಗಂಧ ಹಚ್ಚಿ

ತಮ್ಮ ಇಚ್ಛಾನುಸಾರ ಉಡುಗೊರೆಯನ್ನು ನೀಡುತ್ತಾರೆ. ನಂತರ ಅನುಭವಸ್ಥ ಮಹಿಳೆ ಹುಡುಗಿಯ ಕಿವಿ ಚುಚ್ಚಿ ಆಭರಣವನ್ನು ತೊಡಿಸುತ್ತಾಳೆ. ನಂತರ ಮುಖದ ಮುಂದೆ ಮೂರು ಬಾರಿ ಕೊಬ್ಬರಿಯನ್ನು ನಿವಾಳಿಸಿ ಕಿವಿಯ ಹತ್ತಿರ ಮುರಿಯಲಾಗುತ್ತದೆ.

ಋತುಮತಿ ಆಚರಣೆ

ಚಪ್ಪರ್‌ಬಂದ್ ಸಮುದಾಯದಲ್ಲಿ ಹೆಣ್ಣುಮಗಳು ಋತುಮತಿಯಾದಳೆಂದು ತಿಳಿದ ಕೂಡಲೇ ಮುತ್ತೈದೆಯರಿಂದ ನೀರೆರೆಯುತ್ತಾರೆ. ವಾಸದ ಮನೆಯ ಪ್ರತ್ಯೇಕ ಕೊಠಡಿಯಲ್ಲಿ ಹಾಸಿಗೆ ಹಾಸಿ, ಅದರ ಮೇಲೆ ಕೂರಿಸುತ್ತಾರೆ. ಕೆಲವರು ಹೊಸ ಸೀರೆ ಉಡಿಸಿ ಶಾಸ್ತ್ರಕ್ಕೆ ಕೂರಿಸುತ್ತಾರೆ. ಎಲೆ, ಅಡಿಕೆ, ಬಾಳೆ ಹಣ್ಣಿನಿಂದ ಮಡಿಲು ತುಂಬುತ್ತಾರೆ. ಮುತ್ತೈದೆಯರು ಕುತ್ತಿಗೆಗೆ ಗಂಧ ಹಚ್ಚಿ, ದುಡ್ಡು ಅಥವಾ ಕೊಬ್ಬರಿ, ಬೆಲ್ಲ, ಎಳ್ಳು, ಹೂವು ನೀಡುತ್ತಾರೆ. ಪ್ರತಿದಿನ ಬಿಸಿ ನೀರಿನ ಸ್ನಾನ ಮಾಡಿಸಿ ಮಡಿ ಬಟ್ಟೆ ಹಾಕುತ್ತಾರೆ. ಇವಳ ಕೋಣೆಗೆ ಹೊರಗಿನವರು ಬರುವಂತಿಲ್ಲ. ಏಳು ಅಥವಾ ಒಂಬತ್ತು ದಿನಕ್ಕೆ ಸೂತಕದ ನೀರೆರೆಯುತ್ತಾರೆ. ಹುಡುಗಿ ಋತುಮತಿಯಾದ ಇಪ್ಪತ್ತೊಂದನೇ ದಿನದ ಸಂಜೆ ಹಾಗೂ ಇಪ್ಪತ್ತೆರಡನೇ ದಿನದ ಬೆಳಿಗ್ಗೆ ಎರಡು ಹೊತ್ತು ಸೂತಕದ ನೀರೆರೆದು ಶಾಸ್ತ್ರಕ್ಕೆ ಕೂರಿಸುತ್ತಾರೆ. ಹೆಂಗಸರು ಹಾಡು ಹಾಡುತ್ತ ಹುಡುಗಿಯನ್ನು ಹಾಸ್ಯ ಮಾಡಿ ನಗಿಸುತ್ತಾರೆ.

141336
ಅಕ್ಷರ ಗ್ರಂಥಾಲಯ
ವಿ.ವಿ. ಹಂಪಿ

ಮದುವೆ ಆಚರಣೆ

ಚಪ್ಪರ್‌ಬಂದ್ ಸಮುದಾಯದಲ್ಲಿ ಮದುವೆ ಸರಳವಾಗಿ ನಡೆಯುತ್ತದೆ. ಹಿಂದೆ ಎರಡರಿಂದ ಮೂರು ದಿನ ನಡೆಯುತ್ತಿದ್ದ ಮದುವೆ ಇಂದು ತೀರಾ ಸರಳಗೊಂಡಿದೆ. ಹೆಣ್ಣನ್ನು ನೋಡುವ ಪೂರ್ವದಲ್ಲಿ ಎರಡು ಕಡೆಯ ಪಾಲಕ/ಪೋಷಕರಿಗೆ ಒಪ್ಪಿಗೆ ಇರಬೇಕಾಗುತ್ತದೆ. ಗಂಡಿಗೆ ಹೆಣ್ಣು ಒಪ್ಪಿಗೆಯಾದಲ್ಲಿ ಹಾಗೂ ಹಿರಿಯರ ಒಪ್ಪಿಗೆ ಇದ್ದಲ್ಲಿ ಮದುವೆಗೆ ಹಸಿರು ನಿಶಾನೆ ದೊರೆಯುತ್ತದೆ. ನಂತರ ನಿಶ್ಚಿತಾರ್ಥದ ಕಾರ್ಯಕ್ರಮ ಮಾಡುತ್ತಾರೆ. ಇದಕ್ಕೆ ಈ ಸಮುದಾಯದವರು "ಮಂಗ್ನಿ" ಎಂದು ಕರೆಯುತ್ತಾರೆ. ಅಂದು ಹೆಣ್ಣಿನ ಮನೆಗೆ ಗಂಡಿನವರು ಬಂದು ಹೆಣ್ಣಿಗೆ ಹೊಸ ಬಟ್ಟೆ, ಒಡವೆ ಕೊಟ್ಟು ಗಂಡು ಮತ್ತು ಹೆಣ್ಣು ಉಂಗುರ ಬದಲಾವಣೆ ಮಾಡಿಕೊಳ್ಳುತ್ತಾರೆ. ನಂತರ ಹಿರಿಯರೆಲ್ಲರೂ ಸೇರಿ ಮದುವೆಯ ಮುಹೂರ್ತವನ್ನು ನಿಗದಿಪಡಿಸುತ್ತಾರೆ.

ಮದುವೆಯ ಮೊದಲ ದಿನದಂದು ಅರಿಶಿಣ ನೀರಿನ ಶಾಸ್ತ್ರವನ್ನು ಮಾಡುತ್ತಾರೆ. ಇದಕ್ಕೆ "ಶುಕ್ರಾನಾ" ಎಂದು ಕರೆಯುತ್ತಾರೆ. ಹೆಚ್ಚಾಗಿ ಹೆಣ್ಣಿನ ಮನೆಯಲ್ಲಿ ಮದುವೆ ಕಾರ್ಯಕ್ರಮ ನಡೆಯುತ್ತದೆ. ಮದುವೆಯ ದಿನ ಮದುವೆಗೂ ಮುಂಚೆ ಈ ಸಮುದಾಯದಲ್ಲಿ "ನಿಖಾ" ಮಾಡಲಾಗುತ್ತದೆ. ನಿಖಾ ಎಂದರೆ ಗಂಡು ಹೆಣ್ಣಿಗೆ ಮಂಗಳಸೂತ್ರ ತೊಡಿಸುವುದು. ಈ ಸಂದರ್ಭದಲ್ಲಿ ಗಂಡು ಹೆಣ್ಣಿನ ಕಿವಿಯಲ್ಲಿ ಇಸ್ಲಾಂ ಧರ್ಮದ ಮಂತ್ರವನ್ನು ಹೇಳುತ್ತಾರೆ. ನಂತರದಲ್ಲಿ ವಧು-ವರರ ಗೃಹಪ್ರವೇಶವಿರುತ್ತದೆ. ಇದಕ್ಕೆ "ವರಿಮಾ" ಎಂದು ಹೇಳುತ್ತಾರೆ. ಮದುವೆಯ ದಿನ ಮಾಂಸದೂಟ ಮಾಡಿ ಬಡಿಸುತ್ತಾರೆ. ಚಪ್ಪರ್‌ಬಂದ್ ಸಮುದಾಯದಲ್ಲಿ

ಅಂತರ್ಜಾತಿಯ ವಿವಾಹ ನಿಷಿದ್ಧ. ಹಾಗೆಯೇ ಪ್ರೇಮ ವಿವಾಹವನ್ನು ಸಮುದಾಯದ ಜನ ಖಂಡಿಸುತ್ತಾರೆ. ಉಳಿದ ಮೇಲ್ವರ್ಗದ ಮುಸ್ಲಿಂ ಸಮುದಾಯದೊಡನೆಯೂ ಇವರು ಸಂಬಂಧ ಬೆಳೆಸುವುದಿಲ್ಲ. ತಮ್ಮ ಒಳ ಪಂಗಡಗಳಲ್ಲೇ ಸಂಬಂಧ ಬೆಳೆಸುತ್ತಾರೆ.

ಧಾರ್ಮಿಕತೆ

ಚಪ್ಪರ್‌ಬಂದ್ ಸಮುದಾಯದವರು ಹಿಂದೂ ಹಾಗೂ ಮುಸ್ಲಿಂ ಹಬ್ಬಗಳನ್ನು ಆಚರಿಸುತ್ತಾರೆ. ಮೊಹರಂ, ರಂಜಾನ್, ಬಕ್ರೀದ್ ಹಾಗೂ ಹಿಂದುಗಳ ಹಬ್ಬಗಳಾದ ನಾಗರಪಂಚಮಿ, ಎಳ್ಳ ಅಮಾವಾಸ್ಯೆ, ದಸರಾ, ದೀಪಾವಳಿ ಮುಂತಾದವುಗಳು. ಆಧುನಿಕತೆಯ ಪ್ರಭಾವದಿಂದಾಗಿ ತಮ್ಮ ಆರಾಧ್ಯ ದೈವಗಳನ್ನು ಆರಾಧಿಸುವುದು ಕಡಿಮೆಯಾಗುತ್ತಿದೆ. ಉಳಿದ ಮುಸ್ಲಿಂ ಪಂಗಡಗಳಂತೆ ಜೀವನದಲ್ಲಿ ಒಂದು ಬಾರಿಯಾದರೂ ಮೆಕ್ಕಾವನ್ನು ನೋಡಿಬರುವುದು ಇವರ ಕನಸಾಗಿದೆ. ಕೆಲವು ಚಪ್ಪರ್‌ಬಂದಿಗಳು ಮೆಕ್ಕಾಕ್ಕೆ ಹೋಗಿ ಬಂದಿದ್ದಾರೆ.

ಸಾವಿನ ಕುರಿತ ಆಚರಣೆ

ಚಪ್ಪರ್‌ಬಂದ್ ಸಮುದಾಯದ ಒಂದು ಕುಟುಂಬದಲ್ಲಿ ಯಾರಾದರೂ ಸಾವನ್ನೊಪ್ಪಿದರೆ ಊರಿನ ಎಲ್ಲಾ ಮನೆಯವರೂ (ಚಪ್ಪರ್‌ಬಂದ್ ಸಮುದಾಯದ) ಸಾವನ್ನು ಹೊಂದಿರುವ ಕುಟುಂಬದ ಉಳಿದ ಸದಸ್ಯರಿಗೆ ಸಾಂತ್ವನ ಹೇಳುತ್ತಾರೆ. ಅವರಿಗೆ ಆ ಸಮಯದಲ್ಲಿ ಏನೇ ಕಷ್ಟಗಳಿದ್ದರೂ ಎಲ್ಲರೂ ಸೇರಿಕೊಂಡು ಸಹಾಯ ಮಡುತ್ತಾರೆ. ಇಲ್ಲಿ ತಮ್ಮ ಸಮುದಾಯದ ಒಗ್ಗಟ್ಟಿನ ಬಲವನ್ನು ಪ್ರದರ್ಶಿಸುತ್ತಾರೆ. ಇಸ್ಲಾಂ ಧರ್ಮಕ್ಕನುಸಾರವಾಗಿಯೇ ಅಂತ್ಯ ಸಂಸ್ಕಾರ ನಡೆಸಲಾಗುತ್ತದೆ. ಶವವನ್ನು ಹೂವುಗಳಿಂದ ಅಲಂಕರಿಸಿ ಗಾಡಿಯಲ್ಲಿ/ಶವಪೆಟ್ಟಿಗೆಯಲ್ಲಿ ತೆಗೆದುಕೊಂಡು ಹೋಗುತ್ತಾರೆ. ಈ ಶವ ಪೆಟ್ಟಿಗೆಗೆ "ಜನಸ್ಥಾ" ಎಂದು ಹೇಳುತ್ತಾರೆ. ಶವವನ್ನು ಮನೆಯಿಂದ ತಂದು ಸ್ಮಶಾನಕ್ಕೆ ಒಯ್ಯುತ್ತಾರೆ. ಈ ಸಮುದಾಯದಲ್ಲಿ ಹೆಂಗಸರು, ಹೆಣ್ಣು ಮಕ್ಕಳು ಶವದ ಹಿಂದೆ ಸ್ಮಶಾನಕ್ಕೆ ಹೋಗುವಂತಿಲ್ಲ. ಮನೆಯ ಹೊರ ಬಾಗಿಲಿನವರೆಗೆ ಬಂದು ಶವವನ್ನು ಬೀಳ್ಕೊಡುತ್ತಾರೆ. ಸ್ಮಶಾನಕ್ಕೆ ತಂದ ಶವವನ್ನು ಹೂಳಲಾಗುತ್ತದೆ. ಶವವನ್ನು ಹೂಳಿದ ನಂತರ ಮೇಲ್ಭಾಗದಲ್ಲಿ ಗೋರಿಯ ರೂಪದಲ್ಲಿ ಮಣ್ಣನ್ನು ಇಡಲಾಗುತ್ತದೆ. ಸಾವು ಸಂಭವಿಸಿದ ಮಾರನೇಯ ದಿನದಿಂದ ಮನೆಯಲ್ಲಿ ಖುರಾನ್ ಪಠಿಸಲಾಗುತ್ತದೆ. ಮನೆಯಲ್ಲಿ ಸುಶಿಕ್ಷಿತರಿದ್ದರೆ ಮನೆಯ ಸದಸ್ಯರೇ ಖುರಾನ್ ಪಠಿಸುತ್ತಾರೆ. ಮನೆಯಲ್ಲಿ ಓದುಬರುವವರು ಇಲ್ಲದಿದ್ದಾಗ ಸಮೀಪದ ದರ್ಗಾದ "ಮುಲ್ಲಾ" ಅವರು ಬಂದು ಖುರಾನ್ ಪಠಿಸಿ ಹೋಗುತ್ತಾರೆ. ಸಾವು ಸಂಭವಿಸಿದ ಇಪ್ಪತ್ತು, ಮೂವತ್ತು ಹಾಗೂ ನಲವತ್ತನೇ ದಿನದಂದು ಸಾವಿನ ಕುರಿತು ಕಾರ್ಯಕ್ರಮ ಆಚರಿಸುತ್ತಾರೆ. ನಂತರ ಮಾಂಸದೂಟ ಮಾಡಿ ಬಂದ ನೆಂಟರಿಗೆ ಹಾಗೂ ಬಂಧುಗಳಿಗೆ ಊಟ ಹಾಕಲಾಗುತ್ತದೆ.

ರಾಜಕೀಯ ಮತ್ತು ಶೈಕ್ಷಣಿಕ ವ್ಯವಸ್ಥೆ

ರಾಜ್ಯದಲ್ಲಿ ಸುಮಾರು ಒಂದು ಲಕ್ಷ ಜನಸಂಖ್ಯೆಯನ್ನು ಮಾತ್ರ ಹೊಂದಿರುವ ಚಪ್ಪರ್‌ಬಂದ್ ಸಮುದಾಯಗಳಿಗೆ ಪೂರ್ಣ ಪ್ರಮಾಣದ ರಾಜಕೀಯ ನಾಯಕತ್ವ ಈವರೆಗೆ ಸಿಕ್ಕಿಲ್ಲ. ಸಂವಿಧಾನದ ನಿಯಮಕ್ಕೆ ಅನುಗುಣವಾಗಿ ಜಿಲ್ಲೆ, ತಾಲೂಕು, ಪಟ್ಟಣ ಪಂಚಾಯತಿ, ಗ್ರಾಮ ಪಂಚಾಯತಿಯಲ್ಲಿ ಮೀಸಲಾತಿ ಇರುವುದರಿಂದ ಕೆಲವೊಬ್ಬರಿಗೆ ಮಾತ್ರ ಈ ಅವಕಾಶ ದೊರೆತಿದೆ. ಇಲ್ಲಿ ಚುನಾಯಿತರಾದರೂ ಇವರುಗಳು ಬೇರೆಯವರ (ಪ್ರಭುತ್ವದ) ತಾಳಕ್ಕೆ ಹೆಜ್ಜೆ ಇಡಬೇಕಾಗಿರುತ್ತದೆ. ಹೆಸರಿಗೆ ಮಾತ್ರ ಇವರಿಗೆ ಇಲ್ಲಿ ಅಧಿಕಾರ. ನಿರ್ಣಯ ತೆಗೆದುಕೊಳ್ಳುವುದು ಅಧಿಕಾರದಲ್ಲಿರುವವರು. (ಪ್ರಭುತ್ವದಲ್ಲಿರುವವರು) ಇವರು ಕೇವಲ ಮೀಸಲಾತಿ ಸ್ಥಾನವನ್ನು ತುಂಬಲು ಬಂದವರು. ಇವರಿಗೆ ಪೂರ್ಣ ಪ್ರಮಾಣದ ರಾಜಕೀಯಕ್ಕೆ ಬರಲು ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ. ಯಾಕೆಂದರೆ ಇವರ ಶೈಕ್ಷಣಿಕ ಅರ್ಹತೆ ಕಡಿಮೆ ಇದ್ದು, ರಾಜಕೀಯ ಕ್ಷೇತ್ರದಲ್ಲೂ ಕಡಿಮೆ ಅನುಭವ ಹೊಂದಿರುತ್ತಾರೆ. ಆದರೆ ಇಂದು ಚಪ್ಪರ್‌ಬಂದ್ ಸಮುದಾಯದ ಸ್ತ್ರೀಯರು ಮೀಸಲಾತಿ ಸ್ಥಾನಕ್ಕೆ ಆಯ್ಕೆಯಾಗಿ ಜಿಲ್ಲಾ ಪಂಚಾಯತಿ, ಗ್ರಾಮ ಪಂಚಾಯತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಸಂತೋಷದ ವಿಷಯ.

ಚಪ್ಪರ್‌ಬಂದ್ ಸಮುದಾಯದಲ್ಲಿ ಓದಿದವರ ಪ್ರಮಾಣ ತುಂಬಾ ಕಡಿಮೆ. ಇತ್ತೀಚಿನ ದಿನಗಳಲ್ಲಿ ಆ ಪ್ರಮಾಣ ಏರಿಕೆಯಾಗಿದೆ. ಬಹುತೇಕರನ್ನು ಕೇಳಿದಾಗ ನಮಗೆ ಹೊಟ್ಟೆ ಹೊರೆದುಕೊಳ್ಳುವುದೆ ಕಷ್ಟ, ಇನ್ನು ಓದಿದರೆ ಹೊಟ್ಟೆ ತುಂಬುತ್ತದೆಯಾ? ನಮ್ಮಂತವರಿಗೆ ಯಾರು ಉದ್ಯೋಗ ನೀಡುತ್ತಾರೆ ಎಂದು ಹೇಳುತ್ತಾರೆ. ಹೆಚ್ಚಾಗಿ ಹೈಸ್ಕೂಲ್‌ರವರೆಗೆ ಓದಿದವರೆ ಹೆಚ್ಚು. ಈ ಸಮುದಾಯದಿಂದ ಒಬ್ಬ ವೈದ್ಯ, ಇಂಜಿನಿಯರ್ ಬಂದಿಲ್ಲ. ಮೆಟ್ರಿಕ್‌ವರೆಗೆ ಉರ್ದು ಶಿಕ್ಷಣ ಕಲಿತು ನಂತರ ಕೆಲಸಕ್ಕೆ ಸೇರುವುದು ಅಥವಾ ಸ್ವಂತ ಉದ್ಯೋಗ ಮಾಡುವುದು ಇವರಲ್ಲಿ ರೂಢಿ ಇದೆ. ಬೆರಳಣಿಕೆಯಷ್ಟು ಜನ ಹೆಚ್ಚಿನ ವಿದ್ಯಾಭ್ಯಾಸ ಮಾಡಿ (ಆರ್ಥಿಕ ಪರಿಸ್ಥಿತಿ ಅನುಕೂಲ ಮಾಡಿಕೊಂಡವರು) ಸೂಕ್ತ ರೀತಿಯ ಉದ್ಯೋಗ ಗಿಟ್ಟಿಸಿಕೊಳ್ಳುವುದರಲ್ಲಿ ಪರದಾಡುತ್ತಿದ್ದಾರೆ.

ಕೃಷಿ-ಭೂ ಹಿಡುವಳಿ-ಪಶುಪಾಲನೆ

ಚಪ್ಪರ್‌ಬಂದ್ ಸಮುದಾಯ ಮೂಲತಃ ಪಶುಪಾಲಕರಲ್ಲ. ಇವರು ಎತ್ತು, ಆಕಳು, ಹೋರಿ, ಕರು, ಎಮ್ಮೆ, ಕೋಣ, ಕುರಿ, ಮೇಕೆ, ಕೋಳಿಗಳನ್ನು ಸಾಕುವುದು ತುಂಬಾ ಕಡಿಮೆ. ಇತ್ತೀಚಿಗೆ ಕೆಲವರು ಮೇಕೆ, ಕುರಿ, ಕೋಳಿಗಳನ್ನು ಸಾಕುತ್ತಿದ್ದಾರೆ. ಈ ಪ್ರಾಣಿಗಳನ್ನು ಇವರು ಮಾಂಸಾಹಾರಕ್ಕಾಗಿ ಸಾಕುತ್ತಾರೆ. ಕೆಲವರು ಮಾತ್ರ ಹೈನುಗಾರಿಕೆಯ ಉತ್ಪನ್ನಗಳನ್ನು ನೀಡುವ ಎಮ್ಮೆ, ಹಸು ಮುಂತಾದವುಗಳನ್ನು ಸಾಕಲು ಇಂದಿನ ದಿನಗಳಲ್ಲಿ ಒಲವು ತೋರುತ್ತಿದ್ದಾರೆ.

ವಿಜಾಪುರ ತಾಲೂಕಿನಲ್ಲಿ ಇರುವ ಚಪ್ಪರ್‌ಬಂದ್ ಸಮುದಾಯದ ಕೆಲವು ಕುಟುಂಬಗಳ ಬಳಿ ಕೃಷಿ ಭೂಮಿ ಇದ್ದು ಅದನ್ನು ಸಾಗುವಳಿ ಮಾಡುತ್ತಿದ್ದಾರೆ. ಈ ತುಂಡು ಭೂಮಿಯಲ್ಲಿ

ಕೆಲವು ದವಸ ಧಾನ್ಯಗಳನ್ನು ಬೆಳೆಯುತ್ತಾರೆ. ಆದರೆ ಇದರಿಂದ ಬರುವ ಆದಾಯದಲ್ಲಿ ಜೀವನ ನಿರ್ವಹಣೆ ಕಷ್ಟ. ಆದ್ದರಿಂದ ಸುತ್ತಲಿನ ಶ್ರೀಮಂತರ ಜಮೀನಿನಲ್ಲಿ ಕೃಷಿ ಕೂಲಿ ಕೆಲಸಕ್ಕೆ ಹೋಗುತ್ತಾರೆ. ಇವರ ಆರ್ಥಿಕ ಪರಿಸ್ಥಿತಿ ತುಂಬಾ ಅಸಹಾಯಕ ಸ್ಥಿತಿಯಲ್ಲಿರುವುದರಿಂದ ಆಧುನಿಕ ತಂತ್ರಜ್ಞಾನವಾಗಲಿ, ರಸಗೊಬ್ಬರದ ಬಳಕೆಯಾಗಲಿ ಮಾಡಲು ಆಗುತ್ತಿಲ್ಲ. ಬರುವ ಇಳುವರಿಯೂ ತುಂಬಾ ಕಡಿಮೆ. ಆದ್ದರಿಂದ ಇವರು ವರ್ಷದ ಕೆಲವು ಕಾಲ ಕೆಲಸ ಅರಸಿ ಬೇರೆ ಕಡೆಗೆ ಹೋಗುತ್ತಾರೆ. ಒಟ್ಟಿನಲ್ಲಿ ಇನ್ನೂ ಕೆಲವರು ಅಲೆಮಾರಿಗಳಾಗಿಯೇ ಬದುಕುತ್ತಿದ್ದಾರೆ.

ಶೀಲಿಗ ಸಮುದಾಯ

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಕೆಂಗ್ರೆ ಹೊಳೆಯ ಆಸುಪಾಸಿನಲ್ಲಿ ಕೇವಲ ಸಾವಿರ ಜನಸಂಖ್ಯೆಯನ್ನು ಹೊಂದಿರುವ ಅಲಕ್ಷಿತ ಜನಾಂಗವೇ ಶೀಲಿಗರ ಜನಾಂಗ. ಕಾಡಿನ ಮರೆಯಲ್ಲಿ ಯಾವುದೇ ಸದ್ದಿಲ್ಲದೇ, ಯಾವುದೇ ಮೂಲ ಸೌಕರ್ಯವನ್ನು ಹೊಂದದೇ ಜೀವನ ನಡೆಸುತ್ತಿರುವ ವನವಾಸಿ ಜನಾಂಗವೇ ಶೀಲಿಗರು. ಶೀಲಿಗರು ಅಂದರೆ ಸಚ್ಚಾರಿತ್ರ್ಯ ಉಳ್ಳವರು, ಶೀಲವಂತರು ಎಂದರ್ಥ. ಹಾಗೇ ಇವರು ನೀತಿ, ನಿಯತ್ತಿಗೆ ಹೆಸರಾದವರು. ಇವರು ಸಿರಸಿ ತಾಲೂಕಿನ ಸ್ವರ್ಣವಲ್ಲಿ ಮಹಾಸಂಸ್ಥಾನದ ಸೇವಕರು ಹಾಗೂ ಭಕ್ತರೂ ಹೌದು.

ಇತಿಹಾಸದ ಪ್ರಕಾರ ಸುಮಾರು ೪೦೦ ವರ್ಷಗಳ ಹಿಂದೆ ಕುಮಟಾ ತಾಲೂಕಿನ ಕಡತೋಕ ಗ್ರಾಮದಲ್ಲಿರುವ ಶ್ರೀ ಲಕ್ಷ್ಮೀ ನರಸಿಂಹ ದೇವರಿಗೆ ಅಲ್ಲಿನ ಸುತ್ತ ಮುತ್ತಲಿನ ಜನಾಂಗಗಳು ಸೇವೆ ಸಲ್ಲಿಸುತ್ತಿದ್ದರು. ಅವರಲ್ಲಿ ಹಾಲಕ್ಕಿ, ಒಕ್ಕಲಿಗರು, ಬ್ರಾಹ್ಮಣರು ಇತ್ಯಾದಿ ಜನಾಂಗದವರು. ನಂತರ ಮೂಲ ದೇವರನ್ನು ಇಂದಿನ ಶಿರಸಿ ತಾಲೂಕಿನ ಸ್ವರ್ಣವಲ್ಲಿಗೆ ಸ್ಥಳಾಂತರಿಸಲಾಯಿತು. ಆ ಸಂದರ್ಭದಲ್ಲಿ ಶ್ರೀ ಮಠದ ಸೇವೆಗಾಗಿ ಮೂಲ ಹಾಲಕ್ಕಿ ಸಮುದಾಯದಿಂದ ಬಹಿಷ್ಕರಿಸಲ್ಪಟ್ಟ ಕೆಲವು ಕುಟುಂಬಗಳು ಶಿರಸಿಯ ಸ್ವರ್ಣವಲ್ಲಿಗೆ ಬಂದರು. ಇವರು ದೇವರ ಸೇವೆಗಾಗಿ ಬಂದವರು. ನಂತರ ಕೆಂಗ್ರೆ ನದಿಯ ತೀರದಲ್ಲಿ ಇರುವ ಕಾಡಿನಲ್ಲಿ ವಾಸವಾಗಿದ್ದು ಅಲ್ಲಿಯೇ ಹೊಲ, ಗದ್ದೆಗಳನ್ನು ಮಾಡಿಕೊಂಡು ಜೀವನ ಸಾಗಿಸಲು ಪ್ರಾರಂಭಿಸಿದರು. ಹೀಗೆ ಜೀವನ ನಡೆಸುತ್ತ ಬಂದಿರುವ ಜನರು ತುಂಬಾ ಸಚ್ಚಾರಿತ್ರ್ಯವಂತರು, ಮುಗ್ಧರು ಹಾಗೂ ನೀತಿ ನಿಯತ್ತಿಗೆ ಹೆಸರಾದವರು. ಆದ್ದರಿಂದ ಇಲ್ಲಿಯ ಜನರು ಇವರನ್ನು ಶೀಲಿಗರು ಎಂದು ಕರೆಯಲು ಪ್ರಾರಂಭಿಸಿದರು. ಶೀಲಿಗರ ಪ್ರಕಾರ ತಾವು ಹಾಲಕ್ಕಿ ಮೂಲದವು ಎನ್ನುತ್ತಾರೆ. ಆದರೆ ಇದಕ್ಕೆ ಯಾವುದೇ ದಾಖಲೆಗಳೂ ಇಲ್ಲ. ಇಂದಿಗೂ ಈ ಜನಾಂಗ ತಮ್ಮ ನಿಯತ್ತಿಗೆ ಹೆಸರಾಗಿ ತಮ್ಮ ಪಾಡಿಗೆ ತಾವು ಕಾಡಿನಲ್ಲಿ ಜೀವನ ನಡೆಸುತ್ತಾ ಬಂದಿದ್ದಾರೆ. ಸುತ್ತಲೂ ಇರುವ ಜನಾಂಗದವರೊಂದಿಗೆ ಸಹ ಬಾಳ್ವೆಯನ್ನು ಮಾಡುತ್ತಾ, ಯಾರಿಂದಲೂ ಉಪೇಕ್ಷೆಗೆ ಒಳಗಾಗದ ಜನಾಂಗವೇ ಈ ಶೀಲಿಗರು. ಶೀಲಿಗರೂ ಸ್ವರ್ಣವಲ್ಲಿ ಮಠಕ್ಕೋಸ್ಕರ ತಮ್ಮ ಪ್ರಾಣವನ್ನೂ ನೀಡಲು ಸದಾ ಸಿದ್ಧರಿದ್ದಾರೆ. ಹಾಗೆಯೇ ಶ್ರೀ ಮಠ ಇವರನ್ನು ಗೌರವಯುತವಾಗಿ ನಡೆಸಿಕೊಳ್ಳುತ್ತಿದೆ.

ಸಾಮಾಜಿಕ ವ್ಯವಸ್ಥೆ

ಬಳಿ, ನಿಲುಮೆ ಮತ್ತು ಸ್ವಭಾವ

ಶೀಲಿಗರಲ್ಲಿ ಕುಟುಂಬಗಳು ಮೂಲಸ್ಥಾನದ ಆಧಾರದ ಮೇಲೆ ವಂಶಾವಳಿ ಉಪನಾಮಗಳನ್ನು ಹೊಂದಿದ್ದಾರೆ. ಕೆಳಗಿನ ವಂಶಾವಳಿಯನ್ನು ಆಧಾರಿತ ಉಪನಾಮಗಳು ಸಾಮಾನ್ಯವಾಗಿ ಶೀಲಿಗರ ಸಮುದಾಯದ ಗುಂಪುಗಳ ನಡುವೆ ಕಂಡುಬರುತ್ತದೆ. ಅವುಗಳಲ್ಲಿ ದೇವಣಿಗೆ ಬಳಿ, ಆನೆ ಬಳಿ, ಬಸವನ ಬಳಿ, ಶಿರಿಯಾನ್ ಬಳಿ ಮುಂತಾದ ಬಳಿಗಳಿವೆ. ಶೀಲಿಗರಲ್ಲಿ ಒಂದೇ ಹೆಸರಿನ ಬಳಿಗಳಲ್ಲಿ ಮದುವೆ ನಿಷಿದ್ಧ. ಇವರು ಬಳಿಗಳ ವಿಧಿ-ನಿಷೇಧಗಳನ್ನು ಕಟ್ಟುನಿಟ್ಟಾಗಿ ಆಚರಿಸುತ್ತಾರೆ.

ಶೀಲಿಗರು ದಷ್ಟ-ಪುಷ್ಟ ದೇಹವನ್ನು ಹೊಂದಿದ್ದಾರೆ. ಸಾಧಾರಣದ ಎತ್ತರದ ನಿಲುವು, ಎಣಗಪ್ಪು ಬಣ್ಣದ ಸದೃಢ ಮೈಕಟ್ಟನ್ನು ಹೊಂದಿದ್ದಾರೆ. ಮುಗ್ಧ ಸ್ವಭಾವ, ನಮ್ರತೆ, ನಿಯತ್ತಿಗೆ ಹೆಸರಾದವರು ಶೀಲಿಗರು. ಯಾರೊಂದಿಗೂ ವೈಮನಸ್ಸನ್ನು ಹೊಂದದೆ ಸಮಾಜದಲ್ಲಿ ತಮ್ಮ ಪಾಡಿಗೆ ಕಾಡಿನ ಅಂಚಿನಲ್ಲಿ ವಾಸಿಸುತ್ತಿದ್ದರೆ. ಶೀಲಿಗ ಸಮುದಾಯದ ಸ್ತ್ರೀಯರು ಹೆಚ್ಚಾಗಿ ಸುತ್ತಲಿನ ಬ್ರಾಹ್ಮಣರ ಕೇರಿಗಳಲ್ಲಿ ಕೆಲಸ ಮಾಡುತ್ತಾರೆ. ಬ್ರಾಹ್ಮಣ ಸಮುದಾಯದಲ್ಲಿನ ಬಾಣಂತಿಯರ ಆರೈಕೆಗಾಗಿ ಶೀಲಿಗ ಸ್ತ್ರೀಯರು ಹೋಗುತ್ತಾರೆ. ಬಾಣಂತಿ ಆರೈಕೆ ಹಾಗೂ ಹೆರಿಗೆ ಮಾಡಿಸುವಲ್ಲಿ ಶೀಲಿಗ ಸ್ತ್ರೀಯರು ತುಂಬಾ ನಿಪುಣರು.

ನೆಲೆ ಮತ್ತು ಉಡುಗೆ-ತೊಡುಗೆ

ಶಿರಸಿ ತಾಲೂಕಿನ ಕೆಂಗ್ರೆ ಹೊಳೆಗೆ ಹೊಂದಿಕೊಂಡಿರುವ ಕಾಡುಗಳಲ್ಲಿ ಶೀಲಿಗರು ನೆಲೆಸಿದ್ದಾರೆ. ಈ ಪ್ರದೇಶದ ಊರುಗಳಲ್ಲಿ ಈಗ ಶೀಲಿಗರ ಕೇರಿಗಳನ್ನು ಕಾಣಬಹುದಾಗಿದೆ. ಈ ಕೇರಿಗಳು ಬೇರೆ ಸಮುದಾಯದ ಕೇರಿಗಳಿಗಿಂತ ಸ್ವಲ್ಪ ದೂರದಲ್ಲಿರುತ್ತವೆ. ಇವರ ಮನೆಗಳು ತಾವು ಕೆಲಸ ಮಾಡುವ ಮಾಲೀಕರ ಜಮೀನುಗಳಿಗೆ ಹೊಂದಿಕೊಂಡಿರುವ ಕಾಡಿನ ಅಂಚಿನಲ್ಲಿ ಇರುತ್ತವೆ. ದ್ವೀಪದಂತಹ ಪ್ರದೇಶಗಳಲ್ಲಿಯೂ ಈ ಸಮುದಾಯದವರ ಮನೆಗಳನ್ನು ಕಾಣಬಹುದು. ಕೆಲವೆಡೆ ಒಂಟಿ ಮನೆಗಳೂ ಇವೆ. ಈ ಹಿಂದೆ ಮಣ್ಣಿನ ಮನೆಗಳನ್ನು ಕಟ್ಟಿ ಸೋಗೆಯ ಮೇಲ್ಛಾವಣಿಯನ್ನು ಶೀಲಿಗರು ನಿರ್ಮಿಸುತ್ತಿದ್ದರು. ಶೀಲಿಗರು ಮನೆ ಬಹಳ ಅಚ್ಚುಕಟ್ಟಾಗಿರುತ್ತದೆ. ಅಡುಗೆ ಮನೆ, ಪ್ರತ್ಯೇಕವಾದ ದೇವರ ಕೋಣೆಯನ್ನು ಅವರು ಕಟ್ಟಿಕೊಳ್ಳುತ್ತಾರೆ. ಮನೆಯ ಮುಂಭಾಗದಲ್ಲಿ ತುಳಸಿಕಟ್ಟೆ ಇರಲೇ ಬೇಕು. ಕಾಡಿನಲ್ಲಿರುವಾಗ ಪುರುಷರು ಲುಂಗಿ ಮತ್ತು ಅರ್ಧ ಪಂಜೆಯನ್ನು ಧರಿಸುತ್ತಿದ್ದರು. ತಲೆ ಮೇಲೆ ಅಡಿಕೆ ಹಾಳೆಯ ಟೊಪ್ಪಿ ಇರುತ್ತದೆ. ಆದರೆ ಇಂದು ಊರಿಗೆ ಬಂದ ನಂತರ ಹೆಚ್ಚಾಗಿ ಪುರುಷರು ಲುಂಗಿ, ಪಂಜೆಯನ್ನು ಧರಿಸಿದರೆ ಹೆಂಗಸರು ಸೀರೆ, ಕುಪ್ಪಸವನ್ನು ತೊಡುತ್ತಿದ್ದರು. ಇಂದಿನ ಯುವ ಪೀಳಿಗೆ ಪ್ಯಾಂಟು, ಬರ್ಮುಡಾ, ಚಡ್ಡಿ, ಟಿ/ಶ, ಚೂಡಿದಾರ, ನಿಲುವಂಗಿ, ನೈಟಿಯನ್ನು ಧರಿಸುತ್ತಾರೆ. ಕೃಷಿ ಕೂಲಿ ಚಟುವಟಿಕೆಯಲ್ಲಿ ನಿರತರಾದವರು ಅಡಿಕೆಯ ಹಾಳೆಯ ಟೋಪಿಯನ್ನು ಧರಿಸುತ್ತಾರೆ. ಇದಕ್ಕೆ ಮಂದಾಳೆ ಅಥವಾ

ಹಾಳೆಟೊಪ್ಪಿ ಎನ್ನುತ್ತಾರೆ. ಸೊಂಟದಲ್ಲಿ ಕುಡಗೋಲು ಸಿಕ್ಕಿಸಿಕೊಂಡಿರುತ್ತಾರೆ. ಅಡಿಕೆ ತೋಟದಲ್ಲಿ ಕೆಲಸ ಮಾಡುವ ಪುರುಷರು ಮರ ಏರುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಅಡಿಕೆ ಸೊಲಿಯುವ ಮತ್ತು ಒಣಗಿಸುವ ಕೆಲಸ ಮಹಿಳೆಯರದ್ದಾಗಿದೆ. ಕೆಲವರು ಭತ್ತದ ಗದ್ದೆಗಳಲ್ಲಿ ಕೆಲಸ ಮಾಡುತ್ತಾರೆ. ಇವರು ಹೆಚ್ಚಾಗಿ ಕನ್ನಡವನ್ನು ಮಾತನಾಡುತ್ತಾರೆ.

ಕುಟುಂಬ ರಚನೆ

ಶೀಲಿಗರದು ಕೂಡು ಕುಟುಂಬ. ಕುಟುಂಬದ ಹಿರಿಯ ಯಜಮಾನ. ಇವರ ಮನೆಯೂ ತುಂಬಾ ದೊಡ್ಡದಾಗಿದ್ದು ಹಲವು ಕೋಣೆಗಳನ್ನು ಹೊಂದಿರುತ್ತದೆ. ಮನೆಯ ಯಜಮಾನನಿಗೆ ಮನೆಯ ಎಲ್ಲಾ ಸದಸ್ಯರೂ ಗೌರವ ನೀಡುತ್ತಾರೆ. ಆತನ ಒಂದು ಮಾತನ್ನೂ ಯಾರು ತಳ್ಳಿ ಹಾಕುವುದಿಲ್ಲ. ಯಜಮಾನಿಕೆ ಯಜಮಾನನ ವಂಶ ಪಾರಂಪರ್ಯವಾಗಿ ಮುಂದೆ ನಡೆಯುತ್ತದೆ. ಮನೆಯ ಹಿರಿಯ ತಲೆಯವರು ಯಜಮಾನರಾಗಿರುತ್ತಾರೆ. ಕುಟುಂಬದ ಇತರ ಸದಸ್ಯರಿಗೂ ಒಳ್ಳೆಯ ಗೌರವವಿದೆ. ಎಲ್ಲರೂ ಒಟ್ಟಾಗಿ ಬಾಳುತ್ತಾರೆ. ಯಾವುದೇ ಧಾರ್ಮಿಕ ಕಾರ್ಯಕ್ರಮ ಯಜಮಾನನ ಅನುಪಸ್ಥಿತಿಯಲ್ಲಿ ನಡೆಯುವುದಿಲ್ಲ. ಕುಟುಂಬದಲ್ಲಿ ಯಾರೇ ತಪ್ಪು ಮಾಡಿದರೂ ಅಥವಾ ಯಾವುದೇ ಸಮಸ್ಯೆ ಬಂದರೂ ಮನೆಯ ಯಜಮಾನನೇ ಸಲಹೆ ಸೂಚನೆಗಳನ್ನು ನೀಡಿ ಪರಿಹರಿಸುತ್ತಾನೆ. ಕುಟುಂಬದ ಉಳಿದ ಸದಸ್ಯರು ಯಜಮಾನನ ತೀರ್ಮಾನವನ್ನು ಚಾಚು ತಪ್ಪದೆ ನಡೆಸುತ್ತಾರೆ. ಆಸ್ತಿಯಲ್ಲಿ ಎಲ್ಲರಿಗೂ ಸಮ ಪಾಲು ಇರುತ್ತದೆ. ಯಜಮಾನನ ಎದಿರು ನಿಂತು ಕುಟುಂಬದ ಯಾವ ಸದಸ್ಯರೂ ಎದಿರು ಮಾತನಾಡುವುದಿಲ್ಲ. ಆದರೆ ಇಂದಿನ ಯುವಕರು ಈ ಸಂಸ್ಕಾರವನ್ನು ಮರೆತು ಆಧುನಿಕತೆಗೆ ಮಾರು ಹೋಗಿ ಉಳಿದ ಸಮಾಜದ ಜನರಂತೆ ಪಾಶ್ಚಿಮಾತ್ಯ ಸಂಸ್ಕೃತಿಯ ಅನುಕರಣೆ ಮಾಡುತ್ತಿರುವುದು ದು:ಖದ ಸಂಗತಿಯಾಗಿದೆ.

ಸಮಾಜದಲ್ಲಿ ಶೀಲಿಗರಿಗೆ ಒಳ್ಳೆಯ ಗೌರವವಿದೆ. ಇವರು ಶ್ರೀ ಮಠದ ಭಕ್ತರು ಹೌದು. ಇವರು ಕೃಷಿಯನ್ನೇ ನಂಬಿ ಬಂದವರು. ಶ್ರಮದಾಯಿ ಜೀವಿಗಳು. ಶೀಲಿಗರು ಉಳಿದ ಜನಾಂಗಗಳೊಡನೆ ಸಹಬಾಳ್ವೆಯನ್ನು ಮಾಡುತ್ತಿದ್ದಾರೆ. ಇವರು ಸುಮಾರು ೧೦೦ ವರ್ಷಗಳಿಂದ ಇತ್ತೀಚಿನವರೆಗೂ ಯಾವುದೇ ತರಹದ ಕಲಹವಾಗಲಿ, ದ್ವೇಷವಾಗಲಿ ಮಾಡಿರುವ ಘಟನೆಯಬಗ್ಗೆ ದಾಖಲೆಗಳು ಇಲ್ಲ. ಇವರು ತುಂಬಾ ಮುಗ್ಧರು. ಇವರಿಗೆ ಬ್ರಾಹ್ಮಣ ಸಮುದಾಯದೊಂದಿಗೆ ನಿಕಟ ಸಂಪರ್ಕವಿದೆ. ಹೆಚ್ಚಾಗಿ ಇವರು ಬ್ರಾಹ್ಮಣರ ಆಚಾರ ವಿಚಾರಗಳನ್ನೇ ಅನುಸರಿಸುತ್ತಾರೆ.

ಶೀಲಿಗರು ಪ್ರತಿಯೊಂದು ಹಬ್ಬ ಹರಿದಿನಗಳನ್ನು ಆಚರಿಸುವಾಗ ಒಡೆಯರ ಮನೆಗೆ ಹೋಗಿ ಅವರಿಗೆ ಕಾಯಿ ಇಟ್ಟು ನಮಸ್ಕರಿಸುತಾರೆ. ಒಡೆಯರು ಸಹ ಇವರಿಗೆ ಕಾಣಿಕೆಗಳನ್ನು ನೀಡುತ್ತಾರೆ. ಇಲ್ಲಿ ಒಡೆಯರು ಸಹ ಶೀಲಿಗರಿಗೆ ಗೌರವವನ್ನು ನೀಡುವುದನ್ನು ಕಾಣಬಹುದಾಗಿದೆ.

ಶೀಲಿಗರಿಗೆ ಸಮಾಜದಲ್ಲಿ ಒಳ್ಳೆಯ ಗೌರವ ಇರಲು ಕಾರಣ ಅವರ ಪೂರ್ವಿಕರು ನೀಡಿದ ಸಂಸ್ಕಾರ. ಆದರೆ ಇಂದಿನ ಯುವ ಪೀಳಿಗೆ ಈ ಸಂಸ್ಕಾರವನ್ನು ಮರೆತು ಕೇವಲ ಅನಾಚಾರದತ್ತ ತೊಡಗಿರುವುದು ಕ್ಷೇತ್ರಕಾರ್ಯದ ಸಮಯದಲ್ಲಿ ಶೀಲಿಗ ಜನಾಂಗದ ಹಿರಿಯರಿಂದ ತಿಳಿದುಬಂದಿದೆ.

ಆಡಳಿತ ವ್ಯವಸ್ಥೆ

ಪ್ರತಿಯೊಂದು ಸಮುದಾಯಗಳಲ್ಲಿಯೂ ಸುಸೂತ್ರವಾಗಿ ಜೀವನ ಸಾಗಿಸಲು ಅವರದೇ ಆದ ಒಳ ಆಡಳಿತ ವ್ಯವಸ್ಥೆ ಇರುತ್ತದೆ. ಈ ಒಳಾಡಳಿತದ ಮೂಲಕವಾಗಿ ದಿನನಿತ್ಯದಲ್ಲಿ ಬರುವ ಸಣ್ಣಪುಟ್ಟ ಜಗಳ, ಕುಟುಂಬಗಳ ಸಮಸ್ಯೆ, ಆಸ್ತಿ ವಿಚಾರ, ಊರು, ಕೇರಿಗಳ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಾರೆ. ಶೀಲಿಗರ ಸಮುದಾಯದ ಒಳಾಡಳಿತ ವ್ಯವಸ್ಥೆಯು ಬುಡಕಟ್ಟು ಮಾದರಿಯಾಗಿರುತ್ತದೆ. ಇದಕ್ಕೆ ನ್ಯಾಯ ಪಂಚಾಯತಿ ಎಂತಲೂ ಕರೆಯುತ್ತಾರೆ. ಸಮುದಾಯದ ಜನರನ್ನು ಸುವ್ಯವಸ್ಥಿತ ಮಾರ್ಗದಲ್ಲಿ ಮುನ್ನಡೆಸಲು ಆಯಾ ಸಮುದಾಯಗಳ ಒಳಾಡಳಿತ ವ್ಯವಸ್ಥೆಯಲ್ಲಿ ತಮ್ಮದೇ ವಿಧಿ-ವಿಧಾನಗಳಿರುತ್ತದೆ. ಆಧುನಿಕ ಕಾನೂನು, ನ್ಯಾಯ ವ್ಯವಸ್ಥೆ, ಶಾಸನಗಳ ಬಗ್ಗೆ ತಿಳುವಳಿಕೆಯಿಲ್ಲದಿದ್ದರೂ ತಮ್ಮದೇ ಆದ ಮಹತ್ವದ ನಿರ್ಣಯಗಳನ್ನು ಕೈಗೊಳ್ಳುತ್ತಾರೆ. ಸಮುದಾಯದ ಒಳಗಡೆ ನಡೆಯುವ ತಂಟೆ ತಕರಾರು, ಹೊಲ-ಮನೆಗಳಿಗೆ ಸಂಬಂಧಿಸಿದ ವ್ಯಾಜ್ಯಗಳು ತಮ್ಮ ಒಳಾಡಳಿತ ವ್ಯವಸ್ಥೆಯ ಮೂಲಕವೇ ಬಗೆ ಹರಿಸಿಕೊಳ್ಳುತ್ತಾರೆ. ಸಮುದಾಯದ ಅನುಕೂಲಕ್ಕೆ ಒಳಾಡಳಿತ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದಾರೆ.

ನ್ಯಾಯ ಪಂಚಾಯತಿ ಮಾಡುವ ಪ್ರಮುಖನನ್ನು ಗುರಿಕಾರ, ಬುದ್ಧಿವಂತ ಅಥವಾ ಕಟ್ಟೆಮನೆ ಯಜಮಾನ ಎಂದು ಕರೆಯುತ್ತಾರೆ. ಇವನ ಮುಖಾಂತರವೇ ಸಮುದಾಯದ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತಾರೆ. ಶೀಲಿಗರು ಈ ಬುದ್ಧಿವಂತನಿಗೆ ಅಪಾರ ಗೌರವ ನೀಡುತ್ತಾರೆ. ಆದರೆ ಈ ಶೀಲಿಗರಲ್ಲಿ ಅಂತಹ ಯಾವುದೇ ವೈಮನಸ್ಸು ಇರುವುದಿಲ್ಲ. ಇವರು ತುಂಬಾ ಹೊಂದಾಣಿಕೆಯ ಸ್ವಭಾವವನ್ನು ಹೊಂದಿದ್ದಾರೆ.

ನಂಬಿಕೆ ಮತ್ತು ಆಚರಣೆಗಳು

ಹಾನ ತೆಗೆಯುವ ಪದ್ಧತಿ ಶೀಲಿಗರಲ್ಲಿ ಉಂಟು. ಹಾನ ಅಂದರೆ ಅರಿಸಿಣ ಮತ್ತು ಕುಂಕುಮ ಮಿಶ್ರಿತ ನೀರು. ಅಡಿಕೆ ಹಾಳೆಯನ್ನು ಬಿದಿರ ಕಡ್ಡಿಗಳಿಂದ ಚುಚ್ಚಿ ದೊನ್ನೆಯನ್ನು ಮಾಡುತ್ತಾರೆ. ಅದರ ಎರಡು ಕಡೆ ದೊಂದಿ ಹಚ್ಚಿ ಸಂಜೆ ನಸುಗತ್ತಲಿನಲ್ಲಿ ಹೆದರಿದವರನ್ನು ಮುಂದೆ ಕೂಡ್ರಿಸಿಕೊಂಡು ಅವರಿಂದ ಅಕ್ಕಿಕಾಳು, ಕೆಂಪುಹೂವು, ಹಾನಕ್ಕೆ ಹಾಕಿಸಿಕೊಂಡು ಮೂರುಸುತ್ತು ಸುಳಿದು ಕೊನೆಗೆ ಹೆದರಿದವರನ್ನು ಬೆಚ್ಚಿ ಬೀಳುವಂತೆ ಹಾನದ ನೀರನ್ನು ಮೈಗೆ ಜೋರಾಗಿ ಸಿಂಪಡಿಸುತ್ತಾರೆ. ಆಗ ಆತ ಬೆಚ್ಚಿದರೆ ದೆವ್ವ ಬಿಟ್ಟು ಹೋಯಿತು ಎಂದರ್ಥ. ಇದರ ಜೊತೆಗೆ ದೃಷ್ಟಿ ತೆಗೆಯುವ ಪದ್ಧತಿಯೂ ಇದೆ.

ಶೀಲಿಗರು ಭೂತ, ಪಿಶಾಚಿ, ದೆವ್ವ ಬಡಿದುಕೊಳ್ಳುವುದು, ಗ್ರಹಗಳ ಕಾಟ, ಮಾಟ ಮರೂಡಿಗಳ ಬಗ್ಗೆ ಅಪಾರ ನಂಬಿಕೆಯನ್ನು ಹೊಂದಿದ್ದಾರೆ. ಅದರ ನಿವಾರಣೆಗೆ ಹೆಚ್ಚಿನ ಒತ್ತನ್ನು ನೀಡುತ್ತಾರೆ. ಜ್ವರ, ನೆಗಡಿ ಬಂದರೂ ವೈದ್ಯರಿಗಿಂತ ದೇವರು, ದೆವ್ವಗಳ ಬಗ್ಗೆ ಒಲವು ತೋರಿಸುತ್ತಾರೆ. ಇವುಗಳ ಮೂಲಕ ಕಷ್ಟ ಪರಿಹರಿಸುವ ವ್ಯಕ್ತಿಗೆ ಮಾಟಗಾರ ಅಥವಾ ನೋಟಗಾರ ಎಂದು ಕರೆಯುತ್ತಾರೆ. ಈತನು ಜುಟ್ಟು, ಉದ್ದವಾದ ಗಡ್ಡವನ್ನು ಬಿಟ್ಟಿರುತ್ತಾನೆ. ಇತನು ತನ್ನ ವಾಸಸ್ಥಳದಲ್ಲಿ ಅನೇಕ ಶಕ್ತಿ ದೇವರುಗಳ ಮೂರ್ತಿಯನ್ನು ಇಟ್ಟುಕೊಂಡಿರುತ್ತಾನೆ. ಆ ದೇವತೆಗಳ ಸುತ್ತಲೂ ಭತ್ತದ ತೆನೆ, ಅಡಿಕೆ ಗೊನೆ, ಮಾವಿನ ತೊಳಲು, ಹೂವು, ಕುಂಕುಮ, ಅಂಗಾರ, ಊದಿನಕಡ್ಡಿ, ಅಕ್ಕಿ ಇತ್ಯಾದಿಗಳು ಹರಡಿರುತ್ತದೆ. ಜನರು ತಮ್ಮ ಮನೆಯಲ್ಲಿ ರೋಗದ ಕಾಟ, ಗಂಡ ಹೆಂಡಿರ ಜಗಳ, ಆಸ್ತಿಯ ಜಗಳ, ಮದುವೆ–ಮುಂಜಿಗಳು, ದನಕರುಗಳ ರೋಗ ಮುಂತಾದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ನೋಟಗಾರನ ಬಳಿ ಬರುತ್ತಾರೆ. ಈ ನೋಟಗಾರನು ತನ್ನದೇ ಆದ ರೀತಿಯ ಮಾಂತ್ರಿಕ ಮಂತ್ರವನ್ನು ಪಠಿಸಿ ಲಿಂಬೆ ಹಣ್ಣು, ಕುಂಕುಮ, ಅಂಗಾರವನ್ನು ಮಂತ್ರಿಸಿ ಕೊಡುತ್ತಾನೆ. ವ್ಯಕ್ತಿಗಳ ಮೇಲೆ ಬಂದ ದೆವ್ವವನ್ನು ಬಿಡಿಸಿ ಅದನ್ನು ಸಂತೃಪ್ತಗೊಳಿಸಲು ಅನ್ನಕ್ಕೆ ಕುಂಕುಮವನ್ನು ಕಲಸಿ ಕುಡಿಬಾಳೆಯಲ್ಲಿಟ್ಟು ದೆವ್ವಕ್ಕೆ ಎಡೆ ಇಡಲಾಗುತ್ತದೆ. ಅದನ್ನು ಮೂರುದಾರಿ ಕೂಡುವಲ್ಲಿ ಇಟ್ಟು ಬರಲಾಗುತ್ತದೆ. ಕೆಲವು ದೆವ್ವಗಳಿಗೆ ಕೋಳಿ, ಕುರಿಗಳ ಬಲಿಯನ್ನು ನೀಡುವ ವಾಡಿಕೆಯುಂಟು.

ವೈದ್ಯ ಪದ್ಧತಿ

ಕಾಡಿನ ಅಂಚಿನಲ್ಲಿ ಬಾಳುತ್ತಿರುವ ಈ ಶೀಲಿಗರಿಗೆ ಕಾಡಿನ ನಿಕಟ ಸಂಪರ್ಕವಿದೆ. ಇವರು ಕಾಡಿನ ಸಸ್ಯಗಳಿಂದಲೇ ಅನೇಕ ರೀತಿಯ ಔಷಧಗಳನ್ನು ತಯಾರಿಸಿ ತೆಗೆದುಕೊಳ್ಳುತ್ತಾರೆ. ಶೀಲಿಗ ಸ್ತ್ರೀಯರು ಹೆರಿಗೆ ಮಾಡಿಸುವುದರಲ್ಲಿ ಎತ್ತಿದ ಕೈ. ಸುತ್ತಮುತ್ತಲಿನ ಹಳ್ಳಿಗಳಲ್ಲಿ ಯಾರೇ ಹೆರಿಗೆಯಾದರೂ ಶೀಲಿಗ ಸ್ತ್ರೀಯರು ಬಾಣಂತಿಯರ ಆರೈಕೆಗೆ ಹೋಗುತ್ತಾರೆ. ಶೀಲಿಗ ಸ್ತ್ರೀಯರು ಬಾಣಂತಿಯರಲ್ಲಿ ಆಗುವ ಬಾಣಂತಿ ಸನ್ನೆಯನ್ನು (ಹೆರಿಗೆಯಾದಾಗ ಆಗುವ ಮಾನಸಿಕ ಖಿನ್ನತೆಯ ರೋಗ) ಕಂಡುಹಿಡಿಯುವುದರಲ್ಲಿ ನಿಸ್ಸಿಮರು. ಅವರು ಬಾಣಂತಿ ಸ್ತ್ರೀಯರ ಕೂದಲನ್ನು ಬಿಗಿಯಾಗಿ ಕಟ್ಟುತ್ತಾರೆ. ಆಗ ಹೆರಿಗೆಯಾದ ಸ್ತ್ರೀ ನೋವಿನಿಂದ ಕಿರುಚಾಡಿದರೆ ಅವಳಿಗೆ ಸನ್ನೆ ಆಗಿಲ್ಲ ಎಂದು ತಿಳಿದುಕೊಳ್ಳುತ್ತಾರೆ. ಆದರೆ ಬಾಣಂತಿ ಯಾವುದೇ ರೀತಿಯ ಭಾವನೆ ವ್ಯಕ್ತ ಪಡಿಸದಿದ್ದಲ್ಲಿ ಆಗ ಬಾಣಂತಿ ಸನ್ನೆಯಾಗಿದೆ ಎಂದು ತಿಳಿಯುತ್ತಾರೆ. ಅದಕ್ಕೆ ಸೂಕ್ತ ಔಷಧವನ್ನು ಈ ಶೀಲಿಗರು ನೀಡುತ್ತಾರೆ. ಕೈ, ಕಾಲು ಮುರಿದರೆ, ಬೆನ್ನು ನೋವಿಗೆ ಶೀಲಿಗರು ಕಾಡಿನ ಗಿಡಮೂಲಿಕೆಯ ಸೊಪ್ಪನ್ನು ಅರೆದು ಲೇಪಿಸುತ್ತಾರೆ. ಇದರಿಂದ ಮುರಿದ ಕೈ, ಕಾಲುಗಳ ಮೂಳೆ ಜೋಡಣೆಯಾಗುತ್ತವೆ. ಇವರು ಪ್ರಾಣಿಗಳ ರೋಗಕ್ಕೂ ಗಿಡಮೂಲಿಕೆಗಳೌಷಧವನ್ನು ನೀಡುತ್ತಾರೆ.

ಆಹಾರ ಪದ್ಧತಿ

ಶೀಲಿಗರು ಹೆಚ್ಚಾಗಿ ಸಸ್ಯಾಹಾರವನ್ನು ತಿನ್ನುತ್ತಾರೆ. ವಿಶೇಷ ದಿನಗಳಲ್ಲಿ ಮಾಂಸಾಹಾರ ಮಾಡುತ್ತಾರೆ. ಮೀನು ಮಾಂಸಗಳನ್ನು ಬಹು ಇಷ್ಟ ಪಡುವುದಾದರೂ ಅದು ಬಲು ದುಬಾರಿಯಾಗಿರುವುದರಿಂದ ಕಾಡಿನಲ್ಲಿಯ ಪ್ರಾಣಿಗಳನ್ನು ಬೇಟೆಯಾಡಿ ತಂದು ತಮ್ಮ ಆಸೆಗಳನ್ನು ತೀರಿಸಿಕೊಳ್ಳುತ್ತಾರೆ. ಮದುವೆ, ನೆಂಟರ ಆಗಮನ, ತಿಥಿಗಳನ್ನು ಹೊರತುಪಡಿಸಿ ಮಾಂಸದ ಅಡಿಗೆ ಮಾಡುತ್ತಾರೆ. ಮಾಂಸಾಹಾರ ಮಾಡಲು ಪ್ರತ್ಯೇಕವಾದ ಅಡುಗೆ ಮನೆ ಇದ್ದು, ಅದು ಮನೆಯ ಹೊರ ಭಾಗದಲ್ಲಿರುತ್ತದೆ ಮತ್ತು ಅದಕ್ಕೆ ಪ್ರತ್ಯೇಕ ಪಾತ್ರೆಗಳನ್ನು ಇಟ್ಟಿರುತ್ತಾರೆ. ಕವಳ ಹಾಕುವುದು, ಬೀಡಿ ಸೇದುವುದು, ಚಹಾ ಕುಡಿಯುವುದು ಇವರ ಹವ್ಯಾಸಗಳಾಗಿವೆ. ಇಂದಿನ ಆಧುನಿಕತೆಗೆ ಒಳಗಾಗಿ ಶೀಲಿಗರು ವಿವಾಹದ ನಂತರ ಚಪ್ಪರ ಬಿಚ್ಚುವಾಗ ಬೀಗರನ್ನು ಸೇರಿಸಿ ಮಾಂಸದೂಟ (ಸಮಾನ ಊಟ) ಮಾಡುವ ಹೊಸ ಪದ್ಧತಿಯನ್ನು ಇತ್ತೀಚೆಗೆ ರೂಢಿಸಿಕೊಂಡಿದ್ದಾರೆ.

ಆಚರಣೆಗಳು

ಹೆರಿಗೆ ಮತ್ತು ಚೌಲ ಸಂಪ್ರದಾಯ

ಶೀಲಿಗರ ಸಮುದಾಯದಲ್ಲಿ ಬಾಣಂತಿಗೆ ನೋವು ಕಾಣಿಸಿಕೊಂಡಾಗ ಸಮುದಾಯದ ಅನುಭವಸ್ಥ ಮಹಿಳೆಯರನ್ನು ಕರೆಯಿಸಿ, ಗರ್ಭಿಣಿಯನ್ನು ಒಂದು ಪ್ರತ್ಯೇಕ ಕೋಣೆಯಲ್ಲಿ ಚಾಪೆಯ ಮೇಲೆ ಮಲಗಿಸುತ್ತಾರೆ. ಈ ಸೂಲಗಿತ್ತಿಯ ಸಹಾಯಕ್ಕೆ ಮತ್ತಿಬ್ಬ ಮಹಿಳೆಯರು ಬಂದಿರುತ್ತಾರೆ. ಹೆರಿಗೆಯಾದ ಹನ್ನೊಂದು ದಿನದವರೆಗೆ ಮೈಲಿಗೆ ಇರುವುದರಿಂದ ಮನೆಯಲ್ಲಿ ಯಾವುದೇ ಶುಭ ಕಾರ್ಯಗಳನ್ನು ಮಾಡುವುದಿಲ್ಲ. ಹನ್ನೆರಡನೇಯ ದಿನ ಬಾಣಂತಿಗೆ ಸ್ನಾನ ಮಾಡಿಸಿದ ಮೇಲೆ ಇನ್ನುಳಿದ ಶುಭಕಾರ್ಯಗಳನ್ನು ಮಾಡಲಾಗುತ್ತದೆ. ಹನ್ನೆರಡನೆಯ ದಿನ ನಾಮಕರಣ ಶಾಸ್ತ್ರ ಇರುವುದರಿಂದ ಮನೆಯನ್ನು ಗೋಮಯದಿಂದ ಸಾರಿಸಿ ಸ್ವಚ್ಛಗೊಳಿಸುತ್ತಾರೆ. ಬಾಣಂತಿಯ ಬಟ್ಟೆಯನ್ನು ಸ್ವಚ್ಛವಾಗಿ ತೊಳೆದು ಬ್ರಾಹ್ಮಣರ ಮನೆಯಿಂದ ಪಂಚಗವ್ಯ ತಂದು ಸಿಂಪಡಿಸುತ್ತಾರೆ. ನಂತರ ಮೈಲಿಗೆ ಹೋಯಿತು ಎಂದು ತಿಳಿಯುತ್ತಾರೆ. ನಂತರ ನಾಮಕರಣ ಶಾಸ್ತ್ರ ಮಾಡುತ್ತಾರೆ. ಮಗುವನ್ನು ತೊಟ್ಟಿಲಿಗೆ ಹಾಕುತ್ತಾರೆ. ಸಾಮಾನ್ಯವಾಗಿ ದೇವರ ಅಥವಾ ಹಿರಿಯರ ಹೆಸರನ್ನು ಇಡುತ್ತಾರೆ. ನಂತರ ಸುಮಂಗಲೆಯರು ಮಗುವಿಗೆ ಹೊಸ ಬಟ್ಟೆ ನೀಡಿ ಆರತಿ ಮಾಡುತ್ತಾರೆ. ಆರತಿ ಬಟ್ಟಲಿಗೆ ಮಗುವಿನ ತಾಯಿ ತಂದೆ ತಮ್ಮ ಶಕ್ಯಾನುಸಾರ ದಕ್ಷಿಣೆ ಹಾಕುತ್ತಾರೆ. ನಂತರ ಸಿಹಿ ಊಟದ ವ್ಯವಸ್ಥೆ ಮಾಡುತ್ತಾರೆ.

ಮಗು ಹೆಣ್ಣಿರಲಿ ಗಂಡಿರಲಿ ಐದಾರು ವರ್ಷದಲ್ಲಿ ಚೌಲ ಶಾಸ್ತ್ರ ಮಾಡುವ ಪರಿಪಾಠವಿದೆ. ಅಂದು ಮನೆಯವನ್ನು ಗೋಮಯದಿಂದ ಸಾರಿಸುತ್ತಾರೆ. ಮಗುವಿನ ಸೋದರಮಾವನ ತೊಡೆಯ ಮೇಲೆ ಕೂಡ್ರಿಸಿಕೊಂಡಾಗ ಕೆಲಸಿಯು (ಕ್ಷೌರಿಕ) ಮಗುವಿನ ತಲೆ ಕೂದಲನ್ನು ಕತ್ತರಿಸುತ್ತಾನೆ. ಕ್ಷೌರ ಮುಗಿದ ಮೇಲೆ ಸೋದರ ಮಾವ ಹೊಸ ಬಟ್ಟೆಯನ್ನು ಉಡಗರೆಯಾಗಿ ನೀಡುತ್ತಾನೆ.

ಕ್ಷೌರಿಕನಿಗೆ ಅಕ್ಕಿ, ಬಟ್ಟೆ, ಹಣವನ್ನು ಕಾಣಿಕೆಯಾಗಿ ಕೊಡುತ್ತಾರೆ. ನಂತರ ಬಂದವರಿಗೆ ಪಾಯಸದ ಊಟ ಹಾಕುತ್ತಾರೆ.

ಮೈನೆರೆಯುವುದು

ಶೀಲಿಗರ ಸಮುದಾರದಲ್ಲಿ ಹೆಣ್ಣು ಋತುಮತಿಯಾಗುವುದಕ್ಕೆ ಮೈನೆರೆಯುವುದು, ದೊಡ್ಡವಳಾಗುವುದು, ಪ್ರಾಯಕ್ಕೆ ಬರುವುದು ಎಂದು ಹೇಳುತ್ತಾರೆ. ಈ ಸಮಯದಲ್ಲಿ ಅವರದೇ ಆದ ಆಚರಣೆಗಳನ್ನು ಆಚರಿಸುತ್ತಾರೆ. ದೊಡ್ಡವಳಾದ ಸಂದರ್ಭದಲ್ಲಿ ಅವಳನ್ನು ಯಾರು ಮುಟ್ಟಿಕೊಳ್ಳದೇ ಮನೆಯ ಹೊರ ಭಾಗದಲ್ಲಿ ಪ್ರತ್ಯೇಕ ಚಪ್ಪರ ಮಾಡಿ ಅಥವಾ ಮನೆಯ ಜಗಲಿಯ ಮೂಲೆಯಲ್ಲಿ ಕೂಡ್ರಿಸುತ್ತಾರೆ. ಹಿಂದೆ ಅವಳ ಮುಂದೆ ಒಂದು ಒನಕೆ ಇಟ್ಟು ಅವಳು ಪ್ರತ್ಯೇಕ ಎಂದು ಸೂಚಿಸುತ್ತಿದ್ದರು. ಅವಳಿಗೆ ಊಟ ಮಾಡಲು ಪ್ರತ್ಯೇಕ ತಾಟು, ತಂಬಿಗೆ, ಲೋಟ ಮತ್ತು ತಿಂಡಿ ತಿನಿಸನ್ನು ನೀಡಲು ಬಾಳೆ ಎಲೆ ಅಥವಾ ಅಡಿಕೆ ಹಾಳೆಯ ದೊನ್ನೆಯನ್ನು ಬಳಸುತ್ತಾರೆ. ಪ್ರತ್ಯೇಕವಾದ ಚಾಪೆ, ಹಾಸಿಗೆ, ಕುಡಿಯುವ ನೀರಿನ ಕೊಡ ಇಡುತ್ತಾರೆ. ಐದನೇ ದಿನಕ್ಕೆ ಹಳ್ಳದಲ್ಲಿನ ನೀರಿನಲ್ಲಿ ಬಟ್ಟೆ ಒಗೆದು, ಸ್ನಾನ ಮಾಡಿ ಗೋಮೂತ್ರ, ತುಳಸಿ ನೀರನ್ನು ಕುಡಿದು ತುಳಸಿಕಟ್ಟೆಗೆ ಪೂಜೆ ಮಾಡಿ ಸೂರ್ಯನಿಗೆ ನಮಸ್ಕರಿಸಿ ಮನೆಯ ಒಳಗೆ ಬರುವ ಸಂಪ್ರದಾಯವಿದೆ. ನಂತರ ಹುಡುಗಿಗೆ ಹೊಸ ವಸ್ತ್ರ ತೊಡಿಸಿ, ಹೂ ಮುಡಿಸುವ ಶಾಸ್ತ್ರವನ್ನು ಮಾಡುತ್ತಾರೆ. ಊರಿನ ಮುತ್ತೈದೆಯರು, ಸಂಬಂಧಿಕರು ದೊಡ್ಡವಳಾದ ಹುಡುಗಿಗೆ ಆರತಿ ಮಾಡಿ ಸಿಹಿ ತಿನಿಸುತ್ತಾರೆ. ಬಂದವರು ಉಡುಗರೆಯನ್ನು ನೀಡುತ್ತಾರೆ. ಅಂದು ಸಹಿ ಊಟ ಮಾಡಿ ಬಡಿಸುತ್ತಾರೆ.

ವಿವಾಹ

ಶೀಲಿಗರಲ್ಲಿ ಮದುವೆ ಕಾರ್ಯಕ್ರಮಗಳು ಅತಿ ಸರಳ ರೀತಿಯಿಂದ ನಡೆಯುತ್ತದೆ. ಹಿಂದಿನ ಕಾಲದಲ್ಲಿ ನಾಲ್ಕೈದು ದಿನ ನಡೆಯುತ್ತಿದ್ದ ಮದುವೆ ಇಂದು ಒಂದೇ ದಿನದಲ್ಲಿ ಮುಗಿಯುತ್ತದೆ. ಇವರ ಮದುವೆಗೆ ಬ್ರಾಹ್ಮಣರ ಪೌರೋಹಿತ್ಯ ಇರುವುದಿಲ್ಲ. ಸಮುದಾಯದ ಹಿರಿಯರು, ಬುದ್ಧಿವಂತ, ಗುರಿಕಾರ ಸಮ್ಮುಖದಲ್ಲಿ ಮದುವೆ ನಡೆಯುತ್ತದೆ. ತಂದೆ–ತಾಯಿ, ಕುಟುಂಬದ ಸದಸ್ಯರು ಒಪ್ಪಿಗೆ ಕೊಟ್ಟರೆ ಮಾತ್ರ ಅಧಿಕೃತವಾಗಿ ಮದುವೆ ನಡೆಯುತ್ತದೆ. ಶೀಲಿಗರು ಬಳಿಗಳ ಆಧಾರದ ಮೇಲೆಯೇ ಹೆಣ್ಣನ್ನು ನೋಡುತ್ತಾರೆ. ಸಗೋತ್ರದಲ್ಲಿ ಮದುವೆ ನಿಷಿದ್ಧ. ಅಕ್ಕನ ಮಗಳು, ಸೋದರಮಾವನ ಮಗಳನ್ನು ಹೆಚ್ಚಾಗಿ ಮದುವೆಯಾಗುತ್ತಾರೆ. ಮದುವೆಯಲ್ಲಿ ವಿಳ್ಯಶಾಸ್ತ್ರ, ಮೋಜು–ಮಸ್ತಿಗಳು ನಡೆಯುತ್ತದೆ. ಸರಳ ಮದುವೆಗೆ ಅವಕಾಶ ಮಾಡಿಕೊಡುತ್ತಾರೆ.

ಮದುವೆಯ ಮೊದಲ ದಿನದ ಕಾರ್ಯಕ್ರಮದಲ್ಲಿ ಒಳಕೋಣೆಯಲ್ಲಿ ಮಧುಮಕ್ಕಳು ಕುಳಿತುಕೊಳ್ಳುವ ನೆಲ ಮತ್ತು ಗೋಡೆಯ ಮೇಲೆ ಶೇಡಿ(ಬಿಳಿಮಣ್ಣು)ಯಿಂದ ಚಿತ್ರ ಬರೆಯುತ್ತಾರೆ.

ಗೋಡೆಯ ಮೇಲೆ ಸೂರ್ಯ, ಚಂದ್ರ, ಕಾಡು ಪ್ರಾಣಿಗಳ ಚಿತ್ರ ಬಿಡಿಸುತ್ತಾರೆ. ಬುದ್ಧಿವಂತ ಮತ್ತು ಗುರಿಕಾರರ ಸಹಾಯದಿಂದ ಚಪ್ಪರ, ತೋರಣವನ್ನು ಹಾಕುತ್ತಾರೆ. ಜವಳಿ ತೆಗೆಯುವುದು, ಬಾಸಿಂಗ ತರುವುದು, ಹೂವು ಮುಡಿಸುವುದು, ಧಾರೆ ಎರೆಯುವುದು, ಸ್ನಾನ ಮಾಡುವುದು, ವರನಿಗೆ ಹನ್ನೆ (ಕ್ಷೌರ) ಮಾಡುವುದು, ದಿಬ್ಬಣ ಹೊರಡಿಸುವುದು, ವಾದ್ಯ ನುಡಿಸುವುದು, ತೆರಕೊಡುವುದು, ವರನನ್ನು ಸ್ವಾಗತಿಸುವುದು, ಹೆಣ್ಣು ತುಂಬಿಸಿಕೊಳ್ಳುವುದು, ಒಕಳಿ ಆಡುವುದು, ಮುಂತಾದ ಸಂಪ್ರದಾಯಗಳನ್ನು ಚಾಚು ತಪ್ಪದೆ ಮಾಡುತ್ತಾರೆ. ತೋರಣ ತೆಗೆಯುವುದು, ನೆಂಟರೂಟ (ಸಮಾನ ಊಟ), ಬಯಕೆಯ ಊಟ ಬಡಿಸುವುದು ಇನ್ನೂ ಮುಂತಾದ ಆಚರಣೆಗಳನ್ನು ಇಂದಿಗೂ ಶೀಲಿಗರ ಸಮುದಾಯಗಳಲ್ಲಿ ಕಾಣಬಹುದಾಗಿದೆ.

ಧಾರ್ಮಿಕ ವ್ಯವಸ್ಥೆ

ವಾರ್ಷಿಕ ಆವರ್ತನೆಯ ಆಚರಣೆಗಳು

ಬಡತನದಲ್ಲಿ ಬಳಲುವ, ಹಸಿವನ್ನೇ ಹೊದ್ದು ಮಲಗಿರುವ ಶೀಲಿಗರು ವರ್ಷದಲ್ಲಿ ೮-೧೦ ಹಬ್ಬಗಳನ್ನು ಆಚರಿಸುತ್ತಾರೆ. ಅದರಲ್ಲಿ ದೀಪಾವಳಿ, ಕಾರ್ತಿಕ(ತುಳಸಿ ಮದುವೆ), ಗಣೇಶ ಹಬ್ಬ, ಸಂಕ್ರಾಂತಿ, ವನದೇವಿ ಹಬ್ಬ, ಉಗಾದಿ, ಹೋಳಿಹಬ್ಬಗಳನ್ನು ಆಚರಿಸುತ್ತಾರೆ.

ತುಳಸಿ ಪೂಜೆ

ಕಾರ್ತೀಕ ಮಾಸದ ಹಬ್ಬಗಳಲ್ಲಿ ಅತ್ಯಂತ ಪವಿತ್ರವಾದುದು ಉತ್ಥಾನ ದ್ವಾದಶಿ. ಉತ್ಥಾನ ಎಂದರೆ ಏಳುವುದು ಎಂದರ್ಥ. ಅಂದರೆ ಈ ದಿನದಂದು ಭಗವಂತನಾದ ನಾರಾಯಣನು ಹಾಲ್ಗಡಲಿನ ಸುಖಶಯನದಿಂದ ಮೇಲೆದ್ದು, ತನ್ನ ನಿದ್ರಾ ಮುದ್ರೆಯನ್ನು ಭಕ್ತರಿಗೆ ಸಾಕ್ಷಾತ್ಕರಿಸುವ ದಿನವಾಗಿದೆ ಎಂದು ಶೀಲಿಗರ ನಂಬಿಕೆ. ಈ ದಿನದಂದು ತುಳಸಿಕಟ್ಟೆಯ ಸುತ್ತಲೂ ರಂಗೋಲಿಯಿಂದ ಅಲಂಕರಿಸಿ ತಳಿರು ತೋರಣಗಳನ್ನು ಕಟ್ಟಿ, ನೆಲ್ಲಿ ಗಿಡದ ಟೊಂಗೆಯನ್ನು ಇರಿಸಿ, ತುಳಸಿಯನ್ನು ಸಿಂಗರಿಸಿ ಭಗವಂತನನ್ನು ಬರಮಾಡಿಕೊಳ್ಳುವುದು ನಂಬಿಕೆಯಾಗಿ ಬಂದಿದೆ. ಶೀಲಿಗರಲ್ಲಿ ಮುತ್ತೈದೆಯರು ಮುಂಜಾನೆ ಎದ್ದು ಸ್ನಾನ ಮಾಡಿ ತುಳಸಿ ಕಟ್ಟೆಗೆ ನೀರನ್ನು ಎರೆದು ಪೂಜೆಯನ್ನು ಮಾಡುತ್ತಾರೆ. ಶೀಲಿಗರು ಸಂಜೆ ಅಥವಾ ಗೋಧೂಳಿ ಸಮಯದಲ್ಲಿ ತುಳಸಿಯನ್ನು ಪೂಜಿಸುತ್ತಾರೆ. ಕೃಷ್ಣ ಹಾಗೂ ತುಳಸಿಯ ಮದುವೆ ಈ ದಿನದಂದು ನಡೆದಿರುವುದಾಗಿ ಶೀಲಿಗರು ಹೇಳುತ್ತಾರೆ. ಆ ದಿನ ತುಳಸಿಯನ್ನು ಪೂಜಿಸಿ ಸಾಮೂಹಿಕವಾಗಿ ಪ್ರಾರ್ಥನೆ ಮಾಡುತ್ತಾರೆ. ಅಂದು ಸಿಹಿ ತಿಂಡಿಗಳನ್ನು ಮಾಡುತ್ತಾರೆ.

ಸಂಕ್ರಾಂತಿ

ಸಂಕ್ರಾಂತಿ ಹಬ್ಬದ ದಿನ ಮನೆಯನ್ನು ಸಾರಿಸಿ ರಂಗೋಲಿ ಹಾಕಿ, ಮನೆ ಮಂದಿಯೆಲ್ಲಾ ಎಣ್ಣೆ ಸ್ನಾನ ಮಾಡಿ, ಹೊಸ ಬಟ್ಟೆಯನ್ನು ಧರಿಸುತ್ತಾರೆ. ಈ ದಿನ ತಮಗೆ ವರ್ಷವಿಡಿ ಧನ, ಧಾನ್ಯ ನೀಡಿದ ಸೂರ್ಯನಿಗೆ ಹಾಗೂ ಭೂಮಿಗೆ ಗೌರವವನ್ನು ಸಲ್ಲಿಸುತ್ತಾರೆ. ಅಂದು ಎಳ್ಳು

ಬೆಲ್ಲವನ್ನು ಮಿಶ್ರಣ ಮಾಡಿ ಹಂಚುತ್ತಾರೆ. ಸಿಹಿ ಊಟ ಮಾಡುತ್ತಾರೆ. ಅಂದು ಶೀಲಿಗರು ದನಕರುಗಳಿಗೂ ವಿಶೇಷವಾದ ಪೂಜೆ ಸಲ್ಲಿಸುತ್ತಾರೆ.

ಆಷಾಢ ಹಬ್ಬ

ಮಳೆಗಾಲ ಪ್ರಾರಂಭವಾದ ನಂತರ ಒಂದು ದಿನ ಮಳೆಹಬ್ಬ ಅಥವಾ ಆಷಾಡ ಹಬ್ಬವನ್ನು ಮಾಡುತ್ತಾರೆ. ಗುರುವಾರ ಅಥವಾ ಭಾನುವಾರ ದಿನ ದೇವರಿಗೆ ಪೂಜೆ ಸಲ್ಲಿಸುತ್ತಾರೆ. ನಂತರ ಪಾಯಸದೂಟ ಮಾಡುತ್ತಾರೆ.

ಗಣೇಶ ಹಬ್ಬ

ಆಧುನಿಕತೆಯ ಪ್ರಭಾವದಿಂದಾಗಿ ಶೀಲಿಗರು ವಾಸಿಸುವ ಊರಿನಲ್ಲಿ ಸಾರ್ವಜನಿಕ ಗಣೇಶ ಮೂರ್ತಿಯನ್ನು ಇಟ್ಟು ಪೂಜಿಸುವ ಸಂಪ್ರದಾಯವನ್ನು ಬೆಳೆಸುತ್ತಿದ್ದಾರೆ. ಮೂರು ಅಥವಾ ಐದು ದಿನ ಗಣೇಶ ಮೂರ್ತಿಯನ್ನು ಇಟ್ಟು ಪುರೋಹಿತರನ್ನು ಕರೆಸಿ ಸಾರ್ವಜನಿಕವಾಗಿ ಪೂಜೆ ಮಾಡಿಸುತ್ತಾರೆ. ಹೂ-ಹಣ್ಣು, ಕಾಯಿ, ಪಂಚಕಜ್ಜಾಯ, ಮೋದಕ ಇಡುವ ಸಂಪ್ರದಾಯವಿದೆ. ಈ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಅಥವಾ ಯಕ್ಷಗಾನ, ಪ್ರಸಂಗಗಳನ್ನು ಆಡಲಾಗುತ್ತದೆ.

ದೀಪಾವಳಿ

ದೀಪಾವಳಿ ಹಬ್ಬವನ್ನು ಶೀಲಿಗರು ದೊಡ್ಡಹಬ್ಬ ಎಂದು ಕರೆಯುತ್ತಾರೆ. ಈ ಹಬ್ಬದಂದು ಮನೆಯನ್ನು ಗೋಮಯದಿಂದ ಸಾರಿಸಿ ರಂಗವಲ್ಲಿಯನ್ನು ಹಾಕುತ್ತಾರೆ. ಹಂಡೆಯ ಕೊರಳಿಗೆ ಹಿಂಡಲಕಾಯಿಯ ಬಳ್ಳಿ ಸುತ್ತಿ ಹೂ ಮಾಲೆ ಹಾಕಿ ಶೃಂಗರಿಸುತ್ತಾರೆ. ಹಂಡೆಯಲ್ಲಿ ಬೇವಿನ ಎಲೆ, ನೇರಳೆ ಚುಕ್ಕೆ ನೀರು ತುಂಬಿಸುತ್ತಾರೆ. ಚತುರ್ದಶಿಯ ದಿನದಂದು ಬೆಳಗ್ಗೆ ಮುಂಚೆ ನೀರನ್ನು ಕಾಯಿಸುತ್ತಾರೆ. ಸ್ನಾನಕ್ಕೆ ಮೊದಲು ಮೈಗೆ ಎಣ್ಣೆ ಹಚ್ಚಿಕೊಳ್ಳುತ್ತಾರೆ. ಆಮೇಲೆ ತುಳಸಿಯ ಮುಂದೆ ಹಿಂಡಲಕಾಯಿ ಇಟ್ಟು ದೀಪ ಹಚ್ಚುತ್ತಾರೆ. ಬಲೀಂದ್ರ ಮೆಟ್ಟಿದ ಎಂಬ ಸಂಕೇತ ಪೂರ್ವಕ ಆಚರಣೆಯನ್ನು ಮಾಡುತ್ತಾರೆ. ಕಹಿ ಬೇವು, ಅಜವಾನ, ಜೀರಿಗೆ ಅರೆದು ಮಾಡಿದ ಪುಡಿಯನ್ನು ನೀರಿಗೆ ಬೆರೆಸಿ ಸೇವಿಸುತ್ತಾರೆ. ಆ ದಿನ ಕಡಬನ್ನು ಮಾಡಿ ಊಟ ಮಾಡುತ್ತಾರೆ. ಬಲಿ ಪಾಡ್ಯದಂದು ಗೋವುಗಳ ಮೈ ತೊಳೆಸಿ, ಮೈಮೇಲೆ ವಿವಿಧ ಬಣ್ಣಗಳನ್ನು ಹಚ್ಚಿ, ಹೂವು, ಸಿಂಗಾರ, ಅಡಿಕೆ ಮಾಲೆಗಳಿಂದ ಸಿಂಗರಿಸುತ್ತಾರೆ. ಅಂದು ಶೀಲಿಗರು ಹಸುಗಳನ್ನು ಪೂಜಿಸುತ್ತಾರೆ.

ಶೀಲಿಗರ ಮತ್ತೊಂದು ಧಾರ್ಮಿಕ ಸ್ಥಳ ಕತ್ರಿಮನೆ ಎಂಬ ಊರು. ಇಲ್ಲಿಯ ದೇವತಾ ಕಾರ್ಯಕ್ರಮದಂದು ದೇವಸ್ಥಾನದ ಎದಿರು ಕೆಂಡವನ್ನು ಜ್ವಲಿಸಲಾಗುತ್ತದೆ. ಕಾರ್ಯಕ್ರಮಕ್ಕೆ ಬಂದವರೆಲ್ಲರೂ ಸಹ ಈ ಕೆಂಡವನ್ನು ಹಾಯುತ್ತಾರೆ. ಇದರಿಂದ ಶ್ರೇಯೋಭಿವೃದ್ಧಿಯಾಗುತ್ತದೆಂಬುದು ಶೀಲಿಗರ ಹೇಳಿಕೆ.

ವನದೇವಿ ಹಬ್ಬ

ಶೀಲಿಗರ ಗ್ರಾಮದೇವತೆ ನೈಗಾರಿನ ಕಾನನದಲ್ಲಿದೆ. ಪ್ರತಿ ವರ್ಷ ಪುಷ್ಯಮಾಸದ ಅಮಾವಾಸ್ಯೆಯಂದು ಈ ಹಬ್ಬವನ್ನು ಆಚರಿಸುತ್ತಾರೆ. ಕಳೆದ ನೂರಾರು ವರ್ಷದ ಇತಿಹಾಸವಿರುವ ಹಬ್ಬ ಕಾನಹಬ್ಬವೆಂದೇ ಖ್ಯಾತಿಯಾಗಿದೆ. ಕಾನಮ್ಮ ಎನ್ನುವ ವನದೇವಿಯು ಭಕ್ತರನ್ನು ಪೊರೆದಂತೆ, ಹಾಗೂ ಸದಾ ತನ್ನ ಸುತ್ತಮುತ್ತಲಿನ ಪರಿಸರ ರಕ್ಷಣೆಯನ್ನೂ ಮಾಡುತ್ತಾಳೆಂಬ ನಂಬಿಕೆ ಶೀಲಿಗರದು. ಶೀಲಿಗರಿಗೆ ಏನೇ ಸಮಸ್ಯೆ ಬಂದರೂ ದೇವಿಯಲ್ಲಿ ಪ್ರಾರ್ಥಿಸಿಕೊಂಡರೆ ಶೀಘ್ರ ಪರಿಹಾರ ದೊರೆಯುತ್ತದಂತೆ. ಈ ಹಬ್ಬಕ್ಕೆ ಶೀಲಿಗರ ಹೊರತಾಗಿ ಬ್ರಾಹ್ಮಣರು, ಒಕ್ಕಲಿಗರು, ನಾಮಧಾರಿಗಳು ಮುಂತಾದ ಎಲ್ಲ ವರ್ಗದ ಜನರು ಭಾಗವಹಿಸುತ್ತಾರೆ. ಕಾನಹಬ್ಬದಂದು ಸಾವಿರಾರು ಭಕ್ತರು ದೂರದ ಊರುಗಳಿಂದ ಬರುತ್ತಾರೆ. ಸಂತಾನ, ಆರೋಗ್ಯ, ಕೃಷಿಯಲ್ಲಿ ಯಶಸ್ಸನ್ನು ಕೋರಿ ಹರಕೆ ಹೊರುವ ಭಕ್ತರು ಬಾಗೀನ, ಸೀರೆ, ಹೊಲದಲ್ಲಿ ಬೆಳೆಯುವ ಬೆಳೆಗಳನ್ನು ಸಮರ್ಪಿಸುತ್ತಾರೆ. ಅಂದು ದೇವಿಯ ನೈವೇದ್ಯಕ್ಕೆ ಅಕ್ಕಿಯ ವಡೆ, ಪಾಯಸ ಮಾಡಲಾಗುತ್ತದೆ.

ಧಾರ್ಮಿಕತೆ

ಶವಸಂಸ್ಕಾರ

ಶೀಲಿಗರಲ್ಲಿ ಯಾರಾದರು ಮರಣ ಹೊಂದಿದರೆ ಹೆಣಕ್ಕೆ ಕಾಯಿ ಒಡೆದು ದೀಪ ಹಚ್ಚುತ್ತಾರೆ. ಆ ನಂತರ ಸಂಬಂಧಿಕರಿಗೆ ಹೇಳಿ ಕಳಿಸುವುದು, ಸ್ಮಶಾನದಿಂದ ಬರುವಾಗ ಕೆರೆ ಅಥವಾ ಹಳ್ಳಕ್ಕೆ ಬಂದು ಸ್ನಾನ ಮಾಡುವುದು, ಸ್ನಾನದ ಬಳಿಕ ಸ್ಮಶಾನಕ್ಕೆ ಹೋದವರೆಲ್ಲರೂ ಸತ್ತವನ ಮನೆಗೆ ಬಂದು ಅವನ ಹೆಸರಿನಲ್ಲಿ ತಿಳಿ ಬಿಡುತ್ತಾರೆ. ಅಂದು ರಾತ್ರಿ ಹೆಣವನ್ನು ಮಲಗಿಸಿದ ಜಾಗದಲ್ಲಿ ಬೂದಿಚೆಲ್ಲಿ ಎಣ್ಣೆದೀಪ ಹಚ್ಚುವುದು, ಒಂದು ತಂಬಿಗೆಯಲ್ಲಿ ನೀರು ತುಂಬಿಡುವುದು, ಮೃತನ ಆತ್ಮ ಅಂದು ಮನೆಗೆ ಬರುವುದು ಎಂಬ ನಂಬಿಕೆಯಲ್ಲಿ ಈ ಆಚರಣೆಯನ್ನು ಮಾಡುತ್ತಾರೆ. ಮಾರನೇಯ ದಿನ ಸತ್ತವನ ಬಂಧುಬಳಗದವರು ಸ್ಮಶಾನಕ್ಕೆ ಹೋಗಿ ಕೊಳ್ಳಿ ಕೊಡುವುದು, ಮೂರನೇ ದಿನ ಬೂದಿ ಒಟ್ಟು ಹಾಕುವುದು, ಬೂದಿಯನ್ನು ನದಿಗೆ ಹಾಕುವುದು ಮುಂತಾದವುಗಳನ್ನು ಆಚರಿಸುತ್ತಾರೆ. ಹನ್ನೊಂದನೇಯ ದಿನ ಸೂತಕದ ಬಟ್ಟೆಯನ್ನು ತೊಳೆಯುತ್ತಾರೆ. ಹನ್ನೆರಡನೆಯ ದಿನ ಶ್ರಾದ್ಧ ಮಾಡುತ್ತಾರೆ. ಇಲ್ಲೂ ಬ್ರಾಹ್ಮಣರ/ಪುರೋಹಿತರರ ಆಗಮನ ಇರುವುದಿಲ್ಲ. ಗುರಿಕಾರ, ಬುದ್ಧಿವಂತ ಮತ್ತು ಊರಿನ ಪ್ರಮುಖರು ಸೇರಿ ವಿಧಿ-ವಿಧಾನವನ್ನು ಸಾಂಗವಾಗಿ ನಡೆಸಿಕೊಡುತ್ತಾರೆ.

ರಾಜಕೀಯ ಮತ್ತು ಶೈಕ್ಷಣಿಕ ಸ್ಥಿತಿ

ಶೀಲಿಗರು ಕಾಡಿನ ಅಂಚಿನಲ್ಲಿ ವಾಸಿಸುತ್ತಿದ್ದಾರೆ. ಇವರು ಎಲೆ ಮರೆಯ ಕಾಯಿಯಂತೆ ಬದುಕುತ್ತಿದ್ದಾರೆ. ಇವರಲ್ಲಿ ಸಂಘಟನೆಯೂ ಇಲ್ಲ. ಮೀಸಲಾತಿಯೂ ದೊರೆತಿಲ್ಲ. ಶೀಲಿಗರು

ಹೇಳುವ ಪ್ರಕಾರ ಇವರು ಹಾಲಕ್ಕಿ ಸಮುದಾಯಕ್ಕೆ ಸೇರಿದವರು. ಆದರೆ ಇದರ ದಾಖಲೆ ಇಲ್ಲ. ಸರ್ಕಾರಿ ದಾಖಲೆಯಲ್ಲಿ ಇವರನ್ನು ಒಕ್ಕಲಿಗರು ಎಂದು ಸೇರಿಸಿರುವುದರಿಂದ ಇವರಿಗೆ ಯಾವುದೇ ರೀತಿಯ ಮೀಸಲಾತಿಯೂ ಸಿಗುತ್ತಿಲ್ಲ. ಶೀಲಿಗರನ್ನು ಸಮಾಜದ ಕೊನೆಯ ಸಾಲಿನಲ್ಲಿ ಇಟ್ಟಿದ್ದಾರೆ. ಇವರು ರಾಜಕೀಯಕ್ಕೆ ಪ್ರವೇಶವನ್ನು ಮಾಡಲೇ ಇಲ್ಲ. ಕೇವಲ ಗ್ರಾಮ ಪಂಚಾಯತಿ, ತಾಲೂಕು ಪಂಚಾಯತಿ ಮಟ್ಟದಲ್ಲಿಯೇ ಇದ್ದಾರೆ. ಶೈಕ್ಷಣಿಕವಾಗಿಯೂ ಹಿಂದುಳಿದಿದ್ದಾರೆ. ಅವಕಾಶಗಳ ಕೊರತೆಯೂ ಇದೆ. ಈ ಕಾರಣಗಳಿಂದಾಗಿ ಶೀಲಿಗರು ರಾಜಕೀಯವಾಗಿ ಹಿಂದುಳಿದಿದ್ದಾರೆ.

ಶೀಲಿಗರು ಶ್ರೀ ಮಠದ ಸೇವೆಗಾಗಿ ಬಂದವರು. ನಂತರ ಇವರು ಕಾಡಿನಲ್ಲಿ ಹೊಲ, ಗದ್ದೆ ಮಾಡಿಕೊಂಡು ಅಲ್ಲೇ ವಾಸಿಸಲು ಪ್ರಾರಂಭಿಸಿದರು. ಕೃಷಿ, ಕೃಷಿ ಕೂಲಿಯನ್ನೇ ಮಾಡಿಕೊಂಡು ಬಂದರು. ತಮ್ಮ ಮಕ್ಕಳಿಗೂ ಅದೇ ವೃತ್ತಿಯಲ್ಲಿ ಮುಂದುವರೆಯುವಂತೆ ಮಾಡಿದರು. ಇವರಿಗೆ ಶಿಕ್ಷಣ ಬಲು ದೂರದ ಮಾತಾಯಿತು. ಆದರೆ ಇಂದಿನ ದಿನದಲ್ಲಿ ಸರ್ಕಾರ ಆರಂಭಿಸಿರುವ ಸರ್ವ ಶಿಕ್ಷಣ ಅಭಿಯಾನದಿಂದ ಶೀಲಿಗರ ಮಕ್ಕಳು ಶಿಕ್ಷಣದತ್ತ ಹೋಗಲು ಅನುಕೂಲವಾಯಿತು. ಶೀಲಿಗರಲ್ಲಿ ಶಿಕ್ಷಣ ಪಡೆದವರು ಬೆರಳೆಣಿಕೆಯಷ್ಟು ಜನ ಮಾತ್ರ. ಈ ಸಮುದಾಯದಲ್ಲಿ ಸರ್ಕಾರಿ ಉದ್ಯೋಗದಲ್ಲಿರುವವರು ಒಂದೋ, ಎರಡೋ ಮಾತ್ರ ಶಿಕ್ಷಣ ಪಡೆದವರು ಖಾಸಗಿ ಕಂಪನಿಯಲ್ಲಿ, ಗ್ಯಾರೇಜ್‌ಗಳಲ್ಲಿ, ಆಸ್ಪತ್ರೆಗಳಲ್ಲಿ, ಕೈಗಾರಿಕೆಗಳಲ್ಲಿ ಕೆಲಸಮಾಡುತ್ತಿದ್ದಾರೆ.

ಕೃಷಿ–ಭೂ ಹಿಡುವಳಿ–ಪಶುಪಾಲನೆ

ಕೃಷಿಯಲ್ಲಿ ನಿಪುಣತೆಯನ್ನು ಹೊಂದಿದ ಭಾರತದ ಸಮುದಾಯಗಳಿಗೆ ಸ್ವಲ್ಪವೂ ಭೂಮಿಯ ಒಡೆತನ ಇಲ್ಲ ಎನ್ನುವುದು ಸ್ವತಂತ್ರ್ಯ ಭಾರತಕ್ಕೆ ನಾಚಿಕೆಯ ಸಂಗತಿ. ಶೀಲಿಗರು ತಮ್ಮ ತುಂಡು ಭೂಮಿಯಲ್ಲಿ ಕೃಷಿಯನ್ನು ಮಾಡಿ ಜೀವನ ಸಾಗಿಸುತ್ತಿದ್ದಾರೆ. ಇವರಿಗೆ ಸರ್ಕಾರದ ಸೌಲಭ್ಯಗಳು ಸರಿಯಾಗಿ ಸಿಗುತ್ತಿಲ್ಲ. ಅನೇಕ ಕುಟುಂಬಗಳು ಇನ್ನೂ ಕೂಲಿಯನ್ನೇ ನಂಬಿ ಬದುಕುತ್ತಿದ್ದಾರೆ. ಇಂದಿನ ದಿನದಲ್ಲಿ ಯುವಕರು ಪಟ್ಟಣದತ್ತ ಮುಖ ಮಾಡಿ ಹೋಟೆಲ್, ವ್ಯಾಪಾರಿ ಮಳಿಗೆಗಳಲ್ಲಿ, ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದಾರೆ. ಇದರಿಂದ ಶೀಲಿಗ ಕುಟುಂಬಗಳು ಉಸಿರಾಡುವಂತಾಗಿವೆ. ಶೀಲಿಗ ಕುಟುಂಬಗಳು ತಮಗೆ ಇರುವ ತುಂಡು ಭೂಮಿಯ ಸಾಗುವಳಿ ಮಾಡುವುದರೊಂದಿಗೆ ಪಶುಪಾಲನೆಯನ್ನು ಮಾಡುತ್ತಾರೆ. ಕೆಲವರು ಹಸು, ಎಮ್ಮೆಯನ್ನು ಸಾಕಿ ಡೈರಿ ಉದ್ಯೋಗವನ್ನು ಮಾಡುತ್ತಿದ್ದಾರೆ. ಕೆಲವರು ಕೋಳಿ, ಕುರಿಗಳನ್ನು ಸಾಕುತ್ತಿದ್ದಾರೆ. ಒಟ್ಟಿನಲ್ಲಿ ಇಂದಿನ ಯುವ ಪೀಳಿಗೆ ಸ್ವಂತ ಉದ್ಯೋಗದತ್ತ ಮುಖ ಮಾಡುತ್ತಿರುವುದು ಸಂತೋಷದ ವಿಷಯ.

ಚೆನ್ನದಾಸರ್ ಸಮುದಾಯ

ಚೆನ್ನದಾಸರ್ ಸಮುದಾಯವನ್ನು ದಂಡಿಗೆ ದಾಸರು, ದೊಂಬಿದಾಸರು, ಚಕ್ರವಾದ್ಯದಾಸರು, ಜಂಬುದಾಸರು, ಮಾಲದಾಸರು, ಹೊಲೆಯದಾಸರು, ದಶವಂತರು, ಆಟದ ದಾಸರು, ಶಂಖದಾಸರು,

ಗೋಪಾಳಬುಟ್ಟಿದಾಸರು ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಪ್ರಾದೇಶಿಕ ನೆಲೆಗಳಲ್ಲಿ ಸ್ಥಳೀಯವಾಗಿ ಇವರನ್ನು ದಾಸರು, ದಾಸರ, ದಾಸರಿ, ದಾಸಯ್ಯ ಎಂದು ಕರೆಯುವ ವಾಡಿಕೆ ಇದೆ. ಚೆನ್ನದಾಸರ್ ಸಮುದಾಯ ವೈಷ್ಣವ ಭಕ್ತ ಪಂಥದ ಭಿಕ್ಷುಕರಾಗಿದ್ದು, ತಿರುಪತಿ ತಿಮ್ಮಪ್ಪನ ಆರಾಧಕರೂ ಹೌದು. ತಿರುಪತಿ ತಿಮ್ಮಪ್ಪನ ಹೆಸರಿನಲ್ಲಿ ವೆಂಕಟರಮಣ ಗೋವಿಂದ ಎಂದು ನಾಮಸ್ಮರಣೆ ಮಾಡಿ ಭಿಕ್ಷೆಬೇಡುವ ಹರಿದಾಸರ ಪರಂಪರೆಗೆ ಸೇರಿದವರು. ಪ್ರಾರಂಭದಲ್ಲಿ ವೈಷ್ಣವ ಧರ್ಮ ಸ್ವೀಕರಿಸಿದ ಆಂಧ್ರಪ್ರದೇಶದ ಚೆನ್ನಯ್ಯದಾಸು ಮತ್ತು ಮಾಲದಾಸರಿ ಎನ್ನುವದರಿಂದ ಈ ಸಮುದಾಯಕ್ಕೆ ಚೆನ್ನದಾಸರು ಎಂಬ ಹೆಸರು ಬಂದಿದೆ. ವೃತ್ತಿ ಮತ್ತು ವೃತ್ತಿಪರ ಪರಿಕರಗಳ ಮೂಲಕವಾಗಿ ಕರ್ನಾಟಕ ರಾಜ್ಯಾದ್ಯಂತ ಚೆನ್ನದಾಸರ್ ಸಮುದಾಯ ಹರಡಿಕೊಂಡಿದೆ.

ಪೌರಾಣಿಕ ಹಿನ್ನೆಲೆ

ಚೆನ್ನದಾಸರ್ ಚದುರಿಹೋಗಿರುವ ಕಡಿಮೆ ಜನಸಂಖ್ಯೆಯ ಸಮುದಾಯವಾಗಿದೆ. ಶೈಕ್ಷಣಿಕವಾಗಿಯೂ ತೀರಾ ಹಿಂದುಳಿದಿದೆ. ಸಂಘಟನಾತ್ಮಕವಾಗಿಯೂ ಅಷ್ಟೇ ಹಿಂದಿದೆ. ಹೀಗಿರುವಾಗ ಈ ಸಮುದಾಯ ತನಗೊಂದು ಐತಿಹಾಸಿಕ ಹಿನ್ನೆಲೆಯಿದೆ. "ಪ್ರತಿ ಸಮುದಾಯವು ತಮ್ಮ ವಂಶವು ಒಬ್ಬ ಮಹರ್ಷಿಯಿಂದ ಆರಂಭವಾದ ಗೋತ್ರಕ್ಕೆ ಸಂಬಂಧಿಸಿದ್ದೆಂದು ಸಾಮಾನ್ಯವಾಗಿ ಹೇಳುವ ರೂಢಿ ನಮ್ಮ ದೇಶದಲ್ಲದೆ. ಆದರೆ ದಾಸರ ವಂಶದ ಮೂಲಪುರುಷನು ಯಾವ ಋಷಿಯೂ ಆಗಿರದೆ ಸಾಮಾನ್ಯ ಮಾನವನಾಗಿದ್ದಾನೆ. ಆತನೇ ಅಜಮಿಳನು. ಈತ ಊರ ಹೊರಗೆ ಜೀವಿಸುತ್ತಿದ್ದನು. ಅಂತ್ಯಜ ಕುಲದವನಾಗಿದ್ದನೆಂದು ಹೇಳುವರು. ಆತನು ಸಮೀಪದ ಅರಣ್ಯದಿಂದ ಸೌದೆ ತಂದು ಮಾರಿ ಉಪಜೀವನ ಸಾಗಿಸುತ್ತಿದ್ದನು. ಅದೇ ಹಳ್ಳಿಯ ಇನ್ನೊಂದು ಹೊರಬದಿಯಲ್ಲಿ ಬಹಿಷ್ಕೃತ ಉಚ್ಚಕುಲದ ಸ್ತ್ರೀಯೋರ್ವಳು ರೂಪ ಜೀವಿಯಾಗಿ ಜೀವಿಸುತ್ತಿದ್ದಳು. ಅಜಮಿಳನಿಗೂ ಅವಳಿಗೂ ಶರೀರ ಸಂಬಂಧ ಬೆಳೆದು, ಇಬ್ಬರೂ ಕೂಡಿ ಜೀವಿಸುತ್ತಿದ್ದರು. ಕಾಲಾಂತರದಲ್ಲಿ ಅವನಿಗೆ ಅನೇಕ ಗಂಡು ಮತ್ತು ಹೆಣ್ಣು ಮಕ್ಕಳು ಹುಟ್ಟಿದರು. ಅಜಮಿಳನು ಅತೀ ಕಾಮುಕ. ತನ್ನ ಮಗಳನ್ನೇ ಕೂಡಿ ತನ್ನ ಕಾಮೇಚ್ಛೆಯನ್ನು ತಣಿಸಿಕೊಂಡವನು. ಅವಸಾನ ಕಾಲದಲ್ಲಿ ಅಪ್ರಯತ್ನವಾಗಿ ತನ್ನ ಕೊನೆಯ ಮಗನಾದ ನಾರಾಯಣನನ್ನು ಕೂಗಿದನು. ಪ್ರಾಣ ಹೋಗುವ ಸಮಯದಲ್ಲಿ ಭಗವಂತನ ನಾಮಸ್ಮರಣೆ ಮಾಡಿದ್ದರಿಂದ ಆತನು ಮಾಡಿದ ಪಾಪಗಳೆಲ್ಲಾ ತೊಳೆದು ಹೋಗಿ ಆತನನ್ನು ವೈಕುಂಠಕ್ಕೆ ಒಯ್ಯಲಾಯಿತು. ಈ ಸಂತತಿಯೇ ಈಗಿನ ದಾಸರು."[೨]

ಮತ್ತೊಂದು ನಂಬಿಕೆಯ ಪ್ರಕಾರ ಬ್ರಾಹ್ಮಣನಾದ ಅಜಮಿಳನು ಕೆಳಜಾತಿಯ ಹೆಣ್ಣನ್ನು ಮದುವೆಯಾದನು. ಮುಂದೆ ಅವನಿಗೊಂದು ಗಂಡು ಮಗು ಹುಟ್ಟಿತು. ಎರಡೂ ಕುಲದವರು ಈ ಮಗುವನ್ನು ತಮ್ಮವನೆಂದು ಸ್ವೀಕರಿಸಲಿಲ್ಲ. ಬಳಿಕ ಆ ಮಗುವು ದಿಕ್ಕಿಲ್ಲದೆ ಭಿಕ್ಷೆ ಬೇಡುತ್ತ ತಿರುಗುತ್ತ ಹೊರಟ. ಅವನೇ ಚೆನ್ನದಾಸ, ಅವನ ಸಂತತಿಯವರೇ ಚೆನ್ನದಾಸರಾದರೆಂದು ಸಮುದಾಯದ ಹಿರಿಯರು ಹೇಳುತ್ತಾರೆ.

ಸಾಮಾಜಿಕ ವ್ಯವಸ್ಥೆ

ಬೆಡಗುಗಳು

ಚೆನ್ನದಾಸರ್ ಸಮುದಾಯದಲ್ಲಿ ನೂರಾರು ಬೆಡಗುಗಳಿವೆ. ಒಂದು ಬೆಡಗಿನವರು ತಮ್ಮ ಬೆಡಗನ್ನು ಹೊರತುಪಡಿಸಿ ಉಳಿದ ಯಾವುದೇ ಬೆಡಗಿನವರೊಂದಿಗೆ ಸಂಬಂಧ ಬೆಳೆಸಬಹುದು. ಬಹುತೇಕ ಸಮುದಾಯಗಳಲ್ಲಿ ಮದುವೆಯು ಸಹೋದರಿ ಸಂಬಂಧಗಳನ್ನೊಳಗೊಂಡಿದೆ. ಸಹೋದರ ಸಂಬಂಧಗಳಲ್ಲಿ ಮದುವೆಯಾಗಲು ನಿಷೇಧವಿದೆ. ಅದನ್ನು ಒಂದು ವ್ಯವಸ್ಥೆಯನ್ನಾಗಿ ಮುಂದುವರೆಸಿಕೊಂಡು ಹೋಗಲು ಸಹೋದರತೆಯ ಗುರುತಾಗಿ ಬೆಡಗುಗಳನ್ನು ಸೃಷ್ಟಿಸಲಾಗಿದೆ. ಅಲ್ಲದೆ ಈ ಸಮುದಾಯದಲ್ಲಿ ಕೆಲವು ಬೆಡಗಿನವರು ತಮ್ಮ ಬೆಡಗನ್ನು ಹೊರತುಪಡಿಸಿ ಕೆಲವನ್ನು ಸೋದರ ಸಂಬಂಧವೆಂದೂ ಪರಿಗಣಿಸುತ್ತಾರೆ. ಇಂಥ ಸೋದರ ಸಂಬಂಧದ ಬೆಡಗಿನವರನ್ನು ಹೊರತುಪಡಿಸಿ ಸೋದರಿ ಸಂಬಂಧ ಬೆಡಗಿನವರೊಂದಿಗೆ ಮದುವೆ ಮಾಡಿಕೊಳ್ಳುತ್ತಾರೆ.

ಉಡುಗೆ-ತೊಡುಗೆ

ಹಳೆಯ ತಲೆಮಾರಿನ ಚೆನ್ನದಾಸರ್ ಸಮುದಾಯದವರು ತಳಸಮುದಾಯದ ಜನರು ಬಳಸುತ್ತಿದ್ದ ಉಡುಗೆ ತೊಡಿಗೆಗಳನ್ನೇ ಬಳಸುತ್ತಿದ್ದರು. ಸಾಮಾನ್ಯವಾಗಿ ಪುರುಷರು ಮೊಳಕಾಲು ಮೇಲ್ಭಾಗಕ್ಕೆ ಬರುವಂತೆ ಕಚ್ಚೆಪಂಚೆ ಹಾಗೂ ಕಿಸೆ ಅಂಗಿಯನ್ನು ತೊಡುತ್ತಾರೆ. ಮಹಿಳೆಯರು ಕಡಿಮೆ ದರ್ಜೆಯ ಹತ್ತಿ ನೂಲಿನಿಂದ ತಯಾರಿಸಿದ ಸೀರೆಗಳನ್ನು ತೊಡುತ್ತಿದ್ದರು. ಚೆನ್ನದಾಸರ್ ಪುರುಷರು ಭಿಕ್ಷಾಟನೆ ವೃತ್ತಿಗೆ ವಿಶೇಷವಾದ ಉಡುಗೆಯನ್ನು ತೊಡುತ್ತಿದ್ದರು. ಇಂದಿಗೂ ಈ ಉಡುಗೆಗಳಲ್ಲಿ ಅಂತಹ ವ್ಯತ್ಯಾಸಗಳೇನಿಲ್ಲ. ಕೋಲೆಬಸವನನ್ನು ಆಡಿಸುವವರು ತಮ್ಮ ಎತ್ತುಗಳಿಗೆ ನಾನಾ ಬಟ್ಟೆಗಳಿಂದ ಅಲಂಕರಿಸಿ ತಾವೂ ಸಹ ವಿವಿಧ ಬಣ್ಣಗಳ ಬಟ್ಟೆಗಳನ್ನು ಬಳಸಿ ವಿಶೇಷವಾಗಿ ಅಲಂಕಾರ ಮಾಡಿಕೊಳ್ಳುತ್ತಾರೆ. ಗೋಪಾಳ ಬುಟ್ಟಿ, ಶಂಖ ಜಾಗಟೆ ಹಿಡಿದು ಭಿಕ್ಷಾಟನೆ ಮಾಡುವವರು ಸೊಂಟಕ್ಕೆ ಕಟ್ಟಿದ ಏರುಗಚ್ಚೆ, ಮೇಲೊಂದು ಉತ್ತರೀಯ ಹಾಕಿ ತಿರುಪತಿ ತಿಮ್ಮಪ್ಪನ ನಾಮ ಹಾಕಿ ಭಿಕ್ಷಾಟನೆ ಮಾಡುತ್ತಾರೆ. ಉದರ ನಿಮಿತ್ತ ವಿವಿಧ ರೀತಿಯ ವೇಷಗಳನ್ನು ಧರಿಸುತ್ತಾರೆ. ಅದರಾಚೆಗೆ ಇಂದಿನ ಯುವಕರು ಇತರರಂತೆ ಪ್ಯಾಂಟ್, ಷರ್ಟ್ ಹುಡುಗಿಯರು ಚೂಡಿದಾರ ಮುಂತಾದ ನವೀನ ಉಡುಪುಗಳನ್ನು ಧರಿಸುತ್ತಾರೆ.

ಒಳಾಡಳಿತ ವ್ಯವಸ್ಥೆ

"ಚೆನ್ನದಾಸರ್ ಸಮುದಾಯದಲ್ಲಿ ಕುಲಪಂಚಾಯತಿಯನ್ನು ಕಟ್ಟೆಮನೆ ಎಂದು ಕರೆಯುತ್ತಾರೆ. ಕುಲಪಂಚಾಯತಿಯ ಮುಖ್ಯಸ್ಥನನ್ನು ಬಾಯ್ಕರ್ ಎಂದು ಕರೆಯುತ್ತಾರೆ. ಇದು ವಂಶಪಾರಂಪರ್ಯ ವಾಗಿ ಬಂದಿರುತ್ತದೆ. ಕುಲಪಂಚಾಯತಿಯ ಸಂಪೂರ್ಣ ಕಾರ್ಯ ನಿರ್ವಹಣೆ ಇವನದಾಗಿರುತ್ತದೆ. ತಪ್ಪು ಮಾಡಿದವರಿಗೆ ಶಿಕ್ಷಿಸುವ, ದಂಡ ಹಾಕುವ ಅಧಿಕಾರ ಇವನದು. ಕೆಲವು ಸಮಯದಲ್ಲಿ ಸಮುದಾಯದ ಹಿರಿಯರೂ ಸಹ ನ್ಯಾಯ ನಿರ್ಣಯ ಮಾಡುತ್ತಾರೆ. ತಮ್ಮ ಸಮುದಾಯದಲ್ಲಿ

ಅನ್ಯಾಯ ಅಸಮಾನತೆಗಳು, ಕಟ್ಟುಪಾಡುಗಳ ಉಲ್ಲಂಘನೆ ಮತ್ತೊಬ್ಬರ ಮೇಲಿನ ದೌರ್ಜನ್ಯ ಮುಂತಾದವುಗಳನ್ನು ನಿರ್ಣಯಿಸಲು ನ್ಯಾಯ ಪಂಚಾಯತಿಯನ್ನು ರಚಿಸಿಕೊಂಡು ಬರಲಾಗಿದೆ. ಕಟ್ಟೆಮನೆಯಲ್ಲಿ ೧೫ ರಿಂದ ೨೦ ಜನ ಸದಸ್ಯರಿರುತ್ತಾರೆ.[೮೮] ಅದರ ಮುಖ್ಯಸ್ಥನನ್ನು ದೊಡ್ಡ ಯಜಮಾನ ಎಂದು ಕರೆಯುತ್ತಾರೆ. ಸಮುದಾಯದ ಜನರಿಂದ ಈ ದೊಡ್ಡ ಮನುಷ್ಯನನ್ನು ಆಯ್ಕೆ ಮಾಡುತ್ತಾರೆ. ಈಗಲೂ ಈ ನ್ಯಾಯ ಪಂಚಾಯತಿ ರಚನೆ ಸಮುದಾಯದಲ್ಲಿ ಉಳಿದುಕೊಂಡು ಬಂದಿದೆ. ಇವರಲ್ಲಿ ಜಾತಿ ಕಟ್ಟಳೆಯನ್ನು ಮೀರುವವರಿಗೆ ದಂಡ ಮತ್ತು ಸಾಮಾಜಿಕ ಬಹಿಷ್ಕಾರ ಹಾಕುವ ಪದ್ಧತಿ ಇನ್ನೂ ರೂಢಿಯಲ್ಲಿದೆ. ಯಾವುದೇ ನ್ಯಾಯಾಲಯ, ಪೋಲಿಸ್ ಠಾಣೆ ಕಟ್ಟೆ ಹತ್ತುವುದಿಲ್ಲ. ಈ ಕುಲಸಭೆಯ ಮುಖ್ಯಸ್ಥನನ್ನು ಪ್ರಾದೇಶಿಕವಾಗಿ ಗುಡೇಗಾಡು, ಕಟ್ಟೆಮನೆ, ಪಿನ್ನಪೆದ್ದ, ಕೊಂಡಿಕೋಲ, ಗುರಿಕಾರ, ಸಮೀಲು ಎಂದು ಕರೆಯುವ ವಾಡಿಕೆ ಇದೆ. ಮುಖ್ಯಸ್ಥನಿಗೆ ಸಹಾಯ ಮಾಡಲು ತಳವಾರನ್ನು ನೇಮಿಸುತ್ತಾರೆ. ಈತ ಪಂಚಾಯತಿಯ ಆದೇಶದಿಂದ ಸಭೆ ಕೂಡಿಸುವ, ಸಂದೇಶ ತಲುಪಿಸುವ ಮುಂತಾದ ಕಾರ್ಯವನ್ನು ಮಾಡುತ್ತಾನೆ. ಇದಲ್ಲದೆ ಒಂದೊಂದು ಬೆಡಗಿನ ಹಿರಿಯರ ಸಲಹಾ ಸಮಿತಿಯಿದ್ದು ಪಂಚಾಯತಿಯ ತೀರ್ಮಾನಗಳನ್ನು ಜಾರಿಗೆ ತರಲು ಅದು ಕಾರ್ಯ ನಿರ್ವಹಿಸುತ್ತದೆ.

ಕುಲಸಭೆಯ ನ್ಯಾಯ ನಿರ್ಣಯಗಳು ವಿವಿಧ ಹಂತಗಳನ್ನೊಳಗೊಂಡಿದೆ. ಸಮುದಾಯದ ಜನಗಳ ನಡುವೆ ಕಲಹಗಳಾದಾಗ ಮತ್ತು ವ್ಯಕ್ತಿ ಸಣ್ಣ ಪುಟ್ಟ ತಪ್ಪು ಮಾಡಿದಾಗ ಹಿರಿಯರು ಕಲಹವನ್ನು ಬಗೆಹರಿಸುವ ಸಣ್ಣ ಪುಟ್ಟ ತಪ್ಪುಗಳನ್ನು ಇನ್ನೊಮ್ಮೆ ಮಾಡದಂತೆ ಸೂಚನೆ ನೀಡಿ ಸರಳ ನಿರ್ಣಯವನ್ನು ಕೊಡುತ್ತಾರೆ. ಅಣ್ಣ-ತಮ್ಮಂದಿರ ಮತ್ತು ತಂದೆ-ಮಕ್ಕಳ ಆಸ್ತಿಯ ಹಂಚಿಕೆಯಲ್ಲೂ ಇದೇ ನಿರ್ಣಯವನ್ನು ಕೈಗೊಳ್ಳುತ್ತಾರೆ. ಪಂಚಾಯತಿ ಸೇರಿಸಿದ್ದಕ್ಕೆ ಕಾರಣವಾದವರು ಕುಲಸಭೆಗೆ ಖರ್ಚು ನೀಡಬೇಕಾಗಿರುತ್ತದೆ. ಹಿರಿಯರಿಗೆ, ಹೆಂಗಸರಿಗೆ ಅವಮಾನ ಮಾಡಿದರೆ, ಕಳ್ಳತನ ಮಾಡಿದರೆ ಅಂಥವರಿಗೆ ದಂಡ ವಿಧಿಸುವ ನಿರ್ಣಯವನ್ನು ಕೈಗೊಳ್ಳುತ್ತಾರೆ. ದಂಡವು ಹಣದ ರೂಪದಲ್ಲಿರುತ್ತದೆ. ಅಪರಾಧವನ್ನು ಪರಿಗಣಿಸಿ ದಂಡದ ಪ್ರಮಾಣವನ್ನು ನಿಗಧಿಗೊಳಿಸುತ್ತಾರೆ. ಕೊಲೆ, ಅತ್ಯಾಚಾರ, ಅನೈತಿಕ ಸಂಬಂಧ, ಧಾರ್ಮಿಕ ಕಾರ್ಯದಲ್ಲಿ ತಪ್ಪೆಸಗಿದರೆ ಅವರನ್ನು ಕುಲದಿಂದ ಬಹಿಷ್ಕರಿಸುತ್ತಾರೆ. ನ್ಯಾಯ ನಿರ್ಣಯ ಕುಲಸಭೆಯಲ್ಲಿ ಬೇಗ ತೀರ್ಮಾನವಾಗದಿದ್ದಾಗ ಕುಲಸಭೆಯ ಮುಖ್ಯಸ್ಥ ಕಡ್ಡಿ ಮುರಿಯುವ ಹಾಗೆ ಕೊನೆಯ ತೀರ್ಮಾನ ನೀಡುತ್ತಾನೆ.

ವಸತಿ ವ್ಯವಸ್ಥೆ

ಚೆನ್ನದಾಸರ್ ಸಮುದಾಯದವರು ಕೆಲವು ಸಣ್ಣ ಉದ್ಯೋಗಗಳನ್ನು ಮಾಡಲು ಪ್ರಾರಂಭಿಸಿದ ನಂತರ ಮಣ್ಣಿನ ಹೆಂಟೆಗಳನ್ನು ತಯಾರಿಸಿ ಅವುಗಳಿಂದ ಮನೆ ಕಟ್ಟಿಕೊಳ್ಳಲು ಪ್ರಾರಂಭಿಸಿದರು. ಉದ್ಯೋಗವಿಲ್ಲದವರು ಅಲೆಮಾರಿಗಳಾಗಿಯೇ ಜೋಪಡಿ ಹಾಗೂ ಟೆಂಟ್‌ಗಳಲ್ಲೇ ವಾಸಿಸತೊಡಗಿದರು. ಮೊದಮೊದಲು ಅಲೆಮಾರಿಗಳಾಗಿ ಯಾವ ಊರಿಗೆ ಹೋಗುತ್ತಿದ್ದರೋ, ಆ ಊರಿನ ಹೊರ

ಭಾಗದಲ್ಲಿರುವ ದೇವಾಲಯಗಳು, ಮಸೀದಿಗಳು ಇವರ ವಸತಿ ಕೇಂದ್ರಗಳಾಗಿದ್ದವು. ಹಗಲು ಹೊತ್ತಿನಲ್ಲಿ ಊರ ಹೊರಗೆ ಹೊಲದಲ್ಲಿ ಮರಗಳ ಕೆಳಗೆ ಇವರು ಬಿಡಾರ ಹೂಡುತ್ತಿದ್ದರು. ಕೆಲವೊಮ್ಮೆ ತಾತ್ಕಾಲಿಕವಾಗಿ ಚಪ್ಪರ ಹಾಕಿ ಅದರಲ್ಲಿ ವಾಸಿಸುತ್ತಿದ್ದರು.

ಆಹಾರ ಪದ್ಧತಿ

ಚೆನ್ನದಾಸರ್ ಸಮುದಾಯದವರು ವಿಶೇಷವಾದ ಆಹಾರ ಪದ್ಧತಿಯನ್ನು ಹೊಂದಿರುವುದಿಲ್ಲ. ಅವರು ಸಸ್ಯಾಹಾರ ಮತ್ತು ಮಾಂಸಾಹಾರ ಎರಡನ್ನೂ ಸೇವಿಸುತ್ತಾರೆ. ಸಾಮಾನ್ಯವಾಗಿ ಕೆಳವರ್ಗದ ಬುಡಕಟ್ಟು ಸಮುದಾಯದವರು ಉಪಯೋಗಿಸುವ ಆಹಾರ ಪದಾರ್ಥಗಳನ್ನೇ ಇವರು ಉಪಯೋಗಿಸುತ್ತಾರೆ. ಮೂಲತಃ ಇವರು ಮಾಂಸಾಹಾರಿಗಳು. ಮೊಟ್ಟೆ, ಕೋಳಿ, ಮೀನು, ಮೊಲ, ಚಿಗರೆ, ನರಿ, ಕಾಡುಬೆಕ್ಕು, ನೀರುನಾಯಿ, ಇಲಿ, ಏಡಿ, ಮುಂಗಲಿ, ಪಾರಿವಾಳ, ಬೆಳ್ಳಕ್ಕಿ, ಗೊರವಂಕ, ಅಳಿಲು, ಉಡದ ಮಾಂಸವನ್ನು ಸೇವಿಸುತ್ತಾರೆ. ಹೀಗಾಗಿ ಇವರಿಗೆ ದಿನನಿತ್ಯ ಮಾಂಸದ ಅಡುಗೆ ಇರುತ್ತಿತ್ತು. ಆಹಾರದ ಕೊರತೆ ಇದ್ದಾಗ ಗೆಣಸಿನ ಬಳ್ಳಿಯನ್ನೇ ತಿನ್ನುತ್ತಿದ್ದರು. ಒಮ್ಮೊಮ್ಮೆ ರಸ್ತೆಯ ಬದಿಯಲ್ಲಿ ಬೆಳೆಯುವ ರಾಜಗಿರಿ ಸೊಪ್ಪು ಕುದಿಸಿ ತಿನ್ನುತ್ತಿದ್ದರು. ಹೆಂಡ, ಸಾರಾಯಿಗಳನ್ನು ಜೀವನದ ಒಂದು ಭಾಗನ್ನಾಗಿಸಿಕೊಂಡಿದ್ದಾರೆ. ವೀಳ್ಯದೆಲೆ, ತಂಬಾಕು, ನಶ್ಯ, ಬೀಡಿ, ಸಿಗರೇಟು ಮುಂತಾದವುಗಳನ್ನು ಸೇವಿಸುತ್ತಾರೆ. ಸೂರ್ಯಗ್ರಹಣ ಹಾಗೂ ಚಂದ್ರಗ್ರಹಣ ಹಿಡಿದಾಗ ಕೆಲಸ ಹಾಗೂ ಊಟ ಮಾಡುವುದಿಲ್ಲ. ಗ್ರಹಣ ಬಿಟ್ಟ ಮೇಲೆ ಸ್ನಾನ ಮಾಡಿ, ಅಡುಗೆ ಮಾಡಿ ಊಟ ಮಾಡುತ್ತಾರೆ. ಅತಿಯಾದ ಹಸಿವಾಗಿ ಅನ್ನ ದೊರೆಯದಿದ್ದಾಗ ಸ್ಮಶಾನಕ್ಕೆ ಹೋಗಿ ಯಾರೋ ಬಿಸಾಕಿದ ಪದಾರ್ಥಗಳನ್ನು ತಿನ್ನುತ್ತಿದ್ದರು. ಆಹಾರದ ಕೊರತೆಯಾದಾಗ ತೆನೆ, ಶೇಂಗಾ ಮುಂತಾದವುಗಳನ್ನು ಕದ್ದು ತಂದು ರಾತ್ರಿಯೇ ತೆನೆಗಳನ್ನು ಬಡಿದು ಕಾಳು ಮಾಡುತ್ತಿದ್ದರು. ಆನಂತರ ದಂಡು, ಸಿಪ್ಪೆಗಳನ್ನೆಲ್ಲ ಸುಟ್ಟು ಹಾಕುತ್ತಿದ್ದರು.

ವೈದ್ಯ ಪದ್ಧತಿ

ಅಲೆಮಾರಿಗಳಾದ ಚೆನ್ನದಾಸರ್ ಸಮುದಾಯದವರು ಬೇಟೆಯಾಡಲು ಹೋದಾಗ ಅಡವಿಯಲ್ಲಿ ಕೆಲವು ಗಿಡಮೂಲಿಕೆಗಳನ್ನು ತಂದು ತಮ್ಮ ಸುತ್ತಮುತ್ತಲ ಜನರಿಗೆ, ತಮ್ಮೊಂದಿಗೆ ಬಾಳುತ್ತಿದ್ದ ದನಕರು, ಕುರಿ–ಮೇಕೆ, ಎಮ್ಮೆಗಳಿಗೆ ನಾಟಿವೈದ್ಯ ಪದ್ಧತಿಯ ಮೂಲಕ ಖಾಯಿಲೆಗಳನ್ನು ಗುಣಪಡಿಸುತ್ತಾರೆ. ಜಾನುವಾರುಗಳಿಗೆ ಚಿಕಿತ್ಸೆ ನೀಡುವಾಗ ಅನುಭವದ ಮೂಲಕ ರೋಗಗಳನ್ನು ಪತ್ತೆ ಹಚ್ಚುತ್ತಾರೆ. ಜಾನುವಾರುಗಳಿಗೆ ತಗಲುವ ರೋಗಗಳಾದ ಕಳ್ಳಬಾವು, ರಕ್ತಕುಂದು, ಹೊಟ್ಟೆನೋವು, ಗಂಟಲುಬೇನೆ, ಕೆಚ್ಚಲಬಾವು, ಕಾಲುಮುರಿತ, ಚಪ್ಪೆ ಜಾರುವುದು, ಬಾಯಿ ಜ್ವರ ಮುಂತಾದ ಸಮಸ್ಯೆಗಳಿಗೆ ಚಿಕಿತ್ಸೆ ಮಾಡುತ್ತಾರೆ. ಅದೇ ರೀತಿ ಮನುಷ್ಯರಿಗೆ ಅರೆ ತಲೆನೋವು, ಹೊಟ್ಟೆನೋವು, ಬಿಳಿಕರೆ, ಕೆಂಪುಕರೆ, ಕೈಮಸುಗು, ಸಂತಾನ ಇಲ್ಲದಿದ್ದಾಗ, ಬಾಲಗ್ರಹ, ಪಿತ್ತ, ಭೇದಿ, ಜ್ವರ, ತಲೆ ಸುತ್ತುವಿಕೆ, ತೊನ್ನು ಮೊದಲಾದ ರೋಗಗಳಿಗೆ ಗಿಡಮೂಲಿಕೆಗಳಿಂದ ಔಷಧಿ ತಯಾರಿಸಿ

ಕೊಡುತ್ತಾರೆ. ಔಷಧೋಪಚಾರಕ್ಕೆ ಬೇಕಾಗುವ ಹಸಿರೆಲೆ, ಬಳ್ಳಿ, ಬೇರು, ಕಾಯಿ, ಸೊಪ್ಪು, ಗಿಡ, ಹೂವು, ಬೀಜಗಳನ್ನು ತಂದು ಅವುಗಳಿಂದ ಔಷಧಿ ತಯಾರಿಸುವುದು ಅಷ್ಟೇ ಮುಖ್ಯವಾಗಿರುತ್ತದೆ. ಕೆಲವನ್ನು ಹಸಿ ರಸವಾಗಿ, ಕೆಲವನ್ನು ಕುಡಿಸಿ, ಕೆಲವನ್ನು ಅರೆದು ಲೇಪವಾಗಿ ಮತ್ತೆ ಕೆಲವನ್ನು ಹಳೆ ತುಪ್ಪ, ಉಡವಿನ ತುಪ್ಪ, ಹಂದಿ ತುಪ್ಪ, ಬೆಲ್ಲ, ಮಜ್ಜಿಗೆ, ಎದೆಹಾಲು, ಮೇಕೆಹಾಲು ಮೊದಲಾದ ವಸ್ತುಗಳಲ್ಲಿ ಸೇರಿಸಿ ಕುಡಿಸುತ್ತಾರೆ. ಮತ್ತು ಕೆಲವನ್ನು ಹಚ್ಚುತ್ತಾರೆ. ಕೆಲವು ಪಂಡಿತರು ದೇವರ ಹೆಸರಿನ ಮೇಲೆ ಗುರುವಾರ ಮತ್ತು ಭಾನುವಾರ ಮಾತ್ರ ನಾಟಿ ಔಷಧಿ ಕೊಡುತ್ತಾರೆ. ಆದರೆ ನಾಟಿ ವೈದ್ಯರು ತಾವು ಬಳಸುವ ಗಿಡಮೂಲಿಕೆಗಳ ಹೆಸರನ್ನು ಹೇಳುವುದಿಲ್ಲ. ಅವರೂ ಸಹ ಗಿಡಮೂಲಿಕೆಗಳ ಹೆಸರನ್ನು ಉಚ್ಚಾರಣೆ ಮಾಡುವುದಿಲ್ಲ. ಆಕಸ್ಮಿಕವಾಗಿ ಹೆಸರು ಹೇಳಿದರೆ ತಾವು ಕೊಟ್ಟ ಔಷಧಿ ನಾಟುವುದಿಲ್ಲವೆಂದು ಹೇಳುತ್ತಾರೆ.

ಜನಪದ ನಂಬಿಕೆಗಳು

ನಂಬಿಕೆಗಳು ಹಾಗೂ ಶಕುನಗಳು ಒಂದೇ ನಾಣ್ಯದ ಎರಡು ಮುಖಗಳು. ಒಂದಕ್ಕೊಂದು ಪೂರಕವಾಗಿರುತ್ತದೆ. ನಂಬಿಕೆಗೆ ಶ್ರದ್ಧೆ ಕಾರಣವಾದರೆ ಶಕುನಗಳಿಗೆ ಭಯಭೀತಿ ಕಾರಣವಾಗಿರುತ್ತದೆ. ನಂಬಿಕೆಗಳಲ್ಲಿ ವಿಶೇಷವಾಗಿ ಶುಭದ ಹಾರೈಕೆ ಕಂಡುಬಂದರೆ, ಶಕುನಗಳಲ್ಲಿ ಶುಭಾಅಶುಭಗಳ ಲೆಕ್ಕಾಚಾರವಿರುತ್ತದೆ. ಹೀಗಾಗಿ ಇವೆರಡು ಪ್ರಾಚೀನ ಹಾಗೂ ರೂಢಿಗತವಾದವುಗಳು.

ಅಂಗ ಸಂಬಂಧಿ ನಂಬಿಕೆಗಳು

* ಗಂಡು ಮಕ್ಕಳಿಗೆ ದೇಹದ ಬಲಗಾಲು, ಬಲಗೈ, ಮುಖದ ಬಲಭಾಗಕ್ಕೆ ಕಪ್ಪು ಮಚ್ಚೆ ಇದ್ದರೆ ಶುಭ. ಅದೇ ಹೆಣ್ಣು ಮಕ್ಕಳಿಗೆ ಎಡ ಭಾಗಕ್ಕೆ ಇದ್ದರೆ ಶುಭ.
* ಮಗುವಿಗೆ ಹಣೆ ವಿಶಾಲವಾಗಿದ್ದರೆ ಕಣ್ಣುಗುಡ್ಡೆಗಳು ಚಿಕ್ಕದಿದ್ದರೆ, ನಾಲಿಗೆ ಉದ್ದವಿದ್ದು ತೆಳ್ಳಗಿದ್ದರೆ ಅದು ಶುಭ.
* ಗಂಡು ಮಕ್ಕಳ ಎಡಗಣ್ಣು, ಎಡ ಭುಜ, ಎಡ ತೊಡೆ ಹಾಗು ಹೆಣ್ಣು ಮಕ್ಕಳಿಗೆ ಬಲಗಣ್ಣು, ಬಲಭುಜ ಅದುರಿದರೆ ಅಶುಭ.
* ಅಮವಾಸ್ಯೆ, ಹುಣ್ಣಿಮೆ, ಚಂದ್ರಗ್ರಹಣ, ಸೂರ್ಯಗ್ರಹಣಗಳ ದಿನದಂದು ಶಕ್ತಿ, ಗಾಳಿ, ಸಂಚರಿಸುತ್ತದೆಂಬ ನಂಬಿಕೆಯಿಂದಾಗಿ ಯಂತ್ರ, ಮಂತ್ರ, ತಾಯತ ಕಟ್ಟು, ವಿಶೇಷ ಪೂಜೆ, ಮಾಟ ಮಾಡುವುದು ಇತ್ಯಾದಿ ಮಾಡುತ್ತಾರೆ ಹಾಗೂ ಮಾಡಿಸುತ್ತಾರೆ, ಈ ದಿನಗಳು ದುಷ್ಟ ಶಕ್ತಿಗಳನ್ನು ಗೆಲ್ಲುವ ಹಾಗೂ ದುಷ್ಟ ಶಕ್ತಿಗಳನ್ನು ನಶಿಸುವಂತೆ ಮಾಡುವ ಕಾರ್ಯಸಿದ್ಧಿ ಸಾಧನೆಗಾಗಿ ಮಾಡುವ ನಂಬಿಕೆಯಾಗಿದೆ.
* ಮಂಗಳವಾರ, ಶುಕ್ರವಾರ ಹೆಣ್ಣು ದೇವರುಗಳ ವಾರ.
* ಹುಣ್ಣಿಮೆ ಹೆಣ್ಣು ದೇವರಿಗೆ ಸಂಬಂಧಿಸಿದ್ದು.

* ಹೊರಗಡೆ ಹೋಗುವಾಗ ಎದುರುಗಡೆ ವಿಧವೆ, ಸಲಿಕೆ, ಗುದ್ದಲಿ, ಹಾರೆ ಬಂದರೆ ಅಶುಭ.

ಆಚರಣೆಗಳು

ಸೀಮಂತ

ಚೆನ್ನದಾಸರ್ ಸಮುದಾಯದಲ್ಲಿ ಮೊದಲು ಸೀಮಂತ ಆಚರಣೆ ಇರಲಿಲ್ಲ. ಇತ್ತೀಚಿಗೆ ಒಂದೇ ಕಡೆ ನೆಲೆಸಿದ ಚೆನ್ನದಾಸರ್ ಸಮುದಾಯದಲ್ಲಿ ಸೀಮಂತ ಕಾರ್ಯ ಪ್ರವೇಶ ಪಡೆದಿದೆ. ಮೊದಲ ಬಾರಿಗೆ ಗರ್ಭವತಿಯಾದ ಸಂದರ್ಭದಲ್ಲಿ ಯಾರಿಗೂ ತಿಳಿಸದಂತೆ ಅವಳಿಗೆ ತಲೆ ಸ್ನಾನ ಮಾಡಿಸಿ ಅವಳ ಕೈಗೆ ಹಸಿರು ಬಳೆ ತೊಡಿಸಿ ಕುಬುಸ ಮಾಡುತ್ತಾರೆ. ಈ ಕಾರ್ಯಕ್ಕೆ ಇವರು ಕಳ್ಳ ಕುಬುಸ ಎನ್ನುತ್ತಾರೆ. ನಂತರ ಐದನೇ ಇಲ್ಲವೇ ಏಳನೆಯ ತಿಂಗಳಿಗೆ ಸೀಮಂತ ಇಲ್ಲವೇ ಕುಬುಸದ ಕಾರ್ಯ ಮಾಡಿ ತವರು ಮನೆಗೆ ಕರೆತರುತ್ತಾರೆ. ಮೊದಲಿಗೆ ಗಂಡನ ಮನೆಯಲ್ಲಿ ನಂತರ ತವರುಮನೆಯಲ್ಲಿ ಆಚರಿಸುವರು. ಬಳೆ ತೊಡಿಸಿ ಹೊಸಬಟ್ಟೆ ಉಡಿಸಿ, ಆರತಿ ಕಾರ್ಯಕ್ರಮ ಮಾಡುತ್ತಾರೆ. ಎಲೆ ಹಂಚುವಾಗ ಮೂರು ಪಂಕ್ತಿ ಸರತಿಯಲ್ಲಿ ಐದು ಎಲೆ, ಅಡಿಕೆ ಇಟ್ಟು ದೇವರವೀಳ್ಯ, ಷಾಸಿವೀಳ್ಯ, ದೈವದ ವೀಳ್ಯ ಎಂದು ಮೂರು ಸ್ಥಾಪಿಸಿದ ನಂತರ ಉಡಿ ತುಂಬುವ ಕಾರ್ಯ ಪ್ರಾರಂಭಿಸುತ್ತಾರೆ. ಈ ಶಾಸ್ತ್ರಕ್ಕೆ ಆಗುವ ಖರ್ಚನ್ನೆಲ್ಲಾ ತವರಿನವರೇ ನೋಡಿಕೊಳ್ಳುತ್ತಾರೆ. ಮೊದಲನೇಯ ಹೆರಿಗೆ ಹೆಣ್ಣಿನ ತವರು ಮನೆಯಲ್ಲಿಯೇ ನಡೆಯುತ್ತದೆ.

ಹುಟ್ಟಿನ ಆಚರಣೆ

ಮನೆಯಲ್ಲಿಯೇ ನುರಿತ ಸೂಲಗಿತ್ತಿಯರ ನೆರವಿನಿಂದ ಹೆರಿಗೆ ಮಾಡಿಸಿಕೊಳ್ಳುತ್ತಾರೆ. ಹೆರಿಗೆ ತಡವಾಗುವಾಗ ಸಂಭವ ಕಂಡು ಬಂದರೆ ಹೊಕ್ಕಳಲ್ಲಿ ಕೊಬ್ಬರಿ ಎಣ್ಣೆಯನ್ನು ಬಿಡುತ್ತಾರೆ. ಕೂಸು ಒಂದು ವೇಳೆ ಅಡ್ಡಲಾಗಿ ಸಿಕ್ಕಿದಾಗ ಅನುಭವಸ್ಥ ಸೂಲಗಿತ್ತಿಯರು ಸುಲಭೋಪಾಯದಿಂದ ಕೂಸನ್ನು ತಿರುಗಿಸಿ ಹೆರಿಗೆ ಮಾಡಿಸುತ್ತಾರೆ. ಹೆರಿಗೆಯ ಸಮಯದಲ್ಲಿ ಬಸುರಿಯ ಕೈ ಬಳೆ, ಕೊರಳ ತಾಳಿ, ನತ್ತು ಮುಂತಾದವುಗಳನ್ನು ಬಿಚ್ಚಿ ಇಡುತ್ತಾರೆ. ಮಗುವಿನ ಜನನವಾದ ತಕ್ಷಣ ಮಗುವಿನ ಹೊಕ್ಕಳಬಳ್ಳಿ ಬ್ಲೇಡ್ ಅಥವಾ ಕುಡುಗೋಲಿನಿಂದ ಕತ್ತರಿಸುತ್ತಾರೆ. ಮಾಸವನ್ನು ಹೊಸ ಗಡಿಗೆಯಲ್ಲಿ ಹಾಕಿ ಬಿಡಾರದ ಮುಂದೆ ಸಣ್ಣದೊಂದು ಕುಣಿ ತೋಡಿ ಹೂಳುತ್ತಾರೆ. ಕೆಲವು ಭಾಗಗಳಲ್ಲಿ ಕೂಸು ಹುಟ್ಟಿದ ನಂತರ ಅದೇ ದಿನ ಮಾಸನ್ನು ಮಡಿಕೆಯಲ್ಲಿ ಹಾಕಿ, ತಾಯಿಗೆ ನೀರು ಹಾಕುವ ಸ್ಥಳದಲ್ಲಿಯೇ ಹೂಳುವುದು ವಾಡಿಕೆ. ಇನ್ನು ಕೆಲವು ಕಡೆ ಮಾಸನ್ನು ಮೂರು ದಿನಗಳಲ್ಲಿ ಹೂಳುತ್ತಾರೆ. ಮಾಸನ್ನು ತೆಗೆದಿಟ್ಟು ನಂತರ ಸೂಲಗಿತ್ತಿಯರಿಗೆ ಎಲೆ, ಅಡಿಕೆ, ಕುಂಕುಮ, ಕೊಬ್ಬರಿ, ಉತ್ತುತ್ತಿ ಇತ್ಯಾದಿ ವಸ್ತುಗಳಿಂದ ಉಡಿ ತುಂಬಿ, ಸ್ವಲ್ಪ ಸ್ಥಿತಿವಂತರಾಗಿದ್ದರೆ ಸೂಲಗಿತ್ತಿಯರಿಗೆ ಹೊಸ ಸೀರೆ ಉಡಿಸಿದ ನಂತರ ಗುಡಿಸಲಿನ ಎದುರಿಗೆ

ತಗ್ಗು ತೆಗೆದು ಮಾಸನ್ನು ಅದರಲ್ಲಿ ಮುಚ್ಚಿ ಮೇಲೊಂದು ಬಂಡೆ ಕಲ್ಲು ಇಟ್ಟು ಪೂಜೆ ಮಾಡುತ್ತಾರೆ. ಹೂಳುವ ಮೊದಲು ಅರಿಶಣ, ಕುಂಕುಮ ಇಟ್ಟು ಕಾಯಿ ಒಡೆದು, ನಿಂಬೆಹಣ್ಣು ಇಲ್ಲವೆ ಉಳ್ಳಾಗಡ್ಡಿಯನ್ನು ಕೊಯಿದು ಬೇವಿನ ತೊಪ್ಪಲು ಹಾಕಿ ಪೂಜೆ ಸಲ್ಲಿಸುತ್ತಾರೆ. ಮಾಸಿಗೆ ಪೂಜೆ ಮಾಡುವುದರಿಂದ ಮಕ್ಕಳಾಗದಿದ್ದವರಿಗೂ ಮಕ್ಕಳಾಗುತ್ತವೆಂಬ ನಂಬಿಕೆ ಕೆಲವು ಕಡೆ ಇದೆ. ಬಾಣಂತನವನ್ನು ಪೂರೈಸಿದ ಸೂಲಗಿತ್ತಿಯರಿಗೆ ಕೆಲವು ಕಡೆ ಮೂರುದಿನ, ಐದು ದಿನಗಳವರೆಗೆ ಮುಟ್ಟಿಸಿಕೊಳ್ಳದೇ ಇರುತ್ತಾರೆ. ಇತ್ತೀಚೆಗೆ ನಗರದ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಳ್ಳುವುದನ್ನು ಕಾಣಬಹುದಾಗಿದೆ.

ನಾಮಕರಣ ಪದ್ಧತಿ

ಚೆನ್ನದಾಸರ್ ಸಮುದಾಯದಲ್ಲಿ ಒಂಬತ್ತು ದಿನಕ್ಕೆ ನಾಮಕರಣ ಮಾಡುವ ಪದ್ಧತಿ ಇವರಲ್ಲಿದೆ. ಕೆಲವು ಭಾಗಗಳಲ್ಲಿ ಹೆಣ್ಣು ಕೂಸಿಗೆ ೧೨ನೇ ದಿನಕ್ಕೆ, ಗಂಡಾಗಿದ್ದರೆ ೧೩ನೇ ದಿನಕ್ಕೆ ನಾಮಕರಣ ಮಾಡುವ ಸಂಪ್ರದಾಯವಿದೆ. ನಾಮಕರಣ ಸಮಯದಲ್ಲಿ ಜಿಲ್ಲಿಡಾಕು ಅಥವಾ ಎಕ್ಕೆ ಹೂವಿನಿಂದ ತೆಗೆದ ದಾರವನ್ನು ಮಗುವಿಗೆ ಉಡುದಾರವನ್ನಾಗಿ ತೊಡಿಸುತ್ತಾರೆ. ಮೂರು ದಿನಗಳವರೆಗೆ ಮಿಂಚುತ್ತಿರುತ್ತದೆ. ನಂತರ ಅದನ್ನು ಬಿಚ್ಚಿ ಅದಕ್ಕೆ ಬದಲಾಗಿ ಕಾಶಿದಾರವನ್ನು ಉಡಿಸುತ್ತಾರೆ. ನಾಮಕರಣಕ್ಕೆ ಬಂಧುಗಳನ್ನೆಲ್ಲಾ ಕರೆಯುತ್ತಾರೆ. ಬಟ್ಟೆಯಿಂದ ತೊಟ್ಟಿಲು ಕಟ್ಟಿ ಅದಕ್ಕೆ ಪೂಜೆ ಮಾಡಿ, ಜೋಗುಳ ಪದ ಹಾಡಿ ಸೋದರ ಮಾವನಿಂದ ಹೆಸರನ್ನು ಇಡಿಸುತ್ತಾರೆ. ನಾಮಕರಣ ಪ್ರಕ್ರಿಯೆ ಮುಗಿದ ನಂತರ ಬಂದ ಎಲ್ಲ ಬಂಧುಗಳಿಗೆ ಗುಗ್ರಿಕಾಳು, ಮಂಡಾಳು ಕೊಡುತ್ತಾರೆ. ಇನ್ನು ಕೆಲವು ಸ್ಥಿತಿವಂತರು ಎಲ್ಲರಿಗೂ ಊಟ ಹಾಕುತ್ತಾರೆ. ಹಾಗೆಯೇ ನಾಮಕರಣಕ್ಕೆ ಬಂದವರು ಈ ಸಮಯದಲ್ಲಿ ಮುಯ್ಯಿ ಅಂದರೆ ಅಯಾರ ಮಾಡುತ್ತಾರೆ.

ಜವಳ ಪದ್ಧತಿ

ಮಗುವಿನ ಮೊದಲ ಮುಡಿ ತೆಗೆಯುವ ಕಾರ್ಯಕ್ರಮಕ್ಕೆ ಜವಳ ತೆಗೆಯುವುದು ಎಂದು ಹೇಳುತ್ತಾರೆ. ಇದನ್ನು ಹುಟ್ಟು ಕೂದಲು ತೆಗೆಸುವುದೆಂದು ಹೇಳುತ್ತಾರೆ. ಮಗು ಗಂಡಿರಲಿ, ಹೆಣ್ಣಿರಲಿ ಹುಟ್ಟು ಕೂದಲನ್ನು ತೆಗೆಸುವುದು ಚೆನ್ನದಾಸರ್ ಸಮುದಾಯದಲ್ಲಿ ಕಡ್ಡಾಯ. ಎಲೆಗತ್ರಿ ಶಾಸ್ತ್ರಕ್ಕೆ ಹೆಣ್ಣು ಗಂಡಿನ ಕಡೆಯ ಬಂಧುಬಳಗ, ನೆಂಟರಿಷ್ಟರನ್ನು ಕರೆಸುತ್ತಾರೆ. ಸಾಮಾನ್ಯವಾಗಿ ಮಗು ಹುಟ್ಟುವ ಪೂರ್ವದಲ್ಲೇ ಮಗುವಿಗೆ ಯಾವಾಗ, ಎಲ್ಲಿ ಜವಳ ತೆಗೆಸಬೇಕೆಂದು ವಿಚಾರ ಮಾಡಿ ಹರಕೆ ಹೊರುತ್ತಾರೆ. ಹಾಗೆನಾದರೂ ಆಗಿದ್ದರೆ ಅದರಂತೆ ದೇವಸ್ಥಾನಕ್ಕೆ ಹೋಗಿ ಜವಳ ತೆಗೆಯುತ್ತಾರೆ. ಇವರಲ್ಲಿ ಶೈವ ಬಣ ಮತ್ತು ವೈಷ್ಣವ ಬಣಗಳೆಂದು ಇವೆ. ಶೈವ ಬಣದವರು ಆಂಜನೇಯನ ಭಕ್ತರಾದರೆ, ವೈಷ್ಣವರು ತಿರುಪತಿ ತಿಮ್ಮಪ್ಪನ ಭಕ್ತರು. ಸಾಮಾನ್ಯವಾಗಿ ತಮ್ಮ ಮಕ್ಕಳಿಗೆ ವರ್ಷ ತುಂಬುವದರೊಳಗೆ ಮನೆ ಮುಂದೆ ತಿಮ್ಮಪ್ಪನ ಹೆಸರೇಳಿ ಅಥವಾ ಆಂಜನೇಯನ ಹೆಸರೇಳಿ ಹುಟ್ಟು ಕೂದಲನ್ನು ತೆಗೆಸಲಾಗುತ್ತದೆ. ಕುದಲನ್ನು ಸೋದರಮಾವ ತೆಗೆಯುತ್ತಾನೆ.

ಸೋದರಮಾವ ಇರದಿದ್ದ ಪಕ್ಷದಲ್ಲಿ ಮಗುವಿಗೆ ಮಾವಂದಿರಾಗುವವರು ಜವಳ ಕಾರ್ಯ ಮಾಡುತ್ತಾರೆ. ಜವಳ ತೆಗೆಯುವ ವ್ಯಕ್ತಿಗೆ ಹೊಸ ಬಟ್ಟೆ ಮತ್ತು ಎಲೆ, ಅಡಿಕೆ, ಒಂದು ಬಟ್ಟಲು ಕೊಬ್ಬರಿ ಗಿಟುಗ, ಒಂದು ಉತ್ತುತ್ತಿ ಮತ್ತು ಐದು ರೂಪಾಯಿಯನ್ನು ಕೊಡುತ್ತಾರೆ. ಆರ್ಥಿಕ ಸ್ಥಿತಿ ಉತ್ತಮವಾಗಿರುವವರು ಹೆಚ್ಚಿನ ಹಣವನ್ನು ಕೊಡುತ್ತಾರೆ. ಅಂದು ಸಿಹಿಯೂಟದೊಂದಿಗೆ, ಮದ್ಯ, ಮಾಂಸಗಳು ಇರುತ್ತವೆ.

ಕಿವಿ ಚುಚ್ಚುವುದು

ಮಗುವಿಗೆ ಮೂರು ತಿಂಗಳಾಗುವುದರಲ್ಲಿ ಮಗುವಿಗೆ ಎರಡು ಕಿವಿಗಳಲ್ಲಿ ತಾಮ್ರದ ಮುರುವು ಚುಚ್ಚಿಸುತ್ತಾರೆ. ಮುರುವು ಚುಚ್ಚುವ ಪತ್ತಾರರಿಗೆ ಒಣಕೊಬ್ರಿ ಕೊಡುವ ಪದ್ಧತಿ ಚೆನ್ನದಾಸರ್ ಸಮುದಾಯದಲ್ಲಿದೆ.

ಋತುಮತಿ ಆಚರಣೆ

ಚೆನ್ನದಾಸರ್ ಸಮುದಾಯದಲ್ಲಿ ಹೆಣ್ಣು ಋತುಮತಿಯಾದರೆ ಐದು ದಿನಗಳವರೆಗೆ ಆಕೆಯನ್ನು ಮುಟ್ಟದಂತೆ ತಾಟು, ತಂಬಿಕೆ, ಹಾಸಿಗೆ ಕೊಟ್ಟು ಹೊರಗೆ ಬೇರೆಯಾಗಿ ಕೂಡಿಸುವರು. ಊಟವನ್ನು ದೂರದಿಂದಲೇ ಎಡೆಮಾಡಿ ಕೊಡುವರು. ಮತ್ತು ಏನೇ ಕೊಟ್ಟರೂ ಎತ್ತಿ ಹಾಕುವುದು ಇಲ್ಲಿ ಕಂಡು ಬರುತ್ತದೆ. ಐದು ದಿನ ಆಕೆ ಮೇಲು ಮುಸುಕು ಹಾಕಿಕೊಂಡು ಹೋಗುವುದು ಹಾಗೂ ಕೈಯಲ್ಲಿ ಕುಡುಗೋಲು, ಬೇವಿನ ತಪ್ಪಲು, ನಿಂಬೆಕಾಯಿ ಹಿಡಿದುಕೊಂಡು ಹೊರಹೋಗಬೇಕು. ಆಕೆಯ ಮೇಲೆ ಯಾವುದೇ ದೃಷ್ಟಿ ತಾಕದಂತೆ ಮಾಡಲು ಈ ಪದ್ಧತಿ ಅನುಸರಿಸುವರು. ಋತುಮತಿಯಾದ ದಿನ ಸೋದರಮಾವನು ಆಕೆಯ ತಲೆಯ ಮೇಲೆ ಕೊಬ್ಬರಿ ಬಟ್ಟಲನ್ನು ಮುರಿಯುವನು. ನಂತರ ಆಕೆಗೆ ಕೊಬ್ಬರಿ, ಬೆಲ್ಲ, ಉತ್ತತ್ತಿ ಮತ್ತು ತುಪ್ಪ ಇನ್ನಿತರೆ ಪೌಷ್ಟಿಕ ಆಹಾರವನ್ನು ೯ ದಿನಗಳವರೆಗೆ ಕೊಡುವರು. ಸ್ಥಳದ ಅಭಾವದಿಂದಾಗಿ ಋತುಮತಿ ಹೆಣ್ಣನ್ನು ಪ್ರತ್ಯೇಕ ಗುಡಾರ ಹಾಕಿ ಕೂಡಿಸಲಾಗುವುದು. ನಂತರ ಆಕೆಯನ್ನು ಎಬ್ಬಿಸುವಾಗ ಉಡಿ ತುಂಬಿ, ಶಾಶಿಹಾಕಿ ಕೂಡಿಸಿ ಸೋದರಮಾವನಿಂದ ಉಡಿ ತುಂಬಿಸಿ ನಂತರ ಐದು ಮಂದಿ ಮುತ್ತೈದೆಯರಿಂದ ಎಬ್ಬಿಸಲಾಗುವುದು. ಕೂಡಿಸಿದ ಮೊದಲ ದಿನದಿಂದ ಎಬ್ಬಿಸುವ ಕೊನೆ ದಿನದವರೆಗೂ ಪ್ರತಿ ಸಂಜೆ ಸೋಬಾನೆ ಹಾಡು ಮತ್ತಿತರ ಸಾಂಸ್ಕೃತಿಕ ಕಾರ್ಯಗಳನ್ನು ನಡೆಸುತ್ತಾರೆ. ಕೆಲವು ಭಾಗದಲ್ಲಿ ಕಡೆಯ ದಿನ ಸಂಜೆ ಎಬ್ಬಿಸುವ ಮುಂಚೆ ಸೋದರಮಾವನು ಹೂದಂಡೆ ಸೀರೆ, ಕುಬುಸ, ತೆಂಗು ಉಡಿಯಕ್ಕಿ ತಂದು ಹುಡಗಿಯ ಉಡಿ ತುಂಬುತ್ತಾನೆ. ನಂತರ ಬ್ಯಾಟಿಯನ್ನು ಕೊಯ್ದು, ಆ ರಕ್ತದ ಬೊಟ್ಟನ್ನು ಸೋದರಮಾವ ಆಕೆಯ ಹಣೆಗೆ ಹಚ್ಚುತ್ತಾನೆ. ನಂತರ ಮನೆಯವರು ಬ್ಯಾಟಿಯ ಊಟವನ್ನು ಎಲ್ಲರಿಗೂ ಬಡಿಸುವರು. ಇಲ್ಲಿಗೆ ಮೈನೆರೆದ ಸೂತಕ ಕಳೆಯುತ್ತದೆಂಬ ನಂಬಿಕೆ.

ಮದುವೆಯ ಆಚರಣೆ

ಚೆನ್ನದಾಸರ್ ಸಮುದಾಯದಲ್ಲಿ ನೂರಾರು ಬೆಡಗುಗಳಿವೆ. ಒಂದು ಬೆಡಗಿನವರು ತಮ್ಮ ಬೆಡಗನ್ನು ಹೊರತುಪಡಿಸಿ ಉಳಿದ ಯಾವುದೇ ಬೆಡಗಿನವರೊಂದಿಗೆ ಸಂಬಂಧ ಬೆಳೆಸಬಹುದು. ಅಲ್ಲದೆ ಈ ಸಮುದಾಯದಲ್ಲಿ ಮತ್ತೆ ಕೆಲವು ಬೆಡಗಿನವರು ತಮ್ಮ ಬೆಡಗನ್ನೊರತುಪಡಿಸಿ ಕೆಲವನ್ನು ಸೋದರ ಸಂಬಂಧವೆಂದೂ ಇನ್ನೂ ಕೆಲವು ಬೆಡಗಿನವರನ್ನು ಸೋದರಿ ಸಂಬಂಧವೆಂದೂ ಪರಿಗಣಿಸಿ ಅಂಥಲ್ಲಿ ಸೋದರ ಸಂಬಂಧದ ಬೆಡಗಿನವರನ್ನು ಹೊರತುಪಡಿಸಿ ಸೋದರ ಸಂಬಂಧ ಬೆಡಗಿನವರೊಂದಿಗೆ ಮದುವೆ ಮಾಡಿಕೊಳ್ಳುತ್ತಾರೆ.

ಚೆನ್ನದಾಸರ್ ಸಮುದಾಯದಲ್ಲಿ ವಿಶೇಷವಾಗಿ ಸೋದರತ್ತೆ ಅಥವಾ ಅಕ್ಕನ ಮಗಳೊಂದಿಗೆ ಮದುವೆ ಸಂಬಂಧ ಬೆಳೆಸುವುದು ರೂಢಿಯಲ್ಲಿದೆ. ಬೆಡಗು ನೋಡಿ ಹೆಣ್ಣನ್ನು ತರುವ ಸಂಪ್ರದಾಯವಿದೆ. ಮೊದಲ ಬಾರಿಗೆ ಮದುವೆಯಾಗುವ ಪುರುಷನಿಗೆ ತರುವ ಹೆಣ್ಣು ಶೀಲಗೆಟ್ಟಿರಬಾರದು. ಬೇರೆಯವರೊಂದಿಗೆ ದೈಹಿಕ ಸಂಬಂಧ ಬೆಳೆಸಿರಬಾರದು. ಬಿಳುಪು ಅಥವಾ ಇನ್ನಾವುದೇ ರೋಗ ಇರಬಾರದು, ಸುಳಿ ಉತ್ತಮವಾಗಿರಬೇಕು ಇತ್ಯಾದಿ ನಿಬಂಧನೆಗಳನ್ನು ಅನುಸರಿಸಿ ಹೆಣ್ಣನ್ನು ತರುವ ರೂಢಿಯಿದೆ. ಮದುವೆ ಮಾಡಲು ಹೆಣ್ಣು ಇರುವ ಸ್ಥಳ ತಿಳಿದು ನಾಲ್ಕಾರು ಜನ ಸೇರಿ ಹೋಗುತ್ತಾರೆ. ಹೋಗುವಾಗ ಉಡಿ ಅಕ್ಕಿ, ಸಾಮಾನುಗಳನ್ನು ಒಯ್ಯುತ್ತಾರೆ. ಹೆಣ್ಣಿನ ಮನೆ ತಲುಪುವವರೆಗೂ ಅಪಶಕುನವಾಗಬಾರದು. ಒಂದು ವೇಳೆ ಅಪಶಕುನಗಳಾದರೆ ಹೆಣ್ಣು ನೋಡಲಿಕ್ಕೆ ಹೋಗುವುದಿಲ್ಲ. ಹೆಣ್ಣನ್ನು ನೋಡಿ ಒಪ್ಪಿಗೆಯಾದ ಮೇಲೆ ಕಂಕಣಕೂಡಿಕೆ ಶಾಸ್ತ್ರ ಕೇಳಿಸುತ್ತಾರೆ. ಇದು ಸರಿಯಾಗಿ ಬಂದಲ್ಲಿ ಹೆಣ್ಣು ಗಂಡುಗಳ ತಂದೆ ತಾಯಿಯರು ಒಟ್ಟಿಗೆ ಕುಳಿತು ಮಾತನಾಡುತ್ತಾರೆ. ನಂತರ ನಿಶ್ಚಿತಾರ್ಥ ಕಾರ್ಯ ಮಾಡುತ್ತಾರೆ. ಇದನ್ನು ಕುಂಕುಮ ಹಚ್ಚುವುದೆಂದು ಕರೆಯುತ್ತಾರೆ.

ಚೆನ್ನದಾಸರ್ ಸಮುದಾಯದಲ್ಲಿ ಐದು ದಿನಗಳವರೆಗೆ ಮದುವೆ ಕಾರ್ಯಕ್ರಮಗಳು ನಡೆಯುತ್ತವೆ. ಮತ್ತೆ ಕೆಲವು ಕಡೆ ಮೂರು ದಿನಗಳ ಕಾಲ ನಡೆಯುತ್ತದೆ. ಐದನೇ ದಿನಗಳ ಮದುವೆ ಕಾರ್ಯದಲ್ಲಿ ಒಂದನೇ ದಿನ ಶಕ್ತಿ ಪೂಜೆ ಮಾಡುವರು. ಎರಡನೇ ದಿನ ಮಣ್ಣಿನಿಂದ ಮೂರ್ತಿ ಮಾಡಿ ಬೆಳ್ಳಿಯ ಅಥವ ಕಂಚಿನ ರೂಪುಗಳನ್ನಿಟ್ಟು ಹಿರಿಯರ ಪೂಜೆ ಎಂದು ಮಾಡುತ್ತಾರೆ. ಮೂರನೇ ದಿನ ಹಂದರ ಹಾಕುವ ಕಾರ್ಯ ನಡೆಯುತ್ತದೆ. ನಾಲ್ಕನೇ ದಿನ ಮುಂಜಾನೆ ಐರಾಣಿ ಕೊಡ ತರುವುದು. ಅದೇ ದಿನ ಮಾಂಗಲ್ಯ ಕಾರ್ಯಕ್ರಮವಿರುತ್ತದೆ. ಮದುಮಕ್ಕಳಿಗೆ ಹಂದರ ಮುಂದೆ ಒನಕೆಯನ್ನಿಟ್ಟು ಅದರ ಮೇಲೆ ಪೂರ್ವಾಭಿಮುಖವಾಗಿ ಕೂಡಿಸಿ, ನೀರನ್ನು ಹಾಕಿ ಮತ್ತೆ ವಸ್ತ್ರ ಧರಿಸಿಕೊಂಡು ಹಂದರದ ಮಧ್ಯದ ಶಾಸಿಕಟ್ಟೆಯ ಮೇಲೆ ಕೂಡಿಸುತ್ತಾರೆ. ಸಮುದಾಯದ ಬಲ್ಲ ಹಿರಿಯರು ಹಿಂದಿನ ಸಂಪ್ರದಾಯದಂತೆ ಮಾಂಗಲ್ಯಧಾರಣೆ ಮಾಡಿಸುವರು. ನಂತರ ಮಧುಮಕ್ಕಳು ಹಾಲಿನಲ್ಲಿ ಅಥವಾ ನೀರಿನಲ್ಲಿ ಮುತ್ತು ಹುಡುಕುವ

ಶಾಸ್ತ್ರ ಮಾಡುತ್ತಾರೆ. ಆ ಮೇಲೆ ಸಭಾಶ್ಯಾಸಿ, ಮೆರವಣಿಗೆ, ಗ್ರಾಮದೇವರ ಪೂಜೆ, ಹನುಮಂತ ದೇವರ ಪೂಜೆಯನ್ನು ಮಧು ಮಕ್ಕಳು ಮಾಡುತ್ತಾರೆ. ಕೊನೆಯ ದಿನ ನಾಗೋಲಿ ಮಾಡುತ್ತಾರೆ. ಜೀಗರು ಬೇಟೆಯನ್ನು ಓಡಿದು ತರುತ್ತಾರೆ. ನಂತರ ಅದರನ್ನು ಹಂದರದ ಶಾಸಿಕಟ್ಟೆಯ ಮೇಲಿಟ್ಟು ಬಂದವರೆಲ್ಲಾ ರಕ್ತವನ್ನು ನೋಡುತ್ತಾರೆ. ನಂತರ ಹಂದರದ ಕೆಲವು ತಪ್ಪಲುಗಳನ್ನು ಮಧುಮಕ್ಕಳು ತೆಗೆಯುತ್ತಾರೆ. ನಂತರ ಮಾಂಸದ ಅಡುಗೆಯ ಊಟ ಮಾಡುತ್ತಾರೆ.

ಧಾರ್ಮಿಕ ಆಚರಣೆಗಳು

ಸಮುದಾಯದಲ್ಲಿ ಜನನದಿಂದ ಪ್ರಾರಂಭಿಸಿ ಸಾವಿನತನಕವೂ ದೇವರ ಮೇಲೆ ನಂಬಿಕೆಯನ್ನಿಟ್ಟು ನಡೆದುಕೊಳ್ಳುತ್ತಾರೆ. ಒಳಿತು, ಕೆಡುಕಿಗೆ ದೇವರೇ ಕಾರಣವೆಂದು ನಂಬಿರುತ್ತಾರೆ. ಅದ್ದರಿಂದ ಒಳಿತಾಗಲು ಹಾಗೂ ಕೆಡುಕನ್ನು ತಡೆಯಲು ದೇವರ ಮೊರೆ ಹೋಗುತ್ತಾರೆ. ಈ ರೀತಿಯ ಆಚರಣೆಗಳನ್ನು ಮಾಡುತ್ತೇವೆ ಎಂದು ಹರಕೆ ಹೊರುತ್ತಾರೆ. ಅದಕ್ಕಾಗಿ ತಮ್ಮ ಮನೆದೇವರಿಗೆ, ಕುಲದೇವರಿಗೆ ಹಾಗೂ ಊರದೇವರುಗಳಿಗೆ ಜಾತ್ರೆ, ಹಬ್ಬಗಳನ್ನು ಮಾಡಿ ಹರಕೆ ತಿರಿಸುತ್ತಾರೆ. ಚೆನ್ನದಾಸರ್ ಸಮುದಾಯ ಶುದ್ಧ ಮಾಂಸಾಹಾರಿಗಳಾದರೂ ಪ್ರತಿ ಶನಿವಾರ ಮಾಂಸಾಹಾರ ಸೇವನೆ ನಿಷಿದ್ಧವಿರುತ್ತದೆ. ಒಂದು ವೇಳೆ ಅಂದು ಮಾಂಸಾಹಾರ ಸೇವನೆ ಮಾಡಿದರೆ ದೇವರ ಕೆಲಸ ಮಾಡುವಂತಿಲ್ಲ. ಹೆಂಗಸರು ಮತ್ತು ಕೆಲವು ಗಂಡಸರು ಮಂಗಳವಾರ ಮತ್ತು ಶುಕ್ರವಾರದಂದು ದುರ್ಗಮ್ಮ, ಯಲ್ಲಮ್ಮ, ಮಾರಮ್ಮನವರ ವ್ರತ ಮಾಡುತ್ತಾರೆ. ಶನಿವಾರದಂದು ಉಪವಾಸ ಮಾಡುತ್ತಾರೆ.

ತಿರುಪತಿ ತಿಮ್ಮಪ್ಪನ ಬೆಟ್ಟವೇ ಸಮುದಾಯದ ಧಾರ್ಮಿಕ ಕೇಂದ್ರ, ಅಲ್ಲಿಗೆ ಹೋಗಲು ಆಗದವರು ತಮ್ಮ ಸುತ್ತಮುತ್ತಲಿನ ಪ್ರಸಿದ್ಧ ಹನುಮಂತ ದೇವರ ದೇವಸ್ಥಾನಗಳನ್ನು ತಮ್ಮ ಧಾರ್ಮಿಕ ಕೇಂದ್ರಗಳೆಂದು ಭಾವಿಸುತ್ತಾರೆ. ಹಂಸನೂರು, ಕದರಮಂಡಲಗಿ, ತುಳಸಿಗೇರಿ, ಕಲ್ಲೋಳಿ, ಕನಕಗಿರಿ, ಬಯ್ಯಾಪುರ, ಬಂಕಾಪುರ, ಕುದುರೆಮೋತಿ ಪ್ರಸಿದ್ಧ ಧಾರ್ಮಿಕ ಕೇಂದ್ರಗಳು. ಚೆನ್ನದಾಸರ್ ಸಮುದಾಯದಲ್ಲಿ ಈ ದೇವರುಗಳ ಹೆಸರನ್ನೇ ಇಡುವ ವಾಡಿಕೆಯಿದೆ.

ಸಮುದಾಯದವರು ಆಚರಿಸುವ ಹಬ್ಬಗಳಲ್ಲಿ ನಾಗರ ಪಂಚಮಿ, ವಿಜಯ ದಶಮಿ, ದೀಪಾವಳಿ ಮತ್ತು ಯುಗಾದಿ ಪ್ರಮುಖವಾದವು. ನಾಗರಪಂಚಮಿಯ ಮುನ್ನಾದಿನ ಸಂಜೆ ಹುತ್ತದ ಮಣ್ಣು ತಂದು ನಾಗಪ್ಪನ ಮಣ್ಣಿನ ಮೂರ್ತಿಯನ್ನು ಮಾಡುತ್ತಾರೆ. ಅದರ ಮಗ್ಗುಲಿನಲ್ಲಿ ಚಿಕ್ಕದೊಂದು ಹೊಂಡಮಾಡಿ, ಹೊಂಡದಲ್ಲಿ ಹಾಲನ್ನು ತಂದು ಸುರಿಯುತ್ತಾರೆ. ಅಲ್ಲಿರುವ ಸಮುದಾಯಕ್ಕೆ ಅದೊಂದೇ ನಾಗಪ್ಪ. ಅಂದು ರಾತ್ರಿ ಪ್ರತಿ ಮನೆಯವರೂ ನೂಲಿನ ಎಳೆಗಳನ್ನು ಮಾಡಿ ಅವುಗಳಲ್ಲಿ ಅರ್ಧವನ್ನು ನಾಗಪ್ಪನಿಗೆ ಹಾಕಿ, ಉಳಿದ ಅರ್ಧವನ್ನು ಮನೆಯವರು ಹಾಕಿಕೊಳ್ಳಲು ತರುತ್ತಾರೆ. ಅದರ ಜೊತೆಗೆ ಹುರಿದ ಅರಳು, ತಂಬಿಟ್ಟು, ಹಾಲು ನಾಗಪ್ಪನಿಗೆ ನೈವೇದ್ಯ ಮಾಡುತ್ತಾರೆ. ಮರುದಿನ ಬೆಳಿಗ್ಗೆ ಮನೆಯಲ್ಲಿನ ಇಲ್ಲವೇ ನಾಗಪ್ಪನ ಮೂರ್ತಿಗಳಿಗೆ ಹಾಕಿದ ದಾರಗಳನ್ನು ತೆಗೆದುಕೊಂಡು ಕೊರಳಿಗೆ ಧರಿಸಿಕೊಳ್ಳುತ್ತಾರೆ ಇಲ್ಲವೇ ಬಲಗೈಯ

ಮಣಿಕಟ್ಟಿಗೆ ಕಟ್ಟಿಕೊಳ್ಳುತ್ತಾರೆ. ಇದರಿಂದ ನಾಗಪ್ಪನ ಆಶೀರ್ವಾದ ತಮ್ಮ ಮೇಲೆ ಇರುತ್ತದೆಂಬ ನಂಬಿಕೆ ಇವರದು. ಅಂದು ತವರಿಗೆ ಬಂದ ಹೆಣ್ಣು ಮಕ್ಕಳು ಅಣ್ಣ ತಮ್ಮಂದಿರಿಗೆ ಆರತಿ ಮಾಡುತ್ತಾರೆ. ಅಂದು ಸಂಜೆಯುವರೆಗೂ ಸಮುದಾಯದವರು ಕಟ್ಟಿದ ಜೋಕಾಲಿ ಆಡುತ್ತಾರೆ.

ಸಾವಿನ ಆಚರಣೆ

ಚೆನ್ನದಾಸರ್ ಸಮುದಾಯದಲ್ಲಿ ಶವವನ್ನು ಹೂಳುವ ಹಾಗೂ ಸುಡುವ ಪದ್ದತಿಯಿದೆ. ಚಿಕ್ಕ ಮಕ್ಕಳು ಸತ್ತರೆ ಹೂಳುವ ಪದ್ಧತಿಯಿದೆ. ಗಂಡಾಗಲೀ, ಹೆಣ್ಣಾಗಲೀ ಮದುವೆಯಾಗದೇ ಮರಣ ಹೊಂದಿದರೆ ಎಕ್ಕೆಗಿಡದ ಜೊತೆಗೆ ಮದುವೆ ಮಾಡಿ ಸುಡುತ್ತಾರೆ. ಕೌವುದಿ, ಕಳ್ಳಿಕಟ್ಟಿಗೆ ಚಟ್ಟ ಕಟ್ಟಿ ಶವಯಾತ್ರೆ ನಡೆಸುತ್ತಾರೆ. ಶವ ಒಯ್ಯುವಾಗ ಕೋಳಿ ತತ್ತಿ ಒಯ್ಯುತ್ತಾರೆ. ಅದನ್ನು ಶವದ ಕಂಕಳಲ್ಲಿ ಇಡುತ್ತಾರೆ. ನೀರು ತುಂಬಿದ ಗಡಿಗೆಯನ್ನು ಒಯ್ಯುತ್ತಾರೆ. ಐದು ಸುತ್ತು ಸುತ್ತಿ ಪೂರ್ವ ಎತ್ತರದ ದಂಡದ ಮೇಲೆ ಶವವನ್ನು ಕೆಳಗೆ ಇಳಿಸಿ ಕುಣಿಯಲ್ಲಿ ಹಾಕಿ ಅಂತಿಮ ದರ್ಶನ ಪಡೆದು ಎಲ್ಲರೂ ಕೈಕೂಡಿಸಿ ಮಣ್ಣು ಮಾಡಿ, ಎರಡು ಕಲ್ಲುಗಳನ್ನು ತಂದು ಒಂದು ಶವದ ಮಧ್ಯಭಾಗದಲ್ಲಿ ಮತ್ತು ಕಾಲು ಕಡೆ ಒಂದು ಇಟ್ಟು ಸಂಬಂಧಪಟ್ಟ ಹಿರಿಯ ಮಗ ತಲೆಗೋರಿ ಕೊಡುತ್ತಾನೆ. ಗಡಿಗೆ ಹೊತ್ತು ಐದು ಸುತ್ತು ತಿರುಗುವಾಗ ಪ್ರತಿ ಸುತ್ತಿಗೊಂದರಂತೆ ಐದುಸಾರಿ ಕುರುಪಿ ಇಲ್ಲವೆ ಕುಡುಗೋಲಿನಿಂದ ಹೊಡೆದು ರಂಧ್ರ ಮಾಡುತ್ತಾರೆ. ಉತ್ತರದಿಕ್ಕಿಗೆ ಮುಖ ಮಾಡಿದಾಗ ಹಿಂದಿನ ಸಹಾಯಕರು ನೆಲಕ್ಕೆ ಹೊಡೆಯುತ್ತಾರೆ. ಮಡಿಕೆಯನ್ನು ನೀರು ನಿಲ್ಲದಂತೆ ಚೂರು ಅತಿ ಚಿಕ್ಕ ಚಿಕ್ಕ ತುಕುಡಿ ಮಾಡಬೇಕು. ದೊಡ್ಡವು ಉಳಿಯಕೂಡದು. ಮಳೆಯ ನೀರು ಅದರಲ್ಲಿ ನಿಲ್ಲಕೂಡದು. ನಿಂತರೆ ಕೆಟ್ಟ ಪರಿಣಾಮವಾಗುತ್ತದೆಂಬ ನಂಬಿಕೆ. ಶವಸಂಸ್ಕಾರ ಮುಗಿದ ನಂತರ ಸತ್ತವರ ಮನೆಯಲ್ಲಿ ದೀಪ ನೋಡಿ ಅವರವರ ಮನೆಗೆ ತೆರಳಿ, ಮುಂಚೆ ಮನೆಯಲ್ಲಿದ್ದ ನೀರು ಚೆಲ್ಲಿ ಹೊಸ ನೀರು ತಂದು ಎಲ್ಲರೂ ಸ್ನಾನ ಮಾಡುತ್ತಾರೆ. ಮರಣ ಹೊಂದಿದವರ ಮನೆಯಲ್ಲಿ ದೈವದ ಆಳು, ಆಹಾರಕ್ಕಾಗಿ ಮನೆಮನೆಗೆ ತಿರುಗಾಡಿ ಎಲ್ಲರಿಂದ ತಂದು ಕೊಡುತ್ತಾರೆ. ಅಂದೇ ಬೀಗರು ವಿಷದ ಬಾಯಿ ಬೆಲ್ಲದ ನೀರಿನಿಂದ ತೊಳೆಸುತ್ತಾರೆ. ಮೂರನೇ ದಿನ ಸತ್ತವರ ಹೆಸರಿನಲ್ಲಿ ಅವನ ಇಷ್ಟವಾದ ತಿನಿಸುಗಳನ್ನು ಮಾಡಿ ಕುಣಿಗೆ ಪೂಜೆ ಸಲ್ಲಿಸಿ ಕುಣಿಯ ಮಧ್ಯ ಭಾಗದಲ್ಲಿ ಸಣ್ಣ ತಗ್ಗು ಮಾಡಿ ಆಹಾರ ಹಾಕುತ್ತಾರೆ. ಉಳಿದ ಆಹಾರವನ್ನು ಚೆಲ್ಲಿ ದೂರ ಕುಳಿತು ಕಾಗೆ ಬಂದು ಮುಟ್ಟಿದ ನಂತರ ಸ್ಮಶಾನದಿಂದ ಹಿಂದಿರುಗುತ್ತಾರೆ.

ಕೃಷಿ-ಭೂ ಒಡೆತನ ಮತ್ತು ಪಶುಪಾಲನೆ

ಅಲೆಮಾರಿತನ ತೊರೆದು ನೆಲೆನಿಂತವರು ಈ ಸಮುದಾಯದ ಕೆಲವರು ಕೃಷಿ, ವ್ಯವಸಾಯದಲ್ಲಿ ತೊಡಗಿಸಿಕೊಂಡಿದ್ದಾರೆ. ಪ್ರಾರಂಭದಲ್ಲಿ ಸಾಕು ಪ್ರಾಣಿಗಳ ಆದಾಯದಿಂದ ಹಣ ಸಂಗ್ರಹಿಸಿ, ಸ್ವಲ್ಪ ಕೃಷಿ ಭೂಮಿ ಕೊಂಡು ಒಕ್ಕಲುತನ ಮಾಡುತ್ತಿದ್ದಾರೆ. ಮತ್ತೆ ಕೆಲವರು ಬೇರೆಯವರ ಹೊಲ-ಗದ್ದೆಗಳನ್ನು ಸಮಪಾಲು ಗುತ್ತಿಗೆ ಆಧಾರದಲ್ಲಿ ವ್ಯವಸಾಯ ಮಾಡಿ ಹಣಗಳಿಸಿ ಕೃಷಿಭೂಮಿ ಕೊಂಡು ಒಕ್ಕಲುತನ ಮಾಡುತ್ತಿದ್ದಾರೆ. ಇನ್ನು ಕೆಲವೆಡೆ ಚಿಕ್ಕ ಪುಟ್ಟ ನೌಕರಿಗಳನ್ನು ಮಾಡಿ

ಬಂದ ಆದಾಯದಿಂದ ಕೃಷಿ ಜಮೀನು ಕೊಂಡು ಭೂ ಒಡೆಯರಾದವರೂ ಇದ್ದಾರೆ. ಆದರೆ ಇಂಥ ಕೃಷಿ ಮತ್ತು ಭೂ ಒಡೆತನದವರ ಸಂಖ್ಯೆ ಅತ್ಯಂತ ಕಡಿಮೆ ಇದೆ.

ಆರ್ಥಿಕವಾಗಿ ತುಂಬಾ ಹಿಂದುಳಿದ ಚೆನ್ನದಾಸರ್ ಸಮುದಾಯದವರು ಭಿಕ್ಷಾಟನೆಯನ್ನೇ ಅವಲಂಬಿಸಿದ್ದ ಕುಟುಂಬಗಳು ಇತ್ತೀಚೆಗೆ ನೆಲೆ ನಿಲ್ಲಲು ತೊಡಗಿದ ನಂತರ ತಮ್ಮ ಆರ್ಥಿಕ ಜೀವನವನ್ನು ಸುಧಾರಿಸಿಕೊಳ್ಳಲು ಎಮ್ಮೆ, ಕುರಿ, ಮೇಕೆ, ಕೋಳಿಗಳನ್ನು ಸಾಕುತ್ತಿದ್ದಾರೆ. ಕೆಲವೇ ಕೃಷಿ ಕುಟುಂಬಗಳು ಎತ್ತು, ಆಕಳನ್ನು ಸಾಕಿರುವುದನ್ನು ಕಾಣಬಹುದಾಗಿದೆ. ಆಕಳು ಮತ್ತು ಎಮ್ಮೆಗಳಿಂದ ಬರುವ ಹೈನುತ್ಪಾದನೆಯಿಂದ ತಮ್ಮ ಆರ್ಥಿಕತೆಯನ್ನು ಅಲ್ಪ ಪ್ರಮಾಣದಲ್ಲಿ ಸುಧಾರಿಸಿಕೊಂಡಿದ್ದಾರೆ. ಹಾಗೆಯೇ ಕುರಿ, ಮೇಕೆ ಮತ್ತು ಕೋಳಿಗಳನ್ನು ಆಹಾರವಾಗಿಯೂ ಬಳಸುತ್ತಾರೆ.

ಶೈಕ್ಷಣಿಕ, ಆರ್ಥಿಕ, ರಾಜಕೀಯ ವ್ಯವಸ್ಥೆ

ಈ ಜನಾಂಗದಲ್ಲಿ ಶಿಕ್ಷಣ ಪಡೆದವರು ಬೆರಳೆಣಿಕೆಯಷ್ಟು ಜನ ಕಾಣಸಿಗುತ್ತಾರೆ. ಶಿಕ್ಷಣದ ಪೂರ್ಣ ಪ್ರಜ್ಞೆ, ಅರಿವು ಇವರಿಗೆ ಉಂಟಾಗಿಲ್ಲ. ತಮ್ಮ ಬದುಕು ನಿರ್ವಹಣೆಗಾಗಿ ತಮ್ಮ ಚಿಕ್ಕ ಮಕ್ಕಳನ್ನು ಕೆಲಸಕ್ಕೆ ಕರೆದುಕೊಂಡು ಹೋಗುತ್ತಾರೆ.

ಚೆನ್ನದಾಸರ್ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಭೂಹೀನರಾಗಿದ್ದಾರೆ. ಕೂಲಿ ಮಾಡಿ ಜೀವನ ನಿರ್ವಹಣೆ ಮಾಡುತ್ತಾರೆ. ಎಮ್ಮೆ, ದನ, ಕೋಳಿ ಸಾಕುವುದು ಮಾರಾಟ ಮಾಡುವುದು ಸಾಮಾನ್ಯ ಶಂಖ, ಜಾಗಟೆ ಹಿಡಿದುಕೊಂಡು ಹೋಗಿ ಭಿಕ್ಷಾಟನೆ ಮಾಡುತ್ತಾರೆ. ಕೆಲವರು ಬಳೆ ವ್ಯಾಪಾರ ಕುಂಕುಮ ಮಾರಾಟ ಮಾಡುತ್ತಾರೆ.

ಇವರಿಗೆ ಸ್ವಂತ ಆಸ್ತಿ ಅಂತಸ್ತು ಇಲ್ಲದೇ ಇರುವುದರಿಂದ ಬೇರೆಯವರು ಹೇಳಿದ ಅಭ್ಯರ್ಥಿಗಳಿಗೆ ಓಟು ಹಾಕುವುದು ಸರ್ವೇಸಾಮಾನ್ಯ ರಾಜಕೀಯ ಅರಿವು ಇವರಿಗಿಲ್ಲ. ರಾಜಕೀಯದಲ್ಲಿ ಇವರು ತಮ್ಮನ್ನು ಗುರುತಿಸಿಕೊಂಡಿಲ್ಲ. ಇದೀಗ ಅಲ್ಲೊಂದು ಇಲ್ಲೊಂದು ಗ್ರಾಮಪಂಚಾಯತ್ ಸದಸ್ಯರು ಕಂಡುಬರುತ್ತಾರೆ.

ಮೊಗವೀರ ಸಮುದಾಯ

ಕರ್ನಾಟಕದ ಕರಾವಳಿ ಪ್ರದೇಶದ ಪ್ರಮುಖ ಮೀನುಗಾರಿಕಾ ಸಮುದಾಯವೇ ಈ ಮೊಗವೀರ ಸಮುದಾಯ. ತುಳು ನಾಡಿನಲ್ಲಿರುವ ಜನಾಂಗೀಯ ಗುಂಪುಗಳಲ್ಲಿ ದೊಡ್ಡ ಸಮುದಾಯವಾಗಿದೆ. "ಮೊಗವೀರ" ಎನ್ನುವ ಪದ ಹಳೆಯ ಪದ ಮೊಗೆಯರ್ ಪದದ ಆಧುನೀಕರಿಸಿದ ಆವೃತ್ತಿಯಾಗಿದೆ. ಇವರು ಕರ್ನಾಟಕ ಕರಾವಳಿ ಪ್ರದೇಶದ ಮೀನುಗಾರಿಕೆ ಮತ್ತು ಸಮುದ್ರ ವ್ಯಾಪಾರದಲ್ಲಿ ತೊಡಗಿಕೊಂಡವರು. ಉತ್ತರ ಕೇರಳ, ಕಾಸರಗೋಡು, ಕರ್ನಾಟಕದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಯ ಸ್ಥಳೀಯರಾದ ಮೊಗವೀರರು ಮುಂಬೈ,

ಬೆಂಗಳೂರು ಮತ್ತು ದುಬೈ ಇನ್ನಿತರ ಭಾಗಗಳಿಗೆ ವಲಸೆ ಹೋಗಿದ್ದಾರೆ. ಮೊಗವೀರ ಯುವಕರು ಸಾಂಪ್ರದಾಯಿಕವಾಗಿ ಶೌರ್ಯಕ್ಕೆ ಹೆಸರುವಾಸಿಯಾಗಿದ್ದಾರೆ. ಉಳ್ಳಾಲದ ಪ್ರಸಿದ್ಧ ರಾಣಿ ಅಬ್ಬಕ್ಕ ನೌಕಾ ಶಕ್ತಿಯಲ್ಲಿ ಕೆಚ್ಚೆದೆಯ ಮೊಗವೀರ ಯುವಕರು ಇದ್ದರು.

"ಮೊಗವೀರರು ಕರ್ನಾಟಕ ಕರಾವಳಿಯ ಸ್ಥಳೀಯ ಮೀನುಗಾರಿಕೆ ಸಮುದಾಯವನ್ನು ಪ್ರತಿನಿಧಿಸುತ್ತದೆ. ಉಡುಪಿ ಪ್ರದೇಶದಲ್ಲಿ ಅವರು ಮರಕಾಲರು ಎಂದು ಕರೆಯುತ್ತಾರೆ. ಉಳ್ಳಾಲ ದಕ್ಷಿಣದಲ್ಲಿ ಬೋವಿ ಎಂದು ಕರೆಯುತ್ತಾರೆ. ಬ್ರಹ್ಮಾವರ ದಕ್ಷಿಣ ಕರಾವಳಿಯಲ್ಲಿ ಇವರು ತುಳು ಮಾತನಾಡುತ್ತಾರೆ. ಮತ್ತು ಉತ್ತರದಲ್ಲಿ ಇವರು ಕಾರವಾರದ ಕಡೆಗೆ ಕನ್ನಡ ಅಥವಾ ಕೊಂಕಣಿ ಮಾತನಾಡುತ್ತಾರೆ. ಎಡ್ಗರ್ ಥರ್ಸ್ಟನ್ ಮೊಗೆರ್ಸ್ ಎಂದು ವಿವರಿಸಿದ್ದಾರೆ. ದಕ್ಷಿಣ ಕನ್ನಡದ ತುಳು ಭಾಷಿಕ ಮೀನುಗಾರನ್ನು ಮೊಗೆಯರ್ ಎಂದು ಕರೆಯುತ್ತಾರೆ ಎಂದು ವರದಿ ನೀಡಿದ್ದಾರೆ." ಮೊಗೆಯರ್ ನಾವಿಕರು, ಮೀನುಗಾರರು, ಕೂಲಿ ಮತ್ತು ಇನ್ನಿತರ ಹುದ್ದೆಯಲ್ಲಿದ್ದಾರೆ. ಉತ್ತರ ಕನ್ನಡ ಅಥವಾ ಕೊಕಣಿ ಮಾತನಾಡುವ ಬೆಸ್ತ, ಹರಿಕಂತ್ರ, ಖಾರ್ವಿ ಮತ್ತು ಬೋವಿ ಎಂದು ಕರೆಯುತ್ತಾರೆ. ಕರ್ನಾಟಕದ ಒಳನಾಡಿನಲ್ಲಿ ಇವರು ಕನ್ನಡ ಮಾತನಾಡುವ ಬೆಸ್ತ ಜನರಾಗಿದ್ದಾರೆ. ಗಂಗಾಮತಸ್ಥ, ಬೆಸ್ತ, ಅಂಬಿಗ ಅಥವಾ ಕೋಲಿ ಎಂದು ವಿಧವಿಧವಾಗಿ ಕರೆಯುತ್ತಾರೆ.

ಮೊಗವೀರ ಪದದ ಉತ್ಪತ್ತಿ

"ಸ್ವಾತಂತ್ರ್ಯ ಹೋರಾಟಗಾರರಾದ ಹೊಯ್ಗೆ ಬಜಾರ್ ಮೋಹನಪ್ಪ ತಿಂಗಳಾಯ ಮೊಟ್ಟ ಮೊದಲ ಬಾರಿಗೆ ೨೦ನೇ ಶತಮಾನದ ಆರಂಭದಲ್ಲಿ ಮೊಗವೀರ ಎಂಬ ಜಾತಿ ಸೂಚಕ ಪದವನ್ನು ಪರಿಚಯಿಸಿದರು ಮೊಗೇರ್ ಅಥವಾ ಮೊಗೆಯರ್ ಎಂದು ಬಳಕೆಯಲ್ಲಿದ್ದ ಪದಕ್ಕೆ ಪರ್ಯಾಯವಾಗಿ ಮೊಗವೀರ ಪದ ಬಳಕೆಯಲ್ಲಿದೆ. ಹಾಗೆಯೇ ೧೯೨೯ರಲ್ಲಿ ಮುಂಬೈನಲ್ಲಿ ಮೊಗೇರ ಸಂಘ ಮೊಗವೀರ ವ್ಯವಸ್ಥಾಪಕ ಮಂಡಳಿ ಎಂಬುದಾಗಿ ನೊಂದಾಯಿಸಲ್ಪಟ್ಟಿತು. ಈ ಸಂಘದಿಂದ ಮಾಸಿಕ ಕನ್ನಡ ಪತ್ರಿಕೆಯೊಂದು ಪ್ರಕಾಶಿಸಲ್ಪಡುತ್ತಿತ್ತು. ಈಗ ಬಹುತೇಕ ಎಲ್ಲಾ ಮೀನುಗಾರ ಉಪಜಾತಿಗಳು ಮೊಗವೀರ ಎಂಬ ಜಾತಿ ಸೂಚಕ ಪದ ಬಳಸುವ ಮೂಲಕ ಸಂಗಟಿತರಾಗಿದ್ದಾರೆ.

೧೬ನೇ ಶತಮಾನದಲ್ಲಿ ಉಳ್ಳಾಲದ ರಾಣಿಯಾಗಿ ಅಬ್ಬಕ್ಕ ಆಳುತ್ತಿದ್ದಳು. ಒಮ್ಮೆ ಸುರತ್ಕಲ್ ಸಮುದ್ರ ತೀರದಲ್ಲಿರುವ ಸದಾಶಿವ ದೇವಸ್ಥಾನಕ್ಕೆ ಪುಜೆಗೆಂದು ತೆರಳಿದ್ದ ಸಮಯದಲ್ಲಿ, ಪೂಜೆ ಮುಗಿಸಿ ಸಮುದ್ರ ತಿರಕ್ಕೆ ಹೋದಾಗ ಭೀಕರವಾದ ಅಲೆಯೊಂದು ಅಬ್ಬಕ್ಕನನ್ನು ಎಳೆದೊಯ್ದಿತು. ಈ ಸಂದರ್ಭದಲ್ಲಿ ಅಲ್ಲಿನ ಮೀನುಗಾರ ಯುವಕರು ರಾಣಿಯನ್ನು ರಕ್ಷಿಸಿದರು. ಆ ಯುವಕರ ಧೈರ್ಯ ಮತ್ತು ಸಾಹಸಗಳಿಗೆ ಮೆಚ್ಚಿದ ಅಬ್ಬಕ್ಕ ತನ್ನನ್ನು ಕಾಪಾಡಿದ ಯುವಕರನ್ನು ಮತ್ತು ಅವರ ಸಮುದಾಯದ ಇತರ ಯುವಕರನ್ನು ಉಳ್ಳಾಲಕ್ಕೆ ಕರೆಸಿಕೊಂಡು ತನ್ನ ರಾಜ್ಯದ

ಭೂಸೇನೆ, ನೌಕಾಪಡೆಯಲ್ಲಿ ನೇಮಿಸಿಕೊಂಡಳು. ಇಂತಹ ವೀರ ಶೌರ್ಯ ತೋರಿಸಿದ ಯುವಕರ ಸಮುದಾಯವೇ ಮೊಗವೀರ ಸಮುದಾಯವೆಂದು ಹೆಸರಾಯಿತು.[೧೦] ಪೋರ್ಚುಗೀಸರು ಉಳ್ಳಾಲಕ್ಕೆ ಧಾಳಿ ಮಾಡಿದ ಸಂದರ್ಭದಲ್ಲಿ ಮೊಗವೀರ ಯುವಕರ ಸೇನೆಯ ಸಹಾಯದಿಂದಾಗಿ ರಾಣಿ ಅಬ್ಬಕ್ಕ ಜಯ ಸಾಧಿಸಿದಳು.

ಸಾಮಾಜಿಕ ವ್ಯವಸ್ಥೆ

ಬಳಿಗಳು

ಮೊಗವೀರ ಕುಟುಂಬಗಳು ಮೂಲಸ್ಥಾನದ ಆಧಾರದ ಮೇಲೆ ವಂಶಾವಳಿ ಉಪನಾಮಗಳನ್ನು ಹೊಂದಿದ್ದಾರೆ. ಕೆಳಗಿನ ವಂಶಾವಳಿಯನ್ನು ಆಧಾರಿತ ಉಪನಾಮಗಳು ಸಾಮಾನ್ಯವಾಗಿ ಮೊಗವೀರ ಸಮುದಾಯದ ಗುಂಪುಗಳ ನಡುವೆ ಕಂಡುಬರುತ್ತದೆ. ಅಮೀನ್, ಬಂಗೇರ, ಚಂದನ್, ಗುಜರನ್, ಕಾಂಚನ್, ಕರ್ಕೇರ, ಕೋಟ್ಯಾನ್, ಕುಂದರ್, ಮೆಂಡನ್, ಪಾಂಗಳ್, ಪುತ್ರನ್, ಸಾಲ್ಯಾನ್, ಶ್ರೀಯಾನ್, ಸುವರ್ಣ, ನಾಯ್ಕ, ರಾವ್, ಸಾಲಿಯಾನ್, ಸಪಳಿಗ್, ತಿಂಗಳಾಯ ಮತ್ತು ತೋಳಾರ್ ಎಂಬ ಬಳಿಗಳಿವೆ. ಮೊಗವೀರರಲ್ಲಿ ಒಂದೇ ಹೆಸರಿನ ಬಳಿಗಳಲ್ಲಿ ಮದುವೆ ನಿಷಿದ್ಧ. ಇವರು ಬಳಿಗಳ ವಿಧಿ-ನಿಷೇಧಗಳನ್ನು ಕಟ್ಟುನಿಟ್ಟಾಗಿ ಆಚರಿಸುತ್ತಾರೆ.

ನಿಲುಮೆ ಮತ್ತು ಸ್ವಭಾವ

ಮೊಗವೀರರೆಂದರೆ ದೃಢಕಾಯದವರು, ವಿಶಾಲವಾದ ಹಣೆ, ಅಗಲವಾದ ಎದೆ, ಶಕ್ತಿಯುತ ತೋಳುಗಳು ಮತ್ತು ಅಪ್ರತಿಮ ಧೈರ್ಯ, ಸಾಹಸಕ್ಕೆ ಹೆಸರಾಗಿದ್ದಾರೆ. ಈ ಸಮುದಾಯದಲ್ಲಿ

ಪುರುಷರಂತೆ ಮಹಿಳೆಯರು ದುಡಿಯುತ್ತಾರೆ. ತಿರುಪತಿ ತಿಮ್ಮಪ್ಪನ ಭಕ್ತರಾದ ಇವರು ಧರ್ಮಸ್ಥಳದ ಮಂಜುನಾಥನನ್ನು ಪೂಜಿಸುತ್ತಾರೆ. ಭೂತಾರಾಧನೆಯಲ್ಲಿ ತುಂಬಾ ನಂಬಿಕೆ ಉಳ್ಳವರು. ಧಾರ್ಮಿಕ ಮನೋಭಾವದ ಜೊತೆಗೆ ಆತ್ಮವಿಶ್ವಾಸ, ತಾಳ್ಮೆ ಇವರ ಇನ್ನೊಂದು ಗುಣ. ಬೆಳಿಗ್ಗೆ ಮೀನುಗಾರಿಕೆಯನ್ನು ಮಾಡಿ ಸಂಜೆ ಮೀನುವ್ಯಾಪಾರ ಮಾಡುತ್ತಾರೆ. ಹೆಚ್ಚಿನ ಜನರು ಹೈನುಗಾರಿಕೆ, ಮೀನು ಪ್ಯಾಕ್ಟರಿಗೆ, ಗೇರುಬೀಜದ ಪ್ಯಾಕ್ಟರಿಗೆ ಕೆಲಸಕ್ಕೆ ಹಾಗೂ ಕೃಷಿಕೂಲಿಗೆ ಹೋಗುತ್ತಾರೆ. ಇಂದಿನ ದಿನದಲ್ಲಿ ಯುವಕರು ಹೆಚ್ಚಾಗಿ ಪಟ್ಟಣದತ್ತ ಮುಖ ಮಾಡಿದ್ದು, ಹೋಟೆಲ್‌ಗಳಲ್ಲಿ, ವ್ಯಾಪಾರಿ ಮಳಿಗೆಗಳಲ್ಲಿ, ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದಾರೆ.

ಉಡುಗೆ-ತೊಡುಗೆ

ಮೊಗವೀರ ಸಮುದಾಯಕ್ಕೆ ಅವರದೇ ಆದ ಉಡುಗೆ-ತೊಡಿಗೆಗಳಿಲ್ಲ. ಮೊಗವೀರರ ಪುರುಷರು ಹೆಚ್ಚಾಗಿ ಪಂಚೆ ಮತ್ತು ಬನಿಯನ್ ಧರಿಸುತ್ತಾರೆ. ತಲೆಗೆ ಮುಂಡಾಸವನ್ನು ಕಟ್ಟುತ್ತಾರೆ. ಹೆಗಲ ಮೇಲೆ ಬಲೆಯನ್ನು ಹೊತ್ತಿರುತ್ತಾರೆ. ಹೆಂಗಸರು ಸೀರೆಯನ್ನು ಉಡುತ್ತಾರೆ. ಮೀನು ಮಾರಲು ಹೋಗುವಾಗ ತಲೆಗೆ ಹಾಳೆಯ ಟೊಪ್ಪಿಯನ್ನು ಧರಿಸಿ, ಬುಟ್ಟಿಯನ್ನು

ತಲೆಯ ಮೇಲೆ ಇಟ್ಟುಕೊಂಡು ಹೋಗುತ್ತಾರೆ. ಆದರೆ ಇಂದಿನ ದಿನದಲ್ಲಿ ಮೊಗವೀರ ಸಮುದಾಯದ ಹೊಸ ಪೀಳಿಗೆಯ ಜನರು ಆಧುನಿಕ ಬಟ್ಟೆಗಳನ್ನು ಧರಿಸುತ್ತಾರೆ. ಮಕ್ಕಳಿಗೆ ಕಾಲುಬಳೆ, ಕೈಬಳೆ, ಸೊಂಟದ ದಾರವನ್ನು ಹಾಕುತ್ತಾರೆ. ಕಿವಿಸುಚ್ಚಿ ಆಭರಣಗಳನ್ನು ಹಾಕುತ್ತಾರೆ. ಹಬ್ಬಹರಿದಿನಗಳಲ್ಲಿ ಸ್ತ್ರೀಯರು ಆಭರಣಗಳನ್ನು ಧರಿಸುತ್ತಾರೆ.

ಮೊಗವೀರರು ಎತ್ತರದ ನಿಲುವನ್ನು ಹೊಂದಿದ್ದು, ದಪ್ಪನಾದ, ಶಕ್ತಿಯುತವಾದ ಮೈಕಟ್ಟನ್ನು ಹೊಂದಿದ್ದಾರೆ. ಎಣಗಪ್ಪು ಬಣ್ಣವನ್ನು ಹೊಂದಿದ್ದಾರೆ. ವಿಶಾಲವಾದ ಎದೆ, ಗುಂಗುರು ಕುದಲನ್ನು ಹೊಂದಿದ್ದಾರೆ. ಇವರು ಧೈರ್ಯ ಮತ್ತು ಸಾಹಸಕ್ಕೆ ಹೆಸರುವಾಸಿಯಾಗಿದ್ದಾರೆ. ಇವರು ಸಾಹಸಿಗಳಷ್ಟೇ ಅಲ್ಲ, ನೀತಿವಂತರೂ ಹೌದು. ಉಳಿದ ಸಮುದಾಯಗಳ ನಡುವೆ ಸಹಬಾಳ್ವೆಯಿಂದ ಬಾಳುತ್ತಿದ್ದಾರೆ. ಇವರು ಹಗಲಿಡಿ ದುಡಿದು ಸಂಜೆ ಕಳ್ಳು ಕುಡಿದು ಆಯಾಸ ಪರಿಹರಿಸಿಕೊಳ್ಳುತ್ತಾರೆ. ಇವರಲ್ಲಿ ಹೆಂಗಸರು ಸಹ ಕಳ್ಳು ಕುಡಿಯುತ್ತಾರೆ.

ಒಳಾಡಳಿತ ವ್ಯವಸ್ಥೆ

"ಮೊಗವೀರ ಸಮುದಾಯದ ಪಟ್ಟಣಗಳಲ್ಲಿ ಗ್ರಾಮ ಸಭಾಗಳೆಂಬ ಗ್ರಾಮ ಮಟ್ಟದ ಸರ್ಕಾರಗಳಿರುತ್ತವೆ. ಪ್ರತಿ ಗ್ರಾಮಸಭಾಕ್ಕೆ ಒಬ್ಬ ಗುರಿಕಾರ ಇರುತ್ತಾನೆ. ಗುರಿಕಾರ ಪದ್ಧತಿ ವಂಶಪಾರಂಪರ್ಯವಾಗಿರುತ್ತದೆ. ಗುರಿಕಾರರು ಕೈಗೆ ಕಬ್ಬಿಣ ಅಥವಾ ಬಂಗಾರದ ಬಳೆಗಳನ್ನು ಹಾಕಿಕೊಳ್ಳುತ್ತಾರೆ. ಜೊತೆಗೆ ಒಂದು ಕಿವಿಗೆ ಒಲೆ ಧರಿಸುತ್ತಾರೆ. ಇದು ಗುರಿಕಾರರನ್ನು ಪ್ರತಿನಿಧಿಸುವ ಆಭರಣವಾಗಿರುತ್ತದೆ. ಗುರಿಕಾರರ ಕರ್ತವ್ಯಗಳು ಮತ್ತು ಅಧಿಕಾರಗಳು ಪ್ರಜಾಪ್ರಭುತ್ವದ ಮಾದರಿಯಂತೆ ಇರುತ್ತದೆ. ಎಲ್ಲಾ ಗ್ರಾಮ ಸಭಾದ ಗುರಿಕಾರರು ಸೇರಿ ಒಬ್ಬ ನಾಯಕನನ್ನು ಆರಿಸುತ್ತಾರೆ. ತಮ್ಮ ನಾಯಕನನ್ನು ತಂಡೇಲ ಎಂದು ಕರೆಯುತ್ತಾರೆ. ದಕ್ಷಿಣ ಕನ್ನಡದ ಮೊಗವೀರ ಮಹಾಸಭಾ (೧೯೨೩)ರ ಅಡಿಯಲ್ಲಿ ೧೪೬ ಗ್ರಾಮ ಸಭಾಗಳಿದ್ದು ಅದರಲ್ಲಿ ೧೦ ಸಂಯುಕ್ತ ಸಭಾಗಳಿವೆ. ಹಿಂದಿನ ಕಾಲದಲ್ಲಿ ಬಾರಕೂರು, ಬಾಗ್ವಾಡಿ ಮತ್ತು ಮಂಗಳೂರು ಎಂಬ ಮೂರು ಪಟ್ಟಣಗಳು ಮೊಗವೀರರ ಹಳೆ ಕೇಂದ್ರಗಳಾಗಿದ್ದವು."[೧೧]

ಗ್ರಾಮ ಸಭಾಗಳಲ್ಲಿ ಮಂಗಳೂರು, ಉಡುಪಿ ಮತ್ತು ಉಪ್ಪಳದಿಂದ ಕೋಟಾದವರೆಗೆ ದಕ್ಷಿಣ ಕನ್ನಡ ಮೊಗವೀರ ಸಭಾದಲ್ಲಿ ಸೇರಿಕೊಂಡಿದೆ. ಅದೇ ರೀತಿ ಕನ್ನಡ ಭಾಷಿಕ ಬಾಗ್ವಾಡಿ ಪ್ರದೇಶದ ಮೊಗವೀರರು ಮೊಗವೀರ ಮಹಾಜನ ಸಭಾ ಎಂಬ ಪ್ರತ್ಯೇಕ ಸಂಘ ರಚಿಸಿಕೊಂಡಿದ್ದಾರೆ. ಮೊಗವೀರರು ಕುಲ ಗುರುಗಳನ್ನು ಹೊಂದಿದ್ದಾರೆ. ಇವರನ್ನು ಮಂಗಲ ಪೂಜಾರಿ ಎಂದು ಕರೆಯುತ್ತಾರೆ. ಮಂಗಲ ಪೂಜಾರಿ ಮೊಗವೀರರ ಸಂಪ್ರದಾಯಿಕ ಪುರೋಹಿತನಾಗಿದ್ದು, ಬೆಣ್ಣೆ ಕುದ್ರು ಮಾಸ್ತೀಯಮ್ಮ ದೇವಾಲಯದಲ್ಲಿ ಮುಖ್ಯ ಪುರೋಹಿತರಾಗಿದ್ದರು. ಇತ್ತೀಚಿನ ದಿನಗಳಲ್ಲಿ ಕುಲಗುರುಗಳ ಪದ್ಧತಿಯನ್ನು ಮತ್ತೆ ಪೂರ್ಣ ಪ್ರಮಾಣದಲ್ಲಿ ಆಚರಣೆಗೆ ತರಲು ಸಮುದಾಯದ ಪ್ರಮುಖ ನಾಯಕರು ಪ್ರಯತ್ನಿಸುತ್ತಿದ್ದಾರೆ.

ಹಿಂದೆ ಸಾಮಾನ್ಯ ಕ್ಷೌರಿಕ ಮೊಗವೀರರ ಕ್ಷೌರ ಮಾಡುತ್ತಿರಲಿಲ್ಲ. ಮೊಗವೀರರು ತಮ್ಮ ಸಮುದಾಯದ ಕ್ಷೌರಕ್ಕಾಗಿ ಮೆಲಂಟವಮ್ ಅಥವಾ ಮಿಲಂಟ ಎಂಬ ಕ್ಷೌರಿಕರನ್ನು ಹೊಂದಿದ್ದರು. ಮೀನುಗಾರರು ಹಿಡಿದ ಮೀನಿನಲ್ಲಿ ಒಂದು ಪಾಲು ಈ ಕ್ಷೌರಿಕರಿಗೆ ಮೀಸಲಾಗಿತ್ತು. ಇಂದು ಈ ಪದ್ಧತಿಗಳು ಮಾಯವಾಗಿವೆ.

ಚಿಕಿತ್ಸಾ ಪದ್ಧತಿ

ಮೊಗವೀರರು ಬಡತನ ರೇಖೆಗಿಂತ ಕೆಳಗಿರುವುದರಿಂದ ಹೆಚ್ಚಾಗಿ ಜನಪದ ವೈದ್ಯ ಪದ್ಧತಿಯ ಚಿಕಿತ್ಸೆಯ ಬಗ್ಗೆ ಹೆಚ್ಚು ಒಲವು ಇದೆ. ದೇಹದ ಯಾವುದೇ ಭಾಗಕ್ಕೆ ಗಾಯವಾದಲ್ಲಿ ಕಮ್ಯುನಿಸ್ಟ ಗಿಡದ ಎಲೆಗಳನ್ನು ಜಜ್ಜಿ ಆ ರಸವನ್ನು ಗಾಯಕ್ಕೆ ಕಟ್ಟುತ್ತಾರೆ. ಇದರಿಂದ ಗಾಯ ಶೀಘ್ರವಾಗಿ ಗುಣವಾಗುತ್ತದೆ ಎಂಬುದು ಮೊಗವೀರರ ನಂಬಿಕೆ. ಚರ್ಮ ರೋಗಗಳಿಗೆ ಕಹಿಬೇವಿನ ಸೊಪ್ಪು ಮತ್ತು ಅದೇ ಮರದ ತೊಗಟೆಯಿಂದ ತಯಾರಿಸಿದ ಕಷಾಯವನ್ನು ಸೇವಿಸುತ್ತಾರೆ. ಹಾಗೂ ಜೀರ್ಣ ಕ್ರಿಯೆಗೆ ಸಂಬಂಧಿಸಿದಂತೆ ಹೆಚ್ಚಾಗಿ ಜೀರಿಗೆಯನ್ನು ಬಳಸುತ್ತಾರೆ.

ನಂಬಿಕೆ ಮತ್ತು ಆಚರಣೆಗಳು

ಸುಮಾರು ೨೭೦೦ ವರ್ಷಗಳಿಂದ ತುಳುನಾಡಿನಲ್ಲಿ ಪ್ರಭುತ್ವ ಹೊಂದಿರುವ ಮೊಗವೀರರು ಧಾರ್ಮಿಕತೆಯಲ್ಲಿ ಕಾಲಕಾಲಕ್ಕೆ ಹಲವಾರು ಬದಲಾವಣೆಯೊಂದಿಗೆ ಧಾರ್ಮಿಕತೆ ಸುಧಾರಣೆಗಳನ್ನು ಮಾಡಿಕೊಂಡಿದ್ದಾರೆ. ಮೂಲತಃ ಮೊಗವೀರರು ಬಿರ್ಮೆರ್ ಮತ್ತು ಪಂಜುರ್ಲಿ ಎಂಬ ಶಕ್ತಿಗಳನ್ನು ಪೂಜಿಸುತ್ತಿದ್ದರು. ನಂತರ ಬೊಬರ್ಯ, ಕೊರತಿ ಮತ್ತು ಹೈಗುಲಿ ಎಂಬ ಶಕ್ತಿಗಳು ಇವರ ಆರಾಧನೆಯಲ್ಲಿ ಸೇರಿಕೊಂಡವು.

ಆಚರಣೆಗಳು

ಭೂತದ ಕೋಲ ಅಥವಾ ದೈವಾರಾಧನೆ

ಮೊಗವೀರ ಸಮುದಾಯದವರು ದೈವಾರಾದನೆಗೆ ಹೊರ ಪ್ರದೇಶದಲ್ಲಿ ವಾಸಿಸುತ್ತಿರುವವರೆಲ್ಲ ಬಂದು ಒಂದೆಡೆ ಸೇರುತ್ತಾರೆ. ಸಂತರ ಎಲ್ಲರೂ ಸೇರಿ ದೈವಕ್ಕೆ ಪೂಜೆ ಸಲ್ಲಿಸುತ್ತಾರೆ. ಸಂತರ ಅಮ್ಮನವರ ದರ್ಶನ ಮಾಡುತ್ತಾರೆ. ಆಮೇಲೆ ದೈವದ ದರ್ಶನ ಮಾಡುತ್ತಾರೆ. ಇಲ್ಲಿ ಹೇಳಿಕೆ-ಕೇಳಿಕೆ ಇರುತ್ತದೆ. ದೈವ ಅಲ್ಲೇ ಸಮಸ್ಯೆಗಳಿಗೆ ಪರಿಹಾರ ಕೊಡುತ್ತದೆ. ಈ ಪರಿಹಾರವನ್ನು ಮೊಗವೀರರು ಚಾಚುತಪ್ಪದೇ ನಡೆಸುತ್ತಾರೆ. ನಂತರ ದೈವಕ್ಕೆ ಕುರಿ, ಕೋಳಿಯ ಬಲ್ಲಿ ನೀಡುತ್ತಾರೆ. ನಂತರ ಬಲಿಕೊಟ್ಟ ಪ್ರಾಣಿಯಿಂದ ತಯಾರಿಸಿದ ಪ್ರಸಾದದಿಂದ ದೈವಕ್ಕೆ ಎಡೆ ಇಡುತ್ತಾರೆ.

ತುಳಸಿ ಪೂಜೆ

ತುಳಸಿ ಪೂಜೆ ಮಾಡುವ ದಿನದಂದು ತುಳಸಿ ಕಟ್ಟೆಗೆ ಮಾವಿನ ತೋರಣ ಕಟ್ಟುತ್ತಾರೆ. ಕಟ್ಟೆಯ ಸುತ್ತಲೂ ದೀಪವನ್ನು ಹಚ್ಚುತ್ತಾರೆ. ಮೊದಲಿಗೆ ಕಳಸ ಪೂಜೆ ಮಾಡುತ್ತಾರೆ. ಕಟ್ಟೆಯ ಎರಡು ಕಡೆ ಕಳಸ ಇಡುತ್ತಾರೆ. ಇದಕ್ಕೆ ವಸಂತ ಪೂಜೆ ಎನ್ನುತ್ತಾರೆ. ವಸಂತಪೂಜೆ

ಮಾಡುವವರು ತಿರುಪತಿ ವೆಂಕಟೇಶ್ವರನ ದರ್ಶನ ಪಡೆದಿರಬೇಕು. ಈ ಪೂಜೆಯಲ್ಲಿ ಕೋಸಂಬರಿ, ಬಾಳೆಹಣ್ಣು, ಬೆಲ್ಲ, ದ್ರಾಕ್ಷಿ ಮುಂತಾದವುಗಳನ್ನು ನೈವೇದ್ಯ ಮಾಡುತ್ತಾರೆ. ನಂತರದಲ್ಲಿ ತುಳಸಿ ಪೂಜೆಯನ್ನು ಮಾಡುತ್ತಾರೆ. ನಂತರ ಕಾಯಿ ಒಡೆದು ತುಳಸಿಗೆ ಅವಲಕ್ಕಿ ನೈವೇದ್ಯ ಮಾಡುತ್ತಾರೆ. ನಂತರ ಎಲ್ಲರೂ ಸೇರಿ ಗೋವಿಂದಾ, ಗೋವಿಂದಾ ಎಂದು ಕೂಗುತ್ತಾರೆ. ನಂತರ ಪ್ರಸಾದದ ಜೊತೆಗೆ ಕಾಯಿಕಡಿಯನ್ನು ಕೊಡುತ್ತಾರೆ. ನಂತರ ಮನೆಯವರು ಊಟ ಮಾಡುವ ಮೊದಲು ದೈವಕ್ಕೆ (ಭೂತಕ್ಕೆ) ವಿಶೇಷವಾದ ಎಡೆ ಇಡುವ ರೂಢಿ ಇದೆ. ಆ ದಿನ ಪಾಯಸದೂಟ ಮಾಡುತ್ತಾರೆ.

ತೆನೆ ಪೂಜೆ (ಹೊಸತು)

ಈ ದಿನ ಬೆಳಗ್ಗೆ ಬೇಗನೆ ಎದ್ದು ಸ್ನಾನ ಮಾಡಿ ಮನೆಯನ್ನು ಸ್ವಚ್ಛ ಮಾಡುತ್ತಾರೆ. ನಂತರ ಗದ್ದೆಯಿಂದ ಒಂದು ಬುಡಸಹಿತವಾದ ತೆನೆಯನ್ನು ಕಿತ್ತು ತಂದು ಕಣದಲ್ಲಿ ಇಡುತ್ತಾರೆ. ಇದಕ್ಕೆ ಹೂವು, ಗಂಧ ಹಾಕುತ್ತಾರೆ. ನಂತರ ಮಂಟಪವನ್ನು ನಿರ್ಮಿಸುತ್ತಾರೆ. ಆ ದಿನ ತುಳಸಿ ಕಟ್ಟೆಗೂ ಪೂಜೆ ಮಾಡಿ ದೀಪ ಇಡುತ್ತಾರೆ. ನಂತರ ತೆನೆಗೆ ಪೂಜೆ ಸಲ್ಲಿಸಿ ಹಲ್ಲು ಕತ್ತಿಯಿಂದ ತೆನೆಯನ್ನು ಕತ್ತರಿಸಿ ಮಣೆಯ ಮೇಲಿಟ್ಟು ತುಳಸಿ ಕಟ್ಟೆಯ ಮೇಲೆ ಇಡುತ್ತಾರೆ. ತುಳಸಿಗೂ ಒಂದು ಕದಿರನ್ನು ಮನೆಯ ಯಜಮಾನ ಕಟ್ಟುತ್ತಾನೆ. ನಂತರ ಯಜಮಾನ ಕದಿರನ್ನು ತಲೆಯ ಮೇಲಿಟ್ಟುಕೊಂಡು ಮನೆಯ ಬಾಗಿಲಿಗೆ ಬರುತ್ತಾನೆ. ಮನೆಯ ಹೆಣ್ಣು ಮಗಳು ಯಜಮಾನನ ಕಾಲಿಗೆ ನೀರನ್ನು ಸುರಿಯುತ್ತಾಳೆ. ಯಜಮಾನ ಮನೆಯ ಒಳಗಡೆಗೆ ಬಂದು ದೇವರ ಕೋಣೆಯ ಎದಿರು ಕದಿರನ್ನು ಇಡುತ್ತಾನೆ. ಅಲ್ಲಿ ಕದಿರಿನ ಎದುರು ರಂಗೋಲಿಯನ್ನು ಹಾಕಿ ಮತ್ತೆ ಪೂಜೆ ಮಾಡುತ್ತಾರೆ. ಆ ದಿನ ಹೊಸ ಅಕ್ಕಿಯ ಅನ್ನಕ್ಕೆ ಕದಿರಿನ ೯ ಬತ್ತವನ್ನು ಹಾಕುತ್ತಾರೆ. ಅನ್ನದ ಪಾತ್ರೆಗೂ ಕದಿರನ್ನು ಕಟ್ಟುತ್ತಾರೆ. ಅಂದು ೯ ತರಹದ ಪಲ್ಯವನ್ನು ಮಾಡುತ್ತಾರೆ. ನಂತರ ಮನೆಯವರೆಲ್ಲಾ ಸೇರಿ ಪಾಯಸದೂಟ ಮಾಡುತ್ತಾರೆ.

ದೋಣೆ ಪೂಜೆ

ಮಳೆಗಾಲ ಮುಗಿದ ನಂತರ ದೋಣಿಯನ್ನು ಸಮುದ್ರದಲ್ಲಿ ಇಳಿಸುವ ಮುನ್ನ ದೋಣಿ ಪೂಜೆ ಮಾಡುತ್ತಾರೆ. ಅಂದು ದೋಣಿಯನ್ನು ಅಲಂಕರಿಸಿ ಸಮುದ್ರದ ಸಮೀಪ ಇರುವ ದೇವಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸಿ ಬಂದು ದೋಣಿಗೆ ಪೂಜೆ ಸಲ್ಲಿಸುತ್ತಾರೆ. ನಂತರ ಸಮುದ್ರಕ್ಕೂ ಪೂಜೆ ಮಾಡಿ ದೋಣಿಯನ್ನು ಸಮುದ್ರದಲ್ಲಿ ಬಿಡುತ್ತಾರೆ.

ಸಂಕ್ರಾಂತಿ

ಮಕರ ಸಂಕ್ರಾಂತಿಯಂದು ಮನೆಯಲ್ಲಿರುವ ಮಡಿಕೆಗೆ ಶೇಡಿಯಿಂದ ವಿವಿಧ ಬಗೆಯ ಚಿತ್ರಗಳನ್ನು ಬಿಡಿಸುತ್ತಾರೆ.(ಸೂರ್ಯ, ಚಂದ್ರ, ಗಿಡ, ಮರ ಮುಂತಾದ ಚಿತ್ರ). ನಂತರ ಮಡಿಕೆಗೆ ಅಕ್ಕಿಯನ್ನು ಹಾಕಿ ದೀಪವನ್ನು ಹಚ್ಚುತ್ತಾರೆ.

ಯುಗಾದಿ

ಮೊಗವೀರರು ಸೌರಮಾನ ಯುಗಾದಿಯನ್ನು ಆಚರಿಸುತ್ತಾರೆ. ಅಂದು ಹುಲ್ಲಿನ ಪಿಂಡಿಯನ್ನು ಮಾಡಿ ಭತ್ತದ ಹೊಟ್ಟನ್ನು ಸೇರಿಸಿ ಅದಕ್ಕೆ ಬೆಂಕಿ ಹಚ್ಚಿ ಗದ್ದೆಯಲ್ಲಿ ಇಟ್ಟು ಬರುತ್ತಾರೆ. ಮಧ್ಯಾಹ್ನ ಹಬ್ಬದ ಸಿಹಿಯೂಟ ಮಾಡುತ್ತಾರೆ.

ಗಣೇಶ ಹಬ್ಬ

ಗಣೇಶ ಹಬ್ಬವನ್ನು ಮೊಗವೀರರು ವಿಜೃಂಭಣೆಯಿಂದ ಆಚರಿಸುತ್ತಾರೆ. ಆ ದಿನ ಯಾರು ಹೊರಗಡೆ ಕೆಲಸಕ್ಕೆ ಹೊಗುವುದಿಲ್ಲ. ಊರಿನ ಗ್ರಾಮ ದೇವರ ಗುಡಿಯಲ್ಲಿ ಗಣೇಶನ ವಿಗ್ರಹವನ್ನಿಟ್ಟು ಎಲ್ಲರೂ ಸಾಮುದಾಯಿಕವಾಗಿ ಪೂಜಿಸುತ್ತಾರೆ. ಅಂದು ಪಂಚಕಜ್ಜಾಯ, ಮೋದಕ, ಕಜ್ಜಾಯ, ಕಡುಬು ಮುಂತಾದ ತಿಂಡಿಗಳನ್ನು ಮಾಡಿ ಊಟ ಮಾಡುತ್ತಾರೆ. ಮಧ್ಯಾಹ್ನ ಸ್ಪರ್ಧಾ ಕಾರ್ಯಕ್ರಮನ್ನು ಏರ್ಪಡಿಸುತ್ತಾರೆ. ಸಂಜೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಮಾಡುತ್ತಾರೆ. ಮರುದಿನ ಮೂಡಗಣಪತಿ ಸೇವೆ (ಕಾಯಿ ಒಡೆದು ರಾಶಿ ಹಾಕುವ ಸೇವೆ) ಮಾಡುತ್ತಾರೆ. ನಂತರ ಗಣೇಶನ ಮೂರ್ತಿಯನ್ನು ಮೆರವಣಿಗೆ ಮಾಡಿ ವಿಸರ್ಜನೆ ಮಾಡುತ್ತಾರೆ.

ದೀಪಾವಳಿ ಹಬ್ಬ

ದೀಪಾವಳಿಯ ಅಮಾವಾಸ್ಯೆಯಂದು ಸಮುದ್ರ ಸ್ನಾನ ಮಾಡುತ್ತಾರೆ. ದೀಪಾವಳಿಯ ದಿನ ಸಂಜೆ ಗದ್ದೆಗೆ ಹೋಗಿ ಕಮಲದ ಎಲೆ ಹಾಕಿ ಗೊಡ್ಡಿಟ್ಟು (ಕಡುಬಿನ ಒಂದು ವಿಧ), ಅವಲಕ್ಕಿ, ಅಡಿಕೆ, ವೀಳ್ಯದಎಲೆ, ಕಸ್ತೂರಿ ಹೂವು, ಜಂಗಮ ಹೂವು, ಕೂಳಿ ಹೂವನ್ನು ಇಟ್ಟು ಎರಡು ಬಿದಿರಿನ ಕೋಲನ್ನು ಹುಗಿದು ಅದಕ್ಕೆ ಜುಂಜನ್ನು ಹಚ್ಚುತ್ತಾರೆ. ಈ ಜುಂಜನ್ನು ಸೂಡಿಯಿಂದ ತಯಾರಿಸಿದ ಬೆಂಕಿಯಿಂದಲೇ ಹಚ್ಚುತ್ತಾರೆ. ನಂತರ ಬಲೀಂದ್ರನ ಹೆಸರನ್ನು ೩ ಬಾರಿ ಕೂಗುತ್ತಾರೆ. ನಂತರ ಮನೆಗೆ ಬಂದು ಮನೆಯ ಸುತ್ತಲೂ ಜುಂಜನ್ನು ನೆಡುತ್ತಾರೆ. ನಂತರ ಪೂಜೆ ಮಾಡಿ ಮನೆಯವರೆಲ್ಲರೂ ಸೇರಿ ಸಕೆ ಹಿಟ್ಟು, ಕಡುಬು, ಕೋಳಿ ಊಟ ಮಾಡುತ್ತಾರೆ.

ಆಷಾಢ ಹಬ್ಬ ಮತ್ತು ಹೊಸ್ತಲ ಪೂಜೆ

ಮಳೆಗಾಲ ಪ್ರಾರಂಭವಾದ ನಂತರ ಒಂದು ದಿನ ಮಳೆಹಬ್ಬ ಅಥವಾ ಆಷಾಡ ಹಬ್ಬವನ್ನು ಮಾಡುತ್ತಾರೆ. ಆ ದಿನ ವಾರ ದೈವಕ್ಕೆ ಪೂಜೆ ಸಲ್ಲಿಸಿ ಕೋಳಿ ಬಲಿ ನೀಡುತ್ತಾರೆ. ನಂತರ ಮಾಂಸದೂಟ ಮಾಡುತ್ತಾರೆ.

ಶ್ರಾವಣ ಮಾಸದಲ್ಲಿ ಹೆಚ್ಚಾಗಿ ಮೊಗವೀರ ಸಮುದಾಯದ ಹೆಣ್ಣು ಮಕ್ಕಳು ಸೊಣೆ ಹೂವನ್ನು ಹೊಸ್ತಿಲ ಪೂಜೆಯ ಒಂದು ವಾರದ ಮೊದಲಿಗೆ ಹೊಸ್ತಲ ಮೇಲೆ ಒಳ ಮುಖವಾಗಿ ಇಡುತ್ತಾ ಬರುತ್ತಾರೆ. ಹಬ್ಬದ ದಿನದಂದು ರಂಗೋಲಿ ಬರೆದು ಸೊಣೆ ಹೂವನ್ನು ಏರಿಸಿ, ದೀಪ ಹಚ್ಚಿ ಯಜಮಾನ ಪೂಜೆ ಮಾಡುತ್ತಾನೆ. ಅಂದು ಹೊಸ್ತಿಲಿಗೆ ನೈವೇದ್ಯವಾಗಿ

ಇಡ್ಲಿ, ಕಡಬು, ದೋಸೆ ಮುಂತಾದ ತಿಂಡಿಗಳನ್ನು ಮಾಡುತ್ತಾರೆ. ಮಾರನೇ ದಿನ ಸೋಣೆ ಹೂವನ್ನು ಹೊರಮುಖಿ ಮಾಡಿ ಇಡುತ್ತಾರೆ. (ಮಾಹಿತಿ: ಡಾ. ಚಂದ್ರಕಲಾ ಎಸ್.)

ಹುಟ್ಟಿನ ಆಚರಣೆ

ಮಗು ಹುಟ್ಟಿದ ೧೧ನೇ ದಿನದಂದು ಮಗು ಮತ್ತು ಬಾಣಂತಿಯನ್ನು ಸ್ನಾನ ಮಾಡಿಸಿ ಮನೆಯ ಒಳಗಡೆ ಕರೆದುಕೊಳ್ಳುತ್ತಾರೆ. ಅಂದು ಸೂತಕವನ್ನು ತೊಳೆದುಕೊಳ್ಳುತ್ತಾರೆ. ಅಂದು ಮನೆಯನ್ನು ಚೊಕ್ಕ ಮಾಡಿ ಬಟ್ಟೆಯನ್ನು ತೊಳೆಯುತ್ತಾರೆ. ಆ ದಿನವೇ ಮಗುವನ್ನು ತೊಟ್ಟಿಲಿಗೆ ಹಾಕಿ, ನಾಮಕರಣ ಮಾಡುತ್ತಾರೆ. ಬಂದವರು ಉಡುಗೊರೆಯನ್ನು ನೀಡುತ್ತಾರೆ. ಆ ದಿನ ಸಿಹಿ ಊಟದ ಜೊತೆಗೆ ಹೆಚ್ಚಾಗಿ ದೋಸೆ ಮತ್ತು ಪಲ್ಯ ಮಾಡುತ್ತಾರೆ.

ಮೈನೆರೆಯುವುದು

ಹುಡುಗಿ ದೊಡ್ಡವಳಾದ ೪ನೇ ದಿನಕ್ಕೆ ತಲೆಗೆ ೧೧ ಕೊಡ ನೀರನ್ನು ಹಾಕುತ್ತಾರೆ. ಇದಕ್ಕೆ ತಲೆ ನೀರು ಮದುವೆ ಎನ್ನುತ್ತಾರೆ. ನಂತರ ಹುಡುಗಿಗೆ ಹೊಸಬಟ್ಟೆ ಉಡಿಸಿ ತೆಂಗಿನ ಹೂವನ್ನು ಮುಡಿಸಿ, ಸಿಹಿ ತಿಂಡಿಗಳನ್ನು ಮಾಡಿ ತಿನಿಸುತ್ತಾರೆ. ೬-೭-೯-೧೦ರಲ್ಲಿ ಒಂದು ದಿನ ಕಾರ್ಯಕ್ರಮ ಮಾಡಿ ಪಂಚಕಜ್ಜಾಯ ಮಾಡುತ್ತಾರೆ. ಹೆಂಗಸರೆಲ್ಲಾ ಸೇರಿ ಹುಡುಗಿಗೆ ಆರತಿ ಮಾಡುತ್ತಾರೆ. ನಂತರ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸಿಕೊಂಡು ಬರುತ್ತಾರೆ.

ಮದುವೆ

ಮದುವೆಯ ದಿನ ವಧುವರರಿಗೆ ಅರಿಶಿಣ ಸ್ನಾನ ಮಾಡಿಸಿ, ನಂತರ ಹೊಸ ಬಟ್ಟೆಯನ್ನು ಉಡಿಸುತ್ತಾರೆ. ಹೆಣ್ಣಿನ ಅಕ್ಕ ತಂಗಿಯರು ಕಳಶ ಮತ್ತು ದೀಪವನ್ನು ಹಿಡಿದುಕೊಳ್ಳುತ್ತಾರೆ. ನಂತರ ತುಳಸಿ ಕಟ್ಟೆಗೆ ಬಂದು ಪೂಜೆ ಸಲ್ಲಿಸಿ ಮದುವೆಯ ಚಪ್ಪರಕ್ಕೆ ಹೋಗುತ್ತಾರೆ. ಅಲ್ಲಿ ವರನನ್ನು ಸ್ವಾಗತಿಸಿ ಮಂಟಪಕ್ಕೆ ಕರೆತರುತ್ತಾರೆ. ಮದುವೆಯಲ್ಲಿ ಹುಡುಗಿಯ ಸಹೋದರರು ಹೊದ್ಲನ್ನು (ಬತ್ತದಿಂದ ತಯಾರಿಸಿದ್ದು) ಹೋಮಕ್ಕೆ ಹಾಕುತ್ತಾರೆ. ಆಮೇಲೆ ತಾಳಿ ಕಟ್ಟುವ ಶಾಸ್ತ್ರ ಮಾಡುತ್ತಾರೆ. ಬಂದವರಿಗೆ ಊಟ ಹಾಕುತ್ತಾರೆ. ಉಡುಗರೆಯನ್ನು ಕೊಡುವ ಸಂಪ್ರದಾಯವೂ ಇದೆ. ನಂತರ ಹೆಣ್ಣನ್ನು ವರನ ಕಡೆಯವರು ಮನೆ ತುಂಬಿಸಿಕೊಂಡು ಬೀಗರೂಟ (ಸಮಾನ ಊಟ) ಮಾಡುತ್ತಾರೆ. ಅಂದು ಮಾಂಸದೂಟ ಮಾಡಿ ಬಡಿಸುತ್ತಾರೆ. ಮಾರನೇ ದಿನ ಹೆಣ್ಣಿನ ಮನೆಯಲ್ಲೂ ಬೀಗರ ಊಟವಿದ್ದು ಅಲ್ಲೂ ಮಾಂಸದೂಟವಿರುತ್ತದೆ.

ಧಾರ್ಮಿಕ ವ್ಯವಸ್ಥೆ

ಬೊಬ್ಬರ್ಯ ಶಕ್ತಿ ಪುರುಷ. ಒಬ್ಬ ಹೃದಯವಂತ ಅರಬ್ ವ್ಯಾಪಾರಿಯಾಗಿದ್ದು ಮೊಗವೀರರೊಂದಿಗೆ ಸಹಬಾಳ್ವೆಯಿಂದ ಇದ್ದ ವ್ಯಕ್ತಿ. ಜಾನಪದ ಕಾವ್ಯಗಳ ಪ್ರಕಾರ ಬೊಬ್ಬರ್ ಎಂಬಾತ ಅಸಾಮಾನ್ಯ ಮತ್ತು ಜನಪ್ರಿಯ ಮೀನು ವ್ಯಾಪಾರಿಯಾಗಿದ್ದು ಕಮಿಷನ್ ಆಧಾರದಲ್ಲಿ ಪಶ್ಚಿಮ ಕರಾವಳಿಯ ಬಂದರಿನಲ್ಲಿ ಬೋಟ್ ನಡೆಸುತ್ತಿದ್ದ. ನಂತರ ಬಂಟ ಯುವತಿಯನ್ನು ಮದುವೆಯಾಗಿ ಕಾಪು ಮೊಗವೀರ ಪಟ್ಟಣದಲ್ಲಿ ಚಿರಪರಿಚಿತನಾಗಿದ್ದ. ಮೊಗವೀರರ ಜನಪದ

ನಂಬಿಕೆಯಂತೆ ಮೊಗವೀರರ ಪರಮಾಪ್ತನಾಗಿದ್ದ. ಒಮ್ಮೆ ಕಡಲ್ಗಳ್ಳರನ್ನು ಬೆನ್ನಟ್ಟಿ ಹೋರಾಡುವ ಸಂದರ್ಭದಲ್ಲಿ ವೀರಮರಣ ಹೊಂದಿದ. ತುಳು ನಾಡಿನಲ್ಲಿ ತುಳುವರೊಳಗೊಂದಾಗಿ ತುಳುವರ ಪ್ರಾಣ ರಕ್ಷಣೆ ಮಾಡಿದ ಬೊಬ್ಬರ್ಯನನ್ನು ಮೊಗವೀರರು ಪ್ರಾಣ ರಕ್ಷಕ ಶಕ್ತಿ ದೇವರಾಗಿ ಮತ್ತು ಅದೃಷ್ಟ ದೇವರಾಗಿ ಆರಾಧಿಸುತ್ತಾರೆ.

ಕೆಲವು ಮೊಗವೀರರ ಆರಾಧನಾ ಸ್ಥಳಗಳಲ್ಲಿ ವೇದವ್ಯಾಸ ಮತ್ತು ಅಥರ್ವ ಮುನಿಗಳ ಮೂರ್ತಿಗಳು ಕಂಡುಬರುತ್ತದೆ. ಐತಿಹಾಸಿಕ ಕುತೂಹಲಕಾರಿಯಾದ ಕಥೆಗಳಲ್ಲಿ ಬರುವ ಋಷಿಮುನಿಯಾದ ವೇದವ್ಯಾಸರು ಸತ್ಯವತಿ/ಮತ್ಸ್ಯಗಂಧಿಯ ಮಗನಾಗಿದ್ದು ಸತ್ಯವತಿ ಈ ಮೊಗವೀರ (ಮೀನುಗಾರ) ಸಮುದಾಯದವಳು. ಆದ್ದರಿಂದ ವೇದವ್ಯಾಸರನ್ನು ಮೊಗವೀರರು ಆರಾಧಿಸುತ್ತಾರೆ. ಆದರೆ ಅಥರ್ವ ಮುನಿ ಮೀನುಗಾರರ ಸಮುದಾಯದವರೇ, ಅಲ್ಲವೇ ಎಂಬುದರಲ್ಲಿ ಗೊಂದಲವಿದ್ದು, ಅಥರ್ವ ವೇದ ಅಂಗೀರಸ ಮತ್ತು ಬೃಗು ಮಹರ್ಷಿಗಳಿಂದ ರಚಿತವಾಗಿದ್ದು ಅಥರ್ವ ಮುನಿಗಳ ಅನುಯಾಯಿಗಳು ಉತ್ತರ ಭಾರದಿಂದ ವಲಸೆ ಬಂದ ಸಂದರ್ಭ ಈ ಮುನಿಗಳ ಆರಾಧನೆ ಮೊಗವೀರರಲ್ಲಿ ಆರಂಭವಾಗಿರಬಹುದೆಂದು ಮೊಗವೀರ ಸಮುದಾಯದ ಹಿರಿಯರ ಹೇಳಿಕೆ.

ಮೊಗವೀರರು ಹಿಂದೂಗಳ ಪ್ರಮುಖ ದೇವರಾಗಿರುವ ವಿಷ್ಣು ಮತ್ತು ಶಿವನ ಆರಾಧಕರು. ಮೊಗವೀರ ಸಮುದಾಯದ ಮೂಲ ಅರ್ಚಕರನ್ನು ಮಂಗಲ ಪೂಜಾರಿ ಎನ್ನುತ್ತಿದ್ದರು. ಅಮ್ಮನೊರು ದೇವಾಲಯದ ಪೂಜೆ ಮತ್ತು ಇತರ ಖರ್ಚು ವೆಚ್ಚಕ್ಕಾಗಿ ಮಂಗಲ ಪೂಜಾರಿಯವರಿಗೆ ಮೊಗವೀರ ಕುಟುಂಬಗಳು ಇಂತಿಷ್ಟು ವಂತಿಗೆಯನ್ನು ನೀಡಬೇಕಿತ್ತು. ಮೊಗವೀರರ ಕುಲಗುರು ಅಥವಾ ಮಂಗಲ ಪೂಜಾರಿ ತುಳುನಾಡಿನಲ್ಲಿದ್ದ ಪ್ರಾಚೀನ ಪುರೋಹಿತ ವ್ಯವಸ್ಥೆಯ ಬಗ್ಗೆ ತಿಳಿಯಲು ಸಹಾಯ ಮಾಡುತ್ತದೆ. ಪೂಜಾರಿ ಎಂದರೆ ಅರ್ಚಕ ಎಂಬ ಅರ್ಥವಿದೆ. ಆದರೆ ಈ ಪದ ತುಳು ಪದವಲ್ಲ. ಆದರೆ ಈ ಪದವನ್ನು ತುಳುನಾಡಿಗೆ ಆಗಮಿಸಿದ ವಲಸಿಗರಿಂದ ಎರವಲು ಪಡೆಯಲಾಗಿದೆ. ಹಿಂದೆ ಕುಲಪುರೋಹಿತರಾಗಿದ್ದ ವರ್ಗಗಳೇ ಪೂಜಾರಿ ಎಂಬ ಹೆಸರಿನಿಂದ ಕರೆಯಲ್ಪಟ್ಟವು. ಈ ಹೆಸರು ಅರ್ಚಕರಿಗೆ ಪೂಜಾರಿ ಎಂಬ ಹೊಸ ವರ್ಗ ಸೃಷ್ಟಿಯಾಗಲು ಸಹಾಯ ಮಾಡಿತು. ತಮ್ಮ ಕುಟುಂಬಗಳು ವಿಸ್ತಾರವಾದಂತೆ ಮೊಗವೀರ ಸಮುದಾಯದಿಂದ ವಿವಿಧ ಕಾರಣಗಳಿಂದ ಪ್ರತ್ಯೇಕವಾಗಿ ಬಿಲ್ಲವ ಸಮುದಾಯದ ಭಾಗವಾಗಿ ಸೇರ್ಪಡೆಯಾದರು. ಈ ಸಮಯದಲ್ಲಿ ಮೊಗವೀರ ಸಮುದಾಯದವರು ತಮ್ಮಲ್ಲಿ ಹೊಸ ಅರ್ಚಕರನ್ನು ನೇಮಿಸಿಕೊಂಡರು. ಮಂಗಲ ಪದ ಬೌದ್ಧರು ಸಾಮಾನ್ಯವಾಗಿ ಉಪಯೋಗಿಸುತ್ತಿದ್ದ ಪಾಲಿಭಾಷೆಯ ಪದವಾಗಿದ್ದು ಪಾಲಿ ಭಾಷೆಯ ಪದದಿಂದ ಬಂದುದಾಗಿದೆ.

ಕ್ರಿಸ್ತ ವರ್ಷ ಆರಂಭಕ್ಕೆ ಮೊದಲು ಬೌದ್ಧ ಧರ್ಮದ ಉದಯವಾಗಿ ದೇಶದೆಲ್ಲೆಡೆ ಹಬ್ಬಿ ತುಳುನಾಡಿಗೂ ವ್ಯಾಪಿಸಿತ್ತು. ಈ ಕಾಲದ ಬದಲಾದ ಆಚರಣೆಯಂತೆ ತಾರಾ ಭಗವತಿ ಎಂಬ

ದೇವಿಯನ್ನು ಆರಾಧಿಸುತ್ತಿದ್ದರು. ಸ್ತ್ರೀ ಶಕ್ತಿಗಳ ಆರಾಧನೆಗೆ ಪ್ರಮುಖ ಆಸಕ್ತಿ ತೋರಿಸುತ್ತಿದ್ದ ಜನ ಸಾಹಸಿ ಮತ್ತು ಸಮುದಾಯ ರಕ್ಷಕ ಸ್ತ್ರೀಯರನ್ನು ದೇವರೆಂದು ಪೂಜಿಸಲು ಆರಂಭಿಸಿದರು. ಹೀಗೆಯೇ ಮೊಗವೀರರ ಪ್ರಮುಖ ಪವಾಡ ಸ್ತ್ರೀಯಾದ ಮಹಾಸ್ತ್ರೀಯಮ್ಮರನ್ನು ಮೊಗವೀರರು ಗುಡಿ ನಿರ್ಮಿಸಿ ಪೂಜಿಸಲಾರಂಭಿಸಿದರು. ಈ ದೇವಸ್ಥಾನ ಬಾರಕೂರಿನ ಬೆಣ್ಣೆಕುದ್ರು ಎಂಬಲ್ಲಿ ಇದೆ. ಈ ದೇವಸ್ಥಾನ ಜೀರ್ಣೋದ್ಧಾರವಾಗಿದ್ದು ಮೊಗವೀರರ ಪ್ರಮುಖ ದೇವಾಲಯವಾಗಿದೆ. ಮಹಾಸ್ತ್ರೀಯಮ್ಮ ಒಬ್ಬ ದೇವತೆಯಾಗಿದ್ದು ಕೆಲವು ಪಂಗಡಗಳು ಈ ದೇವತೆಯನ್ನು ಮಾರಿಯಮ್ಮ ಎಂಬ ಹೆಸರಿನಿಂದ ಪೂಜಿಸುತ್ತಾರೆ. ಅದೇ ರೀತಿ ಇನ್ನೂ ಕೆವು ಪಂಗಡಗಳು ಈ ಶಕ್ತಿಯನ್ನು ಮೋಹಿನಿ ಎಂಬ ಹೆಸರಿನಿಂದ ಪೂಜಿಸುತ್ತಾರೆ. (ಮಾಹಿತಿ ಮಹೇಂದ್ರ ಕಾಂಚನ್)

ಶಂಕರಾಚಾರ್ಯರು ಹಿಂದೂ ಧರ್ಮದ ಸುಧಾರಣೆ ಮಾಡುವ ಸಂದರ್ಭದಲ್ಲಿ ತುಳುನಾಡಿನಲ್ಲಿ ಆಚರಣೆಯಲ್ಲಿದ್ದ ತಾರಾ ಭಗವತಿ ದೇವಸ್ಥಾನಗಳನ್ನು ಆದಿಶಕ್ತಿ ದೇವಸ್ಥಾನಗಳನ್ನಾಗಿ ಪರಿವರ್ತಿಸಿದರು. ಶಕ್ತ ಆರಾಧನೆಯು ಕರಾವಳಿ ದೇವಸ್ಥಾನಗಳ ಪೂಜಾ ಪದ್ಧತಿಗಳ ಮೇಲೆ ಇದು ಪ್ರಭಾವ ಬೀರಿತ್ತು. ಮಹಿಷ ಮರ್ಧಿನಿ ದೇವಸ್ಥಾನ ಕುಂದಾಪುರ ಮತ್ತು ಮಹಾಲಕ್ಷ್ಮೀ ದೇವಸ್ಥಾನ ಉಚ್ಚಿಲ ಆ ಕಾಲದಲ್ಲಿ ನಿರ್ಮಾಣವಾದ ಶಕ್ತಿ ದೇವತೆಗಳ ಪ್ರಮುಖ ದೇವಸ್ಥಾನಗಳು.

ಕದ್ರಿ ದೇವಾಲಯ ಬೌದ್ಧ ಪರಂಪರೆಯಿಂದ ಶೈವ ನಾಥ ಪರಂಪರೆಗೆ ಬದಲಾದ ಸಮಯದಲ್ಲಿ ಮಚ್ಚೇಂದ್ರನಾಥ ಎಂಬ ಮೂಲತಃ ಬಂಗಾಳಿ ಮೀನುಗಾರ ಸಮುದಾಯವನ್ನು ಸ್ಥಾಪನೆ ಮಾಡಿದ್ದನು. ಕದ್ರಿ ದೇವಾಲಯಕ್ಕೂ ಮೊಗವೀರರಿಗೂ ಅವಿನಾಭಾವ ಸಂಬಂಧವಿದ್ದು ಹಿಂದಿನ ಕಾಲದಿಂದಲೂ ಮೊಗವೀರ ಸಮುದಾಯದ ಪ್ರಮುಖರಿಗೆ ಉತ್ಸವದ ಧ್ವಜಾರೋಹಣಕ್ಕೆ ಆಹ್ವಾನವಿರುತ್ತದೆ. ಅದೇ ರೀತಿ ಹಿಂದಿನ ಕಾಲದಿಂದಲೂ ಪ್ರತಿ ವರ್ಷ ಮೀನುಗಾರಿಕೆ ಆರಂಭಿಸುವ ದಿನ ಸಮುದ್ರಪೂಜೆಗೆ ನಾಥ ಪಂಥೀಯ ಮಠದ ಮಠಾಧೀಪತಿಯವರನ್ನು ಆಹ್ವಾನಿಸಲಾಗುತ್ತದೆ.

ಸಾವಿನ ಆಚರಣೆ

ಮೊಗವೀರ ಕುಟುಂಬದಲ್ಲಿ ಯಾರಾದರೂ ಸಾವನ್ನೊಪ್ಪಿದರೆ ಮೊದಲು ಕಾಯಿ ಒಡೆದು, ಅಕ್ಕಿ, ಕಾಯಿ ಕಟ್ಟುತ್ತಾರೆ. ನಂತರ ಶವಕ್ಕೆ ಸ್ನಾನ ಮಾಡಿಸಿ, ದೀಪ ಹಚ್ಚುತ್ತಾರೆ. ಹೆಣ್ಣು ಮುತ್ತೈದೆಯಾಗಿ ಸತ್ತರೆ ಅರಿಶಿಣ, ಕುಂಕುಮ, ಸೀರೆಯನ್ನು ಶವಕ್ಕೆ ಹಾಕುತ್ತಾರೆ. ಅದೇ ಪುರುಷರು ಸತ್ತರೆ ಆತನ ಹೆಂಡತಿಯ ಬಳೆ, ಮಾಂಗಲ್ಯ ಮತ್ತು ಕಾಲುಂಗರವನ್ನು ತೆಗೆಯುತ್ತಾರೆ. ನಂತರ ಮಕ್ಕಳು ಅಥವಾ ಸಂಬಂಧಕರು ಶವವನ್ನು ಸ್ಮಶಾನಕ್ಕೆ ಒಯ್ದು ಬೆಂಕಿಯಲ್ಲಿ ಸುಡುತ್ತಾರೆ. ನಂತರ ಮನೆಗೆ ತಿರುಗಿ ಬಂದು ಮನೆಯನ್ನು ಸಾರಿಸಿ, ಅಡುಗೆ ಮಾಡಿ ಊಟ ಮಾಡುತ್ತಾರೆ. ಸೂತಕ ಕಳೆದ ನಂತರ ಅಸ್ತಿಯನ್ನು ತೆಗೆದುಕೊಂಡು ತಿಥಿ ಕಾರ್ಯಕ್ರಮ ಮಾಡಲು ಗೋಕರ್ಣಕ್ಕೆ ಹೋಗುತ್ತಾರೆ. (ಮಾಹಿತಿ: ಡಾ. ಚಂದ್ರಕಲಾ ಎಸ್.)

ರಾಜಕೀಯ ಮತ್ತು ಶೈಕ್ಷಣಿಕ ವ್ಯವಸ್ಥೆ

ಮೊಗವೀರರು ಶೈಕ್ಷಣಿಕವಾಗಿ ಹಿಂದುಳಿದವರಾದ್ದರಿಂದ ಇವರು ರಾಜಕೀಯದಲ್ಲಿ ಭಾಗವಹಿಸುವುದು ಕಡಿಮೆ. ಮೊಗವೀರರು ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯತಿ ಮಟ್ಟದಲ್ಲೇ ಇದ್ದಾರೆ. ಅವಕಾಶಗಳ ಕೊರತೆಯೂ ಇದಕ್ಕೆ ಕಾರಣ ಇರಬಹುದು. ಆದರೆ ಕೆಲವರು ಉದ್ಯಮಿಗಳಾಗಿ ಹೆಸರು ಮಾಡಿದ್ದಾರೆ. ದೇಶ, ವಿದೇಶಗಳಲ್ಲಿ ಉದ್ದಿಮೆಯನ್ನು ಸ್ಥಾಪಿಸಿದ್ದಾರೆ. ಇನ್ನು ಉನ್ನತ ಹುದ್ದೆಗಳಲ್ಲಿ ಇರುವವರ ಸಂಖ್ಯೆಯೂ ಕಡಿಮೆ.

ಸರ್ಕಾರದ ಜಾತಿ ಪಟ್ಟಿ ಪ್ರಕಾರ ಹಿಂದುಳಿದ ವರ್ಗಕ್ಕೆ ಸೇರಿರುವ ಮೊಗವೀರರು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯವಾಗಿ ಅಷ್ಟೇನೂ ಪ್ರಭಾವಶಾಲಿಗಳಲ್ಲ. ಪ್ರಮೋದ ಮಧ್ವರಾಜ್‌ರವರು ಉಡುಪಿಯ ಶಾಸಕರಾಗಿ, ರಾಜ್ಯದ ಮಂತ್ರಿ ಮಂಡಳದಲ್ಲಿ ಸಚಿವರಾಗಿದ್ದರು. ಅವರನ್ನು ಹೊರತುಪಡಿಸಿದರೆ ರಾಜಕೀಯವಾಗಿ ಮೇಲೆ ಬಂದವರು ಯಾರು ಇಲ್ಲ.

ಇಂದಿನ ಯುವ ಪೀಳಿಗೆ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ನೀಡುತ್ತಿದ್ದಾರೆ. ಮೊಗವೀರರಲ್ಲಿ ಓದಿದವರ ಪ್ರಮಾಣ ಕಡಿಮೆ. ಇತ್ತೀಚಿನ ದಿನಗಳಲ್ಲಿ ಪ್ರಮಾಣ ಏರಿಕೆಯಾಗಿದೆ. ಶಿಕ್ಷಣ ಪಡೆಯುವುದರಿಂದ ಜೀವನ ಮಟ್ಟವನ್ನು ಸುಧಾರಿಸಲು ಸಾಧ್ಯ ಎಂಬ ಅರಿವು ಮೂಡಿದೆ. ಕೆಲವರು ಉನ್ನತ ಶಿಕ್ಷಣ ಪಡೆದು ವಿದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮತ್ತೆ ಕೆಲವರು ಪಟ್ಟಣಗಳಲ್ಲಿ ತಾಂತ್ರಿಕ ಕ್ಷೇತ್ರದಲ್ಲಿ, ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ನೀಡುತ್ತಿದ್ದಾರೆ. ಬಹಳ ಮುಖ್ಯವಾಗಿ ಸಾಂಪ್ರದಾಯಿಕ ಪಠ್ಯಕ್ರಮಗಳಿಗಿಂತ ಭಿನ್ನವಾಗಿ ಡಿಪ್ಲೋಮಾ, ನರ್ಸಿಂಗ್, ಕಂಪ್ಯೂಟರ್ ತರಬೇತಿ. ಪಾಲಿಟೆಕ್ನಿಕ್, ಲಾ ಮುಂತಾದ ವೃತ್ತಿಪರ ಕೋರ್ಸ್‌ಕಡೆ ಹೆಚ್ಚು ಒಲವನ್ನು ತೋರುತ್ತಿದ್ದಾರೆ. ಆದರೆ ಓದಿನ ನಂತರ ಇವರಿಗೆ ಸೂಕ್ತ ರೀತಿಯ ಉದ್ಯೋಗ ಗಿಟ್ಟಿಸಿಕೊಳ್ಳುವುದರಲ್ಲಿ ಪರದಾಡುತ್ತಿದ್ದಾರೆ. ಸಮುದ್ರ ಮೀನುಗಾರಿಕೆ ಬಹಳ ಅಪಾಯಕಾರಿಯಾದ ಕೆಲಸವಾದ್ದರಿಂದ ಇಂದಿನ ಯುವಕರು ಶಿಕ್ಷಣ ಪಡೆದು ಬೇರೆ ಬೇರೆ ಉದ್ಯೋಗ ಪಡೆಯುವಲ್ಲಿ ನಿರತರಾಗಿದ್ದಾರೆ.

ಕೃಷಿ-ಭೂ ಹಿಡುವಳಿ-ಪಶುಪಾಲನೆ

ಕೃಷಿಯಲ್ಲಿ ನಿಪುಣತೆಯನ್ನು ಹೊಂದಿದ ಭಾರತದ ಸಮುದಾಯಗಳಿಗೆ ಸ್ವಲ್ಪವೂ ಭೂಮಿಯ ಒಡೆತನ ಇಲ್ಲ ಎನ್ನುವುದು ಸ್ವತಂತ್ರ್ಯ ಭಾರತಕ್ಕೆ ನಾಚಿಕೆಯ ಸಂಗತಿ. ಇಂತ ಪರಿಸ್ಥಿತಿ ಇದ್ದರೂ ಮೊಗವೀರರು ತಮ್ಮ ತುಂಡು ಭೂಮಿಯಲ್ಲಿ ಕೃಷಿಯನ್ನು ಮಾಡಿ ಜೀವನ ಸಾಗಿಸುತ್ತಿದ್ದಾರೆ. ಇವರಿಗೆ ಸರ್ಕಾರದ ಸೌಲಭ್ಯಗಳು ಸರಿಯಾಗಿ ಸಿಗುತ್ತಿಲ್ಲ. ಅನೇಕ ಕುಟುಂಬಗಳು ಇನ್ನೂ ಕೂಲಿಯನ್ನೇ ನಂಬಿ ಬದುಕುತ್ತಿದ್ದಾರೆ. ಆದರೂ ಇಂದಿನ ದಿನದಲ್ಲಿ ಯುವಕರು ಪಟ್ಟಣದತ್ತ ಮುಖ ಮಾಡಿ ಹೋಟೆಲ್, ವ್ಯಾಪಾರಿ ಮಳಿಗೆಗಳಲ್ಲಿ, ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದಾರೆ. ಇದರಿಂದ ಮೊಗವೀರ ಕುಟುಂಬಗಳು ಉಸಿರಾಡುವಂತಾಗಿವೆ. ಇಂದಿನ ಮೊಗವೀರ ಕುಟುಂಬಗಳು ತಮಗೆ ಇರುವ ತುಂಡು ಭೂಮಿಯ ಸಾಗುವಳಿ ಮಾಡುವುದರೊಂದಿಗೆ ಪಶುಪಾಲನೆಯನ್ನು

ಮಾಡುತ್ತಾರೆ. ಕೆಲವರು ಹಸು, ಎಮ್ಮೆಯನ್ನು ಸಾಕಿ ಡೈರಿ ಉದ್ಯೋಗವನ್ನು ಮಾಡುತ್ತಿದ್ದಾರೆ. ಕೆಲವರು ಕೋಳಿ, ಕುರಿಗಳನ್ನು ಸಾಕುತ್ತಿದ್ದಾರೆ. ಒಟ್ಟಿನಲ್ಲಿ ಇಂದಿನ ಯುವಪೀಳಿಗೆ ಸ್ವಂತಉದ್ಯೋಗದತ್ತ ಮುಖ ಮಾಡುತ್ತಿರುವುದು ಸಂತೋಷದ ವಿಷಯ.

ಮುಕ್ರಿ ಸಮುದಾಯ

ಉತ್ತರ ಕನ್ನಡ ಜಿಲ್ಲೆಯ ಇತಿಹಾಸ, ಸಂಸ್ಕೃತಿ ಜನ ಜೀವನ, ಸಂಪ್ರದಾಯ, ಧಾರ್ಮಿಕ ಜೀವನ ವೈವಿಧ್ಯಮಯವಾಗಿದೆ. ನದಿ, ಬೆಟ್ಟ, ಹಳ್ಳ, ಕೊಳ್ಳ, ಸಮುದ್ರ ವಿವಿಧ ಪ್ರಾಣಿ ಪಕ್ಷಿಗಳ ಸಂಕುಲಗಳನ್ನು ತನ್ನೊಡಲಿನಲ್ಲಿ ಇಟ್ಟುಕೊಂಡಿದೆ. ಹನ್ನೊಂದು ತಾಲೂಕನ್ನು ಹೊಂದಿರುವ ಈ ಜಿಲ್ಲೆಯನ್ನು ಘಟ್ಟದ ಮೇಲಿನ ಮತ್ತು ಘಟ್ಟದ ಕೆಳಗಿನ ಎಂದು ಕರೆಯುವ ವಾಡಿಕೆ ಇದೆ. ಈ ಜಿಲ್ಲೆಯಲ್ಲಿ ಮಲೆನಾಡು, ಕರಾವಳಿ, ಬಯಲು ಸೀಮೆಯನ್ನು ಕಾಣಬಹುದಾಗಿದೆ. ಭಟ್ಕಳ, ಹೊನ್ನಾವರ, ಕುಮಟಾ, ಅಂಕೋಲಾ, ಕಾರವಾರ ಇವುಗಳು ಘಟ್ಟದ ಕೆಳಗಿನ ತಾಲೂಕುಗಳು. ಇವುಗಳನ್ನು ಕರಾವಳಿ ಎಂದು ಕರೆಯುತ್ತಾರೆ. ಇಲ್ಲಿ ಅಪಾರವಾದ ಪ್ರಕೃತಿ ಸಂಪತ್ತು ಇರುವಂತೆ ಅದ್ಭುತವಾದ ಪರಿಸರವನ್ನು ಅದಕ್ಕನುಗುಣವಾದ ವೈವಿಧ್ಯಮಯ ಸಂಸ್ಕೃತಿಯ ಸಮುದಾಯಗಳನ್ನು ಹೊಂದಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಹಿಂದಿನಿಂದಲೂ ಸಾರಿಗೆ ಸಂಪರ್ಕ ಸಮರ್ಪಕವಾಗಿಲ್ಲದ ಕಾರಣ ಗುಡ್ಡ, ನದಿತೀರ, ಬೆಟ್ಟ, ಬಯಲು ಪ್ರದೇಶದಲ್ಲಿ ವಾಸ್ತವ್ಯಗೊಂಡ ಸಮುದಾಯಗಳು ತಮ್ಮದೇ ಆದ ಭಾಷೆ, ಸಂಸ್ಕೃತಿ, ಆಚಾರ ವಿಚಾರಗಳನ್ನು ರೂಢಿಸಿಕೊಂಡು ಬಂದರು. ಒಂದೇ ಸಮುದಾಯದವರೇ ಆದರೂ ಅವರು ವಾಸಿಸುವ ಪರಿಸರಕ್ಕೆ ಅನುಗುಣವಾಗಿ ತಮ್ಮದೇ ಆದ ನಡೆ ನುಡಿಗಳನ್ನು ರೂಢಿಸಿಕೊಂಡಿದ್ದಾರೆ. ರಾಜಕೀಯ ವಿದ್ಯಮಾನಗಳು ಜನರ ಹೊರ ಬದುಕಿನಲ್ಲಿ ಸಾಕಷ್ಟು ಬದಲಾವಣೆ ತಂದಿದ್ದರೂ ಅಂತಸ್ಥವಾಗಿದ್ದ ಸಂಸ್ಕೃತಿ, ಆಚರಣೆಗಳು, ನಂಬಿಕೆ, ಜೀವನ ಹಾಗೆ ಉಳಿಸಿಕೊಂಡು ಬಂದಿದ್ದಾರೆ. ಮುಕ್ರಿಯವರು ಉತ್ತರ ಕನ್ನಡ ಜಿಲ್ಲೆಯ ಕುಮಟಾ, ಹೊನ್ನಾವರದಲ್ಲಿ ದಟ್ಟವಾಗಿ ಮತ್ತು ಶಿರಸಿ, ಸಿದ್ದಾಪೂರ ತಾಲೂಕುಗಳಲ್ಲಿ ವಿರಳವಾಗಿ ನೆಲೆಸಿದ್ದಾರೆ. ನೈಸರ್ಗಿಕ ಸಂಪತ್ತಿನಿಂದ, ಪ್ರಾಕೃತಿಕ ಸೌಂದರ್ಯದಿಂದ ಶ್ರೀಮಂತವಾಗಿರುವ ಈ ಜಿಲ್ಲೆಯಲ್ಲಿ ಬಡತನ ರೇಖೆಗಳಿಗಿಂತ ಕೆಳಗಡೆ ಪ್ರೀತಿಯ ಸಿರಿವಂತಿಕೆಯ ಜೀವನ ನಡೆಸುತ್ತ ಬಂದಿರುವ ಸಮುದಾಯವೇ ಈ ಮುಕ್ರಿಯರು. ಸದಾಕಾಲ ನೀರಿನ ಪೂರೈಕೆ ಇರುವ, ಸಮಶೀತೋಷ್ಣ ಹವಾಮಾನ ಹೊಂದಿರುವ ಕುಮಟಾ, ಹೊನ್ನಾವರ ತಾಲೂಕಿನಲ್ಲಿ ಮುಕ್ರಿಯರು ಗುಂಪು ಗುಂಪಾಗಿ ವಾಸಿಸುತ್ತಿದ್ದಾರೆ. ಅಡಿಕೆ ಎಂಬ ಚಿನ್ನದ ಬೆಳೆ ಬೆಳೆಯುವ ನಾಡಿನಲ್ಲಿ ದುಡಿಯುವ ಎತ್ತುಗಳಂತೆ, ಊಹಿಸಲು ಅಸಾಧ್ಯವಾದ ಬಡತನ, ಹಸಿವಿಯಿಂದ ದಾರುಣವಾದ ಬದುಕನ್ನು ಬದುಕುತ್ತಿದ್ದಾರೆ.

ಮುಕ್ರಿ ಶಬ್ದದ ವಿವೇಚನೆ

ಕೆಲವು ಕೃತಿಗಳ ಆಧಾರದ ಮೇಲೆ ಮುಕ್ರಿ ಎಂಬ ಶಬ್ದವನ್ನು ವಿವರಿಸಲು ಪ್ರಯತ್ನಿಸಿದಾಗ- "ಭೂಮಿಯ ಪುತ್ರರಾದ ಮುಕ್ರಿಗಳು ತಿರುಪತಿಯ ಕಡೆಯಿಂದ ಬಂದುದಾಗಿ ಕೆಲವು ವಿದ್ವಾಂಸರು ಹೇಳುತ್ತಾರೆ. ಈ ಜನರು ತಿರುಪತಿಯ ತಿಮ್ಮಪ್ಪನನ್ನು ಪೂಜಿಸುವುದೇನೋ ನಿಜ. ಆದರೆ ಆಂಧ್ರಪ್ರದೇಶದಿಂದ ವಲಸೆ ಬಂದಿರಬೇಕೆಂಬ ವಾದವನ್ನು ಎತ್ತಿ ಹಿಡಿಯಲು ಯಾವ ಆಧಾರವೂ ಇಲ್ಲ. ಈ ಜನರು ಕಾಣಲು ಆದಿವಾಸಿಗಳಂತೆ ಕಾಣುತ್ತಾರೆ. ಅಲ್ಲದೇ ಉಳಿದವರು ಇವರನ್ನು ಅಸ್ಪ್ರಶ್ಯರೆಂದು ತಿಳಿಯುತ್ತಾರೆ."[೨] ಈ ಹೊತ್ತಿನ ಪರಿಸ್ಥಿತಿಯನ್ನು ಗಮನಿಸಿದರೆ ಹೆಸರಿಗೆ ಮಾತ್ರ ಗೌಡರಾಗಿದ್ದರು. ಆದರೆ ಒಪ್ಪತ್ತಿನ ಊಟಕ್ಕೂ ಗತಿ ಇಲ್ಲದ ಇವರಿಗೆ ಈ ಹೆಸರು ಅನ್ವರ್ಥಕವಾಗಿರಬಹುದಾದ ಸಾಧ್ಯತೆಗಳಿವೆ.

ಇವರು ಮೂಲತಃ ಹಾಲಕ್ಕಿ ಒಕ್ಕಲಿಗರಾಗಿದ್ದರಂತೆ. ಆದರೆ ಹಾಲಕ್ಕಿಗಳಿಗೆ ನಿಷಿದ್ಧವಾದ ಮುಕ್ಕ, ಮುಕ್ಕು ಎಂದರೆ ಕಲಂಕಿತ. ಜಾತಿಯಿಂದ ಹೊರಹಾಕಲ್ಪಟ್ಟವು ಎಂದರ್ಥ. ಮುಕ್ಕ ಎಂಬುದು ಮೂದಲಿಕೆಯ ಅರ್ಥದಲ್ಲಿ ಬಳಸಲಾಗುತ್ತದೆ. ದೂಷಿತರಾಗಿ ಜಾತಿಯಿಂದ ಹೊರಹಾಕಲ್ಪಟ್ಟವರು ಎಂದರ್ಥದಲ್ಲಿ ಮುಕ್ಕರು, ಮುಕ್ಕಾದವರು ಎಂದಾಗಿರಲೂಬಹುದು. ಮುಕ್ಕಾಗುವುದು ಎಂದರೆ ಹಾಳಾಗುವುದು ಸಮಾಜದಲ್ಲಿ ದೂಷಣೆಗೆ ಒಳಗಾದವನು ಎನ್ನುವ ಅರ್ಥದಲ್ಲಿ ಪರಿಭಾವಿಸಿ ಈ ಪದವನ್ನು ಬಳಸಿರುವ ಸಾಧ್ಯತೆಗಳಿವೆ.

ಮುಕ್ಕ ಎಂದರೆ ಮುಗ್ಧ ಎಂದರ್ಥ. ಪ್ರಾಯಶಃ ಇವತ್ತಿನ ಮುಕ್ರಿಗಳ ಸ್ಥಿತಿಯನ್ನು ಗಮನಿಸಿದರೆ ಈ ವಾಕ್ಯ ಖಂಡಿತಾ ಸರಿ ಎನಿಸುತ್ತದೆ. ಜಗತ್ತಿನ ಆಧುನಿಕತೆಯತ್ತ ನಾಗಾಲೋಟದಲ್ಲಿ ಓಡುತ್ತಿದ್ದಾಗ ಮುಕ್ರಿಯರು ಇಂತಹ ಸುಳಿಯಲ್ಲಿ ಸಿಲುಕಿಕೊಳ್ಳದೆ ತಮ್ಮಪಾಡಿಗೆ ತಾವು ಇರುವುದನ್ನು ನೋಡಿದರೆ ಇವರ ಬೆವರ ಹನಿಗಳು ಸಾಲಾಗಿ ಹರಿದು ಸಣ್ಣ ತೊರೆಯಾಗಿ, ನದಿಯಾಗಿ ಸಮುದ್ರವನ್ನು ಸೇರಿರುವುದರಿಂದಲೇ ಸಮುದ್ರದ ನೀರು ಉಪ್ಪಾಗಿರುವ ಸಾಧ್ಯತೆಯಿದೆ ಎನಿಸುತ್ತದೆ.

ಸಾಮಾಜಿಕ ವ್ಯವಸ್ಥೆ

ಬಳಿಗಳು

ಭಾರತದ ಆದಿವಾಸಿಗಳಲ್ಲಿ ಸಾಮಾನ್ಯ ಸಂಗತಿಯಾದ ಬಳಿ ಪದ್ಧತಿ ಮುಕ್ರಿಗಳಲ್ಲೂ ಇದೆ.ಅದು ರಕ್ತ ಸಂಬಂಧ ನಿರ್ಧರಿಸುವಾಗ ಪ್ರಮುಖ ಪಾತ್ರ ವಹಿಸುತ್ತಾರೆ. ಈ ಬಳಿಗಳಲ್ಲಿ ಕೆಲವೊಂದು ಪ್ರಾಣಿಗಳು ಮತ್ತು ಸಸ್ಯಗಳ ಹೆಸರಿವೆ. ಮುಕ್ರಿಯಂತಹ ಸಮುದಾಯಗಳು ತಮ್ಮ ಬದುಕಿನ ನೆಲೆಗಳನ್ನು ಕಾಡು ಮತ್ತು ಅದಕ್ಕೆ ಸಂಬಂಧ ಪಟ್ಟ ಸ್ಥಳಗಳಲ್ಲಿ ಕಂಡುಕೊಂಡಿರುವಾಗ ಅಲ್ಲಿರುವ ಪ್ರಾಣಿ ಪಕ್ಷಿಗಳ ಹೆಸರಲ್ಲಿ ತಮ್ಮ ಕುಲ ಮೂಲವನ್ನು ಹುಡುಕಿಕೊಳ್ಳುವುದು ಸಹಜವಾದುದೆ. ಅಂದರೆ ಆಯಾ ಪ್ರಾಣಿಗಳಿಗೆ ಮತ್ತು ವನಸ್ಪತಿಗಳಿಗೆ ತಮ್ಮ ಕುಲವನ್ನು ಸೇರಿಸಿಕೊಂಡು ಬೇರೆ ಮಾಡಿಕೊಳ್ಳುತ್ತಾರೆ. ಮುಕ್ರಿಯವರ ಹತ್ತು ಬಳಿಗಳು ಯಾವುವೆಂದರೆ ೧. ಆನೆ ಬಳಿ, ೨. ತೋಳವನ ಬಳಿ, ೩. ಶೆಟ್ಟಿ ಬಳಿ, ೪. ಹಂದಿ ಬಳಿ, ೫. ದೈವನ ಬಳಿ, ೬. ಕನ್ನೆ ಬಳಿ,

೭. ಶಿರಿನ ಬಳಿ, ೮. ಶೆಂಡಿ ಬಳಿ, ೯. ಕೌಡ್ಲಿ ಬಳಿ, ೧೦. ಹೆಬ್ಬಳ ಬಳಿ. ಹೆಚ್ಚಾಗಿ ಈ ಬಳಿಗಳ ಹೆಸರು ಆದಿವಾಸಿ ಸಮುದಾಯಗಳಲ್ಲಿ ಮಾತ್ರ ಕಾಣಲು ಸಾಧ್ಯ. ಈ ಬಳಿಯಲ್ಲಿ ಬರುವ ಪ್ರಾಣಿ ಅಥವಾ ವೃಕ್ಷವನ್ನು ಸಾಯಿಸುವುದಿಲ್ಲ. ಅವುಗಳನ್ನು ಪೂಜ್ಯ ಭಾವನೆಯಿಂದ ನೋಡುತ್ತಾರೆ. ಆ ವೃಕ್ಷಗಳನ್ನು ಕಡಿಯುವುದಿಲ್ಲ. ಆ ಮರದ ಸೊಪ್ಪನ್ನೂ ಬಳಸುವುದಿಲ್ಲ. ಹಾಗೆ ಪ್ರಣಿಗಳನ್ನೂ ಕೊಲ್ಲುವುದಿಲ್ಲ. ಬೇರೆಯಾರಾದರೂ ಕೊಂದರೂ ಅದನ್ನು ತಿನ್ನುವುದಿಲ್ಲ. ಒಂದೇ ಬಳಿಯಲ್ಲಿ ಮದುವೆ ಕಾರ್ಯವನ್ನು ಮಾಡುವುದಿಲ್ಲ. ಬಳಿಯ ಬಗ್ಗೆ ಈಗೀನ ಹಿರಿಯರಿಗೂ ಇದರ ಗಂಧ ಗಾಳಿ ಇಲ್ಲ. ಮೊದಲು ಮುಕ್ರಿಗಳ ಸೀಮೆಯ ಬುದವಂತರು ಮದುವೆ, ಚಡಂಗಗಳನ್ನು ನೇರವೇರಿಸುತ್ತಿದ್ದರು. ಆದರೆ ಇಂದು ಪುರೋಹಿತರ ಆಗಮನದಿಂದ ಕಾರ್ಯಕ್ರಮಗಳನ್ನು ನಡೆಸುವ ಪದ್ಧತಿ ಜಾರಿಯಲ್ಲಿದೆ.

ನೆಲೆ

ಇವರು ಮೂಲತಃ ಸಮುದ್ರದ ತೀರದಲ್ಲಿ ವಾಸಿಸುತ್ತಿದ್ದರು. ಆದರೆ ಇಂದು ಸಾಮಾಜಿಕ ಮೌಲ್ಯಗಳು ಬದಲಾದಂತೆ ಇವರು ಊರಿನ, ಕೇರಿಯ ಮಧ್ಯದಲ್ಲಿ ಕಾಣಸಿಗುತ್ತದೆ. ಆದಗ್ಯೂ ಹೆಚ್ಚಿನ ಮುಕ್ರಿಯರು ಊರಿನ ಹೊರ ಭಾಗದಲ್ಲಿ ವಾಸಿಸುವ ರೂಢಿ ಇನ್ನೂ ಜೀವಂತವಾಗಿದೆ. ಮೊದಲು ಹೆಚ್ಚಾಗಿ ಅವಿಭಕ್ತ ಕುಟುಂಬದಲ್ಲಿ ವಾಸಿಸುತ್ತಿದ್ದ ಮುಕ್ರಿಯರು ಇಂದು ಸಣ್ಣ ಸಣ್ಣ ಕುಟುಂಬಗಳಾಗಿರುವುದನ್ನು ಕಾಣಬಹುದಾಗಿದೆ. ವಿಭಕ್ತ ಕುಟುಂಬಗಳಾಗಿ ಬದಲಾದರೂ ಪರಸ್ಪರ ದೂರ ಉಳಿಯದೆ ಒಂದೇ ಸ್ಥಳದಲ್ಲಿ ಒಂದೇ ಸ್ಥಳದಲ್ಲಿ ಸಹಕಾರ ಮತ್ತು ಸಹಬಾಳ್ವೆಯ ಮನಸ್ಸಿನಿಂದ ವಾಸಿಸಲು ತೊಡಗಿದ್ದಾರೆ.

ಕರಾವಳಿ ಪ್ರದೇಶದಲ್ಲಿ ಹೆಚ್ಚಾಗಿ ಭತ್ತ, ತೆಂಗಿನ ಮರಗಳು ಬೆಳೆಯುವುದರಿಂದ ಮನೆಯ ಮೇಲೆ ತೆಂಗಿನಗರಿಗಳಿಂದ ನಿರ್ಮಿತವಾದ ತಡಸಲುಗಳನ್ನು ಹರಡಿ ಅದರ ಜೊತೆಗೆ ಭತ್ತದ ಹುಲ್ಲನ್ನು ಹೊದಿಸುತ್ತಾರೆ. ಇಂದಿನ ದಿನಗಳಲ್ಲಿ ಹಂಚಿನ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ಬೆರಳೆಣಿಕೆಷ್ಟು ಜನರು ಆರ್.ಸಿ.ಸಿ. ಮನೆಯನ್ನು ಹೊಂದಿದ್ದಾರೆ. ಹೆಚ್ಚಾಗಿ ಇವರು ಸರ್ಕಾರದ ಜನತಾ ಮನೆಗಳಲ್ಲಿಯೇ ವಾಸಮಾಡುತ್ತಿದ್ದಾರೆ. ಹೆಲವು ಕಡೆ ಈ ಮನೆಗಳು ಶಿಥಿಲಾವಸ್ಥೆ ತಲುಪಿ ಬೀಳುವ ಹಂತಕ್ಕೆ ಹೋಗಿದೆ. ಮೂವತ್ತು ವರ್ಷಗಳ ಹಿಂದೆ ಕಟ್ಟಿದ ಈ ಮನೆ ಬಣ್ಣ-ಸುಣ್ಣಗಳಿಲ್ಲದೇ ವಿಕಾರವಾಗಿ ಮುಕ್ರಿಗಳ ಜೀವನದಂತೆ ಕಾಣುತ್ತದೆ. ಇದಕ್ಕಿಂತ ಮುಖ್ಯವಾಗಿ ಅವರದೇ ಆದ ಮನೆ ಇಲ್ಲ. ಈಗ ಮನೆ ಕಟ್ಟಿರುವ ಜಾಗ ಯಾರದೋ ಶ್ರೀಮಂತರದೋ ಅಥವಾ ಸರ್ಕಾರದ್ದೋ, ಸಮುದ್ರದ ಅಂಚೋ ಆಗಿದೆ.

ಮುಕ್ರಿಯರು ವಾಸಿಸುತ್ತಿದ್ದ ಪ್ರದೇಶವನ್ನು ಮುಕ್ರಿಕೊಪ್ಪ ಎಂದು ಮೊದಲು ಕರೆಯುತ್ತಿದ್ದರು. ಅವರನ್ನು ತೀರಾ ಕಿಳಾಗಿ ಕಾಣುತ್ತಿದ್ದರಿಂದ ಅನಿವಾರ್ಯ ಎಂಬಂತೆ ಗುಡ್ಡದ ಬಯಲು ಪ್ರದೇಶದಲ್ಲಿ ಹಾಗೂ ಸಮುದ್ರದ ಅಂಚಿನಲ್ಲಿ ಹಿಂಡು ಹಿಂಡಾಗಿ ಮನೆಯನ್ನು ನಿರ್ಮಿಸಿಕೊಳ್ಳುತ್ತಾರೆ.

ನಿಲುವು ಮತ್ತು ಸ್ವಭಾವ

ಮುಕ್ರಿಯವರು ಕಪ್ಪು ಬಣ್ಣದ ಕುಳ್ಳ ದೇಹದವರು. ನಿಲುವಿನಲ್ಲಿ ದ್ರಾವಿಡ ಜನರ ಚಹರೆಯ ಹೋಲಿಕೆಯನ್ನು ಕಾಣಬಹುದಾಗಿದೆ. ಸ್ವಲ್ಪ ಮುಂಚಾಚಿದ ದವಡೆ, ಹಿಂದಕ್ಕೆ ಹೋದ ಹಣೆ. ಅಂತಹ ಸ್ಫುಟವಾದ ನಿಲುವೇನಲ್ಲ. ದೃಢಕಾಯರೂ ಅಲ್ಲದ ಸಣ್ಣ ದೇಹದವರು. ಶ್ರಮವಹಿಸಿ ದುಡಿಯುವವರಾದರೂ ದಷ್ಟ-ಪುಷ್ಟ ಕಾಯದವರಲ್ಲ. ಸ್ವಲ್ಪ ಪ್ರಮಾಣದಲ್ಲಿ ಸಿದ್ಧಿ ಚಹರೆಯನ್ನು ಹೋಲುತ್ತಾದರೂ ಹಾಗೇ ಪೂರ್ತಿಯಾಗಿ ಹೇಳಲಾರದು. ಮುಕ್ರಿಯರು ಸೌಮ್ಯ ಮತ್ತು ನಾಚಿಕೆ ಸ್ವಭಾವದವರು. ತೀರಾ ಮಾತುಗಾರರಲ್ಲ. ಅವರ ನಾಚಿಕೆ ಸ್ವಭಾವವೇ ಅವರನ್ನು ಜನಸಮುದಾಯದಿಂದ ದೂರ ಇಟ್ಟಿದೆ. ಒಡೆಯರು ಅವರನ್ನು ಹೀನಾಯವಾಗಿ ದುಡಿಸಿ ಕೊಂಡಿದ್ದರಿಂದ ಈಗ ಅವರು ಅಂತಹ ದುಡಿಮೆಗೆ ಒಗ್ಗಿ ಹೋಗಿದ್ದಾರೆ. ಇತ್ತೀಚಿನ ಕೆಲವರು ಈ ರೀತಿ ದುಡಿಯದೇ ಇರುವುದರಿಂದ ಅವರಿಗೆ ಸೋಮಾರಿ ಎಂಬ ಪಟ್ಟ ಕಟ್ಟಲು ಪ್ರಯತ್ನಿಸಲಾಗುತ್ತಿದೆ.

ಉಡುಗೆ-ತೊಡುಗೆ

ಇವರ ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟ ಸ್ಥಿತಿಯಲ್ಲಿ ಇರುವುದರಿಂದ ಇವರ ವೇಷ ಭೂಷಣಗಳು ಅತೀ ಸರಳವಾಗಿದೆ. ಮಕ್ಕಳಂತೂ ಬಟ್ಟೆಯೇ ಇಲ್ಲದೆಯೆ ಬೆತ್ತಲಾಗಿರುವುದೇ ಹೆಚ್ಚಾಗಿ ಕಾಣಬಹುದು. ಆದರೆ ಇತ್ತೀಚಿನ ದಿನಗಳಲ್ಲಿ ಬಟ್ಟೆಗಳನ್ನು ಕಾಣುತ್ತಿದ್ದಾರೆ. ಗಂಡು ಮಕ್ಕಳು ಮುಂಗಚ್ಚೆಯನ್ನು ಹಾಕುತ್ತಿದ್ದರು. ಈಗಲೂ ಮನೆಗೆಲಸದಲ್ಲಿದ್ದಾಗ ಮತ್ತೆ ಕೆಲಸಕ್ಕೆ ಹೊರಟಾಗ ಇದೇ ಬಟ್ಟೆಯನ್ನೇ ಕಾಣಬಹುದು. ಈಗ ಎಲ್ಲರೂ ಚಡ್ಡಿ ಹಾಕುತ್ತಿದ್ದು ಹೊಸ ತಲೆಮಾರಿನ ಯುವಕರು ಪ್ಯಾಂಟ್ ಮತ್ತು ಬರ್ಮುಡಾವನ್ನು ಹಾಕುವುದನ್ನು ಕಾಣಬಹುದಾಗಿದೆ. ಗಂಡಸರು ಪಂಜೆ, ಲುಂಗಿ, ಲಂಗೋಟಿ ಧರಿಸುತ್ತಾರೆ. ಮೈಮೇಲೆ ತಿಳಿ ಬಣ್ಣದ ಅಂಗಿಯನ್ನು ಧರಿಸುತ್ತಾರೆ. ತಲೆಗೆ ವಸ್ತ್ರವನ್ನು ಸುತ್ತಿಕೊಳ್ಳುತ್ತಾರೆ. ಹೆಣ್ಣು ಮಕ್ಕಳು ಸಣ್ಣ ಸೀರೆಯ ತುಂಡನ್ನು ತೊಟ್ಟುಕೊಂಡು ಮೇಲ್ಗಡೆ ಚಿಕ್ಕ ರವಕೆಯನ್ನು ಹಾಕುತ್ತಾರೆ. ಸ್ತ್ರೀಯರು ಹಬ್ಬ ಹರಿದಿನಗಳಲ್ಲಿ ಸೀರೆಯನ್ನು ಉಡುತ್ತಾರೆ. ಸೀರೆಯ ಒಂದು ತುದಿಯನ್ನು ಎಡ ಬದಿಯ ಕುತ್ತಿಗೆಯ ಬಳಿ ತಂದು ಹಿಂಭಾಗದಲ್ಲಿ ಗಂಟು ಕಟ್ಟುತ್ತಾರೆ. ಇದನ್ನು ಕತ್ತರಿ ಹಾಕುವುದು ಅಥವಾ ಸೆರಗು ಹಾಕುವುದು ಎಂದು ಹೇಳುತ್ತಾರೆ. ಆಧುನಿಕತೆಗೆ ಒಳಗಾದ ಹೆಂಗಸರು ಹೆಗಲ ಮೇಲಿನಿಂದ ಸೆರಗನ್ನು ಇಳಿಬಿಟ್ಟು ಇತರ ಜಾತಿಯವರಂತೆ ಸೀರೆ ಉಡಲು ತೊಡಗಿದ್ದಾರೆ.

ವಸತಿ ವ್ಯವಸ್ಥೆ

ಸುಂದರವಾದ ವನರಾಶಿಯ ಒಳಗಿನ ಮುಕ್ರಿ ಕೊಪ್ಪದ ಗುಂಪುಗುಂಪಾದ ಮನೆ ದೂರದಿಂದ ನೋಡಲು ಅತ್ಯಂತ ಸುಂದರವಾಗಿ ಕಾಣಿಸುತ್ತದೆ. ಆದರೆ ಒಳಗೆ ಹೋಗಿ ನೋಡಿದರೆ ಅವರ ಧಾರುಣವಾದ ಬದುಕನ್ನು ಕಾಣಬಹುದಾಗಿದೆ. ಸಮುದ್ರದ ದಡದಲ್ಲಿ, ನೀರಿನ ಹರಿವು ಇರುವಲ್ಲಿ ಮುಕ್ರಿಗಳು ಹೆಚ್ಚಾಗಿ ಮನೆಯನ್ನು ನಿರ್ಮಿಸಿಕೊಳ್ಳುವುದನ್ನು ಕಾಣಬಹುದು. ಹೆಚ್ಚಾಗಿ ತೆಂಗಿನ ಮಡಿಲನ್ನು ಹೊದ್ದ ಮನೆಗಳೇ ಹೆಚ್ಚು. ಅಡಿಕೆ ದಬ್ಬೆಯನ್ನು ತಟ್ಟಿಯ ಹಾಗೆ ಕಟ್ಟಿ ಅದನ್ನೇ

ಮನೆಯ ಗೋಡೆಗಳಂತೆ ಬಳಸಿದ ಮನೆಗಳನ್ನೂ ಕಾಣಬಹುದಾಗಿದೆ. ಅಡಿಕೆಯ ದಬ್ಬೆಗೆ ಮಣ್ಣನ್ನು ಬಳಿದು ಅದನ್ನೂ ಗೋಡೆಯಂತೆ ಬಳಸುವುದು ಉಂಟು. ಹೆಚ್ಚಾಗಿ ಮುಕ್ರಿಯರು ಈಗ ಸರ್ಕಾರ ನಿರ್ಮಿಸುವ ಜನತಾ ಮನೆಯ ಹೋಲಿಕೆಯ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ಹೆಚ್ಚಾಗಿ ಪೂರ್ವದಿಕ್ಕಿಗೆ ಮತ್ತು ಉತ್ತರದಿಕ್ಕಿಗೆ ಮನೆಯ ಬಾಗಿಲು ಬರುವಂತೆ ಕಟ್ಟುತ್ತಾರೆ. ದಕ್ಷಿಣದಿಕ್ಕಿಗೆ ಮಾತ್ರ ಮನೆಯನ್ನು ಕಟ್ಟುವುದಿಲ್ಲ. ನಾಲ್ಕು ಮಾಡಿನ ಮನೆ ಕಾಣುವುದು ಅಪರೂಪ. ಅನುಕೂಲ ಇರುವವರು ಮಾತ್ರ ನಾಲ್ಕು ಮಾಡಿನ ಮನೆಯನ್ನು ಕಟ್ಟುತ್ತಾರೆ. ಸರ್ಕಾರಿ ನೌಕರಿಯಲ್ಲಿ ಇರುವವರು ಕೆಲವರು ಆರ್.ಸಿ.ಸಿ. ಮನೆಯನ್ನು ನಿರ್ಮಿಸಿಕೊಂಡಿದ್ದಾರೆ. ಬಹುತೇಕ ಮನೆಗಳು ಹಸಿ ಇಟ್ಟಂಗಿಗಳಿಂದ ಕಟ್ಟಿದ್ದು ಮನೆಯ ಮೇಲೆ ತೆಂಗು ಅಥವಾ ಅಡಿಕೆ ಮರವನ್ನು ಉಪಯೋಗಿಸಿ ಕಂಬಗಳನ್ನು ನಿಲ್ಲಿಸಿ ಚಪ್ಪರದ ಆಸರೆಗಾಗಿ ಉಪಯೋಗಿಸುತ್ತಾರೆ. ಮನೆಯ ಮುಂದಿನ ಮಾಡು ತುಂಬಾ ಇಳಿ ಬಿದ್ದಿರುತ್ತದೆ. ಎತ್ತರದ ಮಾಡನ್ನು ನಿರ್ಮಿಸಲಲು ಹೆಚ್ಚು ಹಣ ಬೇಕೆಂದೋ, ಗಾಳಿಬಿಸಿ ಮನೆಯ ಮಾಡು ಹಾರಿ ಹೊಗುತ್ತದೆಂದೋ, ಮಳೆಯ ಜಡಿಹನಿಗಳಿಂದ ರಕ್ಷಿಸಿಕೊಳ್ಳುವುದಕ್ಕೋ ಈ ಯೋಜನೆ ಮಾಡಿಕೊಂಡಿರಬಹುದು. ಮನೆಯ ಒಳಗೆ ಮೂರು ಭಾಗಗಳನ್ನು ಕಾಣಬಹುದು. ಒಂದು ಅಡಿಗೆ ಕೋಣೆ, ಎರಡನೇಯದು ಮಲಗುವ ಕೋಣೆ, ಸಂಗ್ರಹ ಕೋಣೆ. ಅಡಿಗೆ ಕೋಣೆಯಲ್ಲಿಯೇ ಹೆರಿಗೆ, ತೊಟ್ಟಿಲನ್ನು ಕಟ್ಟುವುದು ಎಲ್ಲವೂ ಅಲ್ಲೆ. ಹೆಚ್ಚಾಗಿ ಮನೆಗಳಿಗೆ ಕಿಟಕಿಗಳು ಇರುವುದಿಲ್ಲ. ಇತ್ತೀಚಿಗೆ ಒಂದೋ ಎರಡೋ ಕಿಟಕಿಗಳನ್ನು ಇಡುವುದನ್ನು ರೂಢಿಸಿಕೊಂಡಿದ್ದಾರೆ. ಹೆಚ್ಚಾಗಿ ಮನೆಯ ಮುಂಬಾಗಿಲು ಕಚ್ಚಾ ಮರದಿಂದ ನಿರ್ಮಿಸಲಾಗಿರುತ್ತದೆ. ಈ ಬಾಗಿಲು ಕಲಾಕುಸರಿಗಳನ್ನು ಹೊಂದಿರುವುದಿಲ್ಲ. ಮನೆಯ ಹಿಂಬದಿಗೆ ಬಾಗಿಲು ಇರುವುದಿಲ್ಲ. ಸ್ನಾನದ ಮನೆಗಳನ್ನು ಇಲ್ಲಿ ಕಾಣುವುದು ಅಪರೂಪ. ಅವರು ಪ್ರತಿ ದಿನ ಸ್ನಾನ ಮಾಡುವುದು ಅಪರೂಪ. ಹೆಚ್ಚಾಗಿ ಕೂಲಿ ಕೆಲಸದಿಂದ ಬಂದ ನಂತರ ಸಂಜೆ ಹೊತ್ತಿಗೆ ಸ್ನಾನ ಮಾಡುತ್ತಾರೆ. ತೆಂಗಿನ ಮರದ ಬುಡದಲ್ಲಿ ಚಿಕ್ಕ ಒಲೆಯನ್ನು ನಿರ್ಮಿಸಿ ಮಣ್ಣಿನಿಂದ ಮಾಡಿದ ಬಾನಿಯಲ್ಲಿ ನೀರು ಕಾಯಿಸಿ ಸ್ನಾನ ಮಾಡುತ್ತಾರೆ. ಇತ್ತೀಚಿಗೆ ಅಲ್ಯೂಮಿನಿಯಂ, ತಾಮ್ರದ ಹಂಡೆಗಳನ್ನು ಬಳಸುತ್ತಿದ್ದಾರೆ. ಕೆಲವು ಮನೆಗಳಲ್ಲಿ ಸ್ನಾನದ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಉರುವಲಿಗೆ ಕಟ್ಟಿಗೆಯನ್ನು ಬಳಸುತ್ತಾರೆ. ಹೆಂಗಸರು ಕಾಡಿಗೆ ಹೋಗಿ ಕಟ್ಟಿಗೆ ತಂದು ಉಪಯೋಗಿಸುತ್ತಾರೆ. ಕೆಲವರು ಈ ಕಟ್ಟಿಗೆಯನ್ನು ಮಾರಿ ಜೀವನ ನಿರ್ವಹಣೆಯನ್ನು ಮಾಡಿಕೊಳ್ಳುತ್ತಾರೆ. ಅಲ್ಲೋ ಇಲ್ಲೋ ಒಬ್ಬಿಬ್ಬರು ಮಾತ್ರ ಗ್ಯಾಸ್ ಕನೆಕ್ಷನ್ ಹೊಂದಿದ್ದಾರೆ.

ನಂಬಿಕೆ ಮತ್ತು ಆಚರಣೆಗಳು

ಮುಕ್ರಿಗಳು ಭೂತ, ಪಿಶಾಚಿ, ದೆವ್ವ ಬಡೆದುಕೊಳ್ಳುವುದು, ಗ್ರಹಗಳ ಕಾಟ, ಮಾಟ ಮರೂಡಿಗಳ ಬಗ್ಗೆ ಅಪಾರ ನಂಬಿಕೆಯನ್ನು ಹೊಂದಿದ್ದಾರೆ. ಅದರ ನಿವಾರಣೆಗೆ ಹೆಚ್ಚಿನ ಒತ್ತನ್ನು ನೀಡುತ್ತಾರೆ. ಜ್ವರ, ನೆಗಡಿ ಬಂದರೂ ವೈದ್ಯರಿಗಿಂತ ದೇವರು, ದೆವ್ವಗಳ ಬಗ್ಗೆ ಒಲವು ತೋರಿಸುತ್ತಾರೆ. ಇವುಗಳ ಮೂಲಕ ಕಷ್ಟ ಪರಿಹರಿಸುವ ವ್ಯಕ್ತಿಗೆ ಮಾಟಗಾರ ಅಥವಾ ನೋಟಗಾರ

ಎಂದು ಕರೆಯುತ್ತಾರೆ. ಈತನು ಜುಟ್ಟು, ಉದ್ದವಾದ ಗಡ್ಡವನ್ನು ಬಿಟ್ಟಿರುತ್ತಾನೆ. ಈತನು ತನ್ನ ವಾಸಸ್ಥಳದಲ್ಲಿ ಅನೇಕ ಶಕ್ತಿ ದೇವರುಗಳ ಮೂರ್ತಿಯನ್ನು ಇಟ್ಟುಕೊಂಡಿರುತ್ತಾನೆ. ಆ ದೇವತೆಗಳ ಸುತ್ತಲೂ ಭತ್ತದ ತೆನೆ, ಅಡಿಕೆ ಗೊನೆ, ಮಾವಿನ ತೊಳಲು, ಹೂವು, ಕುಂಕುಮ, ಅಂಗಾರ, ಊದಿನಕಡ್ಡಿ, ಅಕ್ಕಿ ಇತ್ಯಾದಿಗಳು ಹರಡಿರುತ್ತದೆ. ಜನರು ತಮ್ಮ ಮನೆಯಲ್ಲಿ ರೋಗದ ಕಾಟ, ಗಂಡ ಹೆಂಡಿರ ಜಗಳ, ಆಸ್ತಿಯ ಜಗಳ, ಮದುವೆ-ಮುಂಜಿಗಳು, ದನಕರುಗಳ ರೋಗ ಮುಂತಾದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ನೋಟಗಾರನ ಬಳಿ ಬರುತ್ತಾರೆ. ಈ ನೋಟಗಾರನು ತನ್ನದೇ ಆದ ರೀತಿಯ ಮಾಂತ್ರಿಕ ಮಂತ್ರವನ್ನು ಪಠಿಸಿ ಲಿಂಬೆ ಹಣ್ಣು, ಕುಂಕುಮ, ಅಂಗಾರವನ್ನು ಮಂತ್ರಿಸಿ ಕೊಡುತ್ತಾನೆ. ವ್ಯಕ್ತಿಗಳ ಮೇಲೆ ಬಂದ ದೆವ್ವವನ್ನು ಬಿಡಿಸಿ ಅದನ್ನು ಸಂತೃಪ್ತಗೊಳಿಸಲು ಅನ್ನಕ್ಕೆ ಕುಂಕುಮವನ್ನು ಕಲಸಿ ಕುಡಿಬಾಳೆಯಲ್ಲಿಟ್ಟು ದೆವ್ವಕ್ಕೆ ಎಡೆ ಇಡಲಾಗುತ್ತದೆ. ಅದನ್ನು ಮೂರು ದಾರಿ ಕೂಡುವಲ್ಲಿ ಇಟ್ಟು ಬರಲಾಗುತ್ತದೆ. ಕೆಲವು ದೆವ್ವಗಳಿಗೆ ಕೋಳಿ, ಕುರಿಗಳ ಬಲಿಯನ್ನು ನೀಡುವ ವಾಡಿಕೆಯುಂಟು.

ಹಾನ ತೆಗೆಯುವ ಪದ್ಧತಿ ಮುಕ್ರಿಗಳಲ್ಲಿ ಉಂಟು. ಹಾನ ಅಂದರೆ ಅರಿಸಿಣ ಮತ್ತು ಕುಂಕುಮ ಮಿಶ್ರಿತ ನೀರು. "ಅಡಿಕೆ ಹಾಳೆಯನ್ನು ಬಿದಿರ ಕಡ್ಡಿಗಳಿಂದ ಚುಚ್ಚಿ ದೊನ್ನೆಯನ್ನು ಮಾಡುತ್ತಾರೆ. ಅದರ ಎರಡು ಕಡೆ ದೊಂದಿ ಹಚ್ಚಿ ಸಂಜೆ ನಸುಗತ್ತಲಿನಲ್ಲಿ ಹೆದರಿದವರನ್ನು ಮುಂದೆ ಕೂಡ್ರಿಸಿಕೊಂಡು ಅವರಿಂದ ಅಕ್ಕಿಕಾಳು ಕೆಂಪು ಹೂವು, ಹಾನಕ್ಕೆ ಹಾಕಿಸಿಕೊಂಡು ಮೂರು ಸುತ್ತು ಸುಳಿದು ಕೊನೆಗೆ ಹೆದರಿದವರನ್ನು ಬೆಚ್ಚಿ ಬೀಳುವಂತೆ ಹಾನದ ನೀರನ್ನು ಮೈಗೆ ಜೋರಾಗಿ ಸಿಂಪಡಿಸುತ್ತಾರೆ."[೧೩] ಆಗ ಆತ ಬೆಚ್ಚಿದರೆ ದೆವ್ವ ಬಿಟ್ಟು ಹೋಯಿತು ಎಂದರ್ಥ.ಇದರ ಜೊತೆಗೆ ದೃಷ್ಟಿ ತೆಗೆಯುವ ಪದ್ಧತಿಯೂ ಇದೆ.

ಚಿಕಿತ್ಸಾ ಮತ್ತು ಆಹಾರ ಪದ್ಧತಿ

ಜನಪದ ವೈದ್ಯಕೀಯ ಚಿಕಿತ್ಸೆಯು ಬಹು ಪುರಾತನವಾದುದು. ಇಂತಹ ವೈದ್ಯಕೀಯ ಚಿಕಿತ್ಸೆ ನಂಬಿಕೆ, ವಿಶ್ವಾಸ, ಅನುಭವದಿಂದ ಕೂಡಿರುತ್ತದೆ. ಆದಿವಾಸಿ ಸಂಸ್ಕೃತಿಯಿಂದ ಬಂದ ಮುಕ್ರಿಗಳು ಪರಿಸರ ಜನ್ಯ ಬದುಕಿಗೆ ತಮ್ಮನ್ನು ತೆರೆದಿಟ್ಟುಕೊಂಡಿದ್ದಾರೆ. ಕುಡಿಯುವ ನೀರು, ಸ್ವಚ್ಛತೆಯ ಅಭಾವದಿಂದಾಗಿ ಆಗಾಗ ಸಾಂಕ್ರಾಮಿಕ ರೋಗಗಳು ಕಾಡುತ್ತಿರುತ್ತವೆ. ಆಸ್ಪತ್ರೆಗೆ ಹೋಗಲು ಇವರ ಬಳಿ ಸಾಕಷ್ಟು ಹಣ ಇಲ್ಲದ ಕಾರಣ ಮನೆ ಮದ್ದಿಗೆ ಹೆಚ್ಚು ಒತ್ತು ನೀಡುತ್ತಾರೆ. ತಮಗೆ ಬೇಕಾದ ಔಷಧಿಗಳನ್ನು ತಮ್ಮ ದಿನನಿತ್ಯದ ಆಹಾರದಲ್ಲೇ ಕಂಡುಕೊಳ್ಳುತ್ತಾರೆ.ಅದು ಅನಿವಾರ್ಯವೂ ಹೌದು.

ಬಾಣಂತಿಯರಿಗಂತೂ ನೀಡುವ ಔಷಧಗಳು ಅತ್ಯಂತ ನಿಖರವಾಗಿದೆ. ಕಾಸ್ಗನ ಮರಕ್ಕೆ ಸುತ್ತಿದ ಬಳ್ಳಿ, ನಂಜಟ್ಟೆ ಬೇರು, ಮೆಣಸಿನಕಾಳು ನೀರು, ಮೆಣಸಿನಕಾಳಿನ ಚಟ್ನಿ, ಊಟವಾದ ಮೇಲೆ ಹಣ್ಣಿನ ಅಥವಾ ತೆಂಗಿನ ಸರಾಯಿಯನ್ನು ನೀಡುವುದು ಮುಂತಾದವುಗಳು ಇಂದಿಗೂ ಕಾಣಬಹುದಾಗಿದೆ.

ಗುಡ್ಡದಲ್ಲಿ ಸಿಗುವ ಏಕನಾಯ್ಕನ ಬೇರು, ವಾಯುದುಮ್ಮನ ಬೇರು, ಕುಕ್ಕುರಸನ ಬೇರು, ಅಂಬೂತಾ ಸೊಪ್ಪು, ಕಹಿ ಬೇವಿನ ಸೋಪ್ಪು ಮುಂತಾದವುಗಳನ್ನು ಮನೆ ಮದ್ದಾಗಿ ಬಳಸುತ್ತಾರೆ. ದೃಷ್ಟಿಯಾದರೆ, ಮನುಷ್ಯರಿಗಾಗಲಿ, ದನಕರುಗಳಿಗಾಗಲಿ ಕೆಟ್ಟ ದೃಷ್ಟಿ ತಾಕಿದರೆ ಮೆಣಸು, ಉಪ್ಪು, ಸಾಸಿವೆ, ಬೆಳ್ಳುಳ್ಳಿ ಮೂರುದಾರಿಯ ಮಣ್ಣು, ಮನೆಯ ಮೇಲಿನ ಹುಲ್ಲು ಕೂಡಿಸಿ ಮೂರು ಸಲ ದನಕರುಗಳ, ಮನುಷ್ಯರ ಮುಖದ ಮುಂದೆ ತಿರುಗಿಸಿ ತೆಂಗಿನಕಾಯಿ ಸಿಪ್ಪೆಯಲ್ಲಿ ಇಟ್ಟು ಬೆಂಕಿಗೆ ಹಾಕುತ್ತಾರೆ. ಇದಕ್ಕೆ ಕೋರು ದೃಷ್ಟಿ ಎನ್ನುತ್ತಾರೆ.

ರಾಗಿಯ ಅಂಬಲಿ, ನುಚ್ಚಕ್ಕಿ ಗಂಜಿ ಹಗಲು ಹೊತ್ತಿನಲ್ಲಿ ಮಾಡುತ್ತಾರೆ. ಕುಚ್ಚಿಗೆ ಅಕ್ಕಿ ಅನ್ನ. ಮೀನಿನ ಸಾರು ಇವರಿಗೆ ಬಲು ಪ್ರೀತಿಯ ಆಹಾರ. ಮೀನು ಮಾಂಸಗಳನ್ನು ಬಹು ಇಷ್ಟ ಪಡುವುದಾದರೂ ಅದು ಬಲು ದುಬಾರಿಯಾಗಿರುವುದರಿಂದ ಕಡಿಮೆ ಬೆಲೆಯ ಮೀನುಗಳನ್ನು ತಂದು ತಮ್ಮ ಆಸೆಗಳನ್ನು ತೀರಿಸಿಕೊಳ್ಳುತ್ತಾರೆ. ಮದುವೆ, ನೆಂಟರ ಆಗಮನ, ತಿಥಿಗಳನ್ನು ಹೊರತುಪಡಿಸಿ ಮಾಂಸದ ಅಡಿಗೆ ಮಾಡುವುದು ಕಡಿಮೆ. ಕವಳ ಹಾಕುವುದು, ಬೀಡಿ ಸೇದುವುದು, ಚಹಾ ಕುಡಿಯುವುದು ಕಳ್ಳು ಕುಡಿಯುವುದು ಪ್ರಿಯವಾದ ಪಾನೀಯಗಳು.

ಆಚರಣೆಗಳು

ಬಡತನದಲ್ಲಿ ಬೆಂದು ಬಳಲುವ, ಹಸಿವನ್ನೆ ಹೊದ್ದು ಮಲಗಿರುವ ಮುಕ್ರಿಗಳು ವರ್ಷದಲ್ಲಿ ೮-೧೦ ಹಬ್ಬಗಳನ್ನು ಆಚರಿಸುತ್ತಾರೆ. ಅದರಲ್ಲಿ ದೀಪಾವಳಿ, ಕಾರ್ತಿಕ(ತುಳಸಿ ಮದುವೆ), ಬಂಡೀಹಬ್ಬ, ಸಂಕ್ರಾಂತಿ, ಏಕಾದಶಿ, ಅಷ್ಟಮಿ, ಶಿರವಣೆ, ಗಣೇಶ, ಉಗಾದಿ, ಹೋಳಿಹಬ್ಬಗಳನ್ನು ಆಚರಿಸುತ್ತಾರೆ. ಇವರು ದೀಪಾವಳಿಯನ್ನು ಒಳ್ಳೆಯ ಉತ್ಸಾದಿಂದ ಆಚರಿಸುತ್ತಾರೆ. ಇವರಿಗೆ ಇದು ೩ ದಿನಗಳ ಹಬ್ಬ. ನರಕ ಚತುರ್ದಶಿಯ ಹಿಂದಿನ ದಿನವೇ ಬಲೀಂದ್ರನನ್ನು ಕೂಡ್ರಿಸಲಾಗುತ್ತದೆ. ಕರಿಗೆಯೆನ್ನುವ ಮಣ್ಣಿನ ಕುಂಭವೊಂದನ್ನು ತಂದು ಅದಕ್ಕೆ ಹೊಸ ನೀರು ತುಂಬಿ ಶೇಡಿ ಬರೆಯುತ್ತಾರೆ. ಅದರ ಮೇಲೆ ತೆಂಗಿನಕಾಯಿ ಕಲಶವನ್ನು ಮಾಡುತ್ತಾರೆ. ಬಲೀಂದ್ರನನ್ನು ಕೆಲವರು ಬಲೀಂದ್ರಜ್ಜಿ ಎಂದು ಕರೆಯುತ್ತಾರೆ. ಅದು ಸ್ತ್ರೀವಾಚಕವಾದರೂ ವಾಸ್ತವದಲ್ಲಿ ಹೆಣ್ಣಲ್ಲ. ಬಲೀಂದ್ರನನ್ನು ದೊಡ್ಡ ಮಡಿಕೆಯಲ್ಲಿ ತುಂಬಿಡುತ್ತಾರೆ. ಆ ದೊಡ್ಡ ಮದಿಕೆಗೆ ಕರಗಿ ಎಂದು ಕರೆಯುತ್ತಾರೆ. ಇದರಲ್ಲಿ ಅಮಟೆ, ನೇರಲೆ, ತೇಗದ ಕುಡಿ, ತೆಂಗಿನ ಬೇರು ಇವುಗಳನ್ನು ಹಾಕಲಾಗುತ್ತದೆ. ಆ ಮಡಿಕೆಯ ಅಕ್ಕಪಕ್ಕ ಸಿದ್ದೆ, ಕೊಳಗ, ಮೊಗೆಕಾಯಿ, ಸೌಂತೆಕಾಯಿ, ಅಡಿಕೆ ಗೊನೆ ಇಟ್ಟು ಬಲೀಂದ್ರನ ಪರಿವಾರವೆಂದು ಪರಿಭಾವಿಸುತ್ತಾರೆ. ಬಲೀಂದ್ರನಿಗೆ ಅವಲಕ್ಕಿ, ಬೆಲ್ಲ, ಬಾಳೆಹಣ್ಣನ್ನು ನೈವೇದ್ಯ ಮಾಡುತ್ತಾರೆ.

ನರಕ ಚತುರ್ದಶಿಯ ದಿನದಂದು ಬೂದಿ ರಾತ್ರಿ ಎಂದು ಕರೆಯುತ್ತಾರೆ.ಸ್ನಾನದ ಹರವಿಗೆ ಹೆಂಗಸರು ಮಾತ್ರವೆ ನಾಲ್ಕು ಕೊಡ ನೀರು ತುಂಬಿ ಶಿಂಡ್ಲೇಕಾಯಿ, ವೀಳ್ಯೆದೆಲೆ, ಅಡಿಕೆಯ ಸರ ಇವುಗಳನ್ನು ಬಾಳೆಪಟ್ಟೆಯಲ್ಲಿ ಸುರಿದು ಹಂಡೆಗೆ ಕಟ್ಟುತ್ತಾರೆ. ಶೀಂಡ್ಲೇಕಾಯಿಯನ್ನು ಕೊಚ್ಚಿ ನೀರಿಗೆ ಕದಡುತ್ತಾರೆ. ಹಂಡೆಗೆ ಶೇಡಿ ಬರೆಯುತ್ತಾರೆ. ಆಮೇಲೆ ಮೈಗೆ ಎಣ್ಣೆ ಹಚ್ಚಿಕೊಂಡು

ಸ್ನಾನ ಮಾಡುತ್ತಾರೆ. ಸ್ನಾನದ ಬಳಿಕ ಅರಿಶಿಣ, ಕಾಳುಜೀರಿಗೆ, ಮೆಣಸಿನಕಾಳನ್ನು ಕೈಮದ್ದಿನ ಸೊಪ್ಪಿಗೆ ಸೇರಿಸಿ ಅರೆದು ಕುಡಿಯುತ್ತಾರೆ. ದೇವರ ಮುಂದೆ ಸಗಣಿ ಉಂಡೆ ಮಾಡಿ ಅದರ ಮೇಲೆ ಶಿಂಡ್ಲೇಕಾಯಿ ಇಡುತ್ತಾರೆ. ಆ ಶಿಂಡ್ಲೇಕಾಯಿಯನ್ನು ಬಲಗಾಲಿನಿಂದ ಮೆಟ್ಟಿ ಹೊಂಡೆ, ಹೊಂಡೆ ಹೊಂಡೆ ..... ಎಂದು ಕೂಗುತ್ತಾರೆ. ಈ ದಿನವನ್ನು ಸಣ್ಣ ಹಬ್ಬವೆಂದು ಕರೆಯುತ್ತಾರೆ.ಅಂದು ತುಳಸಿ ಮತ್ತು ವೆಂಕಟರಮಣ ದೇವರ ಪೂಜೆ ನಡೆಯುತ್ತದೆ. ಈ ದಿನ ನವ ವಿವಾಹಿತರು ತವರು ಮನೆಗೆ ಬರುತ್ತಾರೆ.ಇದನ್ನು ಹಬ್ಬಗಾಣಿಕೆ ಎಂದು ಹೇಳುತ್ತಾರೆ. ಅಳಿಯನಿಗೆ ಕಾಯಿ ಕೊಟ್ಟು ಸತ್ಕರಿಸುತ್ತಾರೆ.ಅಳಿಯನು ಮನೆಯ ಹಿರಿಯರಿಗೆ, ಊರ ಹಿರಿಯರಿಗೆ ಕಾಣಿಕೆ, ವೀಳ್ಯದೆಲೆ ಕೊಟ್ಟು ನಮಸ್ಕಾರ ಮಾಡುತ್ತಾನೆ. ಅಂದು ಅರಿಸಿಣ ಎಲೆಯ ಕಡಬು ಮಾಡುತ್ತಾರೆ. ಅದಕ್ಕೆ ಕಾಯಿ ಹಾಲು ಸೇರಿಸಿ ತಿನ್ನುತ್ತಾರೆ. ದೇವರಿಗೆ ಒಂದು ಎಡೆ ಹಾಗೆ ಕಾಗೆಗೂ ಒಂದು ಎಡೆಯನ್ನು ಮನೆಯ ಮಾಡಿನ ಮೇಲೆ ಇಡುತ್ತಾರೆ. ಮನೆಯ ಎದಿರು ಹಣತೆ ಹಚ್ಚುತ್ತಾರೆ. ಅಮಾವಾಸ್ಯೆಯ ದಿನ ಕಡಬು, ಪಾಯಸ, ಕಜ್ಜಾಯ ಮಾಡಿಕೊಂಡು ಊಟ ಮಾಡುತ್ತಾರೆ. ಸರಾಯಿ ಸೇಂದಿ ಕುಡಿದು ಸಂಭ್ರಮಿಸುತ್ತಾರೆ. ಲಕ್ಷ್ಮೀ ಪೂಜೆ ಮಾಡುತ್ತಾರೆ. ಇಂದೆ ಹಸುಕರುಗಳಿಗೆ ಘಂಟೆ ಕಟ್ಟಲಾಗುತ್ತದೆ.

ಮಾರನೆ ದಿನ ದೊಡ್ಡ ಹಬ್ಬ. ದನಗಳಿಗೆ ಸ್ನಾನ ಮಾಡಿಸಿ ದಾಬು(ಕಣ್ಣಿ)ಯನ್ನು ತುಳಸಿಗಿಡದ ಹತ್ತಿರ ಇಟ್ಟು ಪೂಜೆ ಮಾಡಿ ದನಗಳಿಗೆ ಕಟ್ಟಲಾಗುತ್ತದೆ. ಕೊಟ್ಟಿಗೆಯ ಎದುರು ಆಕಳ ಹೆಜ್ಜೆಯನ್ನು ಶೇಡಿಯಿಂದ ಬರೆಯಲಾಗುತ್ತದೆ. ಸಿದ್ದೆಯನ್ನು ಕೆಮ್ಮಣ್ಣು ಮತ್ತು ಶೇಡಿಯಲ್ಲಿ ಅದ್ದಿ ಆಕಳ ಮೇಲೆ ಊರಲಾಗುತ್ತದೆ. ಮುಳಕನ ಬಂಡಿಯನ್ನು ದನಗಳಿಗೆ ಕಟ್ಟಲಾಗುತ್ತದೆ. ಮುಳಕನ ಬಂಡಿ ಎಂದರೆ ಕಾಯಿ, ಉದ್ದಿನಬೇಳೆ, ಅಕ್ಕಿ ಹಿಟ್ಟು, ಅರಿಶಿಣ ಪುಡಿಯನ್ನು ಮಿಶ್ರ ಮಾಡಿದ ಇಡ್ಲಿ ತರಹದ ತಿಂಡಿ. ಇದರ ಜೊತೆ ತುಳಸಿ ಕುಡಿ ಸೇರಿಸಲಾಗುತ್ತದೆ. ಒಡೆದ ಕಾಯಿಯ ಹೆಣ್ಣು ಕಡಿಯನ್ನು ನಾರಿನ ಬಳ್ಳಿಯಲ್ಲಿ ಆಕಳಿಗೆ ಕಟ್ಟಲಾಗುತ್ತದೆ. ಕಾಲು ಪೂಜೆಯಾದ ನಂತರ ಮುಳಕನ ಬಂಡಿಯನ್ನು ಆಕಳಿಗೆ ತಿನ್ನಲು ಕೊಡುತ್ತಾರೆ. ಪೂಜೆ ಆಗುವವರೆಗೂ ಆಕಳಿಗೆ ತಿನ್ನಲು ಕೊಡದೆ ಉಪವಾಸ ಇಡಲಾಗುತ್ತದೆ. ಸಂಜೆ ದನ ವಾಪಸ್ಸು ಬಂದ ನಂತರ ಹಾನ ಮಾಡಿ ದೃಷ್ಟಿ ತೆಗೆಯುತ್ತಾರೆ.

ಬಲಿಪಾಡ್ಯದಂದು ಹಬ್ಬಗಾಣಿಕೆಗೆ ಒಡೆಯರ ಮನೆಗೆ ಹೋಗುತ್ತಾರೆ. ಒಡೆಯರ ಮುಂದೆ ಎಳನೀರನ್ನು ಇಟ್ಟು ಅದಕ್ಕೆ ಪ್ರತಿಯಾಗಿ ಮಗೇಕಾಯಿ, ಎಲೆ, ಅಡಿಕೆ, ತೆಂಗಿನಕಾಯಿ ಹಬ್ಬಕ್ಕೆ ಮಾಡಿದ ಸಿಹಿತಿನಿಸುಗಳನ್ನು ಪಡೆದುಕೊಂಡು ಬರುತ್ತಾರೆ.

ತುಳಸಿ ಪೂಜೆ

ತುಳಸಿ ಕಟ್ಟೆಗೆ ಕಬ್ಬು ಮತ್ತು ಮಾವಿನ ಎಲೆಗಳನ್ನು ಕಟ್ಟುತ್ತಾರೆ. ಸಾಲಾಗಿ ಒಬ್ಬರ ಮನೆಯಿಂದ ಇನ್ನೊಬ್ಬರ ಮನೆಯವರೆಗೂ ಪೂಜೆ ಸಾಗುತ್ತದೆ. ಅವಲಕ್ಕಿ, ಕೊಬ್ಬರಿ ಎಣ್ಣೆ ಹಾಕಿ ಎಡೆ ಮಾಡುತ್ತಾರೆ. ಗೋವಿಂದಾ ಗೋವಿಂದಾ ಎಂದು ಐದು ಸಾರಿ ಕೂಗುತ್ತಾರೆ. ಇದನ್ನು

ಶರಣು ಕರೆಯುವುದು ಎನ್ನುತ್ತಾರೆ. ಈ ಪೂಜೆ ಮುಗಿದ ನಂತರ ಪ್ರತಿ ಮನೆಯ ಯಜಮಾನನಿಗೂ ಕಾಯಿಕಡಿಯನ್ನು ಕೊಡಲಾಗುತ್ತದೆ. ಪಟಾಕಿ, ಸಿಡಿಮದ್ದನ್ನು ಸಿಡಿಸುತ್ತಾರೆ. ದೀಪಾವಳಿ ದಿನದಿಂದ ಆಕಾಶ ಬುಟ್ಟಿಯನ್ನು ಕಟ್ಟಿ ದೀಪ ಬೆಳಗುತ್ತಾರೆ. ಅಂದು ದೋಸೆ ಮತ್ತು ಬೆಳಚಿನ ಸಾರು ಮಾಡುತ್ತಾರೆ.

ಕದರಹೊಸ್ತು

ಇದು ದೀಪಾವಳಿಯಲ್ಲಿ ಮಾಡುವ ಹಬ್ಬ. ಗದ್ದೆಗೆ ಹೋಗಿ ಭತ್ತದ ಗಿಡವನ್ನು ಎರಡು ಮುಡಿ ಕಟ್ಟಿ ಕೊಯ್ದುಕೊಳ್ಳುತ್ತಾರೆ. ಅದನ್ನು ಕುಡಿಬಾಳೆಯಲ್ಲಿ ಕಟ್ಟಿಕೊಂಡು ತಲೆಗೆ ಮುಂಡಾಸು ಕಟ್ಟಿಕೊಡು ಕದರನ್ನು ಹೊತ್ತುಕೊಂಡು ಬರುತ್ತಾರೆ. ಅವರು ಮನೆಗೆ ಬರುತ್ತಿದ್ದಂತೆ ಮನೆಯ ಬಾಗಿಲಿನಲ್ಲಿ ನಿಲ್ಲಿಸಿ ಅವರ ಕಾಲು ತೊಳೆದು ಒಳಗೆ ಕರೆದು ತರಲಾಗುತ್ತದೆ. ಕದಿರನ್ನು ದೇವರು ಇಡುವ ಜಾಗದಲ್ಲಿ ಇಟ್ಟು ಅದರ ಮೇಲೆ ಸಿಂಗಾರ, ಮಾವಿನ ಎಲೆ, ಅಡಿಕೆ, ವೀಳ್ಯದೆಲೆ ಹಾಕಿ ಆಕದಿರಿನ ಮೇಲೆ ಶೇಡಿ ಬಳಿದು ಬಾಗಿಲಿಗೆ ಕಟ್ಟುತ್ತಾರೆ. ಇದರಲ್ಲಿನ ಹೊಸ ಭತ್ತವನ್ನು ಸುಲಿದು ಕಾಯಿಯನ್ನು ತುರಿದು ಹಾಲು ಮಾಡಿ ಆ ಗಂಜಿಗೆ ಹಾಕಿ ಬೇಯಿಸುತ್ತಾರೆ. ಕದಿರನ್ನು ಸಿದ್ದೆ, ಒನಕೆ, ಕೊಳಗ, ತೋಳಕಂಬ, ತೆಂಗಿನಮರ, ಅಡಿಕೆಮರ, ತುಳಸಿಕಟ್ಟೆ, ಅಕ್ಕಿಡಬ್ಬಕ್ಕೆ ಕಟ್ಟುತ್ತಾರೆ.

ಸಂಕ್ರಾಂತಿ

ಮುಕ್ರಿಗಳಲ್ಲಿ ಎರಡು ಬಗೆಯ ಸಂಕ್ರಾಂತಿಗಳವೆ. ಒಂದು ಮಕರ ಸಂಕ್ರಾಂತಿ, ಎರಡನೇಯದು ಭೂಮಿ ಸಾಗುವಳಿ ಮಾಡುವ ದಿನದಂದು ಬರುವ ಸಂಕ್ರಾಂತಿ. ಮಕರ ಸಂಕ್ರಾಂತಿಯ ದಿನದಂದು ತುಳಸಿಕಟ್ಟೆಗೆ ಶೇಡಿಯನ್ನು ಹೊಯ್ದು ಸಿಂಗಾರ ಕೊನೆಯನ್ನು ಕಟ್ಟಿ ಪೂಜೆಯನ್ನು ಮಾಡುತ್ತಾರೆ. ಆ ದಿನ ದೋಸೆ ಮಾಡುವುದು ವಿಶೇಷ.

ಮಳೆಗಾಲದಲ್ಲಿ ಭೂಮಿ ಸಾಗುವಳಿ ಮಾಡುವ ದಿವಸ ನಸುಕಿನಲ್ಲಿ ಸ್ನಾನ ಮಾಡಿ ಬೆಚ್ಚನ್ನು ಭೂಮಿಯಲ್ಲಿ ನೆಡುತ್ತಾರೆ. ಬೆಚ್ಚು ಎಂದರೆ ಮುಳ್ಳುಮಂಡಕಿಯ ಗಿಡ. ಬೆಚ್ಚನ್ನು ನೆಡುವ ಉದ್ದೇಶ ಬೆದರಿನ ಸಂಕೇತವಾಗಿ. ಇದರಿಂದ ಬೆಳೆಗಳಿಗೆ ಹಾನಿಯುಂಟು ಮಾಡುವ ಹಕ್ಕಿಗಳನ್ನು ಹೆದರಿಸುವ ಒಂದು ಸಾಧನ. ಜೊತೆಗೆ ಗದ್ದೆಯಲ್ಲಿ ಓಡಾಡುವ ಇಲಿ, ಮಿಡತೆ ಮುಂತಾದವುಗಳನ್ನು ತಿನ್ನುವ ಗಿಡುಗ, ಹದ್ದು ಮುಂತಾದ ಹಕ್ಕಿಗಳು ಕೂರಲು ಅನುಕೂಲ ಮಾಡಿಕೊಡುವ ಸಾಧನವೂ ಹೌದು. ಬೆದರು ಹುಗಿಯುವ ಪದ್ಧತಿಯನ್ನು ಅದ್ದೂರಿಯಿಂದ ಮುಕ್ರಿಗಳು ಆಚರಿಸುತ್ತಾರೆ. ಹಾಗೆ ನೆಟ್ಟ ನಂತರ ಹುಯ್ಯೋ ಹುಯ್ಯೋ ಎನ್ನುತ್ತ ಒಡೆಯರ ಮನೆಗೆ ಬರುತ್ತಾರೆ. ಆಗ ಒಡೆಯರು ಇವರಿಗೆ ತೆಂಗಿನಕಾಯಿಯನ್ನು ಕೊಡುತ್ತಾರೆ.

ಕಾಮನ ಹಬ್ಬ

ಒಂದು ಉದ್ದನೆಯ ಕೋಲಿಗೆ ತೆಂಗಿನ ಮಡಿಲನ್ನು ಕಟ್ಟಿ ಕೀರಿಟದಂತೆ ಮಾಡಲಾಗುತ್ತದೆ. ಅದನ್ನು ಮನೆ ಮನೆಯ ಬಾಗಿಲಿಗೆ ತೆಗೆದುಕೊಂಡು ಹೋಗಲಾಗುತ್ತದೆ. ಹಾಗೆ ಮನೆಗೆ

ಬಂದಾಗ ಹಳೆಯ ಕರಿಯನ್ನು ಕೊಡುತ್ತಾರೆ. ಅದನ್ನು ಸಂಗ್ರಹಿಸಿಕೊಂಡು ಕಾಮನ ಮೂರುತಿಯೊಂದಿಗೆ ನದಿ ತೀರಕ್ಕೆ ಒಯ್ದು ಗುಡ್ಡೆಗೆ ಬೆಂಕಿ ಹಾಕಲಾಗುತ್ತದೆ. ಎಲ್ಲರಿಗೂ ನೀರನ್ನು ಸಿಂಪಡಿಸಲಾಗುತ್ತದೆ. ಎಲ್ಲರಿಗೂ ಅವಲಕ್ಕಿ ಮತ್ತು ಕಾಯಿಯನ್ನು ಕೊಡಲಾಗುತ್ತದೆ. ಎಲ್ಲರೂ ಸೇರಿ ದೂಂ ಸಾಲೆ ಕೂಗಲಾಗುತ್ತದೆ. ಈ ದಿನ ಮುಕ್ರಿಯ ಯುವಕರು ವಿವಿಧ ವೇಷಗಳನ್ನು ಹಾಕಿ ರಂಜಿಸುತ್ತಾರೆ.

ಗಣೇಶ ಹಬ್ಬ

ಗಣೇಶ ಹಬ್ಬವನ್ನು ಇತರ ಹಬ್ಬಗಳಂತೆ ಬಹು ಜನರು ಆಚರಿಸುವುದಿಲ್ಲ. ಗಣೇಶನ ಹಬ್ಬ ಇವರಿಗೆ ಪವಿತ್ರವೇನೂ ಅಲ್ಲ. ಆದರೆ ಇತ್ತೀಚೆಗೆ ಆಧುನಿಕ ಹಾಗೂ ಇತರ ಸಮುದಾಯಗಳ ಪ್ರಭಾವದಿಂದ ಗಣಪತಿ ಹಬ್ಬದ ದಿನದಲ್ಲಿ ಮುಕ್ರಿಗಳು ಕೆಲಸಕ್ಕೆ ಹೋಗುವುದಿಲ್ಲ. ಆ ದಿವಸ ಮೋಜಿನ ಆಟವನ್ನು ಆಡುತ್ತಾರೆ. ಆ ದಿನ ಗುರಿಕಾಯಿ ಒಡೆಯುವ ಆಟವನ್ನು ಆಡುತ್ತಾರೆ. ಈ ಆಟದಲ್ಲಿ ಎರಡು ಪಂಗಡವನ್ನು ಮಾಡಿಕೊಳ್ಳುತ್ತಾರೆ. ದೂರದಲ್ಲಿ ಇಟ್ಟಿರುವ ಕಾಯಿಗೆ ಯಾರು ಕಾಯಿಯಿಂದ ಹೊಡೆಯುತ್ತಾರೋ ಅವರು ಪಂದ್ಯವನ್ನು ಗೆದ್ದವರು ಎಂದರ್ಥ. ಚೌತಿ ಹಬ್ಬದ ಮಾರನೇ ದಿನ ಮುಕ್ರಿಯರು ಒಡೆಯರ ಮನೆಗೆ ಹೋಗಿ ಪಂಚಕಜ್ಜಾಯ, ವಡೆ ಮುಂತಾದ ಹಬ್ಬದ ತಿಂಡಿಗಳನ್ನು ಬೇಡಿಕೊಂಡು ಬರುವ ಅನಿಷ್ಠ ಪದ್ಧತಿ ಇನ್ನೂ ಜೀವಂತವಾಗಿದೆ.

ಮೈನೆರೆಯುವುದು

ಹೆಣ್ಣೊಬ್ಬಳು ತನ್ನ ಶೈಶವಾಸ್ಥೆಯನ್ನು ದಾಟಿ ಹರೆಯಕ್ಕೆ ಬಂದಾಗ ಅವಳಿಗೆ ತನ್ನ ಹರೆಯ ಮತ್ತು ಸಾಂಸಾರಿಕ ವ್ಯವಸ್ಥೆ ಈ ಎರಡರ ಜವಾಬ್ದಾರಿಯನ್ನು ಹಿರಿಯರು ಕೆಲವು ಕಟ್ಟುಪಾಡುಗಳ ಮೂಲಕ ನೀಡಬಯಸುತ್ತಾರೆ. ಋತುಮತಿಯಾದ ಹೆಣ್ಣನ್ನು ಮಾವು, ಹಲಸು, ನಿಂಬೆ ಗಿಡದಡಿ ಇರುವಂತೆ ಸೂಚನೆ ನೀಡುತ್ತಾರೆ. ನೀರನ್ನು ಕಾಯಿಸಿ ಅರಿಶಿಣ ಹಚ್ಚಿ ಅಕ್ಕಪಕ್ಕದ ಐದು ಮುತ್ತೈದೆಯರು ಬಂದು ನೀರನ್ನು ಸುರಿದು ಸ್ನಾನ ಮಾಡಿಸುತ್ತಾರೆ. ನಂತರ ಹೊಸ ಬಟ್ಟೆಯನ್ನು ಕೊಡುತ್ತಾರೆ. ಹೊಸ ಬಳೆ ಇಡಿಸುತ್ತಾರೆ. ಈ ಹೆಣ್ಣು ಮಗಳು ನಾಲ್ಕು ದಿನ ಹೊರಗಡೆ ಇರಬೇಕು. ನಾಲ್ಕು ದಿನಗಳ ಕಾಲವೂ ದಿನಕ್ಕೆ ಎರಡು ಬಾರಿ ಸ್ನಾನ ಮಾಡಬೇಕು. ಹಾಗೆ ಗಂಡಸರನ್ನು ನೋಡುವ ಹಾಗಿಲ್ಲ, ಮನೆಯವರನ್ನು ಮುಟ್ಟುವ ಹಾಗಿಲ್ಲ. ನಾಲ್ಕನೆಯ ದಿನ ಮತ್ತೆ ನೀರೆರೆಯುವ ಶಾಸ್ತ್ರ ಮಾಡುತ್ತಾರೆ. ನಂತರ ಇವಳು ಶುದ್ಧ. ನಂತರ ಹಿರಿಯರು ತುಳಸಿ ಪೂಜೆ ಮಾಡಿ ಆ ಹೆಣ್ಣು ಮಗಳಿಂದ ಎಲ್ಲರಿಗೂ ನಮಸ್ಕಾರ ಮಾಡಿಸುತ್ತಾರೆ. ನಂತರ ಉಡುಗೊರೆಯನ್ನು ಕೊಡುತ್ತಾರೆ. ಸರಿಯಾದ ವಯಸ್ಸಿಗೆ ಋತುಮತಿಯಾಗದಿದ್ದರೆ ನಾಟಿ ಔಷಧವನ್ನು ಕೊಡಿಸುತ್ತಾರೆ. ಇಲ್ಲದಿದ್ದಲ್ಲಿ ಗುಂಡಬಾಳ ದೇವರಿಗೆ ಹರಕೆ ಹೇಳಿಕೊಳ್ಳುತ್ತಾರೆ. ನಂತರದ ದಿನಗಳಲ್ಲೂ ಮುಟ್ಟಾದಾಗ ಮನೆಯಿಂದ ಹೊರಗೆ ಇರಬೇಕು, ಹೊರಗೆ ಮಲಗಬೇಕು. ಯಾರನ್ನೂ ಮುಟ್ಟುವ ಹಾಗಿಲ್ಲ, ಅಲಂಕಾರ ಮಾಡಿಕೊಳ್ಳುವ ಹಾಗಿಲ್ಲ, ಶುಭ ಸಮಾರಂಭಗಳಲ್ಲಿ ಭಾಗವಹಿಸುವಂತಿಲ್ಲ. ತುಳಸಿ ಗಿಡದಿಂದ ದೂರ ಇರಬೇಕು. ಈ ರೀತಿಯ ಆಚರಣೆ ಮುಕ್ರಿಗಳಲ್ಲಿದೆ.

ವಿವಾಹ

ಮೊದಲು ಹುಡುಗಿ ಋತುಮತಿಯಾಗುವುದೊರಳಗೆ ವಿವಾಹ ಮಾಡುವ ಪದ್ಧತಿ ಇತ್ತು. ಈಗಲೂ ಅಲ್ಲಲ್ಲಿ ಕಂಡು ಬರುತ್ತದೆ. ಚಂದಾವರ ಜಾತ್ರೆಯಲ್ಲೋ, ಹೆಗಡೆ ಜಾತ್ರೆಯಲ್ಲೋ, ದೇವಿಕಾನ ಹಬ್ಬದಲ್ಲೋ ಹುಡುಗಿ ನೋಡುವ ಪ್ರಸಂಗ ನಡೆಯುತ್ತದೆ. ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆ ಇರುವುದರಿಂದ ಯಾರಾದರೂ ಇಂತವರ ಮನೆಯಲ್ಲಿ ಹೆಣ್ಣಿದೆ ಎಂದು ಹೇಳಿದರೆ ನೋಡಲು ಬರುತ್ತಾರೆ. ವರನ ತಂದೆ ಅಥವಾ ಮನೆಯ ಹಿರಿಯರು ಊರಿನ ಬುದವಂತನನ್ನು ಕರೆದುಕೊಂಡು ನಾಲ್ಕಾರು ಕಡೆ ಹೆಣ್ಣನ್ನು ನೋಡಿ ತಮಗೆ ಹೊಂದಾಣಿಕೆ ಆಗುವ ಮನೆಯಲ್ಲಿ ಹೆಣ್ಣನ್ನು ಗೊತ್ತುಪಡಿಸುತ್ತಾರೆ. ಈ ಸಂಬಂಧ ಒಪ್ಪಿಗೆಯಾದಲ್ಲಿ ಊರಿನ ಬುದ್ಧಿವಂತನನ್ನು ಕರೆದು ಮಾತುಕತೆ ನಡೆಸುತ್ತಾರೆ. ತೆರ ಕೊಡುವ ಪದ್ದತಿ ಇನ್ನೂ ಮುಕ್ರಿಗಳಲ್ಲಿ ಜೀವಂತವಾಗಿದೆ. ಮದುವೆಯ ಮಾತುಕತೆ ಹೆಣ್ಣಿನ ಮನೆಯಲ್ಲಿ ನಡೆಯುವುದರಿಂದ ಆ ದಿನ ಹೆಣ್ಣಿನ ಮನೆಯಲ್ಲಿ ಊಟ ನಡೆಯುತ್ತದೆ.

ಮೊದಮೊದಲು ಮದುವೆ ೩-೪ ದಿನ ನಡೆಯುತ್ತಿತ್ತು. ಆದರೆ ಈಗ ಅವರವರ ಆರ್ಥಿಕ ಪರಿಸ್ಥಿತಿ ಅನುಗುಣವಾಗಿ ಕಡಿಮೆ ದಿನಗಳಲ್ಲಿ ಮದುವೆ ಮಾಡುತ್ತಾರೆ. ಮದುವೆಯ ದಿನದಂದು ವರನ ತಲೆ ಕೂದಲನ್ನು ಕತ್ತರಿಸಿ ಸ್ನಾನ ಮಾಡಿಸುತ್ತಾರೆ. ಈ ಪದ್ಧತಿಗೆ ಪನ್ನೆ ಎನ್ನುತ್ತಾರೆ. ಇದೇ ರೀತಿ ಮದುಮಗಳ ಮನೆಯಲ್ಲಿ ಆಕೆಗೆ ಅರಿಶಿಣ, ಹೂವು ಚೆನ್ನಾಗಿ ಅರೆದು ನೀರಿನಲ್ಲಿ ಎಣ್ಣೆ ಹಾಕಿ ಸ್ನಾನ ಮಾಡಿಸುತ್ತಾರೆ. ಮದುವೆಯ ಹಿಂದಿನ ದಿನ ವಧುವಿಗೆ ಚಿನ್ನ ನೀಡುವ ಸಂಪ್ರದಾಯ ಇದೆ. ಇದನ್ನು ನಿಕ್ಕಿ ಮಾಡುವುದು ಎನ್ನುತ್ತಾರೆ. ಈ ಕಾರ್ಯಕ್ರಮಕ್ಕೆ ೮-೧೦ ಜನ ಗಂಡಿನ ಕಡೆಯವರು ಹೋಗುತ್ತಾರೆ. ಗಂಡಿನ ಅಕ್ಕ ಅಥವಾ ತಂಗಿ ವಧುವಿಗೆ ಬಂಗಾರ ತೊಡಿಸುತ್ತಾರೆ. ಅವತ್ತು ಅಲ್ಲಿಯೇ ಉಳದುಕೊಳ್ಳುತ್ತಾರೆ.

ಅಂದು ವರನ ಮನೆಯ ಮುಂದೆ ತೆಂಗಿನ ಗರಿಯ ಚಪ್ಪರವನ್ನು ಹಾಕುತ್ತಾರೆ. ಅಲ್ಲಲ್ಲಿ ಹತ್ತಿ ಗಿಡದ ಟೊಂಗೆಯನ್ನು ಕಟ್ಟುತ್ತಾರೆ. ಇದನ್ನು ತೊಂಡ್ಲ ಕಟ್ಟುವುದು ಎನ್ನುತ್ತಾರೆ. ಎರಡು ಬದಿಯಲ್ಲಿ ನೀರು ತುಂಬಿದ ಕೊಡವನ್ನು ಇಡುತ್ತಾರೆ. ಈ ನೀರಿನ ಕೊಡವನ್ನು ವಧು-ವರನ ಸಂಸಾರ ಮತ್ತು ಮನೆಯು ಸುಖ-ಶಾಂತಿಯಿಂದ ನಡೆಯಲಿ ಎಂಬ ಸಂಕೇತವಾಗಿ ಇಡುತ್ತಾರೆ. ಗಂಡಿನ ಮತ್ತು ಹೆಣ್ಣಿನ ಮನೆಯವರು ಸೇರಿ ಧಾರೆ ಎರೆಯುವ ಜಾಗದಲ್ಲಿ ಹೊಸ ಬಟ್ಟೆಯನ್ನು ಕಟ್ಟುತ್ತಾರೆ. ಇದನ್ನು ಗರುಡಗಪ್ಪ ಎನ್ನುತ್ತಾರೆ. ಮದುವೆ ಮನೆಯಲ್ಲಿ ಚಪ್ಪರ ಹಾಕುವಾಗ ಕೋಲ್ಕಾರ ಇರುವುದರಿಂದ ಅವನಿಗೆ ಚಪ್ಪರ ಕಾಣಿಕೆ ಕೊಡುತ್ತಾರೆ.

ಮದುವೆಯ ದಿನ ವರ ಬಂದು ತುಳಸಿ ಪೂಜೆ ಮಾಡಿದ ಮೇಲೆ ಮದುವೆಯ ಕಾರ್ಯಕ್ರಮಗಳು ಪ್ರಾರಂಭವಾಗುತ್ತದೆ. ನಂತರ ಐದು ಜನ ಹೆಂಗಸರು ವರನಿಗೆ ಸ್ನಾನ ಮಾಡಿಸುತ್ತಾರೆ. ಇದನ್ನು ಬಳಿ ಮೀಯಿಸುವುದು ಎಂದು ಕರೆಯುತ್ತಾರೆ. ಪಂಚೆ ಉಡಿಸಿದ

ನಂತರ ಬುದವಂತನು ಬಾಸಿಂಗವನ್ನು ವರನಿಗೆ ಕಟ್ಟುತ್ತಾನೆ. ನಂತರ ದಿಬ್ಬಣ ಹೊರಡುತ್ತದೆ. ವರನ ಕೈಯಲ್ಲಿ ತೆಂಗಿನಕಾಯಿ ಹಿಡಿದುಕೊಳ್ಳಲು ಕೊಡುತ್ತಾರೆ. ವರನಿಗೆ ಸೋದರ ಮಾವ ಕೊಡೆ ಹಿಡಿಯುತ್ತಾನೆ. ಅವನಿಗೆ ಚಿಂಚಿಅಣ್ಣ ಎಂದು ಕರೆಯುತ್ತಾರೆ. ಮನೆನಾಡಿನಲ್ಲಿ ಬಲಗೊಡೆಯವನು ಎಂದು ಕರೆಯುತ್ತಾರೆ. ಅವನ ಹೆಂಡತಿಗೆ ತಳಗಕ್ಕ ಎನ್ನುತ್ತಾರೆ. ಯಾಕೆಂದರೆ ಅವಳು ತಳಗದ ಬಟ್ಟಲನ್ನು ಹಿಡಿದುಕೊಂಡಿರುತ್ತಾಳೆ. ತಳಗದ ಬಟ್ಟಲ್ಲಿ ಒಂದು ತಂಬಿಗೆಯನ್ನಿಟ್ಟು ಅದಕ್ಕೆ ಚಿಕ್ಕ ಮಾಪಿನ ಟೊಂಗೆಯನ್ನು ಅದರೊಳಗೆ ಹಾಕಿ, ಬಟ್ಟಲ್ಲಿ ಅಕ್ಕಿ, ಸಣ್ಣ ದೀಪವನ್ನು ಇಟ್ಟುಕೊಂಡಿರುತ್ತಾರೆ.

ದಿಬ್ಬಣ ಹೆಣ್ಣಿನ ಮನೆಯ ಮುಂದೆ ಕಟ್ಟಿದ ತೋರಣದ ಹತ್ತಿರಕ್ಕೆ ಬಂದಾಗ ಊರಿನ ಬುದವಂತನು ನೆಂಟರನ್ನು ಕರೆಕೊಂಡು ಬರುತ್ತಾನೆ. ಅಲ್ಲಿಗೆ ಗಂಡಿನ ದಿಬ್ಬಣ ಬಂದ ಕೂಡಲೇ ಹೆಣ್ಣಿನ ಮನೆಯವರು ಗಂಡಿನ ಕಡೆಯವರನ್ನು ಸ್ವಾಗತಿಸಿ ಮದುವೆಯ ಚಪ್ಪರಕ್ಕೆ ಕರೆ ತರುತ್ತಾರೆ.ವಧು–ವರರಿಗೆ ಬಾಸಿಂಗ, ದಂಡೆಯನ್ನು ಕಟ್ಟಿಕೊಳ್ಳುವ ಸಂಪ್ರದಾಯವಿದೆ. ಬಾಸಿಂಗ ಕಟ್ಟಿಕೊಂಡ ಹಾಡುಗಳನ್ನು ಹಾಡುತ್ತಾರೆ. ಬುದವಂತರು ಬಂದು ಮದುವೆಯ ಸಂದರ್ಭದಲ್ಲಿ ಕೆಲಸ ಮಾಡಿದ್ದಕ್ಕಾಗಿ ಅವರಿಗೆ ಶಾಲು, ಪಂಚೆ, ಧೋತರ ಜೊತೆಗೆ ತೆಂಗಿನ ಕಾಯಿ, ಅಕ್ಕಿ ಮುಂತಾದವುಗಳನ್ನು ಗೌರವ ಪೂರ್ವಕವಾಗಿ ನೀಡುತ್ತಾರೆ.

ಹಿಂದೆಲ್ಲ ಮದುವೆಯಾದ ಮಾರನೇ ದಿನ ದಿಬ್ಬಣ ವಾಪಸ್ಸು ಹೊಗುತ್ತಿತ್ತು.ಆದರೆ ಈಗ ಆ ದಿನದಂದೆ ದಿಬ್ಬಣ ಹೊರಡುತ್ತದೆ. ವರನೇ ಖುದ್ದಾಗಿ ಕೊಪ್ಪದ ಪ್ರತಿ ಮನೆಗೆ ಹೋಗಿ ತನ್ನ ಮನೆಗೆ ಬರಲು ಆಹ್ವಾನಿಸುತ್ತಾನೆ. ಹೆಣ್ಣಿನ ಅಪ್ಪ ತನ್ನ ಮಗಳಿಗೆ ಹೊಟ್ಟೆಗೆ ಅನ್ನ, ನೆತ್ತಿಗೆ ಎಣ್ಣೆ, ಉಡಲು ಸೀರೆ ಇವುಗಳನ್ನು ಕೊಡುವರು ಯಾರು ಎಂದು ಗಟ್ಟಿಯಾಗಿ ಕೇಳುತ್ತಾನೆ. ಆಗ ಗಂಡಿನ ಕಡೆಯವರು ನಾವು ಎಂದು ಗಟ್ಟಿಯಾಗಿ ಹೇಳಿದ್ದಲ್ಲದೆ, ಅವಳ ಮಾವನೆನಿಸಿಕೊಂಡವನು ಕೈಹಿಡಿದು ಹೊರಗೆ ಕರೆದುಕೊಳ್ಳುತ್ತಾನೆ.

ಗಂಡಿನ ಮನೆಗೆ ಬಂದ ದಿಬ್ಬಣವನ್ನು ಗಂಡಿನ ಕಡೆಯವರು ಸ್ವಾಗತಿಸುತ್ತಾರೆ. ಇದನ್ನು ಎದಿರುಗೊಳ್ಳುವುದು ಎಂದು ಹೇಳುತ್ತಾರೆ.ವಧುವನ್ನು ಅಕ್ಕಿಯ ಸಿದ್ದೆಯನ್ನು ಒದೆಸಿ ಮನೆಯ ಒಳಗೆ ಕರೆದು ಕೊಳ್ಳುತ್ತಾರೆ. ಆಮೇಲೆ ಅವರನ್ನು ದೇವರ ಮುಂದೆ ಕೂರಿಸಿ ಪ್ರತಿಯೋಬ್ಬರು ತಲೆಯ ಮೇಲೆ ಅಕ್ಕಿಯನ್ನು ಹಾಕುತ್ತಾರೆ. ಅಕ್ಕಿಯನ್ನು ಹಣೆಗೆ ಒತ್ತಿ ಕೂರಿಸುತ್ತಾರೆ. ಇದನ್ನು ಸಾಸಿ ತುಂಬಾಣ ಶಾಸ್ತ್ರ ಎನ್ನುತ್ತಾರೆ (ಸಾಸಿ=ಸೊಸೆ).

ಮದುವೆಯ ಚಡಂಗ ಮುಗಿದ ಮಾರನೇದಿನ ಮದುಮಕ್ಕಳಿಗೆ ಉಂಗ್ಲಾಟಾಡುವ ಕಾರ್ಯಕ್ರಮ ಇರುತ್ತದೆ. ಮುಕ್ರಿ ಸಮುದಾಯದಲ್ಲಿ ಬಾಸಿಂಗದೊಂದು ವಿಶೇಷ. ಇವರದು ಗುಡಿಗಾರರು ಮಾಡುವ ಬೆಂಡಿನ ಬಾಸಿಂಗವಲ್ಲ. ಬದಲಿಗೆ ಚೆಂದದ ಹೂವುಗಳನ್ನು ತಂದು ನೇಯ್ದು ಹೂವಿನ ಬಾಸಿಂಗ ಮಾಡುತ್ತಾರೆ. ಜಾಜಿ, ಸಂಪಿಗೆ, ನಂಜಟ್ಟೆ ಹೂವು, ಮಲ್ಲಿಗೆ, ಸಿಂಗಾರದ

ಹೂವುಗಳನ್ನು ತಂದು ಬಿದಿರಿನ ಕೋಲಿನ ಕಮಾನು ಮಾಡಿ ತೆಂಗಿನ ಕಡ್ಡಿಯ ತಟ್ಟೆಗಳನ್ನು ಮಾಡಿ ಪ್ರತಿ ತಟ್ಟೆಗಳಿಗೆ ಒಂದೊಂದು ಬಗೆಯ ಹೂವುಗಳನ್ನು ಪೋಣಿಸುತ್ತಾರೆ. ಇಡಿ ಚಾಸಿಂಗ ಬಣ್ಣ ಬಣ್ಣದ ಹೂವುಗಳಿಂದ ಕಂಗೊಳಿಸುತ್ತದೆ. ಮದುವೆಯ ನಂತರ ಹೆಣ್ಣಿನ ಮನೆಯಲ್ಲಿ ಬೀಗರ ಊಟವಿರುತ್ತದೆ. ಆ ದಿನ ಮೀನು ಅಥವಾ ಮಾಂಸದ ಊಟವಿರುತ್ತದೆ. ಎಲ್ಲರೂ ಸೇರಿ ಆ ದಿನ ಬೀಗರೂಟವನ್ನು ಸವಿಯುತ್ತಾರೆ.

ಶೋಭನ, ಸೀಮಂತ ಮತ್ತು ಹೆರಿಗೆ ಸಂಪ್ರದಾಯಗಳು

ಹಿಂದೆ ಮುಕ್ರಿಗಳಲ್ಲಿ ಬಾಲ್ಯ ವಿವಾಹ ಪದ್ಧತಿ ಇತ್ತು. ಶೋಭನವೂ ಕೂಡಾ ತಡವಾಗುತ್ತಿತ್ತು. ಆದರೆ ಈಗ ಮೈನೆರೆದ ಮೇಲೆ ಮದುವೆ ಮಾಡುವುದರಿಂದ ಶೋಭನವೂ ಬೇಗ ನಡೆಯುತ್ತದೆ. ಮಧುವಣಗಿತ್ತಿ ಮಿಂದ ನಾಲ್ಕನೇ ದಿನ್ನ ಅನ್ನ ಪಾಯಸ ಮಾಡಿ ಹಸೆ ಹಾಸುತ್ತಾರೆ. ಹಸೆ ಹಾಸಿದವರಿಗೆ ದುಡ್ಡು ಕೊಡುವ ಅಥವಾ ಅಕ್ಕಿ, ತೆಂಗಿನ ಕಾಯಿ ಕೊಡುವ ಪದ್ಧತಿ ಇದೆ. ಶೋಭನವು ಗಂಡಿನ ಮನೆಯಲ್ಲಿ ನಡೆಯುತ್ತದೆ.

ಗರ್ಭಿಣಿಗೆ ಐದು ತಿಂಗಳು ಆದಾಗ ಅವಳಿಗೆ ಇಷ್ಟವಾದ ತಿಂಡಿ–ತಿನಿಸನ್ನು ಮಾಡಿ ಬಡಿಸುತ್ತಾರೆ. ಏಳು ತಿಂಗಳಿನಲ್ಲಿ ಗಂಡನ ಮನೆಯಲ್ಲಿ ಬಯಕೆಯ ಶಾಸ್ತ್ರ ಮಾಡಿ ಆಮೇಲೆ ತವರು ಮನೆಗೆ ಕಳುಹಿಸುತ್ತಾರೆ. ಅಕ್ಕಿ ರೊಟ್ಟಿ, ಶಾವಿಗೆಯನ್ನು ಹೆಚ್ಚು ತಿನ್ನಿಸುತ್ತಾರೆ. ಗರ್ಭಿಣಿಯರಿಗೆ ಸೀರೆ ಉಡುಗರೆ ನೀಡುವ ಸಂಪ್ರದಾಯವಿದೆ.

ಹೆರಿಗೆ ನೋವು ಪ್ರಾರಂಭವಾದ ಕೂಡಲೆ ಬೆಜಗಿತ್ತಿಯನ್ನು ಕರೆಸುತ್ತಾರೆ. ಅವರು ಮುಕ್ರಿ ಸಮುದಾಯದವರೇ ಆಗಿರುತ್ತಾರೆ. ಇವರು ಸರಾಗವಾಗಿ ಹೆರಿಗೆ ಮಾಡಿಸುತ್ತಾರೆ. ಹೆರಿಗೆ ಕತ್ತಲು ಕೋಣೆಯಲ್ಲಿ ನಡೆಯುತ್ತದೆ. ಮಗು ಹುಟ್ಟಿದ ಕೂಡಲೇ ಬಾಣಂತಿಗೆ ನಂಜು ಏರಬಾರದೆಂದು ನಂಜಟ್ಲೆ ಬೇರನ್ನು ನಿಂಬೆ ರಸ ಅಥವಾ ಅಕ್ಕಚ್ಚಿನಲ್ಲಿ ತೇಯ್ದು ಕೊಡುತ್ತಾರೆ. ಹನ್ನೊಂದು ದಿನ ಕಳೆದ ನಂತರ ಮಗುವಿಗೆ ನಾಮಕರಣ ಶಾಸ್ತ್ರ ಮಾಡುತ್ತಾರೆ. ಅಂದು ಮಡಿವಾಳಗಿತ್ತಿ ತಂದ ಕಾರಬೂದಿಯಿಂದ ಮನೆ ಶುದ್ಧಿ ಮಾಡಿ, ಮನೆಯವರೆಲ್ಲ ಶುದ್ಧಿಯಾಗಿ ಮಗುವಿಗೆ ಸ್ನಾನ ಮಾಡಿಸುತ್ತಾರೆ. ಸ್ನಾನ ಮಾಡಿಸಿಕೊಂಡು ಬರುವಾಗ ಮನೆಯ ಮುಂದಿನ ಬಾಗಿಲ್ಲಿ ನಿಲ್ಲಿಸಿ ಮಗುವಿನ ಮುಖಕ್ಕೆ ನೀರು ಹೊಡೆಯುತ್ತಾರೆ. ಇದಕ್ಕೆ ಚಳ್ಳೆನೀರು ಹೊಡೆಯುವುದು ಎನ್ನುತ್ತಾರೆ. ಈ ನೀರು ಹೊಡೆಯುವಾಗ ಮಗು ಬೆಚ್ಚಿ ಬೀಳಬೇಕು. ಇದರಿಂದ ಮುಂದೆ ಎಲ್ಲವನ್ನು ಎದುರಿಸುವ ಶಕ್ತಿ ಬರುತ್ತದೆ ಎಂಬ ನಂಬಿಕೆ ಇದೆ. ಮಲವತ್ತು ಹೂತ ಜಾಗದಲ್ಲಿ ಕಳ್ಳಿ ಗಿಡದ ಟೊಂಗೆಗಳನ್ನು ನಿಲ್ಲಿಸುತ್ತಾರೆ. ಅದಕ್ಕೆ ಸಣ್ಣ ಸಣ್ಣ ಚಪ್ಪೆ ರೊಟ್ಟಿಗಳನ್ನು ಚುಚ್ಚುತ್ತಾರೆ.

ಸಾಮಾನ್ಯವಾಗಿ ಮುಕ್ರಿಗಳು ಮರದ ಬಿಳಿಲಿನ ಅಥವಾ ಅಡಿಕೆ ದಬ್ಬೆಯಿಂದ ಮಾಡಿದ ತೊಟ್ಟಿಲನ್ನು ಬಳಸುತ್ತಾರೆ. ಇತ್ತೀಚೆಗೆ ಕಬ್ಬಿಣದ ತೊಟ್ಟಲನ್ನು ಬಳಸುತ್ತಾರೆ. ಮಗುವನ್ನು ತೊಟ್ಟಿಲಿಗೆ ಹಾಕುವ ಮುನ್ನ ಕಲ್ಲುಗುಂಡೊಂದನ್ನು ಹಾಕಿ ತೂಗಲಾಗುತ್ತದೆ. ಹೀಗೆ ತೊಟ್ಟಿಲಿಗೆ ಹಾಕಿದ

ನಂತರ ಊರಿನ ಬುದವಂತರೇ ನಾಮಕರಣ ಮಾಡುತ್ತಾರೆ. ಇದನ್ನು ಸಾಧಾರಣವಾಗಿ ಮನೆ ದೇವರಿಗೆ ಪೂಜೆ ಮಾಡಿಸಿ ನೈವೇದ್ಯ ಮಾಡಿ ಗಂಡು ಮಗುವಿಗೆ ಮಾಸ್ತಿ, ನಿಂಗು, ನಾಗು, ಶಿವು, ಜಟ್ಟು, ಬೀರ, ಕನ್ನ, ಕಣೆಯ, ಲಿಂಗು, ಈಶ್ವರ, ಹನುಮಂತ ಮುಂತಾದ ಹೆಸರುಗಳನ್ನು ಇಡುತ್ತಾರೆ. ಹೆಣ್ಣು ಮಗುವಿಗೆ ಗಣಪಿ, ಹೊನ್ನಿ, ನಾಗಿ, ಸುಕ್ರಿ, ಲಕ್ಷ್ಮೀ, ಗೌರಿ, ಈರಿ, ದುರ್ಗಿ, ತಿಮ್ಮಿ, ಬೀರಿ ಮುಂತಾದ ತಾವು ಆರಾಧಿಸುವ ದೇವತೆಗಳ ಹೆಸರನ್ನು ಇಡುತ್ತಾರೆ.

ಚೋಳಂಗಿ

ಗಂಡು ಮಗುವಿಗೆ ಆರು ವರ್ಷ ಮುಗಿಯುವದರ ಒಳಗಾಗಿ ಈ ಕ್ರಿಯೆ ಮಾಡುತ್ತಾರೆ. ಮುಕ್ರಿಯರಿಗೆ ಕುದಲು ಕತ್ತರಿಸಲು ಕ್ಷೌರಿಕರು ಬರುವುದಿಲ್ಲ. ಬದಲಾಗಿ ಸೋದರ ಮಾವನೇ ಚೋಳಂಗಿ ಮಾಡುತ್ತಾನೆ. ಸೋದರ ಮಾವ ತಾನು ತಂದ ಬಂಗಾರದ ಮುರವನ್ನು ಮಗುವಿನ ಕಿವಿಗೆ ಚುಚ್ಚುತ್ತಾನೆ. ಇದಕ್ಕಾಗಿ ಮಗುವಿನ ತಂದೆ, ತಾಯಿ ಅವನಿಗೆ ಹೊಸವಸ್ತ್ರವನ್ನು ಕೊಡುತ್ತಾರೆ. ಸಂಬಂಧಿಕರಿಗೆಲ್ಲ ಪಾಯಸದೂಟವನ್ನು ಮಾಡಿ ಬಡಿಸುತ್ತಲಾಗುತ್ತದೆ.

ಧಾರ್ಮಿಕ ಆಚರಣೆಗಳು

ಶವಸಂಸ್ಕಾರ

ಮುಕ್ರಿಗಳಲ್ಲಿ ಸಾವಿನ ಬಗ್ಗೆ ಭಯ ಭೀತಿಗಳಿವೆ. ಯಾವುದೋ ದುಷ್ಟ ಶಕ್ತಿಯ ಕಾರಣದಿಂದಲೇ ತಮ್ಮ ಕುಟುಂಬದಲ್ಲಿ ಸಾವು ಸಂಭವಿಸಿದೆ ಎಂದು ನಂಬುತ್ತಾರೆ. ವ್ಯಕ್ತಿ ಸತ್ತ ಸುದ್ದಿ ಕೇಳ ಸುತ್ತಲಿನ ಮನೆಯವರು ಬಂದು ನೆರೆಯತೊಡಗುತ್ತಾರೆ. ತಕ್ಷಣ ಶವವನ್ನು ಮನೆಯ ಹೊರಗೆ ತಂದು ಉತ್ತರಾಭಿಮುಖವಾಗಿ ಮಲಗಿಸುತ್ತಾರೆ. ಎಲ್ಲರೂ ಶವಕ್ಕೆ ಕೈ ಮುಗಿಯುತ್ತಾರೆ. ಹೆಣಕ್ಕೆ ಸ್ನಾನ ಮಾಡಿಸುತ್ತಾರೆ. ನೀರು ಕಾಯಿಸಿದ ಮಡಿಕೆಯನ್ನು ಒಡೆಯುತ್ತಾರೆ. ಹಿರಿಮಗ ಬಂದು ಎಡಗೈಲಿ ತೆಂಗಿನಕಾಯಿಯನ್ನು ಹಿಡಿದು ಕತ್ತಿಯ ಬೆನ್ನಿನಿಂದ ಒಡೆಯುತ್ತಾನೆ. ಈ ತೆಂಗಿನಕಾಯಿ ಯನ್ನು ಪಂಚೆಗೆ ಕಟ್ಟುತ್ತಾರೆ. ಬಿಳಿಪಂಚೆಯನ್ನು ಶವಕ್ಕೆ ಹೊದಿಸಲಾಗುತ್ತದೆ. ಬಾಯಿಯ ಬಳಿ ಕತ್ತರಿಸಿ ಅಡಿಕೆ ಪುಡಿಯನ್ನು ಹಾಕುತ್ತಾರೆ.ಒಂದು ಸಿದ್ದೆ ಅಕ್ಕಿಯನ್ನು ಪಂಚೆಗೆ ಕಟ್ಟುತ್ತಾರೆ. ಕಾಯಿ ಚಿಪ್ಪಿನಲ್ಲಿ ೩ ರೊಟ್ಟಿ ಅನ್ನ ಕಟ್ಟಿ ಇಡುತ್ತಾರೆ. ಬಿದಿರಿನ ಕೋಲಿಗೆ ಹಸಿ ತೆಂಗಿನ ಗರಿಯನ್ನು ನೇಯ್ದು ಶವವನ್ನು ಈ ಗರಿಯಲ್ಲಿ ಸುತ್ತಿಕೊಂಡು ಸುಡುಗಾಡಿಗೆ ಒಯ್ಯುತ್ತಾರೆ. ತಿರುಪತಿಗೆ ಹೋಗಿ ಬಂದವರಾದರೆ ಅವರ ಕೊರಳಿಗೆ ತುಳಸಿ ಮಾಲೆ ಹಾಕಿ ಶವವನ್ನು ಎತ್ತುತ್ತಾರೆ. ಹೆಣವನ್ನು ಸ್ಮಶಾನಕ್ಕೆ ತಂದ ಮೇಲೆ ಹಿಂದು ಮುಂದು ಮಾಡುತ್ತಾರೆ. ಮಕ್ಕಳೇ ಹೆಣವನ್ನು ಎತ್ತಿ ಚಟ್ಟದ ಮೇಲೆ ಇಡಬೇಕು. ಮಕ್ಕಳಿಲ್ಲದಿದ್ದರೆ ಚಿಕ್ಕಪ್ಪ, ದೊಡ್ಡಪ್ಪನ ಮಕ್ಕಳು ಈ ಕೆಲಸ ಮಾಡುತ್ತಾರೆ. ತಲೆಗೆ ಮೊದಲು ಬೆಂಕಿಯನ್ನು ಕೊಡಲಾಗುತ್ತದೆ. ನಂತರ ಅಕ್ಕ ಪಕ್ಕ ಬೆಂಕಿಕೊಟ್ಟು ಕೊನೆಗೆ ಕಾಲು ಬುಡಕ್ಕೆ ಕೊಡುತ್ತಾರೆ. ಮರಣದ ಮೂರನೇ ದಿನ ಊರ ಜನರು ಕೂಡ ಅಕ್ಕಿಯಿಂದ ಮಾಡಿದ ೩ ರೊಟ್ಟಿಗಳನ್ನು ತಾವೇ ತಯಾರಿಸಿಕೊಂಡು ಶವಸಂಸ್ಕಾರ ಮಾಡಿದ

ಜಾಗಕ್ಕೆ ಹೋಗುತ್ತಾರೆ. ಜೊತೆಗೆ ಅನ್ನದ ಪದಾರ್ಥಗಳನ್ನು ಕುಡಿ ಬಾಳೆ ಎಲೆಯ ಮೇಲೆ ಹೆಣ ಸುಟ್ಟ ಜಾಗದಲ್ಲಿ ಇಡುತ್ತಾರೆ. ಇದು ಮೃತನಿಗೆ ಮಾಡಿದ ಮೀಸಲು. ಕಾಗೆಗಳು ಬಂದು ಅದನ್ನು ತಿನ್ನಬೇಕು. ಕಾಗೆ ಬಂದು ತಿನ್ನುವವರೆಗೆ ಜನರು ಅಲ್ಲೇ ಇರುತ್ತಾರೆ. ನಂತರ ಅಲ್ಲಿ ತುಳಸಿ ಗಿಡವನ್ನು ನೆಡುತ್ತಾರೆ. ಸ್ಮಶಾನಕ್ಕೆ ಹೋದವರು ಹಿಂತಿರುಗಿ ಬರುವುದರೊಳಗೆ ಹೆಂಗಸರು ಮನೆಯನ್ನು ಸಾರಿಸಿ ಮಡಿ ಮಾಡುತ್ತಾರೆ. ಮನೆಗೆ ಬಂದವರು ತಣ್ಣೀರಿನ ಸ್ನಾನ ಮಾಡಿ, ಊಟ ಮಾಡಿ ತಮ್ಮ ಮನೆಗೆ ಹೋಗುತ್ತಾರೆ. ೧೨ನೇ ದಿವಸ ಬಂಧು ಬಾಂಧವರು ಸೇರಿ ತಿಂಡಿಗಳು, ಮೀನಿನ ಸಾರು ಮಾಡಿ ಮನೆಗೆ ತಂದು ಕೊಡುತ್ತಾರೆ. ನಂತರ ಆ ಊರಿನ ಜನರಿಗೆ, ಸ್ಮಶಾನಕ್ಕೆ ಹೋದವರಿಗೆ ಊಟವನ್ನು ಹಾಕುತ್ತಾರೆ. ಈ ರೀತಿ ಶವಸಂಸ್ಕಾರದ ವಿಧಿ, ತಿಥಿ ಕಾರ್ಯಕ್ರಮ ನಡೆಯುತ್ತದೆ.

ಹನ್ನೊಂದನೇ ದಿನಕ್ಕೆ ದೆವ್ವ ಕಡಿಯುವ ಕಾರ್ಯಕ್ರಮವಿರುತ್ತದೆ. ಸತ್ತವನಿಗೆ ಇಷ್ಟವಾದ ತಿಂಡಿಗಳನ್ನು ಮಾಡಿಕೊಂಡು ಬಂದಿರುತ್ತಾರೆ. ಸತ್ತವನು ದೆವ್ವವಾಗಿ ಅಲ್ಲೇ ಅಲೆಯುತ್ತಿರುತ್ತಾನೆ. ಅವನು ಬೇರೆಯವರಿಗೆ ತೊಂದರೆ ಕೊಡುವ ಸಾಧ್ಯತೆ ಇರುತ್ತದೆ. ಆದ್ದರಿಂದ ದೆವ್ವವನ್ನು ಕಡಿದು ಸತ್ತವನಿಗೆ ಒಂದು ಸ್ಥಾನವನ್ನು ಕೊಡಬೇಕು ಎಂಬುದು ಮುಕ್ರಿಗಳ ನಂಬಿಕೆ.

ಮುಕ್ರಿಗಳಲ್ಲಿ ಗಾಡಿಗ ಎಂಬವನು ಇರುತ್ತಾನೆ. ದೆವ್ವ ಕೂಡಿಸುವ ದಿನ ೨ ಗಾಡಿಗರು ಬರುತ್ತಾರೆ. ದೊಡ್ಡ ನೋಟ ನೋಡುವವನು ದೆವ್ವವನ್ನು ಕೂಡಿಸುತ್ತಾ ಹೋಗಿ ಒಂದು ಕಡೆ ಸೇರಿಸುತ್ತಾನೆ. ಸಣ್ಣನೋಟ ನೋಡುವವನು ಅದು ಎಲ್ಲಿ ಹೋಯಿತು ಎಂದು ಕೇಳುತ್ತಿರುತ್ತಾನೆ. ದೆವ್ವ ತನ್ನ ಸ್ಥಾನ ಸೇರಿದ ಮೇಲೆ ಕುಟುಂಬದವರ ಯಾರಾದರೊಬ್ಬರ ಮೇಲೆ ಬಂದು ತಾನು ಇಂತಲ್ಲಿ ಸೇರಿದ್ದೇನೆ ಎಂದು ಹೇಳಿದಾಗ ಇಲ್ಲಿಗೆ ಒಂದು ಹಂತ ಮುಗಿಯಿತು. ಇನ್ನೊಂದು ಹಂತದಲ್ಲಿ ಕಾಯನ್ನು ಒಡೆದು ಮೇಲೆ ತೂರಲಾಗುತ್ತದೆ. ಕೆಲವು ಕಡೆ ಎಲೆಯನ್ನು ತೂರಲಾಗುತ್ತದೆ. ಎರಡು ಮೇಲ್ಮುಖವಾಗಿ ಬಿದ್ದರೆ ದೆವ್ವ ಕೂಡಿದೆ ಎಂದರ್ಥ. ಇಲ್ಲವಾದರೆ ಇಲ್ಲ ಎಂಬ ಭಾವನೆ ಇವರದ್ದು.

ದೈವಾರಾಧನೆ

ಆದಿವಾಸಿ ಸಮುದಾಯದವರಾದ ಮುಕ್ರಿಗಳು ತಮ್ಮದೇ ಆದ ಪೂಜಾ ವಿಧಿ ವಿಧಾನಗಳನ್ನು, ದೈವಗಳನ್ನು ಹೊಂದಿದ್ದಾರೆ. ಚಂದಾವರದ ಹನುಮಂತ ಇವರ ಪ್ರಧಾನ ದೇವರು. ಬಹುತೇಕ ಮುಕ್ರಿಯರ ಮನೆ ದೇವರು ಈ ಹನುಮಂತನೇ. ೧೯೮೦ರವರೆಗೆ ಈ ದೇವರ ಪ್ರತಿ ಕಾಯಕದಲ್ಲೂ ಮುಕ್ರಿಗಳಿಗೆ ಅವಕಾಶವಿತ್ತು. ಆದರೆ ಈಗ ಇವರನ್ನು ಕೈಬಿಡಲಾಗಿದೆ. ಹೆಗಡೆಯಲ್ಲಿರುವ ಕಲಿವೀರಭದ್ರನನ್ನು ಮುಖ್ಯ ದೇವರೆಂದು ಪೂಜಿಸಲಾಗುತ್ತದೆ. ವೀರಭದ್ರ ದೇವರ ಪೂಜಾರಿ ಮುಕ್ರಿಯರಾಗಿದ್ದು ಅದರ ಕಳಸವನ್ನು ಅವರೇ ಹೊರುತ್ತಾರೆ. ಪ್ರತಿ ಎರಡು ವರ್ಷಕ್ಕೊಮ್ಮೆ ಪೂಜಾರತ್ವ ಸಹೋದರರಲ್ಲಿಯೇ ಬದಲಾಗುತ್ತದೆ. ದೇವಸ್ಥಾನದ ಒಳಗೆ ಜಟಿಗ ಇನ್ನಿತರ

ಮೂರ್ತಿಗಳಿವೆ. ಜನವರಿ ಕೊನೆ ಅಥವಾ ಫೆಬ್ರುವರಿ ಮೊದಲ ವಾರದಲ್ಲಿ ಇದರ ಜಾತ್ರೆ ನಡೆಯುತ್ತದೆ. ತಣ್ಣೀರಕುಳಿಯಲ್ಲಿ ಇದರ ತವರು ಮನೆ ಇದ್ದು ಜಾತ್ರೆಯ ದಿನ ಅಲ್ಲಿಯ ಗಕ್ಕಾಯಮ್ಮನ ದೇವಸ್ಥಾನಕ್ಕೆ ಕಳಸವು ಹೋಗುವುದಲ್ಲದೆ, ಅಲ್ಲಿಂದ ಹೆಗಡೆಯ ಶಾಂತಿಕಾಂಬಾ ದೇವಳಕ್ಕೆ ಹೋಗಿ ತನ್ನ ಸ್ಥಾನಕ್ಕೆ ಬರುತ್ತದೆ. ನಾಲ್ಕನೆಯ ದಿನ ಓಕಳಿಯಾದ ಮೇಲೆ ದೇವಸ್ಥಾನದ ಬಾಗಿಲನ್ನು ಹಾಕುತ್ತಾರೆ. ಮತ್ತೆ ಒಂಬತ್ತನೇಯ ದಿನ ಬಾಗಿಲು ತೆರೆದು ಕೋಳಿ, ಕುರಿ ಬಲಿ ಕೊಟ್ಟು ಪೂಜೆ ಮಾಡಲಾಗುತ್ತದೆ. ಅಲ್ಲೇ ಸ್ವಲ್ಪ ದೂರದಲ್ಲಿ ನಾಗದೇವತೆಯ ಮೂಲ ಸ್ಥಾನವಿದ್ದು ಅಲ್ಲಿ ಯಾವಾಗಲೂ ನೀರು ಸುರಿಯುತ್ತಲೇ ಇರುತ್ತದೆ. ಪ್ರತಿ ಮನೆಯ ತುಳಸಿ ಕಟ್ಟೆಯಲ್ಲಿ ವೀರಭದ್ರನ ಕಟ್ಟೆಗೆ ಪ್ರತಿಮೆ ಇರುತ್ತದೆ. ಮುಕ್ರಿಗಳು ಬಬ್ರು ದೇವರನ್ನು ಪೂಜಿಸುತ್ತಾರೆ. ಹೈಗುಂದದಲ್ಲಿ ಬಬ್ರು ದೇವರಮೂರ್ತಿ ಇದೆ. ಪಟಗಾರರು ಇದನ್ನು ಪೂಜಿಸುತ್ತಾರೆ.

ಮುಕ್ರಿಗಳು ಮನೆಯ ಎಲ್ಲರೂ ಸೇರಿಕೊಂಡು ಧರ್ಮಸ್ಥಳ, ಅಯ್ಯಪ್ಪ ಸ್ವಾಮಿ, ತಿರುಪತಿ, ಶಿರಸಿ ಅಮ್ಮನ ಜಾತ್ರೆಗೆ ಹೋಗುವ ರೂಢಿ ಇಟ್ಟುಕೊಂಡಿದ್ದಾರೆ. ಶಿರಸಿಯ ಮಾರಿಯಮ್ಮನ ಬಗ್ಗೆ ಮುಕ್ರಿಗಳಿಗೆ ವಿಶೇಷವಾದ ನಂಬಿಕೆ. ಸಾಲ ಮಾಡಿಯಾದರೂ ಜಾತ್ರೆಗೆ ಹೋಗುತ್ತಾರೆ. ತಮ್ಮ ಮಕ್ಕಳ ಮದುವೆ, ಶುಭಕಾರ್ಯ ಮುಂತಾದವುಗಳಿಗೆ ಶಿರಸಿ ಮಾರಮ್ಮನ ಜಾತ್ರೆಯಾದ ನಂತರವೇ ಪ್ರಶಸ್ತ್ಯ ಎನ್ನುವ ನಂಬಿಕೆ. ಮೊದಲೆಲ್ಲ ಶಿರಸಿಗೆ ನಡೆದುಕೊಂಡು ಹೋಗುತ್ತಿದ್ದರು. ತಾಡುಕೊಪ್ಪ, ಹೆಗಡೆ ಶಾಂತಿಕಾಂಬ ದೇವರ ಪ್ರತಿಷ್ಠಾಪನೆ ಆದ ಮೇಲೆ ಕಡಿಮೆ ಆಗಿದೆ.ದುರ್ಗಿಮುರ್ಗಿ ದೇವಿಯನ್ನು ಅತ್ಯಂತ ಭಕ್ತಿಯಿಂದ ಪೂಜಿಸುತ್ತಾರೆ. ಅಮ್ಮಾ ಎಂದು ಕರೆಯುವ ತಾಡಿಕೊಪ್ಪದ ದುರ್ಗಾದೇವಿಯನ್ನು ಮಾರಮ್ಮನ ತಂಗಿ ಎಂದು ಪೂಜಿಸುತ್ತಾರೆ. ಮುಗ್ವಾ ಗ್ರಾಮದ ಬಿಳಿಯಮ್ಮನನ್ನೂ ಪೂಜಿಸುತ್ತಾರೆ.

‘ಜಟ್ಟಿಗ’ ಮುಕ್ರಿಯವರ ಸಾಂಸ್ಕೃತಿಕ ನಾಯಕ. ಸಮುದಾಯಕ್ಕಾಗಿ ಹೋರಾಡಿ ಸತ್ತ ನಾಯಕನಾಗಿರಬಹುದು. ಪಶುಪಾಲನೆ ಮತ್ತು ಭೇಟೆ ವಿಕಾಸವಾಗುತ್ತಿರುವ ಕಾಲದಲ್ಲಿ ಈ ದೇವರು ಹುಟ್ಟಿರುವ ಸಾಧ್ಯತೆಗಳಿವೆ. ತಿರುಪತಿ ತಿಮ್ಮಪ್ಪನ ಮೂರ್ತಿಯನ್ನು ತುಳಸಿಕಟ್ಟೆಯಲ್ಲಿಟ್ಟು ಶ್ರಾವಣ ಮಾಸದ ಶನಿವಾರ ಒಪ್ಪತ್ತು ಪೂಜೆ ಮತ್ತು ವೈಶಾಖ ಮಾಸದ ಶನಿವಾರ ಬಿದಿರಿನಿಂದ ಕಮಾನುಕಟ್ಟಿ ಮಾವಿನ ಎಲೆಗಳನ್ನು ಸೇರಿಸಿ ಕಾಯಿ ಒಡೆದು ಪೂಜಿಸುತ್ತಾರೆ. ದೇವಿಕಾನ್ ಹಬ್ಬ, ಬಾಡದ ತೇರು, ಹೊಸಾಕುಳಿ ಜಾತ್ರೆಗೆ ತಪ್ಪದೇ ಹೋಗುತ್ತಾರೆ. ಜಟಿಗ, ಮಾಸ್ತಿ, ನಾಗರ, ಚೌಡಿ ಮುಂತಾದ ದೇವರುಗಳಿಗೆ ಕೋಳಿ ಬಲಿ ನೀಡುತ್ತಾರೆ.

ಮುಕ್ರಿಗಳು ವಿವಿಧ ಆದಿವಾಸಿಗಳಂತೆ ಹಿರಿಯರ ಹಬ್ಬವನ್ನು ಪ್ರತ್ಯೇಕವಾಗಿ ಮಾಡುವುದಿಲ್ಲವಾದರೂ ಶನಿವಾರ ಮತ್ತು ಸೋಮವಾರ ಊಟ ಮಾಡುವ ಮೊದಲು ಕಾಗೆಗೆ ಎಡೆ ಹಾಕುತ್ತಾರೆ. ಇತ್ತೀಚಿಗೆ ಮುಕ್ರಿಯರು ಐಯ್ಯಪ್ಪ ಸ್ವಾಮಿಯನ್ನು ಪೂಜಿಸುವುದನ್ನು ಕಾಣಬಹುದಾಗಿದೆ. ಶಬರಿಮಲೆಗೆ ಹೋಗಿ ಬಂದವರು ಊರಿನ ಕೊಪ್ಪಗಳಲ್ಲಿ ಅದ್ದೂರಿ ಅನ್ನ ಸಂತರ್ಪಣೆಯನ್ನು ಮಾಡುವುದು ಕಂಡುಬರುತ್ತದೆ.

ಮಾಟ ಮಂತ್ರ

ಮುಕ್ರಿಯರಲ್ಲಿ ಮಾಟ ಮಂತ್ರಕ್ಕೆ ಹೆಚ್ಚಿನ ಬೆಲೆ ಇದೆ.ಸತ್ತವರು ದೆವ್ವವಾಗಿ ಕಾಡುತ್ತಾರೆಂಬ ನಂಬಿಕೆ ಇದೆ.ದೆವ್ವ ಭೂತ ಬಿಡಿಸುವವರನ್ನು ಗಾಡಿಗ ಎನ್ನುತ್ತಾರೆ. ಮಣೆಯ ಮೇಲೆ ಅಕ್ಕಿ ಕಾಳನ್ನು ಹಾಕಿಕೊಂಡು ಸರಿ ಬೆಸ ನೋಡಿ ಇಂತಹ ದೆವ್ವವೆಂದು ನಿರ್ಧರಿಸುತ್ತಾರೆ. ವೀಳ್ಯದೆಲೆ, ಹಸಿ ತೆಂಗಿನ ಗರಿ, ಬಾಳೆ ದಿಂಡನ್ನು ಚಾಕುವಿನಿಂದ ಕತ್ತರಿಸುತ್ತಾ ಬಂದವರ ಹೇಳಿಕೆ, ಕೇಳಿಕೆಗಳು ನಡೆಯುತ್ತವೆ. ಒಳ್ಳೆಯ ದೆವ್ವಗಳಾದರೆ ಅಲ್ಲಿಯೇ ತುಳಸಿ ಕಟ್ಟೆಗೆ ಕಟ್ಟುತ್ತಾರೆ. ಘೋರ ದೆವ್ವಗಳಾದರೆ ಗ್ರಾಮದೇವತೆಯ ಗುತ್ತಿನ ಮರಕ್ಕೆ ಕಟ್ಟುತ್ತಾರೆ. ದೆವ್ವ ಬಿಟ್ಟಿದೆಯಾ ಎಂದು ನೋಡಲು ಗಾಡಿಗ ಆವೇಶದಿಂದ ಕುಣಿಯುತ್ತಾ ತೆಂಗಿನ ಕಾಯನ್ನು ಎತ್ತರಕ್ಕೆ ಹಾರಿಸುತ್ತಾನೆ. ಕಾಯಿಯ ಕಡಿಗಳು ಅಂಗಾತ ಬಿದ್ದರೆ ದೆವ್ವ ಬಿಟ್ಟಿದೆಯೆಂದು ಮಗುಚಿ ಬಿದ್ದರೆ ಬಿಟ್ಟಿಲ್ಲವೆಂದರ್ಥ.

ಮಾಟ ಮಾಡಿಸುವ ಬಗ್ಗೆ ಸಾಕಷ್ಟು ಮುಕ್ರಿಯರು ನೈಜ ಘಟನೆಗಳನ್ನು ಹೇಳಿದ್ದಾರೆ. ಅಂಥವು ಬಹಳಷ್ಟು ಕಡೆ ನಡೆದಿದೆ ಎಂದು ನಂಬಲಾಗಿದೆ.ದೇವಿಕಾನ ದೇವಸ್ಥಾನದ ಗುನಗರು ಮಾಟ ಕೀಳುತ್ತಾರೆ ಎಂಬ ನಂಬಿಕೆ ಇದೆ.

ಮನೆಯ ಮುಂದೆ ಹೆಚ್ಚಾಗಿ ತುಳಸಿ ಕಟ್ಟೆಯನ್ನು ಕಾಣಬಹುದಾಗಿದೆ. ಇದನ್ನು ಚೊಳ್ಳಿ ಎಂದು ಕರೆಯುತ್ತಾರೆ. ಕಟ್ಟೆ ದೊಡ್ಡದಿದ್ದು ಒಳಗೆ ಸಣ್ಣ ಗೂಡಿನಂತಹ ರಚನೆ ಇರುತ್ತದೆ. ತುಳಸಿಕಟ್ಟೆಯಲ್ಲಿ ಕೆಲವರು ದೇವರ ಭಾವಚಿತ್ರಗಳನ್ನು, ಚಿಕ್ಕ ಚಿಕ್ಕ ಮೂರ್ತಿಗಳನ್ನು ಪೂಜೆಗೆ ಇಡುತ್ತಾರೆ. ಅವುಗಳೆಂದರೆ ನಾಗರ ಹೆಡೆ, ಹನುಮಂತ, ವೆಂಕಟರಮಣ, ವೀರಭದ್ರ ಮುಂತಾದವುಗಳು. ಒಂದು ತೆಂಗಿನ ಕಾಯಿ ಇಟ್ಟು ಪೂಜಿಸುತ್ತಾರೆ. ರಂಗೋಲಿ ಹಾಕುವ ಸಂಪ್ರದಾಯವಿದೆ. ಇದಕ್ಕೆ ಹಲಿ ಹೊಯ್ಯುವದು ಎನ್ನುತ್ತಾರೆ. ಮನೆಯ ಬಾಗಿಲಿಗೆ ಮಾವಿನ ಎಲೆ ಮತ್ತು ತೆನೆಗಳಿಂದ ತೋರಣ ಕಟ್ಟುತ್ತಾರೆ. ಕೆಲವು ಮನೆಗಳ ಎದಿರು ದೊಡ್ಡ ಹುತ್ತವಿದ್ದು ಅದನ್ನು ಮನೆದೇವರೆಂದು ಹೇಳುತ್ತಾರೆ. ಮುಕ್ರಿಗಳ ಬದುಕಿನ ವಿನ್ಯಾಸವನ್ನು ಗಮನಿಸಿದರೆ ಅವರು ಈಗ ವಾಸವಾಗಿರುವ ಪ್ರದೇಶ ಅಷ್ಟು ಸಮರ್ಪಕವಾಗಿಲ್ಲ. ಒತ್ತೊತ್ತಾಗಿ ಕಟ್ಟಿಕೊಂಡ ಮನೆಗಳು, ಮೂಲಭೂತ ಸೌಕರ್ಯಗಳಿಲ್ಲದ ಕೊಪ್ಪಗಳು, ಸಮರ್ಪಕ ಸಾರಿಗೆ ವ್ಯವಸ್ಥೆಯ ಸಂಪರ್ಕವಿಲ್ಲದ ರಸ್ತೆಗಳು ಹೀಗೆ ಮುಂತಾದ ಅನಾನುಕೂಲಗಳಿಂದ ಅವ್ಯವಸ್ಥೆಯ ಬೀಡಾಗಿದೆ. ಎಷ್ಟೋ ಊರಿನಲ್ಲಿ ಅವರು ವಾಸಿಸುತ್ತಿರುವ ಅವರ ಮನೆಯ ಭೂಮಿಯು ಅವರ ಹೆಸರಲ್ಲಿರದೆ ಬೇರೆಯವರದ್ದಾಗಿದೆ. ಸಣ್ಣ ಸಣ್ಣ ಜೋಪಡಿಗಳು ಅವರನ್ನು ನಿಶ್ಯಕ್ತರನ್ನಾಗಿಸಿದೆ. ಇಂಥ ಅಸಹಾಯಕತೆಗೆ ಇಂದು ಮುಕ್ರಿ ಸಮುದಾಯ ಒಳಗಾಗಿದೆ. ಸರ್ಕಾರ ಅವರನ್ನು ಅಲ್ಲಿಂದ ಮೊದಲು ಸ್ಥಳಾಂತರಿಸಿ ವಿಶಾಲವಾದ ಜಾಗದಲ್ಲಿ ಅವರ ಸಾಮುದಾಯಿಕ ವೈಶಿಷ್ಟ್ಯಗಳ ವಿವೇಕದೊಂದಿಗೆ ಮನೆಗಳನ್ನು ನಿರ್ಮಿಸಿಕೊಟ್ಟರೆ ಸ್ವತಂತ್ರ ಭಾರತದ ಕಲ್ಪನೆಗೆ ಅರ್ಥ ಸಿಕ್ಕಿದಂತಾಗುತ್ತದೆ. ನದಿ ದಡದ ಮೇಲೆ, ಸಮುದ್ರದ ತೀರದಲ್ಲಿ, ಹಿನ್ನೀರಿನ ಅಂಚಿನಲ್ಲಿ ಮನೆಗಳನ್ನು ಕಟ್ಟಿಕೊಂಡಿರುವ

ಮುಕ್ರಿಗಳ ಮನೆಗಳು ನದಿಗಳೇನಾದರೂ ಉಕ್ಕಿ ಹರಿದರೆ ಮನೆಗಳಿಗೆ ನೀರು ನುಗ್ಗಿ ಅವರ ಬದುಕು ಮೂರಾಬಟ್ಟೆಯಾಗುತ್ತದೆ. ಆದ್ದರಿಂದ ಅವರಿಗೆ ವ್ಯವಸ್ಥಿತ ಬಡಾವಣೆಗಳನ್ನು ನಿರ್ಮಾಣ ಮಾಡಿ ರಸ್ತೆ, ಕುಡಿಯುವ ನೀರು, ವಿದ್ಯುತ್ ವ್ಯವಸ್ಥೆ, ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಿದರೆ ಮುಕ್ರಿಗಳಿಗೆ ನಾಗರಿಕ ಜಗತ್ತಿನಲ್ಲಿ ಬದುಕುತ್ತಿದ್ದೇವೆ ಎಂಬ ಕಲ್ಪನೆಯಾದರೂ ಹುಟ್ಟುತ್ತದೆ. ಇವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿದರೆ ಇವರು ಆಧುನಿಕ ನಾಗರಿಕರಾಗಿ ಬಾಳುತ್ತಾರೆಂಬ ವಿಶ್ವಾಸವನ್ನು ಹೊಂದಬಹುದಾಗಿದೆ. ಇತ್ತೀಚೆಗೆ ಇವರು ಶಿಕ್ಷಣದತ್ತ ಒಲವನ್ನು ಹೊಂದುತ್ತಿರುವುದು ಇದಕ್ಕೆ ಪುಷ್ಠಿಯನ್ನು ಕೊಡುತ್ತದೆ.

ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ವ್ಯವಸ್ಥೆ

ಮುಕರಿಗಳ ಆರ್ಥಿಕ ಪರಿಸ್ಥಿತಿ ತೀರಾ ಕೆಳಮಟ್ಟದ್ದಾಗಿದೆ. ಇವರು ಹೆಚ್ಚಾಗಿ ಬೇರೆಯವರ ಜಮೀನಿನಲ್ಲಿ ದುಡಿಯುತ್ತಾರೆ. ಸ್ವಂತ ಜಮೀನನ್ನು ಹೊಂದಿದವರು ವಿರಳವಾಗಿ ಕಾಣಸಿಗುತ್ತಾರೆ. ಹವ್ಯಕರ ಬಳಿ ಮಳೆಗಾಲದಲ್ಲಿ ಸಾಲ ಮಾಡಿ ಅದನ್ನು ತೀರಿಸಲು ಭೂಮಿಯನ್ನು ಊಳುವ ಕೆಲಸ, ತೋಟದ ಕೆಲಸ, ಭಾವಿ ತೊಡುವ ಕೆಲಸ, ಮಣ್ಣು ಹೊರುವ ಕೆಲಸ, ತೆಂಗಿಕಾಯಿಯನ್ನು ಕೊಯ್ಯುವುದು, ಸಿಪ್ಪೆ ಸುಣ್ಣ ತೆಗೆಯುವುದು, ಜಂಬಟ್ಟಿಗೆ ಕಲ್ಲು ಕಡಿಯುವುದು ಮುಂತಾದ ಕೂಲಿಕೆಲಸವನ್ನು ಮಾಡುತ್ತಾರೆ. ಉದ್ಯೋಗದ ಸಮಸ್ಯೆ ಉಂಟಾದಾಗ ಘಟ್ಟದ ಮೇಲೆ ಕೂಲಿ ಕೆಲಸಕ್ಕೆ ಹೋಗುತ್ತಾರೆ. ಹೆಂಗಸರು ಗದ್ದೆ ನೆಟ್ಟಿ ಮಾಡುವುದು, ಗಂಡಸರ ಕೆಲಸಕ್ಕೆ ಸಹಾಯ ಮಾಡುವುದು, ಕಳೆ ತೆಗೆಯುವುದು, ಅಡಿಕೆ ಒಟ್ಟು ಗೂಡಿಸುವ ಕೆಲಸಗಳನ್ನು ಮಾಡುತ್ತಾರೆ. ಇತ್ತೀಚೆಗೆ ಅಲ್ಲಲ್ಲಿ ಕೆಲವರು ಚಿಕ್ಕಪುಟ್ಟ ವ್ಯಾಪಾರಗಳನ್ನು ಮಾಡುತ್ತಿದ್ದಾರೆ. ಇನ್ನೂ ಕೆಲವರು ಮದುವೆಗಳಲ್ಲಿ ವಾದ್ಯ ನುಡಿಸುತ್ತಾರೆ. ಆಧುನಿಕತೆಯ ಕಾರಣದಿಂದಾಗಿ ಕೆಲವರು ಮೀನು ಉದ್ಯಮ, ಗೇರುಬೀಜ ಕಾರ್ಖಾನೆಯಲ್ಲಿ ಕೂಲಿ ಕೆಲಸ, ಬಟ್ಟೆ ಕಾರ್ಖಾನೆಯಲ್ಲಿ ಕೆಲಸ, ನರ್ಸ ಕೆಲಸ ಮತ್ತು ಓದಿದವರು ಸರ್ಕಾರಿ ಕೆಲಸವನ್ನು ಅರಸುತ್ತಿದ್ದಾರೆ.

ಕೇವಲ ೨೫ ಸಾವಿರ ಜನಸಂಖ್ಯೆ ಹೊಂದಿರುವ ಮುಕ್ರಿಗಳಿಗೆ ಪೂರ್ಣ ಪ್ರಮಾಣದ ರಾಜಕೀಯ ನಾಯಕತ್ವ ಈವರೆಗೂ ಲಭ್ಯವಾಗಿಲ್ಲ. ಸಂವಿಧಾನದ ಸೌಲಭ್ಯಕ್ಕೆ ಅನುಗುಣವಾಗಿ ಜಿಲ್ಲಾ, ತಾಲೂಕು ಪಂಚಾಯಿತಿ ಮತ್ತು ಗ್ರಾಮಪಂಚಾಯತಿ ಸ್ಥಾನಗಳನ್ನು ಮೀಸಲಿಡುವ ವ್ಯವಸ್ಥೆ ಇರುವುದರಿಂದ ಕೆಲವರಿಗೆ ಪ್ರತಿನಿಧಿಯಾಗುವ ಅವಕಾಶ ಲಭ್ಯವಾಗಿದೆ. ಸಮಾಜದ ಒಳಿತಿಗಾಗಿ ಹಂಬಲಿಸುವ ನಾಯಕರು ಆಯ್ಕೆಯಾಗದೆ ಪ್ರಭುತ್ವದ ತಾಳಕ್ಕೆ ಕುಣಿಯುವ ಜನರನ್ನೇ ನೋಡಿ ಟಿಕೆಟ್ ಕೊಟ್ಟು ಗೆಲ್ಲಿಸಲಾಗುತ್ತದೆ. ಅವರು ಪಕ್ಷದ ನಾಯಕರ ಮರ್ಜಿಯಲ್ಲಿ ಇರಬೇಕಾದ ಅನಿವಾರ್ಯತೆ ಇರುತ್ತದೆ. ಭಾರತದಂತಹ ಹಲವಾರು ಸಮುದಾಯಗಳಿರುವ ದೇಶದಲ್ಲಿ ಮೀಸಲಾತಿಯ ಬೆಂಬಲವಲ್ಲದೆ ಅಧಿಕಾರಕ್ಕೆ ಬರುವುದು ತುಂಬಾ ಕಷ್ಟ ಎರಡೂ ತಾಲೂಕಿನಲ್ಲೂ ಕಳೆದ ಎರಡು ವರ್ಷಗಳಿಂದ ಒಬ್ಬ ವ್ಯಕ್ತಿಯೂ ಜಿಲ್ಲಾ ಪಂಚಾಯತಿಗೆ ಆಯ್ಕೆಯಾಗಿಲ್ಲ ಎಂದರೆ ಪ್ರಜಾಪ್ರಭುತ್ವ ವ್ಯವಸ್ಥೆ ಹೇಗಿದೆ ಎಂಬುದನ್ನು ಮನಗಾಣಬಹುದು.

ಮುಕ್ರಿಗಳಲ್ಲಿ ಓದಿದವರ ಪ್ರಮಾಣ ತುಂಬಾ ಕಡಿಮೆ. ಇತ್ತೀಚಿನ ದಿನಗಳಲ್ಲಿ ಆ ಪ್ರಮಾಣ ಏರಿಕೆಯಾಗಿದೆ. ಬಹುತೇಕರನ್ನು ಕೇಳಿದಾಗ ನಮಗೆ ಹೊಟ್ಟೆ ಹೊರೆದುಕೊಳ್ಳುವುದೇ ಕಷ್ಟ ಇನ್ನು ಓದು ಬರಾ ನಮಗ್ಯಾಕೆ ಸ್ವಾಮಿ ಅಂತಾರೆ. ಹೆಚ್ಚಾಗಿ ೩-೪ನೇ ತರಗತಿ ಓದಿದವರೆ ಹೆಚ್ಚು, ಈ ಸಮುದಾಯದಿಂದ ಒಬ್ಬ ವೈದ್ಯ, ಇಂಜಿನಿಯರ್ ಬಂದಿಲ್ಲ, ಗಣಪತಿ ಮುಕ್ರಿ ಒಬ್ಬ ಮಾತ್ರ ಪಿಎಚ್.ಡಿ. ಮಾಡಿದ್ದಾರೆ. ಬಹಳ ಮುಖ್ಯವಾಗಿ ಸಾಂಪ್ರದಾಯಿಕ ಪಠ್ಯಕ್ರಮಗಳಿಗಿಂತ ಭಿನ್ನವಾಗಿ ಡಿಪ್ಲೊಮಾ, ನರ್ಸಿಂಗ್, ಕಂಪ್ಯೂಟರ್ ತರಬೇತಿ. ಪಾಲಿಟೆಕ್ನಿಕ್, ಲಾ ಮುಂತಾದ ವೃತ್ತಿಪರ ಕೋರ್ಸ್‌ಕಡೆ ಹೆಚ್ಚು ಒಲವನ್ನು ತೋರುತ್ತಿದ್ದಾರೆ. ಆದರೆ ಓದಿನ ನಂತರ ಇವರಿಗೆ ಸೂಕ್ತ ರೀತಿಯ ಉದ್ಯೋಗ ಗಿಟ್ಟಿಸಿಕೊಳ್ಳುವುದರಲ್ಲಿ ಪರದಾಡುತ್ತಿದ್ದಾರೆ.

ಕೃಷಿ-ಭೂ ಹಿಡುವಳಿ-ಪಶುಪಾಲನೆ

ಮುಕ್ರಿಗಳ ಪರಿಸ್ಥಿಯ ಬಗ್ಗೆ ಚರ್ಚೆಮಾಡುವ ಮುನ್ನ ಅವರ ಬದುಕನ್ನು ಬದಲಾಯಿಸುವ ಯಾವುದೇ ಚಳುವಳಿಗಳೂ ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆಯಲ್ಲಿಲ್ಲ ಎನ್ನುವುದು ಹಾಸ್ಯಾಸ್ಪದ ಸಂಗತಿಯೆ ಸರಿ. ೧೯೩೩ರ ಸುಮಾರಿಗೆ ನಡೆದ ಅಂಕೋಲದ ಸತ್ಯಾಗ್ರಹ ಕನ್ನಡದ ಚಾರಿತ್ರಿಕ ಸಂದರ್ಭದಲ್ಲಿ ಅತಿ ಪ್ರಮುಖವಾದುದು. ಅಂಕೋಲೆಯಿಂದ ಕಾರವಾರದವರೆಗೆ ಶ್ರೀಯುತ ಗಿರಿಪಿಕಳೆಯವರ ನಾಯಕತ್ವದಲ್ಲಿ ಹೆಂಗಸರು, ಮುದುಕರು, ಮಕ್ಕಳೆಲ್ಲಾ ಸೇರಿ ಸಾವಿರಾರು ರೈತರು ಸೇರಿ ಕಾಲ್ನಡಿಗೆಯಿಂದ ಹೊರಟು ಉಳುವವನೆ ಹೊಲದೊಡೆಯ ಎಂಬ ಘೋಷಣೆ ಕೂಗುತ್ತಾ ಹೊರಟರು.

ಒಡೆಯರ ಭುಮಿಯಲ್ಲಿ ತಮ್ಮ ಜೀವನವನ್ನು ರೂಪಿಸಿಕೊಂಡಿದ್ದ ಒಂದು ಸಮುದಾಯವು ಅವರ ವಿರುದ್ಧ ಬೆಳೆಯುವ ಮಟ್ಟಕ್ಕೆ ಹೋಗುವದು ತುಂಬಾ ಕಡಿಮೆ. ಇವರಿಗೆ ಆ ಹೊತ್ತಿನ ಊಟ ಸಿಕ್ಕರೆ ಸಾಕು. ಇದರ ಹೊತಾಗಿ ಚಳುವಳಿ, ಸಭೆ ಮುಂತಾದವುಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಯಾಕೆಂದರೆ ಮೊದಲಿನಿಂದಲೂ ತಬ್ಬಲಿತನವು ಹಾಸೊಕ್ಕಾಗಿ ಬಂದಿದೆ.ಅದಕ್ಕೆ ಅವರ ಉತ್ತರ ಮೌನ.

ಲಭ್ಯವಾದ ಮಾಹಿತಿಯ ಪ್ರಕಾರ ಒಟ್ಟರೆ ಎರಡು ತಾಲೂಕುಗಳ ಮುಕ್ರಿಗಳಲ್ಲಿ ೯೭೨ ಕುಟುಂಬಗಳ ಪೈಕಿ ೮೮೧ ಕುಟುಂಬಗಳಿಗೆ ಯಾವುದೇ ಜಮೀನು ಇರುವುದಿಲ್ಲ. ಆದ್ದರಿಂದ ಭಾರತದ ಆರ್ಥಿಕ ವಲಯದಲ್ಲಿ ಮುಕ್ರಿಗಳು ಸದ್ದನ್ನು ಮಾಡಲು ಸಾಧ್ಯವಿಲ್ಲ. ಭೂಮಿಯೆ ಇಲ್ಲದ್ದರಿಂದ ಸರ್ಕಾರದ ಯೋಜನೆಗಳ ಫಲಾಫಲಗಳನ್ನು ಪಡೆಯಲು ಹೇಗೆ ಸಾಧ್ಯ?. ಸಂವಿಧಾನಬದ್ಧ ಸೌಲಭ್ಯಗಳನ್ನು ಹೊಂದಲು ಸಾಧ್ಯವಾಗದಿದ್ದಾಗ ಪ್ರಗತಿಯ ಮಾರ್ಗದಲ್ಲಿ ಮುಕ್ರಿಗಳ ಸ್ಥಾನವೇನು ಎಂಬ ಪ್ರಶ್ನೆ ಹುಟ್ಟುತ್ತದೆ. ಎರಡು ತಾಲೂಕಿನಲ್ಲಿ ಒಟ್ಟು ಕೃಷಿ ಮಾಡುವವರ ಸಂಖ್ಯೆ ಕೇವಲ ೪ ಕುಟುಂಬಗಳು ಮಾತ್ರ, ಆದರೆ ಕೃಷಿ ಕೂಲಿ ಮಾಡುವವರ ಸಂಖ್ಯೆ ೨೩೭೫ ಜನ. ಇವರ ಉದ್ಯೋಗಕ್ಕೆ ಯಾವುದೇ ತರಹದ ಭದ್ರತೆ ಇಲ್ಲ. ಹಾಗೇನಾದರೂ

ನಿಶ್ಚಿತ ಉದ್ಯೋಗ ಬೇಕೆಂದರೆ ಅಲ್ಲಿ ಕೂಲಿ ಪಡೆದು ದುಡಿಯಬೇಕು. ಇದು ಒಂದು ತರಹದ ಜೀತ ಪದ್ಧತಿಯೇ ಸರಿ.

ಬಿಲ್ಲವ ಸಮುದಾಯ

ದಕ್ಷಿಣ ಕನ್ನಡದ ನಿರ್ಲಕ್ಷಿತ ಸಮುದಾಯಗಳಲ್ಲಿ ಬಿಲ್ಲವ ಸಮುದಾಯವೂ ಒಂದು. ಇದಕ್ಕೆ ಪೂರಕವಾಗಿ ದೈವಗಳ ಪಾಡ್ದನಗಳಲ್ಲಿ ಮೌಖಿಕ ದಾಖಲೆ ಸಿಗುತ್ತದೆ. ತುಳುನಾಡಿನ ಹೆಚ್ಚಿನ ದೈವಗಳು ಬಿಲ್ಲವರ ಭಕ್ತಿಗೆ ಮತ್ತು ಮುಗ್ಧತೆಗೆ ಮೆಚ್ಚಿ ಬೆಂಬತ್ತಿ ಬಂದುವುಗಳಾಗಿವೆ. ತುಳುನಾಡಿನ ಸಂಸ್ಕೃತಿಗೆ ಬಿಲ್ಲವರ ಕೊಡುಗೆ ಅಪಾರವಾಗಿದೆ. ಹಿಂದೊಮ್ಮೆ ಭವ್ಯತೆಯಿಂದ ಮೆರದವರು ಕಾಲ ಕೈಕೆಳಗೆ ಸಿಲುಕಿ ಮತ್ತು ಪರಕೀಯದ ಧಾಳಿಗೆ ತುತ್ತಾಗಿ ತಮ್ಮ ಮೂಲ ಅಸ್ತಿತ್ವವನ್ನೇ ಕಳೆದುಕೊಂದಿದ್ದಾರೆ. ಆದರೆ ಒಂದು ಕಾಲದಲ್ಲಿ ತಮ್ಮ ಸತ್ಯಪರತೆ, ಸತ್ಯ ಸಂಧತೆ ಮತ್ತು ತಾವು ಮಾಡುವ ಕಾಯಕದ ಮುಖಾಂತರ ತಮ್ಮನ್ನು ಬೇರೆ ಬೇರೆ ಹೆಸರಿನಿಂದ ಕರೆಸಿಕೊಂಡು ಗೌರವಕ್ಕೆ ಪಾತ್ರರಾಗಿದ್ದರು. ಕಾಲಾಂತರದಲ್ಲಿ ಎಲ್ಲವನ್ನು ಕಳೆದುಕೊಂಡು ಮೂಲೆಗುಂಪಾದರು. ಕಾಡೇ ಸಂಪತ್ತಾಗಿದ್ದ ಸಮಯದಲ್ಲಿ ಕಾಡಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದ ಬಿಲ್ಲವರು ಪ್ರಕೃತಿಯ ಆರಾಧಕರಾಗಿದ್ದರು. ಇವರಿಗೆ ಕಾಡಿನ ಇಂಚಿಂಚು ಸಹ ಪರಿಚಯವಿತ್ತು. ಈ ಕಾಡಿನಿಂದಲೇ ಜನಾಂಗಗಳ ಉದಯವಾಗಿದ್ದು. ಈ ರೀತಿಯಾಗಿ ಗಿಡಮೂಲಿಕೆ, ಗಡ್ಡೆ ಬೇರುಗಳ ಪರಿಚಯ, ಅವುಗಳ ವೈಶಿಷ್ಟ್ಯತೆಯ ಬಗ್ಗೆ ಅರಿವಿದ್ದ ಸಮುದಾಯ ವೈದ್ಯ ವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಬೈದ್ಯರೆನಿಸಿಕೊಂಡರು. ಇದಕ್ಕೆಲ್ಲ ಆಧಾರ ದೈವಾರಾಧನೆಯಲ್ಲಿ ಬರುವಂತಹ ದೇಯಿ ಬೈದೆತಿ, ಆನೆ ಬೈದ್ಯ, ಬಿರ್ಮಣ್ಣ ಬೈದ್ಯ, ಸಿದ್ದ ಮದ್ ಬೈದ್ಯ ಮತ್ತು ಅಡೂರ ದೇರೆ ಬೈದ್ಯ ಎನ್ನುವ ವೈದ್ಯ ವೃತ್ತಿಯಲ್ಲಿ ತೊಡಗಿಸಿಕೊಂಡ ಪಾತ್ರಗಳು.

ಅದೇ ರೀತಿ ಆದಿ ದ್ರಾವಿಡ ಸಮುದಾಯ ಇವತ್ತಿಗೂ ಬಿಲ್ಲವರನ್ನು ವೈದ್ಯರೆಂದೇ ಸಂಭೋದಿಸುತ್ತಾರೆ. ಅದೇ ರೀತಿ ನಾಟಿ ವೈದ್ಯ ವಿದ್ಯೆಯಲ್ಲಿ ಶೇಂದಿ ಒಂದು ಔಷಧ ಪಟ್ಟಿಯಲ್ಲಿ ಪಾಲು ಪಡೆದುಕೊಂಡಿರುವುದರ ಹೊರತಾಗಿ ಅದು ಅಮಲಿನ ವಾಸ್ತುವಾಗಿ ಪರಿಗಣಿಸಿಕೊಂಡಿಲ್ಲ. ಅಲ್ಲದೇ ಕಾಡಿನಲ್ಲಿ ವಾಸವಿದ್ದ ಈ ಸಮುದಾಯಕ್ಕೆ ಯಾವ ಬೇರಿನಲ್ಲಿ, ಯಾವ ಕಾಯಿಯಲ್ಲಿ, ಯಾವ ಕಾಂಡದಲ್ಲಿ ಯಾವ ವೈಶಿಷ್ಟ್ಯವಿದೆ ಎಂದು ತಿಳಿದಿರುವುದರಿಂದ ಶೇಂದಿ ವೈದ್ಯ ಪದ್ಧತಿಯಲ್ಲಿ ಆಗಿನ ಕಾಲದಲ್ಲಿ ಅರವಳಿಕೆ ರೀತಿಯಲ್ಲಿ ಬಳಕೆಯಾಯಿತು. ಆ ಕಾಲದಲ್ಲಿ ವೈದ್ಯರು ಮಾತ್ರ ಶೇಂದಿ ತೆಗೆಯುತ್ತಿದ್ದರು. ಆದುದರಿಂದ ಶೇಂದಿ ತೆಗೆಯುವವರಿಗೆ ಬೇರೆ ಹೆಸರಿನಿಂದ ಕರೆಯುವ ಸಂಪ್ರದಾಯವಿರಲಿಲ್ಲ. ಯಾಕೆಂದರೆ ಅದು ಒಂದು ವೃತ್ತಿಯಾಗಿ ಪರಿಗಣಿತವಾಗಿಲ್ಲ ಮತ್ತು ಕೆಲವೇ ಮಂದಿ ಮಾಡುತ್ತಿದ್ದ ಕೆಲಸವಾದ್ದರಿಂದ ಮತ್ತು ಒಂದಿಬ್ಬರು ಒಂದು ಉದ್ದೇಶಕ್ಕೆ ಬೇಕಾಗಿ ಮಾಡುವ ಕೆಲಸವಾದುದರಿಂದ ಅದಕ್ಕೆ ಒಂದು ಜಾತಿಯ ಹೆಸರಿಟ್ಟು ಕರೆಯುವ ವಾಡಿಕೆ ಇರಲಿಲ್ಲ. ಆದುದರಿಂದ ಬಿಲ್ಲವರಿಗೆ ಇಂತಹುದೇ ವೃತ್ತಿ ಮಾಡುವವರೆಂಬ ಸೀಮಿತ ಚೌಕಟ್ಟು ಇರಲಿಲ್ಲ. ಎಲ್ಲದರಲ್ಲೂ ಜ್ಞಾನ ಹೊಂದಿದವರೇ ಆಗಿದ್ದರು.

ಬಹುಪಾಲು ಉದರ ಪೋಷಣೆಗೆ ಕೃಷಿಯನ್ನೇ ಅವಲಂಬಿಸಿದ್ದ ಜನ ಸಮುದಾಯಕ್ಕೆ ಮುಂದಾಳತ್ವ ವಹಿಸಿದವರು ಬಿಲ್ಲವರು. ಯಾವ ಸಮಯದಲ್ಲಿ ಯಾವ ರೀತಿಯ ಬೆಳೆ ಬೆಳೆದರೆ ಉತ್ತಮ ಎನ್ನುವ ಮಾಹಿತಿ ಇದ್ದ ಬಿಲ್ಲವರು, ರಾಜಾಶ್ರಯದಲ್ಲಿ ನಟ್ಟಲ ಬರ್ಕೆ ಎನ್ನುವ ಗೌರವವನ್ನು ರಾಜರಿಂದ, ಬಲ್ಲಾಳರಿಂದ ಪಡೆದು ತುಳುನಾಡಿನಲ್ಲಿ ಬಿಲ್ಲವರು ಮಾತ್ರ. ಬಿಲ್ಲವರಿಗೆ ಪ್ರಕೃತಿಯೊಂದಿಗೆ ಇದ್ದಂತಹ ಆಪ್ಯಾಯ ಮಾನತೆಯನ್ನು ಪರಿಗಣಿಸಿ, ಬಿಲ್ಲವರ ಕೆಲವು ಮನೆಗಳಿಗೆ ನೀಡಿದ ಮನ್ನಣೆ ಆಗಿರಬೇಕು. ಬೋಂಟ್ರ ಎನ್ನುವ ಮರ್ಯಾದೆಯು ಕೂಡ ಬಿಲ್ಲವರಿಗೆ ಮಾತ್ರ ಸಲ್ಲುವ ಒಂದು ಕಾಲದ ರಾಜಾಶ್ರಯದ ಗೌರವ ಆಗಿತ್ತು. ರಾಜರ ಆಡಳಿತ ಕಾಲದಲ್ಲಿ ಕೃಷಿ ಸಂಪತ್ತಿಗೆ ತೊಂದರೆ ಮಾಡುತ್ತಿದ್ದ ಕಾಡು ಪ್ರಾಣಿಗಳನ್ನು ನಿವಾರಿಸಲು ಬಿಲ್ಲವರ ಕೆಲವು ಮನೆಗಳಿಗೆ ಬೋಂಟ್ರ ಎನ್ನುವ ಬಿರುದು ಆಧಾರಿತ ಗೌರವವಿತ್ತು. ಈ ಬೋಂಟ್ರ ಮನೆಯವರು ಬೇಟೆಯ ನೈಪುಣ್ಯವನ್ನು ತಿಳಿದವರಾಗಿದ್ದು, ರಾಜರ ಆಜ್ಞೆಯಂತೆ ಬೇಟೆಯ ಮುಂದಾಳತ್ವ ವಹಿಸಿ ಊರಿಗೆ ಉಪಟಳ ಕೊಡುತ್ತಿದ್ದ ಕಾಡು ಪ್ರಾಣಿಗಳನ್ನು ನಿವಾರಿಸುತ್ತಿದ್ದರು. ಇಲ್ಲಿ ಕೂಡ ಈ ರೀತಿಯಾಗಿ ಕೆಲವು ಬಿಲ್ಲವ ಮನೆಗಳನ್ನು ಆಯ್ಕೆ ಮಾಡಲು ಕಾರಣ ಆಗಿನ ಕಾಲದಲ್ಲಿ ಬಿಲ್ಲವ ಬೇಟೆ ವಿಶಾರದರಾಗಿದ್ದೆ ಈ ಬೋಂಟ್ರ ಎನ್ನುವ ಮನ್ನಣೆ ಸಿಗಲು ಕಾರಣ. ಅದೇ ರೀತಿಯಲ್ಲಿ ಎಲ್ಲಾ ರಾಜರುಗಳು ಬೇಟೆಯಲ್ಲಿ ನೈಪುಣ್ಯ ಪಡೆದಿರುವುದನ್ನು ನೋಡುವಾಗ ಇದೇ ಬೋಂಟ್ರ ಮನೆತನಗಳು ಆಡಳಿತಗಾರರಾಗಿ ಮಾರ್ಪಾಡು ಹೊಂದಿದ್ದಾರೆ ಎನ್ನುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಇವತ್ತಿಗೂ ಅದೆಷ್ಟೋ ಬೋಂಟ್ರ ಮನೆತನಗಳು ಜನಮಾನಸದಲ್ಲಿ ಗೌರವದ ಸ್ಥಾನವನ್ನು ಪಡೆದಿದೆ.

ಬಿಲ್ಲವ ಜನಾಂಗ ಪ್ರಾರಂಭವಾಗಿದ್ದೇ ಕಾಡಿನೊಂದಿಗೆ. ಆ ಕಾಲದಲ್ಲಿ ಆಹಾರ ಬೇಟೆಗೆ ಮತ್ತು ಆತ್ಮ ರಕ್ಷಣೆಗೆ ಪ್ರಥಮವಾಗಿ ಬಿಲ್ಲು ಬಾಣದ ಬಳಕೆ ಬಂದಿರುವುದರಿಂದ ಅದರ ಹೆಚ್ಚಿನ ಬಳಕೆ ಮಾಡಿ ಬಿರ್ವರೆನಿಸಿಕೊಂಡರು. ಕನ್ನಡದಲ್ಲಿ ಬಿರ್ವ ಎನ್ನುವ ಶಬ್ದ ಬಿಲ್ಲವ ಎನಿಸಿಕೊಂಡಿತು. ಬಿರುವೆ ಅಥವಾ ಬಿರ್ವ ಎನ್ನುವ ಪದಗಳು ಇಲ್ಲಿ ಎರಡು ರೀತಿಯಲ್ಲಿ ಬಳಕೆಯಾಗಿದೆ. ಬೀರ ಅಥವಾ ವೀರ ಎನ್ನುವ ಪದ ಬಳಕೆಯಾದರೆ, ಇನ್ನೊಂದು ಬಿಲ್ಲು ಬಾಣ ಹಿಡಿದು ಹೋರಾಟ ಮಾಡಿದವ, ಅಂದರೆ ರಾಜರ ದಳವಾಯಿಯಾಗಿ, ಮಂತ್ರಿಗಳಾಗಿ, ಸೈನಿಕರಾಗಿ, ಅದೇ ರೀತಿ ಸ್ವತಃ ಬಲ್ಲಾಳರಾಗಿ ಆಡಳಿತ ಮಾಡಿದವರು. (ಮಾಹಿತಿ: ಲಕ್ಷ್ಮಣ ಭಿಲ್ಲವ)

ದಕ್ಷಿಣ ಕನ್ನಡದಲ್ಲಿ ಬೇರೆ ಬೇರೆ ಹೆಸರಿನೊಂದಿಗೆ ಕರೆಯಲ್ಪಡುವ ಬಿಲ್ಲವರು ತಮ್ಮದೇ ಆದ ಸಂಸ್ಕೃತಿ, ಸಂಪ್ರದಾಯಗಳನ್ನು ಉಳಿಸಿಕೊಂಡು ಬಂದಿದ್ದಾರೆ. ತಮ್ಮ ಸ್ಥಾನಮಾನಗಳಿಂದಲೇ ಸಮಾಜದಲ್ಲಿ ತಮ್ಮ ಛಾಪನ್ನು ಮೂಡಿಸಿದ ಬಿಲ್ಲವರು ಕಾಲದ ಹೊಡೆತಕ್ಕೆ ಸಿಕ್ಕಿ ಎಲ್ಲವನ್ನು ಕಳೆದುಕೊಂಡು ಸಮಾಜದ ಅಂಚಿನಲ್ಲಿ ವಾಸಿಸತೊಡಗಿದ್ದಾರೆ.

ಸಾಮಾಜಿಕ ವ್ಯವಸ್ಥೆ

ಬಳಿಗಳು

ಬಿಲ್ಲವ ಕುಟುಂಬಗಳು ಮೂಲಸ್ಥಾನದ ಆಧಾರದ ಮೇಲೆ ವಂಶಾವಳಿ ಉಪನಾಮಗಳನ್ನು ಹೊಂದಿದ್ದಾರೆ. ಕೆಳಗಿನ ವಂಶಾವಳಿಯನ್ನು ಆಧಾರಿತ ಉಪನಾಮಗಳು ಸಾಮಾನ್ಯವಾಗಿ ಬಿಲ್ಲವ ಸಮುದಾಯದ ಗುಂಪುಗಳ ನಡುವೆ ಕಂಡುಬರುತ್ತದೆ. ಸೋಮ ಬನ್ನಾಯ, ಕೋಟಿ ಬನ್ನಾಯ, ಅಮ್ಮನ್ನ ಬನ್ನಾಯ, ಕುಕ್ಕು ಬನ್ನಾಯ, ಕರ್ಕ ಬನ್ನಾಯ, ಮುಂಡ್ಯತ್ತ ಬನ್ನಾಯ, ಬಂಗೇರ ಬನ್ನಾಯ, ಅಲಂಕ ಬನ್ನಾಯ, ಕುಬೇರ ಬನ್ನಾಯ, ಮೂಲ್ಯರಣ್ಣ, ಗಿಂಡೇರಣ್ಣ, ಚನಿಲಣ್ಣ, ಸಾಲನ್, ಗುಜರಣ್ಣ, ಬೊಲ್ಲೊಟ್ಟ ಬನ್ನಾಯ, ಉಪ್ಪಿಯಣ್ಣ ಎಂಬ ಬಳಿಗಳಿವೆ. ಬಿಲ್ಲವರಲ್ಲಿ ಒಂದೇ ಹೆಸರಿನ ಬಳಿಗಳಲ್ಲಿ ಮದುವೆ ನಿಷಿದ್ಧ. ಇವರು ಬಳಿಗಳ ವಿಧಿ-ನಿಷೇಧಗಳನ್ನು ಕಟ್ಟುನಿಟ್ಟಾಗಿ ಆಚರಿಸುತ್ತಾರೆ.

ನಿಲುಮೆ ಮತ್ತು ಸ್ವಭಾವ

ಬಿಲ್ಲವರು ಎತ್ತರದ ನಿಲುವನ್ನು ಹೊಂದಿದ್ದು, ದಪ್ಪನಾದ, ಶಕ್ತಿಯುತವಾದ ಮೈಕಟ್ಟನ್ನು ಹೊಂದಿದ್ದಾರೆ. ಎಣಗಪ್ಪು ಬಣ್ಣವನ್ನು ಹೊಂದಿದ್ದಾರೆ. ವಿಶಾಲವಾದ ಎದೆ, ಗುಂಗುರು ಕೂದಲನ್ನು ಹೊಂದಿದ್ದಾರೆ. ಇವರು ಧೈರ್ಯ ಮತ್ತು ಸಾಹಸಕ್ಕೆ ಹೆಸರುವಾಸಿಯಾಗಿದ್ದಾರೆ. ಇವರು ಸಾಹಸಿಗಳಷ್ಟೇ ಅಲ್ಲ, ನೀತಿವಂತರೂ ಹೌದು. ಉಳಿದ ಸಮುದಾಯಗಳ ನಡುವೆ ಸಹಬಾಳ್ವೆಯಿಂದ ಬಾಳುತ್ತಿದ್ದಾರೆ. ಇವರು ಹಗಲಿಡಿ ದುಡಿದು ಸಂಜೆ ಕಳ್ಳು ಕುಡಿದು ಆಯಾಸ ಪರಿಹರಿಸಿಕೊಳ್ಳುತ್ತಾರೆ. ಇವರಲ್ಲಿ ಹೆಂಗಸರು ಸಹ ಕಳ್ಳು ಕುಡಿಯುತ್ತಾರೆ.

ಉಡುಗೆ-ತೊಡುಗೆ

ಬಿಲ್ಲವ ಸಮುದಾಯಕ್ಕೆ ಅವರದೇ ಆದ ಉಡುಗೆ-ತೊಡಿಗೆಗಳಿಲ್ಲ. ಬಿಲ್ಲವ ಪುರುಷರು ಹೆಚ್ಚಾಗಿ ಸಭೆ-ಸಮಾರಂಭಗಳಲ್ಲಿ ಪಂಚೆ ಮತ್ತು ಬನಿಯನ್ ಧರಿಸುತ್ತಾರೆ. ತಲೆಗೆ ಮುಂಡಾಸವನ್ನು ಕಟ್ಟುತ್ತಾರೆ.

ಪುರುಷರು ತೆಂಗಿನಮರದಿಂದ ಸೇಂದಿ ತೆಗೆಯುವಾಗ ಸೊಂಟಕ್ಕೆ ಬಟ್ಟೆ, ತಲೆಗೆ ಹಾಳೆಯ ಟೊಪ್ಪಿ ಮತ್ತು ಅರುಕತ್ತಿಯನ್ನು ಧರಿಸುತ್ತಾರೆ. ಕೊನೆ ಬಡಿಯಲು ಕೋಣದ ಕೊಂಬನ್ನು ಬಳಸುತ್ತಾರೆ. ಹೆಂಗಸರು ಸೀರೆ, ರವಿಕೆಯನ್ನು ಉಡುತ್ತಾರೆ. ಆದರೆ ಇಂದಿನ ದಿನದಲ್ಲಿ ಬಿಲ್ಲವ ಸಮುದಾಯದ ಹೊಸ ಪೀಳಿಗೆಯ ಜನರು ಆಧುನಿಕ ಬಟ್ಟೆಗಳನ್ನು ಧರಿಸುತ್ತಾರೆ. ಮಕ್ಕಳಿಗೆ ಕಾಲುಬಳೆ, ಕೈಬಳೆ, ಸೊಂಟದ ದಾರವನ್ನು ಹಾಕುತ್ತಾರೆ. ಕಿವಿಸುಚ್ಚಿ ಆಭರಣಗಳನ್ನು ಹಾಕುತ್ತಾರೆ. ಹಬ್ಬಹರಿದಿನಗಳಲ್ಲಿ ಸ್ತ್ರೀಯರು ಆಭರಣಗಳನ್ನು ಧರಿಸುತ್ತಾರೆ.

ಒಳಾಡಳಿತ ವ್ಯವಸ್ಥೆ

ಪ್ರತಿ ಗ್ರಾಮಸಭಾಕ್ಕೆ ಒಬ್ಬ ಗುರಿಕಾರ ಇರುತ್ತಾನೆ. ಗುರಿಕಾರ ಪದ್ಧತಿ ವಂಶಪಾರಂಪರ್ಯವಾಗಿರುತ್ತದೆ. ಗುರಿಕಾರರು ಕೈಗೆ ಕಬ್ಬಿಣ ಅಥವಾ ಬಂಗಾರದ ಬಳೆಗಳನ್ನು ಹಾಕಿಕೊಳ್ಳುತ್ತಾರೆ. ಜೊತೆಗೆ ಒಂದು ಕಿವಿಗೆ ಒಲೆ ಧರಿಸುತ್ತಾರೆ. ಇದು ಗುರಿಕಾರರನ್ನು ಪ್ರತಿನಿಧಿಸುವ ಆಭರಣವಾಗಿರುತ್ತದೆ. ಗುರಿಕಾರರ ಕರ್ತವ್ಯಗಳು ಮತ್ತು ಅಧಿಕಾರಗಳು ಪ್ರಜಾಪ್ರಭುತ್ವದ ಮಾದರಿಯಂತೆ ಇರುತ್ತದೆ. ಎಲ್ಲಾ ಗ್ರಾಮ ಸಭಾದ ಗುರಿಕಾರರು ಸೇರಿ ಒಬ್ಬ ನಾಯಕನನ್ನು ಆರಿಸುತ್ತಾರೆ. ತಮ್ಮ ನಾಯಕನನ್ನು ತಂಡೇಲ ಎಂದು ಕರೆಯುತ್ತಾರೆ.

"ಗ್ರಾಮ ಸಭಾಗಳಲ್ಲಿ ಮಂಗಳೂರು, ಉಡುಪಿ ಮತ್ತು ಉಪ್ಪಳದಿಂದ ಕೋಟಾದವರೆಗೆ ದಕ್ಷಿಣ ಕನ್ನಡ ಬಿಲ್ಲವ ಸಭಾದಲ್ಲಿ ಸೇರಿಕೊಂಡಿದೆ. ಅದೇ ರೀತಿ ಕನ್ನಡ ಭಾಷಿಕ ಬಾಗ್ವಾಡಿ ಪ್ರದೇಶದ ಬಿಲ್ಲವರು ಬಿಲ್ಲವರ ಮಹಾಜನ ಸಭಾ ಎಂಬ ಪ್ರತ್ಯೇಕ ಸಂಘ ರಚಿಸಿಕೊಂಡಿದ್ದಾರೆ."[೧೪]

ಬಿಲ್ಲವರ ಕುಲ ಗುರುಗಳನ್ನು ಹೊಂದಿದ್ದಾರೆ. ಇವರನ್ನು ನಾರಾಯಣ ಗುರು ಎಂದು ಕರೆಯುತ್ತಾರೆ. ನಾರಾಯಣ ಗುರು ಬಿಲ್ಲವರ ಸಂಪ್ರದಾಯಿಕ ಪುರೋಹಿತನಾಗಿದ್ದು, ಕುದ್ರೋಳಿ ಗೋಕರ್ಣನಾಥೇಶ್ವರ ದೇವಾಲಯದಲ್ಲಿ ಮುಖ್ಯ ಪುರೋಹಿತರಾಗಿದ್ದರು. ಇತ್ತೀಚಿನ ದಿನಗಳಲ್ಲಿ ಕುಲಗುರುಗಳ ಪದ್ಧತಿಯನ್ನು ಮತ್ತೆ ಪೂರ್ಣ ಪ್ರಮಾಣದಲ್ಲಿ ಆಚರಣೆಗೆ ತರಲು ಸಮುದಾಯದ ಪ್ರಮುಖ ನಾಯಕರು ಪ್ರಯತ್ನಿಸುತ್ತಿದ್ದಾರೆ.

ಆಹಾರ ಪದ್ಧತಿ

ಬಿಲ್ಲವರು ದಿನಾಲೂ ಮೀನಿನ ಸಾರು, ಕುಚಲಕ್ಕಿಯ ಅನ್ನವನ್ನು ಬಳಸುತ್ತಾರೆ. ವಿಶೇಷ ದಿನಗಳಲ್ಲಿ ಕೋಳಿ, ಕುರಿ ಮಾಂಸವನ್ನು ತಿನ್ನುತ್ತಾರೆ. ಬಿಲ್ಲವರು ಕಳ್ಳನ್ನು ಕುಡಿಯುವುದು, ಸೇಂದಿಯೊಂದಿಗೆ ಹಪ್ಪಳ, ಉಪ್ಪಿನಕಾಯಿ ಸೇವಿಸುತ್ತಾರೆ. ಅಲ್ಲದೇ ಹಲಸಿ ಹಣ್ಣಿನ ಹಿಟ್ಟು, ದಾಸವಾಳದ ಹಿಟ್ಟು, ಅಕ್ಕಿದೋಸೆ, ಉದ್ದಿನ ದೋಸೆ, ಪುಂಡಿ, ಬೆಯಿಸಿದ ಗೆಣಸು, ಗೊಡ್ಡಿಟ್ಟು, ಸೆಕೆ ಹಿಟ್ಟು ಮುಂತಾದ ತಿಂಡಿಗಳನ್ನು ಮಾಡುತ್ತಾರೆ. ನೆಂಟರ ಆಗಮದಲ್ಲಿ ಹೆಚ್ಚಾಗಿ ಮಾಂಸದೂಟವನ್ನು ಮಾಡುತ್ತಾರೆ. ಹೆಚ್ಚಾಗಿ ದಿನದಲ್ಲಿ ಒಂದೇ ಬಾರಿ ದಿನಕ್ಕೆ ಸಾಕಾಗುವಷ್ಟು ಅಡಿಗೆ ಮಾಡುತ್ತಾರೆ. ಬಿಲ್ಲವರಲ್ಲಿ ಮಾಂಸದ ಅಡಿಗೆ ಮಾಡಲು ಪ್ರತ್ಯೇಕ ಅಡುಗೆ ಕೋಣೆ ಇದ್ದು, ಪ್ರತ್ಯೇಕ ಪಾತ್ರೆಗಳು ಇರುತ್ತದೆ. ಕವಳ ಹಾಕುವುದು, ಬೀಡಿ ಸೇದುವುದು, ತಂಬಾಕು ಸೇವನೆ, ಚಹಾ ಕುಡಿಯುವುದು, ಹೆಂಡ ಸೇವನೆ ಬಿಲ್ಲವರ ಇತರ ಹವ್ಯಾಸಗಳು.

ಚಿಕಿತ್ಸಾ ಪದ್ಧತಿ

ಬಿಲ್ಲವರು ಹೆಚ್ಚಾಗಿ ಹಳೆಕಾಲದ ಚಿಕಿತ್ಸಾ ಪದ್ಧತಿಯನ್ನು ಇಂದಿಗೂ ಬಳಸುತ್ತಾರೆ. ಬಿಲ್ಲವರು ಬಡತನ ರೇಖೆಗಿಂತ ಕೆಳಗಿರುವುದರಿಂದ ಹೆಚ್ಚಾಗಿ ಜನಪದ ವೈದ್ಯ ಪದ್ದತಿಯ ಚಿಕಿತ್ಸೆಯ ಬಗ್ಗೆ ಹೆಚ್ಚು ಒಲವು ಇದೆ. ದೇಹದ ಯಾವುದೇ ಭಾಗಕ್ಕೆ ಗಾಯವಾದಲ್ಲಿ ಕಾಂಗ್ರೆಸ್ ಗಿಡದ

ಎಲೆಗಳನ್ನು ಜಜ್ಜಿ ಆ ರಸವನ್ನು ಗಾಯಕ್ಕೆ ಕಟ್ಟುತ್ತಾರೆ. ಇದರಿಂದ ಗಾಯ ಶೀಘ್ರವಾಗಿ ಗುಣವಾಗುತ್ತದೆ ಎಂಬುದು ಬಿಲ್ಲವರ ನಂಬಿಕೆ. ದೇಹವನ್ನು ತಂಪಾಗಿಡಲು ತಂಪಿನ ಬೀಜ (ಕಾಮ ಕಸ್ತೂರಿ ಬೀಜ)ವನ್ನು ನೀರಿನೊಂದಿಗೆ ಸೇರಿಸಿ ಸೇವಿಸುತ್ತಾರೆ. ಚರ್ಮ ರೋಗಗಳಿಗೆ ಕಹಿಬೇವಿನ ಸೊಪ್ಪು, ಕಾಸರಕನ ಮರದ ಸೊಪ್ಪು ಮತ್ತು ಅದೇ ಮರದ ತೊಗಟೆಯಿಂದ ತಯಾರಿಸಿದ ಕಷಾಯವನ್ನು ಸೇವಿಸುತ್ತಾರೆ. ಹಾಗೂ ಹೊಟ್ಟೆಗೆ ಸಂಬಂಧಿಸಿದ ಸಮಸ್ಯೆಗೆ ಹೆಚ್ಚಾಗಿ ಜೀರಿಗೆಯನ್ನು ಬಳಸುತ್ತಾರೆ. ದೇಹದ ಯಾವುದಾದರೂ ಭಾಗದಿಂದ ರಕ್ತ ಬಂದರೆ ಅರಿಶಿಣವನ್ನು ಲೇಪಿಸುತ್ತಾರೆ. ಗಂಟಲಿನ ಸಮಸ್ಯೆಗೆ ಉಪ್ಪುನೀರಿನಿಂದ ಬಾಯಿ ಮುಕ್ಕಳಿಸುತ್ತಾರೆ. ಹಲ್ಲು ನೋವಿಗೆ ಲವಂಗ ಮತ್ತು ಬೆಳ್ಳುಳ್ಳಿಯನ್ನು ಬಳಸುತ್ತಾರೆ.

ನಂಬಿಕೆ ಮತ್ತು ಆಚರಣೆಗಳು

ಬಿಲ್ಲವರು ಭೂತ, ಪಿಶಾಚಿ, ದೆವ್ವ ಬಡೆದುಕೊಳ್ಳುವುದು, ಗ್ರಹಗಳ ಕಾಟ, ಮಾಟ ಮರೂಡಿಗಳ ಬಗ್ಗೆ ಅಪಾರ ನಂಬಿಕೆಯನ್ನು ಹೊಂದಿದ್ದಾರೆ. ಅದರ ನಿವಾರಣೆಗೆ ಹೆಚ್ಚಿನ ಒತ್ತನ್ನು ನೀಡುತ್ತಾರೆ. ಜ್ವರ, ನೆಗಡಿ ಬಂದರೂ ವೈದ್ಯರಿಗಿಂತ ದೇವರು, ದೆವ್ವಗಳ ಬಗ್ಗೆ ಒಲವು ತೋರಿಸುತ್ತಾರೆ. ಇವುಗಳ ಮೂಲಕ ಕಷ್ಟ ಪರಿಹರಿಸುವ ವ್ಯಕ್ತಿಗೆ ಮಾಟಗಾರ ಅಥವಾ ನೋಟಗಾರ ಎಂದು ಕರೆಯುತ್ತಾರೆ. ಈತನು ಜುಟ್ಟು, ಉದ್ದವಾದ ಗಡ್ಡವನ್ನು ಬಿಟ್ಟಿರುತ್ತಾನೆ. ಇತನು ತನ್ನ ವಾಸಸ್ಥಳದಲ್ಲಿ ಅನೇಕ ಶಕ್ತಿ ದೇವರುಗಳ ಮೂರ್ತಿಯನ್ನು ಇಟ್ಟುಕೊಂಡಿರುತ್ತಾನೆ. ಈ ನೋಟಗಾರನು ಲಿಂಬೆ ಹಣ್ಣು, ಕುಂಕುಮ, ಅಂಗಾರವನ್ನು ಮಂತ್ರಿಸಿ ಕೊಡುತ್ತಾನೆ.

ಬಿಲ್ಲವರ ನಂಬಿಕೆಗಳು

* ಕಾಗೆ ಮನೆಗೆ ಬಂದು ಕೂಗಿದರೆ ಅಪಶಕುನ.
* ಜಕ್ಕಣಿಗೆ(ಭೂತಕ್ಕೆ) ಮೀಸಲಿಡುವುದು.
* ದೈವಕ್ಕೆ ಅಟ್ಟು ಬಳಸುವುದು.
* ಮಗುವಿಗೆ ಆರೋಗ್ಯ ಸರಿ ಇಲ್ಲದಿದ್ದರೆ ಭಟ್ಟರ ಮನೆಯಿಂದ ನೂಲು ತಂದು ಕಟ್ಟುವುದು.
* ಹಾನ ಮಾಡುವುದು. ದೃಷ್ಟಿ ತೆಗೆಯುವುದು.
* ದೈವಕ್ಕೆ ಕೋಳಿ, ಕುರಿ ಬಲಿ ಕೊಡುವುದು.
* ಸತ್ತು ಹೋದವರಿಗೆ ಮದುವೆ ಮಾಡಿಸುವ ಪದ್ಧತಿ.
* ಉಡ ಮನೆಗೆ ಬಂದರೆ ಅಪಶಕುನ.
* ಹೆದರಿಕೊಂಡಿದ್ದರೆ ಕತ್ತಿ ಕಾಯಿಸಿ ನೀರಿಗೆ ಅದ್ದಿ ಕುಡಿಯುವುದು.
* ಆಕಳಿಕೆ ಬಂದರೆ ಯಾರೋ ನೆನಪಿಸುತ್ತಿದ್ದಾರೆಂಬ ನಂಬಿಕೆ.

* ಕಾಗೆ ಮನೆಯ ಬಳಿ ಕೂಗಿದರೆ ನೆಂಟರು ಬರುತ್ತಾರೆಂಬ ನಂಬಿಕೆ.

ಹೀಗೆ ಮುಂತಾದ ನಂಬಿಕೆಗಳು ಬಿಲ್ಲವರಲ್ಲಿದೆ. (ಮಾಹಿತಿ: ಲಕ್ಷ್ಮಣ ಬಿಲ್ಲವ)

ಆಚರಣೆಗಳು

ಭೂತದ ಕೋಲ ಅಥವಾ ದೈವಾರಾಧನೆ

ಬಿಲ್ಲವ ಸಮುದಾಯದವರು ದೈವಾರಾದನೆಗೆ ಹೊರ ಪ್ರದೇಶದಲ್ಲಿ ವಾಸಿಸುತ್ತಿರುವವರೆಲ್ಲ ಬಂದು ಒಂದೆಡೆ ಸೇರುತ್ತಾರೆ. ಸಂತರ ಎಲ್ಲರೂ ಸೇರಿ ದೈವಕ್ಕೆ ಪೂಜೆ ಸಲ್ಲಿಸುತ್ತಾರೆ. ಸಂತರ ಅಮ್ಮನವರ ದರ್ಶನ ಮಾಡುತ್ತಾರೆ. ಆಮೇಲೆ ದೈವದ ದರ್ಶನ ಮಾಡುತ್ತಾರೆ. ಇಲ್ಲಿ ಹೇಳಿಕೆ-ಕೇಳಿಕೆ ಇರುತ್ತದೆ. ದೈವ ಅಲ್ಲೇ ಸಮಸ್ಯೆಗಳಿಗೆ ಪರಿಹಾರ ಕೊಡುತ್ತದೆ. ಈ ಪರಿಹಾರವನ್ನು ಬಿಲ್ಲವರು ಚಾಚುತಪ್ಪದೇ ನಡೆಸುತ್ತಾರೆ. ನಂತರ ದೈವಕ್ಕೆ ಕುರಿ, ಕೋಳಿಯ ಬಲ್ಲಿ ನೀಡುತ್ತಾರೆ. ನಂತರ ಬಲಿಕೊಟ್ಟ ಪ್ರಾಣಿಯಿಂದ ತಯಾರಿಸಿದ ಪ್ರಸಾದದಿಂದ ದೈವಕ್ಕೆ ಎಡೆ ಇಡುತ್ತಾರೆ.

ತುಳಸಿ ಪೂಜೆ

ತುಳಸಿ ಪೂಜೆ ಮಾಡುವ ದಿನದಂದು ತುಳಸಿ ಕಟ್ಟೆಗೆ ಮಾವಿನ ತೋರಣ ಕಟ್ಟುತ್ತಾರೆ. ಕಟ್ಟೆಯ ಸುತ್ತಲೂ ದೀಪವನ್ನು ಹಚ್ಚುತ್ತಾರೆ. ಮೊದಲಿಗೆ ಕಳಸ ಪೂಜೆ ಮಾಡುತ್ತಾರೆ. ಕಟ್ಟೆಯ ಎರಡು ಕಡೆ ಕಳಸ ಇಡುತ್ತಾರೆ. ಇದಕ್ಕೆ ವಸಂತ ಪೂಜೆ ಎನ್ನುತ್ತಾರೆ. ವಸಂತಪೂಜೆ ಮಾಡುವವರು ತಿರುಪತಿ ವೆಂಕಟೇಶ್ವರನ ದರ್ಶನ ಪಡೆದಿರಬೇಕು. ಈ ಪೂಜೆಯಲ್ಲಿ ಕೊಸಂಬರಿ, ಬಾಳೆಹಣ್ಣು, ಬೆಲ್ಲ, ದ್ರಾಕ್ಷಿ ಮುಂತಾದವುಗಳನ್ನು ನೈವೇದ್ಯ ಮಾಡುತ್ತಾರೆ. ನಂತರದಲ್ಲಿ ತುಳಸಿ ಪೂಜೆಯನ್ನು ಮಾಡುತ್ತಾರೆ. ನಂತರ ಕಾಯಿ ಒಡೆದು ತುಳಸಿಗೆ ಅವಲಕ್ಕಿ ನೈವೇದ್ಯ ಮಾಡುತ್ತಾರೆ. ನಂತರ ಎಲ್ಲರೂ ಸೇರಿ ಗೋವಿಂದಾ, ಗೋವಿಂದಾ ಎಂದು ಕೂಗುತ್ತಾರೆ. ನಂತರ ಪ್ರಸಾದದ ಜೊತೆಗೆ ಕಾಯಿಕಡಿಯನ್ನು ಕೊಡುತ್ತಾರೆ. ನಂತರ ಮನೆಯವರು ಊಟ ಮಾಡುವ ಮೊದಲು ದೈವಕ್ಕೆ (ಭೂತಕ್ಕೆ) ವಿಶೇಷವಾದ ಎಡೆ ಇಡುವ ರೂಢಿ ಇದೆ. ಆ ದಿನ ಪಾಯಸದೂಟ ಮಾಡುತ್ತಾರೆ.

ತೆನೆ ಪೂಜೆ (ಹೊಸತು)

ಈ ದಿನ ಬೆಳಗ್ಗೆ ಬೇಗನೆ ಎದ್ದು ಸ್ನಾನ ಮಾಡಿ ಮನೆಯನ್ನು ಸ್ವಚ್ಛ ಮಾಡುತ್ತಾರೆ. ನಂತರ ಗದ್ದೆಯಿಂದ ಒಂದು ಬುಡಸಹಿತವಾದ ತೆನೆಯನ್ನು ಕಿತ್ತು ತಂದು ಕಣದಲ್ಲಿ ಇಡುತ್ತಾರೆ. ಇದಕ್ಕೆ ಹೂವು, ಗಂಧ ಹಾಕುತ್ತಾರೆ. ನಂತರ ಮಂಟಪವನ್ನು ನಿರ್ಮಿಸುತ್ತಾರೆ. ಆ ದಿನ ತುಳಸಿ ಕಟ್ಟೆಗೂ ಪೂಜೆ ಮಾಡಿ ದೀಪ ಇಡುತ್ತಾರೆ. ನಂತರ ತೆನೆಗೆ ಪೂಜೆ ಸಲ್ಲಿಸಿ ಹಲ್ಲು ಕತ್ತಿಯಿಂದ ತೆನೆಯನ್ನು ಕತ್ತರಿಸಿ ಮಣೆಯ ಮೇಲಿಟ್ಟು ತುಳಸಿ ಕಟ್ಟೆಯ ಮೇಲೆ ಇಡುತ್ತಾರೆ. ತುಳಸಿಗೂ ಒಂದು ಕದಿರನ್ನು ಮನೆಯ ಯಜಮಾನ ಕಟ್ಟುತ್ತಾನೆ. ನಂತರ ಯಜಮಾನ ಕದಿರನ್ನು ತಲೆಯ ಮೇಲಿಟ್ಟುಕೊಂಡು ಮನೆಯ ಬಾಗಿಲಿಗೆ ಬರುತ್ತಾನೆ. ಮನೆಯ ಹೆಣ್ಣು ಮಗಳು ಯಜಮಾನನ

ಕಾಲಿಗೆ ನೀರನ್ನು ಸುರಿಯುತ್ತಾಳೆ. ಯಜಮಾನ ಮನೆಯ ಒಳಗಡೆಗೆ ಬಂದು ದೇವರ ಕೋಣೆಯ ಎದಿರು ಕದಿರನ್ನು ಇಡುತ್ತಾನೆ. ಅಲ್ಲಿ ಕದಿರಿನ ಎದುರು ರಂಗೋಲಿಯನ್ನು ಹಾಕಿ ಮತ್ತೆ ಪೂಜೆ ಮಾಡುತ್ತಾರೆ. ಆ ದಿನ ಹೊಸ ಅಕ್ಕಿಯ ಅನ್ನಕ್ಕೆ ಕದಿರಿನ ೯ ಬತ್ತವನ್ನು ಹಾಕುತ್ತಾರೆ. ಅನ್ನದ ಪಾತ್ರೆಗೂ ಕದಿರನ್ನು ಕಟ್ಟುತ್ತಾರೆ. ಅಂದು ೯ ತರಹದ ಪಲ್ಯವನ್ನು ಮಾಡುತ್ತಾರೆ. ನಂತರ ಮನೆಯವರೆಲ್ಲಾ ಸೇರಿ ಪಾಯಸದೂಟ ಮಾಡುತ್ತಾರೆ.

ದೀಪಾವಳಿ ಹಬ್ಬ

ದೀಪಾವಳಿಯ ಅಮಾವಾಸ್ಯೆಯಂದು ಸಮುದ್ರ ಸ್ನಾನ ಮಾಡುತ್ತಾರೆ. ದೀಪಾವಳಿಯ ದಿನ ಸಂಜೆ ಗದ್ದೆಗೆ ಹೋಗಿ ಕಮಲದ ಎಲೆ ಹಾಕಿ ಗೊಡ್ಡಿಟ್ಟು (ಕಡುಬಿನ ಒಂದು ವಿಧ), ಅವಲಕ್ಕಿ, ಅಡಿಕೆ, ವೀಳ್ಯದಎಲೆ, ಕಸ್ತೂರಿ ಹೂವು, ಜಂಗಮ ಹೂವು, ಕೂಳಿ ಹೂವನ್ನು ಇಟ್ಟು ಎರಡು ಬಿದಿರಿನ ಕೋಲನ್ನು ಹುಗಿದು ಅದಕ್ಕೆ ಜುಂಜನ್ನು ಹಚ್ಚುತ್ತಾರೆ. ಈ ಜುಂಜನ್ನು ಸೂಡಿಯಿಂದ ತಯಾರಿಸಿದ ಬೆಂಕಿಯಿಂದಲೇ ಹಚ್ಚುತ್ತಾರೆ. ನಂತರ ಬಲೀಂದ್ರನ ಹೆಸರನ್ನು ೩ ಬಾರಿ ಕೂಗುತ್ತಾರೆ. ನಂತರ ಮನೆಗೆ ಬಂದು ಮನೆಯ ಸುತ್ತಲೂ ಜುಂಜನ್ನು ನೆಡುತ್ತಾರೆ. ನಂತರ ಪೂಜೆ ಮಾಡಿ ಮನೆಯವರೆಲ್ಲರೂ ಸೇರಿ ಸಕೆ ಹಿಟ್ಟು, ಕಡುಬು, ಕೋಳಿ ಊಟ ಮಾಡುತ್ತಾರೆ.

ಆಷಾಢ ಹಬ್ಬ ಮತ್ತು ಹೊಸ್ತಲ ಪೂಜೆ

ಮಳೆಗಾಲ ಪ್ರಾರಂಭವಾದ ನಂತರ ಒಂದು ದಿನ ಮಳೆಹಬ್ಬ ಅಥವಾ ಆಷಾಡ ಹಬ್ಬವನ್ನು ಮಾಡುತ್ತಾರೆ. ಆ ದಿನ ವಾರ ದೈವಕ್ಕೆ ಪೂಜೆ ಸಲ್ಲಿಸಿ ಕೋಳಿ ಬಲಿ ನೀಡುತ್ತಾರೆ. ನಂತರ ಮಾಂಸದೂಟ ಮಾಡುತ್ತಾರೆ.

ಶ್ರಾವಣ ಮಾಸದಲ್ಲಿ ಹೆಚ್ಚಾಗಿ ಬಿಲ್ಲವ ಸಮುದಾಯದ ಹೆಣ್ಣು ಮಕ್ಕಳು ಸೋಣೆ ಹೂವನ್ನು ಹೊಸ್ತಿಲ ಪೂಜೆಯ ಒಂದು ವಾರದ ಮೊದಲಿಗೆ ಹೊಸ್ತಲ ಮೇಲೆ ಒಳಮುಖವಾಗಿ ಇಡುತ್ತಾ ಬರುತ್ತಾರೆ. ಹಬ್ಬದ ದಿನದಂದು ರಂಗೋಲಿ ಬರೆದು ಸೋಣೆ ಹೂವನ್ನು ಏರಿಸಿ, ದೀಪ ಹಚ್ಚಿ ಯಜಮಾನ ಪೂಜೆ ಮಾಡುತ್ತಾನೆ. ಅಂದು ಹೊಸ್ತಿಲಿಗೆ ನೈವೇದ್ಯವಾಗಿ ಇಡ್ಲಿ, ಕಡಬು, ದೋಸೆ ಮುಂತಾದ ತಿಂಡಿಗಳನ್ನು ಮಾಡುತ್ತಾರೆ. ಮಾರನೇ ದಿನ ಸೋಣೆ ಹೂವನ್ನು ಹೊರಮುಖ ಮಾಡಿ ಇಡುತ್ತಾರೆ.

ಹುಟ್ಟಿನ ಆಚರಣೆ

ಮಗು ಹುಟ್ಟಿದ ೧೧ನೇ ದಿನದಂದು ಮಗು ಮತ್ತು ಬಾಣಂತಿಯನ್ನು ಸ್ನಾನ ಮಾಡಿಸಿ ಮನೆಯ ಒಳಗಡೆ ಕರೆದುಕೊಳ್ಳುತ್ತಾರೆ. ಅಂದು ಸೂತಕವನ್ನು ತೊಳೆದುಕೊಳ್ಳುತ್ತಾರೆ. ಅಂದು ಮನೆಯನ್ನು ಚೊಕ್ಕ ಮಾಡಿ ಬಟ್ಟೆಯನ್ನು ತೊಳೆಯುತ್ತಾರೆ. ಆ ದಿನವೇ ಮಗುವನ್ನು ತೊಟ್ಟಿಲಿಗೆ ಹಾಕಿ, ನಾಮಕರಣ ಮಾಡುತ್ತಾರೆ. ಬಂದವರು ಉಡುಗರೆಯನ್ನು ನೀಡುತ್ತಾರೆ. ಆ ದಿನ ಸಿಹಿ ಊಟದ ಜೊತೆಗೆ ಹೆಚ್ಚಾಗಿ ದೋಸೆ ಮತ್ತು ಪಲ್ಯ ಮಾಡುತ್ತಾರೆ.

ಮೈನೆರೆಯುವುದು

ಹುಡುಗಿ ದೊಡ್ಡವಳಾದ ೫ನೇ ದಿನಕ್ಕೆ ತಲೆಗೆ ೧೧ ಕೊಡ ನೀರನ್ನು ಹಾಕುತ್ತಾರೆ. ಇದಕ್ಕೆ ತಲೆ ನೀರು ಮದುವೆ ಎನ್ನುತ್ತಾರೆ. ನಂತರ ಹುಡುಗಿಗೆ ಹೊಸಬಟ್ಟೆ ಉಡಿಸಿ ತೆಂಗಿನ ಹೂವನ್ನು ಮುಡಿಸಿ, ಸಿಹಿ ತಿಂಡಿಗಳನ್ನು ಮಾಡಿ ತಿನಿಸುತ್ತಾರೆ. ೬-೭-೯-೧೦ರಲ್ಲಿ ಒಂದು ದಿನ ಕಾರ್ಯಕ್ರಮ ಮಾಡಿ ಪಂಚಕಜ್ಜಾಯ ಮಾಡುತ್ತಾರೆ. ಹೆಂಗಸರೆಲ್ಲಾ ಸೇರಿ ಹುಡುಗಿಗೆ ಆರತಿ ಮಾಡುತ್ತಾರೆ. ನಂತರ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸಿಕೊಂಡು ಬರುತ್ತಾರೆ.

ಮದುವೆ

ಮದುವೆಯ ದಿನ ವಧುವರರಿಗೆ ಅರಿಶಿಣ ಸ್ನಾನ ಮಾಡಿಸಿ, ನಂತರ ಹೊಸ ಬಟ್ಟೆಯನ್ನು ಉಡಿಸುತ್ತಾರೆ. ಹೆಣ್ಣಿನ ಅಕ್ಕ ತಂಗಿಯರು ಕಳಶ ಮತ್ತು ದೀಪವನ್ನು ಹಿಡಿದುಕೊಳ್ಳುತ್ತಾರೆ. ನಂತರ ತುಳಸಿ ಕಟ್ಟೆಗೆ ಬಂದು ಪೂಜೆ ಸಲ್ಲಿಸಿ ಮದುವೆಯ ಚಪ್ಪರಕ್ಕೆ ಹೋಗುತ್ತಾರೆ. ಅಲ್ಲಿ ವರನನ್ನು ಸ್ವಾಗತಿಸಿ ಮಂಟಪಕ್ಕೆ ಕರೆತರುತ್ತಾರೆ. ಮದುವೆಯಲ್ಲಿ ಹುಡುಗಿಯ ಸಹೋದರರು ಹೊದ್ಲನ್ನು (ಬತ್ತದಿಂದ ತಯಾರಿಸಿದ್ದು) ಹೋಮಕ್ಕೆ ಹಾಕುತ್ತಾರೆ. ಆಮೇಲೆ ತಾಳಿ ಕಟ್ಟುವ ಶಾಸ್ತ್ರ ಮಾಡುತ್ತಾರೆ. ಬಂದವರಿಗೆ ಊಟ ಹಾಕುತ್ತಾರೆ. ಉಡುಗರೆಯನ್ನು ಕೊಡುವ ಸಂಪ್ರದಾಯವೂ ಇದೆ. ನಂತರ ಹೆಣ್ಣನ್ನು ವರನ ಕಡೆಯವರು ಮನೆ ತುಂಬಿಸಿಕೊಂಡು ಬೀಗರೂಟ (ಸಮಾನ ಊಟ) ಮಾಡುತ್ತಾರೆ. ಅಂದು ಮಾಂಸದೂಟ ಮಾಡಿ ಬಡಿಸುತ್ತಾರೆ. ಮಾರನೇ ದಿನ ಹೆಣ್ಣಿನ ಮನೆಯಲ್ಲೂ ಬೀಗರ ಊಟವಿದ್ದು ಅಲ್ಲೂ ಮಾಂಸದೂಟವಿರುತ್ತದೆ.

ಧಾರ್ಮಿಕ ಆಚರಣೆಗಳು

ಸಾವಿನ ಆಚರಣೆ

ಬಿಲ್ಲವರು ಕುಟುಂಬದಲ್ಲಿ ಯಾರಾದರೂ ಸಾವನ್ನೊಪ್ಪಿದರೆ ಮೊದಲು ಕಾಯಿ ಒಡೆದು, ಅಕ್ಕಿ, ಕಾಯಿ ಕಟ್ಟುತ್ತಾರೆ. ನಂತರ ಶವಕ್ಕೆ ಸ್ನಾನ ಮಾಡಿಸಿ, ದೀಪ ಹಚ್ಚುತ್ತಾರೆ. ಹೆಣ್ಣು ಮುತ್ತೈದೆಯಾಗಿ ಸತ್ತರೆ ಅರಿಶಿಣ, ಕುಂಕುಮ, ಸೀರೆಯನ್ನು ಶವಕ್ಕೆ ಹಾಕುತ್ತಾರೆ. ಅದೇ ಪುರುಷರು ಸತ್ತರೆ ಆತನ ಹೆಂಡತಿಯ ಬಳೆ, ಮಾಂಗಲ್ಯ ಮತ್ತು ಕಾಲುಂಗರವನ್ನು ತೆಗೆಯುತ್ತಾರೆ. ನಂತರ ಮಕ್ಕಳು ಅಥವಾ ಸಂಬಂಧಕರು ಶವವನ್ನು ಸ್ಮಶಾನಕ್ಕೆ ಒಯ್ದು ಬೆಂಕಿಯಲ್ಲಿ ಸುಡುತ್ತಾರೆ. ನಂತರ ಮನೆಗೆ ತಿರುಗಿ ಬಂದು ಮನೆಯನ್ನು ಸಾರಿಸಿ, ಅಡುಗೆ ಮಾಡಿ ಊಟ ಮಾಡುತ್ತಾರೆ. ಸೂತಕ ಕಳೆದ ನಂತರ ಅಸ್ತಿಯನ್ನು ತೆಗೆದುಕೊಂಡು ತಿಥಿ ಕಾರ್ಯಕ್ರಮ ಮಾಡಲು ಗೋಕರ್ಣಕ್ಕೆ ಹೋಗುತ್ತಾರೆ.

ರಾಜಕೀಯ ಮತ್ತು ಶೈಕ್ಷಣಿಕ ವ್ಯವಸ್ಥೆ

ಬಿಲ್ಲವರು ಶೈಕ್ಷಣಿಕವಾಗಿ ಹಿಂದುಳಿದವರಾದ್ದರಿಂದ ಇವರು ರಾಜಕೀಯದಲ್ಲಿ ಭಾಗವಹಿಸುವುದು ಕಡಿಮೆ. ಬಿಲ್ಲವರು ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯತಿ ಮಟ್ಟದಲ್ಲೇ ಇದ್ದಾರೆ. ಅವಕಾಶಗಳ ಕೊರತೆಯೂ ಇದಕ್ಕೆ ಕಾರಣ ಇರಬಹುದು. ಆದರೆ ಕೆಲವರು ಉದ್ಯಮಿಗಳಾಗಿ

ಹೆಸರು ಮಾಡಿದ್ದಾರೆ. ದೇಶ, ವಿದೇಶಗಳಲ್ಲಿ ಉದ್ದಿಮೆಯನ್ನು ಸ್ಥಾಪಿಸಿದ್ದಾರೆ. ಇನ್ನು ಉನ್ನತ ಹುದ್ದೆಗಳಲ್ಲಿ ಇರುವವರ ಸಂಖ್ಯೆಯೂ ಕಡಿಮೆ.

ಸರ್ಕಾರದ ಜಾತಿ ಪಟ್ಟಿ ಪ್ರಕಾರ ಹಿಂದುಳಿದ ವರ್ಗಕ್ಕೆ ಸೇರಿರುವ ಬಿಲ್ಲವರು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯವಾಗಿ ಅಷ್ಟೇನೂ ಪ್ರಭಾವಶಾಲಿಗಳಲ್ಲ. ಜನಾರ್ಧನ ಪೂಜಾರಿಯವರು ಹಾಗೂ ಶ್ರೀನಿವಾಸ ಪೂಜಾರಿಯವರು ಶಾಸಕರಾಗಿ, ರಾಜ್ಯದ ಮಂತ್ರಿ ಮಂಡಳದಲ್ಲಿ ಸಚಿವರಾಗಿದ್ದರು. ಅವರನ್ನು ಹೊರತುಪಡಿಸಿದರೆ ರಾಜಕೀಯವಾಗಿ ಮೇಲೆ ಬಂದವರು ಯಾರು ಇಲ್ಲ.

ಇಂದಿನ ಯುವ ಪೀಳಿಗೆ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ನೀಡುತ್ತಿದ್ದಾರೆ. ಬಿಲ್ಲವರಲ್ಲಿ ಶೈಕ್ಷಣಿಕರ ಪ್ರಮಾಣ ಕಡಿಮೆ. ಶಿಕ್ಷಣವನ್ನು ಮೊಟಕುಗೊಳಿಸಿ ಕೃಷಿ ಮತ್ತು ಕೂಲಿಯತ್ತ ಮುಖ ಮಾಡುತ್ತಿದ್ದರು. ಇದಕ್ಕೆ ಕಾರಣ ಬಿಲ್ಲವರ ಆರ್ಥಿಕ ಸ್ಥಿತಿಗತಿ ಸರಿ ಇಲ್ಲದಿರುವುದು. ಇತ್ತೀಚಿನ ದಿನಗಳಲ್ಲಿ ಆ ಪ್ರಮಾಣ ಏರಿಕೆಯಾಗಿದೆ. ಶಿಕ್ಷಣ ಪಡೆಯುವುದರಿಂದ ಜೀವನ ಮಟ್ಟವನ್ನು ಸುಧಾರಿಸಲು ಸಾಧ್ಯ ಎಂಬ ಅರಿವು ಮೂಡಿದೆ. ಕೆಲವರು ಉನ್ನತ ಶಿಕ್ಷಣ ಪಡೆದು ವಿದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮತ್ತೆ ಕೆಲವರು ಪಟ್ಟಣಗಳಲ್ಲಿ ತಾಂತ್ರಿಕ ಕ್ಷೇತ್ರದಲ್ಲಿ, ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ನೀಡುತ್ತಿದ್ದಾರೆ. ಬಹಳ ಮುಖ್ಯವಾಗಿ ಸಾಂಪ್ರದಾಯಿಕ ಪಠ್ಯಕ್ರಮಗಳಿಗಿಂತ ಭಿನ್ನವಾಗಿ ಡಿಪ್ಲೋಮಾ, ನರ್ಸಿಂಗ್, ಕಂಪ್ಯೂಟರ್ ತರಬೇತಿ. ಪಾಲಿಟೆಕ್ನಿಕ್, ಲಾ ಮುಂತಾದ ವೃತ್ತಿಪರ ಕೋರ್ಸ್‌ಕಡೆ ಹೆಚ್ಚು ಒಲವನ್ನು ತೋರುತ್ತಿದ್ದಾರೆ. ಆದರೆ ಓದಿನ ನಂತರ ಇವರಿಗೆ ಸೂಕ್ತ ರೀತಿಯ ಉದ್ಯೋಗ ಗಿಟ್ಟಿಸಿಕೊಳ್ಳುವುದರಲ್ಲಿ ಪರದಾಡುತ್ತಿದ್ದಾರೆ. ಇಂದಿನ ಯುವಕರು ಶಿಕ್ಷಣ ಪಡೆದು ಜೀವನೋಪಾಯಕ್ಕಾಗಿ ಬೇರೆ ಬೇರೆ ಉದ್ಯೋಗ ಪಡೆಯುವಲ್ಲಿ ನಿರತರಾಗಿದ್ದಾರೆ.

ಕೃಷಿ-ಭೂ ಹಿಡುವಳಿ-ಪಶುಪಾಲನೆ

ಬಿಲ್ಲವರು ತಮ್ಮ ತುಂಡು ಭೂಮಿಯಲ್ಲಿ ಕೃಷಿಯನ್ನು ಮಾಡಿ ಜೀವನ ಸಾಗಿಸುತ್ತಿದ್ದಾರೆ. ಇವರಿಗೆ ಸರ್ಕಾರದ ಸೌಲಭ್ಯಗಳು ಸರಿಯಾಗಿ ಸಿಗುತ್ತಿಲ್ಲ. ಅನೇಕ ಕುಟುಂಬಗಳು ಇನ್ನೂ ಕೂಲಿಯನ್ನೇ ನಂಬಿ ಬದುಕುತ್ತಿದ್ದಾರೆ. ಆದರೂ ಇಂದಿನ ದಿನದಲ್ಲಿ ಯುವಕರು ಪಟ್ಟಣದತ್ತ ಮುಖ ಮಾಡಿ ಹೋಟೆಲ್, ವ್ಯಾಪಾರಿ ಮಳಿಗೆಗಳಲ್ಲಿ, ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದಾರೆ.

ಇದರಿಂದ ಬಿಲ್ಲವ ಕುಟುಂಬಗಳು ಉಸಿರಾಡುವಂತಾಗಿವೆ. ಬಿಲ್ಲವ ಸಮುದಾಯದಲ್ಲಿ ಭೂ ಹಿಡುವಳಿ ಪಡೆದವರ ಸಂಖ್ಯೆ ತುಂಬಾ ಕಡಿಮೆ ಇತ್ತು. ಶ್ರೀಮಂತ ವರ್ಗದವರು ಭೂ ಮಾಲೀಕರಾಗಿದ್ದರು. ಇವರಲ್ಲಿ ಬಿಲ್ಲವರು ಗೇಣಿ ಮಾಡುತ್ತಿದ್ದು, ದುಡಿದು ಬಂದ ಬೆಳೆಯಲ್ಲಿ ೩/೪ ಭಾಗವನ್ನು ಭೂ ಒಡೆಯರಿಗೆ ನೀಡಬೇಕಿತ್ತು. ಭೂ ಸುಧಾರಣಾ ಕಾಯ್ದೆ ಜಾರಿಗೆ ಬಂದ ನಂತರ ಈ ತುಂಡು ಭೂಮಿಗಳು ಬಿಲ್ಲವರ ಪಾಲಾಯಿತು. ಇಂದಿನ ಬಿಲ್ಲವ ಕುಟುಂಬಗಳು

ತಮಗೆ ಇರುವ ತುಂಡು ಭೂಮಿಯ ಸಾಗುವಳಿ ಮಾಡುವದರೊಂದಿಗೆ ಶ್ರೀಮಂತರ ಜಮೀನಿನಲ್ಲಿ ಗೇಣಿ ಮಾಡುವುದು ಹಾಗೂ ಪಶುಪಾಲನೆಯನ್ನು ಮಾಡುತ್ತಾರೆ. ವಾಣಿಜ್ಯ ಬೆಳೆಗಳಾದ ಭತ್ತ, ಶೇಂಗ, ಅವರೆ, ಉದ್ದು, ಹುರುಳಿ ಮುಂತಾದವುಗಳನ್ನು ಬೆಳೆಯುತ್ತಾರೆ. ಕೆಲವರು ಹಸು, ಎಮ್ಮೆಯನ್ನು ಸಾಕಿ ಡೈರಿ ಉದ್ಯೋಗವನ್ನು ಮಾಡುತ್ತಿದ್ದಾರೆ. ಕೆಲವರು ಕೋಳಿ, ಕುರಿಗಳನ್ನು ಸಾಕುತ್ತಿದ್ದಾರೆ. ಹಸುವನ್ನು ಹಾಲು ಮತ್ತು ಗೊಬ್ಬರಕ್ಕಾಗಿ, ಕೋಣವನ್ನು ಉಳುಮೆಗಾಗಿ, ಕೋಳಿ-ಕುರಿಗಳನ್ನು ಮಾಂಸಕ್ಕಾಗಿ ಸಾಕುತ್ತಾರೆ. ಒಟ್ಟಿನಲ್ಲಿ ಇಂದಿನ ಯುವ ಪೀಳಿಗೆ ಸ್ವಂತ ಉದ್ಯೋಗದತ್ತ ಮುಖ ಮಾಡುತ್ತಿರುವುದು ಸಂತೋಷದ ವಿಷಯ.

ಅಗೇರ ಸಮುದಾಯ

ಕರ್ನಾಟಕದಲ್ಲಿ ಉತ್ತರ ಕನ್ನಡ ಎಲ್ಲ ವಿಧದಲ್ಲೂ ವಿಭಿನ್ನವಾದ ಜಿಲ್ಲೆ. ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಸಾಣಿಕಟ್ಟಾ ವಲಯದಲ್ಲಿರುವ ನಾಗರಬೈಲ್ ಮತ್ತು ಸುತ್ತಲಿನ ಕರಾವಳಿ ಪ್ರದೇಶದಲ್ಲಿ ಶತಮಾನಗಳ ಹಿಂದಿನಿಂದಲೂ ಉಪ್ಪಿನ ಆಗರಗಳಲ್ಲಿ, ಉರಿಬಿಸಿಲಿನಲ್ಲಿ, ಮೈಮುರಿದು ದುಡಿಯುತ್ತಿರುವ ನೂರಾರು ಕುಟುಂಬದ ಸ್ತ್ರೀ-ಪುರುಷರು ಕೂಲಿ ಕಾರ್ಮಿಕರಾಗಿದ್ದಾರೆ. ಈ ಕೂಲಿ ಕುಟುಂಬಗಳೇ ಅಗೇರ ಸಮುದಾಯದವರು. ಭಾರತ ದೇಶಾದ್ಯಂತ ಇರುವ ಈ ಸಮುದಾಯವನ್ನು ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಅವುಗಳೆಂದರೆ ಅಗ್ರಿ, ಅಗೇರ, ಅಗೇರಿಯಾಸ್, ಅಗ್ರೀಸ್, ಆಗೇರ್ಸ್, ಅಗಾರಿಯಾ, ಮಿಠಗ್ರೀಸ್ ಇತ್ಯಾದಿ. ಅಗೇರ ಎಂಬುದು ಯಾವುದೇ ಜಾತಿಯನ್ನು ಸೂಚಿಸುವ ಪದವಲ್ಲ. ಇದು ಅವರ ಕುಲ ಕಸುಬಿನಿಂದ ಬಂದ ಪದವಾಗಿದೆ.

ಅಗೇರ ಶಬ್ದದ ಉತ್ಪತ್ತಿ

ಉಪ್ಪು ತೆಗೆಯುವುದಕ್ಕೆ ಬಂದ ಮಿಠಿ ಅಗ್ರಿಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಅಗೇರ ಎಂಬ ಹೆಸರನ್ನು ಪಡೆದಿರಬಹುದೆಂಬ ಅನುಮಾನ ಉಂಟಾಗಿದೆ. ಭೌಗೋಳಿಕ ಮತ್ತು ಭಾಷಾ ಅಂತರದ ವ್ಯತ್ಯಾಸದಿಂದ ಮಹಾರಾಷ್ಟ್ರವೇ ಅಗೇರರ ಮೂಲಸ್ಥಾನವೆಂದು ಸುಲಭವಾಗಿ ಒಪ್ಪಿಕೊಳ್ಳಲಾಗುವುದಿಲ್ಲ. ಮಹಾರಾಷ್ಟ್ರ, ಗುಜರಾತ್ ಕರಾವಳಿಯಿಂದ ಉತ್ತರ ಕನ್ನದ ಜಿಲ್ಲೆಯ ಸಾಣಿಕಟ್ಟಾದ ಉಪ್ಪಿನಾಗರಕ್ಕೆ ಕೂಲಿ ಆಳುಗಳಾಗಿ ಬರುವ ಪದ್ಧತಿ ಬಹಳ ಹಿಂದಿನ ಕಾಲದಿಂದಲೂ ಇತ್ತು ಎಂಬ ಅಂಶವನ್ನು ಇಲ್ಲಿಯ ಹಿರಿಯರು ಒಪ್ಪಿಕೊಳ್ಳುತ್ತಾರೆ. ಆದರೆ ಉಪ್ಪು ಉತ್ಪಾದಕರ ಸಹಕಾರಿ ಸಂಘದ ಕಛೇರಿಯ ಕಡತದಲ್ಲಿ ಇಂತಹ ಯಾವ ದಾಖಲೆಗಳು ಲಭ್ಯವಿಲ್ಲ. ಈಗಲೂ ದಿವ್-ದಮನ್ ದ್ವೀಪಗಳಿಂದ ಉಪ್ಪಿನಾಗರಕ್ಕೆ ಕೂಲಿ ಆಳುಗಳು ಬರುತ್ತಿದ್ದಾರೆ. ಹಾಗೂ ಇಲ್ಲಿಯ ಜನರೂ ಗೋವಾದ ಉಪ್ಪಿನಾಗರಕ್ಕೆ ದುಡಿಯಲು ಹೋಗುವ ಪದ್ದತಿ ರೂಢಿಯಲ್ಲಿದೆ. ಇದರಿಂದ ಒಂದೇ ವಿಧದ ವೃತ್ತಿಯಿಂದ ಜನರಲ್ಲಿ ಪರಸ್ಪರ ಒಡನಾಟದ ಮೂಲಕ ಸಾಂಸ್ಕೃತಿಕ ಕೊಡುಕೊಳ್ಳುವಿಕೆ ಸಾಧ್ಯವಾಗಿರಬಹುದೆಂದು ಮಾತ್ರ ತಿಳಿಯಬಹುದಾಗಿದೆ.[೧೧೫]

ಸಾಮಾಜಿಕ ವ್ಯವಸ್ಥೆ

ಆಗೇರರ ನೆಲೆ

ಇವರು ಮೂಲತಃ ಸಮುದ್ರದ ತೀರದಲ್ಲಿ ವಾಸಿಸುತ್ತಿದ್ದರು. ಆದರೆ ಇಂದು ಸಾಮಾಜಿಕ ಮೌಲ್ಯಗಳು ಬದಲಾದಂತೆ ಇವರು ಊರಿನ, ಕೇರಿಯ ಮಧ್ಯದಲ್ಲಿ ಕಾಣಸಿಗುತ್ತದೆ. ಆದಗ್ಯೂ ಹೆಚ್ಚಿನ ಅಗೇರರು ಊರಿನ ಹೊರ ಭಾಗದಲ್ಲಿ ವಾಸಿಸುವ ರೂಢಿ ಇದೆ. ಮೊದಲು ಹೆಚ್ಚಾಗಿ ಅವಿಭಕ್ತ ಕುಟುಂಬದಲ್ಲಿ ವಾಸಿಸುತ್ತಿದ್ದ ಅಗೇರರು ಇಂದು ಸಣ್ಣ ಸಣ್ಣ ಕುಟುಂಬಗಳಾಗಿರುವುದನ್ನು ಕಾಣಬಹುದಾಗಿದೆ. ವಿಭಕ್ತ ಕುಟುಂಬಗಳಾಗಿ ಬದಲಾದರೂ ಪರಸ್ಪರ ದೂರ ಉಳಿಯದೆ ಒಂದೇ ಸ್ಥಳದಲ್ಲಿ ಸಹಕಾರ ಮತ್ತು ಸಹಬಾಳ್ವೆಯ ಮನಸ್ಸಿನಿಂದ ವಾಸಿಸಲು ತೊಡಗಿದ್ದಾರೆ.

ಕರಾವಳಿ ಪ್ರದೇಶದಲ್ಲಿ ಹೆಚ್ಚಾಗಿ ಭತ್ತ, ತೆಂಗಿನ ಮರಗಳು ಬೆಳೆಯುವುದರಿಂದ ಮನೆಯ ಮೇಲೆ ತೆಂಗಿನ ಗರಿಗಳಿಂದ ನಿರ್ಮಿತವಾದ ತಡಸಲುಗಳನ್ನು ಹರಡಿ ಅದರ ಮೇಲೆ ಭತ್ತದ ಹುಲ್ಲು ಹೊದಿಸುತ್ತಾರೆ. ಇತ್ತೀಚಿಗೆ ಹಂಚಿನ ಮನೆಯನ್ನು ಕಟ್ಟಿಕೊಳ್ಳುತ್ತಿದ್ದಾರೆ. ಅದೆಲ್ಲಕ್ಕಿಂತ ಮುಖ್ಯವಾಗಿ ಅವರದೇ ಆದ ನಿವೇಶನ ಅವರ ಬಳಿ ಇಲ್ಲ. ಮನೆ ಇರುವ ಜಾಗ ಯಾರದೋ ಶ್ರೀಮಂತರರದೋ ಅಥವಾ ಸರ್ಕಾರಿ ಬಿಲೋ, ಸಮುದ್ರದ ಅಂಚೋ ಆಗಿರುತ್ತದೆ. ಅವರನ್ನು ತೀರಾ ಕೀಳಾಗಿ ಕಾಣುತ್ತಿದ್ದರಿಂದ ಅನಿವಾರ್ಯ ಎಂಬಂತೆ ಗುಡ್ಡದ ಬಯಲು ಪ್ರದೇಶದಲ್ಲಿ ಹಾಗೂ ಸಮುದ್ರದ ಅಂಚಿನಲ್ಲಿ ಹಿಂಡು ಹಿಂಡಾಗಿ ಮನೆಯನ್ನು ನಿರ್ಮಿಸಿಕೊಳ್ಳುತ್ತಾರೆ.

ನಿಲುವು ಮತ್ತು ಸ್ವಭಾವ

ಅಗೇರರು ಕಪ್ಪು ಬಣ್ಣದ ದೇಹದವರು. ನಿಲುವಿನಲ್ಲಿ ದ್ರಾವಿಡ ಜನರ ಚಹರೆಯ ಹೋಲಿಕೆಯನ್ನು ಕಾಣಬಹುದಾಗಿದೆ. ಸ್ವಲ್ಪ ಮುಂಚಾಚಿದ ದವಡೆ, ಹಿಂದಕ್ಕೆ ಹೋದ ಹಣೆ. ಅಂತಹ ಸ್ಫುಟವಾದ ನಿಲುವೇನಲ್ಲ. ದೃಢ ಕಾಯದವರು. ಶ್ರಮವಹಿಸಿ ಬಿಸಿಲಿನಲ್ಲಿ ದುಡಿಯುವ ಜನರು.

ಉಪ್ಪಿನ ಆಗರಗಳಲ್ಲಿ ಹಗಲಿರುಳು, ವರ್ಷವಿಡೀ ದುಡಿದರೂ ಹೊಟ್ಟೆ ತುಂಬಾ ಅನ್ನ ಸಿಗದೇ ಇದ್ದಾಗ ಅನಿವಾರ್ಯವಾಗಿ ಅವರು ವೃತ್ತಿಯನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ. ಇದರಿಂದ ಅನಿವಾರ್ಯವಾಗಿ ಅವರು ಇತರೇ ವೃತ್ತಿಯಲ್ಲಿ ತೊಡಗುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ.ವಾಹನ ಚಾಲಕರಾಗಿ, ಕೈಗಾರಿಕೆಗಳಲ್ಲಿ, ಚಹಾ ಅಂಗಡಿ, ಬೀಡಾ ಅಂಗಡಿ, ಕಿರಾಣಿ ಅಂಗಡಿ, ಹಣ್ಣು-ತರಕಾರಿಗಳನ್ನು ಮಾರುವುದು, ಯಕ್ಷಗಾನದಲ್ಲಿ ಕೆಲಸಗಳಲ್ಲಿಯೂ ತೊಡಗಿ ಕೊಂಡಿದ್ದಾರೆ. ಅಗೇರರು ಇಂದು ವಿವಿಧ ವೃತ್ತಿಗಳನ್ನು ಅನುಸರಿಸಿಕೊಂಡು ಜೀವನ ಆರಂಭಿಸಿರುವುದು ಕಂಡು ಬರುತ್ತದೆ.

ಉಡುಗೆ–ತೊಡುಗೆ

ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟ ಸ್ಥಿತಿಯಲ್ಲಿ ಇರುವುದರಿಂದ ಇವರ ವೇಷ ಭೂಷಣಗಳು ಅತೀ ಸರಳವಾಗಿದೆ. ಮಕ್ಕಳಂತೂ ಬಟ್ಟೆಯೇ ಇಲ್ಲದೆಯೆ ಬೆತ್ತಲಾಗಿರುವುದೇ ಹೆಚ್ಚಾಗಿ ಕಾಣಬಹುದು. ಆದರೆ ಇತ್ತೀಚಿನ ದಿನಗಳಲ್ಲಿ ಬಟ್ಟೆಗಳನ್ನು ಕಾಣುತ್ತಿದ್ದಾರೆ. ಗಂಡು ಮಕ್ಕಳು ಮುಂಗಚ್ಚೆಯನ್ನು ಹಾಕುತ್ತಿದ್ದರು. ಈಗಲೂ ಮನೆಗೆಲಸದಲ್ಲಿದ್ದಾಗ ಮತ್ತೆ ಕೆಲಸಕ್ಕೆ ಹೊರಟಾಗ ಇದೇ ಬಟ್ಟೆಯನ್ನೇ ಕಾಣಬಹುದು. ಈಗ ಎಲ್ಲರೂ ಚಡ್ಡಿ ಹಾಕುತ್ತಿದ್ದು ಹೊಸ ತಲೆಮಾರಿನವರು ಪ್ಯಾಂಟ್, ಬರ್ಮೋಡಾ ಹಾಕುವುದನ್ನು ಕಾಣಬಹುದಾಗಿದೆ. ಆಧುನಿಕತೆಗೆ ಒಳಗಾದ ಹೆಂಗಸರು ಹೆಗಲ ಮೇಲಿನಿಂದ ಸೆರಗನ್ನು ಇಳಿ ಬಿಟ್ಟು ಇತರ ಜಾತಿಯವರಂತೆ ಸೀರೆ ಉಡಲು ತೊಡಗಿದ್ದಾರೆ.

ಅಗೇರರಿಗೆ ತನ್ನದೆ ಆದ ವಿಶಿಷ್ಟ ಉಡುಗೆ ತೊಡುಗೆ ಇಲ್ಲ. ಕೆಲವರು ಮಕ್ಕಳಿಗೆ ಭೂತಾಳ ಕಾಯಿಯನ್ನು ಕಟ್ಟಿದರೆ, ಕೆಲವರು ಹುಲಿಯುಗುರನ್ನು ಕಟ್ಟುತ್ತಾರೆ. ಕಾಲಿಗೆ ಹಿತ್ತಾಳೆ ಬಳೆಯನ್ನು ಹಾಕಿರುವುದನ್ನು ಕಾಣಬಹುದಾಗಿದೆ. ಹೆಣ್ಣುಮಕ್ಕಳಿಗೆ ಚಿಕ್ಕವರಿದ್ದಾಗಲೇ ಕಿವಿಚುಚ್ಚಿಸಿ ತುತುಗಳಿಗೆ ತುಳಸಿ ಕಡ್ಡಿ ಅತವಾ ಬೆಂಡನ್ನು ಹಾಕುತ್ತಾರೆ. ಆರ್ಥಿಕವಾಗಿ ಸಬಲರಾದಾಗ ಬಂಗಾರದ ಆಭರಣಗಳನ್ನು ಧರಿಸುತ್ತಾರೆ. ಹಾಲಕ್ಕಿ ಒಕ್ಕಲಿಗರ ಗುಂಪಿಗೆ ಸೇರಿದವರಾದ್ದರಿಂದ ಹಾಲಕ್ಕಿ ಮಹಿಳೆಯರಂತೆ ಮಣಿ ಸರಗಳನ್ನು ಕೊರಳಲ್ಲಿ ಧರಿಸುತ್ತಾರೆ. ಆ ಸರಗಳು ಹೊಟ್ಟೆಯ ತನಕ ಇಳಿಬಿದ್ದಿರುತ್ತವೆ. ಹಿರಿಯ ತಲೆಮಾರನ್ನು ಬಿಟ್ಟರೆ ಇತ್ತೀಚಿನ ತಲೆಮಾರು ಈ ರೀತಿಯ ಮಣಿಸರಗಳನ್ನು ಧರಿಸಿಕೊಳ್ಳುವುದಿಲ್ಲ. ಕಿವಿ ಮತ್ತು ಕೈಯಲ್ಲಿ ಕುಡುಕು (ಬುಗುಡಿ), ಬೊಟ್ಟು (ಮೂಗುತಿ) ಮತ್ತು ತೋಳ ಕಡಗ ಈ ರೀತಿಯಾಗಿ ಅಲ್ಯೂಮಿನಿಯಂ, ಹಿತ್ತಾಳೆ, ಬೆಳ್ಳಿ, ಬಂಗಾರದಿಂದ ತಯಾರಾದ ಆಭರಣಗಳನ್ನು ಧರಿಸುತ್ತಾರೆ. ಮುಂಗೈಯಿಂದ ಮೊಣಕೈವರೆಗೂ ಬೆಳ್ಳಿಯ ಸರಗಳನ್ನು ತೊಡುತ್ತಿದ್ದರು. ವಿಧವೆಯಾದ ಹೆಂಗಸರು ಹಿತ್ತಾಳೆ ಅಥವಾ ಕಂಚಿನ ಬಳೆಗಳನ್ನು ತೊಡುತ್ತಿದ್ದರು. ಹೂವು ಮುಡಿಯುವದಿಲ್ಲ. ಹಣೆಗೆ ಕುಂಕುಮ ಹಚ್ಚಿಕೊಳ್ಳುವುದಿಲ್ಲ. ಮಣ್ಣಿನ ಬಳೆಯನ್ನು ತೊಡುವುದಿಲ್ಲ. ಗಂಡಸರು ಉಂಗುರ ಅಥವಾ ಕೈಕಡಗವನ್ನು ಹಾಕುತ್ತಾರೆ. ಕಿವಿಗೆ ಒಂಟಿ ಇಲ್ಲವೆ ಮುರಗಳನ್ನು ತೊಡುತ್ತಿದ್ದರು. ಬಲಗಿವಿಗೆ ಚಿನ್ನದ ಕೊಡಾಕೆ, ಮುರ ಇಲ್ಲವೇ ಸ್ವರ್ಗದೊಂಟಿಯೆಂದು ಕರೆಯುವ ಮುರ ಇರುತ್ತದೆ. ತುಂಬಾ ಕಡಿಮೆ ಸಂಖ್ಯೆಯಲ್ಲಿ ಬೆಳ್ಳಿಯ ಸರಪಳಿ ಅಥವಾ ನೆವಳವನ್ನು ಧರಿಸುತ್ತಾರೆ.

ಬಳಿಗಳು

ಆರು ಬಳಿಗಳು ಅಗೇರ ಸಮುದಾಯದಲ್ಲಿ ಪ್ರಚಲಿತದಲ್ಲಿದ್ದವು ಎಂದು ಹೇಳಿದ್ದಾರೆ. ಇಲ್ಲಿ ಹೆಣ್ಣು, ಪ್ರಾಣಿ, ಪದಾರ್ಥ, ಗಿಡ=ಮರ, ಬಳ್ಳಿಗಳ ಪ್ರಸ್ತಾಪ ಇರುವುದು ಕಂಡುಬರುತ್ತದೆ. ಅಗೇರರು ಕುಲಚಿಹ್ನೆಯ ಉಪಾಸಕರು. ಪ್ರಾಣಿ–ಗಿಡ–ಮರ, ಹೂ–ಬಳ್ಳಿಗಳು ಅಲ್ಲದೇ ವನಸ್ಪತಿಗಳ ಮೂಲದಿಂದಲೂ ತಮ್ಮ ಕುಲಗಳನ್ನು ಗುರುತಿಸಿಕೊಳ್ಳುತ್ತಾರೆ. ಹಿಂದಿನ ಕಾಲದಲ್ಲಿ ಕುಲಚಿಹ್ನೆಗಳು ದೇವತೆಯ ಸ್ಥಾನದಲ್ಲಿಟ್ಟು ಪೂಜಿಸುತ್ತಿದ್ದರು

ಒಳಾಡಳಿತ ವ್ಯವಸ್ಥೆ

ಅಗೇರ ಸಮುದಾಯದ ಒಳಾಡಳಿತ ವ್ಯವಸ್ಥೆಯು ಬುಡಕಟ್ಟು ಮಾದರಿಯಾಗಿರುತ್ತದೆ. ಇದಕ್ಕೆ ನ್ಯಾಯ ಪಂಚಾಯತಿ ಎಂತಲೂ ಕರೆಯುತ್ತಾರೆ. ಸಮುದಾಯದ ಜನರನ್ನು ಸುವ್ಯವಸ್ಥಿತ ಮಾರ್ಗದಲ್ಲಿ ಮುನ್ನೆಡೆಸಲು ಆಯಾ ಸಮುದಾಯಗಳ ಒಳಾಡಳಿತ ವ್ಯವಸ್ಥೆಯಲ್ಲಿ ತಮ್ಮದೇ ವಿಧಿ-ವಿಧಾನಗಳಿರುತ್ತದೆ. ಆಧುನಿಕ ಕಾನೂನು, ನ್ಯಾಯ ವ್ಯವಸ್ಥೆ, ಶಾಸನಗಳ ಬಗ್ಗೆ ತಿಳುವಳಿಕೆ ಯಿಲ್ಲದಿದ್ದರೂ ತಮ್ಮದೇ ಆದ ಮಹತ್ವದ ನಿರ್ಣಯಗಳನ್ನು ಕೈಗೊಳ್ಳುತ್ತಾರೆ. ಸಮುದಾಯದ ಒಳಗಡೆ ನಡೆಯುವ ತಂಟೆ ತಕರಾರು, ಹೊಲ-ಮನೆಗಳಿಗೆ ಸಂಬಂಧಿಸಿದ ವ್ಯಾಜ್ಯಗಳು ತಮ್ಮ ಒಳಾಡಳಿತ ವ್ಯವಸ್ಥೆಯ ಮೂಲಕವೇ ಬಗೆ ಹರಿಸಿಕೊಳ್ಳುತ್ತಾರೆ. ಸಮುದಾಯದ ಅನುಕೂಲಕ್ಕೆ ಒಳಾಡಳಿತ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದಾರೆ.

ಅಗೇರ ಸಮುದಾಯಗಳಿಗೆ 'ಗುರು ಮಠ' ಒಂದು ಪವಿತ್ರ ಸ್ಥಾನವಾಗಿರುತ್ತದೆ. ಅದರ ಕಾರ್ಯಕಲಾಪಗಳನ್ನು ಗುರುಮಠದ ಗುರುಗಳು ನೋಡಿಕೊಳ್ಳುತ್ತಾರೆ. ಇವರು 'ಐಗಳ್' ಕುಟುಂಬದವರಾಗಿರುತ್ತಾರೆ. ಇವರಿಗೆ ಸಮುದಾಯದ ಜನರು ಪೂಜ್ಯಭಾವದಿಂದ 'ಐಗೋಳ್' ಎಂದು ಕರೆಯುತ್ತಾರೆ. ಅಗೇರರು ವಾಸ ಮಾಡಿರುವ ಊರು, ಕೇರಿಗೆ, ಪ್ರತಿ ಮೂರು ಸೀಮೆಗೆ ಮೂರು ಸೀಮೆ ಗೌಡರು ಅಥವಾ ಸೀಮೆ ಬುದವಂತರು ಇರುತ್ತಾರೆ. ಅಗೇರರ ಪ್ರತಿ ಊರಿಗೆ ಬುದವಂತ, ಕೋಲಕಾರರು ಪ್ರಮುಖರಾಗಿರುತ್ತಾರೆ. ಒಳಾಡಳಿತ ವ್ಯವಸ್ಥೆಯಲ್ಲಿ ಊರಿನ ಹತ್ತು ಮಂದಿ ಕೋಲಕಾರರಿಗೆ, ಬುದವಂತರಿಗೆ ಸಹಾಯಕರಾಗಿರುತ್ತಾರೆ. ಇಡಿ ಸಮುದಾಯ ಇವರನ್ನು ಗೌರವದಿಂದ ಕಾಣುವುದರಿಂದ ಇವರು ಉತ್ತಮ ನಡವಳಿಕೆಯನ್ನು ಹೊಂದಿರಬೇಕು. ಒಂದು ವೇಳೆ ಈ ಇಬ್ಬರು ವ್ಯಕ್ತಿಗಳು ಅನೀತಿ ಮಾರ್ಗ ಹಿಡಿದರೆ ಇವರನ್ನು ಅಧಿಕಾದಿಂದ ತೆಗೆದುಹಾಕುವ ಹಕ್ಕನ್ನು ಸಮುದಾಯದ ಜನರು ಹೊಂದಿದ್ದಾರೆ. ಅಗೇರ ಸಮುದಾಯದಲ್ಲಿ ಒಳಾಡಳಿತ ವ್ಯವಸ್ಥೆಯ ಪ್ರಮುಖ ಸ್ಥಾನಗಳು ಗುರುಮಠ, ಗುರುಗಳು (ಐಗೋಳ್), ಸೀಮೆಗೌಡರು ಅಥವಾ ಬುದವಂತರು, ಊರಿನ ಬುದವಂತರು, ಕೋಲಕಾರ, ಊರಿನ ಪ್ರಮುಖರು.

ವಸತಿ ವ್ಯವಸ್ಥೆ

ಉತ್ತರ ಕನ್ನಡ ಜಿಲ್ಲೆಯ ಅಗೇರರು ತುಂಬಾ ಬಡತನದಲ್ಲಿ ಬೇಯುತ್ತಿದ್ದಾರೆ. ಇವರು ಊರಿಂದಾಚೆ ತಮ್ಮದೇ ಕೇರಿಗಳನ್ನು ಮಾಡಿಕೊಂಡು ವಾಸಿಸುತ್ತಿದ್ದಾರೆ. ಅಗೇರರು ಎರಡು ಅಥವಾ ನಾಲ್ಕು ಮಾಡಿನ ಹುಲ್ಲಿನ ಛಾವಣಿಯ ಮನೆಯಲ್ಲಿ ವಾಸ ಮಾಡುತ್ತಾರೆ. ಹೆಚ್ಚಾಗಿ ನಾಲ್ಕು ಮಾಡಿನ ಮನೆಗಳೇ ಹೆಚ್ಚು. ಅರಣ್ಯದಿಂದ ಉತ್ತಮವಾದ ಮರವನ್ನು ಕಡಿದು ತಂದು ಮನೆಯ ಕಂಬಕ್ಕೆ ಬಳಸುತ್ತಾರೆ. ಮೇಲ್ಛಾವಣಿಗೆಗೆ ಭತ್ತದ ಹುಲ್ಲು, ಆಪದ ಹುಲ್ಲು, ಕರಡ ಅಥವಾ ತೆಂಗಿನ ಹೆಡವನ್ನು ನೇಯ್ದು ಸಿದ್ಧಪಡಿಸಿದ ತಡಿಕೆಗಳನ್ನು ಬಳಸುತ್ತಾರೆ. ಮನೆಗೆ ಬಳಸಿದ ಕೋಳು ಕಂಬವನ್ನು ಇವರು ಪೂಜ್ಯ ಭಾವನೆಯಿಂದ ನೋಡುತ್ತಾರೆ. ಕೋಳು ಕಂಬದ ಮೇಲೆಯೇ ಇಡಿ ಮನೆ ಮತ್ತು ಮೇಲ್ಛಾವಣಿ ನಿಂತಿರುತ್ತದೆಂಬ ಪೂಜ್ಯ ಭಾವನೆ

ಇವರದು. ಸಣ್ಣದಾದ ನಾಲ್ಕು ಕೀಲು ಕಂಬಗಳ ಮೇಲೆ ಕೋಳು ಕಂಬ ಭದ್ರವಾಗಿ ನಿಂತಿರುತ್ತದೆ. ಮದುವೆ ಮುಗಿದ ನಂತರ ವಧುವರರು ಉಪಯೋಗಿಸಿದ ಬಾಸಿಂಗವನ್ನು ಒಂದು ಹೊಸ ಪಂಚೆಯಲ್ಲಿ ಕಟ್ಟಿ ಕೋಳುಕಂಬಕ್ಕೆ ಕಟ್ಟುತ್ತಾರೆ. ರಾಶಿಯ ಸಂದರ್ಭದಲ್ಲಿಯೂ ಹೊಸ ಭತ್ತದ ತೆನೆಯನ್ನು ಕೋಳುಕಂಬಕ್ಕೆ ಕಟ್ಟುತ್ತಾರೆ.

ಮನೆಯ ಒಳಗಡೆ ಮೋಟು ಗೋಡೆ ಕಟ್ಟಿ ಅದರ ಮೇಲೆ ತೆಂಗಿನ ತಡಿಕೆತಳನ್ನು ಇಟ್ಟು ಇಬ್ಭಾಗಿಸುತ್ತಾರೆ. ಒಂದು ಅಡಿಗೆ ಕೋಣೆ, ಮತ್ತೊಂದು ಮಲಗುವ ಕೋಣೆ. ಅದರ ಮುಂಬಾಗದಲ್ಲಿ ಜಗಲಿಯನ್ನು ಮಾಡಿರುತ್ತಾರೆ. ಜಗಲಿಯನ್ನು ಸ್ವಲ್ಪ ಎತ್ತರಕ್ಕೆ ಕಟ್ಟಿ ಕುಳತುಕೊಳ್ಳಲಿಕ್ಕೆ ಅನುಕೂಲವಾಗುವಂತೆ ಮಾಡುತ್ತಾರೆ. ಇದಕ್ಕೆ ಅಗೇರರು 'ಸಿಟ್ಟೆತೆಣೆ' ಎನ್ನುತ್ತಾರೆ. ಎದುರಿನ ಅಂಗಳವನ್ನು ಗೋಮಯದಿಂದ ಚೆನ್ನಾಗಿ ಸಾರಿಸಿರುತ್ತಾರೆ. ಅಂಗಳದಲ್ಲಿ ಭತ್ತ ಕುಟ್ಟುವ ಒರಳು, ಮನೆ ಮುಂದೆ ತುಳಸಿ ಕಟ್ಟೆ ಇರುತ್ತದೆ. ಅಂಗಳದ ಮೂಲೆಯಲ್ಲಿ ಹೊಲಸಿನ ಒಲೆ, ಅಂದರೆ ಮೀನು ಬೇಯಿಸುವ ಒಲೆ. ಮನೆಯ ಅಂಗಳದ ಒಂದು ಮೂಲೆಯಲ್ಲಿ ನೀರನ್ನು ಕಾಯಿಸಲು 'ಬಚ್ಚಲು ಒಲೆ' ಇದ್ದು ಇದರೆ ಮೇಲೆ ದೊಡ್ಡ ಹರವಿ ಅಥವಾ ಹಂಡೆ ಇರುತ್ತದೆ. ಇದನ್ನು ಅಗೇರರು ಅಡಕಲು ಎನ್ನುತ್ತಾರೆ.

ಅಗೇರರು ಗುಡಿಸಲು, ಚಪ್ಪರದ, ಹಂಚಿನ ಮನೆಗಳೇ ಇರಲಿ ವ್ಯವಸ್ಥಿತವಾಗಿ ಕಟ್ಟಿರುತ್ತಾರೆ. ಅಡುಗೆ ಕೋಣೆಯ ಪೂರ್ವದಿಕ್ಕಿನಲ್ಲಿ ಅಡಿಗೆಯ ಒಲೆಯಿದ್ದು ಅದರ ಪಕ್ಕದಲ್ಲಿ ಸಣ್ಣ ಸಣ್ಣ ಒಲೆಗಳಿರುತ್ತವೆ. ಮುಖ್ಯ ಒಲೆಗೆ 'ಹೆತ್ತೊಲೆ' ಎನ್ನುತ್ತಾರೆ. ಒಲೆಗಳನ್ನು ಜೇಡಿಮಣ್ಣಿನಿಂದ ಕಟ್ಟಿ ಅದರಿಂದಲೇ ಸಾರಿಸಿರುತ್ತಾರೆ. ಒಲೆಯ ಸಮೀಪದ ಮೂಲೆಯಲ್ಲಿ ಅಡುಗೆ ಮಾಡುವ ಪಾತ್ರೆಗಳನ್ನು ಇಡುವ ಪಡಗಗಳಿರುತ್ತವೆ. ಮಣ್ಣಿನ ಮಡಿಕೆಗಳನ್ನು ಅಲ್ಲಿಯೇ ಸಾಲಾಗಿ ಜೋಡಿಸಿರುತ್ತಾರೆ. ಅವುಗಳಲ್ಲಿ ಅಡುಗೆಗೆ ಬೇಕಾದ ಕಾಳುಕಡಿ ಸಾಮಾನುಗಳನ್ನು ಜೋಡಿಸಿರುತ್ತಾರೆ. ಇವುಗಳ ಜೊತೆಗೆ ಸಿಬ್ಲಾ ಮರಕೊಯ್ಪು, ಬಂಗ್ಲಿ, ನೆಳ್ಳಿ ಕೊಕೀನ, ಮರಗಿ, ಹಂಚು, ದೊಸೆ ಬಂಡಿ, ಇಡ್ಲಿ ಪಾತ್ರೆ, ಸೊಟ್ಟಾ, ಚಿಪ್ಪುಗಳು, ಕೆರೆಮಣೆ, ಕತ್ತಿ, ಮೆಟ್ಗತ್ತಿ, ಚಟ್ನಿ ಕುಟ್ಟುವ ಕಲ್ಲು ಚಮಚ, ಚಿಮ್ಮಟಗಿ, ಕೊಡದ ಮೇಲೆ ಮುಚ್ಚುವ ಮಣ್ಣಿನ ಪಗಡ ಇನ್ನೂ ಅನೇಕ ಬಗೆಯ ವಸ್ತುಗಳನ್ನು ಇಟ್ಟಿರುತ್ತಾರೆ. ಸ್ವಲ್ಪ ಅನುಕೂಲಸ್ಥರು ಖಂದಿಲು ಇಡುತ್ತಾರೆ. ಇತ್ತೀಚಿಗೆ ಜನತಾ ಮನೆಗಳಲ್ಲಿ ಭಾಗ್ಯಜ್ಯೋತಿ ಲೈಟ್ ವ್ಯವಸ್ಥೆ ಕಂಡುಬರುತ್ತದೆ. ಮನೆಯಲ್ಲಿ ಮಾಡಿದ ಅಡುಗೆಯನ್ನು ನಾಯಿ, ಬೆಕ್ಕು ತಿನ್ನಬಾರದೆಂದು ಮನೆಯ ಜಂತಿ, ಕಂಬ, ಛಾವಣಿಗೆ ಉದ್ದನೆಯ ಸಿಕ್ಕವನ್ನು ತೂಗಿ ಬಿಟ್ಟು ಅದರಲ್ಲಿ ಇಡುತ್ತಾರೆ. ಮತ್ತೆ ಕೆಲವರು ಅಡುಗೆಯನ್ನು ಬುಟ್ಟಿಯಲ್ಲಿಟ್ಟು ಮೇಲಿಂದ ಮತ್ತೊಂದು ಬುಟ್ಟಿಯನ್ನು ಮುಚ್ಚಿಡುತ್ತಾರೆ. ಅಡುಗೆ ಮನೆಯ ಮೂಲೆಯಲ್ಲಿರು ಮಣ್ಣಿನ ಅಡಕಲದ ಕೆಳಗೆ ನೆಲ್ಲಿ ಹುಲ್ಲಿನಿಂದ ಮಾಡಿದ ಎರಕಲುಗಳನ್ನು ಅಥವಾ ವಿವಿಧ ಬೇರುಗಳಿಂದ ಸಿದ್ಧಪಡಿಸಿದ ಸಿಂಬೆಗಳನ್ನು ಇಡುತ್ತಾರೆ.

ಆಹಾರ ಸಂಗ್ರಹಣೆ

"ಭೂಮಿಯ ಮೇಲೆ ಮಾನವ ಜನ್ಮತಾಳಿದಾಗ ಸಂಪತ್ತಿನ ಉಳಿತಾಯ ಅಥವಾ ಗಳಿಕೆಗೆ ಆದ್ಯತೆಯನ್ನು ನೀಡುತ್ತಿದ್ದಿಲ್ಲ. ಅಂದಿನ ದಿನದ ಅಹಾರವನ್ನು ಅಂದೇ ಸಂಪಾದಿಸಿಕೊಂಡು ತಿನ್ನುತ್ತಿದ್ದ. ಮಾನವ ಯಾವಾಗ ಒಂದೆಡೆ ಸೇರಿ ಗುಂಪು ಜೀವನವನ್ನು ಆರಂಭಿಸಿದನೋ ಅಂದಿನಿಂದ ಅವನ ಜೀವನದ ಚಿತ್ರಣವೇ ಬದಲಾಯಿತು. ಸಮುದಾಯದವರೆಲ್ಲರೂ ಒಟ್ಟಾಗಿ ದುಡಿಯಲು ಪ್ರಾರಂಭಿಸಿದರು. ಆಗ ಸಂಪತ್ತಿನ ಉಳಿತಾಯವಾಗುತ್ತ ಹೋಯಿತು. ಸಮುದಾಯ, ಬಳಸಿ ಉಳಿದ ಸಂಪತ್ತನ್ನು 'ಮಿಗುತಾಯ' ಎಂದು ಕರೆಯಲಾಗುತ್ತದೆ. ಈ ಮಿಗುತಾಯ ವ್ಯವಸ್ಥೆ ಬಂದ ನಂತರ ಮಾನವನಿಗೆ ಉಳಿತಾಯ ಅಥವಾ ಸಂಗ್ರಹದ ಕಲ್ಪನೆ ಬಂದಿರಬೇಕು. ನಂತರದ ದಿನಗಳಲ್ಲಿ ಸಮುದಾಯಗಳು ಸಂಪತ್ತಿನ ಅಥವಾ ಆಹಾರದ ಸಂಗ್ರಹಣೆಯ ಕಡೆಗೆ ಗಮನಹರಿಸಿದವು."[೨]

ಅಗೇರರು ಉಪ್ಪಿನ ಆಗರಗಳಲ್ಲಿ ದುಡಿಯುತ್ತ, ಮೇಲ್ವರ್ಗದವರ ತೋಟದಲ್ಲಿ ಕೂಲಿ ಕಾರ್ಮಿಕರಾಗಿ ದುಡಿಯುತ್ತ ಪರಾವಲಂಬಿಗಳಾಗಿದ್ದಾರೆ. ಇವರು ನಾಳಿನ ಆಗು ಹೋಗುಗಳ ಬಗ್ಗೆ ಚಿಂತೆ ಮಾಡುವವರಲ್ಲ. ಒಂದು ದಿನದ ಊಟಕ್ಕೆ ಇದ್ದರೂ ಇವರು ದುಡಿಯಲು ಹೋಗುವುದಿಲ್ಲ. ಅಗೇರರ ಕುರಿತು ಇರುವ ಗಾದೆಯನ್ನು ಗಮನಿಸಿದಾಗ 'ಆಗ ತಂದ ಆಗ ಉಂಬೋರೇ ಅಗೇರಾದ್ರ' ಅಂದರೆ ಅಗೇರರು ಆಗ ತಂದದನ್ನು ತಿಂದು ಇರುವವರು. ನಾಳಿನ ಬಗ್ಗೆ ಚಿಂತೆಯೇ ಇಲ್ಲದವರು ಎಂದು. ಕೂಲಿ–ನಾಲಿ ಮಾಡಿ ತಂದ ಹಣವನ್ನು ಪುರುಷರು ಹೆಂಡಕ್ಕಾಗಿ ವ್ಯಯಿಸುತ್ತಾರೆ. ಇನ್ನೊಂದು ಗಾದೆಯನ್ನು ಗಮನಿಸಿದಾಗ 'ಅಗೇರ ಮಾಡೋದು ಹೆಂಡಕ, ದೇವ್ರ ಮಾಡೋದು ದಂಡಕ' ಇಲ್ಲಿ ದೇವರ ದಿಂಡರ ಹೆಸರಿನಲ್ಲೂ ಸಾಲ ಮಾಡಿ ಹೆಂಡ ಕುಡಿದು ನರಳುವುದುಂಟು. ಈ ಗಾದೆಗಳನ್ನು ಗಮನಿಸಿದಾಗ ಅಗೇರರ ಸಂಸ್ಕೃತಿಯ ಜೀವಾಳವು ಬದುಕಿನ ದಾರುಣ ಸ್ಥಿತಿಗತಿ, ಅಸಹಾಯಕತೆ, ಮನಸ್ಥಿತಿ, ಮನೋಭಾವಗಳು ತಿಳಿದುಬರುತ್ತದೆ. ಅಂದಿನ ಆಹಾರವನ್ನು ಅಂದೇ ಸಂಪಾದಿಸುವ ಮನೋಭಾವ ಇವರದು. ಸರ್ಕಾರ ನೀಡುವ ಪಡಿತರ ಚೀಟಿಯ ವ್ಯವಸ್ಥೆ ಅಗೇರರನ್ನು ತಲುಪುವಂತೆ ಮಾಡಲು ಸರ್ಕಾರ ಯೋಜನೆಯನ್ನು ರೂಪಿಸಬೇಕಿದೆ. ಕಾಲ ಬದಲಾದಂತೆ ಅಗೇರ ಇತರ ಸಮುದಾಯಗಳೊಡನೆ ಊರ ಅಂಚಿನಲ್ಲಿ ವಾಸಿಸುವುದು, ವ್ಯವಸ್ಥಿತ ಮನೆ ನಿರ್ಮಿಸಿಕೊಳ್ಳುವುದು, ಮಕ್ಕಳಿಗೆ ಶಿಕ್ಷಣ ಕೊಡಿಸುವುದು, ಕೃಷಿ, ಪಶುಪಾಲನೆ, ಉದ್ಯೋಗ, ಆರ್ಥಿಕತೆ, ಆಹಾರ ಸಂಗ್ರಹಣೆಯತ್ತ ಹೆಚ್ಚಿನ ಒಲವು ತೋರಿಸುತ್ತಿದ್ದಾರೆ. ಮನೆಯಲ್ಲಿ ಅಕ್ಕಿ, ಜೋಳ, ರಾಗಿ, ನವಣೆ, ಹೆಸು, ಕಡ್ಲೆ, ಯಳ್ಳು, ಬೆಲ್ಲ ಹುಣಸೆ, ಅಡಿಕೆ ಮುಂತಾದ ವಸ್ತುಗಳನ್ನು ಸಂಗ್ರಹಿಸಿಡುತ್ತಿದ್ದಾರೆ. ಅಲ್ಲದೇ ಕಾಡಿನಲ್ಲಿ ಸಿಗುವ ಅಹಾರ ಪದಾರ್ಥಗಳನ್ನು ಸಂಗ್ರಹಿಸುತ್ತಿದ್ದಾರೆ. ಇದರಿಂದ ನಾಳಿನ ಬಗ್ಗೆಯೂ ಚಿಂತಿಸುತ್ತಾರೆ ಎಂದು ತಿಳಿದುಬರುತ್ತದೆ. ಜನರ ಸಂಪರ್ಕ, ಸಮೂಹ ಮಾಧ್ಯಮಗಳ ಜಾಹೀರಾತಿನಿಂದಲೂ ಅಗೇರರ ಬದುಕಿನಲ್ಲಿ ಆಶಾ ಭಾವನೆ ಮೂಡತೊಡಗಿದೆ.

ನಂಬಿಕೆ ಮತ್ತು ಆಚರಣೆಗಳು

ಪ್ರತಿಯೊಂದು ಸಮುದಾಯಗಳಲ್ಲಿ ಹುಟ್ಟಿನಿಂದ ಸಾವಿನವರೆಗೆ ಅನೇಕ ಬಗೆಯ ಆಚರಣೆ, ನಂಬಿಕೆಗಳಿವೆ. ಇವು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಅಗೇರರ ಹುಟ್ಟು-ನಾಮಕರಣ, ಮೈನೆರೆಯುವುದು, ಸೋಳಂಗಿ, ಮದುವೆ, ಬಯಕೆ ಬಡಿಸುವುದು, ಬಾಣಂತನ, ಸಾವಿನ ಆಚರಣೆಯ ಬಗ್ಗೆ ಸ್ವಲ್ಪ ಗಮನಹರಿಸೋಣ. ಸಂಪ್ರದಾಯಗಳಲ್ಲಿ ಬೇಡಿಕೆ ಸಂಪ್ರದಾಯ (ತುಳಸಿ ಹಬ್ಬಕ್ಕೆ ಸಂಬಂಧಿಸಿದ್ದು), ಕಂಬಳ (ಕೂಡಿ ಉಂಬೋಣ) ಇತ್ಯಾದಿ. ನಂಬಿಕೆಗಳಲ್ಲಿಯೂ ಕೂಡಾ ಸಾಕಷ್ಟು ವಿಶ್ವಾಸ ವಿಟ್ಟವರು. ಅಗೇರರು ಶರೀರ ಸಂಬಂಧಿ ನಂಬಿಕೆ, ಸಂಸ್ಕಾರ ಸಂಬಂಧಿ ನಂಬಿಕೆ ಇತ್ಯಾದಿ, ದೇವರು-ಧರ್ಮ-ಹಬ್ಬಗಳ ಆಚರಣೆಯನ್ನು ಕೂಡ ನಿಷ್ಠೆಯಿಂದ ಆಚರಿಸುತ್ತಾರೆ. ತುಳಸಿ ಹಬ್ಬ, ಕುಲದೇವರು, ಗುರುಮಠ ಪರಂಪರೆ, ನುಗ್ಯಹೋಣಮಿ, ನಾಗರಪಂಚಮಿ, ಗಣೇಶ ಚೌತಿ, ದೀಪಾವಳಿ, ಸಂಕ್ರಾಂತಿ ಇತ್ಯಾದಿ.

ಮೈನೆರೆಯುವುದು

ಅಗೇರ ಸಮುದಾರದಲ್ಲಿ ಹೆಣ್ಣು ಋತುಮತಿಯಾಗುವುದಕ್ಕೆ ಮೈನೆರೆಯುವುದು, ದೊಡ್ಡವಳಾಗುವುದು, ಪ್ರಾಯಕ್ಕೆ ಬರುವುದು ಎಂದು ಹೇಳುತ್ತಾರೆ. ಈ ಸಮಯದಲ್ಲಿ ಅವರದೇ ಆದ ಆಚರಣೆಗಳನ್ನು ಆಚರಿಸುತ್ತಾರೆ. ಹೆಣ್ಣು ಮೊದಲು ಋತುಮತಿಯಾದಾಗ ಅಗೇರರು ಯಾವುದೇ ಆಚರಣೆ ಮಾಡುವುದಿಲ್ಲ. ಹಿಂದಿನ ಕಾಲದಲ್ಲಿ ಬಾಲ್ಯವಿವಾಹ ರೂಢಿಯಲ್ಲಿದ್ದುದರಿಂದ ಹೆಣ್ಣು ದೊಡ್ಡವಳಾಗುವವರೆಗೆ ತಂದೆ-ತಾಯಿಯ ಜೊತೆ ಇರುತ್ತಿದ್ದರು. ಅವಳು ದೊಡ್ಡವಳಾದ ಮೇಲೆ ಗಂಡನ ಮನೆಗೆ ಸುದ್ದಿ ತಿಳಿಸುತ್ತಿದ್ದರು. ಅಗೇರರು ಈ ವಿಷಯವನ್ನು ಸಾಂಕೇತಿಕವಾಗಿ ತಿಳಿಸುತ್ತಿದ್ದರು. ಒಂದು ತೆಂಗಿನಕಾಯಿಗೆ ಕಾಡಿಗೆ ಬಳಿದು ಯಾರಾದರೊಬ್ಬರು ಗಂಡಿನ ಮನೆಗೆ ಬರುತ್ತಿದ್ದರು. ಆಗ ವಿಷಯ ತಿಳಿದ ಗಂಡಿನ ಕಡೆಯವರು ಹೊಸ ಸೀರೆ, ಕುಪ್ಪುಸ, ಹೂ, ಹಣ್ಣು, ಬಳೆಯೊಂದಿಗೆ ಹೆಣ್ಣಿನ ಮನೆಗೆ ಬಂದು ಅವಳನ್ನು ಸ್ನಾನ ಮಾಡಿಸಿ, ಹೊಸ ಸೀರೆ ಉಡಿಸಿ ಗೌರವದಿಂದ ಮನೆಗೆ ಕರೆದೊಯ್ಯುತ್ತಿದ್ದರು. ನಂತರ ಸಂಬಂಧಿಕರಿಗೆ ಸಿಹಿ ಊಟ ಬಡಿಸಿ ಬಳಿಕ ಗಂಡು ಹೆಣ್ಣು ಒಂದಾಗಲು ಅವಕಾಶ ಮಾಡಿಕೊಡುತ್ತಿದ್ದರು.

ದೊಡ್ಡವಳಾದ ಸಂದರ್ಭದಲ್ಲಿ ಅವಳನ್ನು ಯಾರು ಮುಟ್ಟಿಕೊಳ್ಳದೇ ಮನೆಯ ಹೊರ ಭಾಗದಲ್ಲಿ ಪ್ರತ್ಯೇಕ ಚಪ್ಪರ ಮಾಡಿ ಅಥವಾ ಮನೆಯ ಜಗಲಿಯ ಮೂಲೆಯಲ್ಲಿ ಕೂಡ್ರಿಸುತ್ತಾರೆ. ಹಿಂದೆ ಅವಳ ಮುಂದೆ ಒಂದು ಒನಕೆ ಇಟ್ಟು ಅವಳು ಪ್ರತ್ಯೇಕ ಎಂದು ಸೂಚಿಸುತ್ತಿದ್ದರು. ಅವಳಿಗೆ ಊಟ ಮಾಡಲು ಪ್ರತ್ಯೇಕ ತಾಟು, ತಂಬಿಗೆ, ಲೋಟ ಮತ್ತು ತಿಂಡಿ ತಿನಿಸನ್ನು ನೀಡಲು ಬಾಳೆ ಎಲೆ ಅಥವಾ ಅಡಿಕೆ ಹಾಳೆಯ ದೊನ್ನೆಯನ್ನು ಬಳಸುತ್ತಾರೆ. ಪ್ರತ್ಯೇಕವಾದ ಚಾಪೆ, ಹಾಸಿಗೆ, ಕುಡಿಯುವ ನೀರಿನ ಕೊಡ ಇಡುತ್ತಾರೆ. ಐದನೇ ದಿನಕ್ಕೆ ಹಳ್ಳದಲ್ಲಿನ ನೀರಿನಲ್ಲಿ ಬಟ್ಟೆ ಒಗೆದು, ಸ್ನಾನ ಮಾಡಿ ಗೋಮೂತ್ರ, ತುಳಸಿ ನೀರನ್ನು ಕುಡಿದು ತುಳಸಿಕಟ್ಟೆಗೆ

ಪೂಜೆ ಮಾಡಿ ಸೂರ್ಯನಿಗೆ ನಮಸ್ಕರಿಸಿ ಮನೆಯ ಒಳಗೆ ಬರುವ ಸಂಪ್ರದಾಯವಿದೆ. ಆದರೆ ಈ ಸಂಪ್ರದಾಯ ಇಂದು ಅಗೇರರಲ್ಲಿ ಆಧುನಿಕತೆಯತ್ತ ಸಾಗುತ್ತಿದೆ ಎಂದು ಇಲ್ಲಿನ ಹೆಂಗಸರು ಹೇಳುತ್ತಾರೆ.

ಹುಟ್ಟಿನ ಆಚರಣೆ

ಅಗೇರ ಸಮುದಾಯದಲ್ಲಿ ಬಾಣಂತಿಗೆ ನೋವು ಕಾಣಿಸಿಕೊಂಡಾಗ ಸಮುದಾಯದ ಅನುಭವಸ್ಥ (ಜೆಜ್ಜಗಿತ್ತಿ) ಮಹಿಳೆಯರನ್ನು ಕರೆಯಿಸಿ, ಗರ್ಭಿಣಿಯನ್ನು ಒಂದು ಪ್ರತ್ಯೇಕ ಕೋಣೆಯಲ್ಲಿ ಭತ್ತದ ಹುಲ್ಲಿನ ಹಾಸಿಗೆಯ ಮೇಲೆ ಮಲಗಿಸುತ್ತಾರೆ. ಈ ಸೂಲಗಿತ್ತಿಯ ಸಹಾಯಕ್ಕೆ ಮತ್ತಿಬ್ಬ ಮಹಿಳೆಯರು ಬಂದಿರುತ್ತಾರೆ. ಹೆರಿಗೆಯಾದ ಹನ್ನೊಂದು ದಿನದವರೆಗೆ ಮೈಲಿಗೆ ಇರುವುದರಿಂದ ಮನೆಯಲ್ಲಿ ಯಾವುದೇ ಶುಭ ಕಾರ್ಯಗಳನ್ನು ಮಾಡುವುದಿಲ್ಲ. ಹನ್ನೆರಡನೇಯ ದಿನ ಬಾಣಂತಿಯು 'ಬಾವಿ ಮುಟ್ಟುವ ಶಾಸ್ತ್ರ' ಮುಗಿದ ಮೇಲೆ ಇನ್ನುಳಿದ ಶುಭಕಾರ್ಯಗಳನ್ನು ಮಾಡಲಾಗುತ್ತದೆ. ಹನ್ನೆರಡನೇಯ ದಿನಬಾಣಂತಿಯು 'ಬಾವಿ ಮುಟ್ಟುವ ಶಾಸ್ತ್ರ' ಇರುವುದರಿಂದ ಮನೆಯನ್ನು ಗೋಮಯದಿಂದ ಸಾರಿಸಿ ಸ್ವಚ್ಛಗೊಳಿಸುತ್ತಾರೆ. ಬಾಣಂತಿಯ ಬಟ್ಟೆಯನ್ನು ಸ್ವಚ್ಛವಾಗಿ ತೊಳೆದು ಗುರುಗಳ ಮನೆಯಿಂದ ಪಂಚಗವ್ಯ ತಂದು ಸಿಂಪಡಿಸುತ್ತಾರೆ. ನಂತರ ಮೈಲಿಗೆ ಹೋಯಿತು ಎಂದು ತಿಳಿಯುತ್ತಾರೆ. ಬಾಳಂತಿಯು ಕಳ್ಳಿ ಗಿಡದ ಕೊನೆಗೆ ಅರಿಶಿಣ, ಕುಂಕುಮ ಹಚ್ಚಿ ದೀಪ ಬೆಳಗಿಸಿ ಪೂಜೆ ಮಾಡುತ್ತಾಳೆ. ನಂತರ ನಾಮಕರಣ ಶಾಸ್ತ್ರ ಮಾಡುತ್ತಾರೆ. ಕಳ್ಳಿಗಿಡದ ಪೂಜೆ ಆದ ಮೇಲೆ ಮಗುವನ್ನು ತೊಟ್ಟಿಲಿಗೆ ಹಾಕುತ್ತಾರೆ. ಸಾಮಾನ್ಯವಾಗಿ ದೇವರ ಅಥವಾ ಹಿರಿಯರ ಹೆಸರನ್ನು ಇಡುತ್ತಾರೆ. ಈ ಕೆಲಸವನ್ನು ಸೋದರತ್ತೆಯೇ ಮಾಡುತ್ತಾರೆ. ಸೋದರತ್ತೆ ಒಂದು ಹೆಸರನ್ನು ಮಗುವಿನ ಕಿವಿಯ ಬಳಿ ಹೇಳುತ್ತಾಳೆ. ಆ ಹೆಸರನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಂತರ ಸುಮಂಗಲೆಯರು ಮಗುವಿಗೆ ಹೊಸ ಬಟ್ಟೆ ನೀಡಿ ಆರತಿ ಮಾಡುತ್ತಾರೆ. ಆರತಿ ಬಟ್ಟಲಿಗೆ ಮಗುವಿನ ತಾಯಿ ತಂದೆ ತಮ್ಮ ಶಕ್ತ್ಯಾನುಸಾರ ದಕ್ಷಿಣೆ ಹಾಕುತ್ತಾರೆ. ನಂತರ ಸಿಹಿ ಊಟದ ವ್ಯವಸ್ಥೆ ಮಾಡುತ್ತಾರೆ.

ಸೋಳಂಗಿ

ಮಗು ಹೆಣ್ಣಿರಲಿ ಗಂಡಿರಲಿ ಐದಾರು ವರ್ಷದಲ್ಲಿ 'ಸೋಳಂಗಿ' (ಕಿವಿಚುಚ್ಚುವ) ಶಾಸ್ತ್ರ ಮಾಡುವ ಪರಿಪಾಠವಿದೆ. ಅಂದು ಮನೆಯವನ್ನು ಗೋಮಯದಿಂದ ಸಾರಿಸುತ್ತಾರೆ. ಮಗುವಿನ ಸೋದರಮಾವನ ತೊಡೆಯ ಮೇಲೆ ಕುಡ್ರಿಸಿಕೊಂಡಾಗ ಕೆಲಸಿಯು ಮಗುವಿನ ತಲೆ ಕುದಲನ್ನು ಕತ್ತರಿಸುತ್ತಾನೆ. ಕ್ಷೌರ ಮುಗಿದ ಮೇಲೆ ಸೋದರ ಮಾವ ಹೊಸ ಬಟ್ಟೆಯನ್ನು ಉಡಗರೆಯಾಗಿ ನೀಡುತ್ತಾನೆ. ಮಗುವನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಕಿವಿ ಚುಚ್ಚುತ್ತಾನೆ. ಗಂಡು ಮಗುವಾದರೆ ಮುರ, ಹೆಣ್ಣು ಮಗುವಾದರೆ ಲೋಲಾಕು ತೊಡಿಸುತ್ತಾನೆ. ಕ್ಷೌರಿಕನಿಗೆ ಅಕ್ಕಿ,

ಒಟ್ಟಿ, ಹಣವನ್ನು ಕಾಣಿಕೆಯಾಗಿ ಕೊಡುತ್ತಾರೆ. ನಂತರ ಬಂದವರಿಗೆ ಪಾಯಸದ ಊಟ ಹಾಕುತ್ತಾರೆ.

ಮದುವೆ

ಅಗೇರಲ್ಲಿ ಮದುವೆ ಕಾರ್ಯಕ್ರಮಗಳು ಅತಿ ಸರಳ ರೀತಿಯಿಂದ ನಡೆಯುತ್ತದೆ. ಹಿಂದಿನ ಕಾಲದಲ್ಲಿ ನಾಲ್ಕೈದು ದಿನ ನಡೆಯುತ್ತಿದ್ದ ಮದುವೆ ಇಂದು ಒಂದೇ ದಿನದಲ್ಲಿ ಮುಗಿಯುತ್ತದೆ. ಇವರ ಮದುವೆಗೆ ಬ್ರಾಹ್ಮಣರ ಪೌರೋಹಿತ್ಯ ಇರುವುದಿಲ್ಲ. ಸಮುದಾಯದ ಹಿರಿಯರು, ಬುದವಂತ, ಕೋಲಕಾರ ಸಮ್ಮುಖದಲ್ಲಿ ಮದುವೆ ನಡೆಯುತ್ತದೆ. ತಂದೆ-ತಾಯಿ, ಕುಟುಂಬದ ಸದಸ್ಯರು ಒಪ್ಪಿಗೆ ಕೊಟ್ಟರೆ ಮಾತ್ರ ಅಧಿಕೃತವಾಗಿ ಮದುವೆ ನಡೆಯುತ್ತದೆ. ಅಗೇರರು ಬಳಿಗಳ ಆಧಾರದ ಮೇಲೆಯೇ ಹೆಣ್ಣನ್ನು ನೋಡುತ್ತಾರೆ. ಸಗೋತ್ರದಲ್ಲಿ ಮದುವೆ ನಿಷಿದ್ಧ. ಅಕ್ಕನ ಮಗಳು, ಸೋದರಮಾವನ ಮಗಳನ್ನು ಹೆಚ್ಚಾಗಿ ಮದುವೆಯಾಗುತ್ತಾರೆ. ಮದುವೆಯಲ್ಲಿ ವಿಳ್ಯಶಾಸ್ತ್ರ, ಮೋಜು-ಮಸ್ತಿಗಳು ನಡೆಯುತ್ತದೆ. ಸರಳ ಮದುವೆಗೆ ಅವಕಾಶ ಮಾಡಿಕೊಡುತ್ತಾರೆ.

ಮದುವೆಯ ಮೊದಲ ದಿನದ ಕಾರ್ಯಕ್ರಮದಲ್ಲಿ ಒಳಕೋಣೆಯಲ್ಲಿ ಮಧುಮಕ್ಕಳು ಕುಳಿತುಕೊಳ್ಳುವ ನೆಲ ಮತ್ತು ಗೋಡೆಯ ಮೇಲೆ ಶೇಡಿಯಿಂದ ಚಿತ್ರ ಬರೆಯುತ್ತಾರೆ. ಇದಕ್ಕೆ ಹಲಿ ಹೊಯ್ಯುವುದು ಎನ್ನುತ್ತಾರೆ. ಗೋಡೆಯ ಮೇಲೆ ಸೂರ್ಯ, ಚಂದ್ರ, ಕಾಡು ಪ್ರಾಣಿಗಳ ಚಿತ್ರ ಬಿಡಿಸುತ್ತಾರೆ. ಬುದವಂತ ಮತ್ತು ಕೋಲಕಾರರ ಸಹಾಯದಿಂದ ಚಪ್ಪರ, ತೋರಣವನ್ನು ಹಾಕುತ್ತಾರೆ. ಜವಳಿ ತೆಗೆಯುವುದು, ಬಾಸಿಂಗ ತರುವುದು, ಹೂವು ಮುಡಿಸುವುದು, ಧಾರೆ ಎರೆಯುವುದು, ಸ್ನಾನ ಮಾಡುವುದು, ವರನಿಗೆ ಪನ್ನೆ ಮಾಡುವುದು, ದಿಬ್ಬಣ ಹೊರಡಿಸುವುದು, ವಾದ್ಯ ನುಡಿಸುವುದು, ತೆರಕೊಡುವುದು, ವರನನ್ನು ಸ್ವಾಗತಿಸುವುದು, ಗಂಧೇಳಿ, ಕಾಂಬುಕೆ ಹೋಗುವುದು, ಹೆಣ್ಣು ತುಂಬಿಸಿ ಕೊಳ್ಳುವುದು, ಹೊಂಕಳಿ ಆಡುವುದು, ಮುಂತಾದ ಸಂಪ್ರದಾಯಗಳನ್ನು ಚಾಚು ತಪ್ಪದೆ ಮಾಡುತ್ತಾರೆ. ಅಗೇರರ ಮದುವೆಯಲ್ಲಿ ಬಳಕೆಯಾಗುವ ಅತ್ತಿ ತೋರಣ, ಕಲಶ, ಕುಂಭಗಳೆಲ್ಲವೂ ಫಲವಂತಿಕೆಯ ಸಂಕೇತವೆಂದು ತಿಳಿಯುತ್ತಾರೆ. ತೋರಣ ತೆಗೆಯುವುದು, ನೆಂಟರೂಟ, ಬಯಕೆಯ ಊಟ ಬಡಿಸುವುದು ಇನ್ನೂ ಮುಂತಾದ ಆಚರಣೆಗಳನ್ನು ಇಂದಿಗೂ ಅಗೇರರ ಸಮುದಾಯಗಳಲ್ಲಿ ಕಾಣಬಹುದಾಗಿದೆ.

ತುಳಸಿ ಮದುವೆ

ಅಗೇರರು ಮನೆಯ ಮುಂದಿನ ಅಂಗಳದಲ್ಲಿ ಒಂದು ತುಳಸಿ ಕಟ್ಟೆಯನ್ನು ಕಟ್ಟಿ ಅದಕ್ಕೆ ದಿನಾಲು ನೀರು ಹಾಕಿ ಪೂಜಿಸುತ್ತಾರೆ. ತುಳಸಿ ಮದುವೆ ಇವರಿಗೆ ಒಂದು ವಿಶೇಷವಾದ ಹಬ್ಬ. ಅದನ್ನು ಕಾರ್ತಿಕಮಾಸದ ಶುದ್ಧ ದ್ವಾದಶಿಯ ದಿನ ಆಚರಿಸುತ್ತಾರೆ. ಹಿಂದಿನ ದಿನ ಅಂದರೆ ಏಕಾದಶಿಯ ದಿನ ಹಿರಿಯರು ಸ್ನಾನ ಮಾಡಿ ಪೂಜೆ ಸಲ್ಲಿಸಿ ಹಣ್ಣು ಹಂಪಲು

ತಿಂದು ಉಪವಾಸ ಆಚರಿಸುತ್ತಾರೆ. ಹಬ್ಬದ ಮುನ್ನಾ ದಿನ ತುಳಸಿಕಟ್ಟೆಯನ್ನು ಸಾರಿಸಿ, ರಂಗೋಲಿ ಹಾಕಿ, ಕಬ್ಬುಗಳನ್ನು ನಿಲ್ಲಿಸಿ, ಮಾವಿನ ತೋರಣ ಕಟ್ಟಿ ಸಿಂಗರಿಸುತ್ತಾರೆ. ತುಳಸಿಗೆ ನೆಲ್ಲಕಾಯಿ, ಹುಣಸೆ ಮುಂತಾದ ಫಲಗಳನ್ನು ಏರಿಸುತ್ತಾರೆ. ಗೊಂಡೆ ಹೂವು, ಬೊಟ್ಟಿನ ಹೂವು, ದಾಸವಾಳ ಹೂವು, ಕೆಬೇವು ಹೂವು, ಚೆಂಡು ಹೂವು ಇತ್ಯಾದಿ ಹೂವುಗಳಿಂದ ಸಿಂಗರಿಸುತ್ತಾರೆ. ತುಳಸಿಯ ಅಲಂಕಾರ ಮುಗಿದು ಪೂಜೆ ಮಾಡುವಾಗ ತುಳಸಿಕಟ್ಟೆಯ ಸುತ್ತಲೂ ಹಣತೆಗಳನ್ನು ಹಚ್ಚುತ್ತಾರೆ. ಪೂಜೆ ಮುಗಿದ ನಂತರ ಕಬ್ಬಿನ ತುಂಡು, ಮಂಡಕ್ಕಿ, ಬೆಂಡು, ಬತ್ತಾಸವನ್ನು ಪನಿವಾರವಾಗಿ ಹಂಚುತ್ತಾರೆ. ನಂತರ ಸಮುದಾಯದ ಇತರ ಮನೆಗಳಿಗೆ ತೆರಳಿ ಅಂಗಳದಲ್ಲಿ ನಿಂತು ಹಲಗೆ ಅಥವಾ ಪಂಚವಾದ್ಯ ಬಾರಿಸಿ ಅವರಿಂದ ಕಾಣಿಕೆ ರೂಪವಾಗಿ ಭತ್ತ-ಕಾಳು-ಕಡಿಯನ್ನು ತರುತ್ತಾರೆ.

"ಅಂಕೋಲೆಯ ಕಾರ್ತಿಕೋತ್ಸವದಲ್ಲಿ ದೇವರ ಮೆರವಣಿಗೆಯಲ್ಲಿ ಹಲಗೆ ಪಂಚವಾದ್ಯ ಬಾರಿಸಿ ಸೇವೆ ಮಾಡಿದ ಅಗೇರರು ಆಮೇಲೆ ಪೇಟೆಯ ಬೀದಿಯಲ್ಲಿ ಬೇಡುವುದು ಇದೆ. ಉತ್ಸವ ದಿನ ಸೇವೆ ಮಾಡಿದ ಅಗೇರರಿಗೆ ಮಠದಿಂದ ಯಾವುದೇ ಸಂಭಾವನೆ ಸಿಗುವುದಿಲ್ಲ. ಅಂದಿನ ಕೂಲಿ ತಪ್ಪಿದ್ದರಿಂದ ಊಟಕ್ಕಾಗಿ ಪೇಟೆಯ ಬೀಡಿಗಳಲ್ಲಿ ಪಂಚವಾದ್ಯ ಬಾರಿಸಿ ಬೇಡಿ ಸಂಪಾದಿಸುತ್ತಾರೆ. ಇದು ಹಿಂದಿನಿಂದ ಬಂದ ಸಂಪ್ರದಾಯ. ಅದನ್ನೆ ಮುಂದೇ ಪರಂಪರೆಯೆಂದು ರೂಢಿ ಮಾಡಿಕೊಂಡಿರಬೇಕು."[೭೬]

ಅಗೇರರಲ್ಲಿ ಕಂಬಳ ಆಚರಿಸುವ ಸಂಪ್ರದಾಯವಿದೆ. ಎಲ್ಲರೂ ಒಂದೆಡೆ ಸೇರಿ (ಕೂಡಿ ಉಂಬೋಣ) ಎಂಬುದೆ ಕಂಬಳವಾಗಿರಬೇಕು. ಹಕ್ಕಿ ಕಂಬಳ, ಮೀನು ಕಂಬಳ, ಮನೆ ಕಂಬಳ, ಗೊಣ್ಣೆಗೆಂಡೆ ಕಂಬಳ, ಎಂದು ಆಚರಿಸುತ್ತಾರೆ. ಇಲ್ಲಿ ಹಕ್ಕಿ ಕಂಬಳ ಎಂದರೆ 'ಹುಂಡು ಕೋಳಿ'ಯನ್ನು ಬೇಟೆಯಾಡಿ ಬೇಯಿಸಿ ತಿನ್ನುವ ಕಂಬಳ.

ಹಕ್ಕಿ ಕಂಬಳ

"ಅಗೇರರು ಗದ್ದೆ ಕೊಯ್ಲು ಮುಗಿದು ಬಿಡುವಾಗಿದ್ದ ಸಮಯದಲ್ಲಿ ಒಂದು ದಿನವನ್ನು ಹಕ್ಕಿ ಕಂಬಳಕ್ಕೆ ನಿಗದಿಪಡಿಸುತ್ತಾರೆ. ಕಂಬಳಕ್ಕೆ ಸೇರಿದ ಎಲ್ಲರೂ ಒಂದೊಂದು ಬಡಿಗೆಯನ್ನು ಹಿಡಿದು ಹಕ್ಕಿ ಬೇಟೆಗೆ ತಯಾರಾಗಿರುತ್ತಾರೆ. ಕೆರೆದಂಡೆ, ಹಳ್ಳದ ದಂಡೆಯ ಮೇಲೆ ಬಡಿದು ಕಾಕು ಎಬ್ಬಿಸಿದಾಗ ಹಿಂಡುಗಳಲ್ಲಿ ಅವಿತುಕೊಂಡಿರುವ ಹಕ್ಕಿಗಳು ಜೀವ ಭಯದಿಂದ ಹೊರಗೆ ಓಡಿ ಬರುತ್ತವೆ. ನಂತರ ಸುತ್ತಲೂ ಇರುವವರು ಹಕ್ಕಿಯನ್ನು ಅಟ್ಟಿಸಿಕೊಂಡು ಹೋಗಿ ಕೊಲ್ಲುತ್ತಾರೆ. ಸಂಜೆಯವರೆಗೆ ನಡೆದ ಹಕ್ಕಿ ಕಂಬಳದಲ್ಲಿ ಆರೆಂಟು ಹಕ್ಕಿಗಳು ಸಿಗುತ್ತವೆ. ಪ್ರತಿ ವ್ಯಕ್ತಿಯಿಂದ ಇಂತಿಷ್ಟು ಅಕ್ಕಿ, ಕಾಯಿ, ಹಣ ಸೇರಿಸಿಕೊಂಡು ಹುಂಡುಕೋಳಿ ಹಕ್ಕಿಯ ಸಾರು ಮಾಡಿ, ಅಕ್ಕಿಯ ದೋಸೆಯೊಂದಿಗೆ ಊಟ ಮಾಡುತ್ತಾರೆ. ಇದನ್ನೇ ಹಕ್ಕಿ ಕಂಬಳ ಎನ್ನುತ್ತಾರೆ."[೭೮]

ಮೀನು ಕಂಬಳ

ಸಮುದ್ರದ ದಂಡೆಯಲ್ಲಿ, ಹಳ್ಳಗಳಲ್ಲಿ ಮೀನು ಮತ್ತು ಏಡಿಗಳನ್ನು ಸಾಮೂಹಿಕವಾಗಿ ಹಿಡಿಯುತ್ತಾರೆ. ಸಂಜೆ ಸಮುದ್ರದ ದಡದಲ್ಲಿ ಅಥವಾ ಹಳ್ಳದ ದಂಡೆಯಲ್ಲಿ ಮೀನು, ಏಡಿ ಬೇಟೆ ಸುಲಭ. ಸಂಜೆ ಅಗೇರರು ಗುಂಪು ಸೇರಿ ತೆಂಗಿನ ಗರಿಯಿಂದ ಸಿದ್ಧಪಡಿಸಿದ ಸೂಡಿಗೆ ಬೆಂಕಿ ಹಚ್ಚಿಕೊಂಡು ಕೈಯಲ್ಲಿ ಉದ್ದದ ಕೋಲು/ಕತ್ತಿ ಹಿಡಿದು ಹಳ್ಳದ ದಡದಲ್ಲಿ ಬರುತ್ತಾರೆ. ಆಗ ಸೂಡಿಯ ಬೆಳಕಿನಲ್ಲಿ ಜಲಚರಗಳು ಓಡಾಡುವುದು ಗೋಚರಿಸುತ್ತದೆ. ತಕ್ಷಣ ಆಯುಧಗಳಿಂದ ಅವುಗಳನ್ನು ಸಾಯಿಸಿ ಸಂಗ್ರಹಿಸುತ್ತಾರೆ. ನಂತರ ತಂಡದ ಸದಸ್ಯರು ಮೀನು, ಏಡಿಯನ್ನು ಸ್ವಚ್ಛವಾಗಿ ತೊಳೆದು ಅದರ ಸಾರು ಮಾಡಿ, ಅಕ್ಕಿರೊಟ್ಟಿ ಅಥವಾ ಅನ್ನದ ಜೊತೆ ಸಾಮೂಹಿಕವಾಗಿ ಊಟ ಮಾಡುತ್ತಾರೆ. ಈ ಬೇಟೆಯನ್ನು ಗಂಡಸರು ಮಾಡುತ್ತಾರೆ.

ಮನೆ ಕಂಬಳ

ಅಗೇರರು ಹೆಚ್ಚಾಗಿ ಹುಲ್ಲಿನ ಗುಡಿಸಲಿನಲ್ಲಿ ವಾಸಿಸುತ್ತಾರೆ. ವರ್ಷವಿಡಿ ದುಡಿಯುವದರಿಂದ ಅವರಿಗೆ ತಮ್ಮ ಮನೆ ಸರಿಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಇಂಥ ಸಂದರ್ಭದಲ್ಲಿ ನೆರೆಹೊರೆಯವರೆಲ್ಲರೂ ಸೇರಿ ಒಂದು ದಿನ ಒಬ್ಬರ ಮನೆಯನ್ನು ಹೊದಿಸುತ್ತಾರೆ. ಇಲ್ಲಿ ಯಾರಿಗೂ ಸಂಬಳ ನೀಡುವುದಿಲ್ಲ. ಬದಲಿಗೆ ಇನ್ನೊಂದು ದಿನ ಅವರ ಮನೆಗೆ ಸಹಾಯಕ್ಕೆ ಹೋಗುತ್ತಾರೆ. ಇದಕ್ಕೆ ಮುರಿಯಾಳು ಎಂದು ಹೇಳುತ್ತಾರೆ. ಕೆಲವು ಬುಡಕಟ್ಟುಗಳಲ್ಲಿ ಪರಸ್ಪರ ಸಹಾಯ ಮಾಡುವ ಈ ವಿಧಾನವನ್ನು ಮುರಿಯಾಳು ಅಥವಾ ಮುಯ್ಯಾಳು ಎಂದು ಹೇಳುತ್ತಾರೆ.

"ಸಾಮಾನ್ಯವಾಗಿ ಮಳೆಗಾಲ ಆರಂಭಗೊಳ್ಳುವ ಸಂದರ್ಭದಲ್ಲಿ ಎಲ್ಲರೂ ತಮ್ಮ ತಮ್ಮ ಹುಲ್ಲಿನ ಗುಡಿಸಲುಗಳನ್ನು ಹೊದಿಸಿ ರಿಪೇರಿ ಮಾಡಿಕೊಳ್ಳುತ್ತಾರೆ. ಆಗ ಒಬ್ಬರಿಗೊಬ್ಬರು ಸಂಬಳ ಪಡೆಯದೆ ಬಂದು ದಿನವಿಡಿ ದುಡಿದು ಸಹಕರಿಸುತ್ತಾರೆ. ಈ ಋಣಕ್ಕಾಗಿ ಮನೆಯ ಯಜಮಾನನು ಅಂದು ರಾತ್ರಿ ಎಲ್ಲರಿಗೂ ಪಾಯಸದ ಊಟ ಬಡಿಸುತ್ತಾನೆ."[೯]

ಹಬ್ಬ-ಹರಿದಿನಗಳು

ಹಿಂದು ಧರ್ಮದ ಎಲ್ಲ ಹಬ್ಬ ಹರಿದಿನಗಳನ್ನು ಅಗೇರರು ಆಚರಿಸುತ್ತಾರೆ. ನೂಲ ಹುಣ್ಣಿಮೆ, ಗಣೇಶ ಚೌತಿ, ನಾಗರಪಂಚಮಿ, ದೀಪಾವಳಿ, ಸುಗ್ಗಿಹಬ್ಬ, ಸಂಕ್ರಾಂತಿ, ಹೋಳಿ, ಯುಗಾದಿ ಇತ್ಯಾದಿ. ಅಗೇರರು ನೂಲ ಹುಣ್ಣಿಮೆಗೆ 'ನುಗ್ಲ ಹೊಣಮಿ ಅಥವಾ ನುಗ್ಲ ಹಬ್ಬ' ಎಂದು ಕರೆಯುತ್ತಾರೆ. ಈ ಹಬ್ಬಕ್ಕೆ ಹೊಸ ನೂಲನ್ನು ಹಾಕಿಕೊಳ್ಳುತ್ತಾರೆ. ಈ ನೂಲನ್ನು ಬ್ರಾಹ್ಮಣರ ಮನೆಯಿಂದ ತರುತ್ತಾರೆ. ಸ್ನಾನ ಮಾಡಿ, ತುಳಸಿ ಪೂಜೆ ನೆರವೇರಿಸಿ, ತುಳಸಮ್ಮಗೆ ನೂಲು ಹಾಕಿ ಬ್ರಾಹ್ಮಣರಿಂದ ಪಡೆದ ನೂಲನ್ನು ತಾವು ಕೊರಳಿಗೆ ಹಾಕಿಕೊಳ್ಳುತ್ತಾರೆ.

ಗಣೇಶ ಹಬ್ಬ

ಆಧುನಿಕತೆಯ ಪ್ರಭಾವದಿಂದಾಗಿ ಅಗೇರರು ವಾಸಿಸುವ ಊರಿನಲ್ಲಿ ಸಾರ್ವಜನಿಕ ಗಣೇಶ ಮೂರ್ತಿಯನ್ನು ಇಟ್ಟು ಪೂಜಿಸುವ ಸಂಪ್ರದಾಯವನ್ನು ಬೆಳೆಸುತ್ತಿದ್ದಾರೆ. ಮೂರು ಅಥವಾ ಐದು ದಿನ ಗಣೇಶ ಮೂರ್ತಿಯನ್ನು ಇಟ್ಟು ಪುರೋಹಿತನ್ನು ಕರೆಸಿ ಸಾರ್ವಜನಿಕವಾಗಿ ಪೂಜೆ ಮಾಡಿಸುತ್ತಾರೆ. ಹೂ-ಹಣ್ಣು, ಕಾಯಿ, ಪಂಚಕಜ್ಜಾಯ, ಮೋದಕ ಇಡುವ ಸಂಪ್ರದಾಯವಿದೆ. ಈ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಅಥವಾ ಯಕ್ಷಗಾನ, ಬಯಲಾಟಗಳನ್ನು ಆಡಲಾಗುತ್ತದೆ.

ನಾಗರ ಪಂಚಮಿ

ಅಂಕೋಲಾದ ವೆಂಕಟರಮಣನ ಸನ್ನಿಧಿಯಲ್ಲಿರುವ ನಾಗರಕಟ್ಟೆ ಅಗೇರರು ನಿರ್ಮಿಸಿದ್ದುದಾಗಿದೆ. ಇದನ್ನು ನೋಡಿದರೆ ಅಗೇರರು ನಾಗಾರಾಧನೆ ಮಾಡುತ್ತಿದ್ದರೆಂಬುದು ತಿಳಿದುಬರುತ್ತದೆ. ನಾಗರಪಂಚಮಿ ನಾಡಿಗೆ ದೊಡ್ಡ ಹಬ್ಬ. ಹಾಗೆಯೇ ಅಗೇರರಿಗೂ ದೊಡ್ಡ ಹಬ್ಬ. ಹತ್ತಿರದ ನಾಗರ ಕಟ್ಟೆಗೆ ತೆರಳಿ ಹಾಲೆರೆದು ಹಣ್ಣು ಕಾಯಿ ಇಟ್ಟು ಪೂಜಿಸುತ್ತಾರೆ. ಯುವತಿಯರು ಹುತ್ತಗಳಿಗೆ ಹಾಲೆರೆಯುವುದು ಇಲ್ಲಿ ವಿಶೇಷ. ಕರಿಕಡಬು, ಎಳ್ಳು, ವಿವಿಧ ಬಗೆಯ ಉಂಡೆ, ಚಕ್ಕುಲಿ ಮುಂತಾದ ತಿಂಡಿ ತಿನಿಸುಗಳನ್ನು ಮಾಡಿ ಕುಟುಂಬದ ಸದಸ್ಯರೊಡನೆ ಊಟ ಮಾಡುತ್ತಾರೆ.

ಗದ್ದೆಗಂಡಿನ ಹಬ್ಬ(ಬೆಚ್ಚಿನ ಸಂಕ್ರಾಂತಿ)

"ಮಳೆಯ ಆರಂಭದ ದಿನ, ಬೆಚ್ಚಿನ ಸಂಕ್ರಾಂತಿ ಹಬ್ಬದ ಆಚರಣೆ ಇದೆ. ಭತ್ತದ ಸಸಿಯ ಶೈಶವಾವಸ್ಥೆ ಮುಗಿದು ತಾಯ್ತನಕ್ಕೆ ಸಿದ್ದಗೊಳ್ಳುವ ಸಂಕ್ರಮಣ ಅವಸ್ಥೆಯೆಂಬ ಅರ್ಥದಲ್ಲಿ ಇದು ಸಂಕ್ರಮಣ ಎಂದಾಗಿರಬೇಕು. ಗದ್ದೆಯ ಗಂಡ ಎಂಬ ಸೂಚನೆಯಲ್ಲಿ ಬಿದಿರು ಇಲ್ಲವೇ ಮುಂಡಕಿ ಕೋಲೊಂದುನ್ನು ಗದ್ದೆಯ ಮೂಲೆಯನ್ನು ನೆಟ್ಟು ಅದನ್ನೆ ಬೆಚ್ಚು ಎಂದು ಪೂಜೆ ಮಾಡುತ್ತಾರೆ. ಅಗೇರರು ಕದಿರನ್ನು ತೋರಣವಾಗಿ ಮನೆಬಾಗಿಲಿಗೆ ಕಟ್ಟುತ್ತಾರೆ. ತಾವು ಬಳಸುವ ಅಡಿಗೆಯ ಮಡಿಕೆಗಳು, ಕೃಷಿ ಉಪಕರಣ, ಕುಳಿತು ಊಟ ಮಾಡುವ ಮಣೆ ಇತ್ಯಾದಿ. ಎಲ್ಲಕ್ಕೂ ಕದಿರು ಕಟ್ಟುತ್ತಾರೆ. ಅಂದಿನ ದಿನವೂ ಕಾಯಿಪಾಯಸದ ಊಟ. ಕೆಲವರು ಹೊಸ ಭತ್ತವನ್ನೇ ಹುರಿದು ಕುಟ್ಟಿ ಅಕ್ಕಿ ಮಾಡಿ ಪಾಯಸ ಮಾಡುವರು. ಇಲ್ಲವೇ ಹಳೆಯ ಅಕ್ಕಿಯ ಪಾಯಸವಾದರೆ ನಾಲ್ಕು ಹೊಸ ಭತ್ತದ ಕಾಳನ್ನು ಸುಲಿದು ಸೇರಿಸಿ ಪಾಯಸ ಮಾಡುತ್ತಾರೆ. ಜಿಲ್ಲೆಯ ಎಲ್ಲಾ ಸಮುದಾಯದವರು ಸಹ ಈ ಹಬ್ಬವನ್ನು ಹೊಸ ಉತ್ಸಾಹದಿಂದ ಆಚರಿಸುತ್ತಾರೆ."

ದೀಪಾವಳಿ ಹಬ್ಬ

ದೀಪಾವಳಿ ಹಬ್ಬವನ್ನು ಅಗೇರರು ದೇಪಳ ಎಂದು ಕರೆಯುತ್ತಾರೆ. ಈ ಹಬ್ಬದಂದು ಮನೆಯನ್ನು ಗೋಮಯದಿಂದ ಸಾರಿಸಿ ರಂಗವಲ್ಲಿಯನ್ನು ಹಾಕುತ್ತಾರೆ. ದೀಪಾವಳಿಯ ಮೊದಲದಿನ

ಮಣ್ಣಿನ ಅಡಕಲಕ್ಕೆ ತೊಳೆದು ಹಲಿಹೊಯ್ದು ಸಿಂಗರಿಸುತ್ತಾರೆ. ಆಮೇಲೆ ಅಡಕಲದ ಕೊರಳಿಗೆ ಹಿಂಡಲಕಾಯಿಯ ಬಳ್ಳಿ ಸುತ್ತಿ ಹೂ ಮಾಲೆ ಹಾಕಿ ಶೃಂಗರಿಸುತ್ತಾರೆ. ಅಡಕಲದಲ್ಲಿ ಬೇವಿನ ಎಲೆ, ನೇರಳೆ ಚುಕ್ಕೆ ನೀರು ತುಂಬಿಸುತ್ತಾರೆ. ಚತುರ್ದಶಿಯ ದಿನದಂದು ಬೆಳಗ್ಗೆ ಮುಂಚೆ ನೀರನ್ನು ಕಾಯಿಸುತ್ತಾರೆ. ಸ್ನಾನಕ್ಕೆ ಮೊದಲು ಮೈಗೆ ಎಣ್ಣೆ ಹಚ್ಚಿಕೊಳ್ಳುತ್ತಾರೆ. ಆಮೇಲೆ ತುಳಸಿಯ ಮುಂದೆ ಹಿಂಡಲಕಾಯಿ ಇಟ್ಟು ಅದನ್ನು ಬಲಗಾಲಿನಿಂದ ಮೆಟ್ಟಿ ಅದರ ಬೀಜವನ್ನು ಹಣೆಗೆ ಹಚ್ಚಿ ಕೊಳ್ಳುತ್ತಾರೆ. ಬಲೀಂದ್ರ ಮೆಟ್ಟಿದ ಎಂಬ ಸಂಕೇತ ಪೂರ್ವಕ ಆಚರಣೆಯನ್ನು ಮಾಡುತ್ತಾರೆ. ಕಹಿ ಬೇವು, ಅಜವಾನ, ಜೀರಿಗೆ ಅರೆದು ಮಾಡಿದ ಪುಡಿಯನ್ನು ನೀರಿಗೆ ಬೆರೆಸಿ ಸೇವಿಸುತ್ತಾರೆ. ಆ ದಿನ ಕಡಬನ್ನು ಮಾಡಿ ಊಟ ಮಾಡುತ್ತಾರೆ.

ಅಗೇರರು ಮೂಲತ ಗೋಪಾಲಕರಾಗಿದ್ದರೆಂದು ವಕ್ತೃಗಳು ಹೇಳುತ್ತಾರೆ. ಬಲಿ ಪಾಡ್ಯದಂದು ಗೋವುಗಳ ಮೈ ತೊಳೆಸಿ, ಮೈಮೇಲೆ ವಿವಿಧ ಬಣ್ಣಗಳನ್ನು ಹಚ್ಚಿ, ಹೂವು, ಸಿಂಗಾರ, ಅಡಿಕೆ ಮಾಲೆಗಳಿಂದ ಸಿಂಗರಿಸುತ್ತಾರೆ. ಇತ್ತೀಚೆಗೆ ಅಗೇರರು ಖರ್ಚು ಹೆಚ್ಚಾಗಿರುವುದರಿಂದ ದನಕರುಗಳನ್ನು ಸಾಕುವುದು ಕಡಿಮೆಯಾಗಿದೆ. ಮಾರನೆಯ ದಿನ ಅಗೇರರು ಗೋಪಾಳ ಬುಟ್ಟಿ ಹಿಡಿದು ಶ್ರೀಮಂತರ ಮನೆಗೆ ಹೋಗಿ ತಿಂಡಿ ತಿನಿಸುಗಳನ್ನು ಬೇಡಿ ತಂದು ಕುಟುಂಬದ ಸದಸ್ಯರೊಡನೆ ತಿನ್ನುತ್ತಾರೆ.

ಅಗೇರರು ಸುಗ್ಗಿ ಹಬ್ಬ, ಸಂಕ್ರಾಂತಿ, ಯುಗಾದಿ ಹಬ್ಬಗಳನ್ನೂ ಆಚರಿಸುತ್ತಾರೆ. ಸುತ್ತ ಮುತ್ತಲಿನ ಜಾತ್ರೆಗೆ ತಪ್ಪದೇ ಹೋಗುತ್ತಾರೆ. ಗ್ರಾಮದೇವರ ಬಂಡಿಹಬ್ಬ, ಹನೇಹಳ್ಳಿಯ ತೇರು, ಗಂಗಾವಳಿಯ ಗಂಗಾಲಗ್ನ, ಅಂಕೋಲೆಯ ವೆಂಕಟರಮಣ, ಹನುಮಂತ, ಮಹಾದೇವ, ಗಣಪತಿ, ನಾರಾಯಣ ಮೊದಲಾದ ದೇವರ ಆರಾಧನೆ ಮಾಡುತ್ತಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಬಂಡಿಹಬ್ಬವನ್ನು ಎಲ್ಲ ಸಮುದಾಯದವರೂ ಆಚರಿಸುತ್ತಾರೆ. ಇಷ್ಟ ದೇವರುಗಳಿಗೆ ರಥವಿದ್ದರೆ ಗ್ರಾಮದೇವತೆಗಳು ಬಂಡಿಯನ್ನೇರಿ ಬರುತ್ತವೆ. ಬಂಡಿಯನ್ನೇರಿ ಬರುವ ದೇವರ ಉತ್ಸವಗಳೇ ಬಂಡಿಹಬ್ಬವೆಂದು ಪ್ರಸಿದ್ಧಿಯಾಗಿವೆ. ಅಗೇರರು ಬೊಮ್ಮಯ್ಯ, ಗೋಳಿಬೀರ, ಕಂತ್ರಿ ಮೊದಲಾದ ದೇವರುಗಳನ್ನು ಆರಾಧಿಸುತ್ತಾರೆ. ಬಂಡಿಹಬ್ಬದಲ್ಲಿ ನೆಂಟರಿಷ್ಟರನ್ನು ಕರೆದು ಕುರಿಕೋಳಿಗಳನ್ನು ಬಲಿಕೊಟ್ಟು ಎಲ್ಲರಿಗೂ ಮಾಂಸದೂಟವನ್ನು ನೀಡಿ ಆನಂದಪಡುತ್ತಾರೆ.

ಧಾರ್ಮಿಕ ಆಚರಣೆ

ಸಾವಿನ ಆಚರಣೆ

ಸಾವಿನ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಯ ನಾಮಧಾರಿ, ಹಾಲಕ್ಕಿ, ನಾಡವರ ಮುಂತಾದ ಸಮುದಾಯದವರು ಆಚರಿಸುವ ಕೆಲವು ನಂಬಿಕೆ ಆಚರಣೆಗಳು ಅಗೇರ ಸಮುದಾಯದವರ ಮೇಲೆ ಆಗಿರುವ ಸಾಧ್ಯತೆಗಳಿವೆ. ಉಳಿದಂತೆ ಹೆಣವನ್ನು ಗೂಟಕ್ಕೆ ಬಡಿಯುವುದು, ಸಂಬಂಧಿಕರಿಗೆ ಹೇಳಿ ಕಳಿಸುವುದು, ಸ್ಮಶಾನದಿಂದ ಬರುವಾಗ ಕೆರೆ ಅಥವಾ ಹಳ್ಳಕ್ಕೆ ಬಂದು ಸ್ನಾನ ಮಾಡುವುದು, ಸ್ನಾನದ ಬಳಿಕ ಸ್ಮಶಾನಕ್ಕೆ ಹೋದವರೆಲ್ಲರೂ ಸತ್ತವನ

ಮನೆಗೆ ಬಂದು ಅವನ ಹೆಸರಿನಲ್ಲಿ ತಿಳಿ ಬಿಡುತ್ತಾರೆ. ಅಂದು ರಾತ್ರಿ ಹೆಣವನ್ನು ಮಲಗಿಸಿದ ಜಾಗದಲ್ಲಿ ಬೂದಿಚೆಲ್ಲಿ ಎಣ್ಣೆ ದೀಪ ಹಚ್ಚುವುದು, ಒಂದು ತಂಬಿಗೆಯಲ್ಲಿ ನೀರು ತುಂಬಿಡುವುದು, ಮೃತನ ಆತ್ಮ ಅಂದು ಮನೆಗೆ ಬರುವುದು ಎಂಬ ನಂಬಿಕೆಯಲ್ಲಿ ಈ ಆಚರಣೆಯನ್ನು ಮಾಡುತ್ತಾರೆ. ಮಾರನೇಯ ದಿನ ಸತ್ತವನ ಬಂಧುಬಳಗದವರು ಸ್ಮಶಾನಕ್ಕೆ ಹೋಗಿ ಕೊಳ್ಳಿ ಕೊಡುವುದು, ಮೂರನೆ ದಿನ ಬೂದಿ ಒಟ್ಟು ಹಾಕುವುದು, ಬೂದಿಯನ್ನು ನದಿಗೆ ಹಾಕುವುದು ಮುಂತಾದವುಗಳನ್ನು ಆಚರಿಸುತ್ತಾರೆ. ಹನ್ನೊಂದನೆಯ ದಿನ ಸೂತಕದ ಬಟ್ಟೆಯನ್ನು ತೊಳೆಯುತ್ತಾರೆ. ಹನ್ನೆರಡನೆಯ ದಿನ ಶ್ರಾದ್ಧ ಮಾಡುತ್ತಾರೆ. ಇಲ್ಲೂ ಬ್ರಾಹ್ಮಣರ/ಪುರೋಹಿತರರ ಆಗಮನ ಇರುವುದಿಲ್ಲ. ಕೋಲಕಾರ, ಬುದವಂತ ಮತ್ತು ಊರಿನ ಪ್ರಮುಖರು ಸೇರಿ ವಿಧಿ-ವಿಧಾನವನ್ನು ಸಾಂಗವಾಗಿ ನಡೆಸಿಕೊಡುತ್ತಾರೆ.

ಕುಲದೇವರು

ಅಗೇರರಿಗೆ ಅಂಕೋಲೆಯ ವೆಂಕಟರಮಣ ಮತ್ತು ವೆಂಕೋಬಾನನ್ನು ತಮ್ಮ ಕುಲದೈವವೆಂದು ಪೂಜ್ಯ ಭಾವನೆಯಿಂದ ನಡೆದುಕೊಳ್ಳುತ್ತಾರೆ. ಪ್ರತಿ ವರ್ಷ ಕಾರ್ತೀಕ ಮಾಸದಲ್ಲಿ ಅಂಕೋಲಾದಲ್ಲಿ ಜರಗುವ ದೀಪೋತ್ಸವ ಮತ್ತು ವೆಂಕಟರಮಣ ದೇವರ ರಥೋತ್ಸವ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಯಾದ್ಯಂತ ವಾಸಿಸುತ್ತಿರುವ ಎಲ್ಲ ಅಗೇರರು ಪಾಲ್ಗೊಂಡು ಪ್ರತಿ ಕುಟುಂಬದವರು ಒಂದು ತೆಂಗಿನಕಾಯಿ ಹಾಗೂ ಭಕ್ತಿಗನುಸಾರವಾಗಿ ಹಣವನ್ನು ಕಾಣಿಕೆಯಾಗಿ ಗುರುಮಠದ ಮೂಲಕ ದೇವಸ್ಥಾನಕ್ಕೆ ಅರ್ಪಿಸುತ್ತಾರೆ.

ಗುರುಮಠ ಮತ್ತು ಗುರು ಪರಂಪರೆ

ಉತ್ತರ ಕನ್ನಡ ಜಿಲ್ಲೆಯ ಅಗೇರರು ಅಂಕೋಲಾದ ವೆಂಕಟರಮಣನನ್ನು ತಮ್ಮ ಕುಲದೇವರು ಎಂದು ನಂಬಿದ ಹಾಗೆ, ಅಂಕೋಲಾದ ಗುರುಮಠದ ಐಗೋಳ್‌ರವರನ್ನು ಗುರುಗಳು ಎಂದು ನಂಬುತ್ತಾರೆ. ಅಂಕೋಲಾದಲ್ಲಿ ವಾಸಿಸುವ ಐಗೋಳ್ ಮನೆಯೇ ಗುರುಮಠವಾಗಿದೆ. ಗುರುಮಠದ ಗುರುಗಳು ಮಾರ್ಗದರ್ಶನ ನೀಡಿದ ಹಾಗೆ ಅಗೇರರು ನಡೆದುಕೊಳ್ಳುತ್ತಾರೆ. ಗುರುಗಳೇ ಅಗೇರರ ಧಾರ್ಮಿಕ ಕಾರ್ಯವನ್ನು ನೇರವೇರಿಸುತ್ತಾರೆ. ಧರ್ಮದ ಕಟ್ಟಳೆಯನ್ನು ಮೀರಿದರೆ ಶಿಕ್ಷೆ ವಿಧಿಸುವ ಹಕ್ಕು ಐಗೋಳ್ ಮನೆತನದ ಗುರುಗಳಿಗೆ ಇದೆ.

ರಾಜಕೀಯ, ಆರ್ಥಿಕ ಮತ್ತು ಶೈಕ್ಷಣಿಕ ವ್ಯವಸ್ಥೆ

ಉತ್ತರ ಕನ್ನಡ ಜಿಲ್ಲೆಯಲ್ಲಿ ವಾಸಿಸುತ್ತಿರುವ ಅಗೇರರು ರಾಜಕೀಯವಾಗಿ ಹೆಚ್ಚಿನ ಸ್ಥಾನ ಮಾನ ಹೊಂದಿರುವುದಿಲ್ಲ. ಈಗ ಗ್ರಾಮ ಪಂಚಾಯತ, ತಾಲೂಕು ಪಂಚಾಯತಗಳಲ್ಲಿ ಪ್ರವೇಶ ಪಡೆಯುತ್ತಾರೆ. ಅಂದರೆ ರಾಜಕೀಯ ಬಲಿಷ್ಠರು ಎಂದಲ್ಲ. ಸ್ಥಳೀಯ ಮಟ್ಟದ ಚುನಾವಣೆಯಲ್ಲಿ ಮಾತ್ರ ಸ್ಪರ್ಧಿಸುತ್ತಾರೆ. ಅವರ ಮೀಸಲಾತಿ ಕ್ಷೇತ್ರದಲ್ಲಿ ಅವರದೇ ಜನರಿರುವುದರಿಂದ ಆರಿಸಿ ಬರುತ್ತಾರೆ. ಇದರಿಂದ ಆಚೆ ಇವರು ಸ್ಪರ್ಧಿಸುವ ಗೋಜಿಗೆ ಹೋಗುವುದಿಲ್ಲ. ಅಗೇರರು ಪರಿಶಿಷ್ಟ ಜಾತಿಗೆ ಸೇರಿರುವುದರಿಂದ ಚುನಾವಣೆಗೆ ನಿಲ್ಲಲು ಅವಕಾಶಗಳಿವೆ. ಒಬ್ಬಿಬ್ಬರು ಜಿಲ್ಲಾ

ಪಂಚಾಯಿತ, ತಾಲೂಕು ಪಂಚಾಯಿತದಲ್ಲಿ ಕಾಣಸಿಗುತ್ತಾರೆ. ಆರ್ಥಿಕವಾಗಿ ಸಬಲರಲ್ಲದ ಅಗೇರರು ರಾಜಕೀಯದಲ್ಲೂ ನಿರಾಸಕ್ತಿಯನ್ನು ತೋರುತ್ತಾರೆ. ಜಿಲ್ಲಾ ಪಂಚಾಯಿತ, ತಾಲೂಕು ಪಂಚಾಯಿತದಲ್ಲಿ ಆರಿಸಿ ಬಂದವರು ಕೂಲಿ ನಾಲಿ ಮಾಡಿ ಜೀವನ ಸಾಗಿಸುವವರು. ರಾಜಕೀಯದ ಒಳಮರ್ಮ ಗೊತ್ತಿಲ್ಲದವರು. ಆದರೆ ಇಂದು ಅಗೇರರು ರಾಜಕೀಯ ಕ್ಷೇತ್ರಕ್ಕೆ ಒಲವು ತೋರಿಸುತ್ತಿರುವುದು ಸಂತೋಷದ ವಿಷಯ.

ಉತ್ತರ ಕನ್ನಡ ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ವಾಸಿಸುತ್ತಿರುವ ಅಗೇರ ಸಮುದಾಯಗಳ ಆರ್ಥಿಕ ವ್ಯವಸ್ಥೆ ಅಷ್ಟೊಂದು ಸರಿಯಿಲ್ಲ. ಸ್ವಂತ ಜಮೀನು ಹೊಂದಿ ಕೃಷಿ ಮಡುವವರು ಅತಿ ವಿರಳ. ಬೇರೆಯವರ ಜಮೀನನ್ನು ಗೇಣಿ ಮಾಡುವವರು ಇದ್ದಾರೆ. ಆದರೆ ಇದರಿಂದ ಹೆಚ್ಚಿನ ಲಾಭ ಬರುವುದಿಲ್ಲ. ಆಯಾ ಸಮುದಾಯದ ಆರ್ಥಿಕ ವ್ಯವಸ್ಥೆಯನ್ನು ಗಮನಿಸಬೇಕಾದರೆ ಅವರ ವೃತ್ತಿಯಲ್ಲಿನ ಬೆಳವಣಿಗೆ, ಗಳಿಕೆಯ ಆಧಾರ, ಇತರ ಮೂಲಗಳ ಆದಾಯ, ಪಶು ಪಕ್ಷಿ, ನೌಕರಿ ಹೀಗೆ ವಿವಿಧ ಮೂಲಗಳಿಂದ ಆದಾಯ ಬರುತ್ತಿದ್ದರೆ ಅವರ ಆರ್ಥಿಕ ಮಟ್ಟ ಉತ್ತಮವಾಗಿರುತ್ತದೆ. ದಿನನಿತ್ಯ ಕೂಲಿ ಮಾಡುವುದು, ಶ್ರೀಮಂತರ ಮನೆಯಲ್ಲಿ ಜೀತ ಮಾಡುತ್ತಾರೆ. ಹಬ್ಬ ಹರಿದಿನಗಳಲ್ಲಿ, ಜಾತ್ರೆ, ಶಕ್ತಿ ದೇವರ ಉತ್ಸವದಲ್ಲಿ ಸಾಲ ಸೂಲ ಮಾಡಿ ಹರಕೆ ತೀರಿಸಲು ಪ್ರಾಣಿ ಬಲಿ ನೀಡುತ್ತಾರೆ. ಇನ್ನೂ ಮುಂತಾದ ಕಾರಣಗಳಿಂದ ಅಗೇರರು ಬಡತನ ರೇಖೆಗಿಂತ ಕೆಳಗಿದ್ದಾರೆ. ಅಗೇರರ ಇಂದಿನ ಆರ್ಥಿಕ ಪರಿಸ್ಥಿತಿಯೂ ಚೆನ್ನಾಗಿಲ್ಲ. ಕೂಲಿ ನಾಲಿ ಮಾಡುವುದು, ಉಪ್ಪಿನ ಆಗರಗಳಲ್ಲಿ ದುಡಿಯುವುದುರಿಂದ ಸಂಬಳ ಹೆಚ್ಚಾದರೂ ಗೃಹಬಳಕೆಯ ಬೆಲೆ ಏರಿಕೆಯಿಂದಾಗಿ ದೈನಂದಿನ ವೆಚ್ಚಭರಿಸುವಲ್ಲಿಯೂ ಕಷ್ಟವಾಗುತ್ತಿದೆ.

ಅಗೇರರಲ್ಲಿ ಕೆಲವರು ಸರ್ಕಾರಿ ನೌಕರಿ ಸೇರಿದ್ದಾರೆ. ಕೆಲವರು ಶಿಕ್ಷಕರಾಗಿಯೂ, ಕಂಡಕ್ಟರ್‌ರಾಗಿಯೂ, ಬ್ಯಾಂಕಿನ ಉದ್ಯೋಗಿಯಾಗಿಯೂ, ಖಾಸಗಿ ಕಂಪನಿಗಳಲ್ಲಿಯೂ, ಅಟೋ ಚಾಲಕರಾಗಿಯೂ, ಚಹಾ ಅಂಗಡಿಗಳಲ್ಲಿಯೂ, ಬೀಡಾ ಅಂಗಡಿಗಳಲ್ಲಿಯೂ, ಕಿರಾಣಿ ಅಂಗಡಿಗಳಲ್ಲಿಯೂ, ಹಣ್ಣು-ತರಕಾರಿ ಮಾರಾಟಗಾರರಾಗಿಯೂ ತೊಡಗಿಕೊಂಡಿದ್ದಾರೆ. ಆದರೆ ಆರ್ಥಿಕವಾಗಿ ಅನುಕೂಲವಿರುವವರು ಅತಿ ಕಡಿಮೆ. ಸರಕಾರದವರು ಪರಿಶಿಷ್ಟ ಜಾತಿ ಪಂಗಡದವರಿಗೆ ನೀಡುತ್ತಿರುವ ಜನತಾ ಮನೆಗಳು, ಪ್ರತ್ಯೇಕ ಕಾಲನಿ, ಕೇರಿಗಳು ಇವರಿಗೆ ಲಭಿಸಿವೆ ಕೆಲವು ಕುಟುಂಬಗಳು ಸರ್ಕಾರವೇ ಹಂಚಿಕೊಟ್ಟ ಒಂದಿಷ್ಟು ಭೂಮಿಯನ್ನು ಪಡೆದಿದ್ದು, ಇದೊಂದೇ ಕುಟುಂಬದ ಮೂಲಭೂತ ಆಸ್ತಿಯಾಗಿದೆ. ಸ್ವಾತಂತ್ರ್ಯ ಬಂದು ಏಳು ದಶಕಗಳಾದರೂ ಇನ್ನೂ ಅಗೇರರ ಆರ್ಥಿಕ, ಸಾಮಾಜಿಕ, ಕೌಟುಂಬಿಕ, ರಾಜಕೀಯ, ಶೈಕ್ಷಣಿಕ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆ ಕಂಡುಬಂದಿಲ್ಲ. ಸರಕಾರದ ವಿವಿಧ ಸವಲತ್ತುಗಳು ಈ ಸಮುದಾಯವನ್ನು ಸರಿಯಾಗಿ ಸೇರುತ್ತಿಲ್ಲ. ಈ ಸವಲತ್ತುಗಳು ಸರಿಯಾಗಿ ಅಗೇರ ಸಮುದಾಯವನ್ನು ತಲುಪಿದಲ್ಲಿ ಮಾತ್ರ ಈ ಸಮುದಾಯದ ಅಭಿವೃದ್ಧಿ ಸಾಧ್ಯ

ನಮ್ಮ ದೇಶದಲ್ಲಿ ಹಳೆಯ ಕಾಲದಿಂದ ಬ್ರಿಟಿಷರ ಆಗಮನದವರೆಗೆ ಶೂದ್ರರು ಮತ್ತು ಮಹಿಳೆಯರಿಗೆ ಶಿಕ್ಷಣವನ್ನು ನಿರಾಕರಿಸಲಾಗಿತ್ತು. ಕೆಲವು ಸಮುದಾಯಗಳನ್ನು ಶಿಕ್ಷಣದಿಂದ ಮುದ್ದಾಂ ದೂರವಿಡಲಾಗಿತ್ತು. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಆದಿವಾಸಿ-ಬುಡಕಟ್ಟುಗಳ ಜನರಿಗೆ ಶಿಕ್ಷಣವು ಗಗನ ಕುಸುಮವಾಗಿತ್ತು. ಆ ಪರಿಸ್ಥಿಯಲ್ಲಿ ಆದಿವಾಸಿ, ಬುಡಕಟ್ಟು ಸಮುದಾಯದವರು, ನಾಗರಿಕ ಸಮಾಜದೊಂದಿಗೆ ಸಂಪರ್ಕವನ್ನು ಹೊಂದಿರಲಿಲ್ಲ. ಆ ಕಾರಣದಿಂದ ಶಿಕ್ಷಣ ಜ್ಞಾನವು ಅವರಲ್ಲಿರಲಿಲ್ಲ. ಆದರೆ ಇಂದು ಹಾಗಲ್ಲ. ಜಗತ್ತು ಆಧುನಿಕತೆಯತ್ತ ಸಾಗುತ್ತಿದೆ. ಎಲ್ಲದಕ್ಕೂ ಮೂಲ ಶಿಕ್ಷಣ. ಇದು ಯಾಂತ್ರಿಕ ಯುಗ, ಎಲ್ಲವೂ ಕ್ಷಣಾರ್ಧದಲ್ಲಿಯೇ ಆಗಬೇಕೆಂಬ ಹಂಬಲ. ಸಮೂಹ ಮಾಧ್ಯಮದ ಈ ತುಡಿತಕ್ಕೆ ಶಿಕ್ಷಣ ಅತ್ಯವಶ್ಯಕ.

ಆಧುನಿಕ ಯುಗದಲ್ಲಿ ಶಿಕ್ಷಣ ಪ್ರಮುಖ ಪಾತ್ರವಹಿಸುತ್ತದೆ. ಶಿಕ್ಷಣ ಸಮಾಜದಲ್ಲಿ ಅಭಿವೃದ್ಧಿಯನ್ನು ತರುತ್ತದೆ. ಸಮಾಜದ ಪರಿವರ್ತನೆಗೆ ಶಿಕ್ಷಣವೇ ಮೂಲ. ಶಿಕ್ಷಣದಿಂದಲೇ ವ್ಯಕ್ತಿ ಮತ್ತು ರಾಷ್ಟ್ರದ ಪ್ರಗತಿ ಸಾಧ್ಯ. ಸಾಮಾಜೀಕರಣದಲ್ಲಿಯೂ ಶಿಕ್ಷಣ ಪ್ರಮುಖ ಪಾತ್ರವಹಿಸುತ್ತದೆ. ಉತ್ತರ ಕನ್ನಡ ಜಿಲ್ಲೆಯ ವಿವಿಧ ಭಾಗಗಳಲ್ಲಿ ನೆಲೆಸಿರುವ ಅಗೇರರು ನಾಗರಿಕ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಹೆಚ್ಚಾಗಿ ಅಗೇರರು ವಾಸಿಸುವುದು ಕಾಡು-ಮೇಡಿನಲ್ಲಿ. ಅಲ್ಲಿಗೆ ತಲುಪಲು ರಸ್ತೆಗಳು ಸರಿಯಾಗಿ ಇಲ್ಲ. ಶಿಕ್ಷಣ ಪಡೆಯಲು ಬೇರೆ ಊರುಗಳಿಗೆ ಹೋಗಬೇಕಿದೆ. ಆ ಕಾಡಿನಲ್ಲಿ ಶಾಲೆಯನ್ನು ತೆರೆಯಲು ಸಾಧ್ಯವೇ? ಹಾಗೆಯೇ ಆ ಕಾಡಿನಲ್ಲಿನ ಶಾಲೆಗಳಿಗೆ ಶಿಕ್ಷಕರು ಹೋಗಲು ಹಿಂದೆ ಬೀಳುತ್ತಿದ್ದಾರೆ. ಹಾಗೂ ಇಂಥ ಶಾಲೆಗಳಿಗೆ ಪೂರ್ಣಪ್ರಮಾಣದ ಸೌಲಭ್ಯವನ್ನು ನೀಡಲು ಸಾಧ್ಯವಾಗುತ್ತಿಲ್ಲ. ಅಗೇರರ ಕುಟುಂಬದ ಪ್ರತಿ ಮಗುವು ಶಾಲೆಯತ್ತ ತೆರಳಲು ಸರ್ಕಾರ ಪ್ರಾಥಮಿಕ ಹಂತದಲ್ಲಿ ಸರ್ವಶಿಕ್ಷಣದ ಅಭಿಯಾನ, ಬಾ ಶಾಲೆಗೆ ಬಾ, ಕೂಲಿಯಿಂದ ಶಾಲೆಗೆ, ಬೀದಿಯಿಂದ ಶಾಲೆಗೆ, ಟೆಂಟ ಶಾಲೆ, ಸಮುದಾಯದತ್ತ ಶಾಲೆ, ಚಿಣ್ಣರ ಅಂಗಳ, ಬಿಸಿಯೂಟ ಮುಂತಾದವುಗಳನ್ನು ಪ್ರಾರಂಭಿಸಿದೆ.

ಕೃಷಿ-ಭೂ ಹಿಡುವಳಿ-ಪಶುಪಾಲನೆ

ಉತ್ತರ ಕನ್ನಡ ಜಿಲ್ಲೆಯ ಅಗೇರರು ಕೇರಿಗಳಲ್ಲಿ, ಕಾಲನಿಗಳಲ್ಲಿ ಮತ್ತು ಕಾಡಿನಲ್ಲಿ ವಾಸಿಸುತ್ತಿದ್ದಾರೆ. ಆದರೆ ಇವರಿಗೆ ಕೃಷಿ ಮಾಡಲು ಬೇಕಾಗುವ ಉತ್ತಮ ಭೂಮಿ ಇಲ್ಲ. ಶ್ರೀಮಂತರ ಜಮೀನಿನಲ್ಲಿ ಗೇಣಿ ಮಾಡಿ ಬದುಕುತ್ತಾರೆ. ಕೆಲವರು ಜೀತ ಮಾಡಿ ಬದುಕುತ್ತಾರೆ. ಮತ್ತೆ ಕೆಲವರು ಕಾಡಿನ ಭೂಮಿಯನ್ನು ಅತಿಕ್ರಮಣ ಮಾಡಿಕೊಂಡು ಬದುಕುತ್ತಿದ್ದಾರೆ. ಹೆಚ್ಚಿನವರು ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದಾರೆ. ತುಂಡು ಭೂಮಿಯಲ್ಲಿ ಎಷ್ಟು ದುಡಿದರು ವರ್ಷಕ್ಕೆ ಸಾಕಾಗುವಷ್ಟು ಕಾಳು ಕಡಿ ಸಿಗುವುದಿಲ್ಲ. ಇವರು ಹಳೆಯ ಕಾಲದ ಕೃಷಿ ಪದ್ಧತಿಯನ್ನು ಬಳಸುತ್ತಿದ್ದಾರೆ. ಇಂದಿನ ಯಾಂತ್ರಿಕ ಯುಗದಲ್ಲಿ ಉತ್ತಮ ತಳಿಯ ಬೀಜ, ಯಂತ್ರೋಪಕರಣ,

ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳು ಮತ್ತು ಅದನ್ನು ಬಳಸುವ ಸಲಕರಣೆಗಳನ್ನು ಆಗೇರರು ಬಳಸುವುದಿಲ್ಲ. ಕೃಷಿಯ ಕಡೆಗೆ ಒಲವನ್ನು ತೋರುತ್ತಿಲ್ಲ.

ಆಗೇರರು ಮೂಲತಃ ಪಶುಪಾಲಕರಲ್ಲ. ಇವರು ಎತ್ತು, ಆಕಳು, ಹೋರಿ, ಕರು, ಎಮ್ಮೆ, ಕೋಣ, ಕುರಿ, ಮೇಕೆ, ಕೋಳಿಗಳನ್ನು ಸಾಕುವುದು ತುಂಬಾ ಕಡಿಮೆ. ಇತ್ತೀಚಿಗೆ ಕೆಲವರು ಮೇಕೆ, ಕುರಿ, ಕೋಳಿಗಳನ್ನು ಸಾಕುತ್ತಿದ್ದಾರೆ. ಈ ಪ್ರಾಣಿಗಳನ್ನು ಇವರು ಮಾಂಸಾಹಾರಕ್ಕಾಗಿ ಸಾಕುತ್ತಾರೆ. ಕೆಲವರು ಮಾತ್ರ ಹೈನುಗಾರಿಕೆಯ ಉತ್ಪನ್ನಗಳನ್ನು ನೀಡುವ ಎಮ್ಮೆ, ಹಸು ಮುಂತಾದವುಗಳನ್ನು ಸಾಕಲು ಇಂದಿನ ದಿನಗಳಲ್ಲಿ ಒಲವು ತೋರುತ್ತಿದ್ದಾರೆ.

ಕೊನೆ ಟಿಪ್ಪಣಿಗಳು

೧. ಪುಟ್ಟಯ್ಯ ಬಿ.ಎಂ., ಜಾತಿ ವಿಶ್ಲೇಷಣೆಯ ಸಮಸ್ಯೆ, ಪು. ೫.

೨. ಅದೇ, ಪು. ೮೭–೮೮.

೩. ಮನೋಹರ್ ಕುಮಾರ್, ೧೯೯೭, ಭಾರತೀಯ ಸಮಾಜ ಅಧ್ಯಯನ, ಪು. ೧೨೩.

೪. ಮಲ್ಲಿಕಾರ್ಜುನ ಬಿ. ಮಾನ್ಪಡೆ, ಚಪ್ಪರ್ ಬಂದ್, ೨೦೧೬, ಕನ್ನಡ ಪುಸ್ತಕ ಪ್ರಾಧಿಕಾರ, ಪು. ೪೭.

೫. ಅದೇ ಪು. ೫೫.

೬. ಅದೇ, ಪು. ೧೭.

೭. ಸಿಂಧೋಳ್ಳು ಡಾಕ್ಯುಮೆಂಟ್ರಿ, ವಾರ್ತಾ ಇಲಾಖೆ, ಬೆಂಗಳೂರು.

೮. ಅದೇ.

೯. ಅಂತರ್ಜಾಲ ಮಾಹಿತಿ.

೧೦. ಮೊಗೇರ ಸಮುದಾಯ, ಸಾಕ್ಷ್ಯಚಿತ್ರ, ವಾರ್ತಾ ಇಲಾಖೆ, ಬೆಂಗಳೂರು.

೧೧. ಅದೇ.

೧೨. ಗಿರಿಜನ ನಾಡಿಗೆ ಪಯಣ, ಪು. ೧೨೯.

೧೩. ಕರ್ನಾಟಕದ ಬುಡಕಟ್ಟುಗಳು, ಪು. ೫೭೮.

೧೪. ಅಂತರ್ಜಾಲ ಮಾಹಿತಿ.

೧೫. ರಾಮಕೃಷ್ಣ ಗುಂದಿ, ೨೦೦೨, ಉತ್ತರ ಕನ್ನಡ ಜಿಲ್ಲೆಯ ಆಗೇರರು ಒಂದು ಅಧ್ಯಯನ, ಪಿಎಚ್.ಡಿ. ಪ್ರಬಂಧ, ಪು. ೩೦.

೧೬. ಸಿದ್ದಿಯರ ಸಾಮಾಜಿಕ ಸ್ಥಿತ್ಯಂತರಗಳು, ಸಂಶೋಧನ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಪು. ೧೨೫.

೧೬. ರಾಮಕೃಷ್ಣ ಗುಂದಿ, ಉತ್ತರ ಕನ್ನಡ ಜಿಲ್ಲೆಯ ಆಗೇರರು ಒಂದು ಅಧ್ಯಯನ, ೨೦೦೨, ಪು. ೧೨೮, ೧೨೯.

೧೭. ಅದೇ, ಪು. ೧೩೦.

೧೮. ರಾಮಕೃಷ್ಣ ಗುಂದಿ, ಉತ್ತರ ಕನ್ನಡ ಜಿಲ್ಲೆಯ ಆಗೇರರು ಒಂದು ಅಧ್ಯಯನ, ೨೦೦೨, ಪು. ೧೩೧.

೧೯. ಅದೇ, ಪು. ೧೫೬.

◆◆◆

ಅಧ್ಯಾಯ : ನಾಲ್ಕು

ಸಮೂಹ ಮಾಧ್ಯಮದ ಸಾಮಾಜಿಕ ಮೌಲ್ಯಗಳು

೪.೧. ಸಮೂಹ ಮಾಧ್ಯಮ ಮತ್ತು
ಅಲಕ್ಷಿತ ಸಮುದಾಯಗಳ ಮುಖಾಮುಖಿ

೪.೨. ಹೊಣೆಗಾರಿಕೆ.

೪.೩. ಆಶಯಗಳು.

೪.೪. ಅಲಕ್ಷಿತ ಸಮುದಾಯಗಳನ್ನು ಮುಖ್ಯವಾಹಿನಿಗೆ
ಪರಿಚಯಿಸುವಲ್ಲಿ ಸಮೂಹ ಮಾಧ್ಯಮದ ಪಾತ್ರ

ಅಧ್ಯಾಯ : ನಾಲ್ಕು

ಸಮೂಹ ಮಾಧ್ಯಮದ ಸಾಮಾಜಿಕ ಮೌಲ್ಯಗಳು

ಸಮಾಜದಲ್ಲಿ ಸಾಮಾಜಿಕ ಸಂಬಂಧಗಳಿಗೆ ಪ್ರಮುಖ ಸ್ಥಾನವಿದೆ ಎಂಬುದನ್ನು ಹೊಸದಾಗಿ ಹೇಳಬೇಕಾಗಿಲ್ಲ. ಇಂತಹ ಸಂಬಂಧಗಳು ಬೆಳೆಯುವಲ್ಲಿಯೂ ಸಮೂಹ ಮಾಧ್ಯಮಗಳು ಪ್ರಧಾನ ಪಾತ್ರ ನಿರ್ವಹಿಸುತ್ತವೆ. ಸಮೂಹ ಮಾಧ್ಯಮ ಮತ್ತು ಸಮಾಜದ ನಡುವಿನ ಸಂಬಂಧಗಳನ್ನು ವಿಶ್ಲೇಷಿಸುತ್ತಾ "ಡ್ಯೊಯಿ" ಸಮೂಹ ಮಾಧ್ಯಮದಿಂದ ಸಮಾಜ ಮುಂದುವರೆಯುತ್ತದಷ್ಟೇ ಅಲ್ಲ, ಸಮಾಜವಿರುವುದೇ ಸಂಪರ್ಕದಿಂದ.(ಸಮೂಹ ಮಾಧ್ಯಮದಿಂದ) ಇದು ಇಲ್ಲದಿದ್ದರೆ, ಮಾನವ ಮಾನವನಾಗುತ್ತಿರಲಿಲ್ಲ. ತೀರಾ ಕೆಳಮಟ್ಟದ ಪ್ರಾಣಿಗಳಂತೆ ಉಳಿಯುತ್ತಿದ್ದ ಎಂದಿದ್ದಾರೆ.

ಸಮೂಹ ಮಾಧ್ಯಮಗಳು ಸಮಾಜವನ್ನು ಆದಿವಾಸಿ/ಅಲಕ್ಷಿತರು ಮತ್ತು ಮುಖ್ಯವಾಹಿನಿಯ ಜನರು ಎಂದು ವಿಂಗಡಣೆ ಮಾಡಲು ಸಹಾಯ ಮಾಡಿವೆ. ಜೊತೆಗೆ ಬೆಳವಣಿಗೆಯ ಹಂತವನ್ನು ಕ್ರಮಿಸಲು ಪ್ರಾಥಮಿಕ ಕಾರ್ಯವನ್ನು ನಿರ್ವಹಿಸಿವೆ. ಈ ಬೆಳವಣಿಗೆಯ ಹಂತಗಳ ಜೊತೆಗೆ ಸಮೂಹ ಮಾಧ್ಯಮಗಳೂ ಕೂಡ ಮೂಲಭೂತ ಬದಲಾವಣೆಯನ್ನು ಹೊಂದಿವೆ. ಉದಾಹರಣೆಗೆ ಅಲಕ್ಷಿತ ಸಮುದಾಯಗಳು ಇತರರೊಡನೆ ಸಂಬಂಧ ಬೆಳೆಸಲು ಚಿಹ್ನೆ ಸಂಕೇತ ಮತ್ತು ಮಾತನಾಡಲು ಪದಗಳನ್ನು ಬಳಸುತ್ತಿದ್ದರು. ಇಂದು ಆಧುನಿಕ ಸಮೂಹ ಮಾಧ್ಯಮಗಳಾದ ಪತ್ರಿಕೆ, ರೇಡಿಯೋ, ಸಿನೆಮಾ ಮತ್ತು ದೂರದರ್ಶನಗಳು ಇದೇ ಕಾರ್ಯದಲ್ಲಿ ನಿರತವಾಗಿವೆ. ಇಂದಿನ ದಿನಗಳಲ್ಲಿ ಸಮೂಹ ಮಾಧ್ಯಮಗಳು ಸಾಮಾಜಿಕವಾಗಿ ಹೆಚ್ಚಿನ ಮೌಲ್ಯವನ್ನು ಹೊಂದಿವೆ.

೪.೧. ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳ ಮುಖಾಮುಖಿ.

ಸಮೂಹ ಮಾಧ್ಯಮ ನಮ್ಮ ದೇಶದ ನಾಲ್ಕನೇ ಅಂಗವೆಂದೇ ಪ್ರಸಿದ್ಧಿಯಾಗಿದೆ. ಇಂದು ಸಮೂಹ ಮಾಧ್ಯಮಗಳು ತಮ್ಮ ವ್ಯಾಪ್ತಿಯನ್ನು ಎಲ್ಲೆಡೆ ಪಸರಿಸಿದೆ. ಆಧುನಿಕ ಜಗತ್ತಿನಲ್ಲಿ ಮಾಧ್ಯಮದ ಸಂಪರ್ಕವಿಲ್ಲದೆ ಬದುಕುವುದು ಅಸಾಧ್ಯ ಎನ್ನುವವಷ್ಟರಮಟ್ಟಿಗೆ ಬೆಳೆದಿದೆ. ಮಾಧ್ಯಮಗಳು ದೇಶದ ಪ್ರತಿಯೊಂದು ವಿಷಯವನ್ನು ಜನತೆಗೆ ತಿಳಿಸುವ ಕಾರ್ಯ ಮಾಡುತ್ತದೆ. ಅಲಕ್ಷಿತ ಸಮುದಾಯಗಳಾದರೂ ಮುಖ್ಯವಾಹಿನಿಯಿಂದ ದೂರದಲ್ಲಿ ಜೀವನ ನಡೆಸುತ್ತಿದ್ದಾರೆ. ಇವರಿಗೆ

ಮುಖ್ಯವಾಹಿನಿಯಲ್ಲಿ ನಡೆಯುವ ಪ್ರಚಲಿತ ವಿಷಯಗಳ ಅರಿವು, ದೇಶ, ವಿದೇಶಗಳ ಸುದ್ದಿಯ ಅರಿವಿಲ್ಲ. ಇವರು ನಿತ್ಯಜೀವನದ ಊಟ-ಬಟ್ಟೆಗಾಗಿ ಅಲೆಮಾರಿತನದ ಜೀವನವನ್ನು ನಡೆಸುತ್ತಾರೆ. ಅಲಕ್ಷಿತ ಸಮುದಾಯದ ಜೀವನ ಪರಿಸ್ಥಿತಿ ಮುಖ್ಯವಾಹಿನಿಯ ಜನರಿಗೆ ತಿಳಿಯಬೇಕಾದರೆ ಅದು ಸಮೂಹ ಮಾಧ್ಯಮಗಳಿಂದ ಮಾತ್ರ ಸಾಧ್ಯ.

ಅಲಕ್ಷಿತ ಸಮುದಾಯಗಳ ಸಂಸ್ಕೃತಿಯನ್ನು ಅಧ್ಯಯನಕ್ಕೆ ತೊಡಗಿಸುವಾಗ ಸಮುದಾಯದ ಜನರ ಜೀವನ ವಿಧಾನ, ಸಂಪ್ರದಾಯ, ಆಚರಣೆಗಳನ್ನು ಮುಖ್ಯವಾಗಿ ಗಮನಿಸಬೇಕಾಗಿರುತ್ತದೆ. ಜಗತ್ತಿನಲ್ಲಿ ಜನಾಂಗಗಳು ಹುಟ್ಟಿ ವಿಕಾಸ ಹೊಂದಿ ಕಾಲಕಾಲಕ್ಕೆ ಪರಿವರ್ತನೆಗೊಂಡು, ಹೊಸ ಹೊಸ ರೀತಿ ನೀತಿಗಳನ್ನು ರೂಪಿಸಿ ಅದಕ್ಕೆ ತಕ್ಕಂತೆ ವೈಶಿಷ್ಟ್ಯತೆಯನ್ನು ಕಂಡುಕೊಳ್ಳುತ್ತಿದ್ದಾರೆ. ಅಲಕ್ಷಿತರ ಅಧ್ಯಯನವೆಂದರೆ ಅಲಕ್ಷಿತ ಜನ, ವಾಸಿಸುವ ಪ್ರದೇಶ, ಮೌಖಿಕ ಪರಂಪರೆ, ಆಚಾರ-ವಿಚಾರ, ರೀತಿ-ನೀತಿ, ನಂಬಿಕೆ, ಧರ್ಮ, ಕಲೆ, ಹುಟ್ಟಿನಿಂದ ಸಾವಿನವರೆಗಿನ ಆಚರಣೆ, ಆಹಾರ ಮುಂತಾದವುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿರುತ್ತದೆ.

ಹಾಗೆಯೇ ಸಮೂಹ ಮಾಧ್ಯಮಗಳನ್ನು ಅಧ್ಯಯನಕ್ಕೆ ತೆಗೆದುಕೊಂಡಾಗ, ಮಾಧ್ಯಮದ ಹುಟ್ಟು, ವಿಕಾಸ, ಹೊಣೆಗಾರಿಕೆ, ಆಶಯ, ಗುಣಧರ್ಮ, ಗುರಿ, ಮಿತಿ ಮುಂತಾದವುಗಳನ್ನು ಕೂಲಂಕೂಶವಾಗಿ ಗಮನಿಸಬೇಕಾಗಿರುತ್ತದೆ. ಮಾಧ್ಯಮ ಮತ್ತು ಅಲಕ್ಷಿತರನ್ನು ಮುಖಾಮುಖಿ ಮಾಡುವಾಗ ಇವೆರಡರ ಆಳವಾದ ಅಧ್ಯಯನದಿಂದ ಮಾತ್ರ ಇವೆರಡರ ಪರಿವರ್ತನೆಯನ್ನು ಅಧ್ಯಯನದಲ್ಲಿ ಬಳಸಿಕೊಳ್ಳಲು ಸಾಧ್ಯವಿದೆ.

ಮಾಧ್ಯಮಗಳು ಅಲಕ್ಷಿತ ಸಮುದಾಯದ ಜನರು ಎಲ್ಲಿ ವಾಸಿಸುತ್ತಿದ್ದಾರೆ? ಅವರ ಜೀವನ ಕ್ರಮ ಹೇಗೆ, ಇಂದಿನ ಆಧುನಿಕ ಪ್ರಪಂಚದಲ್ಲಿ ಅಲಕ್ಷಿತರು ಹೇಗೆ ತೊಂದರೆಗೆ ಒಳಗಾಗಿದ್ದಾರೆ ಎನ್ನುವ ಮಾಹಿತಿಯನ್ನು ಕಲೆ ಹಾಕಿ ಪತ್ರಿಕೆ, ರೇಡಿಯೋ, ಟಿ.ವಿ., ಅಂತರ್ಜಾಲದ ಮೂಲಕ ಬಿತ್ತರಿಸಿದಾಗ ದೇಶದ ಮುಖ್ಯವಾಹಿನಿಯ ಜನರಿಗೆ ಅಲಕ್ಷಿತ ಸಮುದಾಯದ ಅರಿವು ಉಂಟಾಗುತ್ತದೆ. ಮಾಧ್ಯಮದಿಂದಾಗಿ ಸರ್ಕಾರಕ್ಕೂ ಅಲಕ್ಷಿತರ ವಿಷಯ ತಿಳಿಯುತ್ತದೆ. ಅನೇಕ ಮಾಧ್ಯಮಗಳಂತೂ ಅಲಕ್ಷಿತರ ಏಳಿಗೆಗಾಗಿ ಶ್ರಮಿಸಿದ ಉದಾಹರಣೆಗಳುಂಟು.

ಸಮೂಹ ಮಾಧ್ಯಮಗಳ ನಡೆಯಿಂದಾಗಿ ಅಲಕ್ಷಿತರು ಮತ್ತು ಮಾಧ್ಯಮಗಳು ಮುಖಾಮುಖಿಯಾಗುತ್ತಾರೆ. ಅಲಕ್ಷಿತರ ಇರುವಿಕೆಯ ಮಾಹಿತಿ ದೊರೆಯುವುದೇ ಮಾಧ್ಯಮಗಳಿಂದ. ಕೆಲವು ಪ್ರದೇಶಗಳಲ್ಲಿ ಅಲಕ್ಷಿತರನ್ನು ಅನೇಕ ಪಟ್ಟಭದ್ರ ಹಿತಾಸಕ್ತಿಗಳು ಎತ್ತಂಗಡಿ ಮಾಡಿ ಅವರು ವಾಸಿಸುವ ಪ್ರದೇಶವನ್ನು ಕಬಳಿಸುತ್ತಾರೆ. ಅಲಕ್ಷಿತರ ಸಂಖ್ಯೆ ಕಡಿಮೆ ಇದ್ದುದರಿಂದ, ಸಂಘಟನೆಯ ಕೊರತೆಯಿಂದ ಹಾಗೂ ಮುಖಂಡತ್ವವನ್ನು ವಹಿಸುವ ಅರ್ಹತೆ ಇಲ್ಲದ್ದರಿಂದ ಶೋಷಣೆಗೆ ಒಳಗಾಗುತ್ತಾರೆ. ಇಂತಹ ಸಮಯದಲ್ಲಿ ಮಾಧ್ಯಮಗಳು ಅಲ್ಲಿಗೆ ಧಾವಿಸಿ ತಮ್ಮ ಪ್ರಭಾವ ಬೀರಿ ಅಲಕ್ಷಿತರಿಗೆ ನ್ಯಾಯ ಒದಗಿಸಿದ ಘಟನೆಗಳಿವೆ.

ಕಾಡಿನಲ್ಲಿ ಬಾಳುತ್ತಿದ್ದ ಸಮುದಾಯಗಳು ನಾಗರಿಕ ಮನುಷ್ಯನ ಹಸ್ತಕ್ಷೇಪದಿಂದಾಗಿ ತಮ್ಮ ಅಸ್ತಿತ್ವ ಕಳೆದುಕೊಳ್ಳುತ್ತಿರುವುದು ನಮಗೆ ತಿಳಿದಿರುವ ಸಂಗತಿಯಾಗಿದೆ. ಇತಿಹಾಸದ ಪುಟಗಳನ್ನು ತಿರುವಿದಾಗಲೂ ನಮಗೆ ಇಂತಹ ಸಮುದಾಯಗಳ ಮೇಲೆ ಶೋಷಣೆ ನಡೆಯುತ್ತಾ ಬಂದಿರುವುದು ತಿಳಿಯುತ್ತದೆ. ಮೇಲ್ವರ್ಗದವರ ಕರಿನೆರಳಿನಲ್ಲಿ ಬಾಳುವುದು ಅನಿವಾರ್ಯವಾಯಿತು. ಸ್ವಾತಂತ್ರ್ಯನಂತರ ಕಾಡುಗಳನ್ನು ರಕ್ಷಿಸಲು ಅನೇಕ ಇಲಾಖೆಗಳನ್ನು ಪ್ರಾರಂಭಿಸಲಾಯಿತು. ಅಭಿವೃದ್ಧಿಯ ನೆಪದಲ್ಲಿ ಕಾಡು ಬೆಟ್ಟಗಳು ಮುಳುಗಡೆಯಾದವು. ಆದಿವಾಸಿಗಳನ್ನು ಸ್ಥಳಾಂತರಿಸುವ ಅನೇಕ ಯೋಜನೆಗಳು ಬಂದರೂ ಆದಿವಾಸಿಗಳನ್ನು ಸುಖವಾಗಿರಿಸುವಲ್ಲಿ ವಿಫಲವಾದವು. ಅವರನ್ನು ಶೋಷಿಸಿ, ಒಕ್ಕಲೆಬ್ಬಿಸಲು ಪ್ರಯತ್ನಿಸಲಾಯಿತು. ಕಾಡಿನಲ್ಲಿ ಒಂದು ಕಾಡು ಮೃಗಗಳಿರಬೇಕು ಇಲ್ಲವೇ ಮನುಷ್ಯರಿರಬೇಕು ಎಂಬ ಕಾಯ್ದೆಯನ್ನು ಹೊರಡಿಸಿದರು. ಕಾಡಿನಲ್ಲಿ ಪ್ರಾಣಿಗಳಿರಬೇಕು ಎಂಬ ತೀರ್ಮಾನದಿಂದ ಮನುಷ್ಯರನ್ನು ಹೊರಗೆಡಲು ಪ್ರಯತ್ನಿಸಿಲಾಯಿತು. ಆದರೆ ಇಂಥ ಸಂದರ್ಭದಲ್ಲಿ ಇವರಿಗೆ ಜೀವನಾಧಾರಕ್ಕೆ ಬೇಕಾದ ಯಾವ ಅನುಕೂಲತೆಯನ್ನು ಮಾಡಿಕೊಡಲಿಲ್ಲ. ಇದರಿಂದ ಕಾಡು ಇಲ್ಲದೇ, ಇತ್ತ ನಾಡು ಇಲ್ಲದೇ ತ್ರಿಶಂಕು ಸ್ಥಿತಿಯಲ್ಲಿ ನರಳಾಡುವ ಪರಿಸ್ಥಿತಿ ಆದಿವಾಸಿ ಸಮುದಾಯಗಳಿಗೆ ಒದಗಿತು. ಅಲಕ್ಷಿತರು ಅನುಭವಿಸುತ್ತಿರುವ ಅಮಾನವೀಯ ಆಚರಣೆಗಳಾದ ಅಸ್ಪ್ರಶ್ಯತೆ, ಜೀತದಾಳು ಪದ್ಧತಿ, ಬಹಿಷ್ಕಾರ, ದೇವದಾಸಿ ಪದ್ಧತಿ ಮುಂತಾದವುಗಳು ನಡೆದಾಗ ಸಮೂಹ ಮಾಧ್ಯಮಗಳು ಅನಿಷ್ಟ ಆಚರಣೆಗಳನ್ನು ಖಂಡಿಸಿ, ಶೋಷಣೆಯಿಂದ ಅಲಕ್ಷಿತರನ್ನು ತಪ್ಪಿಸುತ್ತವೆ. ಈ ಸಮಯದಲ್ಲಿ ಮುಖ್ಯವಾಹಿನಿಗೆ ಸಮೂಹ ಮಾಧ್ಯಮಗಳಿಂದ ಅಲಕ್ಷಿತರ ವಿಚಾರಗಳು ತಿಳಿಯುತ್ತದೆ. ಅನೇಕ ಹೋರಾಟ ಸಂಘಟನೆಗಳು ಅಲಕ್ಷಿತರ ಸಹಾಯಕ್ಕೆ ನಿಲ್ಲುತ್ತವೆ. ಸರ್ಕಾರ ಕೂಡ ಅಲಕ್ಷಿತರು ಅನುಭವಿಸುವ ಅಮಾನವೀಯತೆಯ ವಿರುದ್ಧ ಕಾನೂನುಗಳನ್ನು ನಿರ್ಮಿಸಿದೆ. ಇಂದಿನ ಪ್ರಬಲವಾದ ಮಾಧ್ಯಮಗಳು ಕೂಡಲೇ ಇಂಥಹ ಅಮಾನವೀಯ ಘಟನೆಗಳನ್ನು ಸುದ್ದಿ ಮಾಡಿ ಸರ್ಕಾರಿ ಅಧಿಕಾರಿಗಳ ಗಮನಕ್ಕೆ ತಂದು ಅಲಕ್ಷಿತರನ್ನು ಶೋಷಣೆಯಿಂದ ಬಿಡುಗಡೆ ಮಾಡುತ್ತದೆ. ಇಂಥಹ ಸಮಯದಲ್ಲಿ ಅಲಕ್ಷಿತ ಸಮುದಾಯಗಳು ಮತ್ತು ಸಮೂಹ ಮಾಧ್ಯಮಗಳು ಮುಖಾಮುಖಿಯಾಗುತ್ತವೆ.

ಸರ್ಕಾರದ ಸೌಲಭ್ಯಗಳನ್ನು ಅಲಕ್ಷಿತರಿಗೆ ನೀಡಿಸುವಲ್ಲಿ ಮಾಧ್ಯಮಗಳು ಸಹಾಯಕಾರಿಯಾಗಿವೆ. ಒಟ್ಟಿನಲ್ಲಿ ಹೇಳುವದಾದರೆ ಅಲಕ್ಷಿತ ಸಮುದಾಯಗಳ ನೆಲೆ, ಕಲೆ, ಅಲೆಮಾರಿತನ, ನಿಗೂಢ ಸ್ಥಿತಿಗಳು ಮುಖ್ಯವಾಹಿನಿಗೆ ಮಾಧ್ಯಮದಿಂದ ತಿಳಿದಿದೆ. ಆದರೆ ಮಾಧ್ಯಮಗಳೇನೂ ಸಂಪೂರ್ಣ ರೀತಿಯಿಂದ ಅಲಕ್ಷಿತರಿಗೆ ನೆರವಾಗಿಲ್ಲ. ಇಂದು ಮಾಧ್ಯಮಗಳು ವಾಣಿಜ್ಯೀಕರಣಗೊಂಡಿವೆ. ಖಾಸಗಿ ವಾಹಿನಿಗಳು ನಾಯಿಕೊಡೆಯಂತೆ ಹುಟ್ಟಿಕೊಂಡಿದೆ. ಮುಖ್ಯವಾಹಿನಿಯಲ್ಲಿ ಟಿ.ಆರ್.ಪಿ. ಅಂಕಗಳಿಸಲು ತಾಮುಂದು ತಾಮುಂದು ಎಂದು ಹಪಹಪಿಸುತ್ತಿದೆ. ಕೇವಲ ಟಿ.ಆರ್.ಪಿ.

ಅಂಕಗಳಿಸಲು ಅಲಕ್ಷಿತರನ್ನು ಸುದ್ದಿ ಮಾಡಿ, ತಾವು ಜನ ಮನ್ನಣೆ ಪಡೆದು ಅಲಕ್ಷಿತರನ್ನು ತ್ರಿಶಂಕುಗಳನ್ನಾಗಿಸಿವೆ. ಇಂಥ ಸಮಯದಲ್ಲಿ ಅಲಕ್ಷಿತರಿಗೆ ಮಾಧ್ಯಮಗಳಿಂದ ಉಪಕಾರಕ್ಕಿಂತ ಅಪಕಾರವೇ ಹೆಚ್ಚು. ಇಲ್ಲಿ ಅಲಕ್ಷಿತರು ಕೇವಲ ಸುದ್ದಿಯ ಮೂಲವಾಗುತ್ತಾರೆ.

ಭಾರತಕ್ಕೆ ಸ್ವಾತಂತ್ರ್ಯ ಬಂದು ಏಳು ದಶಕಗಳು ಕಳೆದರೂ ಸಹ ಕೆಲವು ಸಮುದಾಯಗಳು ಇನ್ನೂ ಮುಖ್ಯವಾಹಿನಿಗೆ ಬರಲೇ ಇಲ್ಲ. ಇವುಗಳನ್ನು ಹಿಂದುಳಿದ ಅಥವಾ ಅಲಕ್ಷಿತ ಸಮುದಾಯಗಳೆಂದು ಹೇಳಬಹುದು. ಅವರನ್ನು ಇನ್ನೂ ಆಧುನಿಕತೆಯಿಂದ ದೂರವೇ ಇಟ್ಟಿದ್ದಾರೆ. ಸರ್ಕಾರದ ಕ್ರಮಬದ್ಧವಲ್ಲದ ಯೋಜನೆಗಳು, ಭ್ರಷ್ಟ ಅಧಿಕಾರಿಗಳು, ವಾಣಿಜ್ಯೀಕರಣಗೊಂಡಿರುವ ಸಮೂಹ ಮಾಧ್ಯಮಗಳು, ನಿರ್ಲಕ್ಷಿತ ಸಮುದಾಯಗಳ ಜನತೆಯ ಅನಕ್ಷರತೆ ಮುಂತಾದವುಗಳು ಕಾರಣವಾಗಿದೆ. ಸಮೂಹ ಮಾಧ್ಯಮಗಳು ಇಂದು ವಾಣಿಜ್ಯೀಕರಣಗೊಂಡು ಮೂಲಧ್ಯೇಯೋದ್ದೇಶ ಗಳನ್ನು ಮರೆತಿವೆ. ಅಧಿಕಾರದಲ್ಲಿರುವ ರಾಜಕಾರಣಿಗಳು ಮತ್ತು ಶ್ರೀಮಂತರ ಹಿಡಿತದಲ್ಲಿ ಮಾಧ್ಯಮಗಳಿವೆ. ಕೆಲವು ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ತಾಳಕ್ಕೆ ಮಾಧ್ಯವನ್ನು ಕುಣಿಸುತ್ತಿದ್ದಾರೆ. ಆದ್ದರಿಂದ ಮಾಧ್ಯಮಗಳು ಇಂದು ಕೇವಲ ಲಾಭ ಪ್ರವೃತ್ತಿಯನ್ನು ಬೆಳೆಸಿಕೊಂಡಿವೆ. ನಿರ್ಲಕ್ಷಿತ ಸಮುದಾಯಗಳ ಮೇಲೆ ಬೆಳಕು ಚೆಲ್ಲಲು ಮುಂದಾದರೆ ಅದರಿಂದ ಬರುವ ಲಾಭ ಮಾತ್ರ ಶೂನ್ಯ ಎಂದು ಮಾಧ್ಯಮಗಳು ಅರಿತಿದ್ದಾರೆ. ಹಾಗೆಯೇ ನಿರ್ಲಕ್ಷಿತ ಸಮುದಾಯಗಳಾದರೂ ಮುಖ್ಯವಾಹಿನಿಗೆ ಬರಬೇಕೆಂಬ ಹಠ ಅಥವಾ ನಿಲುವನ್ನು ಹೊಂದಿಲ್ಲ. ಇದ್ದಲ್ಲೆ ಇದ್ದು, ಸಿಕ್ಕಿದ್ದನ್ನು ತಿಂದು ಬದುಕುತ್ತಿದ್ದಾರೆ. ಸರ್ಕಾರವೂ ಸಹ ಇವರನ್ನು ತಮ್ಮ ವೋಟ್ ಬ್ಯಾಂಕ್‌ಆಗಿ ಬಳಸಿಕೊಳ್ಳುತ್ತಿದ್ದಾರೆ. ಈ ಎಲ್ಲಾ ಕಾರಣಗಳಿಂದಾಗಿ ಅಲಕ್ಷಿತ ಸಮುದಾಯಗಳು ಇಂದಿಗೂ ಸೂಕ್ತ ಆದಾಯವಿಲ್ಲದೇ, ಮೂಲಭೂತ ಸೌಕರ್ಯಗಳಿಲ್ಲದೇ, ಆಧುನಿಕ ನಾಗರೀಕತೆಗೆ ಪ್ರವೇಶಿಸದೆ ವಿರುದ್ಧ ದಿಕ್ಕಿನಲ್ಲೇ ಸಾಗುತ್ತಿದ್ದಾರೆ. ಈ ಸಮುದಾಯಗಳು ಅನುಭವಿಸುವ ಶೋಷಣೆಯ ಕರಾಳತೆಯನ್ನು ಮಾಧ್ಯಮಗಳು ಚಿತ್ರಿಸಿ ಸರ್ಕಾರದ ಮುಂದೆ ತಂದರೆ, ಆಗ ಸರ್ಕಾರ ನ್ಯಾಯಯುತವಾಗಿ ಇವರ ಅಭಿವೃದ್ಧಿಗೆ ಪ್ರಯತ್ನಿಸಿದರೆ, ಆಧುನಿಕ ನಾಗರೀಕತೆಗೆ ಅಥವಾ ಮುಖ್ಯವಾಹಿನಿಗೆ ತರಬಹುದಾಗಿದೆ. ಆದರೆ ಇದು ಒಂದೆರಡು ದಿನದ ಕೆಲಸವಲ್ಲ. ನಿಧಾನವಾಗಿ, ಕ್ರಮಬದ್ಧವಾಗಿ ಆಗಬೇಕಿದೆ. ಸರ್ಕಾರ, ಮಾಧ್ಯಮ ಮತ್ತು ನಿರ್ಲಕ್ಷಿತ ಸಮುದಾಯದ ಜನತೆ ಎಲ್ಲರೂ ಕೈ ಜೋಡಿಸಿದಲ್ಲಿ ಮಾತ್ರ ಸಾಧ್ಯವಾಗುತ್ತದೆ.

೪.೨. ಹೊಣೆಗಾರಿಕೆ

ಸಮೂಹ ಮಾಧ್ಯಮಗಳ ಗುಣಲಕ್ಷಣಗಳನ್ನು ನಾಲ್ಕು ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ. ಅವುಗಳೆಂದರೆ ಸಂದೇಶ, ಸಾರ್ವತ್ರಿಕತೆ, ಏಕಮುಖಿ ಸಂವಹನ ಮತ್ತು ಸಂವಹನ ವ್ಯವಸ್ಥೆ. ಸಮೂಹ ಮಾಧ್ಯಮಗಳಲ್ಲಿ ಸಂದೇಶಗಳು ಸಾರ್ವತ್ರಿಕವಾಗಿ ಪ್ರಸಾರವಾಗುತ್ತದೆ, ವೇಗವಾಗಿ

ಪ್ರಸಾರವಾಗುತ್ತವೆ. ಹಾಗೂ ಹೆಚ್ಚಿನ ಸಂದೇಶಗಳು ತಕ್ಷಣದ ಆಸಕ್ತಿಯ ವಿಷಯಗಳ ಕಡೆಗೆ ಗಮನ ಹರಿಸುತ್ತವೆ. ಇಲ್ಲಿ ಸಾರ್ವಜನಿಕ ಎಂದಾಗ, ಎಲ್ಲರಿಗೂ ಅಲ್ಲದಿದ್ದರೂ ಒಂದು ಸಣ್ಣ ಬೆಲೆ ಕೊಡಲು ಸಿದ್ಧರಿರುವವರಿಗೆ ಎಂದು ತಿಳಿಯಬೇಕು. ಯಾರಿಗೆ ಬೇಕಾದರೂ ಮಾಧ್ಯಮದ ವಸ್ತು ಲಭ್ಯ ಎನ್ನುವ ಕಾರಣಕ್ಕೆ ಬಹಳ ಜನರ ಆಸಕ್ತಿಯ ವಿಷಯಗಳಿಗೆ ಇಲ್ಲಿ ಪ್ರಾಶಸ್ತ್ಯ ಸಿಗುತ್ತದೆ. ಕೆಲವೇ ಕೆಲವು ಜನರ ಅಭಿರುಚಿಗಳಿಗೆ ಸಾಧಾರಣವಾಗಿ ಅವಕಾಶವಿರುವುದಿಲ್ಲ. ಚಿತ್ರಗೀತೆ ಬಯಸುವವರು ಬಹುಮಂದಿ, ಶಾಸ್ತ್ರೀಯ ಸಂಗೀತ ಕೆಲವರಿಗೆ ಬೇಕು. ವ್ಯಾಪಾರಿ ಚಾನಲ್‌ಗಳು ಹೆಚ್ಚಿನ ಸಮಯ ಚಿತ್ರಗೀತೆಯನ್ನೇ ಪ್ರಸಾರಮಾಡುತ್ತವೆ. ಸಂವಹನದಲ್ಲಿ ವೇಗ ತಾಂತ್ರಿಕ ಪ್ರಗತಿಯಿಂದ ಬಂದದ್ದು ಇದು ಸುದ್ದಿಕೊಡುವುದರಲ್ಲಿ ನಾವೇ ಮೊದಲಿಗರಾಗಬೇಕು ಎನ್ನುವ ಪೈಪೋಟಿಯನ್ನು ಹುಟ್ಟಿಸಿದೆ.

ಸಮೂಹ ಸಂವಹನ ಮಾಧ್ಯಮಗಳಲ್ಲಿ ಸಂದೇಶಗಳಿಗೆ ಸಾಧಾರಣವಾಗಿ ಒಂದು ನಿರ್ದಿಷ್ಟವಾದ ವೇಳಾಪಟ್ಟಿಯಿರುತ್ತದೆ. ಮಾಧ್ಯಮ ನಿಶ್ಚಯಿಸಿದ ಈ ವೇಳಾಪಟ್ಟಿಗೆ ಶ್ರೋತೃಗಳು ತಮ್ಮ ಇತರ ಕಾರ್ಯಕ್ರಮಗಳನ್ನು ಹೊಂದಿಸಿಕೊಳ್ಳಬೇಕು ಎಂದು ನೀರಿಕ್ಷಿಸಲಾಗುತ್ತದೆ. ಸಮೂಹ ಮಾಧ್ಯಮವು ಕಲಿಯುವ ವ್ಯಕ್ತಿಯ ಮೇಲೆ ತಮ್ಮ ಪ್ರಭಾವವನ್ನು ಬೀರುವುವು. ಇವು ಸಹ ವ್ಯಕ್ತಿಗೆ ಶಿಕ್ಷಣ ನೀಡುವಲ್ಲಿ ಮಹತ್ವ ಪೂರ್ಣ ಪಾತ್ರವಹಿಸುತ್ತವೆ. ಒಳಿತನ್ನು ಮಾಡುವ ಪ್ರಜ್ಞೆಯನ್ನು ಸಮೂಹ ಮಾಧ್ಯಮಗಳು ಅಳವಡಿಸಿಕೊಳ್ಳಬೇಕಿದೆ. ಸಮಾಜದ ಅಂಕು ಡೊಂಕುಗಳನ್ನು ತಿದ್ದಿ, ತೀಡಿ ಸಮಸ್ಯೆಗಳನ್ನು ಪರಿಹರಿಸುವ ಕಾರ್ಯಗಳನ್ನು ಸಮೂಹ ಮಾಧ್ಯಮಗಳು ಇಂದು ಮಾಡಬೇಕಿದೆ.

ವಿಷಯ ಮಂಡಿಸುವ ಹಾಗೂ ಕೇಳುಗರ, ಓದುಗರ, ನೋಡುಗರ ನಡುವೆ ಮಧ್ಯವರ್ತಿಯಾಗಿ ಮಾಧ್ಯಮ ಸಂಪರ್ಕ ಕಲ್ಪಿಸುವುದರಿಂದ ವಿಷಯ ಮಂಡಿಸುವ ಹಾಗೂ ಸಮಾನ ಮನಸ್ಕರ ನಡುವೆ ನೇರ ಸಂಪರ್ಕ ಇರುವುದಿಲ್ಲ. ಯಾಂತ್ರಿಕ ಉಪಕರಣದ ಸಹಾಯದಿಂದ ಸಂವಹನ ಮಾಡುವುದರಿಂದ ತಕ್ಷಣದ ಪ್ರತಿಕ್ರಿಯಾತ್ಮಕ ಸಂವಹನ ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸಮೂಹ ಮಾಧ್ಯಮ ತಾತ್ಕಾಲಿಕವಾಗಿ ಏಕಮುಖವಾಗಿ ವ್ಯವಹರಿಸುತ್ತದೆ. ಜಗತ್ತಿನ ಯಾವುದೇ ಮೂಲೆಯಲ್ಲಿ ಸಂಭವಿಸಿರುವ ಘಟನೆಯ ಬಗ್ಗೆ ಕೆಲ ಕ್ಷಣಗಳಲ್ಲಿಯೇ ವಿವರಗಳನ್ನು ನೀಡುವಲ್ಲಿ ಸಮೂಹ ಮಾಧ್ಯಮ ಯಶಸ್ವಿಯಾಗಿರುವುದರಿಂದ ಅದರ ಪ್ರಬಾವ ತೀವ್ರ ವ್ಯಾಪಕತೆಯನ್ನು ಹೊಂದಿರುತ್ತದೆ. ಸಮೂಹ ಮಾಧ್ಯಮ ಖಾಸಗಿ ಒಡೆತನದಲ್ಲಿರಲಿ, ಸರ್ಕಾರಿ ಸಾಮ್ಯದಲ್ಲಿರಲಿ, ಅದು ಬಿತ್ತರಿಸುವ ಸುದ್ದಿ, ವಿಷಯ, ಸಂಗತಿ ಸಾರ್ವತ್ರಿಕವಾಗಿರುತ್ತದೆ. ಅಂದರೆ ಯಾವುದೇ ಕಾರಣಕ್ಕೂ ಅದು ವೈಯಕ್ತಿಕ ವಿಷಯವನ್ನು ಸಂವಹನ ಮಾಡಲು ಇಚ್ಛಿಸುವುದಿಲ್ಲ. ಸಾರ್ವತ್ರಿಕ ಮಾಹಿತಿಯನ್ನು ಮಾತ್ರ ಬಿತ್ತರಿಸುವುದು ಮಾಧ್ಯಮದ ಗುಣವಾಗಿದೆ.

ಮಾಧ್ಯಮಗಳಿಗೆ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸುವ ಬದ್ಧತೆ ಇರಬೇಕು. ಇಂದು ಮಾಧ್ಯಮ ಕ್ಷೇತ್ರ ನಾಗಲೋಟದಲ್ಲಿ ಬೆಳೆಯುತ್ತಿದೆ. ತಂತ್ರಜ್ಞಾನಕ್ಕೆ ಈ ಕ್ಷೇತ್ರ ಹೊರಳಿಕೊಳ್ಳುತ್ತಿದೆ.

ಆದರೆ ಇದರ ನಡುವೆ ಮಾನವೀಯ ಕಳಕಳಿಯುಳ್ಳ ಜನಸಾಮಾನ್ಯರ ಸಂಕಷ್ಟಗಳಿಗೆ ಸ್ಪಂದಿಸುವ ಸುದ್ದಿಗಳ ಕಡೆಗೆ ಗಮನ ಹರಿಸಬೇಕಿದೆ. ಸಮಾಜದ ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆ ಗಮನ ಹರಿಸಬೇಕಿದೆ. ಸಂವಹನ ಮಾಧ್ಯಮಗಳಿಗೆ ರಾಜ್ಯ, ದೇಶಗಳೆಂಬ ಗಡಿರೇಖೆಗಳಿಲ್ಲ. ತನ್ನ ಸಮುದಾಯಗಳಿಗೆ ಮಾಹಿತಿ ಭಿತ್ತರಿಸುವಾಗ ಲಿಂಗ, ಜಾತಿ, ಧರ್ಮಗಳ ಬೇಧವನ್ನು ಮಾಡುವುದಿಲ್ಲ. ಸಂವಹನ ಮಾಧ್ಯಮ ಉದ್ಯಮ ಎಂಬ ಮಾತ್ರಕ್ಕೆ ತನ್ನ ಕೆಲಸಕಾರ್ಯಗಳನ್ನು ಲಾಭ ನಷ್ಟ ದೃಷ್ಟಿಯಿಂದ ನೋಡುವುದಿಲ್ಲ. ಮಾಧ್ಯಮ ತನ್ನ ಕಾರ್ಯಕ್ರಮಗಳಲ್ಲಿ ಸಮೂಹದ ಜನರು ಮಾನವೀಯ ಮೌಲ್ಯ, ನೈತಿಕತೆ, ರಾಷ್ಟ್ರೀಯ ಏಕತೆ, ಸತ್ಯನಿಷ್ಠೆಯನ್ನು ಅಳವಡಿಸಿಕೊಳ್ಳುವಂತಹ ಸಂದೇಶಗಳನ್ನು ಬಿತ್ತರಿಸಿ, ಪ್ರಜಾಪ್ರಭುತ್ವ ಸಮಾಜದ ಮೌಲ್ಯಗಳನ್ನು ಎತ್ತಿ ಹಿಡಿಯುತ್ತದೆ. ಮತ್ತು ಜನತೆ ಅದನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುತ್ತದೆ. ವಿಶಾಲವಾದ ಮನೋಭಾವನೆ ಇಟ್ಟುಕೊಂಡು ಸಂವಹನ ಮಾಡುತ್ತದೆ. ಹೊಸ ಹೊಸ ವೈಜ್ಞಾನಿಕ ಆವಿಷ್ಕಾರಗಳು ಸಮೂಹ ಮಾಧ್ಯಮ ಕ್ಷೇತ್ರದಲ್ಲಿ ಹೊರಹೊಮ್ಮುತ್ತಿರುವುದರಿಂದ ಅವುಗಳನ್ನು ಅಳವಡಿಸಿಕೊಳ್ಳ ಬೇಕಾಗಿರುತ್ತದೆ. ಯಂತ್ರಗಳಿದ್ದರೂ ಅದರ ನಿರ್ವಹಣೆಗೆ, ಸಂವಹನಕ್ಕೆ ಮಾನವ ಸಂಪನ್ಮೂಲಗಳ ಅವಶ್ಯಕತೆ ಇದೆ. ಇದನ್ನು ಹೊಂದಲು ಮಾಧ್ಯಮಗಳು ಹೆಚ್ಚಿನ ಬಂಡವಾಳವನ್ನು ತನ್ನ ಕಾರ್ಯಕ್ಷೇತ್ರಕ್ಕೆ ಹೂಡಬೇಕಾಗುತ್ತದೆ. ಸಮೂಹ ಮಾಧ್ಯಮ ಆರಂಭದಲ್ಲಿಯೇ ತನ್ನದೆ ಆದ ನಿರ್ದಿಷ್ಟ ಗುರಿಗಳನ್ನು ಹೊಂದಿರುತ್ತದೆ. ಮಾಧ್ಯಮಕ್ಕೆ ಸಾಮಾಜಿಕ ಸ್ವಾಸ್ಥ್ಯ, ವ್ಯಕ್ತಿ ಸ್ವಾತಂತ್ರ್ಯ ಮುಖ್ಯವಾದುದರಿಂದ ಭ್ರಷ್ಟಾಚಾರ ನಿರ್ಮೂಲನೆ, ಮೂಢನಂಬಿಕೆಗಳನ್ನು ಕಿತ್ತೆಸೆಯುವಲ್ಲಿ ತನ್ನದೆ ಆದ ಗುರಿಗಳನ್ನು ಹೊಂದಿರುತ್ತದೆ. ಸಮೂಹ ಮಾಧ್ಯಮಗಳು ಯಂತ್ರದ ಮೂಲಕ ವ್ಯವಹರಿಸುವುದರಿಂದ ಏಕಕಾಲಕ್ಕೆ ಕೋಟ್ಯಾಂತರ ಜನರನ್ನು ತಲುಪುವ ಶಕ್ತಿ ಸಾಮರ್ಥ್ಯವನ್ನು ಹೊಂದಿರುತ್ತದೆ. ಸರ್ಕಾರದ ಯೋಜನೆಗಳ ಹಿಂದಿನ ಉದ್ದೇಶ, ಅವುಗಳ ಸಂಪೂರ್ಣ ಮಾಹಿತಿಗಳು ಮಾಧ್ಯದಲ್ಲಿ ಬಿಂಬಿತವಾಗಬೇಕು. ಮಾಧ್ಯಮ ನೇರ, ನಿಷ್ಠುರ ಹಾಗೂ ಸತ್ಯನಿಷ್ಠ ವರದಿಗಳನ್ನು ನೀಡುತ್ತಾ ಮೌಲ್ಯಗಳನ್ನು ಸದಾಕಾಲ ಎತ್ತಿ ಹಿಡಿಯಬೇಕು. ದೇಶವನ್ನು ಧರ್ಮ, ಜಾತಿಯ ಹೆಸರಿನಲ್ಲಿ ವಿಭಜಿಸುವ ಶಕ್ತಿಗಳಿಂದ ಜನರನ್ನು ರಕ್ಷಿಸುವುದು ಹಾಗೂ ಸಂವಿಧಾನದ ಆಶಯಗಳನ್ನು ಈಡೇರಿಸುವುದು ಮಾಧ್ಯಮದ ಕೆಲಸವಾಗಿದೆ.

ಸಾಮಾನ್ಯವಾಗಿ ಸಮೂಹ ಮಾಧ್ಯಮಗಳ ಸುದ್ದಿ ತಾತ್ಕಾಲಿಕ ಆಸಕ್ತಿಯನ್ನು ಕೆರಳಿಸುತ್ತದೆ. ಕೆಲಹೊತ್ತು ಕಳೆದ ನಂತರ ವಿಷಯ ಮೇಲಿನ ಆಸಕ್ತಿ ಕ್ಷೀಣವಾಗುತ್ತದೆ. ಇದು ಸಮೂಹ ಮಾಧ್ಯಮಗಳಿಗೆ ದೊಡ್ಡ ಸವಾಲಾಗಿದೆ. ಆದ್ದರಿಂದ ಹೊಸ ಹೊಸ ಕಾರ್ಯಕ್ರಮಗಳನ್ನು ಬಿತ್ತರಿಸಬೇಕಾಗಿರುತ್ತದೆ. ವಿಷಯ ತಾಜಾತನದಿಂದ ಕೂಡಿರಬೇಕಾಗಿರುತ್ತದೆ. ಆಧುನಿಕ ಸಮಾಜದಲ್ಲಿ ಯಾವುದೇ ಅಭಿಪ್ರಾಯ ಮೂಡಿಸುವಲ್ಲಿ ಮಾಧ್ಯಮಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಪ್ರಭಾವಿ, ಪರಿಣಾಮಕಾರಿ, ವಿಶ್ವ ವ್ಯಾಪಕ, ಅಗ್ಗ ಹಾಗೂ ಕ್ಷಿಪ್ರ ಕಾರ್ಯಾಚರಣೆಯಿಂದಾಗಿ ಮಾಧ್ಯಮಗಳ ಮಹತ್ವ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಬಹುತೇಕ ಸಾರ್ವಜನಿಕ ನಿರ್ಧಾರಗಳು

ಮಾಧ್ಯಮಗಳಿಂದಲೇ ರೂಪಿಸಲ್ಪಡುತ್ತದೆ. ಸುದ್ದಿ ಸಂಗ್ರಹ ಮತ್ತು ಪ್ರಸಾರವೇ ಮಾಧ್ಯಮಗಳ ಪ್ರಮುಖ ಕಾರ್ಯವಾಗಿದ್ದು, ಸೌಹಾರ್ದತೆ ಕಾಪಾಡುವಲ್ಲಿ ಇದು ಮಹತ್ವದ್ದು. ಲೇಖನಿ ಖಡ್ಗಕ್ಕಿಂತಲೂ ಹರಿತ ಎನ್ನುವುದು ಹಳೆಯ ನಾಣ್ಣುಡಿಯಾದರೂ, ಇಂದಿಗೂ ಪ್ರಸ್ತುತ. ಇದೇ ಕಾರಣದಿಂದ ಆಧುನಿಕ ಸಮಾಜದಲ್ಲಿ ಮಾಧ್ಯಮ ಪ್ರಭಾವಶಾಲಿ.

ಟೆಲಿವಿಷನ್, ಸುದ್ದಿವಾಹಿನಿಗಳು, ಪತ್ರಿಕೆ, ನಿಯತಕಾಲಿಕ, ರೇಡಿಯೋ, ಮೊಬೈಲ್, ವೆಬ್‌ಪೋರ್ಟಲ್, ಇಂಟರ್‌ನೆಟ್, ಇ-ಮೇಲ್ ಹೀಗೆ ಸಾಂಪ್ರದಾಯಿಕ ಹಾಗೂ ಆಧುನಿಕ ಮಾಧ್ಯಮಗಳು ಜಗತ್ತನ್ನು ಕಿರಿದುಗೊಳಿಸಿವೆ. ಆದ್ದರಿಂದಲೇ ೨೧ನೇ ಶತಮಾನ ಸಂಪರ್ಕಯುಗ. ಈ ಕಾರಣದಿಂದ ಸಣ್ಣ ಸುದ್ದಿಯೂ ಸಮಾಜದ ಮೇಲೆ ದೊಡ್ಡ ಪರಿಣಾಮ ಬೀರುವ ಸಾಮರ್ಥ್ಯ ಹೊಂದಿದೆ. ಭಾರತದಂತ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರ ಮತ್ತು ಸಾರ್ವಜನಿಕರ ನಡುವಿನ ಕೊಂಡಿಯೇ ಮಾಧ್ಯಮ. ಸಂಘರ್ಷ ಮತ್ತು ಅಶಾಂತಿಯ ಸಂದರ್ಭದಲ್ಲಂತೂ ಮಾಧ್ಯಮಗಳ ಪಾತ್ರ ಇನ್ನಷ್ಟು ಮಹತ್ತರ. ದೇಶದ ಏಕತೆ, ಸಮಗ್ರತೆ ಕಾಪಾಡುವಲ್ಲಿ ಮಾಧ್ಯಮ ಅನಾದಿ ಕಾಲದಿಂದಲೂ ತನ್ನ ಕೊಡುಗೆ ನೀಡುತ್ತಾ ಬಂದಿದೆ. ಇತ್ತೀಚೆಗೆ ಅಲಕ್ಷಿತ ಸಮುದಾಯಗಳನ್ನು ಮಾಧ್ಯಮ ಗುರುತಿಸಿ ಅವುಗಳ ಸಮಸ್ಯೆ, ಬಿಕ್ಕಟ್ಟುಗಳ ಪರಿಹಾರಕ್ಕೆ ಹೋರಾಟ ನಡೆಸುತ್ತಿದೆ.

ಮಾಧ್ಯಮಗಳು ವಸ್ತು ನಿಷ್ಠವರದಿ ಮಾಡಬೇಕಿರುತ್ತದೆ. ಆದರೆ ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಸಮೂಹ ಮಾಧ್ಯಮಗಳು ಪ್ರಭಾವಿ ರಾಜಕೀಯ ವ್ಯಕ್ತಿಗಳ ಹಿಡಿತದಲ್ಲಿದ್ದು ಕುತಂತ್ರದಿಂದ ವಸ್ತುನಿಷ್ಠ ವರದಿಯನ್ನು ತಡೆಹಿಡಿದು, ಮಾಧ್ಯಮದವರಿಗೆ ವಿವಿಧ ಆಮಿಷಗಳನ್ನು ತೋರಿಸಿ ಸತ್ಯವನ್ನು ಮರೆಮಾಚಲಾಗುತ್ತದೆ. ಇದರಿಂದ ಜನಸಾಮಾನ್ಯರಿಗೆ ಅನ್ಯಾಯವಾಗಿ ಮಾನಹಾನಿ, ಜೀವಹಾನಿಯಾಗಿರುವುದು ಉಂಟು. ಇಂತಹ ಪರಿಸ್ಥಿತಿಯನ್ನು ಎದುರಿಸಿ ದಿಟ್ಟತನದಿಂದ ವಸ್ತುಸ್ಥಿತಿಯನ್ನು ವಿತರಿಸುವಂತಹ ಹೊಣೆಯನ್ನು ಸಮೂಹ ಮಾಧ್ಯಮಗಳು ಹೊರಬೇಕಾಗಿರುತ್ತದೆ.

"ಜನರಿಗೆ ಬೇಕಾದುದನ್ನು ಒದಗಿಸುವ ಹೊಣೆಗಾರಿಕೆ ಸಮೂಹ ಮಾಧ್ಯಮಗಳಿಗೆ ಇರಬೇಕು. ಯಾವ ವಿಷಯಕ್ಕೆ ಪ್ರಾಮುಖ್ಯತೆ ಕೊಡಬೇಕು, ಕೊಡಬಾರದು ಎಂಬ ಎಚ್ಚರಿಕೆಯಿಂದ ಹೊಣೆಗಾರಿಕೆ ಅರಿತಿರಬೇಕು. ಸಾಮಾಜಿಕ ಹೊಣೆಗಾರಿಕೆ ಚಳುವಳಿಯಿಂದ ಮಾತ್ರ ಬರಲು ಸಾಧ್ಯ ಚಳುವಳಿಯಿಂದ ಬಂದವರಿಗೆ ಹೊಣೆಗಾರಿಕೆ ಅರ್ಥ ತಿಳಿದಿರುತ್ತದೆ. ಸಮೂಹ ಮಾಧ್ಯಮದಲ್ಲಿ ಜಾತಿಯತೆ ಬಿಟ್ಟಾಗ ಹೊಸ ಜ್ಞಾನೋದಯ, ಹೊಸ ಬದುಕು ಸಿಕ್ಕಿ ಸಾಮಾಜಿಕ ಹೊಣೆಗಾರಿಕೆ ಅರ್ಥವಾಗುತ್ತದೆ".[೧] ಸಮೂಹ ಮಾಧ್ಯಮದಲ್ಲಿ ಜವಾಬ್ದಾರಿ ಹಾಗೂ ಶ್ರದ್ಧೆ, ಬದ್ಧತೆ, ಪರಿಶ್ರಮ ಬಹಳ ಮುಖ್ಯ.

೪.೩. ಆಶಯಗಳು

ಸಮಾಜದ ಜನರ ಧ್ವನಿಯನ್ನು/ವಿಚಾರವನ್ನು/ಭಾವನೆಯನ್ನು ನಮ್ಮ(ಮಾಧ್ಯಮದ) ವಿಚಾರವನ್ನಾಗಿ ಮಾಡಿ ಮಾಧ್ಯಮದ ಮುಖಾಂತರವಾಗಿ ಸರ್ಕಾರಕ್ಕೆ ತಿಳಿಯಪಡಿಸುವುದು ಹಾಗೂ ಸರ್ಕಾರವು ತೆಗೆದುಕೊಳ್ಳುವ ನೀತಿ ನಡಾವಳಿಕೆಯನ್ನು ಜನಸಾಮಾನ್ಯರಿಗೆ ತಿಳಿಯಪಡಿಸುವ ಒಂದು ಸೇತುವೆಯಾಗಿ ಸಮೂಹ ಮಾಧ್ಯಮ ಕಾರ್ಯ ನಿರ್ವಹಿಸುತ್ತದೆ. ಜನಸಾಮಾನ್ಯರಿಗೆ ಗೊತ್ತಿರುವ ಎಷ್ಟೋ ವಿಚಾರಗಳನ್ನು ಸರ್ಕಾರಕ್ಕೆ ತಿಳಿಯ ಪಡಿಸಲು ಸಾಧ್ಯವಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಈ ಜನರಲ್ಲಿರುವ ವಿಷಯವನ್ನು/ಅಭಿಪ್ರಾಯವನ್ನು ಸಂಗ್ರಹಿಸಿ ಮಾಧ್ಯಮ ಅದಕ್ಕೆ ಒಂದು ಸೂಕ್ತ ರೂಪ ಕೊಟ್ಟು ಸರ್ಕಾರಕ್ಕೆ ತಿಳಿಯಪಡಿಸುವ ಕಾರ್ಯ ಮಾಡುತ್ತದೆ. ರಕ್ಷಣೆಯ ವಿಚಾರದಲ್ಲಿ, ಸಮುದಾಯಗಳ ಮೇಲೆ ಬೆಳಕು ಚೆಲ್ಲುವುದರಲ್ಲಿ, ಆಧುನಿಕ ವೈಜ್ಞಾನಿಕ ವಿಷಯಗಳನ್ನು ತಿಳಿಯಪಡಿಸುವಲ್ಲಿ ಸಮೂಹ ಮಾಧ್ಯಮಗಳು ಮುಂಚೂಣಿಯಲ್ಲಿ ಕಾರ್ಯ ನಿರ್ವಹಿಸುತ್ತದೆ.

ತಂತ್ರಜ್ಞಾನದ ಆವಿಷ್ಕಾರದಲ್ಲಿ ಪೈಪೋಟಿ ಮಾಡದೇ ಕೆಲವು ಮಾಧ್ಯಮಗಳು ತೆರೆಯ ಮರೆಗೆ ಸರಿಯತೊಡಗಿದ್ದರೂ ಸಮಾಜಕಟ್ಟುವಲ್ಲಿ ಅವುಗಳು ನಿರ್ವಹಿಸಿದ ಪಾತ್ರವನ್ನು ಎಂದೂ ಮರೆಯಲು ಸಾಧ್ಯವಿಲ್ಲ. ಸಾಮಾಜಿಕ ಕಳಕಳಿ ಹೊಂದಿರುವ ಸಮೂಹ ಮಾಧ್ಯಮಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಿರೋದು ಪ್ರಜಾಪ್ರಭುತ್ವದ ಮೂಲಕ ಸಮಾಜದ ಉಳುವಿಗೆ ಕಾರಣವಾಗಿದೆ. ಸಾಮಾಜಿಕ ಕಳಕಳಿಯೇ ಸಮೂಹ ಮಾಧ್ಯಮಗಳ ಮುಖ್ಯ ಆಶಯ. ಸಮಾಜದ ಶಾಂತಿ ಭಂಗವಾಗದಂತೆ ನೋಡಿಕೊಂಡು, ಸಮಾಜ ಸರಿಯಾದ ಮಾರ್ಗದಲ್ಲಿ ಸಾಗುವಂತೆ ಮಾಡುವುದು, ಸಮಾಜದಲ್ಲಿನ ಅಪರಾಧ ಮನೋಭಾವನೆಗಳನ್ನು ತೊಡೆದುಹಾಕುವುದು, ಜನಸಾಮಾನ್ಯರಿಗೆ ಸಾಮಾಜಿಕ ಸ್ಥಾನಮಾನ ಒದಗಿಸುವುದು, ಸರ್ಕಾರದ ಸೌವಲತ್ತುಗಳು ಜನಸಾಮಾನ್ಯರು ಪಡೆಯಲು ಬೇಕಾದ ಪರಿಸರವನ್ನು ನಿರ್ಮಾಣ ಮಾಡುವುದು, ಅಲಕ್ಷಿತ ಸಮುದಾಯಗಳಿಗೆ ಸರ್ಕಾರದಿಂದ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತೆ ಮಾಡುವುದು, ಭ್ರಷ್ಟಾಚಾರ, ರಾಜಕೀಯ ಕುತಂತ್ರ, ಅಧಿಕಾರಿಗಳಿಂದ ಅಧಿಕಾರದ ದುರುಪಯೋಗವಾಗುತ್ತಿರುವುದನ್ನು ಜನತೆಗೆ ತಿಳಿಸಿ ಅದರ ಮೂಲವನ್ನೇ ಕಿತ್ತೆಸೆಯುವುದು, ಸಕಾರದ ಸಂಘ ಸಂಸ್ಥೆಗಳು ತೆಗೆದುಕೊಳ್ಳುವ ನಿರ್ಧಾರಗಳನ್ನು ಸಮಾಜಕ್ಕೆ ತಿಳಿಯಪಡಿಸಿ, ಸರಿ ಇದ್ದಲ್ಲಿ ಪ್ರೋತ್ಸಾಹಿಸಿ, ತಪ್ಪಿದ್ದಲ್ಲಿ ವಿರೋಧಿಸಿ ನಿರ್ಧಾರವನ್ನು ಕೈಬಿಡುವಂತೆ ಮಾಡುವುದು, ದೇಶ, ವಿದೇಶಗಳಲ್ಲಿನ ಪ್ರತಿಯೊಂದು ಘಟನೆಗಳನ್ನು ನೈಜವಾಗಿ ವರದಿ ಮಾಡುವುದು ಮಾಧ್ಯಮಗಳ ಪ್ರಮುಖ ಆಶಯಗಳಾಗಿವೆ.

ಸಮೂಹ ಮಾಧ್ಯಮಗಳ ಬೆಳವಣಿಗೆ ಮತ್ತು ಪ್ರಭಾವಗಳು ಹಿಂದೆಂದೂ ಕಾಣಲಾಗಿರದಷ್ಟು ಮತ್ತು ಇಪ್ಪತ್ತೊಂದನೆಯ ಶತಮಾನದಲ್ಲಿ ಗುರುತಿಸಲ್ಪಡುವ ಗುಣಲಕ್ಷಣಗಳಲ್ಲೊಂದಾಗಿದೆ. ಮಾಧ್ಯಮಗಳ ಪ್ರಭಾವಗಳು ಧನಾತ್ಮಕವಾಗಿರಬಹುದು ಅಥವಾ ಋಣಾತ್ಮಕವಾಗಿರಬಹುದು. ಅವುಗಳನ್ನು ಸಧ್ಯದಲ್ಲಿ ಸಾಮಾಜಿಕ ಸಂಶೋಧನೆಯ ಸಾಮಾನ್ಯ ಪದ್ಧತಿಗಳಿಂದ ಕಂಡುಹಿಡಿಯಲು ಸಾಧ್ಯವಿಲ್ಲವೆಂದು

ಹಲವಾರು ತಜ್ಞರು ಅಭಿಪ್ರಾಯ ಪಡುತ್ತಾರೆ. ಸಮೂಹ ಮಾಧ್ಯಮ ಕ್ಷೇತ್ರದಲ್ಲಿ ಆಗಿರುವ ಅಭೂತ ಪೂರ್ಣವಾದ ಬೆಳವಣಿಗೆಯಿಂದಾಗಿ ವ್ಯಕ್ತಿ ಮತ್ತು ಸಮಾಜದ ಮೇಲೆ ಹಲವಾರು ರೀತಿಯಿಂದ ಪರಿಣಾಮಗಳು ಬೀರಬಹುದು.

ಶಿಕ್ಷಣ, ಪ್ರಚಾರ ಮತ್ತು ಮನರಂಜನೆ ಎನ್ನುವುದು ಸಮೂಹ ಮಾಧ್ಯಮದ ಮುಖ್ಯ ಕಾರ್ಯಗಳು. ಜ್ಞಾನ ಎಂಬುದು ಅತ್ಯಂತ ಸಂಕೀರ್ಣ ಏಕೆಂದರೆ ಜ್ಞಾನ ಮತ್ತು ತಿಳುವಳಿಕೆ ಎಂದರೆ ಏನು ಎಂದು ವ್ಯಾಖ್ಯಾನ ನೀಡುವುದು ತುಂಬಾ ಕಷ್ಟದ ಕೆಲಸ. ಒಬ್ಬನಿಗೆ ಗೊತ್ತಿರದ ಸಂಗತಿ. ಬೇರೊಬ್ಬ ವ್ಯಕ್ತಿಗೆ ಗೊತ್ತಿದ್ದರೆ ಅದೇ ಜ್ಞಾನ ಎಂದು ಸರಳವಾಗಿ ಹೇಳಲಾಗದು. ನೇರವಾಗಿ ಹೇಳುವುದಾದರೆ ಗೊತ್ತಿಲ್ಲದ ಸಂಗತಿಯನ್ನು ತಿಳಿಸುವುದೇ ಜ್ಞಾನ. ಮಾಧ್ಯಮಗಳು ಕೂಡ ಜಗತ್ತಿನ ಆಗು ಹೋಗುಗಳ ಮಾಹಿತಿಯನ್ನು ನೀಡುವ ಉದ್ದೇಶವನ್ನು ಹೊಂದಿರುತ್ತದೆ. ಈ ಕಾರಣವನ್ನು ಪ್ರಧಾನವಾಗಿಟ್ಟುಕೊಂಡು ಗ್ರಾಹಕರ ಮನ ಗೆಲ್ಲಲು ಮಾಧ್ಯಮಗಳು ಸ್ಪರ್ಧಿಗಿಳಿದಿವೆ. ಮನುಷ್ಯ ಜ್ಞಾನದಾಹಿ. ತನ್ನ ಜ್ಞಾನ ಸೀಮೆಯ ವಿಸ್ತಾರಕ್ಕೆ ಸಮೂಹ ಮಾಧ್ಯಮಗಳಿಗೆ ಮಾರು ಹೋಗಿದ್ದಾನೆ. ಮಾಧ್ಯಮಗಳು ಸಹ ಗ್ರಾಹಕರ ಜ್ಞಾನ ದಾಹವನ್ನು ತೀರಿಸಲು ಹೊಸ ಹೊಸ ವಿಷಯಗಳ ಮಾಹಿತಿಯನ್ನು ನೀಡುತ್ತಿವೆ. ಜ್ಞಾನ ಒದಗಿಸಬಲ್ಲ ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಿವೆ. ಸಮೂಹ ಮಾಧ್ಯಮಗಳು ಸಮಾಜವನ್ನು ತಿದ್ದುವ ಕೆಲಸವನ್ನು ಮಾಡುತ್ತವೆ ಎಂದ ಮಾತ್ರಕ್ಕೆ ಸಾಂಪ್ರದಾಯಿಕ ಶಿಕ್ಷಣ ಕೇಂದ್ರಗಳಂತೆ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಮಾಹಿತಿ ನೀಡುವುದಿಲ್ಲ. ವಿದ್ಯಾರ್ಥಿಗಳನ್ನು ಒಳಗೊಂಡಂತೆ ಸಮಾಜದ ಪ್ರತಿಯೊಬ್ಬ ಸದಸ್ಯರನ್ನು ಗಮನವಿರಿಸಿ ಜ್ಞಾನದ ತಿಳುವಳಿಕೆಯನ್ನು ಬಿತ್ತರಿಸುತ್ತದೆ.

"ಮಾಧ್ಯಮಗಳಿಗೆ ಲಿಂಗ, ಮತ, ಧರ್ಮ, ವಯಸ್ಸು, ಜಾತಿಗಳ ಭೇದವಿಲ್ಲ. ಹೊಸದಾದ ಹತ್ತು ಹಲವಾರು ವಿಷಯಗಳ ಬಗ್ಗೆ ವಿವರವಾದ ಶಿಕ್ಷಣವನ್ನು ದಿನಾಲೂ ಮಾಧ್ಯಮ ನೀಡುತ್ತಿದೆ. ಅಷ್ಟೇ ಅಲ್ಲದೆ ಮೌಢ್ಯ, ಕಂದಾಚಾರಗಳನ್ನು ಬಿಡುವ ಬಗ್ಗೆ ತಜ್ಞ ಪಂಡಿತರಿಂದ ವಿವರಣೆ, ವಿಶ್ಲೇಷಣೆಗಳನ್ನು ನೀಡುತ್ತ ಬಂದಿದೆ. ಇದರಿಂದ ಸಮಾಜ ತನ್ನ ತಪ್ಪನ್ನು ತಿದ್ದಿಕೊಂಡು ಸುಶಿಕ್ಷಿತಗೊಳ್ಳುತ್ತಿದೆ".[೨]

ಮಾಧ್ಯಮ ನಿರ್ವಹಿಸುವ ಮಾಹಿತಿ ಸಂಗ್ರಹ ಹಾಗೂ ಪ್ರಚಾರ ಕಾರ್ಯ ನಿರಂತರವಾಗಿ ಮನುಷ್ಯನಿಗೆ ಬೇಕಾಗುವ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಡುತ್ತದೆ. ಭಾವೈಕ್ಯದ ಶಿಕ್ಷಣವನ್ನು ನೀಡುತ್ತದೆ. ಮನರಂಜನೆಯ ಮೂಲಕ ತಿಳುವಳಿಕೆಯನ್ನು ಮೂಡಿಸುತ್ತದೆ. ಈ ರೀತಿಯಿಂದ ಪ್ರತಿ ಮಾಧ್ಯಮಗಳು ಪೈಪೋಟಿಗೆ ಇಳಿದು ತಾಜಾ ಸುದ್ದಿಗಳನ್ನು ಬಿತ್ತರಿಸುತ್ತಿವೆ. ಸುದ್ದಿಯ ಜೊತೆಗೆ ಭೌಗೋಳಿಕ ವಿವರಣೆ ಹಾಗೂ ಹವಾಮಾನದ ಮುನ್ಸೂಚನೆಯನ್ನು ನೀಡುವುದರಿಂದ ಜನತೆಗೆ ಮುಂಜಾಗ್ರತಾ ಕ್ರಮ ಕೈಗೊಳ್ಳುವ ಹಾಗೆ ಮಾಹಿತಿ ನೀಡಿ ತುಂಬಾ ಅನುಕೂಲ ಮಾಡಿಕೊಡುತ್ತದೆ.

ಇಂದಿನ ದಿನಗಳಲ್ಲಿ ಮಾಧ್ಯಮ ಸಮಾಜದ ಸೂಕ್ಷ್ಮ ಅವಶ್ಯಕತೆಗಳನ್ನು ಅರಿತು ಮಕ್ಕಳ ಆರೋಗ್ಯದ ರಕ್ಷಣೆ, ಪರೀಕ್ಷಾ ಸಿದ್ಧತೆ, ವೃತ್ತಿಗೆ ಸಂಬಂಧಿಸಿದ ಹಾಗೆ ರೈತರಿಗೆ, ಕಾರ್ಮಿಕರಿಗೆ, ಉದ್ಯಮಿಗಳಿಗೆ ಅಗತ್ಯ ಮಾಹಿತಿ ಮತ್ತು ಸಮಸ್ಯೆಗಳಿಗೆ ಪರಿಹಾರ, ಮಾರ್ಗದರ್ಶನ ನೀಡುತ್ತದೆ. ನೈತಿಕತೆಗೆ ಒತ್ತು ಕೊಡುವುದರಿಂದ ಇಂದಿನ ಸಮಾಜ ಬದಲಾವಣೆಯಾಗುತ್ತಿರುವುದನ್ನು ಕಾಣಬಹುದಾಗಿದೆ. ಔಪಚಾರಿಕ ಶಿಕ್ಷಣವಲ್ಲದೇ ಸಾಂಪ್ರದಾಯಿಕ ಶಿಕ್ಷಣವನ್ನು ನೀಡುತ್ತಿದೆ ಎನ್ನುವುದಕ್ಕೆ ಶೈಕ್ಷಣಿಕ ಆಧಾರಿತ ಕಾರ್ಯಕ್ರಮಗಳೇ ಸಾಕ್ಷಿ. ಶಿಕ್ಷಣಕ್ಕಾಗಿಯೇ ರೇಡಿಯೋ ಮಾಧ್ಯಮ ಅನೇಕ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಿದೆ. ಪತ್ರಿಕಾ ಮಾಧ್ಯಮ ವಿದ್ಯಾರ್ಥಿಗಳಿಗಾಗಿ ಅನೇಕ ಸಂಚಿಕೆಗಳನ್ನು ಪ್ರಕಟಿಸುತ್ತಿದೆ. ಸುತ್ತಲಿನ ಪರಿಸರ, ಜೀವ ಜಗತ್ತು, ನಮ್ಮ ಪರಂಪರೆಯನ್ನು ತಿಳಿಸುವ ಮಾಧ್ಯಮಗಳಲ್ಲಿ ಅತ್ಯಂತ ಪ್ರಭಾವಶಾಲಿಯಾಗಿ ಬೆಳೆಯುತ್ತಿರುವ ಕಂಪ್ಯೂಟರ್ ಬಳಕೆಯು ಒಂದು ಶೈಕ್ಷಣಿಕ ಕ್ಷೇತ್ರವಾಗಿದೆ. ಓದು ಬರಹ ಅರಿತಿದ್ದರೂ ಮುಂಬರುವ ದಿನಗಳಲ್ಲಿ ಕಂಪ್ಯೂಟರ್ ಬಳಕೆ ತಿಳಿಯದಿದ್ದರೆ ಅನಕ್ಷರಸ್ಥರೆನಿಸಿಕೊಳ್ಳುವ ಸಾಧ್ಯತೆ ಇದೆ. ಸಮಾಜವನ್ನು ತಿದ್ದುವ ಹಾಗೂ ಸುಶಿಕ್ಷಣ ನೀಡುವ ನಿಟ್ಟಿನಲ್ಲಿ ಸಮೂಹ ಮಾಧ್ಯಮ ಕಾರ್ಯ ನಿರ್ವಹಿಸುತ್ತಿದೆ. ಅದಕ್ಕಾಗಿ ಯುಜಿಸಿ, ಎನ್‌ಸಿಆರ್‌ಟಿ ಪ್ರಯೋಜಕತ್ವವನ್ನು ದೂರದರ್ಶನ ಪಡೆಯುತ್ತಿದೆ.

ಯಾವುದೇ ಒಂದು ಸಂಸ್ಥೆ ಅಥವಾ ಉದ್ಯಮಕ್ಕೆ ಪ್ರಚಾರ ಅತ್ಯವಶ್ಯ. ಪ್ರಚಾರ ಎಂದರೆ ಜನಪ್ರಿಯಗೊಳಿಸುವುದು ಎಂದರ್ಥ. ಒಂದು ಉದ್ಯಮ ತನ್ನಸೇವೆ ಹಾಗೂ ತನ್ನ ಉತ್ಪನ್ನದ ಉಪಯೋಗಗಳನ್ನು ಸಾರ್ವಜನಿಕರಿಗೆ ತಿಳಿಸಬೇಕು. ತನ್ನ ಉತ್ಪನ್ನ ಹೆಸರುವಾಸಿಯಾಗಬೇಕೆಂದು ಮಾಧ್ಯಮದ ಮೂಲಕ ತನ್ನ ಉತ್ಪಾದನೆಗೆ ಸಂಬಂಧಿಸಿದಂತೆ ನೀಡುವ ವಿವರಣೆಯೇ ಪ್ರಚಾರವಾಗುತ್ತದೆ.

ಮಾಧ್ಯಮದ ಮೊದಲ ಆದ್ಯತೆ ಪ್ರಸಾರ ಮಾಡುವ ಮಾಹಿತಿಯನ್ನು ಪ್ರಚಾರ ಮಾಡುವುದು. ಏಕಕಾಲಕ್ಕೆ ಒಂದು ಸಮೂಹವನ್ನು ತಲುಪುವುದರಿಂದ ಮಾಧ್ಯಮದಲ್ಲಿ ಚಿಕ್ಕ ಸಂಗತಿ ಕೂಡ ಬಹು ಬೇಗ ಪ್ರಚಾರ ಪಡೆದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಅವಕಾಶ ಕೊಡುತ್ತದೆ. ಯಾವುದೇ ಒಬ್ಬ ಸಾಹಿತಿ, ವಿಜ್ಞಾನಿ, ರಾಜಕೀಯ ವ್ಯಕ್ತಿ ಮುಂತಾದವರು ಜನಪ್ರಿಯಗೊಳ್ಳುವುದು ಮಾಧ್ಯಮದ ಪ್ರಚಾರದಿಂದ. ಹಾಗೆ ಮಾರುಕಟ್ಟೆ ಪ್ರವೇಶಿಸುವ ಹೊಸ ಹೊಸ ಉಪಕರಣಗಳು ಜನತೆಯನ್ನು ತಲುಪಿ ಜನಪ್ರಿಯತೆ ಗಳಿಸುವುದು ಮಾಧ್ಯಮಗಳು ನೀಡುವ ಜಾಹೀರಾತಿನಿಂದಲೇ. ಮಾಧ್ಯಮಗಳು ನೀಡುವ ಪ್ರಚಾರದಿಂದ ಬೆಳಕಿಗೆ ಬಾರದ ಎಷ್ಟೋ ತಂತ್ರಜ್ಞಾನ, ಕೈಗಾರಿಕೆಯ ಉತ್ಪನ್ನಗಳಾಗಿರಬಹುದು ಬೆಳಗಾಗುವಷ್ಟರಲ್ಲಿ ಅದನ್ನು ಜನಪ್ರಿಯಗೊಳಿಸುವ ಸಾಮರ್ಥ್ಯ ಸಮೂಹ ಮಾಧ್ಯಮಗಳಿಗಿದೆ. ಸಾಮಾನ್ಯವಾಗಿ ಪ್ರಚಾರವನ್ನು, ಪ್ರಚಾರ ಪಡೆಯುವ ಉದ್ಯಮವೇ ಮಾಡುವ ಕಾರ್ಯಕ್ರಮವನ್ನು ವಯಕ್ತಿಕ ಪ್ರಚಾರವೆಂದು, ಕರಪತ್ರ, ಗೋಡೆ ಬರಹ, ಬ್ಯಾನರ್, ಸಮೂಹ ಮಾಧ್ಯಮಗಳ ಮೂಲಕ ಒಂದು ಸಂಸ್ಥೆ ಅಥವಾ ಪ್ರಚಾರವನ್ನು ಬಯಸಿದರೆ ಅದು ಸಾಮಾನ್ಯ

ಪ್ರಚಾರ ಎನ್ನುತ್ತಾರೆ. ಇಂದಿನ ದಿನಗಳಲ್ಲಿ ವಾಣಿಜ್ಯ ವ್ಯಾಪಾರ, ಷೇರುಪೇಟೆಗಳ ಮಾಹಿತಿಯನ್ನು ತಿಳಿಯಲು ಮತ್ತು ತಿಳಿಸಲು ಸಮೂಹ ಮಾಧ್ಯಮಗಳ ಪ್ರಚಾರ ಪಡೆಯುವುದು ಅತ್ಯಗತ್ಯ. ಆದಿಯಿಂದಲೂ ಮಾನವ ಮನರಂಜನಾ ಪ್ರಿಯ. ಮನರಂಜನೆಗಾಗಿ ಹಲವಾರು ಮಾರ್ಗಗಳನ್ನು ಕಂಡುಕೊಂಡಿದ್ದಾನೆ. ಮನುಷ್ಯನ ಮನಸ್ಸನ್ನು ರಂಜಿಸಿ, ಮುದನೀಡುವ ಕೆಲಸವನ್ನು ಸಮೂಹ ಮಾಧ್ಯಮಗಳು ಮಾಡುತ್ತವೆ. ಸಮೂಹ ಮಾಧ್ಯಮಗಳ ಮೊದಲ ಆದ್ಯತೆ ಮನರಂಜನೆ. ದಿನದ ಜಂಜಾಟದಲ್ಲಿ ಬೇಸತ್ತಿರುವ ಮನುಷ್ಯನಿಗೆ ರಂಜನೆ ಒದಗಿಸುವ ಕೆಲಸ ಸಮೂಹ ಮಾಧ್ಯಮ ಮಾಡುತ್ತದೆ. ಇಂದಿನ ಮಾಧ್ಯಮಗಳು ಪರಂಪರಾಗತವಾದ ಸಾಮಾಜಿಕ ಮನ್ನಣೆ ಗಳಿಸಿರುವ ಕಲೆ, ಸಾಹಿತ್ಯ, ನೃತ್ಯ ನಾಟಕಗಳನ್ನು ಬಳಸಿಕೊಂಡು ಹೊಸ ತಂತ್ರಗಾರಿಕೆಯೊಂದಿಗೆ ಮನಸ್ಸನ್ನು ಮುದಗೊಳಿಸುವ ಕಾರ್ಯವನ್ನು ಮಾಡುತ್ತಿದೆ.

೪.೪. ಅಲಕ್ಷಿತ ಸಮುದಾಯಗಳನ್ನು ಮುಖ್ಯವಾಹಿನಿಗೆ ಪರಿಚಯಿಸುವಲ್ಲಿ ಸಮೂಹ ಮಾಧ್ಯಮದ ಪಾತ್ರ

ಸಾಮಾಜಿಕವಾಗಿ, ಆರ್ಥಿಕವಾಗಿ ಅಲಕ್ಷಿತ ಸಮುದಾಯಗಳನ್ನು ಸಬಲೀಕರಿಸಬೇಕೆಂಬ ಉದ್ದೇಶ ಸರ್ಕಾರದ ಯೋಜನೆಗಳಿಗೆ ಇರುತ್ತದೆ. ಆದರೆ ಅಲಕ್ಷಿತ ಸಮುದಾಯಗಳ ಸಮಸ್ಯೆಗಳು ಪ್ರದೇಶದಿಂದ ಪ್ರದೇಶಕ್ಕೆ, ಜನಸಂಖ್ಯೆಯ ಅನುಗುಣವಾಗಿಯೂ ಭಿನ್ನವಾಗಿರುತ್ತದೆ. ಇಂತಹ ಸಮಯದಲ್ಲಿ ಸರ್ಕಾರದ ಯೋಜನೆಗಳಿಗೆ ಮಾನವೀಯ ಮುಖವೂ ಇರಬೇಕಾಗುತ್ತದೆ. ಎಲ್ಲಾ ಕಡೆ ಒಂದೇ ನೀತಿಯನ್ನು ಸರ್ಕಾರ ಜಾರಿಗೊಳಿಸುವುದರಿಂದ ಆಗುವ ಅಪಾಯವನ್ನು ಸಮೂಹ ಮಾಧ್ಯಮಗಳು ವಿರೋಧಿಸಿ ಆಯಾ ಪ್ರದೇಶಕ್ಕೆ ಬೇಕಾಗುವ ಯೋಜನೆಗಳನ್ನು ಜಾರಿಗೊಳಿಸುವ ಹಾಗೆ ಮಾಡಬೇಕು. ಇದರಿಂದ ಅಲಕ್ಷಿತ ಸಮುದಾಯಗಳ ಆರ್ಥಿಕ, ಸಾಮಾಜಿಕ ಸಬಲೀಕರಣ ಸಾಧ್ಯ.

"ಅಲಕ್ಷಿತ ಸಮುದಾಯಗಳ ಮೂಲ ವೃತ್ತಿಯನ್ನಾಧರಿಸಿ ಅವರಿಗೆ ಅನುಕೂಲವಾಗುವ ಯೋಜನೆಗಳನ್ನು ಜಾರಿಗೊಳಿಸಬೇಕು. ಅಂದರೆ ಒಳನಾಡಿನ ಮೀನುಗಾರರಿಗೆ ಕೃಷಿ ಭೂಮಿ ನೀಡುವ ಬದಲು ಯಾವಾಗಲೂ ತುಂಬಿರುವ ಕೆರೆಗಳನ್ನು ಗುತ್ತಿಗೆ ಕೊಡುವುದರಿಂದ ಇವರ ಆರ್ಥಿಕ ಮಟ್ಟ ತಾನಾಗಿಯೇ ಅಭಿವೃದ್ಧಿಯಾಗುತ್ತದೆ. ಅಲಕ್ಷಿತ ಸಮುದಾಯಗಳ ಅಭಿವೃದ್ಧಿ ನೀತಿ ಹೆಚ್ಚು ಸರಳವೂ, ನಮ್ಯವೂ ಆಗಿರುವಂತೆ ಸಮೂಹ ಮಾಧ್ಯಮಗಳು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕು".[೩]

ಸರ್ಕಾರ ಅಲಕ್ಷಿತ ಸಮುದಾಯಗಳಿಗಾಗಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡಿರುತ್ತದೆ. ಈ ಯೋಜನೆಗಳ ಬಗ್ಗೆ ಅಲಕ್ಷಿತ ಸಮುದಾಯಗಳಿಗೆ ಕಿಂಚಿತ್ತು ಗೊತ್ತಿರುವುದಿಲ್ಲ. ಇದರಿಂದ "ಸರ್ಕಾರದ ಯೋಜನೆಗಳು ವಿಫಲವಾಗುತ್ತದೆ. ಅದಕ್ಕಾಗಿ ಸಮೂಹ ಮಾಧ್ಯಮಗಳು ಈ ಯೋಜನೆಗಳ ವಿವರವನ್ನು ಅಲಕ್ಷಿತ ಸಮುದಾಯಗಳಿಗೆ ಅರ್ಥವಾಗುವಂತೆ ಪ್ರಕಟಿಸಬೇಕು.

ಈ ಯೋಜನೆಗಳ ಗುಣ-ಅವಗುಣಗಳನ್ನು ಅಲಕ್ಷಿತ ಸಮುದಾಯಗಳು ತಿಳಿಯುವಂತಾಗಬೇಕು. ಸರ್ಕಾರ ರೂಪಿಸಿದ ಯೋಜನೆಗಳು ಅಲಕ್ಷಿತ ಸಮುದಾಯಗಳನ್ನು ತಲುಪುತ್ತಿಲ್ಲ. ಈ ಯೋಜನೆಗಳನ್ನು ದಕ್ಕಿಸಿಕೊಳ್ಳಬೇಕೆಂದರೆ ಸರ್ಕಾರಿ ಅಧಿಕಾರಿಗಳಲ್ಲಿ ಭಿಕ್ಷೆಯ ರೂಪದಲ್ಲಿ ಪಡೆದುಕೊಳ್ಳಬೇಕು".[೪] ಈ ತರಹದ ಸಮಸ್ಯೆಗಳನ್ನು ಸಮೂಹ ಮಾಧ್ಯಮಗಳು ಸರ್ಕಾರಕ್ಕೆ ಹಾಗೂ ಜನತೆಗೆ ತಿಳಿಸಿ, ಅಲಕ್ಷಿತ ಸಮುದಾಯಗಳ ಮೇಲೆ ಭ್ರಷ್ಟ ಅಧಿಕಾರಿಗಳಿಂದಾಗುವ ಮೋಸವನ್ನು ಕೊನೆಗಾಣಿಸಬೇಕು.

ಅಲಕ್ಷಿತ ಸಮುದಾಯಗಳ ಕ್ಷೇತ್ರದಲ್ಲಿ ಆರಿಸಿ ಬಂದ ಯಾವುದೇ ರಾಜಕೀಯ ಪಕ್ಷದ ಕರುಣೆಯ ಫಲದಿಂದಲೇ ಅಲಕ್ಷಿತ ಸಮುದಾಯಗಳು ದಿನನಿತ್ಯ ಜೀವನ ಸಾಗಿಸುವಂತಹ ಸ್ಥಿತಿ ನಿರ್ಮಾಣವಾಗಿದೆ. ಮುಖ್ಯವಾಹಿನಿ ಎಂಬುದು ತನ್ನೆಲ್ಲ ನಿರ್ದಯಿ ಸ್ಪರ್ಧಾ ಮನೋಭಾವದಿಂದಾಗಿ ತನ್ನ ಬೇಡಿಕೆಗಳನ್ನು ಹಠಬಿದ್ದು ಪೂರೈಸಿಕೊಳ್ಳುತ್ತದೆ. ಆದರೆ ಅಲಕ್ಷಿತ ಸಮುದಾಯಗಳು ಈ ಸ್ಥಿತಿಯಲ್ಲಿಲ್ಲ. ಕತ್ತಲೆಯಲ್ಲಿ ಆನೆ ಮೈ ತಡವಿದಂತೆ, ಸರ್ಕಾರ ಯೋಜನೆಗಳ ಸ್ವರೂಪ, ಉದ್ದೇಶ ಮತ್ತು ಗುರಿಗಳು ಕುರಿತು ಅಲಕ್ಷಿತ ಸಮುದಾಯಗಳಿಗೆ ಏನೇನು ಗೊತ್ತಿಲ್ಲದ ಸ್ಥಿತಿಯಲ್ಲಿದ್ದಾರೆ. ಅಲಕ್ಷಿತ ಸಮುದಾಯಗಳು ಅನಾದಿಕಾಲದಿಂದ ಎಲ್ಲ ಬಗೆಯ ಆರ್ಥಿಕ, ಸಾಮಾಜಿಕ ವಂಚನೆಗಳನ್ನು ಸಹಿಸಿಕೊಂಡು ಬಂದಿದ್ದಾರೆ. ಮುಖ್ಯವಾಹಿನಿಯ ಜನ ಇವರನ್ನು ಯಾವುದೋ ಲೋಕದ ಜನರಂತೆ ಅಸ್ಪ್ರಶ್ಯರನ್ನು ನೋಡಿದಂತೆ ನೋಡುತ್ತಾರೆ. ದುರಂತವೆಂದರೆ ಅಲಕ್ಷಿತ ಸಮುದಾಯಗಳು ಯಾರೆಂದು ಗೊತ್ತಿಲ್ಲದ ಅಧಿಕಾರಿಗಳಿಂದ ಮತ್ತು ಅವರ ಬದುಕಿನ ಕಿಂಚಿತ್ತು ಪರಿಚಯವಿರದ ಜನಗಳಿಂದ ಅಲಕ್ಷಿತ ಸಮುದಾಯಗಳನ್ನು ಅಭಿವೃದ್ಧಿ ಪಡಿಸುವ ಯೋಜನೆಗಳು ರೂಪಿಸಲ್ಪಡುತ್ತವೆ. ಇಂಥಹ ದುರಂತಗಳನ್ನು ಸಮೂಹ ಮಾಧ್ಯಮಗಳು ಸರ್ಕಾರದ ಗಮನಕ್ಕೆ ತಂದು ಅಲಕ್ಷಿತ ಸಮುದಾಯಗಳ ಬಗ್ಗೆ ತಿಳಿದಿರುವ ಅಧಿಕಾರಿಗಳಿಂದ ಅಭಿವೃದ್ಧಿ ಯೋಜನೆಗಳನ್ನುರೂಪಿಸುವ ಹಾಗೆ ಮಾಡಬೇಕು.

"ಭಾರತದ ನೌಕರರ ಶಾಹಿ ಸಂಪೂರ್ಣವಾಗಿ ಬಂಡವಾಳ ಶಾಹಿ ಸರ್ಕಾರದ ನೀತಿಗಳನ್ನು ರೂಪಿಸುವುದರಲ್ಲಿ ಕಾಲಕಳೆಯುತ್ತದೆ. ಅದಕ್ಕೆ ಬೃಹತ್ ಬಂಡವಾಳ ತೊಡಗಿಸುವ ಮತ್ತು ಅದರ ದುಪ್ಪಟ್ಟು ಲಾಭಗಳಿಸುವ ಗುರಿ ಬಿಟ್ಟರೆ, ಈ ದೇಶದ ಅಲಕ್ಷಿತ ಸಮುದಾಯಗಳ ಹಸಿವಾಗಲೀ, ದೈನಂದಿನ ಸ್ಥಿತಿಯಾಗಲೀ ಕಣ್ಣಿಗೆ ಕಾಣುವುದಿಲ್ಲ. ಯಾವುದೇ ಪಕ್ಷದ ಜನವಿರಲೀ, ಯಾವುದೇ ಸೈದ್ಧಾಂತಿಕ ಘೋಷಣೆಗಳನ್ನಿಟ್ಟುಕೊಂಡು ರಾಜಕಾರಣಕ್ಕೆ ಬಂದರೂ, ಅಧಿಕಾರ ಸಿಕ್ಕ ತಕ್ಷಣ ಈ ಜನ ಅಲಕ್ಷಿತ ಸಮುದಾಯಗಳನ್ನು ನಿರ್ಲಕ್ಷಿಸುತ್ತಾರೆ. ಇಂತಹ ಧೋರಣೆಗಳನ್ನು ಸಮೂಹ ಮಾಧ್ಯಮಗಳು ಖಂಡಿಸಿ ರಾಜಕೀಯ ವ್ಯಕ್ತಿಗಳು ಅಲಕ್ಷಿತ ಸಮುದಾಯಗಳ ಪರವಾಗಿ ನಿಂತು ಅಭಿವೃದ್ಧಿ ಮಾಡಬೇಕೆಂಬ ಹಠ ಬರುವಂತೆ ಮಾಡಬೇಕು".[೫]

ಸರ್ಕಾರದ ಅಲಕ್ಷಿತ ಸಮುದಾಯಗಳ ಅಭಿವೃದ್ಧಿಗೆ ಪಂಚವಾರ್ಷಿಕ ಯೋಜನೆಗಳಲ್ಲಿ ಹಣ ಮೀಸಲಾಗಿಡುತ್ತಿದೆ. ಆದರೆ ಅದು ಅಲಕ್ಷಿತ ಸಮುದಾಯಗಳಿಗೆ ತಲುಪುತ್ತಿಲ್ಲ. ಅಲಕ್ಷಿತ ಸಮುದಾಯಗಳ

ಪಾಲ್ಗೊಳ್ಳುವಿಕೆ ಇಲ್ಲದ ಯೋಜನೆಗಳು ಕ್ರಮಬದ್ಧವಾಗಿ ರೂಪುಗೊಳ್ಳುವುದಿಲ್ಲ. ಆದ್ದರಿಂದ ಸಮೂಹ ಮಾಧ್ಯಮಗಳು ಅಲಕ್ಷಿತ ಸಮುದಾಯಗಳು ಪ್ರತಿ ಹಂತದಲ್ಲೂ ಪಾಲ್ಗೊಳ್ಳುವ ಹಾಗೆ ಸರ್ಕಾರಕ್ಕೆ ಮನವರಿಕೆ ಮಾಡಿ ಯೋಜನೆಗಳನ್ನು ಸಾಕಾರಗೊಳಿಸಬೇಕು.

ಮುಖ್ಯವಾಗಿ ಅಭಿವೃದ್ಧಿಯ ಫಲಗಳನ್ನು ಪಡೆಯುವ "ಅಲಕ್ಷಿತ ಸಮುದಾಯಗಳು ತಮಗೇನು ಬೇಕು ಎಂಬ ಬೇಡಿಕೆಗಳನ್ನು ಮಂಡಿಸುವಷ್ಟು ಬುದ್ಧಿವಂತರಿದ್ದಾರೆ. ಅವರು ಅನಕ್ಷರಸ್ಥರಾಗಿರಬಹುದು. ಆದರೆ ಅವರಿಗೆ ತಮ್ಮ ದೈನಂದಿನ ಬದುಕಿನ ಬಗ್ಗೆ ಸ್ಪಷ್ಟ ತಿಳುವಳಿಕೆ ಇದೆ".[೬] ಈ ಕಾರಣಕ್ಕೆ ಸಮೂಹ ಮಾಧ್ಯಮಗಳು ಅಲಕ್ಷಿತ ಸಮುದಾಯಗಳ ಜನರನ್ನು ಗ್ರಾಮ ಮಟ್ಟಗಳಲ್ಲಿ ಫಲಾನುಭವಿ ಸಮುದಾಯಗಳ ಯೋಜನೆಗಳನ್ನು ರೂಪಿಸುವಾಗ ಇವರನ್ನು ಪ್ರಧಾನವಾಗಿ ಪರಿಗಣಿಸುವ ಹಾಗೆ ಮಾಡಬೇಕು. ಯೋಜನೆಯ ಪ್ರತಿ ಹಂತದಲ್ಲೂ ಅಲಕ್ಷಿತ ಸಮುದಾಯಗಳು ಪಾಲ್ಗೊಳ್ಳುವ ಹಾಗೆ ಮಾಡಬೇಕು. ಹೀಗೆ ಸಮೂಹ ಮಾಧ್ಯಮಗಳು ಮಾಡುವುದರಿಂದ ಅಲಕ್ಷಿತ ಸಮುದಾಯಗಳು ಮುಖ್ಯವಾಹಿನಿಗೆ ಬರುವಲ್ಲಿ ಸಹಾಯವಾಗುತ್ತದೆ.

ಕೊನೆ ಟಿಪ್ಪಣಿಗಳು

೧. ರವಿಶಂಕರ್ ಎನ್., ವಿಜಯವಾಣಿ ದಿನಪತ್ರಿಕೆ, ದಿನಾಂಕ ೧೭-೧೨-೨೦೧೭.

೨. ನಿರಗುಡಿ ಬಿ.ಎಚ್., ಮಾಧ್ಯಮ ಲೋಕ, ೨೦೧೨, ಪು. ೧೨.

೩. ಪ್ರಭಾಕರ ಎನ್.ಎಸ್. ಅವರ ಲೇಖನ ಆದಿವಾಸಿಗಳ ಆರ್ಥಿಕತೆ ಮತ್ತು ಮುಖ್ಯವಾಹಿನಿ, ಅನಿಕೇತನ, ದಿ.೧೦-೧೨-೨೦೧೫.

೪. ಅದೇ.

೫. ಪ್ರಭಾಕರ ಎನ್.ಎಸ್. ಅವರ ಲೇಖನ ಬುಡಕಟ್ಟು ಅಭಿವೃದ್ಧಿ, ಮಹಾಶ್ವೇತಾದೇವಿಯವರ ಚಿಂತನೆಗಳು ೧, ಅನಿಕೇತನ, ದಿ. ೨೩-೧೨-೨೦೧೬

೬. ಅದೇ.

◆◆◆

ಅಧ್ಯಾಯ : ಐದು

ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳ ನಡುವಿನ ಸಮಸ್ಯೆಗಳು, ಪರಿಣಾಮಗಳು ಹಾಗೂ ಪರಿಹಾರಗಳು

ಅಧ್ಯಾಯ : ಐದು

ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳ ನಡುವಿನ ಸಮಸ್ಯೆಗಳು, ಪರಿಣಾಮಗಳು ಹಾಗೂ ಪರಿಹಾರಗಳು

ಮೊದಲಿಗೆ ಭಾರತಕ್ಕೆ ೧೬ನೇ ಶತಮಾನದಲ್ಲಿ ಡಚ್ಚರು ಗೋವಾಕ್ಕೆ ಮುದ್ರಣಯಂತ್ರವನ್ನು ತಂದರು. ನಂತರ ವಾರ್ತಾ ಗ್ರಂಥಗಳು ಪ್ರಾರಂಭವಾಯಿತು. ಇದು ಪತ್ರಿಕೋದ್ಯಮದ ಮೊದಲ ಮೆಟ್ಟಿಲು. ಆದರೆ ಭಾರತೀಯ ಪ್ರಾಂತಿಯ ರಾಜರು ಇದನ್ನು ತೀವ್ರವಾಗಿ ವಿರೋಧಿಸಿದರು. (ರಾಜಾರಾಮ್ ಮೋಹನರಾಯ್ ಭಾರತದ ಮೊದಲ ಪತ್ರಕರ್ತರು. ಮೊದಲ ಕನ್ನಡ ಪತ್ರಿಕೆ ಮಂಗಳೂರು ಸಮಾಚಾರ.) ನಂತರ "೧೮, ೧೯, ೨೦ನೇ ಶತಮಾನದಲ್ಲಿ ಸಮೂಹ ಮಾಧ್ಯಮ ಕ್ಷಿಪ್ರ ಬೆಳವಣಿಗೆ ಕಂಡಿತು. ಇದರೊಂದಿಗೆ ಬಯಲಾಟ, ನಾಟಕ, ಯಕ್ಷಗಾನ ಮಾದರಿಯ ಮಾಧ್ಯಮ ಭಾರತದಲ್ಲಿ ಚಾಲ್ತಿಯಲ್ಲಿತ್ತು. ಇದರಲ್ಲಿಯೂ ಅಲಕ್ಷಿತ ಸಮುದಾಯಗಳ ಪಾತ್ರವಿತ್ತು. ಯಕ್ಷಗಾನಗಳಲ್ಲಿ ಹಾಗೂ ಬಯಲಾಟ, ನಾಟಕಗಳಲ್ಲಿ ವಿದ್ಯಾವಂತರು, ಅರೆ ವಿದ್ಯಾವಂತರು ಹಾಗೂ ವಿದ್ಯಾವಂತರ ಸಂಪರ್ಕದಲ್ಲಿರುವ ಅಲಕ್ಷಿತ ಸಮುದಾಯಗಳ ಜನರು ಇದ್ದರು. ಸಮೂಹ ಮಾಧ್ಯಮಲ್ಲಿ ಏನಾದರೂ ಅಲಕ್ಷಿತ ವರ್ಗದವರು ಬಂದಿದ್ದಾದರೆ ಅದು ಕೇವಲ ಇತ್ತೀಚಿನ ೫೦ ವರ್ಷಗಳಲ್ಲಿ ಮಾತ್ರ. ಆದರೆ ಜಾನಪದೀಯವಾಗಿ ಬಂದವರು ಅನೇಕರಿದ್ದಾರೆ. ಸಿನಿಮಾ ಕ್ಷೇತ್ರದಲ್ಲಿ ಮೊದಲು ಕೆಲವು ಆದಿವಾಸಿಗಳ ಪಾತ್ರಕ್ಕೆ ಸಿದ್ದಿಯರನ್ನು ಬಳಸಿಕೊಳ್ಳಲಾಗುತ್ತಿತ್ತು. ಸಿನಿಮಾದಲ್ಲಿ ಕೆಲವೊಂದು ಅಲಕ್ಷಿತ ಸಮುದಾಯಗಳ ನೃತ್ಯ, ಅವರ ದಿನನಿತ್ಯದ ಜೀವನಗಳನ್ನು ಚಿತ್ರೀಕರಿಸಲು ಕೆಲವೊಂದು ಅಲಕ್ಷಿತ ಸಮುದಾಯಗಳನ್ನು ಬಳಸಿಕೊಂಡಿದ್ದಾರೆ".[೧](ಹೆಚ್ಚಾಗಿ ಹಿಂದಿ ಸಿನಿಮಾಗಳಲ್ಲಿ).

ಬ್ರಿಟಿಷರು ಭಾರತಕ್ಕೆ ಬರುವ ಮೊದಲು ನಮ್ಮ ದೇಶದಲ್ಲಿ ಅಲಕ್ಷಿತ/ನಿರ್ಲಕ್ಷಿತ ಸಮುದಾಯವೆಂಬ ಭೇದವಿರಲಿಲ್ಲ. ಇಲ್ಲಿ ಪ್ರತಿಯೊಂದು ಸಮುದಾಯದವರಿಗೂ ಅವರದೇ ಆದ ಪ್ರಾಮುಖ್ಯತೆ ಇತ್ತು. ಏಣಿ–ಶ್ರೇಣಿಗಳ ವ್ಯವಸ್ಥೆ ಇದ್ದರೂ ಪ್ರತಿಯೊಂದು ಸಮುದಾಯಕ್ಕೂ ಅವರದೇ ಆದ ಪ್ರಮುಖ ಕರ್ತವ್ಯಗಳಿದ್ದವು. ಆದರೆ ಭಾರತಕ್ಕೆ ಬ್ರಿಟಿಷರು ಬಂದ ನಂತರ ಆದಿವಾಸಿಗಳನ್ನು ಮೂಲ ಭಾರತೀಯರು ಹಾಗೂ ಮಧ್ಯ ಏಷ್ಯಾದಿಂದ ಬಂದ ಆರ್ಯರು ಎಂಬ ಭೇದಭಾವನೆಯನ್ನು ಹುಟ್ಟು ಹಾಕಿದರು. ಮೂಲ ಆದಿವಾಸಿಗಳು ದ್ರಾವಿಡರು. ಅವರನ್ನು

ಅಪರಾಧಿ ಸಮುದಾಯಗಳೆಂದು ಬ್ರಿಟಿಷರು ಕರೆದರು. ಹಾಗೂ ನರಬಲಿ ನೀಡುತ್ತಾರೆಂದು ವದಂತಿ ಹುಟ್ಟಿಸಿ ಬೇಧದ ಬೀಜ ಬಿತ್ತಿದರು. ಹಿಂದೆ ವನವಾಸಿಗಳು ಹೇಗೆ ಬಟ್ಟೆಯಲ್ಲಿ ನೂಲು ಸೇರಿಕೊಂಡಿದೆಯೋ ಹಾಗೆ ಇವರು ಭಾರತೀಯ ಸಮಾಜದಲ್ಲಿ ಬೆರೆತು ಹೋಗಿದ್ದರು. ಹಿಂದೆ ಮಹಾಭಾರತವನ್ನು ತೆಗೆದುಕೊಂಡರೆ ಶ್ರೀ ಕೃಷ್ಣನ ಹೆಂಡತಿ ರುಕ್ಮಿಣಿ ವನವಾಸಿ ಸಮುದಾಯದ ಮಹಿಳೆಯಾಗಿದ್ದಳು. ಇವಳು ಯಾದವ ವಂಶದ ರಾಜನನ್ನು ಮದುವೆಯಾಗಿದ್ದಳು. ಇಂದಿಗೂ ಅರುಣಾಚಲ ಪ್ರದೇಶದ ಒಂದು ವನವಾಸಿ ಸಮುದಾಯದವರು ಇಂದಿಗೂ ರುಕ್ಮಿಣಿ ತಮ್ಮ ಸಮುದಾಯದವಳೆಂದು ಹೇಳುತ್ತಾರೆ. ಅರ್ಜುನನ ಹೆಂಡತಿಯರಾದ ಉಲುಪಿ ಮತ್ತು ಚಿತ್ರಾಂಗಧೆ ಇಬ್ಬರು ಬುಡಕಟ್ಟು ಮಹಿಳೆಯರು. ಚಿತ್ರಾಂಗಧೆ ಮಣಿಪುರದ ಬುಡಕಟ್ಟು ರಾಜನ ಮಗಳು ಹಾಗೂ ಉಲುಪಿ ನಾಗಾಲ್ಯಾಂಡ್‌ನ ಬುಡಕಟ್ಟು ಸಮುದಾಯದ ರಾಜಕುಮಾರಿ. ಇದರಿಂದ ನಮಗೆ ಹಿಂದೆ ಬುಡಕಟ್ಟು ಸಮುದಾಯದವರು ರಾಜರಾಗಿ ಆಳ್ವಿಕೆ ಮಾಡಿದ್ದಾರೆಂದು ಇತಿಹಾಸ, ಪುರಾಣಗಳಿಂದ ತಿಳಿದುಬರುತ್ತದೆ.

ಬ್ರಿಟಿಷರು ಬರುವ ಮೊದಲು ಬುಡಕಟ್ಟು ಸಮುದಾಯದವರು ಭೂಮಿಯ ಸಾಗುವಳಿ ಮಾಡುತ್ತಿದ್ದರು. ಬ್ರಿಟಿಷರು ಭಾರತಕ್ಕೆ ಬಂದ ನಂತರ ಅವರ ಭೂ ಹಕ್ಕನ್ನು ಕಸಿದು ಅವರನ್ನು ನಿರ್ಗತಿಕರನ್ನಾಗಿಸಿದರು. ಮುಸಲ್ಮಾನರ ಜೊತೆ ಹೋರಾಡಿದ ರಾಣಾ ಪ್ರತಾಪ್ ಸಿಂಗ್‌ನ ಸೈನ್ಯದಲ್ಲಿದ್ದವರು ಭಿಲ್ಲವರು (ಬೀಲ್). ಬ್ರಿಟಿಷರ ಜೊತೆ ಹೋರಾಡಿದ ಜಾರ್ಖಂಡ್‌ನ ಬಿಸ್ರಾಮುಂಡಾ ಬುಡಕಟ್ಟು ಜನಾಂಗದವನು. ಇವನು ಬ್ರಿಟಿಷ್‌ರೊಂದಿಗೆ ಹೋರಾಡಿ ಸೋತ ನಂತರ ಇವನ ಸಮುದಾಯವನ್ನು ಅಪರಾಧಿ ಸಮುದಾಯವೆಂದು ಘೋಷಿಸಿದರು. ಆದರೆ ಈ ಬುಡಕಟ್ಟು ಸಮುದಾಯದವರು ಬ್ರಿಟಿಷರು ಬರುವ ಮೊದಲು ರಾಷ್ಟೀಯ ಜೀವನದಲ್ಲಿ ಸಮ್ಮಿಳಿತವಾಗಿದ್ದರು.

ಹಿಂದಿನ ಕಾಲದಲ್ಲಿ (ವೇದಗಳ ಕಾಲದಲ್ಲಿ) ನಾಲ್ಕು ವರ್ಣದವರಿಗೂ ಯಜ್ಞಯಾಗಗಳಲ್ಲಿ ಭಾಗವಹಿಸುವ ಅವಕಾಶವಿತ್ತು. ಇಲ್ಲಿ ವರ್ಣಗಳಿಗನುಗುಣವಾಗಿ ಅವರವರಿಗೆ ಕೆಲಸವನ್ನು ಹಂಚಲಾಗಿತ್ತು. ಇಲ್ಲಿ ಎಲ್ಲರೂ ಸೇರಿ ಭಾಗವಹಿಸಿ ಕಾರ್ಯವನ್ನು ಪೂರ್ಣಗೊಳಿಸಲಾಗುತ್ತಿತ್ತು. ಇಲ್ಲಿ ಯಾರು ಅಲಕ್ಷಿತರಿಲ್ಲವಾಗಿತ್ತು. ಕೇವಲ ವರ್ಣಗಳ ಆಧಾರದ ಮೇಲೆ ಅವರವರಿಗೆ ಕೆಲಸ ಕಾರ್ಯಗಳನ್ನು ಹಂಚಲಾಗುತ್ತಿತ್ತು. “Wel Before the element of British Empire” ಕೃತಿಯ ಪ್ರಕಾರ ಬ್ರಿಟಿಷರು ಭಾರತಕ್ಕೆ ಬಂದು ಭಾರತವನ್ನು ಆಳುವ ಸಮಯದಲ್ಲಿ ಬ್ರಟಿಷರು “Socio-economy survey”ಯನ್ನು Trans bukani, wenarey ಮುಂತಾದವರು ಮಾಡಿದ್ದಾರೆ. ನಂತರ ಇಂಗ್ಲೆಂಡ್‌ನ ರಾಯಲ್ ಲೈಬ್ರರಿಯಲ್ಲಿ ೨೦ ವರ್ಷಗಳ ಅಧ್ಯಯನ ಮಾಡಿದ ಧರ್ಮಪಾಲ್ ಅವರು “The Beautiful Tree” ಎಂಬ ಗ್ರಂಥದಲ್ಲಿ ಕೆಲವು ಅಂಶಗಳನ್ನು ಉಲ್ಲೇಖಿಸಿದ್ದಾರೆ. ಇದರಲ್ಲಿ ಭಾರತದ ತಮಿಳುನಾಡಿನ ಒಂದು ಪ್ರದೇಶದಲ್ಲಿ ಚಾಂಡಾಲ ಅಧ್ಯಾಪಕನು ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಿದ್ದನು ಎನ್ನುವುದು. ಇದರಿಂದ ಆ ಕಾಲದಲ್ಲಿ ಎಲ್ಲ ವರ್ಣದವರು

ಶಿಕ್ಷಣ ಹೊಂದಿದ್ದರು ಎಷ್ಟುವ ಅಂಶ ತಿಳಿದುಬರುತ್ತದೆ. ಆದ್ದರಿಂದ ಮೂಲ ಭಾರತದ ಸಮಾಜದಲ್ಲಿ ಅಲಕ್ಷಿತ ಸಮುದಾಯವೇ ಇಲ್ಲ ಎಂದು ತಿಳಿದುಬರುತ್ತದೆ. ಇದೆಲ್ಲ ಪ್ರಾರಂಭವಾಗಿದ್ದು ಬ್ರಿಟಿಷರು ಭಾರತಕ್ಕೆ ಬಂದ ಮೇಲೆಯೇ ಸರಿ.

ಸ್ವಾತಂತ್ರ್ಯಾನಂತರ ಭಾರತಕ್ಕೆ ಎರಡು ವಿಧದ ಆಯ್ಕೆ ಇತ್ತು. ಒಂದು ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆ. ಗ್ರಾಮ ಸ್ವರಾಜ್ಯ ಎಂದರೆ ಆಯಾ ಗ್ರಾಮದ ಅವಶ್ಯಕತೆಗೆ ಬೇಕಾಗುವ ವಸ್ತುಗಳನ್ನು ಆಯಾ ಗ್ರಾಮಗಳಲ್ಲಿಯೇ ತಯಾರಿಸಿ ಬಳಸುವುದು. ಇನ್ನೊಂದು ನೆಹರೂರವರು ಪಾಶ್ಚಿಮಾತ್ಯ ಮಾದರಿಯ ಆಡಳಿತವನ್ನು ಪ್ರತಿಪಾದಿಸಿದರು. ಪ್ರತಿಯೊಂದರಲ್ಲಿಯೂ ಪಾಶಿಮಾತ್ಯ ಮಾದರಿಯನ್ನು ಅಳವಡಿಸಿಕೊಳ್ಳುವುದು. ಇಂದಿನ ಶಿಕ್ಷಣ ಪದ್ಧತಿಯೂ ಸಹ ಪಾಶ್ಚಿಮಾತ್ಯ ಪದ್ಧತಿಯ ಅನುಕರಣೆಯಾಗಿದೆ. ಭಾರತದ ಬುಡಕಟ್ಟು ಜನರ ಕುಶಲಕರ್ಮ ಕಲೆಯ ಬದಲಾಗಿ ವಿದೇಶಿ ಕಾರ್ಖಾನೆಗಳು ಎದ್ದು ನಿಂತವು. ಇದರಿಂದ ಮೂಲ ಕುಶಲಕಲೆ ನಶಿಸಿಹೋಯಿತು. ಜೀವನ ಸಾಗಿಸಲು ಬೇಕಾದ ಶಿಕ್ಷಣದ ಬದಲಾಗಿ ಪಾಶ್ಚಿಮಾತ್ಯ ಶಿಕ್ಷಣ ಬಂದಿತು. ಇದರಿಂದ ಶಿಕ್ಷಣ ಪಡೆದವರಿಗೆ ಜೀವನ ಸಾಗಿಸುವುದು ಅಸಾಧ್ಯವಾಯಿತು. ಹಾಗೂ ಇಂದಿನ ಶಿಕ್ಷಣದಿಂದ ಕೆಲಸವಿಲ್ಲದೆ ನಿರ್ಗತಿಕರಾದರು. (ಮೂಲ ಕುಶಲಕಲೆ ನಶಿಸಿದ್ದ ಪರಿಣಾಮ). ಇಂದಿನ ದಿನದಲ್ಲಿ ಭಾರತೀಯ ನಾಟಿವೈದ್ಯ ಪದ್ಧತಿಯೂ ನಾಶವಾಗಿ ಪಾಶ್ಚಿಮಾತ್ಯ ಔಷಧಿ ಬೆಳಕಿಗೆ ಬಂದಿತು. ಬುಡಕಟ್ಟು ಜನಾಂಗವರು ಉಪಯೋಗಿಸುತ್ತಿದ್ದ ನಾಟಿ ಔಷಧ ಪದ್ಧತಿಗಳು ಮಾಯವಾಯಿತು. ನೆಹರೂರವರ ಕಾಲದಲ್ಲಿ ಅಲಕ್ಷಿತ ಸಮುದಾಯಗಳು ಇನ್ನಷ್ಟು ಅತಂತ್ರವಾಯಿತು.

ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳ ನಡುವಿನ ಸಮಸ್ಯೆಗಳು ಮತ್ತು ಪರಿಣಾಮ

೧. ಸಮೂಹ ಮಾಧ್ಯಮದಲ್ಲಿರುವವರು ಪಾಶ್ಚಿಮಾತ್ಯ ಶಿಕ್ಷಣ ಪಡೆದವರು. ಅವರಿಗೆ ಭಾರತೀಯ ಸಮಾಜದ ಮೂಲ ಪರಿಕಲ್ಪನೆಯ ಅರಿವೇ ಇಲ್ಲ. "ಪಾಶ್ಚಿಮಾತ್ಯ ದೇಶದಲ್ಲಿ ಸಮೂಹ ಮಾಧ್ಯಮಕ್ಕೆ ಬರುವವರು ಆಯಾ ದೇಶದ ರಾಷ್ಟ್ರೀಯತೆಯ ಮೂಲ ಕಲ್ಪನೆ ತಿಳಿದಿರುತ್ತಾರೆ. ಆದರೆ ಭಾರತದಲ್ಲಿ ಮಾಧ್ಯಮಕ್ಕೆ ಬರುವವರಿಗೆ ಭಾರತೀಯ ಸಂಸ್ಕೃತಿಯ ಕಲ್ಪನೆ ಇಲ್ಲ".[೨] (ಮಹಾಭಾರತ, ರಾಮಾಯಣ, ಭಗವದ್ಗೀತೆ, ವಾಲ್ಮೀಕಿ, ವ್ಯಾಸ ಇವರ ಬಗ್ಗೆ ಮಾಹಿತಿ ತಿಳಿದಿರುವುದಿಲ್ಲ) ಇವು ಭಾರತೀಯ ಸಂಸ್ಕೃತಿಯ ಪ್ರಮುಖ ಗ್ರಂಥಗಳು ಹಾಗೂ ಪ್ರಮುಖರು.

೨. ಅಭಿವೃದ್ಧಿಗೆ ಮಾತ್ರ ಪ್ರಾಮುಖ್ಯತೆ ನೀಡುವ ಮಾಧ್ಯಮಗಳು ಅಭಿವೃದ್ಧಿಗೆ ಪೂರಕವಾದ ನಮ್ಮ ಭಾರತೀಯ ಸಂಸ್ಕೃತಿಯನ್ನು ನಿರ್ಲಕ್ಷಿಸುತ್ತದೆ. ಭಾರತೀಯ ಸಂಸ್ಕೃತಿ ಇಡಿ ಪ್ರಪಂಚಕ್ಕೆ ಮಾದರಿಯಾದ ಸಂಸ್ಕೃತಿ. ಭಾರತೀಯ ಸಂಸ್ಕೃತಿಯ ಪ್ರಕಾರ ವಿನಾಶರಹಿತ ಅಭಿವೃದ್ಧಿಯೇ ಆಧುನಿಕತೆ. ಆದರೆ ಪಾಶ್ಚಿಮಾತ್ಯರ ಪ್ರಭಾವದಿಂದ ನಾವು ಆಧುನಿಕತೆಯ ಹೆಸರಿನಲ್ಲಿ ಮೂಲ ಸಂಸ್ಕೃತಿ ಮರೆತು ವಿನಾಶದೆಡೆಗೆ ಹೋಗುತ್ತಿದ್ದೇವೆ.

೩. ಭಾರತ ಗ್ರಾಮಗಳಿಂದ ತುಂಬಿದ ದೇಶ. ಇಂದು ಸಮೂಹ ಮಾಧ್ಯಮಗಳು ಶ್ರೀಮಂತರ ಹಾಗೂ ರಾಜಕೀಯ ವ್ಯಕ್ತಿಗಳ ಹಿಡಿತದಲ್ಲಿದೆ. ಗ್ರಾಮೀಣ ಜನರ ಮುಷ್ಠಿಯಲ್ಲಿ ಈ ಮಾಧ್ಯಮಗಳಿಲ್ಲ. (ಭಾರತೀಯ ಸಂಸ್ಕೃತಿಯನ್ನು ಅರಿತವರ ಹಿಡಿತದಲ್ಲಿ). ಹಣವಂತರ ಹಿಡಿತದಲ್ಲಿದ್ದು ಅವರ ಪ್ರಕಾರವೇ ಸುದ್ದಿ ಬಿತ್ತರಿಸುತ್ತದೆ.

೪. ಇಂದಿನ ಶಿಕ್ಷಣ ಪಾಶ್ಚಿಮಾತ್ಯ ಶಿಕ್ಷಣದ ಅನುಕರಣೆಯಾಗಿದ್ದು, ಸಮೂಹ ಮಾಧ್ಯಮಗಳಲ್ಲಿ (ಕನ್ನಡ ಭಾಷೆಯಲ್ಲಿ) ಮೊದಲು ಸಂಸ್ಕೃತದ ಬಳಕೆಯಿತ್ತು. ಆದರೆ ಇಂದು ಸಂಸ್ಕೃತದ ಬದಲು ಇಂಗ್ಲಿಷ್‌ನ್ನು ತಂದು ತುರುಕಲಾಗುತ್ತಿದೆ. ಕೇವಲ ವಾಣಿಜ್ಯೀಕರಣದ ಪ್ರಭಾವದಿಂದ ಮೂಲ ಸಂಸ್ಕೃತಿ, ಧ್ಯೇಯೋದ್ದೇಶಗಳನ್ನು ಮರೆಯಲಾಗುತ್ತಿದೆ. ಅಲಕ್ಷಿತ ಸಮುದಾಯಗಳಿಗೆ ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿ ಸಿಗುತ್ತಿಲ್ಲ. ಮೂಲ ಶಿಕ್ಷಣ ಪದ್ದತಿಯಿಂದಲೂ ದೂರವಾಗಿದ್ದಾರೆ ಹಾಗೂ ಆಧುನಿಕತೆಯ ಪ್ರಭಾವಕ್ಕೆ ಒಳಗಾಗದೆ ಮಾಧ್ಯಮ ಮತ್ತು ನಿರ್ಲಕ್ಷಿತ ಸಮುದಾಯಗಳ ನಡುವೆ ಮಹಾ ಕಂದರ ನಿರ್ಮಾಣವಾಗಿದೆ.

೫. ಅಲಕ್ಷಿತ ಸಮುದಾಯಗಳು ಇಂದಿಗೂ ಅಸ್ಪ್ರಶ್ಯತೆ ಆಚರಣೆಯಿಂದ ಮುಕ್ತಿ ಪಡೆದಿಲ್ಲ. ಇಂದಿಗೂ ಕರ್ನಾಟಕದ ಅನೇಕ ಭಾಗಗಳಲ್ಲಿ ಈ ಪದ್ಧತಿ ಜೀವಂತವಾಗಿದೆ. ಅಲಕ್ಷಿತ ಸಮುದಾಯಗಳನ್ನು ಮೇಲ್ವರ್ಗದ ಸಮುದಾಯಗಳು ಅಸ್ಪ್ರಶ್ಯತೆಯಂತಹ ಆಚರಣೆಗೆ ನೂಕುತ್ತದೆ. ಮೊದಲೇ ಆಧುನಿಕ ಸಮಾಜದಲ್ಲಿ ಜೀವನ ಸಾಗಿಸಲು ಹರಸಾಹಸ ಪಡುತ್ತಿರುವ ಅಲಕ್ಷಿತ ಸಮುದಾಯಗಳಿಗೆ ಈ ಪದ್ಧತಿ ಗಾಯದ ಮೇಲೆ ಬರೆ ಎಳೆದಂತಾಗಿದೆ. "ಅಸ್ಪ್ರಶ್ಯತೆ ಆಚರಣೆಯಿಂದ ಆಳುವ ವರ್ಗ ಇವರನ್ನು ಪುನಃ ಜೀತದಾಳುಗಳನ್ನಾಗಿ ಮಾಡಿ ಈ ಸಮುದಾಯಗಳನ್ನು ಅವನತಿಯತ್ತ ತಳ್ಳುತ್ತದೆ. ಈ ಅಲಕ್ಷಿತ ಸಮುದಾಯಗಳಾದರೂ ಅಸ್ಪ್ರಶ್ಯತೆಯಿಂದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ತೀರಾ ಹಿಂಜರಿತವನ್ನು ಕಾಣುತ್ತಿದೆ. ಮುಗ್ಧ ಮನಸ್ಸಿನ ಈ ಸಮುದಾಯಗಳ ಮೇಲೆ ಆಳುವ ವರ್ಗ ತಮ್ಮ ಹಿಡಿತ ಸಾಧಿಸಿ, ತಮ್ಮ ಅನೈತಿಕ ಕಾರ್ಯಗಳಿಗೆ ಬಳಸಿಕೊಂಡು ಇವರನ್ನು ಬೀದಿಪಾಲು ಮಾಡುತ್ತಾರೆ".[೩] ಈ ಕಾರ್ಯವನ್ನು ಕಟ್ಟುನಿಟ್ಟಾಗಿ ವಿರೋಧಿಸಿ ಸರ್ಕಾರ ಹಾಗೂ ನ್ಯಾಯಾಂಗದ ಎದಿರು ತಂದು ಈ ಅನಿಷ್ಟ ಪದ್ಧತಿಯನ್ನು ಆಚರಿಸುವವರಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಮಾಡಲು ಮಾಧ್ಯಮಗಳಿಂದ ಮಾತ್ರ ಸಾಧ್ಯವಾಗಿದೆ. ಆದರೆ ಮಾಧ್ಯಮಗಳು ಇದರ ಬಗ್ಗೆ ಹೆಚ್ಚಿನ ಕಾಳಜಿ ತೋರಿಸುತ್ತಿಲ್ಲ. ಕೇವಲ ಮುಖ್ಯವಾಹಿನಿಯ ಸಮುದಾಯಗಳೊಂದಿಗೆ ಮಾತ್ರ ಹೆಚ್ಚಾಗಿ ಸಮೂಹ ಮಾಧ್ಯಮ ತಮ್ಮ ಒಡನಾಟವನ್ನು ಇಟ್ಟುಕೊಂಡಿದ್ದು ಅಲಕ್ಷಿತರನ್ನು ನಿರ್ಲಕ್ಷಿಸುತ್ತಿದೆ. ಇದರಿಂದ ಅಲಕ್ಷಿತ ಸಮುದಾಯಗಳು ಮತ್ತು ಸಮೂಹ ಮಾಧ್ಯಮಗಳ ನಡುವೆ ಅಂತರ ಹೆಚ್ಚಾಗುತ್ತಿದೆ. ಹೀಗೆ ಅಲಕ್ಷಿತ ಸಮುದಾಯಗಳನ್ನು ಸಮೂಹ ಮಾಧ್ಯಮ ನಿರ್ಲಕ್ಷಿಸುವುದರಿಂದ ಅಸ್ಪೃಶ್ಯತೆಯೆಂಬ ಭಯಾನಕ ಮಾರಿ ಸಮಾಜದ ತುಂಬಾ ಬಲವಾಗಿ ಬೆಳೆಯಲು ಸಹಾಯವಾಗುತ್ತದೆ.

೬. ಅಲಕ್ಷಿತ ಸಮುದಾಯಗಳು ಇಂದಿಗೂ ಬುಡಕಟ್ಟು ಪರಂಪರೆಯ ಲಕ್ಷಣಗಳನ್ನು ತನ್ನಲ್ಲಿ ಇಟ್ಟುಕೊಂಡು, ಅದನ್ನು ಪಾಲಿಸುತ್ತಾ ಬಂದಿದೆ. ಬುಡಕಟ್ಟು ಅನಿಷ್ಟ ಪದ್ಧತಿಗಳಾದ ಮೂಢನಂಬಿಕೆ, ಬಾಲ್ಯವಿವಾಹ, ಬಲಿ ಕೊಡುವುದು ಮುಂತಾದವುಗಳನ್ನು ಆಚರಿಸುತ್ತಿದೆ. ಉದಾಹರಣೆಗೆ ರೋಗ ಬಂದಾಗ ಅದಕ್ಕೆ ಸೂಕ್ತ ಚಿಕಿತ್ಸೆ ಕೊಡಿಸದೆ ದೈವಕ್ಕೆ ಕೋಳಿ, ಕುರಿ, ಕೋಣ ಮುಂತಾದವುಗಳನ್ನು ಬಲಿಕೊಡುತ್ತಾರೆ. ಇದರಿಂದ ರೋಗ ವಾಸಿಯಾಗದೇ ರೋಗಗ್ರಸ್ಥ ವ್ಯಕ್ತಿ ಮರಣ ಹೊಂದುತ್ತಾನೆ. ಆದರೂ ಎಚ್ಚೆತ್ತುಕೊಳ್ಳದ ಅಲಕ್ಷಿತ ಸಮುದಾಯಗಳು ದೈವದ ಅವಕೃಪೆಯೇ ಮರಣಕ್ಕೆ ಕಾರಣವೆಂದು ತಿಳಿಯುತ್ತಾರೆ. ಮಕ್ಕಳನ್ನು ಬಾಲ್ಯವಿವಾಹ ಮಾಡುವುದು ಇನ್ನೂ ಅನೇಕ ಅನಿಷ್ಠ ಪದ್ಧತಿಗಳನ್ನು ಆಚರಿಸುತ್ತಾರೆ. ಇಂದಿನ ಆಧುನಿಕ ಯುಗದಲ್ಲಿ ಸಮೂಹ ಮಾಧ್ಯಮಗಳು ಅಲಕ್ಷಿತರ ಅನಿಷ್ಟ ಆಚರಣೆಯ ವಿರುದ್ಧ ದೊಡ್ಡ ಆಂದೋಲನಗಳನ್ನು ಮಾಡಿದ್ದಾರೆ. ಆದರೂ ಈ ಅಲಕ್ಷಿತ ಸಮುದಾಯದ ಇಂದಿನ ಪೀಳಿಗೆಯ ಜನರು ತಮ್ಮ ಅನಿಷ್ಟ ಪದ್ಧತಿಯ ಆಚರಣೆಯನ್ನು ಬಿಡುತ್ತಿಲ್ಲ. ಇದರಿಂದ ಅಲಕ್ಷಿತ ಸಮುದಾಯ ಮತ್ತು ಸಮೂಹ ಮಾಧ್ಯಮಗಳ ನಡುವೆ ಬಿಕ್ಕಟ್ಟು ಹೆಚ್ಚಾಗುತ್ತಿದೆ.

೭. ಸಮೂಹ ಮಾಧ್ಯಮಗಳು ಇಂದು ಶಿಕ್ಷಣದ ಮಹತ್ವವನ್ನು ಜಗತ್ತಿನ ಮೂಲೆ ಮೂಲೆಗೆ ತಿಳಿಸುತ್ತಿದ್ದಾರೆ. ಶಿಕ್ಷಣವಿಲ್ಲದೇ ಇಂದಿನ ದಿನದಲ್ಲಿ ಬಾಳುವುದು ತುಂಬಾ ಕಷ್ಟ. ಸಮೂಹ ಮಾಧ್ಯಮಗಳಾದರೂ ಶಿಕ್ಷಣದಿಂದ ವಂಚಿತರಾದ ಸಮುದಾಯಗಳ ಸಮಸ್ಯೆಯನ್ನು ಎತ್ತಿ ಹಿಡಿದು ಸಾರ್ವಜನಿಕರಿಗೆ ಹಾಗೂ ಸರ್ಕಾರಕ್ಕೆ ತಿಳಿಸುವ ಕಾರ್ಯ ಮಾಡುತ್ತದೆ. ಇದರಿಂದ ಸರ್ಕಾರ ಕೂಡಲೇ ಎಚ್ಚೆತ್ತು ಶೈಕ್ಷಣಿಕ ಸೌಲಭ್ಯ ಒದಗಿಸಲು ಕಾರ್ಯಪ್ರವೃತ್ತವಾಗುತ್ತದೆ. ಯಾವ ಪ್ರದೇಶಕ್ಕೆ, ಯಾವ ಸಮುದಾಯಕ್ಕೆ ಶೈಕ್ಷಣಿಕ ಅಗತ್ಯವಿದೆಯೋ ಅಲ್ಲಿ ಶಾಲೆ, ಅಂಗನವಾಡಿಗಳನ್ನು ಸ್ಥಾಪಿಸಿ ಅಲ್ಲಿನ ಮಕ್ಕಳನ್ನು ಶಿಕ್ಷಣದತ್ತ ಆಕರ್ಷಿಸಲು ಕೆಲವು ಕಾರ್ಯಕ್ರಮಗಳನ್ನು ಆಯೋಜಿಸಿ ಇಂದಿನ ನಿರ್ಲಕ್ಷಿತ ಸಮುದಾಯಗಳ ಮಕ್ಕಳಿಗೆ ಉಚಿತ ಶಿಕ್ಷಣ ಸೌಲಭ್ಯಗಳನ್ನು ಒದಗಿಸುತ್ತದೆ. ಮಕ್ಕಳನ್ನು ಶಿಕ್ಷಣದತ್ತ ಆಕರ್ಷಿಸಲು ಶಾಲೆಗಳಲ್ಲಿ ಬಿಸಿಯೂಟ ವ್ಯವಸ್ಥೆಯನ್ನು ಮಾಡುತ್ತಲಿದೆ. ಆದರೂ ಸಹ ಅಲಕ್ಷಿತ ಸಮುದಾಯಗಳ ಜನರು ತಮ್ಮ ಮಕ್ಕಳಿಗೆ ಶಿಕ್ಷಣ ನೀಡಲು ಬಯಸುವುದಿಲ್ಲ. ಬದಲಾಗಿ ತಮ್ಮ ಪಾರಂಪರಿಕ ವೃತ್ತಿಯಲ್ಲಿಯೇ ಅವರನ್ನು ತೊಡಗಿಸಿಕೊಳ್ಳುವುದನ್ನು ಕಾಣಬಹುದಾಗಿದೆ.

ಶಿಕ್ಷಣ ಇಲ್ಲದಿದ್ದಲ್ಲಿ ಅಲಕ್ಷಿತ ಸಮುದಾಯಗಳು ಮುಖ್ಯವಾಹಿನಿಗೆ ಬರಲು ಸಾಧ್ಯವೇ ಇಲ್ಲ. ಸಮೂಹ ಮಾಧ್ಯಮಗಳು ಅಲಕ್ಷಿತ ಸಮುದಾಯಗಳಿಗೆ ಒಂದು ನಿಗದಿತ ಗುರಿ ತಲುಪಲು ಹೆದ್ದಾರಿ ಇದ್ದ ಹಾಗೆ. ಉದಾಹರಣೆಗೆ ಇಂದು ಟೆಲಿವಿಷನ್, ಮೊಬೈಲ್, ರೇಡಿಯೋ ಮುಂತಾದ ಆಧುನಿಕ ಮಾಧ್ಯಮಗಳ ಭರಾಟೆಯನ್ನು ಅಲಕ್ಷಿತ ಸಮುದಾಯದ ಜನರು ನೋಡಿದಾಗ ಅವರಲ್ಲಿಯೂ ಸಹ ಒಂದು ತರಹದ ಆಸೆ ಚಿಗುರುತ್ತದೆ. ಆದರೆ ಕೆಲವು ದಶಕಗಳ ಹಿಂದೆ ಈ ಆಧುನಿಕ ಸಮೂಹ ಮಾಧ್ಯಮಗಳಾದ ಟೆಲಿವಿಷನ್, ಮೊಬೈಲ್ ಬಳಸುವುದು ಪ್ರತಿಷ್ಠೆಯ

ಸಂಕೇತವಾಗಿತ್ತು. ಆದರೆ ಇಂದಿನ ಜಾಗತೀಕರಣದ ವ್ಯವಸ್ಥೆಯಲ್ಲಿ ಸಮೂಹ ಮಾಧ್ಯಮಗಳು ಅಲಕ್ಷಿತರಿಂದ ಹಿಡಿದು ಶ್ರೀಮಂತರವರೆಗೂ ಸಾಮಾನ್ಯವಾಗಿ ಕೈಗೆಟುಕುವಂತಾಗಿದೆ. ಇಂದು ಅಲಕ್ಷಿತ ಸಮುದಾಯದ ಜನರೂ ಸಹ ಟಿ.ವಿ, ಮೊಬೈಲ್‌ಗಳನ್ನು ಬಳಸುತ್ತಿದ್ದಾರೆ. ಅಂದರೆ ಅಲಕ್ಷಿತರಿಗೆ ಈ ಸಮೂಹ ಮಾಧ್ಯಮಗಳು ಗುರಿಯತ್ತ ಅಥವಾ ಮುಖ್ಯವಾಹಿನಿಯತ್ತ ಸಾಗಲು ಒಂದು ದಾರಿಯಾಗುತ್ತಿದೆ ಎಂದು ಹೇಳಬಹುದಾಗಿದೆ. ಇಂದಿನ ಜಗತ್ತಿನಲ್ಲಿ ಶಿಕ್ಷಣಕ್ಕೆ ಅತೀ ಮಹತ್ವದ ಸ್ಥಾನವಿದೆ. ಶಿಕ್ಷಣಕ್ಕೆ ಎಂತಹ ಬಡತನ, ಅಸ್ಪ್ರಶ್ಯತೆ, ಸಮಾಜದಲ್ಲಿನ ನಿರ್ಲಕ್ಷ್ಯ ಮುಂತಾದವುಗಳನ್ನು ಅಲಕ್ಷಿತ ವಿಷಯಗಳನ್ನು ತೊಲಗಿಸುವ ಶಕ್ತಿ ಇದೆ.

“ಶಿಕ್ಷಣ ಪಡೆದ ಅಲೆಮಾರಿ ಅಲಕ್ಷಿತ ಸಮುದಾಯದ ವ್ಯಕ್ತಿಗಳು ಇಂದು ಉನ್ನತ ಹುದ್ದೆಯಲ್ಲಿ ಗೌರವಾನ್ವಿತವಾಗಿ ಬಾಳುತ್ತಿದ್ದಾರೆ. ಅಲಕ್ಷಿತರಿಗೆ ಶಿಕ್ಷಣದತ್ತ ಬರಲು ಸಮೂಹ ಮಾಧ್ಯಮಗಳೇ ದಾರಿದೀಪವಾಗಿವೆ. ಅದರಲ್ಲೂ ರೇಡಿಯೋ, ಟಿ.ವಿ, ಮೊಬೈಲ್, ಫೇಸ್‌ಬುಕ್‌ಗಳಿಂದ ಸಾಮಾಜಿಕ ಮಾಧ್ಯಮಗಳು ಅಲಕ್ಷಿತರನ್ನು ಕೈಹಿಡಿದು ಆಧುನಿಕ ಜಗತ್ತಿಗೆ ಮುಖಮಾಡಿಸುತ್ತಿದೆ. ಈ ಸಮೂಹ ಮಾಧ್ಯಮಗಳಿಂದ ಹುಟ್ಟಿದ ಒಂದೇ ಒಂದು ಕನಸು ಅಲಕ್ಷಿತರನ್ನು ಲಕ್ಷಿತರನ್ನಾಗಿಸುತ್ತದೆ”.[೪] ಯಾಕೆಂದರೆ ಈ ಕನಸುಗಳು ಅಲಕ್ಷಿತ ಸಮುದಾಯಗಳಿಗೆ ಹೊರ ಜಗತ್ತಿನ ಪರಿಚಯ ಮಾಡಿಸುತ್ತದೆ. ಅಂದರೆ ಶಿಕ್ಷಣದತ್ತ ಧಾವಿಸಲು ಸಹಕಾರಿಯಾಗುತ್ತದೆ. ಶಿಕ್ಷಣವೇ ಅಲಕ್ಷಿತ ಸಮುದಾಯ ಮತ್ತು ಸಮೂಹ ಮಾದ್ಯಮಗಳ ನಡುವಿನ ಅತ್ಯಂತ ದೊಡ್ಡ ಹಾಗೂ ಅಪಾಯಕಾರಿಯಾದ ಬಿಕ್ಕಟ್ಟು, ಕೇಲಲ ಶಿಕ್ಷಣವೊಂದಿದ್ದರೆ ಇಂದಿನ ಆಧುನಿಕ ಜಗತ್ತಿನಲ್ಲಿ ಸಾಲದು. ಅದಕ್ಕೆ ತಕ್ಕಂತಹ ಕೌಶಲ್ಯಗಳನ್ನು (skills) ಅಳವಡಿಸಿಕೊಂಡಿರಬೇಕಾಗುತ್ತದೆ. ಈ “ಕೌಶಲ್ಯಗಳು ದಿನನಿತ್ಯದಲ್ಲಿ ಕಲಿಯುವಂತಹದ್ದಾಗಿದೆ. ಕೇವಲ ಶಿಕ್ಷಣವಿದ್ದರೆ ಸಾಲದು, ಪ್ರಾಯೋಗಿಕ ತರಬೇತಿಗಳು ಬೇಕೆ ಬೇಕು. ಪುಸ್ತಕಗಳನ್ನು ಓದಿ ಮನನ ಮಾಡಿಕೊಂಡರೆ ಕಂಪ್ಯೂಟರ್, ಟಿ.ವಿ, ಮೊಬೈಲ್ ಬಳಸಲು ಸಾಧ್ಯವಾಗದು. ಅದಕ್ಕೆ ಸೂಕ್ತ ರೀತಿಯ ಕೌಶಲ್ಯಗಳನ್ನು ತಿಳಿದುಕೊಂಡಿರಬೇಕು. ಅಥವಾ ಇಂದಿನ ಶಿಕ್ಷಣದಲ್ಲಿ ಅಳವಡಿಸಿಕೊಂಡಿರಬೇಕು”.[೫]

ಈ ಕೌಶಲ್ಯಗಳು ಒಂದು ಶಿಕ್ಷಣ ಪಡೆದ ವ್ಯಕ್ತಿಯನ್ನು ಸಮರ್ಥವಾಗಿಸುತ್ತವೆ. ಇಂದಿನ ಆಧುನಿಕ ಜಗತ್ತಿನಲ್ಲಿ ಶಿಕ್ಷಣಕ್ಕೆ ಎಷ್ಟು ಮಹತ್ವವಿದೆಯೋ ಅಷ್ಟೇ ಮಹತ್ವ ಕೌಶಲ್ಯಕ್ಕೂ (skills) ಇದೆ. ಈ ಕೌಶಲ್ಯಗಳನ್ನು ವಿಜ್ಞಾನಿಗಳು ಬಳಸಿಕೊಂಡು ಚಂದ್ರ, ಮಂಗಳ ಗ್ರಹದತ್ತ ಉಪಗ್ರಹಗಳನ್ನು ಕಳುಹಿಸುವಲ್ಲಿ ಯಶಸ್ವಿಯಾಗಿದ್ದಾರೆ ಹಾಗೂ ಈ ಉಪಗ್ರಹಗಳನ್ನು ಕುಳಿತಲ್ಲಿಯೇ ನಿಯಂತ್ರಿಸಲೂ ಸಾಧ್ಯವಾಗಿದೆ. ಆದ್ದರಿಂದ ಅಲಕ್ಷಿತರು ಶಿಕ್ಷಣದ ಜೊತೆಗೆ ಕೌಶಲ್ಯಾಭಿವೃದ್ಧಿಯನ್ನು ಬೇಳೆಸಿಕೊಳ್ಳಬೇಕಿದೆ. ಆದರೆ ಅಲಕ್ಷಿತ ಸಮುದಾಯಗಳಿಗೆ ಇಂದಿನ ಶಿಕ್ಷಣ ಕಬ್ಬಿಣದ ಕಡಲೆಯಾಗಿದೆ. ಇಂದು ನಾವು ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿಯನ್ನು ಅನುಸರಿಸುತ್ತಿದ್ದೇವೆ. ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡುತ್ತಿದ್ದೇವೆ. ಆದರೆ ಅಲಕ್ಷಿತರಿಗೆ ಶಿಕ್ಷಣ ಪಡೆಯಲು ಮಾತೃಭಾಷೆಯಿಂದ ಮಾತ್ರ ಸಾಧ್ಯವಾಗಿದೆ. ಇವರಿಗೆ ಇಂಗ್ಲೀಷ್ (ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿ) ಭಾಷೆ ಕಲಿಯುವುದು ಕಷ್ಟಸಾಧ್ಯವಾಗಿದೆ.

ನಮ್ಮಲ್ಲಿ ಮಾತೃಭಾಷಾ ಶಿಕ್ಷಣ ಪದ್ಧತಿ ನಿರ್ಲಕ್ಷ್ಯಗೊಂಡು, ಶಿಕ್ಷಣ ಸಂಸ್ಥೆಗಳು ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿಗೆ ಮಾರಿ ಹೋಗಿದ್ದಾರೆ. ಇದರಿಂದ ಅಲಕ್ಷಿತರು ಶಿಕ್ಷಣವೆಂದರೆ ಹೆದರಿ ದೂರ ಸರಿಯುವ ಹಾಗಾಗಿದೆ. ಕೆಲ ಅಲಕ್ಷಿತ ಸಮುದಾಯದ ಜನರು ಶಿಕ್ಷಣ ಕಲಿತರೂ ಮುಂದೆ ಉತ್ತಮ ಕೆಲಸ ಪಡೆಯುವಲ್ಲಿ ವಿಫಲರಾಗುತ್ತಿದ್ದಾರೆ. ಸಮಾಜ ಇವರನ್ನು ನೋಡುವ ರೀತಿಯೂ ಅಸಹ್ಯವಾಗಿದೆ. ಇಂದಿಗೂ ಇರುವ ಜಾತಿಯ ತಾರತಮ್ಯತೆಯಿಂದಾಗಿ ಶಿಕ್ಷಣ ಪಡೆದ ಅಲಕ್ಷಿತರು ಉನ್ನತ ಹುದ್ದೆಗಳಿಂದ ವಂಚಿತರಾಗಿ, ಮೂಲ ಕುಲ ಕಸುಬಿನಿಂದಲೂ ದೂರವಾಗಿ ತ್ರಿಶಂಕು ಸ್ಥಿತಿಯಲ್ಲಿದ್ದಾರೆ.

೮. ಅಲಕ್ಷಿತ ಸಮುದಾಯಗಳಿಗೆ ಸಂತೃಪ್ತ ಜೀವನ ನಡೆಸಲು ಆದಾಯ ಬರುವ ಯಾವುದೇ ಮೂಲಗಳಿಲ್ಲ. ಆದ್ದರಿಂದ ಇವರ ಆರ್ಥಿಕ ಸ್ಥಿತಿ ತುಂಬಾ ಕೆಳಸ್ಥರದಲ್ಲಿದೆ. ಹೊತ್ತಿನ ಊಟಕ್ಕೂ ಕಷ್ಟ ಪಡುತ್ತಿದ್ದಾರೆ. ಹೊಟ್ಟೆ ತುಂಬಿಕೊಳ್ಳುವುದಕ್ಕೋಸ್ಕರ ಅನೇಕ ಮೈಲಿ ದೂರ ಸಾಗಿ ವಿವಿಧ ವೇಷಗಳನ್ನು ಹಾಕಿ ರಂಜಿಸುವುದು, ವಿವಿಧ ಕಲೆಗಳ ಪ್ರದರ್ಶನ ಮಾಡುವುದು, ಭಿಕ್ಷೆ ಬೇಡುವುದು, ಅತಿ ಹೀನಾಯ ಕೆಲಸಗಳಾದ ಮಲಮೂತ್ರಗಳ ಗುಂಡಿಯನ್ನು ಶುಚಿಗೊಳಿಸುವುದು ಹೀಗೆ ಮುಂತಾದ ಅನೇಕ ರೀತಿಯ ಕಸುಬುಗಳನ್ನು ಮಾಡಿದರೂ ತುತ್ತಿನ ಚೀಲ ತುಂಬಿಸಿಕೊಳ್ಳುವುದು ಕಷ್ಟವಾಗುತ್ತಿದೆ. ಆದರೆ ಸಮೂಹ ಮಾಧ್ಯಮಗಳು ಶ್ರೀಮಂತ ರಾಜಕೀಯ ವ್ಯಕ್ತಿಗಳ ಹಿಡಿತದಲ್ಲಿರುತ್ತದೆ. ಮಾಧ್ಯಮ ಪ್ರವೇಶ ಮಾಡಬೇಕಾದರೆ ಹಣವಂತನಾಗಿರಬೇಕು ಅಥವಾ ಶ್ರೀಮಂತರ ಕೃಪೆಗೆ ಒಳಗಾಗಿರಬೇಕು. ಆಗ ಮಾತ್ರ ಮಾಧ್ಯಮವನ್ನು ಪ್ರವೇಶಿಸಲು ಸಾಧ್ಯವಾಗುತ್ತದೆ. ಇಂತಹ ಸ್ಥಿತಿಯಲ್ಲಿ ಅಲಕ್ಷಿತ ಸಮುದಾಯದವರು ಸಮೂಹ ಮಾಧ್ಯಮಗಳನ್ನು ದೂರವಿರಿಸುತ್ತಾರೆ ಅಥವಾ ಮಾಧ್ಯಮಗಳ ಅರಿವೂ ಸಹ ಅಲಕ್ಷಿತರಿಗೆ ಇರುವುದಿಲ್ಲ. ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲದ ಅಲಕ್ಷಿತ ಸಮುದಾಯದ ಮೇಲೆ ಮಾಧ್ಯಮಗಳು ಹೆಚ್ಚು ಬೆಳಕನ್ನು ಚೆಲ್ಲುವುದಿಲ್ಲ. ಏಕೆಂದರೆ ಅದರಿಂದ ಸಮೂಹ ಮಾಧ್ಯಮಗಳಿಗೆ ಯಾವ ಲಾಭವೂ ಇಲ್ಲ. ಹೆಚ್ಚಾಗಿ ಮಾಧ್ಯಮಗಳು ಲಾಭಗಳಿಕೆಯತ್ತ ಸಾಗುತ್ತವೆ. ಎಲ್ಲಿ ಹೆಚ್ಚಿನ ಲಾಭವಿದೆಯೋ ಅಲ್ಲಿಗೆ ಶೀಘ್ರವಾಗಿ ಸಮೂಹ ಮಾಧ್ಯಮಗಳು ಧಾವಿಸುತ್ತವೆ. ಆದರೆ ನಿರ್ಲಕ್ಷಿತರಲ್ಲಿ ಹೊತ್ತಿನ ಊಟಕ್ಕೂ ತತ್ವಾರವಾಗಿರು ವಾಗಿರುವುದರಿಂದ ಇವರ ಮೇಲೆ ಬೆಳಕು ಚೆಲ್ಲಲು ಸಮೂಹ ಮಾಧ್ಯಮಗಳು ಹಿಂಜರಿಯುತ್ತಾರೆ. ಆರ್ಥಿಕ ಬಿಕ್ಕಟ್ಟಿನಿಂದಾಗಿ ಅಲಕ್ಷಿತ ಸಮುದಾಯಗಳು ಪಾತಾಳಕ್ಕೆ ನೂಕಲ್ಪಟ್ಟರೆ ಸಮೂಹ ಮಾಧ್ಯಮಗಳು ಆಕಾಶದೆತ್ತರದಲ್ಲಿರುತ್ತದೆ. ಇವೆರಡನ್ನೂ ಒಟ್ಟುಗೂಡಿಸುವುದು ಕಷ್ಟಸಾಧ್ಯ.

೯. ಅಲಕ್ಷಿತ ಸಮುದಾಯಗಳು ಸಮಾಜದಲ್ಲಿ ಅಸ್ಪೃಶ್ಯರು, ಅಲೆಮಾರಿಗಳಾಗಿಯೂ ಜೀವನ ಸಾಗಿಸುತ್ತಿದ್ದಾರೆ. ಇವರಿಗೆ ಸಮಾಜದಲ್ಲಿ ನಿರ್ದಿಷ್ಟವಾದ ಗುರುತು ಸಹ ಇಲ್ಲ. ನಮ್ಮ ಚುನಾವಣಾ ವ್ಯವಸ್ಥೆಯಲ್ಲಿ ಬಹುಪಾಲು ಅಲಕ್ಷಿತ ಸಮುದಾಯದ ಜನರ ಹೆಸರು ನೊಂದಣಿಯೂ ಆಗಿಲ್ಲ. ಇವರ ಬಳಿ ಗುರುತಿನ ಚೀಟಿಯೂ ಇಲ್ಲ. ಸಮಾಜ ಇವರನ್ನು ಕೀಳಾಗಿ ನೋಡುತ್ತಿದೆ. ಇವರಿಗೆ ವಾಸಿಸಲು ಸ್ವಂತ ಮನೆಯು ಇಲ್ಲ. ಕೃಷಿ ಮಾಡಲು ಸ್ವಂತ ಭೂಮಿಯೂ ಇಲ್ಲ.

ಆದ್ದರಿಂದ ಇವರು ಪರಂಪರಾಗತವಾಗಿ ಬಂದ ಕುಲ ಕಸುಬುಗಳನ್ನು ಅನುಸರಿಸುತ್ತಾರೆ. ಇದರಲ್ಲಿ ಭಿಕ್ಷೆ ಬೇಡುವುದು, ಮನರಂಜನೆ ಮಾಡುವುದು, ಕರಕುಶಲವಸ್ತುಗಳನ್ನು ತಯಾರಿಸುವುದು ಮುಂತಾದವುಗಳು. ಆದರೆ ಇಂದಿನ ಕೈಗಾರಿಕಾ ಯುಗ, ತಂತ್ರಜ್ಞಾನಯುಗದಲ್ಲಿ ಎಲ್ಲಾ ವಸ್ತುಗಳು ಯಂತ್ರದಿಂದ ತಯಾರಾಗುತ್ತದೆ. ಇದರಿಂದ ಅಲಕ್ಷಿತರ ಕರಕುಶಲ ವಸ್ತುಗಳನ್ನು ಕೊಳ್ಳುವವರು ಯಾರೂ ಇಲ್ಲದೇ ಇವರ ಆರ್ಥಿಕ ಸ್ಥಿತಿ ಚಿಂತಾಜನಕವಾಗಿದೆ. ಸಮಾಜದಲ್ಲಿನ ಏಣಿ-ಶ್ರೇಣಿ ವ್ಯವಸ್ಥೆಯಲ್ಲಿ ಮೊದಲಿಗೆ ಶ್ರೀಮಂತ ವ್ಯಕ್ತಿಗಳಿದ್ದರೆ, ಸಮೂಹ ಮಾಧ್ಯಮಗಳು ಇವರ ಕೈವಶದಲ್ಲಿವೆ. ಅಲಕ್ಷಿತರಿಗೆ ಶಿಕ್ಷಣದ ಕೊರತೆಯೂ ಇದೆ. ಇಂದಿನ ಮುಖ್ಯವಾಹಿನಿಯಲ್ಲಿ ಶಿಕ್ಷಣವೇ ಪ್ರಧಾನವಾಗಿರುವುದರಿಂದ ಶಿಕ್ಷಣ ಕಲಿತವರಿಗೆ ಮಾತ್ರ ಮುಖ್ಯವಾಹಿನಿಯಲ್ಲಿ ಪ್ರವೇಶಿಸಲು ಹಾಗೂ ಸಾಮಾಜಿಕ ಸ್ಥಾನಮಾನ ಪಡೆಯಲು ಸಾಧ್ಯವಾಗುತ್ತದೆ. ಇಂದಿನ ತಾಂತ್ರಿಕ ಯುಗದಲ್ಲಿ ಶಿಕ್ಷಣ, ಕೌಶಲ್ಯಗಳು ಇದ್ದಲ್ಲಿ ಮಾತ್ರ ಒಳ್ಳೆಯ ಉದ್ಯೋಗ ಪಡೆದು, ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಂಡು, ಸಮಾಜದಲ್ಲಿ ಒಳ್ಳೆಯ ಸ್ಥಾನ ಪಡೆಯಲು ಸಾಧ್ಯವಾಗುತ್ತದೆ. ಸಮೂಹ ಮಾಧ್ಯಮದಲ್ಲಿನ ವ್ಯಕ್ತಿಗಳಿಗೆ ಶಿಕ್ಷಣ, ಆಧುನಿಕ ಯಂತ್ರೋಪಕರಣಗಳ ಬಳಕೆಯ ಕೌಶಲ್ಯ, ಮುಖ್ಯವಾಹಿನಿಯ ಜನರೊಂದಿಗೆ ನಿಕಟ ಸಂಬಂಧ, ಆಧುನಿಕತೆಯ ಅರಿವು, ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿ, ವಾಹನ ಚಾಲನೆ ಮುಂತಾದವುಗಳ ಪರಿಣಿತಿಯ ಅವಶ್ಯಕತೆ ಇರುತ್ತದೆ. ಇದು ಯಾವುದೂ ಇಲ್ಲದ ಅಲಕ್ಷಿತ ಸಮುದಾಯಗಳನ್ನು ಸಮೂಹ ಮಾಧ್ಯಮ ಹಾಗೂ ಸಮಾಜ ಕೀಳಾಗಿ ನೋಡುತ್ತದೆ.

೧೦. ಅಲಕ್ಷಿತ ಸಮುದಾಯದ ಜನರು ಮೀಸಲಾತಿಯ ಆಧಾರದ ಮೇಲೆ ಗ್ರಾಮಪಂಚಾಯತಿ ಹಾಗೂ ಮಂಡಲ ಪಂಚಾಯತಿ ಮಟ್ಟದಲ್ಲಿ ರಾಜಕೀಯ ಕ್ಷೇತ್ರದಲ್ಲಿ ಕಾಣಸಿಗುತ್ತಾರೆ. ಇಲ್ಲಿ ಸದಸ್ಯರಾದರು ಇವರಿಗೆ ತಮ್ಮ ಹಕ್ಕುಗಳನ್ನು ಚಲಾಯಿಸಲು ಸಾಧ್ಯವಿಲ್ಲ. ಕೇವಲ ಮೀಸಲಾತಿಯ ಸ್ಥಾನವನ್ನು ತುಂಬುವುದಕ್ಕೆ ಮಾತ್ರ ಇವರನ್ನು ಕರೆತರಲಾಗುತ್ತದೆ. ಸಭೆ, ಸಮಾರಂಭ, ನಿರ್ಣಯಗಳನ್ನು ತೆಗೆದುಕೊಳ್ಳುವ ಸಮಯದಲ್ಲಿ ಇವರಿಗೆ ಯಾವುದೇ ರೀತಿಯ ಅಭಿಪ್ರಾಯ ಮಂಡಣೆಗೆ ಅವಕಾಶವಿರುವುದಿಲ್ಲ. ಮೇಲ್ವರ್ಗದ ಜನರು ಇವರನ್ನು ಸೂತ್ರದ ಗೊಂಬೆಯಂತೆ ಆಡಿಸುತ್ತಾರೆ. ಅಥವಾ ಮೇಲ್ವರ್ಗದವರ ತಾಳಕ್ಕೆ ತಕ್ಕಂತೆ ಕುಣಿಯುವ ಪರಿಸ್ಥಿತಿ ಇರುತ್ತದೆ. ರಾಜಕೀಯಕ್ಕೆ ಬರುವ ವ್ಯಕ್ತಿಗಳು ಸಮೂಹ ಮಾಧ್ಯಮಗಳ ಮುಖಾಂತರ ಜನಪ್ರಿಯರಾಗಿರುತ್ತಾರೆ. ಅಂದರೆ ತಮ್ಮ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳಲು ಸಮೂಹ ಮಾಧ್ಯಮಗಳ ಮೊರೆ ಹೋಗುತ್ತಾರೆ. ಮಾಧ್ಯಮಗಳಾದರೂ ಇಂಥ ಶ್ರೀಮಂತ ವ್ಯಕ್ತಿಗಳ ವ್ಯಕ್ತಿತ್ವವನ್ನು ರಂಗು ರಂಗಿನಿಂದ ಪ್ರಚಾರ ಮಾಡುತ್ತದೆ. ಸಮೂಹ ಮಾಧ್ಯಮಗಳು ಇಲ್ಲದಿರುವಂತಹ ವ್ಯಕ್ತಿತ್ವವನ್ನು ಕಲ್ಪಿಸಿ ಚಿತ್ರಿಸುತ್ತದೆ. ಈ ವ್ಯಕ್ತಿಗಳು ಸಮೂಹ ಮಾಧ್ಯಮದವರಿಗೆ ಹಣವನ್ನು ಆಮಿಷವಾಗಿ ನೀಡುತ್ತಾರೆ. ಇಂದಿನ ಸಮೂಹ ಮಾಧ್ಯಮಗಳೂ ಸಹ ಮೂಲ ಧ್ಯೇಯನಿಷ್ಠತೆಯನ್ನು ಪಾಲಿಸುತ್ತಿಲ್ಲ. ಸಮೂಹ ಮಾಧ್ಯಮಗಳು ಶ್ರೀಮಂತ ವ್ಯಕ್ತಿಗಳು ನೀಡುವ ಹಣದ ಆಸೆಗೆ ಬಲಿಯಾಗಿ ತಮ್ಮ ಕರ್ತವ್ಯ

ನಿಷ್ಠೆಯನ್ನು ಮರೆತು ಶ್ರೀಮಂತ ವ್ಯಕ್ತಿಯನ್ನು ಉತ್ತಮ ರಾಜಕಾರಣಿ ಎಂದು ಬಿಂಬಿಸುತ್ತಾರೆ. ಮಾಧ್ಯಮದಲ್ಲಿ ಬಂದ ವಿಷಯವನ್ನು ತಿಳಿದ ಮುಖ್ಯವಾಹಿನಿಯ ಜನರು ಸಹ ಇಂಥ ವ್ಯಕ್ತಿಯನ್ನು ತಮ್ಮ ನಾಯಕನನ್ನಾಗಿ ಮಾಡಲು ಉತ್ಸಾಹಿಗಳಾಗುತ್ತಾರೆ. ಇದರಿಂದ ಆ ವ್ಯಕ್ತಿಯ ವ್ಯಕ್ತಿತ್ವ ಹೇಗಿದ್ದರೂ ಅವನು ಮುಖ್ಯವಾಹಿನಿಯಲ್ಲಿ ಜನಪ್ರಿಯನಾಗಿ ರಾಜಕೀಯದಲ್ಲಿ ಮುಂದುವರೆಯುತ್ತಾನೆ. ಆದರೆ ಅಲಕ್ಷಿತ ಸಮುದಾಯದವರಿಗೆ ಮಾಧ್ಯಮವನ್ನು ಪ್ರವೇಶಿಸುವ ಕುಶಲತೆಯಾಗಲಿ, ಮಾಧ್ಯಮದವರನ್ನು ಆಕರ್ಷಿಸುವ ಕಲೆಯಾಗಲಿ ಇಲ್ಲ. (ಹಣದ ಆಮಿಷ ತೋರಿಸಿ). ಅಂದರೆ ಇವರ ಆರ್ಥಿಕ ಮಟ್ಟ ತೀರಾ ಕಳಪೆಯಾಗಿರುತ್ತದೆ. ಹಾಗೂ ಶಿಕ್ಷಣದ ಕೊರತೆಯು ಇರುತ್ತದೆ. ಜನಪ್ರಿಯತೆಯಂತೂ ಇರಲಿಕ್ಕೆ ಸಾಧ್ಯವೇ ಇಲ್ಲ. ಇವರು ವಾಸಿಸುವುದು ಕಾಡಿನ ಅಂಚಿನಲ್ಲಿಯೋ ಅಥವಾ ಗುಡ್ಡ ಬೆಟ್ಟಗಳಲ್ಲಿಯೋ ಆಗಿರುತ್ತದೆ. ಇದರಿಂದ ಇವರ ಪರಿಚಯವೂ ಜನತೆಗೆ ಇರುವುದಿಲ್ಲ. ಇಂದಿನ ಮುಖ್ಯವಾಹಿನಿಯಲ್ಲಿ ರಾಜಕೀಯ ಪ್ರವೇಶಿಸಬೇಕಾದರೆ ಸಮೂಹ ಮಾಧ್ಯಮಗಳ ಮೊರೆ ಹೋಗಲೇ ಬೇಕಾಗಿರುತ್ತದೆ. ಇಲ್ಲವಾದಲ್ಲಿ ಯಾವ ಕಾರಣಕ್ಕೂ ಇಂಥಹ ವ್ಯಕ್ತಿಗೆ ರಾಜಕೀಯ ಪ್ರವೇಶ ಪಡೆಯಲು ಸಾಧ್ಯವಿಲ್ಲ. ಆದ್ದರಿಂದ ಅಲಕ್ಷಿತರು ಮೀಸಲಾತಿಯ ಆಧಾರದ ಮೇಲೆ ಮಾತ್ರ ಗ್ರಾಮ ಪಂಚಾಯತಿ ಹಾಗೂ ಪಟ್ಟಣ ಪಂಚಾಯತಿಯಲ್ಲಿ ಸ್ಥಾನ ಪಡೆಯುತ್ತಿದ್ದಾರೆ. ಈ ರೀತಿಯಿಂದ ಪಡೆದ ಸ್ಥಾನ ಹೇಗಿರುತ್ತದೆಂದರೆ ದೇವಾಲಯದ ಎದುರಿನ ಕಲ್ಲಿನ ಮೂರ್ತಿಯಂತೆ ಇರುತ್ತದೆ. ಇವರು ಕೇವಲ ಕುರ್ಚಿಯಲ್ಲಿ ಉಪಸ್ಥಿತಿಯನ್ನು ಮಾತ್ರ ಪಡೆದಿರುತ್ತಾರೆ. ಇವರಲ್ಲಿ ಶಿಕ್ಷಣವಾಗಲಿ, ರಾಜಕೀಯ ವಿದ್ಯಮಾನಗಳ ಅರಿವಾಗಲಿ ಇರುವುದಿಲ್ಲ. ಉಳಿದವರು ತೆಗೆದುಕೊಂಡ ನಿರ್ಧಾರಕ್ಕೆ ಸರಿ-ತಪ್ಪು ಹೇಳುವ ಸಾಮರ್ಥ್ಯವೂ ಇವರಲ್ಲಿ ಇರುವುದಿಲ್ಲ. ಇಂತಹ ಸ್ಥಿತಿಯಲ್ಲಿ ಅಲಕ್ಷಿತರು ರಾಜಕೀಯ ಪ್ರವೇಶ ಮಾಡಬೇಕಾಗಿರುತ್ತದೆ. ಗ್ರಾಮ ಪಂಚಾಯತಿ ಹಾಗೂ ತಾಲೂಕು ಪಂಚಾಯತಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಅಲೆಮಾರಿ, ಅರೆ ಅಲೆಮಾರಿಗಳಿಗಾಗಿ ಮೀಸಲಾತಿ ಇಡುತ್ತಾರೆ. ಈ ಮೀಸಲಾತಿಯ ಸ್ಥಾನಗಳನ್ನು ತಮ್ಮ ತಾಳಕ್ಕೆ ಕುಣಿಯುವ, ಯಾವ ವಿರೋಧದ ಅಲೆಯನ್ನು ಎಬ್ಬಿಸದ, ಮುಖ್ಯವಾಹಿನಿಯಲ್ಲಿ ನಡೆಯುವ ಘಟನೆಗಳ ಪರಿಚಯವೂ ಇಲ್ಲದ ಅಲಕ್ಷಿತ ಸಮುದಾಯಗಳ ಮಹಿಳೆಯರನ್ನು ಈ ಸ್ಥಾನ ತುಂಬಲು ಬಳಸಿಕೊಳ್ಳುತ್ತಾರೆ. ಈ ವಿದ್ಯಮಾನ ಸಮೂಹ ಮಾಧ್ಯಮ ಮತ್ತು ಅಲಕ್ಷಿತರ ಸಂಬಂಧವನ್ನು ಇನ್ನೂ ಕೆಳಮಟ್ಟಕ್ಕೆ ತಲುಪಿಸುತ್ತದೆ.

೧೧. "ಭಾರತ ಅನೇಕ ಧರ್ಮಗಳ ಅನುಯಾಯಿಗಳನ್ನು ಹೊಂದಿದೆ. ಆದರೂ ಇದರ ಮಧ್ಯೆಧರ್ಮಗಳ ಸಹಿಷ್ಣುತೆಯನ್ನು ಕಾಪಾಡಿಕೊಂಡು ಬಂದಿದೆ. ಇಂದಿನ ದಿನಗಳಲ್ಲಿ ಮುಖ್ಯವಾಹಿನಿಯ ಸ್ವಾರ್ಥ ಜನರು ತಮ್ಮ ರಾಜಕೀಯ ಲಾಭಕ್ಕೋಸ್ಕರ ಧರ್ಮಗಳ ಮಧ್ಯೆ ಬೆಂಕಿ ಹಚ್ಚಿ ಶಾಂತಿ ಕದಡುತ್ತಿದ್ದಾರೆ. ಇದರಿಂದ ಎರಡು ಧರ್ಮಗಳ ಕಲಹದಲ್ಲಿ ವಿಷಬೀಜ ಬಿತ್ತಿದ ಪ್ರಭಾವಿ ವ್ಯಕ್ತಿಗಳು ತಮ್ಮ ಕಾರ್ಯವನ್ನು ಸೂಸೂತ್ರವಾಗಿ ಮಾಡಿಕೊಳ್ಳುತ್ತಿದ್ದಾರೆ. ಆದರೆ ಈ ಕೋಮುವಾದದಿಂದ ನಷ್ಟ ಅನುಭವಿಸುವವರು ಮಾತ್ರ ಅಲಕ್ಷಿತ ಸಮುದಾಯದವರು".[೬]

ಇವರು ಮುಖ್ಯವಾಹಿನಿಯಿಂದ ದೂರವಿದ್ದು ಹೇಗೋ ಜೀವನ ಸಾಗಿಸುತ್ತಿದ್ದಾರೆ. ಅವರ ಮತ್ತು ಮೇಲ್ವರ್ಗದವರ ನಡುವೆ ಕೋಮುವಾದ ಹುಟ್ಟಿಸಿ ಗಲಭೆ ನಡೆಸುವ ಲಾಭಿ ಜನರು ತಮ್ಮ ಆಸೆಯನ್ನು ಪೂರೈಸಿಕೊಂಡು ಈ ಎರಡೂ ವರ್ಗಗಳ ನಡುವೆ ಶಾಂತಿ ಕೆಡುವಂತೆ ಮಾಡುತ್ತಾರೆ. ಭಾರತದಲ್ಲಿರುವ ಯಾವುದೇ ಧರ್ಮಗಳು ಬೇರೆ ಧರ್ಮವನ್ನು ಹಳಿಯುವ ಅಥವಾ ಹಿಂಸಾವೃತ್ತಿಯನ್ನು ಪ್ರಚೋದಿಸುವ ತತ್ವವನ್ನು ಬೋಧಿಸಿಲ್ಲ. ಎಲ್ಲರೂ ಪರಸ್ಪರ ಸಹಕಾರದಿಂದ, ಅಸೂಯೆ ರಹಿತವಾಗಿ, ಶಾಂತಿಪಾಲನೆ ಮಾಡಿಕೊಂಡು ಸಮಾಜದಲ್ಲಿ ಜೀವಿಸಬೇಕೆಂದು ಹೇಳುತ್ತದೆ. ಆದರೆ ಸಮೂಹ ಮಾಧ್ಯಮಗಳು ಲಾಭದ ಆಸೆಗೆ ಕೋಮುಗಲಭೆ ಮಾಡುವ ಲಾಭಿ ಜನರಿಗೆ ತಮ್ಮ ಸಹಕಾರ ನೀಡಿ ನಡೆದ ವಿಷಯವನ್ನು ರಂಗುರಂಗಾಗಿ, ತಿರುಚಿ ಚಿತ್ತರಿಸಿದಾಗ ಸಮಾಜದ ಶಾಂತಿ ಭಂಗವಾಗುತ್ತದೆ. ವಾಸ್ತವತೆಯನ್ನು ಮರೆತು, ಲಂಚದ ಆಸೆಗೆ ಮಾರುಹೋಗಿ ಅಥವಾ ವಿವಿಧ ಆಮಿಷಗಳಿಗೆ ಬಾಯಿ ಬಿಟ್ಟು ಸಮಾಜದ ಶಾಂತಿ ಕದಡುತ್ತವೆ. ಇದರಿಂದ ಮುಖ್ಯವಾಹಿನಿಗೆ ಬರಬೇಕಾದ ನಿರ್ಲಕ್ಷಿತರು ತುಂಬಾ ದೂರ ಸರಿದು ಅವನತಿಯತ್ತ ಸಾಗುತ್ತಾರೆ. ಇದನ್ನು ತಡೆಯಲು ಸಮೂಹ ಮಾಧ್ಯಮಗಳು ತಮ್ಮ ಮಾಧ್ಯಮ ತತ್ವಗಳನ್ನು ಅಳವಡಿಸಿಕೊಂಡಾಗ ಧರ್ಮದಲ್ಲಿ ಒಡಕು ಮಾಡುವುದನ್ನು ತಪ್ಪಿಸಬಹುದಾಗಿದೆ.

೧೨. ಇಂದಿನ ಮುಖ್ಯವಾಹಿನಿಯಲ್ಲಿ ದಿನದ ಪ್ರತಿ ಕ್ಷಣದಲ್ಲೂ ಹೊಸತನವನ್ನು ಅಳವಡಿಸಿಕೊಳ್ಳುತ್ತಿರುತ್ತಾರೆ. ಈ ಆಧುನಿಕತೆಯನ್ನು ನಗರದ ಜನತೆ ಕೂಡಲೇ ಅಳವಡಿಸಿಕೊಂಡು ಬಿಡುತ್ತವೆ. ಸಮೂಹ ಮಾಧ್ಯಮಗಳಾದರೂ ಈ ಆಧುನಿಕತೆಯ ಅಳವಡಿಕೆಯಿಂದಾಗುವ ಗುಣಾವಗುಣಗಳನ್ನು ವಿಮರ್ಶಿಸಿ ಅದನ್ನು ಜನತೆಗೆ ತಿಳಿಸುತ್ತದೆ. ಸುಶಿಕ್ಷಿತರು ಕೂಡಲೇ ಅದನ್ನು ಸ್ವೀಕರಿಸಿ ದೈನಂದಿನ ಜೀವನದಲ್ಲಿ ಕಾರ್ಯಗತಗೊಳಿಸುತ್ತಾರೆ. ಆದರೆ ಅಲಕ್ಷಿತ ಸಮುದಾಯದವರು ಈ ಆಧುನಿಕತೆಯನ್ನು ಅಳವಡಿಸಿಕೊಳ್ಳಲು ಹಿಂಜರಿಯುತ್ತಾರೆ. ಏಕೆಂದರೆ ಅವರು ಇನ್ನೂ ಗತಕಾಲದಲ್ಲೇ ಇದ್ದಾರೆ. ಇವರಿಗೆ ಆಧುನಿಕತೆಯ ಅಳವಡಿಕೆ ಮಾಡಿಕೊಂಡರೆ ದೈವ ಮುನಿದು ತಮ್ಮನ್ನು ನಾಶ ಮಾಡುತ್ತದೆ ಎಂಬ ನಂಬಿಕೆ. ಉದಾಹರಣೆಗೆ ಗ್ರಹಣಗಳು ಸಂಭವಿಸಿದಾಗ ಮುಖ್ಯವಾಹಿನಿಯ ಜನರು ಅದನ್ನು ವೀಕ್ಷಿಸುತ್ತಾರೆ. ಗ್ರಹಣಕ್ಕೆ ಕಾರಣವನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡುತ್ತಾರೆ. ಆದರೆ ಅಲಕ್ಷಿತರು ಗ್ರಹಣವೆಂದರೆ ದೈವದ ಮುನಿಸು. ಗ್ರಹಣ ವೀಕ್ಷಣೆ ಮಾಡಿದರೆ ದೈವ ಮುನಿದು ಕೆಡುಕನ್ನು ಮಾಡುತ್ತದೆ ಎಂಬಿತ್ಯಾದಿ ಮೂಢನಂಬಿಕೆಗೆ ಮಾರು ಹೋಗಿದ್ದಾರೆ. ಇವರು ಇಂದಿನ ಆಧುನಿಕ ಯುಗದ ಯಾವ ಆಧುನಿಕತೆಯನ್ನೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳದೇ ಅದರಿಂದ ದೂರ ಸರಿಯುತ್ತಾರೆ. ಸಮೂಹ ಮಾಧ್ಯಮಗಳಾದರು ಈ ಅಲಕ್ಷಿತರಿಗೆ ಆಧುನಿಕತೆಯ ಗಂಧಗಾಳಿ ಇಲ್ಲದ ಕಾರಣ ಇವರ ತಂಟೆಗೆ ಹೋಗುವುದೇ ಇಲ್ಲ. ಒಂದುವೇಳೆ ಹೋದರೂ ಸಮೂಹ ಮಾಧ್ಯಮಗಳಿಗೆ ಯಾವ ಲಾಭವೂ ಇಲ್ಲ. ಹಾಗೆಯೇ ಅಲಕ್ಷಿತರು ಆಧುನಿಕತೆಗೆ ಸ್ಪಂದಿಸುವುದೂ ಇಲ್ಲ.

೧೩. ದಿನದಿಂದ ದಿನಕ್ಕೆ ವೃತ್ತಿ ಶಿಕ್ಷಣ ಜಿಕ್ಕಟ್ಟು ಜಟಿಲವಾಗುತ್ತಿದ್ದು, ಅಲಕ್ಷಿತ ಸಮುದಾಯದ ಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಇದಕ್ಕೆ ಪರಿಹಾರ ಕಂಡು ಹಿಡಿಯಲು ಸರ್ಕಾರಗಳು ವಿಫಲವಾಗಿವೆ. ಇದರ ಪೂರ್ಣ ಉಪಯೋಗವನ್ನು ಖಾಸಗಿ ಸಂಸ್ಥೆಗಳು ಪಡೆಯುತ್ತಿವೆ. ನಿಗದಿಪಡಿಸಿದ ಶುಲ್ಕಕ್ಕಿಂತ ಅಧಿಕ ಶುಲ್ಕ ಪಡೆಯುತ್ತಿವೆ. ಅಲಕ್ಷಿತ ಸಮುದಾಯಕ್ಕೆ ಯಾವುದೇ ಆದಾಯದ ಮೂಲಗಳಿಲ್ಲದ ಕಾರಣ ಇವರ ಮಕ್ಕಳಿಗೆ ಶಿಕ್ಷಣ ನೀಡುವುದು ಕಷ್ಟವಾಗಿದೆ. ಒಂದು ವೇಳೆ ಶಿಕ್ಷಣ ನೀಡಲು ಮುಂದಾದರೂ ಈ ಖಾಸಗಿ ಸಂಸ್ಥೆಗಳ ಶುಲ್ಕ ಕಟ್ಟಲು ಸಾಧ್ಯವಾಗುತ್ತಿಲ್ಲ. ಇದರಿಂದ ನಿರ್ಲಕ್ಷಿತ ಸಮುದಾಯದ ಇಂದಿನ ಪೀಳಿಗೆಗಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಶಿಕ್ಷಣ ಇಲ್ಲದ ಇವರನ್ನು ಸಮೂಹ ಮಾಧ್ಯಮಗಳು ತಮ್ಮ ಹತ್ತಿರ ಎಂದಿಗೂ ಸೇರಿಸಿಕೊಳ್ಳುವುದಿಲ್ಲ ಅಥವಾ ಅವರೆಡೆಗೆ ತಮ್ಮ ಗಮನವನ್ನು ಹರಿಸುವುದಿಲ್ಲ. ಈ ಅಲಕ್ಷಿತ ಸಮುದಾಯಗಳು ಏನಾದರೂ ಸುದ್ದಿ ಮಾಡಿದಲ್ಲಿ ಮಾತ್ರ ಸಮೂಹ ಮಾಧ್ಯಮಗಳು ಇವರತ್ತ ಧಾವಿಸುತ್ತವೆ. (ಅಂದರೆ ರಾಜಕೀಯ ವ್ಯಕ್ತಿಗಳು ಅಲಕ್ಷಿತರಲ್ಲಿ ಹೋದರೆ, ಅಲಕ್ಷಿತರನ್ನು ಎತ್ತಂಗಡಿ ಮಾಡಿದಾಗ, ಅಲಕ್ಷಿತರ ಮೇಲೆ ದೌರ್ಜನ್ಯ ನಡೆದಾಗ ಹೀಗೆ ಮುಂತಾದ ಸುದ್ದಿಯಾದಾಗ.) ಇಲ್ಲವಾದಲ್ಲಿ ಅವೆರಡೂ ಎದಿರು ಬದಿರು ಆಗುವುದಿಲ್ಲ.

೧೪. "ಅಲಕ್ಷಿತರು ಇಂದು ಏಣಿ-ಶ್ರೇಣಿ ವ್ಯವಸ್ಥೆಯಲ್ಲಿ ಅತಿಯಾದ ಕೆಳಸ್ಥರದಲ್ಲಿ ಇದ್ದಾರೆ. ಉಳಿದ ಮೇಲ್ವರ್ಗದ ಸಮುದಾಯಗಳು ಮುಖ್ಯವಾಹಿನಿಯಲ್ಲಿದ್ದು ಮೇಲಿನ ಸ್ಥರಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಹಾಗೆಯೇ ಇಂದು ರಾಜಕೀಯ ವ್ಯಕ್ತಿಗಳು ಸಮಾಜದಲ್ಲಿ ಪ್ರಬಲರಾಗಿದ್ದಾರೆ. ಇವರ ಜೊತೆ ಶ್ರೀಮಂತ ಮೇಲ್ವರ್ಗ ಹಾಗೂ ಸಮೂಹ ಮಾಧ್ಯಮಗಳು ಕೈ ಜೋಡಿಸಿವೆ. ಮೇಲ್ವರ್ಗದ ಜನತೆ ರಾಜಕೀಯ ಪ್ರಭಾವಿ ವ್ಯಕ್ತಿಗಳು ಈ ನಿರ್ಲಕ್ಷಿತರನ್ನು ಶೋಷಿಸುತ್ತಾ ಬಂದಿದ್ದಾರೆ."[೨]. ಉದಾಹರಣೆಗೆ ಪ್ರಭಾವಿ ರಾಜಕೀಯ ವ್ಯಕ್ತಿಗಳು ತಮ್ಮ ಆಂತರಿಕ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಸರ್ಕಾರದ ಮೂಲಕವಾಗಿ ಅನೇಕ ಅರಣ್ಯ ಕಾಯ್ದೆಗಳನ್ನು ತರುತ್ತಿದ್ದಾರೆ ಇದರಿಂದ ಅರಣ್ಯದಲ್ಲಿ ವಾಸಿಸುತ್ತಿರುವ ಅಲಕ್ಷಿತರಿಗೆ ಕಾಡು ದೂರವಾಗಿ, ಆದಾಯದ ಮೂಲವು ಇಲ್ಲದಂತಾಗಿ ನಿರ್ಗತಿಕರಾಗುತ್ತಿದ್ದಾರೆ. ಆದರೆ ಈ ಶ್ರೀಮಂತರು ಅರಣ್ಯಗಳನ್ನು ಸ್ವಾರ್ಥಕೊಸ್ಕರ ಬಳಸಿ ಲೂಟಿ ಮಾಡುತ್ತಿದ್ದಾರೆ. ಸಮೂಹ ಮಾಧ್ಯಮಗಳಾದರೂ ಇದನ್ನು ಕಂಡರೂ ಕಾಣದಂತೆ ತೆಪ್ಪಗಿದ್ದಾರೆ. ಕಾರಣ ರಾಜಕೀಯ ವ್ಯಕ್ತಿಗಳು ನೀಡುವ ಆಮಿಷಕ್ಕೆ ಒಳಗಾಗಿ ಅವರ ಕೈಗೊಂಬೆಗಳಾಗಿದ್ದಾರೆ. ನಿರ್ಲಕ್ಷಿತ ಸಮುದಾಯಗಳು ದಿನದ ತುತ್ತಿನ ಚೀಲ ತುಂಬಿಸಿಕೊಳ್ಳಲು ಹಾಗೂ ವಾಸ ಮಾಡಲು ಕಷ್ಟವಾಗಿ ಬೀದಿ ಬದಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ. ಮುಖ್ಯವಾಹಿನಿಯ ಜನರಿಂದ ತೀವ್ರ ತರಹವಾದ ಶೋಷಣೆಗೆ ಒಳಗಾಗಿ ಜೀವಂತ ನರಕಸ್ಥಿತಿ ಅನುಭವಿಸುತ್ತಿದ್ದಾರೆ. ಮಾಧ್ಯಮಗಳೂ ಕಣ್ಣಿದ್ದು ಕುರುಡಾಗಿದ್ದು ತಮಗೆ ಲಾಭ ಬರುವಂತಹ ಆಮಿಷದ ಸ್ನೇಹಕ್ಕೆ

ಕೈಚಾಚಿ ಈ ನಿರ್ಲಕ್ಷಿತ ಸಮುದಾಯಗಳ ಅವನತಿಗೂ, ಅವರ ಶೋಷಣೆಗೂ ಪರೋಕ್ಷವಾಗಿ ಕಾರಣವಾಗಿದೆ.

೧೫. ನಿರ್ಲಕ್ಷಿತರು ಈ ಸಮಾಜದಲ್ಲಿ ಮೇಲ್ವರ್ಗದಿಂದ ಅನೇಕ ರೀತಿಯ ಶೋಷಣೆಯನ್ನು ಅನುಭವಿಸುತ್ತಿದ್ದಾರೆ. ನಿರ್ಲಕ್ಷಿತರಿಗೆ ರಾಜಕೀಯವಾಗಲೀ, ಸಾಮಾಜಿಕವಾಗಲೀ, ಸರ್ಕಾರದಿಂದಾಗಲೀ, ಶ್ರೀಮಂತರಿಂದಾಗಲೀ ಯಾವುದೇ ರೀತಿಯ ಭದ್ರತೆಯಾಗಲಿ ಅಥವಾ ಆಧಾರವಾಗಲಿ ಇಲ್ಲ. ಇಂಥ ಸಂದರ್ಭದಲ್ಲಿ ಅನೇಕರು ತಮ್ಮ ಮಾಡಿದ ತಪ್ಪನ್ನು ಮುಚ್ಚಲು ನಿರ್ಲಕ್ಷಿತರನ್ನು ಅಪರಾಧಿಗಳನ್ನಾಗಿಸುತ್ತದೆ. "ಮುಖ್ಯವಾಹಿನಿಯ ಜನರು ಮಾಡುವ ಎಲ್ಲಾ ತರಹದ ಅಪರಾಧದ ಕೆಲಸಕ್ಕೆ ಅಲಕ್ಷಿತ ಸಮುದಾಯದವರನ್ನು ಗುರಿ ಮಾಡುತ್ತಾರೆ. ಇವರು ವಾಸಿಸುವುದು ಬೇರೆಯವರ ಭೂಮಿಯಲ್ಲಿ. ಇಂಥಹ ಸಂದರ್ಭದಲ್ಲಿ ಮೇಲ್ವರ್ಗದವರು (ಅಪರಾಧ ಮಾಡಿದವರು) ಹೇಳಿದ್ದನ್ನು ಕೇಳದಿದ್ದ ಪಕ್ಷದಲ್ಲಿ ಊರಿನವರು ಅಥವಾ ಗ್ರಾಮದವರೆಲ್ಲಾ ಸೇರಿ ಈ ನಿರ್ಲಕ್ಷಿತರನ್ನು ಅಪರಾಧಿಗಳನ್ನಾಗಿಸಿ ಬಹಿಷ್ಕಾರ ಹಾಕುತ್ತಾರೆ. ಇದರಿಂದ ನಿರ್ಲಕ್ಷಿತರು ನರಕದ ಪಾಡನ್ನು ಪಡುತ್ತಾರೆ".[೯] ಬಹಿಷ್ಕಾರ ಎಂದರೆ ಯಾರು ಅವರಿಗೆ ಸಹಾಯ ಮಾಡುವಂತಿಲ್ಲ. ಅವರು ಆ ಊರನ್ನು ತೊರೆದು ದೂರ ಎಲ್ಲಾದರೂ ಹೋಗಬೇಕು ಅಥವಾ ಅವರ ಸಮುದಾಯದವರೂ ಸಹ ಇವರೊಡನೆ ಮಾತನಾಡುವಂತಿಲ್ಲ, ಸಹಾಯ ಮಾಡುವಂತಿಲ್ಲ. ಇಂತಹ ಸಮಯದಲ್ಲಿಯೂ ಸಮೂಹ ಮಾಧ್ಯಮಗಳು ಬಹಿಷ್ಕಾರ ಹಾಕಿದವರನ್ನೇ ಬೆಂಬಲಿಸುತ್ತಾರೆ. ಏಕೆಂದರೆ ಇವರು ರಾಜಕೀಯ ವ್ಯಕ್ತಿಗಳೋ, ಸಮಾಜದ ಶ್ರೀಮಂತ ವ್ಯಕ್ತಿಗಳೋ, ಪ್ರಭಾವಿ ವ್ಯಕ್ತಿಗಳೋ ಆಗಿರುವುದರಿಂದ ಅವರು ಕೊಡುವ ಎಂಜಲು ಕಾಸಿಗೆ ಸಮೂಹ ಮಾಧ್ಯಮದ ಜನರು ಮಾರಿ ಹೋಗಿದ್ದಾರೆ. ಲಾಭದ ಆಸೆಯಿಂದ ಅಪರಾಧವನ್ನು ಅಲಕ್ಷಿತ ಸಮುದಾಯದ ಮೇಲೆ ಕಟ್ಟಿ ತಾವು ಮಾತ್ರ ನಿಶ್ಚಿಂತೆಯಿಂದ ಇರುತ್ತಾರೆ. ಅಲ್ಲಿಯೂ ಸಹ ತಮ್ಮದೇ ಆದ ಲಾಭ ಪಡೆಯುತ್ತಾರೆ. ಸಮೂಹ ಮಾಧ್ಯಮಗಳೂ ಈ ಬಹಿಷ್ಕರಿಸಿದವರ ಸ್ಥಿತಿಗತಿಗಳನ್ನು ಅಲಕ್ಷಿಸುತ್ತಾರೆ. ಈ ಬಹಿಷ್ಕಾರ ಎನ್ನುವದು ಅಲಕ್ಷಿತ ಸಮುದಾಯಗಳಿಗೆ ಒಂದು ಕಂಟಕವಾಗಿ ಪರಿಣಮಿಸಿದೆ. ಇದು ಅಲಕ್ಷಿತರ ಮತ್ತು ಸಮೂಹ ಮಾಧ್ಯಮಗಳ ನಡುವೆ ದೊಡ್ಡ ಬಿರುಕನ್ನು ಸೃಷ್ಟಿಸುತ್ತದೆ. (ಮಾಹಿತಿ: ಪ್ರಜಾವಾಣಿ ಅಗಸ್ಟ ೨೦, ೨೦೧೩)

೧೬. ಸಂಘೇ ಶಕ್ತಿ ಕಲಿಯುಗೇ ಎಂಬ ಭಗವದ್ಗೀತೆಯ ಉಕ್ತಿಯಂತೆ ಸಂಘಶಕ್ತಿಯಿಂದ ಮಾತ್ರ ಸಮಾಜದ ಉದ್ಧಾರ ಸಾಧ್ಯ. ಸಂಘಟನೆಯಿಂದ ಬರುವ ಶಕ್ತಿಯನ್ನು ನಾವು ಹೇಗೆ ಮತ್ತು ಏತಕ್ಕೆ ಬಳಸಿಕೊಳ್ಳಬೇಕೆಂಬುದು ಆಯಾ ಕಾಲದ ಸಮಾಜಕ್ಕೆ ಬಿಟ್ಟ ವಿಚಾರ. ನಾವು ಭಾರತೀಯರು ದಾಸ್ಯದಿಂದ ಮುಕ್ತಿ ಪಡೆಯಲು ತುಂಬಾ ಅವಶ್ಯಕವಾದ ಸಂಘಟನೆಯಿಂದ ಬ್ರಿಟಿಷ್‌ರನ್ನು ಓಡಿಸಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸ್ಥಾಪಿಸಿಕೊಂಡೆವು. ಹಲವು ಭಿನ್ನಾಭಿಪ್ರಾಯಗಳು

ಆಗಾಗ ತಲೆದಾರಿದಾಗಲೂ ಸ್ವಾತಂತ್ರ್ಯವೊಂದೇ ಗುರಿ ಸಾಧಿಸುವ ಛಲದಿಂದ ಸಂಘಟನೆ ಶಕ್ತಿಯಾಗಿ ರೂಪುಗೊಂಡು ಫಲ ನೀಡಿತು. ಸಂಘಟನೆಯಿಂದ ಸಾಮಾಜಿಕ ಶಕ್ತಿ ಹೆಚ್ಚಾಗಬೇಕಿತ್ತು. ಆದರೆ ಹಾಗಾಗಿಲ್ಲ. ಏಕೆಂದರೆ ಸಂಘಟನೆಯಿಂದ ಪ್ರತಿಭಟನೆಗಳು ಹುಟ್ಟಿದವು. ಸ್ವಾತಂತ್ರ್ಯ ಪಡೆಯುವ ಕಾಲಕ್ಕೆ ಚಳುವಳಿಗಳು ಅವಶ್ಯವಿದ್ದಿತ್ತು. ಆದರೆ ಅವುಗಳ ಪಳಯುಳಿಕೆಗಳಂತಿರುವ ಇಂದಿನ ಮುಷ್ಕರಗಳು, ಪ್ರತಿಭಟನೆಗಳು, ಬಂದ್‌ಗಳು, ರಸ್ತೆ ತಡೆ, ಕೆಲಸದಿಂದ ವಿಮುಖರಾಗುವುದು ಮುಂತಾದವುಗಳು ಸಂಪೂರ್ಣ ಸಾಮಾಜಿಕ ಉದ್ಧಾರಕ್ಕೆ ಬಳಕೆಯಾಗುತ್ತಿಲ್ಲ. ಸಮಾಜದ ಒಂದು ವರ್ಗ ಅಥವಾ ಗುಂಪು ತನಗಾದ ಅನ್ಯಾಯವನ್ನು ಇಡಿ ಸಮಾಜಕ್ಕೆ ತೋರಿಸಲು ಸಂಘಶಕ್ತಿಯನ್ನು ಬಳಸಿಕೊಳ್ಳಬೇಕಿದೆ. ಈ ಸಂಘಟನೆಯಿಂದ ಭ್ರಷ್ಟಾಚಾರ ತೊಲಗಿಸಲು, ಬಡತನ ಓಡಿಸಲು, ಪರಿಸರ ಉಳಿಸಲು, ಸಂಸ್ಕೃತಿ ಕಾಪಾಡಲು, ದೇಶಾಭಿಮಾನವನ್ನು ಬೆಳೆಸಿಕೊಳ್ಳಲು ಬಳಸಬಹುದಾಗಿದೆ. ಆದರೆ ನಿರ್ಲಕ್ಷಿತ ಸಮುದಾಯಗಳಲ್ಲಿ ಸಂಘಟನೆಗಳು ಇಲ್ಲ. ಇವರು ಅಲೆಮಾರಿಗಳು. ಇವರು ಒಂದೆಡೆ ಸೇರುವುದು ಬಹಳ ಕಡಿಮೆ. ಇವರಿಗೆ ದಿನ ಎರಡು ಹೊತ್ತಿನ ಊಟಕ್ಕೂ ಕಷ್ಟವಾಗಿರುವಾಗ ಸಂಘಟನೆಯ ಗೋಜಿಗೆ ಹೋಗುವುದಿಲ್ಲ. ಅಲಕ್ಷಿತರು ಸಂಘಟಿಸದಿದ್ದರೆ ಅವರಿಗೆ ಮುಖ್ಯವಾಹಿನಿಗೆ ಬರಲು ಸಾಧ್ಯವಿಲ್ಲ. ತಮ್ಮ ಸಮಸ್ಯೆಗಳನ್ನು ಸಮಾಜಕ್ಕೆ ಮತ್ತು ಸರ್ಕಾರಕ್ಕೆ ತೋರಿಸಲು ಸಾಧ್ಯವಿಲ್ಲ. ಸಮೂಹ ಮಾಧ್ಯಮಗಳಾದರೂ ಸಂಘಟನೆಗಳಿದ್ದರೆ ಮಾತ್ರ ಅವರಿಗೆ ಬೆಂಬಲ ಸೂಚಿಸುತ್ತಾರೆ. ಅಲ್ಲೋ ಇಲ್ಲೋ ಕೇವಲ ಒಂದೆರಡು ಕುಟುಂಬಗಳು ಕೂಡಿಕೊಂಡು ಪ್ರತಿಭಟಿಸಿದರೆ ಅದು ಸಂಘಟನೆಯಾಗದೇ ಕೇವಲ ಅರಣ್ಯರೋಧನವಾಗುತ್ತದೆ. ಇಂತಹ ಅರಣ್ಯ ರೋಧನಕ್ಕೆ ಮಾಧ್ಯಮಗಳ ಸಹಕಾರ ದೊರೆಯದೆ ಅವು ಕಣ್ಮರೆಯಾಗುತ್ತವೆ.

೧೭. ಅಲಕ್ಷಿತ ಸಮುದಾಯಗಳು ವಾಸಿಸುವ ಪ್ರದೇಶ ಬಹು ದರ್ಗಮವಾಗಿರುತ್ತದೆ. ಅರಣ್ಯದಲ್ಲಿ ಅಥವಾ ಅರಣ್ಯದ ಅಂಚಿನಲ್ಲಿ, ಗುಡ್ಡ, ಬೆಟ್ಟ, ಕೊಳ್ಳಗಳಲ್ಲಿ, ನದಿ ತೀರಗಳಲ್ಲಿ, ಸಮುದ್ರದ ಅಂಚಿನಲ್ಲಿ ಹೀಗೆ ಮುಂತಾದ ಕಡೆ ಇವರ ವಾಸಸ್ಥಳವಿರುತ್ತದೆ. ಇವರು ವಾಸಿಸುವಲ್ಲಿ ಸರಿಯಾದ ರಸ್ತೆಗಳು ಇರುವುದಿಲ್ಲ. ಮಳೆಗಾಲದಲ್ಲಂತೂ ಇವರನ್ನು ತಲುಪುವುದು ಅತಿ ಕಷ್ಟದ ಕೆಲಸ. ಹೀಗಿರುವಾಗ ಸಮೂಹ ಮಾಧ್ಯಮಗಳಾದರೂ ಹೇಗೆ ಇವರತ್ತ ಧಾವಿಸುತ್ತಾರೆ? ಬೇರೆಯಾವ ಮೇಲ್ವರ್ಗದ ಹಾಗೂ ಮುಖ್ಯವಾಹಿನಿಯ ಜನರ ಸಂಪರ್ಕವೂ ಇಲ್ಲದ ಪ್ರದೇಶದಲ್ಲಿ ಅಲಕ್ಷಿತರು ಇರುವುದರಿಂದ ಇವರನ್ನು ಸಂಪರ್ಕಿಸುವುದಾದರೂ ಹೇಗೆ? ಕಾಡು, ಗುಡ್ಡ, ಬೆಟ್ಟಗಳತ್ತ ಯಾರೂ ಕೆಲಸವಿಲ್ಲದೆ ಇಂದಿನ ದಿನಗಳಲ್ಲಿ ಹೋಗುವುದಿಲ್ಲ. ಅದರಲ್ಲೂ ಮುಖ್ಯವಾಹಿನಿಯ ಜನರು ಹೆಚ್ಚಾಗಿ ನಗರ ಪ್ರದೇಶದಲ್ಲಿ ಎಲ್ಲಾ ಮೂಲಭೂತ ವ್ಯವಸ್ಥೆಯೊಂದಿಗೆ ಜೀವನ ನಡೆಸುತ್ತಾರೆ. ಆದರೆ ಅಲಕ್ಷಿತರು ಮೂಲಭೂತ ಸೌಕರ್ಯಗಳಿಲ್ಲದೇ, ಕಾಡಿನ ಪ್ರಾಣಿಗಳಂತೆ ಜೀವನ ನಡೆಸುತ್ತಿದ್ದಾರೆ. ಸಮೂಹ ಮಾಧ್ಯಮಗಳು ಮುಖ್ಯವಾಹಿನಿಯ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಸಮಸ್ಯೆಯ ಪರಿಹಾರಕ್ಕೆ ಶ್ರಮಿಸುತ್ತದೆ. ಮಾಧ್ಯಮಗಳಿಗೆ ಮುಖ್ಯವಾಹಿನಿಯ ಜನರನ್ನು ತಲುಪುವುದು ಬಹಳ

ಸುಲಭವಾಗಿರುತ್ತದೆ. ಅಲಕ್ಷಿತರು ವಾಸಿಸುವ ಭೌಗೋಳಿಕ ಪರಿಸರವನ್ನು ಮಾಧ್ಯಮಗಳಿಗೆ ತಲುಪುವುದು ದುಸ್ತರವಾದ ಕೆಲಸವಾಗಿದೆ. ಆದ್ದರಿಂದ ಸಮೂಹ ಮಾಧ್ಯಮಗಳು ಅಲಕ್ಷಿತರ ತಂಟೆಗೆ ಹೋಗುವುದೇ ಇಲ್ಲ. (ಇವರ ಕಷ್ಟಗಳಿಗೆ ಸ್ಪಂದಿಸುವುದೇ ಇಲ್ಲ).

೧೮. ಅಲಕ್ಷಿತ ಸಮುದಾಯಗಳು ತಮ್ಮ ಬುಡಕಟ್ಟು ಸಂಸ್ಕೃತಿಯನ್ನು ಇಂದಿಗು ಉಳಿಸಿಕೊಂಡು ಬಂದಿದ್ದಾರೆ. ತಮ್ಮದೇ ಆದ ಸಂಪ್ರದಾಯ, ಆಚರಣೆ, ಧರ್ಮ, ನ್ಯಾಯ ತೀರ್ಮಾನಗಳು, ನಂಬಿಕೆ, ಹರಕೆ, ಬಲಿ ಸಂಪ್ರದಾಯ ಮುಂತಾದವುಗಳು. ಇವುಗಳನ್ನು ಚಾಚು ತಪ್ಪದೇ ಪಾಲಿಸುತ್ತ ಬಂದಿದ್ದಾರೆ. ಆದರೆ ಇಂದಿನ ಮುಖ್ಯವಾಹಿನಿಯ ಜನರು ಪಾಶ್ಚಿಮಾತ್ಯ ಸಂಸ್ಕೃತಿಯ ಅನುಕರಣೆ ಮಾಡುತ್ತಿದ್ದಾರೆ ಅಥವಾ ತಮ್ಮ ಸಂಸ್ಕೃತಿಯಲ್ಲಿ ಆಧುನಿಕತೆಯನ್ನು ಅಳವಡಿಸಿಕೊಂಡಿದ್ದಾರೆ. ಪ್ರತಿಯೊಂದು ಆಚರಣೆಗೂ ವೈಜ್ಞಾನಿಕ ಕಾರಣಗಳನ್ನು ಹುಡುಕಿ ಅದರ ಸರಿ ತಪ್ಪುಗಳ ವಿವೇಚನೆ ಮಾಡುತ್ತಾರೆ. ಇದರಲ್ಲಿ ಸರಿ ಅನಿಸಿದುದನ್ನು ಆಚರಣೆಗೆ ತರುತ್ತಾರೆ. ತಪ್ಪುಗಳನ್ನು ನಿರ್ದಾಕ್ಷಿಣ್ಯವಾಗಿ ಕಿತ್ತೊಗೆಯುತ್ತಾರೆ. ಆದರೆ ಅಲಕ್ಷಿತರು ಮಾತ್ರ ಹಿಂದಿನಿಂದ ಬಂದ ಆಚರಣೆಯಲ್ಲಿ ಸರಿಯಾವುದು, ತಪ್ಪು ಯಾವುದು ಎಂಬ ವಿವೇಚನೆ ಇಲ್ಲದೇ ಆಚರಿಸುತ್ತಿದ್ದಾರೆ. ಸಮೂಹ ಮಾಧ್ಯಮಗಳಾದರೂ ಇರುವುದು ಮುಖ್ಯವಾಹಿನಿಯಲ್ಲಿ. ಇವರು ಬೆಂಬಲಿಸುವುದು ಮುಖ್ಯವಾಹಿನಿಯ ಆಧುನಿಕ ಸಮಾಜವನ್ನು. ಸಂಸ್ಕೃತಿಯ ಆಚರಣೆ ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳಲ್ಲಿ ತುಂಬಾ ಅಂತರವನ್ನು ಸೃಷ್ಟಿಸುತ್ತಿದೆ.

೧೯. ಅಲಕ್ಷಿತ ಸಮುದಾಯಗಳು ಇಂದಿಗು ನೆಲೆ ನಿಲ್ಲದೇ ಒಂದು ಕಡೆಯಿಂದ ಇನ್ನೊಂದೆಡೆಗೆ ತಮ್ಮ ವೃತ್ತಿಗಾಗಿಯೋ, ಹೊಟ್ಟೆಪಾಡಿಗಾಗಿಯೋ ಅಥವಾ ಹವಾಮಾನ ವೈಪರೀತ್ಯದಿಂದಲೋ ಸಂಚರಿಸುತ್ತಿರುತ್ತಾರೆ. ಇವರಿಗೆ ವಾಸಿಸಲು ಸ್ವಂತ ಮನೆಯಾಗಲೀ, ಭೂಮಿಯಾಗಲೀ ಇಲ್ಲ. ಊರ ಹೊರಗಿನ ಬಯಲು, ಗುಡಿ, ಪಾಳು ಮಂಟಪ, ಕೊಳಚೆ ಪ್ರದೇಶಗಳೇ ಇವರ ವಾಸಸ್ಥಾನವಾಗಿರುತ್ತದೆ. ಇವರಿಗೆ ಇಂದಿನ ಪ್ರಜಾಪ್ರಭುತ್ವದಲ್ಲಿ ಯಾವುದೇ ಸ್ಥಾನಮಾನಗಳಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಗುರುತಿನ ಚೀಟಿಯೂ ಇಲ್ಲ. ಇವರಲ್ಲಿ ಕೆಲವರ ಹೆಸರು ಭಾರತದ ಚುನಾವಣಾ ಪಟ್ಟಿಯಲ್ಲಿ ಇನ್ನೂ ಸೇರ್ಪಡೆಯಾಗಿಲ್ಲ. ಇವರಿಗೆ ಇಂದಿನ ದಿನದಲ್ಲಿ ನಡೆವ ವಿದ್ಯಮಾನಗಳೂ ತಿಳಿಯುತ್ತಿಲ್ಲ. ಇವರನ್ನು ಸಂಪರ್ಕಿಸಲು ಬೇಕಾದ ಖಾಯಂ ವಿಳಾಸವೇ ಇವರಲ್ಲಿ ಇಲ್ಲ. ಹೀಗಿರುವಾಗ ಸಮೂಹ ಮಾಧ್ಯಮಗಳಾದರೂ ಇವರನ್ನು ತಲುಪುವುದಾದರು ಹೇಗೆ? ಇವರನ್ನು ಸಂಪರ್ಕಿಸಲು ಸಾಧ್ಯವಾಗದ ಕಾರಣ ಇವರ ಗೋಜಿಗೆ ಸಮೂಹ ಮಾಧ್ಯಮಗಳು ಹೋಗುವುದಿಲ್ಲ. ಇವರ ಅಲೆಮಾರಿತನದಿಂದ ಅಲಕ್ಷಿತರ ಮತ್ತು ಸಮೂಕ ಮಾಧ್ಯಮಗಳಲ್ಲಿನ ಅಂತರ ದಿನೇ ದಿನೇ ಹೆಚ್ಚಾಗುತ್ತಿದೆ. ಈ ಅಲೆಮಾರಿತನ ಅಲಕ್ಷಿತ ಸಮುದಾಯಗಳ ಅಬಿವೃದ್ಧಿಗೆ ದೊಡ್ಡ ಶಾಪವಾಗಿದೆ. ಹಾಗೂ ಸಮೂಹ ಮಾಧ್ಯಮ ಮತ್ತು ಅಲಕ್ಷಿತರ ನಡುವೆ ಬಿಕ್ಕಟ್ಟನ್ನು ಸೃಷ್ಟಿಸುತ್ತಿದೆ.

೨೦. ಇಂದಿನ ಸಮೂಹ ಮಾಧ್ಯಮಗಳು ತಮ್ಮಲ್ಲಿರುವ ಸಾಂಪ್ರದಾಯವನ್ನು ಇಂದಿಗೂ ನಡೆಸಿಕೊಂಡು ಬರುತ್ತಿದ್ದಾರೆ. ಅದು ಏನೆಂದರೆ ಮಾಧ್ಯಮಕ್ಕೆ ಜನರನ್ನು ಸೇರಿಸಿಕೊಳ್ಳುವಾಗ ಅವರಲ್ಲಿರುವ ಪ್ರತಿಭೆಯನ್ನು ಗುರುತಿಸದೆ ಕೇವಲ ಆಂಗ್ಲ ಭಾಷಾ ಜ್ಞಾನಕ್ಕೆ ಒತ್ತುಕೊಟ್ಟು, ಪದವಿ ಪ್ರಮಾಣ ಪತ್ರಕ್ಕೆ ಒತ್ತುಕೊಟ್ಟು ನೇಮಕ ಮಾಡಿಕೊಳ್ಳುತ್ತಿದ್ದಾರೆ. ಇವರಲ್ಲಿ ಅನೇಕ ಬಗೆಯ ಕೌಶಲ್ಯ ಅಥವಾ ಪ್ರತಿಭೆಗಳ ಕೊರತೆಯಿರುತ್ತದೆ. ಆದರೆ ಆಂಗ್ಲಭಾಷೆ ಗೊತ್ತಿಲ್ಲದ ಅನೇಕರಲ್ಲಿ ಬಗೆ ಬಗೆಯ ಪ್ರತಿಭೆ ಇರುತ್ತದೆ. ಉದಾಹರಣೆಗೆ ಬರವಣಿಗೆಯ ಕೌಶಲ್ಯ, ಕಂಪ್ಯೂಟರ್‌ನಲ್ಲಿ ಎಡಿಟಿಂಗ್ ಮಾಡುವ ಕೌಶಲ್ಯ, ಪೊಟೋಗ್ರಾಫಿ ಕೌಶಲ್ಯ, ಪುಟ ವಿನ್ಯಾಸ ಕೌಶಲ್ಯ, ತಲೆ ಬರಹ ಕೊಡುವ ಕೌಶಲ್ಯ ಮುಂತಾದವುಗಳು. ಇಂತಹ ಪ್ರತಿಭೆ ಇರುವವರನ್ನು ಮಾಧ್ಯಮ ಗಣನೆಗೆ ತೆಗೆದುಕೊಳ್ಳದೇ ನಿರ್ಲಕ್ಷಿಸುತ್ತದೆ. ಈ ಕೌಶಲ್ಯಗಳು ನಿರ್ಲಕ್ಷಿತ ಸಮುದಾಯದಿಂದ ಬಂದ ಜನರಲ್ಲಿಯೂ ಇರಬಹುದು. ಆದರೆ ಮಾಧ್ಯಮದ ನಿರ್ಲಕ್ಷ್ಯದಿಂದಾಗಿ ಈ ಪ್ರತಿಭೆಗಳು ಮೂಲೆಗುಂಪಾಗುತ್ತಿವೆ. ಹಾಗೂ ಮಾಧ್ಯಮದ ಸಂಪಾದಕರು ತಮ್ಮ ಜಾತಿಯವರನ್ನೇ ಹೆಚ್ಚಾಗಿ ಸಮೂಹ ಮಾಧ್ಯಮಗಳಲ್ಲಿ ತುಂಬಿಸುತ್ತಿರುವುದು ಹಿಂದಿನಿಂದ ನಡೆದು ಬಂದ ಸಂಪ್ರದಾಯವಾಗಿದೆ. ಇದರಿಂದ ನಿಜವಾದ ಪ್ರತಿಭೆಗಳಿಗೆ ಸಮೂಹ ಮಾಧ್ಯಮದಲ್ಲಿ ಪ್ರವೇಶಿಸಲು ತೊಡಕಾಗುತ್ತಿದೆ. ಸಂಪಾದಕರ ಹಾಗೂ ಮಾಧ್ಯಮ ಮಂಡಳಿಯ ಇಂಥಹ ಧೋರಣೆಯಿಂದಾಗಿ ಶಿಕ್ಷಣ ಪಡೆದ ನಿರ್ಲಕ್ಷಿತ ಸಮುದಾಯದ ಜನರಿಗೆ ತುಂಬಾ ಅನ್ಯಾಯವಾಗುತ್ತಿದೆ. ಅಲಕ್ಷಿತ ಸಮುದಾಯ ಮತ್ತು ಸಮೂಹ ಮಾಧ್ಯಮಗಳ ಮಧ್ಯೆ ಇಂಥದ್ದೊಂದು ಬಿಕ್ಕಟ್ಟು ಉಂಟಾಗಿದೆ.

೨೧. ಅಲಕ್ಷಿತ ಸಮುದಾಯಗಳಲ್ಲಿ ಹಿಂದಿನಿಂದ ಬಂದಂತಹ ಅನೇಕ ಕಟ್ಟುಪಾಡುಗಳು ಇಂದಿಗೂ ಆಚರಣೆಯಲ್ಲಿದೆ. ಈ ಆಚರಣೆಗಳಿಂದ ಅಲಕ್ಷಿತರಿಗೆ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತಿಲ್ಲ. ಗ್ರಹಣಗಳು ಸಂಭವಿಸಿದಾಗ ಅಲಕ್ಷಿತ ಸಮುದಾಯದವರು ತಮ್ಮ ಗುಡಾರಗಳಿಂದ ಹೊರಗೆ ಬರುವುದಿಲ್ಲ. ಹಾಗೇನಾದರೂ ಹೊರಗೆ ಬಂದರೆ ಕೆಡಕಾಗುತ್ತದೆಂಬ ನಂಬಿಕೆ ಇವರದು. ಆದರೆ ಮುಖ್ಯವಾಹಿನಿಯ ಜನರು ಗ್ರಹಣಗಳು ಸಂಭವಿಸಿದಾಗ ಖಗೋಳ ವಿಸ್ಮಯವನ್ನು ನೋಡಿ ಆಶ್ಚರ್ಯ ಚಕಿತರಾಗುತ್ತಾರೆ. ಮತ್ತು ಅದಕ್ಕೆ ಕಾರಣವನ್ನು ವೈಜ್ಞಾನಿಕ ದೃಷ್ಟಿಯಿಂದ ತಿಳಿಯಬಯಸುತ್ತಾರೆ. ಹಾಗೆಯೇ ಮಾರಕ ರೋಗ ರುಜಿನಗಳು ಬಂದಾಗ ಸೂಕ್ತ ಚಿಕಿತ್ಸೆ ಮಾಡಿಸಿಕೊಂಡು ಗುಣಮುಖರಾಗುತ್ತಾರೆ. ಆದರೆ ಅಲಕ್ಷಿತರು ಮಾಟಮಂತ್ರ, ಹರಕೆ, ಬಲಿ, ಪೂಜೆ ಮಾಡಿ ಮೌಢ್ಯಗಳ ಆಚರಣೆ ಮಾಡುತ್ತಾರೆ. ರೋಗದಿಂದ ವ್ಯಕ್ತಿ ಮರಣ ಹೊಂದಿದರೆ ಅದು ದೈವ ಕೋಪ ಎಂದು ತಿಳಿಯುತ್ತಾರೆ. ಇಂಥಹ ಕಟ್ಟುಪಾಡುಗಳಿಂದ ಸಾಮಾಜಿಕ ಬಂಧನಕ್ಕೆ ಒಳಗಾಗುತ್ತಾರೆ. ಇವುಗಳಿಂದ ಹೊರ ಬರುವ ಪ್ರಯತ್ನವನ್ನೇ ಮಾಡುವುದಿಲ್ಲ. ಬೇರೆಯವರು ಇದಕ್ಕೆ ತಿಳಿ ಹೇಳಿದರೂ ಲಕ್ಷ್ಯ ಕೊಡದೇ ಹಿಂದಿನ ಆಚರಣೆಗಳನ್ನು ಮುಂದಿನ

ತೀಳಿಗೆಯುವರು ಮುಂದುವರೆಸುತ್ತಾರೆ. ಸಮೂಹ ಮಾಧ್ಯಮಗಳೂ ಇಂತಹ ಕಟ್ಟುಪಾಡುಗಳನ್ನು ವಿರೋಧಿಸುತ್ತದೆ. ಆದರೂ ಅಲಕ್ಷಿತರು ಎಚ್ಚೆತ್ತುಕೊಳ್ಳುತ್ತಿಲ್ಲ.

ಪರಿಹಾರ

ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳ ಬಿಕ್ಕಟ್ಟನ್ನು ಕಡಿಮೆ ಮಾಡಲು ಕೆಲವು ಪರಿಹಾರವನ್ನು ಕಂಡುಕೊಂಡು ಅದನ್ನು ಅನುಷ್ಠಾನಕ್ಕೆ ತರಬೇಕಾಗಿದೆ. ಅವುಗಳೆಂದರೆ;

೧. ಅಲಕ್ಷಿತ ಸಮುದಾಯಗಳಲ್ಲಿನ ಅಸ್ಪ್ರಶ್ಯತೆಯ ಆಚರಣೆಯನ್ನು ಕಟ್ಟುನಿಟ್ಟಾಗಿ ಕೊನೆಗಾಣಿಸಿ, ಅವರಿಗೆ ಸಾಮಾಜಿಕ ಸ್ಥಾನಮಾನಗಳನ್ನು ಕಲ್ಪಿಸಿಕೊಡಬೇಕು. ಈ ಆಚರಣೆಗಳನ್ನು ಆಚರಿಸುವವರಿಗೆ ಕಾನೂನಿನಿಂದ ಶಿಕ್ಷೆ ಕೊಡಿಸಿ, ಅಲಕ್ಷಿತರನ್ನು ಸಮಾಜ ಮುಖಿಯಾಗಿಸಬೇಕು.

೨. ಅಲಕ್ಷಿತರಲ್ಲಿರುವ ಮೌಢ್ಯಗಳ ಆಚರಣೆಯನ್ನು ನಿಷೇಧಿಸಿ, ಅದರಿಂದಾಗುವ ಪರಿಣಾಮಗಳ ಬಗ್ಗೆ ಸರಿಯಾಗಿ ಮನವರಿಕೆ ಮಾಡಿಕೊಡಬೇಕು. ಸರಿಯಾದ ವೈಜ್ಞಾನಿಕ ಕಾರಣಗಳನ್ನು ತಿಳಿಸಿ ಮೌಢ್ಯಗಳ ನಿರ್ಮೂಲನೆ ಮಾಡಬೇಕು. ಅಲಕ್ಷಿತರಿಗೆ ಮುಖ್ಯವಾಹಿನಿಯ ಜನಸಂಪರ್ಕ ಉಂಟಾಗುವಂತೆ ಮಾಡಬೇಕು.

೩. ಸಮೂಹ ಮಾಧ್ಯಮಕ್ಕೆ ಬರುವವರಿಗೆ ದೇಶದ ರಾಷ್ಟ್ರೀಯತೆಯ ಮೂಲ ಕಲ್ಪನೆಯ ಅರಿವನ್ನು ಮೂಡಿಸಬೇಕು.

೪. ಸಮೂಹ ಮಾಧ್ಯಮಗಳನ್ನು ಭಾರತೀಯ ಸಂಸ್ಕೃತಿ ಅರಿತವರ ಹಿಡಿತದಲ್ಲಿ ಇರುವ ಹಾಗೆ ಮಾಡಬೇಕು. ಮಾಧ್ಯಮಗಳು ಅಭಿವೃದ್ಧಿಗೆ ಪೂರಕವಾದ ನಮ್ಮ ಭಾರತೀಯ ಸಂಸ್ಕೃತಿಯನ್ನು ಅವಲೋಕಿಸಿ, ಸಂಸ್ಕೃತಿಗೆ ಧಕ್ಕೆಯಾಗದ ರೀತಿಯಿಂದ ಅಭಿವೃದ್ಧಿ ಕಾರ್ಯ ಕೈಗೊಳ್ಳಬೇಕು.

೫. ಅಲಕ್ಷಿತ ಸಮುದಾಯಗಳಿಗೆ ಶಿಕ್ಷಣ ಒದಗಿಸಲು ಬೇಕಾದ ಪೂರಕ ಕ್ರಮಗಳನ್ನು ಕೈಗೊಂಡು, ಮಾತೃಭಾಷೆಯಲ್ಲಿಯೇ ಶಿಕ್ಷಣವನ್ನು ನೀಡಬೇಕು.

೬. ಆದಾಯ ಬರುವಂತಹ ವೃತ್ತಿಗಳನ್ನು ಅಲಕ್ಷಿತರಿಗೆ ಒದಗಿಸಿ, ಕೌಶಲ್ಯ ತರಬೇತಿ ನೀಡಿ ಅವರನ್ನು ಸದೃಢಗೊಳಿಸಬೇಕು. ಇವರಿಗೆ ಆಧುನಿಕತೆಯ ಅಳವಡಿಕೆ ಮಾಡಕೊಳ್ಳಲು ಸರ್ಕಾರ ಸಹಾಯ ಮಾಡಬೇಕು.

೭. ಧರ್ಮಗಳ ಮೇಲಿನ ಕಟ್ಟುಪಾಡುಗಳನ್ನು ತಿಳಿಗೊಳಿಸಬೇಕು. ಸಂಘಟನೆಯ ಕ್ರಮ ತಿಳಿಸಿ ಅಲಕ್ಷಿತರು ಸಂಘಟಿತರಾಗಲು ಸಹಕಾರ ನೀಡಬೇಕು.

೮. ಸಮೂಹ ಮಾಧ್ಯಮಗಳು ತಮ್ಮ ಹಳೆಯ ಸಂಪ್ರದಾಯವನ್ನು ತೊರೆದು ಹೊಸ ಹೊಸ ಪ್ರತಿಭೆಗಳಿಗೆ ಮಾಧ್ಯಮದಲ್ಲಿ ಅವಕಾಶ ನೀಡಿ ಪ್ರೋತ್ಸಾಹಿಸಬೇಕು.

೯. ಸಮೂಹ ಮಾಧ್ಯಮಗಳು ಅಲಕ್ಷಿತ ಸಮುದಾಯಗಳ ಅಭಿವೃದ್ಧಿಗಾಗಿ ಅವರ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಬೇಕು.

೧೦. ಅಲಕ್ಷಿತ ಸಮಸ್ಯೆಗಳಿಗೆ ಕೂಡಲೆ ಸಮೂಹ ಮಾಧ್ಯಮಗಳು ಸ್ಪಂದಿಸಿ, ಸರ್ಕಾರದ ಗಮನಕ್ಕೆ ತಂದು ಸಮಸ್ಯೆ ಪರಿಹಾರವನ್ನು ಲಾಭದ ಆಸೆ ಬಿಟ್ಟು ಮಾಡಬೇಕು.

ಮೇಲಿನ ಕ್ರಮಗಳನ್ನು ಅನುಸರಿಸಿದಾಗ ಅಲಕ್ಷಿತ ಸಮುದಾಯಗಳು ಮುಖ್ಯವಾಹಿನಿಯ ಜನರ ಹಾಗೂ ಸಮೂಹ ಮಾಧ್ಯಮಗಳ ಸಂಪರ್ಕದಿಂದ ನಿಧಾನವಾಗಿ ಆಧುನಿಕತೆಯನ್ನು ಅಳವಡಿಸಿಕೊಂಡು ಮುಖ್ಯವಾಹಿನಿಗೆ ಬರುವ ಸಾಧ್ಯತೆಗಳಿವೆ.

ಕೊನೆ ಟಿಪ್ಪಣಿಗಳು

೧. ರಪಿಶಂಕರ್ ಎನ್., ವಿಜಯವಾಣಿ, ದಿನಪತ್ರಿಕೆ, ದಿನಾಂಕ ೧೭-೧೨-೨೦೧೭.

೨. ಅದೇ.

೩. ರಪಿಶಂಕರ್ ಎನ್., ಸಂವಹನ ಸಲಹೆಗಾರರು, ವಿಜಯವಾಣಿ ಪತ್ರಿಕೆ, ೨೬-೧೧-೨೦೧೭.

೪. ಅದೇ.

೫. ರವಿಶಂಕರ್ ಎನ್., ವಿಜಯವಾಣಿ ದಿನಪತ್ರಿಕೆ, ದಿನಾಂಕ ೧೭-೧೨-೨೦೧೭.

೬ ಪ್ರಜಾವಾಣಿ, ೨೨-೦೩-೨೦೧೬

೭ ರವಿಶಂಕರ್ ಎನ್., ವಿಜಯವಾಣಿ ದಿನಪತ್ರಿಕೆ, ದಿನಾಂಕ ೧೭-೧೨-೨೦೧೭.

೮. ಅದೇ.

♦♦♦

ಅಧ್ಯಾಯ : ಆರು

ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳ ನಡುವಿನ ವರ್ತಮಾನದ ಪಲ್ಲಟಗಳು

ಅಧ್ಯಾಯ : ಆರು

ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳ ನಡುವಿನ ವರ್ತಮಾನದ ಪಲ್ಲಟಗಳು

ಸಾಮಾಜಿಕ ಮಾಧ್ಯಮಗಳು ಬಂದ ಹೊಸದರಲ್ಲಿ, ಅಂದರೆ ಸುಮಾರು ೮–೧೦ ವರ್ಷಗಳಿಂದ ಕಳೆದ ನಾಲ್ಕೈದು ವರ್ಷಗಳವರೆಗೆ ಎಲ್ಲವೂ ಸರಿಯಾಗಿತ್ತೆಂದೇ ಹೇಳಬಹುದು. ಏಕೆಂದರೆ ಆಗ ಸಾಮಾಜಿಕ ಮಾಧ್ಯಮಗಳು ಸಮೂಹ ಮಾಧ್ಯಮಗಳನ್ನೇ ಅನುಸರಿಸುತ್ತಿದ್ದವು. "ಮಾಧ್ಯಮಗಳಲ್ಲಿ ಬಂದದ್ದು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರತಿಧ್ವನಿಸುತ್ತಿತ್ತು. ಆದರೆ ಈಗ ನಾಲ್ಕೈದು ವರ್ಷಗಳಿಂದ ಈ ಕ್ರಮ ಬದಲಾಗಿ ಬೇರೆಯದೊಂದು ಹೊಸ ಕ್ರಮ ಹುಟ್ಟಿಕೊಂಡಿದೆ. ಅದೇನೆಂದರೆ ಮಾಧ್ಯಮಗಳು ಕುರುಡು ಕುರುಡಾಗಿ ಸಾಮಾಜಿಕ ಮಾಧ್ಯಮಗಳನ್ನು ಅನುಸರಿಸುವುದು. ಅದರಲ್ಲಿ ಬಂದಿದ್ದೇ ಸುದ್ದಿ ಅಥವಾ ಸುದ್ದಿಗೆ ಮೂಲದ್ರವ್ಯ ಎನ್ನುವಂತೆ ವರ್ತಿಸುವುದು".[೧] ಇದರಿಂದಾಗಿ ಅನೇಕ ವಿವಿಧ ಕಷ್ಟಗಳು, ಸವಾಲುಗಳು ಎದುರಾಗಿವೆ.

ಸಾಮಾಜಿಕ ಮಾಧ್ಯಮಗಳು ಸಮೂಹ ಮಾಧ್ಯಮಗಳನ್ನು ಚುರುಕುಗೊಳಿಸುವ ಬದಲು, ಅವನ್ನು ಸೋಮಾರಿಗಳನ್ನಾಗಿ ಮಾಡಿವೆ. ಇಂದು ಸಾಮಾಜಿಕ ಮಾಧ್ಯಮಗಳಿಂದಾಗಿ ಸುದ್ದಿಗೆ ಸಹಸ್ರಾರು ಮೂಲಗಳಿವೆ. ಆದ್ದರಿಂದ ಸಮೂಹ ಮಾಧ್ಯಮಗಳು ನಿಜವಾದ ಸುದ್ದಿಯನ್ನು ಜನರಿಗೆ ತಲುಪಿಸಬೇಕೆಂದರೆ ಚುರುಕಾಗಿ ಕಾಳನ್ನು ಜೊಳ್ಳಿನಿಂದ ಬೇರ್ಪಡಿಸಬೇಕು. ಯಾವುದು ಸಂಪಾದಕೀಯ ಧರ್ಮಕ್ಕೆ ಅನುಗುಣವಾಗಿದೆಯೋ ಅದನ್ನು ಅಳವಡಿಸಿಕೊಂಡು ಓದುಗರ ನಿರೀಕ್ಷೆಗೆ ತಕ್ಕಂತೆ ಸುದ್ದಿಗಳನ್ನು ತಲುಪಿಸುವಂತಹ ಸಂಪ್ರದಾಯದ ಬದಲು, ಸುಲಭವಾಗಿ ನಮಗೆಲ್ಲಾ ಸುದ್ದಿ ಜನರಿಂದಲೇ ಸಿಗುತ್ತದೆ. ಪುನಃ ಅದೇ ಸುದ್ದಿಯನ್ನು ಜನರಿಗೆ ಮರಳಿ ಕೊಟ್ಟರೆ ಅಥವಾ ಅದನ್ನೇ ಪ್ರತಿಧ್ವನಿಸಿದರೆ ಸಾಕು ಎನ್ನುವ ಸೋಮಾರಿತನದ ಧೋರಣೆ ಸಾಮಾಜಿಕ ಮಾಧ್ಯಮಗಳಿಂದಾಗಿ ಬೆಳೆದಿದೆ. ಮೊದಲೇ ಹೇಳಿದಂತೆ "ಎಲ್ಲಿ ಸಾಮಾಜಿಕ ಮಾಧ್ಯಮಗಳು ಸುದ್ದಿ ಮಾಧ್ಯಮಗಳನ್ನು ಪ್ರತಿಧ್ವನಿಸುತ್ತಿದ್ದವೋ ಅಲ್ಲಿಯವರೆಗೂ ಎಲ್ಲವೂ ಸರಿಯಾಗಿತ್ತು. ಆದರೆ ಯಾವಾಗ ಸಮೂಹ ಮಾಧ್ಯಮಗಳು ಸಾಮಾಜಿಕ ಮಾಧ್ಯಮಗಳ ಸುದ್ದಿಗಳನ್ನು ಪ್ರತಿಧ್ವನಿಸುತ್ತಾ ಹೋದವೋ, ಆಗ ತೀಕ್ಷಣವಾಗಬೇಕಿದ್ದ, ಸೂಕ್ಷ್ಮವಾಗಬೇಕಿದ್ದ ಮಾಧ್ಯಮಗಳು ಸೋಮಾರಿಗಳಾಗಿ ಬಿಟ್ಟವು".[೨]

ನಿರ್ದಿಷ್ಟವಾದ ವಿಷಯದಲ್ಲಿ ಹೆಚ್ಚು ಜನರಿಗೆ ಒಂದು ವಿಷಯ ಇಷ್ಟವಾದರೆ, ವಿಸ್ತರಿಸಿದ ಸಮೂಹದಲ್ಲಿ ಆ ಸುದ್ದಿಯನ್ನು ತೆಗೆದುಕೊಂಡು ಇನ್ನಷ್ಟು ವಿಸ್ತರಿಸಿ, ಇನ್ನಷ್ಟು ಆಸಕ್ತಿದಾಯಕವಾಗಿಯೋ, ರೋಚಕವಾಗಿಯೋ ಮಾಡಿ, ಬಣ್ಣ ಹಚ್ಚಿ ಜನರಿಗೆ ಹೇಳಿದರೆ ಅದು ಜನಪ್ರಿಯವಾಗುತ್ತದೆ. ಆದರೆ ಯೋಚಿಸಿ ನೋಡಿದಾಗ, ಜನಪ್ರಿಯತೆಯೇ ಬೇರೆ ಮತ್ತು ಉತ್ತಮ ಗುಣಮಟ್ಟದ ಸಮೂಹ ಮಾಧ್ಯಮದ ಸಂಪಾದಕೀಯ ಧರ್ಮಕ್ಕೆ ಅನುಗುಣವಾದಂಥ ಸುದ್ದಿಯನ್ನು ಕೊಡುವುದೇ ಬೇರೆ. ಸುದ್ದಿ ಮಾಧ್ಯಮಗಳಾಗಿ ನಾವು ಬೇರೆ ಮಾಧ್ಯಮಗಳನ್ನು ಯಾವ ಮಾನದಂಡ ಇಟ್ಟುಕೊಂಡು ನೋಡುತ್ತೇವೆ ಅಥವಾ ವಿಮರ್ಶೆಗೆ ಗುರಿಪಡಿಸುತ್ತೇವೆ ಎನ್ನುವುದನ್ನು ಗಮನವಿಟ್ಟುಕೊಂಡರೆ, ವಿಷಯವನ್ನು ಅರ್ಥ ಮಾಡಿಕೊಳ್ಳುವುದು ಸುಲಭವಾಗುತ್ತದೆ. ಯಾವುದೋ ಒಂದು ವಿಷಯ ಸಾಮಾಜಿಕ ಮಾಧ್ಯಮಗಳಲ್ಲಿ ಜನಪ್ರಿಯವಾಗಿದೆ ಎಂದ ಮಾತ್ರಕ್ಕೆ ಅದೇ ಶ್ರೇಷ್ಠ ಗುಣಮಟ್ಟದ್ದು ಮತ್ತು ನಮ್ಮ ವೀಕ್ಷಕ ವರ್ಗ ಅಥವಾ ಓದುವ ವರ್ಗ ಅದನ್ನೇ ಪುನಃ ಪುನಃ ಆಸ್ವಾದಿಸಬೇಕು ಎಂಬ ನಿರ್ಧಾರಕ್ಕೆ ಸಮೂಹ ಮಾಧ್ಯಮಗಳು ಬಂದು ಬಿಟ್ಟಿವೆ.

"ಒಂದು ಗುಣಮಟ್ಟದ ವಿಷಯವಾದರೆ ಇನ್ನೊಂದು ಸಾಮಾಜಿಕ ಮಾಧ್ಯಮಗಳಲ್ಲಿ ಮೇಲೆ ಬರುವಂಥ ವಿಷಯಗಳು, ಸುದ್ದಿಗಳು ಸಹಜವಾಗಿ ಉತ್ತಮವಾದ ಸುದ್ದಿಗಳು ಅನ್ನುವಂಥ ನಿರ್ಧಾರಕ್ಕೆ ಬಂದು, ಅದರ ಹಿಂದಿರುವ ತಂತ್ರಜ್ಞಾನವನ್ನು ಅರ್ಥ ಮಾಡಿಕೊಳ್ಳದೇ ಬಹಳ ಮೂರ್ಖತನದಲ್ಲಿ ಬಂದುಬಿಟ್ಟಿದ್ದೇವೆ ಎನಿಸುತ್ತದೆ."[೩] ಸಾಮಾಜಿಕ ಮಾಧ್ಯಮಗಳಲ್ಲಿ ನಮಗೆ ಬಿಂಬಿತವಾಗುವುದು ಬೇರೆ ಬೇರೆಯದೇ ವಿಷಯಗಳು. ಸಾಮಾಜಿಕ ಮಾಧ್ಯಮಗಳು ನಮ್ಮ ಅಭಿರುಚಿಗಳನ್ನು ಅರಿತುಕೊಂಡು, ನಾವೇನನ್ನು ಇಷ್ಟಪಟ್ಟಿದ್ದೇವೆಯೋ, ಅಂಥವುಗಳ ಆಧಾರದ ಮೇಲೆ ನಮ್ಮ ಮನೋಕಾಂಕ್ಷೆಗೆ, ಅಭಿಲಾಷೆಗೆ ತಕ್ಕಂಥ ಸುದ್ದಿಗಳನ್ನು ಬಿಂಬಿಸುವಷ್ಟು ಹಾಗೂ ನಮ್ಮ ಒಳಮನಸ್ಸು ಅರ್ಥವಾಗಲು ಶುರುವಾಗಿದೆ. ನಾವು ಯಾವ ಕಡೆ ಒಲವು ತೋರುತ್ತೇವೆಯೋ, ಯಾವ ಕಡೆಗೆ ವಾಲಿರುತ್ತೇವೆಯೋ ಅಂಥದೇ ಸುದ್ದಿಗಳು ಮತ್ತೆ ಮತ್ತೆ ನಮ್ಮ ಮುಂದೆ ಬರುತ್ತವೆ.

ನಾವು ಆಸಕ್ತಿ ತೋರಿದ ವಿಷಯಗಳನ್ನು ಸಾಮಾಜಿಕ ಮಾಧ್ಯಮಗಳು ಮತ್ತೆಮತ್ತೆ ಬಿಂಬಿಸುವುದರಿಂದ, ಹೊಸತನಕ್ಕೆ ಅಥವಾ ಹೊಸ ವಿಷಯಗಳು ನಮ್ಮ ಮುಂದೆ ಬರುವ ಸಾಧ್ಯತೆ ಕಡಿಮೆಯಾಗುತ್ತದೆ. ಆದ್ದರಿಂದ "ನಾವು ಸಮೂಹ ಮಾಧ್ಯಮವಾಗಿ ಸಾಮಾಜಿಕ ಮಾಧ್ಯಮವನ್ನು ಪ್ರತಿಧ್ವನಿಸಲು ಹೋದರೆ ನಾವೂ ಕೂಡ ಸೀಮಿತವಾಗುತ್ತಾ ಹೋಗುತ್ತೇವೆ. ನಾವು ಜರಡಿ ಹಿಡಿದು ಪ್ರಸಾರ ಮಾಡಿದ ಸುದ್ದಿಯನ್ನು ಕೊಂಡ ನಮ್ಮ ನೋಡುವ ವರ್ಗಕ್ಕೆ, ಓದುವ ವರ್ಗಕ್ಕೆ ಇನ್ನೆಷ್ಟು ಸೀಮಿತವಾಗುತ್ತಾ ಹೋಗಬಹುದು".[೪] ಏಕೆಂದರೆ ನಾವು ಏನನ್ನು ನೋಡಿದ್ದೇವೆಯೋ, ಅದರಲ್ಲಿ ಸಾರಾಂಶವನ್ನು ಮಾತ್ರ ಇಟ್ಟುಕೊಂಡು ಸುದ್ದಿ ಮಾಡಲು ಸಾಧ್ಯ. ಸಾಮಾಜಿಕ ಜಾಲತಾಣಗಳಲ್ಲೇ ನಾವು ತೋರಿದಂಥ ವರ್ತನೆಯನ್ನೇ ಆಧಾರವಾಗಿಟ್ಟುಕೊಂಡು ಸಾಮಾಜಿಕ ಜಾಲತಾಣಗಳು ನಮಗೆ ಬಿಂಬಿಸಿದ ಸಂದೇಶಗಳನ್ನು ನೋಡಿದ ಸಮೂಹ

ಮಾಧ್ಯಮಗಳು ಅದನ್ನೇ ಪರಮಸತ್ಯ ಮತ್ತು ಜನಗಳಿಗೆ ಬೇಕಾದಂಥ, ಜನರು ಚರ್ಚೆ ಮಾಡಲು ಇಷ್ಟಪಡುವಂಥ ವಿಷಯಗಳನ್ನು ಸರಳೀಕರಣಗಳನ್ನು ಮಾಡಿಕೊಂಡು, ಅದಕ್ಕೆ ತಕ್ಕನಾಗಿ ಸುದ್ದಿವಾಹಿನಿಗಳಲ್ಲೋ, ಪತ್ರಿಕೆಗಳಲ್ಲೋ, ಸುದ್ದಿಗಳನ್ನು ಹೆಣೆಯಲು ಹೊರಟಿರುವುದು ಮತ್ತು ಅದರಿಂದ ಆಗಬಹುದಾದ ದೂರಗಾಮೀ ಪರಿಣಾಮಗಳು ಮಾಧ್ಯಮದ ಮುಂದಿರುವ ಬಹುದೊಡ್ಡ ಸವಾಲು".[೫]

"೨೪x೭ ಸೆನ್ಸೇಶನಲ್ ಸುದ್ದಿಗಳನ್ನು ಬಿತ್ತರಿಸಬೇಕೆಂಬ ಏಕೈಕ ಉದ್ದೇಶದಿಂದ ನಾಯಿ ಕೊಡೆಗಳಂತೆ ಹುಟ್ಟಿಕೊಂಡಿರುವ ಖಾಸಗಿ ಸುದ್ದಿವಾಹಿನಿಗಳು, ಅವುಗಳೊಂದಿಗೆ ಪೈಪೋಟಿಗಿಳಿದಂತೆ ವರ್ತಿಸುತ್ತಿರುವ ನಮ್ಮ ಸಮೂಹ ಮಾಧ್ಯಮಗಳು ಅಂತಹ ಸುದ್ದಿಗಾಗಿಯೇ ಹೊಂಚು ಹಾಕುತ್ತ, ನಾ ಮುಂದು ತಾ ಮುಂದು ಎಂದು ಮುಗಿಬಿಳುತ್ತ, ಸತ್ಯಾಸತ್ಯತೆಗಳ ಪರಿವೆಯೇ ಇಲ್ಲದೆ. ಪೂರ್ವಾಪರ ಆಲೋಚನೆಯಿಲ್ಲದೆ ತನ್ನ ಪ್ರತಿಸ್ಪರ್ಧಿ ಚಾನೆಲ್ಲುಗಳಿಗಿಂತ ಮೊದಲು ಸುದ್ದಿಯನ್ನು ಬಿತ್ತರಿಸುವ ಮೂಲಕ ಟಿ.ಆರ್.ಪಿ. ರೇಟಿಂಗ್‌ನಲ್ಲಿ, ಪ್ರಸಾರ ಸಂಖ್ಯೆಯಲ್ಲಿ ಅಗ್ರ ಶ್ರೇಯಾಂಕವನ್ನು ಕಂಡುಕೊಳ್ಳುವಲ್ಲಿ 'ಜನ್ಮ ಸಾರ್ಥಕ' ಎನ್ನುವಷ್ಟು ಹಪಹಪಿಯನ್ನು ಹೊಂದಿದೆ".[೬] ಎಷ್ಟೇ ಆಗಲಿ ನೋಡುಗನ ಅಭಿರುಚಿಗೆ ತಕ್ಕಂತೆ ಕಾರ್ಯಕ್ರಮಗಳನ್ನು ಹೆಣೆಯುವುದು ಚಾನೆಲ್ಲುಗಳ ಕರ್ತವ್ಯವಾಗಿದೆ. ನಮ್ಮ 'ನೋಡುಗ ಮಹಾಶಯ'ರ ಅಭಿರುಚಿ ಇಷ್ಟು ಉತ್ಕೃಷ್ಟಗೊಳ್ಳುತ್ತ ನಡೆದಿರುವುದು ಸಂತೋಷಪಡಬೇಕಾದ ವಿಚಾರ. ಒಂದು ಕಾಲದಲ್ಲಿದ್ದ ಕಾರ್ಯಕ್ರಮಗಳ ನಡುವೆ ಜಾಹೀರಾತಿನ ಬದಲು ಜಾಹೀರಾತಿನ ನಡುವೆ ಕಾರ್ಯಕ್ರಮಗಳು ನುಸುಳುವ ಕಾಲ ಬಂದಿದೆ. ಇಂದು ೨೪x೭ ಸುದ್ದಿವಾಹಿನಿಗಳಲ್ಲಿ ಇಂತಹ ಪ್ರಮುಖ ಮನರಂಜನಾ ಕಾರ್ಯಕ್ರಮಗಳ ನಡುವೆ ಆಗೊಮ್ಮೆ ಈಗೊಮ್ಮೆ ಸುದ್ದಿಗಳು ಬಿತ್ತರಗೊಳ್ಳುತ್ತದೆ. ನಾಗರಿಕರ ಮೂಲಭೂತ ಹಕ್ಕುಗಳಿಗೆ ಚ್ಯುತಿ ತರುವುದರ ಜೊತೆಗೆ ಮಾಧ್ಯಮ ನೀತಿನಿಯಮಗಳನ್ನು ಕೂಡ ಗಾಳಿಗೆ ತೂರಿದ್ದು ಆತಂಕಕಾರಿ, ಅವಹೇಳನಕಾರಿ ವಿಚಾರ. ಭಾರತೀಯ ಮಾಧ್ಯಮ ಸಂಪೂರ್ಣವಾಗಿ ವಾಣಿಜ್ಯೀಕರಣಗೊಂಡಿದ್ದು ವರ್ಷಕ್ಕೆ ೨ ಸಾವಿರ ಕೋಟಿ ವಹಿವಾಟು ನಡೆಸುವ ಉದ್ಯಮವಾಗಿ ರೂಪುಗೊಂಡಿದೆ. ಲಾಭ-ನಷ್ಟದ ಲೆಕ್ಕಾಚಾರ ಮಾಧ್ಯಮಕ್ಕೆ ಮುಖ್ಯವಾದ ಸಂಗತಿಯಾಗಿದ್ದು, ಲಾಭದ ಹಳಿ ಮೇಲೆ ಉದ್ಯಮದ ಬೆಳವಣಿಗೆ ನಿಂತಿದೆ. ೮೦ರ ದಶಕದ ನಂತರ ಟೆಲಿವಿಷನ್ ಮಾಧ್ಯಮ ಪ್ರಭಲವಾಗಿ ಬೆಳೆದು ಬಂದು ಸಮೂಹ ಮಾಧ್ಯಮದ ಗತಿ ಬದಲಾಗಿದೆ. ಉಪಗ್ರಹ ತಾಂತ್ರಿಕ ಸೌಲಭ್ಯದಿಂದಾಗಿ ೯೦ರ ದಶಕದ ನಂತರ ಮತ್ತಷ್ಟು ವ್ಯಾಪ್ತಿ ವಿಸ್ತಾರವಾಗಿ ಬೆಳೆದಿದೆ. ನಾಗಾಲೋಟದ ಬೆಳವಣಿಗೆಯಲ್ಲಿ ಮುದ್ರಣ ಮಾಧ್ಯಮ ಆತಂಕದ ವಾತಾವರಣ ಎದುರಿಸಬೇಕಾಯಿತು. ಬಣ್ಣದ ಪುಟಗಳು, ಪ್ರಸರಣದ ಸಂಖ್ಯೆ, ಸ್ಥಳೀಯ ಸುದ್ದಿಗಳಿಗೆ ಆದ್ಯತೆ ನೀಡುವ ಮೂಲಕ ಮುದ್ರಣ ಮಾಧ್ಯಮ ಹೊಸ ರೂಪ ಪಡೆದುಕೊಂಡಿದೆ. ವಾಣಿಜ್ಯೀಕರಣದ ಭರಾಟೆಯಲ್ಲಿ ಭಾರತೀಯ ಮಾಧ್ಯಮ ಒತ್ತಡಕ್ಕೆ ಸಿಲುಕಿದ್ದು, ಪ್ರಾಂತೀಯ ಭಾಷೆ ಮೇಲೆ ಧಾಳಿ ನಡೆಯುತ್ತಿದೆ. ನಾಡು-ನುಡಿಗೆ ಪೂರಕವಾಗಿ ಮಾಧ್ಯಮಗಳು ಕೆಲಸ ಮಾಡುತ್ತಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಪತ್ರಿಕೆಗಳು ದೇಶದ

ಸ್ವಾತಂತ್ರ್ಯಕ್ಕೆ ದುಡಿದವು. ಈಗ ಮಾಧ್ಯಮಗಳ ಆದ್ಯತೆ ಬೇರೆಯಾಗಿದ್ದು, ಸಾಮಾಜಿಕ ಹೊಣೆಗಾರಿಕೆಯನ್ನು ಮರೆತಿವೆ. ಬೇರೆ ಬೇರೆ ಕ್ಷೇತ್ರಗಳಲ್ಲಿ ಗುಣಾತ್ಮಕ ಬದಲಾವಣೆ ತಂದ ಸ್ಪರ್ಧೆ, ಮಾಧ್ಯಮ ಕ್ಷೇತ್ರದಲ್ಲಿ ಮಾತ್ರ ದುಃಸ್ಥಿತಿಗೆ ಕಾರಣವಾಯಿತು. ಪರಸ್ಪರ ಸ್ಪರ್ಧೆಯಿಂದ ಪತ್ರಿಕೆ, ಚಾನೆಲ್‌ಗಳ ಹೆಚ್ಚಳವಾಗಿರಬಹುದು. ಓದುಗರ, ನೋಡುಗರ ಸಂಖ್ಯೆ ಹೆಚ್ಚಿರಬಹುದು. ಆದರೆ ಪತ್ರಿಕೋದ್ಯಮದ ಗುಣಮಟ್ಟ ಕುಸಿಯುತ್ತಿದೆ.

ಪೈಪೋಟಿಗೆ ಬಿದ್ದ ಕಾರಣ ಮಾಧ್ಯಮಗಳಲ್ಲಿ ಅನುಭವ ಪಡೆಯುವ ಮೊದಲೇ ಕೇವಲ ಪ್ರತಿಭೆ ಆಧಾರದಲ್ಲಿ ಉನ್ನತ ಹುದ್ದೆಗೆ ಏರುತ್ತಿದ್ದಾರೆ. ಅಂಥವರು ಕೆಲವು ಬಹುಮುಖ್ಯ ಸನ್ನಿವೇಶಗಳಲ್ಲಿ ತೆಗೆದುಕೊಳ್ಳುವ ನಿರ್ಧಾರಗಳು ಪ್ರಬುದ್ಧತೆಯಿಂದ ಕೂಡಿರದೇ ಇರಬಹುದು. ಎಷ್ಟೇ ಸ್ಪರ್ಧೆ ಒಡ್ಡಿದರೂ ಅದರ ಜೊತೆ ಜೊತೆಗೇ ಸಾಮಾಜಿಕ ಚಿಂತನೆ, ಜವಾಬ್ದಾರಿ ಬೇಕಾಗುತ್ತದೆ. ಅಂಥ ಸೂಕ್ತ ನಿರ್ಧಾರ ತೆಗೆದುಕೊಳ್ಳುವಾಗ ಮಾಧ್ಯಮದವರು ಎಡವುತ್ತಿದ್ದಾರೆ.

"ಪತ್ರಿಕೆಗಳ ಬೆಲೆ ಬಾರತದಲ್ಲಿಯೇ ಅತ್ಯಂತ ಕಡಿಮೆ. ಪತ್ರಿಕೆಗಳ ಬೆಲೆ ಕಡಿಮೆ ಇರುವಾಗ ಆದಾಯದ ಮೂಲಕ್ಕಾಗಿ ಜಾಹೀರಾತನ್ನು ಅವಲಂಬಿಸಬೇಕಾಯಿತು. ಆದರೆ ಜಾಹೀರಾತು ಕಾರಣಕ್ಕೆ ಸುದ್ದಿಯಲ್ಲಿ, ನಿಲುವಿನಲ್ಲಿ ಕೆಲವೊಮ್ಮೆ ರಾಜಿ ಮಾಡಿಕೊಳ್ಳಬೇಕಾಯಿತು. ಓದುಗರ ಭಾಗವಹಿಸುವಿಕೆ ಕಡಿಮೆಯಾಯಿತು. ಆದರೆ ಅದರಿಂದ ಹೊರಬಂದು ಸಾಮಾಜಿಕ ಜವಾಬ್ದಾರಿಯನ್ನು ಅರಿಯುವ ಬಗ್ಗೆ ಯೋಚನೆ ಮಾಡುವಂತಾಯಿತು".[೭] (ಮಾಹಿತಿ: ರವಿ ಹೆಗಡೆ)

"ದೃಶ್ಯ ಮಾಧ್ಯಮ ಒಬ್ಬ ವಿಕ್ಷಿಪ್ತ ವ್ಯಕ್ತಿಯನ್ನು ವಿಜೃಂಬಿಸಿ, ಅಂಥವನನ್ನು ಕೆರಳಿಸಿ, ತಮ್ಮ ಟಿ.ಆರ್.ಪಿ.ಯ ಅಸ್ತ್ರ ಮಾಡಿಕೊಂಡು ಸುದ್ದಿಯ ಒಳಗೂ ಅಂಥವರನ್ನು ಬಿಟ್ಟುಕೊಳ್ಳಬಹುದು. ಆದರೆ ಅಂಥದನ್ನು ಮಾಡಬಾರದು ಎಂಬ ವಿವೇಚನೆ ಇನ್ನೂ ಮುದ್ರಣ ಮಾಧ್ಯಮಕ್ಕೆ ಉಳಿದಿದೆ. ಇದಕ್ಕೆ ಕಾರಣ ಮುದ್ರಣ ಮಾಧ್ಯಮಕ್ಕೆ ಇರುವ ಸುದೀರ್ಘ ಇತಿಹಾಸ. ಆದರೆ ದೃಶ್ಯ ಮಾಧ್ಯಮ ಇನ್ನೂ ಶೈಶವಾವಸ್ಥೆಯಲ್ಲಿದೆ. ವಿವೇಚನೆ ಬರಲು ಇನ್ನೂ ಕಾಲ ಬೇಕಾಗುತ್ತದೆ. ಸಾಮಾಜಿಕ ಜಾಲತಾಣಗಳು ಬೆಂಕಿ. ಅದನ್ನು ನಿರಾಕರಿಸಲಾಗದು. ಆದರೆ ಬಳಸಿಕೊಳ್ಳುವಲ್ಲಿ ಎಚ್ಚರ, ಪ್ರಬುದ್ಧತೆ ಅಗತ್ಯ".[೮] (ಕತೆಗಾರ ವಸುಧೇಂದ್ರ)

ಜಾಲತಾಣಗಳು ಪ್ರಜಾಪ್ರಭುತ್ವದ ಪ್ರಭಲ ಅಸ್ತ್ರಗಳು, ಉಳಿದ ಮಾಧ್ಯಗಳು ಭ್ರಷ್ಟರಾದಾಗ, ನಿದ್ದೆ ಮಾಡಿದಾಗ ಸಾಮಾಜಿಕ ತಾಣಗಳು ಅವುಗಳನ್ನು ಎಚ್ಚರಿಸುವ ಕೆಲಸ ಮಾಡುತ್ತದೆ. ಅಲ್ಲಿನ ಅಭಿವ್ಯಕ್ತಿಗಳು ನಿರ್ಭಿಡೆಯ, ನಿರ್ಭೀತಿಯ ಪ್ರಾಮಾಣಿಕ ಅಭಿವ್ಯಕ್ತಿಗಳಾಗಿರುತ್ತವೆ. ಆದರೆ ಅವುಗಳನ್ನು ಬಳಸುವಾಗ ಪ್ರಬುದ್ಧತೆ ಕಾಯ್ದುಕೊಳ್ಳುವುದು ಎಲ್ಲರ ಜವಾಬ್ದಾರಿ. ಯಾವುದು ಸುದ್ದಿ, ಯಾವುದು ಸುದ್ದಿಯಲ್ಲ ಎನ್ನುವ ವಿವೇಚನೆ ಬರಬೇಕು. ಇಲ್ಲದೇ ಹೋದರೆ ನಮ್ಮ ಮೇಲೆ ಕಡಿವಾಣ ಬೀಳುತ್ತದೆ. ರಾಜಕೀಯ ವ್ಯವಸ್ಥೆಗೆ ನಾವೇ ಜುಟ್ಟು ಕೊಟ್ಟುಕೊಳ್ಳಬೇಕಾದ ಪರಿಸ್ಥಿತಿ ಬರುತ್ತದೆ.

ಸಾಮಾಜಿಕ ಮಾಧ್ಯಮಗಳು ನಮ್ಮ ಸುದ್ದಿಯ ಮೂಲವೂ ಆಗಬಾರದು ಅಥವಾ ಓಮ್ಮಾಹಿತಿ ಪಡೆಯುವ ಉಪಕರಣವೂ ಆಗಬಾರದು. ಯಾವಾಗ ಅದು ಸುದ್ದಿಯ ಮೂಲವಾಗುತ್ತದೆಯೋ ಆಗ ಇಲ್ಲಿಯವರೆಗೆ ಹೇಳಿದ ದುಷ್ಪರಿಣಾಮಗಳಾಗುತ್ತದೆ. ಅವನ್ನು ಓಮ್ಮಾಹಿತಿಯಾಗಿ ಉಪಯೋಗಿಸಿಕೊಂಡಾಗಲೂ ಸಮಸ್ಯೆಗಳು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಮತ್ತು ಮಷಿನ್ ಲರ್ನಿಂಗ್ ಮೂಲಕ ನಮ್ಮ ಮೇಲೆ ಆಗುತ್ತದೆ. ಆದ್ದರಿಂದ ಸಾಮಾಜಿಕ ಮಾಧ್ಯಮಗಳನ್ನು ಸಮೂಹ ಮಾಧ್ಯಮಗಳು ಬಳಸಿಕೊಳ್ಳಬೇಕಾದರೆ, ತಮ್ಮೊಡನೆ ಹೆಚ್ಚಿನ ಒಡನಾಟವನ್ನು ಇಟ್ಟುಕೊಂಡಿರುವ ಒಂದು ಸಮುದಾಯ ಅಥವಾ ಕಮ್ಯೂನಿಟಿಯಾಗಿ ಬಳಸಿಕೊಳ್ಳಲು ಮಾತ್ರ ಉಪಯೋಗಿಸಿಕೊಳ್ಳಬೇಕಾಗುತ್ತದೆ. ಮೊದಲೇ ಮಾಧ್ಯಮದ ಧ್ಯೇಯೋದ್ದೇಶಗಳ ಸ್ಪಷ್ಟ ನಕಾಶೆ ಇದ್ದಲ್ಲಿ ಮಾತ್ರ ಒಂದು ಸಮುದಾಯವನ್ನು ಕಟ್ಟಲು ಸಾಧ್ಯ ಮತ್ತು ಅದರೊಡಗಿನ ನಮ್ಮ ಒಡನಾಟದಿಂದ ಇನ್ನೂ ಉತ್ತಮ ಮಾಧ್ಯಮವಾಗಲು ಸಾಧ್ಯವಾಗುತ್ತದೆ.

"ಕೆಲವರ ಅಭಿಪ್ರಾಯವನ್ನು ಎಲ್ಲರ ಅಭಿಪ್ರಾಯ ಎನ್ನುವ ಹಾಗೆ ಬಿಂಬಿಸುವಂಥ ಸಾಮಾಜಿಕ ಮಾಧ್ಯಮಗಳ ಸ್ವರೂಪದ ಬಗ್ಗೆ ಸಮೂಹ ಮಾಧ್ಯಮಗಳು ಜಾಗರೂಕತೆಯಿಂದ ಇರಬೇಕಿದೆ. ಭಾಷೆಯ ದೃಷ್ಟಿಯಿಂದ ಹೇಳುವುದಾದರೆ ನಮ್ಮ ಭಾಷೆಯನ್ನು, ಕನ್ನಡವನ್ನು ಅದರ ಅತ್ಯಂತ ಸಮೃದ್ಧ ರೂಪದಲ್ಲಿ ನಮ್ಮ ಮುಂದಿನ ಪೀಳಿಗೆಗೆ ದಾಟಿಸುವ ಜವಾಬ್ದಾರಿಯನ್ನು ಸಮೂಹ ಮಾಧ್ಯಮಗಳು ಹೊರಬೇಕಿದೆ".' ಸಾಮಾಜಿಕ ಮಾಧ್ಯಮಗಳು ನಮ್ಮ ಮೇಲೆ ಹೇರಿಕೆ ಮಾಡುವಂಥ ಒಬ್ಬಗೆಯನ್ನು ನಾವು ನಿವಾರಿಸಿಕೊಂಡು ಮುನ್ನಡೆಯಬೇಕಿದೆ. ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಮತ್ತು ಮಷಿನ್ ಲರ್ನಿಂಗ್‌ಗಳ ಹೊಡೆತಗಳನ್ನು ಸಹಿಸಿಕೊಳ್ಳುವುದಕ್ಕೆ ಸಾಧ್ಯವಾಗುವಂಥ ಶಕ್ತಿ, ಕ್ಷಮತೆ, ವಿವೇಚನೆ, ವಿವೇಕಗಳನ್ನು ಬೆಳೆಸಿಕೊಂಡು ಮುಂದುವರೆಯಬೇಕಾಗಿದೆ. ಇದು ಸುಲಭದ ಕೆಲಸವಲ್ಲ. (ವಿಜಯವಾಣಿ, ೧೭/೧೨/೨೦೧೭)

ಮಾಧ್ಯಮ ಪ್ರಜಾಪ್ರಭುತ್ವದ ನಾಲ್ಕನೇಯ ಬಲಿಷ್ಠ ಅಂಗ. ಪ್ರಜಾಪ್ರಭುತ್ವದ ಕಾವಲು ನಾಯಿ. ಇಂದಿಗೂ ಮಾಧ್ಯಮಗಳಲ್ಲಿ ಬಂದದ್ದನ್ನು ಚೂರು ಯೋಚಿಸದೇ ನಂಬುವ ಸಮುದಾಯ ಭಾರತದಲ್ಲಿದೆ. ಸಮೂಹ ಮಾಧ್ಯಮ ಎಂದರೆ ಅದೊಂದು ಜವಾಬ್ದಾರಿಯುತವಾದ ಮೇರು ಉದ್ಯೋಗ. ಹಣದ ಲಾಲಸೆಗಿಂತ ಸಮಾಜಮುಖಿಯಾದ ಉತ್ಕಟ ತುಡಿತಗಳಿರುವ ಮನಸ್ಸುಗಳು ಸಮೂಹ ಮಾಧ್ಯಮಗಳ ಕಡೆಗೆ ಬರಬೇಕಿದೆ. ಪ್ರಪಂಚದ ಯಾವ ರಾಷ್ಟ್ರಗಳಲ್ಲೂ ಇರದ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಭಾರತದ ಮಾಧ್ಯಮಗಳಿಗಿದೆ. ಅದು ಸ್ವೇಚ್ಛಾಚಾರವಾಗಬಾರದು. ಮಾಧ್ಯಮಗಳಿಗೂ ಒಂದಿಷ್ಟು ನೀತಿ ಸಂಹಿತೆಯ ಅಗತ್ಯವಿದೆ. ಹಾಗಂತ ತಪ್ಪುಗಳನ್ನು ತಿದ್ದಿ ಹೇಳುವ, ಅವುಗಳ ಮೂಲಕ ಮೂಲ ಆಶಯಕ್ಕೆ ಕೊಡಲಿ ಏಟು ನೀಡುವ ಸಂಹಿತೆಗಳು ಮಾಧ್ಯಮ ಕ್ಷೇತ್ರಕ್ಕೆ ಮಾರಕವಾಗುವುದು. ನಿರ್ಭೀತ ವರದಿ, ಸತ್ಯ ಎಷ್ಟೇ ಕಟುವಾದರೂ ಪ್ರಕಟಿಸುವ ಧೈರ್ಯ, ಆಸೆ ಆಮಿಷಗಳಿಗೆ ಒಳಗಾಗದ ವೃತ್ತಿ ನಿಷ್ಠೆ ಮಾಧ್ಯಮಗಳಿಗೆ ಇಂದಿಗೂ ಬೇಕು. ಮಾಧ್ಯಮದ ದೊಡ್ಡ ದೊಡ್ಡ ತಪ್ಪರೆಲ್ಲ ಒಟ್ಟಿಗೆ ಸೇರಿ ದೇಶದ ಪ್ರಗತಿಯಲ್ಲಿ ಸಮೂಹ

ಮಾಧ್ಯಮಗಳು ತೋರಬೇಕಾದ ಕರ್ತವ್ಯ, ಅವುಗಳ ಜವಾಬ್ದಾರಿ, ಲಂಗುಲಗಾಮುಗಳಿಲ್ಲದ ಬೇಜವಾಬ್ದಾರಿ ವರ್ತನೆಗಳಿಗೆ ಮೂಗುದಾರ ಹಾಕುವ ಕ್ರಮ ಮಾಡಬೇಕಿದೆ.

ಅಲಕ್ಷಿತ ಸಮುದಾಯಕ್ಕೆ ಸಂವಿಧಾನ ಬದ್ಧವಾಗಿ ಸಿಗಬೇಕಾದ ಸವಲತ್ತುಗಳು ಇಂದು ಸವಾಲಾಗಿದ್ದು, ತಮಗೆ ದೊರೆಯಬೇಕಾದ ಸವಲತ್ತುಗಳು ಪಡೆಯಲು ಬೇರೆಯವರೊಂದಿಗೆ ಹೋರಾಟ ಮಾಡಬೇಕಾದ ಸ್ಥಿತಿ ಬಂದಿದೆ. ಅಲಕ್ಷಿತ ಜನರ ಅಭಿವೃದ್ಧಿ ಪಡಿಸುತ್ತೇವೆಂದು ಅನೇಕ ಯೋಜನೆಗಳ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಾವಿರಾರು ಕೋಟಿಗಳನ್ನು ಇದುವರೆಗೂ ವೆಚ್ಚ ಮಾಡಿದರೂ, ಫಲಿತಾಂಶ ಶೂನ್ಯವಾಗಿದೆ. ಅಲಕ್ಷಿತ ಜನರಿಗೆ ಶಿಕ್ಷಣ ನೀಡುವಲ್ಲಿ ಸರ್ಕಾರ ವಿಫಲವಾಗಿದೆ. ಅವರೆಲ್ಲಾ ಪೌಷ್ಠಿಕಾಂಶ ಕೊರತೆ ಎದುರಿಸುತ್ತಿದ್ದಾರೆ. ಶಿಶು ಮರಣ, ಹೆರಿಗೆ ಸಂದರ್ಭದಲ್ಲಿ ತಾಯಂದಿರ ಮರಣ ಹೆಚ್ಚಾಗಿದೆ. ದೇಶದಲ್ಲಿ ಸುಮಾರು ೭೩೨ ಅಲಕ್ಷಿತ ಸಮುದಾಯಗಳಿದ್ದು ಇವರೆಲ್ಲರನ್ನೂ ಒಂದೇ ದೃಷ್ಟಕೋನದಿಂದ ನೋಡುತ್ತಿರುವುದು, ಒಂದೇ ಮಾದರಿಯ ಯೋಜನೆಗಳನ್ನು ರೂಪಿಸುತ್ತಿರುವುದು, ಅವರ ಬಗ್ಗೆ ಮೂಲ ಮಾಹಿತಿ ಇಲ್ಲದಿರುವುದು ಇದಕ್ಕೆ ಕಾರಣವಾಗಿದೆ. ಅವರನ್ನು ಅರ್ಥ ಮಾಡಿಕೊಳ್ಳುವ ವಿಧಾನ ಕೂಡ ಸರಿಯಿಲ್ಲ.

ಕರ್ನಾಟಕ ಕರಾವಳಿ, ಮಲೆನಾಡಿನ ಬೆಟ್ಟ ಮತ್ತು ಕಣಿವೆ ಪ್ರದೇಶ, ಅರೆ ಮಲೆನಾಡು ಮತ್ತು ಬಯಲುಸೀಮೆಗಳಲ್ಲಿ ಈ ಅಲಕ್ಷಿತ ಸಮುದಾಯಗಳು ವಿವಿಧ ವೃತ್ತಿಗಳನ್ನು ಅವಲಂಬಿಸಿ ಬದುಕುತ್ತಿದ್ದಾರೆ. ಯಾವ ಅಲಕ್ಷಿತ ಸಮುದಾಯಗಳಿಗೂ ನಿಶ್ಚಿತ ಆರ್ಥಿಕ ಮೂಲಗಳಿಲ್ಲ. "ಮಲೆನಾಡು, ಕರಾವಳಿ ಮತ್ತು ಅರೆ ಮಲೆನಾಡು ಪ್ರದೇಶಗಳಲ್ಲಿನ ಅಲಕ್ಷಿತ ಸಮುದಾಯಗಳಿಗೆ ಇರುವ ಕೃಷಿ ಭೂಮಿ ತುಂಬಾ ಕಡಿಮೆ. ಶತಮಾನಗಳಿಂದ ಅಲಕ್ಷಿತ ಸಮುದಾಯಗಳು ಸಾಗುವಳಿ ಮಾಡಿ ಕೃಷಿ ಮಾಡುತ್ತಿರುವ ಭೂಮಿ ಸರ್ಕಾರದ ಪ್ರಕಾರ ಒತ್ತುವರಿ. ಅದಕ್ಕೆ ಪಾಣಿ, ಪಟ್ಟಗಳಿಲ್ಲ. ಒತ್ತುವರಿ ಎಂದು ಹೇಳಲಾಗುವ ಜಮೀನಾದರೂ ಕೇವಲ ಒಂದೆರಡು ಎಕರೆ ಮಾತ್ರ. ಯಾವ ಅಲಕ್ಷಿತ ಸಮುದಾಯಗಳಿಗೂ ಹತ್ತಾರು ಎಕರೆ ಕಾಫಿ, ಟೀ ತೋಟಗಳಿಲ್ಲ. ಕೃಷಿ ಕೂಲಿಯೇ ಈ ಬೇಸಾಯಗಾರರ ಸಮುದಾಯಗಳ ಮುಖ್ಯ ಆರ್ಥಿಕ ಅವಲಂಬನೆಯಾಗಿದೆ. ಅಲಕ್ಷಿತ ಸಮುದಾಯಗಳ ಪಶುಪಾಲಕರು, ಕಾಡಿನ ಉಪ ಉತ್ಪನ್ನಗಳನ್ನೇ ಆಧರಿಸಿ ಬದುಕುತ್ತಿರುವ ಸಮುದಾಯಗಳಿಗೆ, ಕರಕುಶಲ ವೃತ್ತಿಯನ್ನೇ ನಂಬಿರುವ ಸಮುದಾಯಗಳಿಗೆ ಅರಣ್ಯ ಕಾಯ್ದೆಯ ಕಠೋರ ನಿಯಮಗಳು ತಮ್ಮ ವೃತ್ತಿಗಳನ್ನು ಮುಂದುವರೆಸಲು ಅನುವು ಮಾಡಿಕೊಡುತ್ತಿಲ್ಲ. ಅರಣ್ಯವನ್ನೇ ನಂಬಿಕೊಂಡು ಈ ಸಮುದಾಯಗಳು ಶತಮಾನಗಳಿಂದ ಬದುಕಿ ಬಂದಿವೆ."[೧೦]

ಭಾರತದ ಸಾಮಾಜಿಕ ಸಂದರ್ಭದಲ್ಲಿ ಅರಣ್ಯ ಮತ್ತು ಅಲಕ್ಷಿತ ಸಮುದಾಯಗಳ ಸಂಬಂಧ ಅವಿಚ್ಛಿನ್ನವಾದುದು. ಅರಣ್ಯಗಳು ಸ್ಥಳೀಯ ಸಮುದಾಯಗಳ ಬದುಕಿನ ಭಾಗವಾಗಿಯೇ ಪರಿಭಾವಿಸಲ್ಪಟ್ಟಿವೆ. ಈ ಸಮುದಾಯಗಳು, ಅರಣ್ಯಗಳನ್ನು ಕೇವಲ ಮಳೆ ಸುರಿಸುವ ಮತ್ತು

ಹಸಿರಿನಿಂದ ಕಂಗೊಳಿಸಿ ಮನಸ್ಸಿಗೆ ಮುದ ನೀಡುವ ಭೂಭಾಗಗಳನ್ನಾಗಿ ಮಾತ್ರ ಪರಿಗಣಿಸಿರಲಿಲ್ಲ. ಸಮುದಾಯಗಳ ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಜಗತ್ತನ್ನು ಅರಣ್ಯಗಳು ರೂಪಿಸುತ್ತಲೇ ಬಂದಿವೆ. ಈ ಕಾರಣದಿಂದಾಗಿ ಅಲಕ್ಷಿತ ಸಮುದಾಯಗಳು ಯಾವತ್ತೂ ಅರಣ್ಯವನ್ನು ಉಪಯೋಗವಾದಿ ದೃಷ್ಟಿಕೋನದಿಂದ ನೋಡುವ ಪರಿಪಾಠವನ್ನು ಬೆಳೆಸಿಕೊಂಡಿರಲಿಲ್ಲ. ಅರಣ್ಯಗಳು ಅಲಕ್ಷಿತ ಸಮುದಾಯಗಳ ಬದುಕಿನ ಅವಿಭಾಜ್ಯ ಅಂಗಗಳಾಗಿದ್ದವು. ಅರಣ್ಯವು ಒಂದು ಆಸ್ತಿಯಾಗಿ ಪರಿಗಣಿಸಲ್ಪಟ್ಟಿರಲಿಲ್ಲ. ಅರಣ್ಯವು ಆಧ್ಯಾತ್ಮವಾಗಿ, ತಿಳಿವಿನ ಮೂಲವಾಗಿ, ಮನುಷ್ಯನ ಸಂಗಾತಿಯಾಗಿ ಅಲಕ್ಷಿತ ಸಮುದಾಯಗಳ ಬದುಕಲ್ಲಿ ಹಾಸುಹೊಕ್ಕಾಗಿತ್ತು.

ಆದರೆ ಅರಣ್ಯ ಉಪಭೋಗಕ್ಕೆ ಒಳಗಾಗದಿದ್ದರೂ ಸಹ "ಅಲಕ್ಷಿತ ಸಮುದಾಯಗಳ ಆರ್ಥಿಕತೆಯನ್ನು ರೂಪಿಸುವಲ್ಲಿ ಅರಣ್ಯ ಉಪಯುಕ್ತ ಪಾತ್ರ ವಹಿಸುತ್ತಲೇ ಇತ್ತು. ಮನುಷ್ಯನ ಸಾಮಾಜಿಕ ಸಂಸ್ಥೆಗಳಾದ ಬೇಟೆ, ಪಶುಪಾಲನೆ ಮತ್ತು ಆದಿಮ ಕೃಷಿ ಹಂತಗಳಲ್ಲಿ ಅರಣ್ಯ ಬಳಕೆಯಾಗುತ್ತಿತ್ತು. ಆದರೆ ಇಂದಿನಂತೆ ಸ್ವಾರ್ಥ ಸಾಧನೆಗೆ ಬಳಕೆಯಾಗುತ್ತಿರಲಿಲ್ಲ. ಅಲಕ್ಷಿತ ಸಮುದಾಯಗಳು ರೂಢಿಸಿಕೊಂಡಿದ್ದ ಕುಮ್ರಿ ಬೇಸಾಯ ಪದ್ಧತಿಯು ಅರಣ್ಯದ ಸಾವಯವತೆಯನ್ನು ನಾಶ ಮಾಡುವಂತದ್ದಲ್ಲ. ಬದಲಿಗೆ ಅರಣ್ಯವನ್ನು ಮತ್ತು ಅದರ ಸಾವಯವತೆಯನ್ನು ಈ ಕುಮ್ರಿ ಕೃಷಿ ಪದ್ಧತಿ ಹೆಚ್ಚಿಸುತ್ತಿತ್ತು. ಈ ಕಾರಣದಿಂದಾಗಿ ಭಾರತೀಯ ಸ್ಥಳೀಯ ಅಲಕ್ಷಿತ ಸಮುದಾಯಗಳಿಗೆ ಅರಣ್ಯವು ಭೋಗಿಸಲ್ಪಡುವ ಆಸ್ತಿಯಲ್ಲ. ಅರಣ್ಯದ ಮೇಲೆ ಖಾಸಗಿ ಒಡೆತನವೂ ಈ ಅಲಕ್ಷಿತ ಸಮುದಾಯಗಳಿಗೆ ಸಾಧ್ಯವಾಗಲಿಲ್ಲ".[೧೧] ಇದರೊಂದಿಗೆ ಕೆಳಗಿನ ಅನೇಕ ವರ್ತಮಾನದ ಪಲ್ಲಟಗಳಿವೆ.

* ಮೂಲತಃ ಅಲೆಮಾರಿಗಳಾದ ಅಲಕ್ಷಿತ ಸಮುದಾಯ ಇಂದು ಅಲ್ಲಲ್ಲಿ ನೆಲೆನಿಂತಿವೆ. ಆದರೆ ಇವರಿಗೆ ವಾಸಿಸಲಿಕ್ಕೆ ಸರಿಯಾದ ಮನೆಯಾಗಲಿ, ಸ್ವಂತ ಜಾಗವಾಗಲಿ ಇಲ್ಲ.
* ಅಲಕ್ಷಿತ ಸಮುದಾಯವು ಇಂದಿನ ಏಣಿ-ಶ್ರೇಣಿ ವ್ಯವಸ್ಥೆಯಲ್ಲಿ ಬೆಂದು ನಲುಗಿಹೋಗಿದೆ. ಆಧುನಿಕ ಸಮಾಜದಲ್ಲಿ ಒಂದು ಸಾಮಾನ್ಯವಾದ ಸ್ಥಾನ ಪಡೆಯುವಲ್ಲಿಯೂ ವಿಫಲವಾಗಿದೆ.
* ಕೂಲಿಯನ್ನೇ ನಂಬಿರುವ ಅಲಕ್ಷಿತ ಸಮುದಾಯವಾಗಿರುವುದರಿಂದ ಇವರ ಆರ್ಥಿಕ ಪರಿಸ್ಥಿತಿ, ಶೈಕ್ಷಣಿಕ ಸ್ಥಿತಿ ತೀರಾ ಕೆಳಮಟ್ಟದಲ್ಲಿದೆ. ಸಮುದಾಯಗಳು ಶಿಕ್ಷಣ ವ್ಯವಸ್ಥೆಯಿಂದ ಬಲು ದೂರದಲ್ಲಿದೆ ಅಥವಾ ವಂಚಿತವಾಗಿದೆ.
* ಚಿಕ್ಕ ಮಕ್ಕಳಿಗೆ ಹೆಚ್ಚಾಗಿ ಶಿಕ್ಷಣ ಕೊಡಿಸದೆ ಕೂಲಿಗೆ ಕರೆದೊಯ್ಯುವ ಸ್ಥಿತಿಯನ್ನು ಅಲಕ್ಷಿತ ಸಮುದಾಯದಲ್ಲಿ ಕಾಣಬಹುದಾಗಿದೆ. ಇದೊಂದು ಬಾಲಕಾರ್ಮಿಕ ಪದ್ಧತಿಯೆಂದೇ ಹೇಳಬಹುದಾಗಿದೆ.
* ಅಲಕ್ಷಿತ ಸಮುದಾಯಕ್ಕೆ ಸರ್ಕಾರದ ಮೂಲಭೂತ ಸೌಕರ್ಯಗಳು ಸಿಗುತ್ತಿಲ್ಲ. ರಾಜಕೀಯ ಕ್ಷೇತ್ರದಲ್ಲೂ ಕೇವಲ ಮೀಸಲಾತಿ ಸ್ಥಾನವನ್ನು ಮಾತ್ರ ಪಡೆಯುತ್ತಿದ್ದಾರೆ. ಅಲ್ಲಿಯೂ ಇವರ

ಅಧಿಕಾರ ಬೇರೆಯವರ ಕೈಯಲ್ಲಿದ್ದು (ಮೇಲ್ವರ್ಗದವರ) ಅವರ ಸೂತ್ರದ ಗೊಂಬೆಯಂತೆ ವರ್ತಿಸಬೇಕಾಗಿದೆ.

* ಅಲಕ್ಷಿತ ಸಮುದಾಯಕ್ಕೆ ಅಪರಾಧಿ ಸಮುದಾಯವೆಂಬ ಹೆಸರಿರುವುದರಿಂದ ಸಮಾಜ ಇವರನ್ನು ಅಪರಾಧಿಗಳಂತೆ ಕಾಣುತ್ತಾರೆ. ಇವರ ಒಳಾಡಳಿತ ವ್ಯವಸ್ಥೆಯ ಕಾನೂನು ತೀರಾ ಕ್ರೂರವಾಗಿದ್ದು, ಕಟ್ಟುಪಾಡುಗಳನ್ನು ಮೀರಲು ಅವಕಾಶವಿರುವುದಿಲ್ಲ. ಈ ಕಟ್ಟುಪಾಡುಗಳನ್ನು ಮೀರಿ ಆಧುನಿಕ ನಾಗರೀಕತೆಗೆ ಬರುವಲ್ಲಿ ಇವರು ಹಿಂದೇಟು ಹಾಕುತ್ತಿದ್ದಾರೆ.

* ಈ ಅಲೆಮಾರಿ ಸಮುದಾಯಕ್ಕೆ ಕೌಶಲ್ಯ ತರಬೇತಿಯ ಅವಶ್ಯಕತೆಯಿದೆ. ಒಂದು ವೇಳೆ ಇವರಿಗೆ ಕೌಶಲ್ಯ ತರಬೇತಿಯನ್ನು ನೀಡಿದರೆ ಎಲ್ಲರೂ ಉದ್ಯೋಗಿಗಳಾಗಿ ಇವರ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತಿತ್ತು. ಆದರೆ ಇವರಿಗೆ ಸೂಕ್ತ ಕೌಶಲ್ಯ ತರಬೇತಿ ನೀಡುವಲ್ಲಿ ಸರ್ಕಾರ ವಿಫಲವಾಗಿದೆ ಮತ್ತು ಅದರ ಉಪಯೋಗನ್ನೂ ಸಹ ಇವರು ಪಡೆಯುತ್ತಿಲ್ಲ.

* ಹಿಂದಿನಿಂದ ಬಂದಂತಹ ಕೂಲಿ ಆಧಾರಿತ ಜೀವನವನ್ನೇ ಹೆಚ್ಚಾಗಿ ಮುಂದುವರೆಸುತ್ತ ಬಂದಿರುವುದರಿಂದ ಇವರ ಯಾವ ಆಶೋತ್ತರಗಳು ಇಂದು ಈಡೆರದೆ, ಆಧುನಿಕ ಸಮಾಜದಿಂದ ಮೂಲೆ ಗುಂಪಿಗೆ ಒಳಗಾಗಿದ್ದಾರೆ.

* ರಾಜಕೀಯ ವ್ಯಕ್ತಿಗಳು ಅಲಕ್ಷಿತ ಸಮುದಾಯಗಳಿಗೆ ಚುನಾವಣೆಯ ಸಮಯದಲ್ಲಿ ಅಲ್ಲಸಲ್ಲದ ಆಶ್ವಾಸನೆ ನೀಡಿ ಮತಗಳಿಸಿಕೊಳ್ಳುತ್ತಾರೆ. ನಂತರ ಇವರ ಕಡೆ ತಿರುಗಿಯೂ ನೋಡುವುದಿಲ್ಲ. ಅಲಕ್ಷಿತ ಸಮುದಾಯ ರಾಜಕೀಯ ಪಕ್ಷಗಳ ಹರಕೆಯ ಕುರಿಗಳಾಗಿದ್ದಾರೆ.

* ಅಲಕ್ಷಿತ ಸಮುದಾಯಗಳ ಅಭಿವೃದ್ಧಿಗೆ ಅವರ ಧಾರ್ಮಿಕ ಕೇಂದ್ರಗಳು ಅಡ್ಡಿಯಾಗಿವೆ. ಅವರ ಧರ್ಮದ ಕಟ್ಟು ಪಾಡುಗಳನ್ನು ಮೀರಿ ಹೊರಗೆ ಬರಲು ಬಿಡುತ್ತಿಲ್ಲ. ಧರ್ಮದ ಹೆಸರಿನಲ್ಲಿ ಶೋಷಣೆಗಳು ನಡೆಯುತ್ತಿದೆ.

* ಪರಿಶಿಷ್ಟ ಪಂಗಡದ ಮೀಸಲಾತಿ ಪಟ್ಟಿಯಿಂದ ವಂಚಿತರಾಗಿದ್ದಾರೆ.

* ಅಲಕ್ಷಿತ ಸಮುದಾಯದ ಕೆಲವರಿಗೆ ಇನ್ನೂ ಪಡಿತರ ಚೀಟಿ ಸಿಕ್ಕಿಲ್ಲ. ಹಾಗೂ ಅನೇಕ ಅನಕ್ಷರತ ಅಲಕ್ಷಿತ ಸಮುದಾಯದ ಮಹಿಳೆಯರಿಗೆ ವಿಧವಾ ವೇತನವೂ ದೊರೆತಿಲ್ಲ.

* ಅಲಕ್ಷಿತ ಸಮುದಾಯದ ಪಾರಂಪರಿಕ ಕಲೆಗಳಾದ ಬಯಲಾಟ, ನಾಟಕ, ಪಾರಿಜಾತ, ಬುರ್ರಕಥೆ, ಕೀರ್ತನೆ, ತತ್ವಪದ, ಗೀಗೀಪದ ಮುಂತಾದವುಗಳನ್ನು ತಮ್ಮ ಜೀವನದ ಭಾಗವಾಗಿಸಿಕೊಂಡ ಕಲಾವಿದರಿಗೆ ಮಾಶಾಸನವಾಗಲಿ, ಸಹಾಯಧನವಾಗಲಿ ಸಿಗದೆ ಜೀವನಸಾಗಿಸುವುದು ಕಷ್ಟವಾಗಿ, ಕಲೆಯೂ ಅಳಿವಿನಂಚಿನಲ್ಲಿದೆ.

* ಅಲಕ್ಷಿತ ಸಮುದಾಯದ ಹೆಚ್ಚಿನವರು ನಿರುದ್ಯೋಗಿಗಳಾಗಿದ್ದಾರೆ.

* ಅಲಕ್ಷಿತ ಸಮುದಾಯದಲ್ಲಿ ಸಂಘಟನೆಯ ಕೊರತೆ ಇದೆ.

ಆಧುನಿಕ ಜಗತ್ತಿನ ಮೇಲೆ ಸಮೂಹ ಮಾಧ್ಯಮಗಳ ಪ್ರಭಾವ

"ಯಾವುದೇ ಒಂದು ವಿಷಯವನ್ನು ವ್ಯಷ್ಠಿಯಾಗಿ ಅಥವಾ ಸಮಷ್ಠಿಯಾಗಿ ಜನ ಮಾನಸಕ್ಕೆ ತಲುಪಿಸುವ ಸೇತುವೆಯೇ ಮಾಧ್ಯಮ. ಹಿಂದಿನ ದಿನಗಳಲ್ಲಿ ಪುರಾಣ ಕಥೆಗಳನ್ನೋ, ಮಹಾಕಾವ್ಯಗಳನ್ನೋ ಜನರಿಗೆ ತಲುಪಿಸಲು ಗಮಕ, ಪ್ರವಚನ, ಹರಿಕಥೆ, ಯಕ್ಷಗಾನ, ಬಯಲು ನಾಟಕ ಮುಂತಾದವುಗಳು ಮಾಧ್ಯಮವಾಗಿ ಬಳಕೆಯಾಗುತ್ತಿದ್ದರೆ, ಒಂದೂರಿಂದ ಇನ್ನೊಂದೂರಿಗೆ ಸುದ್ದಿಗಳು ತಲುಪಬೇಕಾದರೆ ಬಹು ನಿಧಾನವಾಗಿ, ಎಷ್ಟೋ ಸಮಯದ ನಂತರ ತಲುಪುವ ಬಹು ವಿಳಂಬವಾದ ವ್ಯವಸ್ಥೆಯಿತ್ತು. ಹಲವಾರು ಸುದ್ದಿಗಳು ಗತಕಾಲದ ಇತಿಹಾಸವಾದ ನಂತರ ಕೆಲವರಿಗೆ ತಲುಪುತ್ತಿದ್ದವು".[೧೨] ಬ್ರಿಟಿಷರ ಆಗಮನದ ನಂತರ ನಮ್ಮ ದೇಶದಲ್ಲಿ ಅಂಚೆ ವ್ಯವಸ್ಥೆ ವ್ಯಾಪಕವವಾಗಿ ಹರಡಿತು. ಹಿಂದೆ ಪುರಾಣಗಳ ಕಾಲದಲ್ಲಿಯೂ ಅಂಚೆ ವ್ಯವಸ್ಥೆ ರಾಜಾಧಿರಾಜರ ಕಾಲದಲ್ಲಿ ಅಸ್ತಿತ್ವದಲ್ಲಿತ್ತೆಂದು ಇತಿಹಾಸದಿಂದ ತಿಳಿದುಬರುತ್ತದೆ. ಯಾವಾಗ ಸಾರಿಗೆ ವ್ಯವಸ್ಥೆಯಲ್ಲಿ ಬದಲಾವಣೆಗಳ ಗಾಳಿ ಬೀಸಿತೋ ಅಂದಿನಿಂದ ಅಂಚೆ ಕಛೇರಿಯ ಮೂಲಕ ಮಾಧ್ಯಮ ವ್ಯವಸ್ಥೆ ಅದ್ಭುತ ಕ್ರಾಂತಿಯನ್ನು ಕಾಣತೊಡಗಿತು. ಆದರೂ ಕೂಡ ಅಂಚೆ ವ್ಯವಸ್ಥೆಯಲ್ಲಿ ಹಲವಾರು ನ್ಯೂನ್ಯತೆಗಳು ಇತ್ತು. ಮುಂದಕ್ಕೆ ಟೆಲಿಗ್ರಾಫ್ ನವ ತಂತ್ರಜ್ಞಾನದತ್ತ ಮಾಧ್ಯಮ ಮುನ್ನಡೆ ಸಾಧಿಸಿತು. ಆದರೆ ಅದಕ್ಕೂ ಕೂಡ ಇತಿ-ಮಿತಿಗಳಿದ್ದವು. ಟೆಲಿಫೋನ್ ಸುಧಾರಣೆ ಕಂಡ ನಂತರ ಸಂಪರ್ಕ ಸಾಧನಗಳಲ್ಲಿ ಇನ್ನೇನೂ ಉಳಿದಿಲ್ಲ ಎನ್ನುವ ಭಾವನೆ ಜನರಲ್ಲಿ ಮೂಡಿದು ಅಸಹಜವಲ್ಲ.

ಮತ್ತೊಂದೆಡೆ ಮುದ್ರಣ ವ್ಯವಸ್ಥೆಯ ಕೊಡುಗೆಯನ್ನು ಮರೆಯುವಂತಿಲ್ಲ. ಮುದ್ರಿತ ಪತ್ರಿಕೆಗಳು ಸಂಪರ್ಕ ಸಾರಿಗೆ ವ್ಯವಸ್ಥೆಗಳ ಮೂಲಕವಾಗಿ ಒಂದು ಕಡೆಯಿಂದ ಇನ್ನೊಂದೆಡೆ ತಲುಪಿ ಸುದ್ದಿಯನ್ನು ಪ್ರಸರಿಸತೊಡಗಿತು. ಮುಖ್ಯವಾಗಿ ಪತ್ರಿಕೆಗಳು ಜನರಲ್ಲಿ ಜ್ಞಾನವನ್ನು ಹೆಚ್ಚಿಸುವುದರ ಜೊತೆಗೆ ನವ ಸಮಾಜದ ನಿರ್ಮಾಣದ, ಸಮಾಜ ಪರಿವರ್ತನಾ ಕಾರ್ಯಗಳಿಗೆ ಪುಷ್ಠಿಯನ್ನು ನೀಡತೊಡಗಿತು. ಮುಖ್ಯವಾಗಿ "ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಜನನಾಯಕರಿಂದ ದೊರೆತ ಸಂದೇಶವನ್ನು ಹೊತ್ತ ಪತ್ರಿಕೆಗಳು ದೇಶದಾದ್ಯಂತ ಸಂಚರಿಸಿ ಹೋರಾಟದ ಸ್ಪಷ್ಟ ರೂಪುರೇಷೆಗಳನ್ನು ಕಟ್ಟುವುದರ ಮುಖೇನ ಜನಮಾನಸದಲ್ಲಿ ನವಜಾಗ್ರತಿಯ ಹೊಸ ಹೊನಲನ್ನು ಹರಿಸಿತು. ನಂತರ ಮಾಧ್ಯದಲ್ಲಿ ಹೊಸ ಸಂಚಲನ ಮೂಡಿಸಿದ ದೃಶ್ಯ-ಶ್ರವ್ಯ ಮಾಧ್ಯಮ ಟೆಲಿವಿಷನ್. ಇತ್ತೀಚಿನ ಮೂವತ್ತು ವರ್ಷಗಳ ಹಿಂದಿನಿಂದ ಅದ್ಭುತವಾದ ಕ್ರಾಂತಿಕಾರಕ ಹೆಜ್ಜೆಗಳನ್ನು ಇರಿಸತೊಡಗಿತು. ಯಾವತ್ತು ಉಪಗ್ರಹಗಳ ಜಾಲಕ್ಕೆ ಟೆಲಿವಿಷನ್ ಹೊಂದಿಕೊಂಡಿತೋ ಅಂದಿನಿಂದ ಜಗತ್ತಿನ ಯಾವುದೇ ಮೂಲೆಯ ಸುದ್ದಿಗಳು ಕ್ಷಣಮಾತ್ರದಲ್ಲಿ ಚಿತ್ತರಗೊಂಡು ದೃಶ್ಯಗಳ ಮೂಲಕ ಜನರ ಕಣ್ಣಬಿಂಬವನ್ನು ಪ್ರವೇಶಿಸತೊಡಗಿತೋ, ಅಂದಿನಿಂದ ಜಗತ್ತು ಕಿರಿದಾಯಿತು".[೧೩] ಮಾಧ್ಯಮ ತನ್ನ ಕಬಂಧ ಬಾಹುಗಳಲ್ಲಿ ಇಡಿ ಜಗತ್ತನ್ನು ಸುತ್ತುವರೆದು

ಜನರಿಗೆ ನೇರಾನೇರ ಸಂಬಂಧದ ನವಬೆಸುಗೆಯನ್ನು ಬೆಸೆಯತೊಡಗಿತು. "ಟಿ.ವಿ ಒಂದು ವಿಧದಲ್ಲಿ ವರದಾನವಾಯಿತು. ಆದರೆ ಇನ್ನೊಂದೆಡೆ ಜನರ ಮನಸ್ಸಿನ ಮೇಲೆ ಅದೆಂತಹ ಕ್ರೌರ್ಯಭಾವನೆ ಮೂಡಿಸಿತೆಂದು ಊಹಿಸಲೂ ಅಸಾಧ್ಯವಾಯಿತು. ದೂರದರ್ಶನಗಳೂ ಕೂಡ ಪ್ರಸರಿಸುವ ಹಿಂಸಾಚಾರದ ದೃಶ್ಯ, ಮಹಿಳೆಯರ ಮೇಲಿನ ಅತ್ಯಾಚಾರವಾಗಲೀ, ಕೋಮು ಗಲಭೆಗಳಾಗಲೀ ನೋಡುಗನ ಮನಸ್ಸಿನ ಮೇಲೆ ಪರಿಣಾಮ ಬಿರುತ್ತಿದೆ".[೧೪] ಈ ರೀತಿಯಾಗಿ ಮುಂದುವರೆಯುತ್ತಾ ಹೋದಲ್ಲಿ ಮುಂದೆ ಒಂದು ದಿನ ನಮ್ಮ ಸುತ್ತಲಿನ ಪರಿಸರವೇ ನಮಗೆ ಅಪರಿಚಿತವಾಗಿ ಹೋಗಿ ಜೀವಚ್ಛವಗಳಂತೆ ಬದುಕು ಮಾಡುವ ದೀನ ಸ್ಥಿತಿ ಖಂಡಿತವಾಗಿಯೂ ಬಂದೊದಗುತ್ತದೆ. ಒಟ್ಟಿನಲ್ಲಿ ಮಾಧ್ಯಮಗಳು ಎಷ್ಟೊಂದು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬಲ್ಲದೋ ಅಷ್ಟೇ ಪ್ರತಿಕೂಲವಾಗಿಯೂ ವರ್ತಿಸಬಲ್ಲದು.

ಕೊನೆ ಟಿಪ್ಪಣಿಗಳು

೧. ಮಾಹಿತಿದಾರರು: ರವಿ ಹೆಗಡೆ, ಸಂಪಾದಕರು, ಕನ್ನಡಪ್ರಭ ದಿನಪತ್ರಿಕೆ.

೨. ಮಾಹಿತಿದಾರರು: ಕತೆಗಾರ ವಸುಧೇಂದ್ರ,

೩. ವಿಜಯವಾಣಿ, ದಿನಪತ್ರಿಕೆ, ೧೭-೧೨-೨೦೧೭

೪. ಉದಯವಾಣಿ, ದಿನಪತ್ರಿಕೆ, ೩೧-೦೩-೨೦೧೫.

೫. ಪ್ರಭಾಕರ ಎನ್.ಎಸ್. ಅವರ ಲೇಖನ ಆದಿವಾಸಿಗಳ ಆರ್ಥಿಕತೆ ಮತ್ತು ಮುಖ್ಯವಾಹಿನಿ, ಅನಿಕೇತನ, ದಿ.೧೦-೧೨-೨೦೧೫.

೬. ಅದೇ.

೭. ಅದೇ.

೮. ಪ್ರಭಾಕರ ಎನ್.ಎಸ್. ಅವರ ಲೇಖನ ಬುಡಕಟ್ಟು ಅಭಿವೃದ್ಧಿ, ಮಹಾಶ್ವೇತಾ ದೇವಿಯವರ ಚಿಂತನೆಗಳು ೧, ಅನಿಕೇತನ, ದಿ. ೨೩-೧೨-೨೦೧೬.

೯. ಅದೇ.

೧೦. ಮಾಹಿತಿ: ಸಿಂಚನ ವಿಶೇಷಾಂಕ ೨೦೧೩, ಗುಣವತಿ ರಮೇಶ.

೧೧. ಅದೇ.

೧೨. ಮಾಹಿತಿದಾರರು: ರವಿ ಹೆಗಡೆ, ಸಂಪಾದಕರು, ಕನ್ನಡಪ್ರಭ ದಿನಪತ್ರಿಕೆ.

೧೩. ರಾಜೀವ ಸಿ.ಜೆ., ಪತ್ರಕರ್ತರು, ವಿಜಯ ಕರ್ನಾಟಕ ದಿನಪತ್ರಿಕೆ, ಬೆಂಗಳೂರು ವಿಭಾಗ.

೧೪. ಮಾಹಿತಿದಾರರು: ಸಚ್ಚಿದಾನಂದ ಹೆಗಡೆ, ಸಂಪಾದಕರು, ಧ್ಯೇಯನಿಷ್ಠ ಪತ್ರಕರ್ತ ಪತ್ರಿಕೆ.

♦ ♦ ♦

ಅಧ್ಯಾಯ : ಏಳು

ಸಮಾರೋಪ

* ಅಧ್ಯಯನದ ಫಲಿತಗಳು

ಅಧ್ಯಾಯ : ಏಳು

ಸಮಾರೋಪ

ಭಾರತ ಸಂಸ್ಕೃತಿ ವೈವಿಧ್ಯಮಯದಿಂದ ಕೂಡಿದ್ದು, ಮುಂದಿನ ತಲೆಮಾರಿಗೆ ಪ್ರಾಚೀನ ಸಂಸ್ಕೃತಿಯನ್ನು ತಿಳಿಸುವುದರ ಜೊತೆಗೆ ಸಮಾನತೆಯನ್ನು ಬೆಳೆಸುತ್ತದೆ. ಪ್ರಾಚೀನ ಸಂಸ್ಕೃತಿಯನ್ನು ಉಳಿಸುತ್ತ ಆಧುನಿಕತೆಯ ಜೊತೆಗೆ ಮೂಲ ಸಂಸ್ಕೃತಿಯ ತತ್ವಗಳನ್ನು ಬೆಳೆಸುತ್ತಾ ಹೊಸ ಜೀವನ ಮೌಲ್ಯವನ್ನು ತಿಳಿಸುತ್ತದೆ. ಜನಪದ ಬದುಕಿನ ಭಾಗವಾಗಿರುವ ಆಚಾರ, ವಿಚಾರ ಮತ್ತು ಆಹಾರ ಪದ್ಧತಿಗಳು ಜನಪದರ ರೀತಿ-ನೀತಿಗಳನ್ನು ತಿಳಿಸುತ್ತದೆ.

ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವ-ಸಮೂಹ ಮಾಧ್ಯಮಗಳಾದ ಚಲನಚಿತ್ರ, ದೂರದರ್ಶನದ ಪ್ರಭಾವದಿಂದ ಜನಪದರ ಮೂಲ ಪರಂಪರೆಯಲ್ಲಿ ಬದಲಾವಣೆಯಾಗಿವೆ. ಆದರೂ ಇಂದಿಗೂ ಭಾರತದಲ್ಲಿ ಅಲಕ್ಷಿತ ಸಮುದಾಯಗಳು ಕಂಡುಬರುತ್ತವೆ. ಸಮೂಹ ಮಾಧ್ಯಮದ ಸಹಾಯವಿದ್ದರೂ ಮುಖ್ಯವಾಹಿನಿಯ ಹಾಗೂ ಅಲಕ್ಷಿತರ ನಡುವೆ ತುಂಬಾ ಅಂತರವಿರುವುದನ್ನು ಕಾಣಬಹುದಾಗಿದೆ. ಒಂದು ಪ್ರದೇಶದ ಹಾಗೂ ಆ ಪ್ರದೇಶದ ಜನ ಸಮುದಾಯಗಳ ಜನರ ಸ್ಥಿತಿಗತಿಗಳನ್ನು ನೋಡಬೇಕಾದರೆ ಭೂಮಿಯ ಮೇಲೆ ಮನುಷ್ಯನ ನೆಲೆಗಳು ಹಾಗೂ ಆತನ ಜೀವನದ ವಿಧಾನಗಳು ಮತ್ತು ನಿಸರ್ಗದೊಡನೆ ಆತನ ಸಂಬಂಧ, ಪರಿಸರ, ವಾಯುಗುಣವನ್ನು ಗಮನಿಸಬೇಕಾಗಿರುತ್ತದೆ. ಅಲಕ್ಷಿತರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ, ಧಾರ್ಮಿಕ ಸ್ಥಿತಿಗತಿಗಳನ್ನು ಗಮನಿಸಿದಾಗ ಇವರ ಸಂಪೂರ್ಣ ಚಿತ್ರಣ ಕಂಡುಬರುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಬಹುತೇಕ ವಿಷಯಾಂಶವನ್ನು ಕ್ಷೇತ್ರಕಾರ್ಯದಿಂದಲೇ ಸಂಗ್ರಹಿಸಲಾಗಿದೆ. ಆದ್ದರಿಂದ ಇದೊಂದು ಕ್ಷೇತ್ರಕಾರ್ಯ ಆಧಾರಿತ ಅಧ್ಯಯನವಾಗಿದೆ.

ಅಧ್ಯಯನದ ಬಹುಪಾಲು ಅಂಶಗಳನ್ನು ಸ್ವತಃ ಅವಲೋಕನ, ಸಂದರ್ಶನ ಹಾಗೂ ಧ್ವನಿ ಸುರುಳಿ, ಛಾಯಾಚಿತ್ರಗಳ ಮೂಲಕವಾಗಿ ದಾಖಲಿಸಲಾಗಿದೆ. ಜಾನಪದೀಯ ಕ್ಷೇತ್ರಕಾರ್ಯಗಳು ಸಹಜತೆ ಹೊಂದಿರಬೇಕು ಹಾಗೂ ವಕ್ತೃಗಳಿಗೆ ಗೊತ್ತಾಗದಂತೆ ಅವಲೋಕನ, ದಾಖಲೆಗಳನ್ನು ಮಾಡಿಕೊಳ್ಳಬೇಕೆಂದು ತಿಳಿಯಲಾಗಿದೆ. ಅಧ್ಯಯನ ಮಾಡುವಾಗ ಕ್ಷೇತ್ರಕಾರ್ಯದ ವಿಧಾನಗಳಿಗೆ ಕಟ್ಟುಬೀಳದೇ, ಸಮಯ ಮತ್ತು ಸನ್ನಿವೇಶಗಳಿಗೆ ಹೊಂದಿಕೊಂಡು ವಕ್ತೃಗಳಿಂದ ಮಾಹಿತಿ

ಸಂಗ್ರಹಿಸಲಾಗಿದೆ. ಏಕೆಂದರೆ ಮಾಹಿತಿದಾರರನ್ನು ನಿರ್ದಿಷ್ಟ ಸಮಯದಲ್ಲಿ ಹಿಡಿಯುವುದು ಕಷ್ಟ ಸಾಧ್ಯ. ಆದ್ದರಿಂದ ಮಾಹಿತಿದಾರರು ಎಲ್ಲಿ ಸಿಗುತ್ತಾರೋ ಅಲ್ಲಿಗೆ ಹೋಗಿ ಅವರು ನೀಡಿದ ಮಾಹಿತಿಯನ್ನು ಅಧ್ಯಯನದಲ್ಲಿ ಬಳಸಿಕೊಂಡಿರುತ್ತೇನೆ.

"ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳು" ಎಂಬ ಶೀರ್ಷಿಕೆಯಡಿಯಲ್ಲಿ ಅಧ್ಯಯನವನ್ನು ಕೈಗೊಂಡಿದ್ದು, ಅದಕ್ಕೆ ಸಂಬಂಧಿಸಿದಂತೆ ಪರಿವಿಡಿಯನ್ನು ಮಾಡಿಕೊಂಡಿದ್ದು, ಏಳು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಕರ್ನಾಟಕದ ಆಯ್ದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಅಲೆಮಾರಿ, ಅರೆ ಅಲೆಮಾರಿ ಸಮುದಾಯದವರನ್ನು ಮತ್ತು ಸಮೂಹ ಮಾಧ್ಯಮಗಳ ಕುರಿತು ಅಧ್ಯಯನ ಮಾಡಲಾಗಿದೆ.

ಮೊದಲನೇ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ಇದುವರೆಗಿನ ಸಮೀಕ್ಷೆಯನ್ನೊಳಗೊಂಡಿದೆ.

ಪ್ರಸ್ತುತ ಅಧ್ಯಯನದಲ್ಲಿ ಅಲಕ್ಷಿತ ಸಮುದಾಯಗಳ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಯನ್ನು, ಅವರ ಚಾರಿತ್ರಿಕ ಬೆಳವಣಿಗೆಯನ್ನು, ಮಾಧ್ಯಮಗಳ ಜೊತೆಗಿನ ಸಂಬಂಧವನ್ನು, ಮಾಧ್ಯಮದ ಜೊತೆಗಿನ ಬಿಕ್ಕಟ್ಟುಗಳನ್ನು, ಅದಕ್ಕೆ ಪರಿಹಾರಗಳನ್ನು, ವರ್ತಮಾನದ ಸ್ಥಿತಿಗತಿಗಳನ್ನು ವಿವರಿಸಲು ಪ್ರಯತ್ನಿಸಲಾಗಿದೆ. ಪ್ರತಿ ಅಲಕ್ಷಿತ ಸಮುದಾಯವೂ ಸಹ ಹಲವು ಸಮಸ್ಯೆಗಳನ್ನು ತನ್ನ ಒಡಲಿನಲ್ಲಿ ಇಟ್ಟುಕೊಂಡಿದೆ. ಗಟ್ಟಿಯಾದ ಉದ್ಯೋಗವಿಲ್ಲದೆ ಅಥವಾ ಅದನ್ನು ಸೃಷ್ಟಿಸಿಕೊಳ್ಳಲು ಅಗತ್ಯವಾದ ಸಂಖ್ಯಾಬಾಹುಳ್ಯವಿಲ್ಲದೆ ನರಳಾಡುತ್ತಿವೆ. ಸಂವಿಧಾನಿಕ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ಅಗತ್ಯವಾದ ದಾರಿ ಕಾಣದೆ ಅಥವಾ ಸಿಕ್ಕ ಸೌಲಭ್ಯಗಳಿಂದ ಭವಿಷ್ಯ ರೂಪಿಸಿಕೊಳ್ಳಲಾಗದೆ ಚಡಪಡಿಸುತ್ತಿವೆ. ಮಾಧ್ಯಮದ ಮುಖಾಂತರವಾದರೂ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಚಿಕ್ಕ ಪ್ರಯತ್ನವನ್ನು ಅಧ್ಯಯನದಲ್ಲಿ ಮಾಡಲಾಗಿದೆ.

ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳ ಅಧ್ಯಯನ ಸೂಕ್ಷ್ಮಾತಿಸೂಕ್ಷ್ಮ ಅಧ್ಯಯನ. ಇದುವರೆಗಿನ ಅಧ್ಯಯನಗಳು ಸಮುದಾಯದ ವಿವರಗಳನ್ನು ಮಾತ್ರ ದಾಖಲಿಸಿವೆ. ಆದರೆ ಅಧ್ಯಯನದಲ್ಲಿ ಸಮುದಾಯಗಳ ಜ್ಞಾನಪರಂಪರೆಯನ್ನು ಮತ್ತು ವರ್ತಮಾನದಲ್ಲಿ ಮುಖ್ಯವಾಹಿನಿಗೆ ಮುಂದುವರೆದು ಆಧುನಿಕ ನಾಗರಿಕತೆಯನ್ನು ಅಳವಡಿಸಿಕೊಳ್ಳಲು ಬೇಕಾದ ಕ್ರಮಗಳನ್ನು ಅಧ್ಯಯನ ಮಾಡಲಾಗಿದೆ. ತನ್ನ ಮೇಲೆ ನಡೆಯುತ್ತಿರುವ ಶೋಷಣೆಗಳನ್ನು ಪ್ರಶ್ನಿಸುತ್ತಲೇ ಅವುಗಳನ್ನು ಆಧುನಿಕತೆಗೆ ಅಳವಡಿಸಿಕೊಂಡು ವಿಷಯದ ಮಹತ್ವವನ್ನು ಅಳವಡಿಸಿಕೊಳ್ಳುವ ಮಾರ್ಗಗಳನ್ನು ಅಧ್ಯಯನದಲ್ಲಿ ಮಾಡಲಾಗಿದೆ.

ಪ್ರಸ್ತುತ ಅಧ್ಯಯನವು ಸಮುದಾಯಗಳ ಹಾಗೂ ಮಾಧ್ಯಮಗಳ ಜೊತೆ ನಿರಂತರ ಒಡನಾಟದೊಂದಿಗೆ ರೂಪುಗೊಂಡಿದ್ದು, ಸಮುದಾಯಗಳು ಮತ್ತು ಮಾಧ್ಯಮಗಳು ಎದುರಿಸುತ್ತಿರುವ ಸಮಸ್ಯೆಗಳು ಅವುಗಳಿಗೆ ಸಿಗಬಹುದಾದ ಪರಿಹಾರಗಳನ್ನು, ಅಡ್ಡಿ ಆತಂಕಗಳ ಬಗ್ಗೆ ಚರ್ಚಿಸಿದೆ.

ಈ ಮೂಲಕವಾಗಿ ನಿರ್ಲಕ್ಷಿತ ಸಮುದಾಯಗಳ ಬದುಕಿನಲ್ಲಿ ಒಂದು ಆಶಾಭಾವನೆಯನ್ನು ತರುವ ಕೆಲಸ ಮಾಡಬೇಕಾಗಿದೆ. ವ್ಯವಸ್ಥೆಯೊಳಗಿನ ಅಸಮಾನತೆಯನ್ನು ಸಂಗ್ರಹಿಸಿ ಅವುಗಳನ್ನು ಎದುರಿಸಲು ಸಮೂಹ ಮಾಧ್ಯಮಗಳು ಹೇಗೆ ಸಹಕಾರಿಯಾಗುತ್ತವೆ. ಯಾವ ಕ್ರಮಗಳನ್ನು ಅಳವಡಿಸಿಕೊಂಡರೆ ಗುರಿ ತಲುಪಬಹುದು ಎಂಬುದನ್ನು ಸೂಚಿಸುತ್ತವೆ. ಹಾಗೆ ಮಾಡುವುದರಿಂದ ಪ್ರಜಾಪ್ರಭುತ್ವದಲ್ಲಿ ನಿರ್ಲಕ್ಷಿತ ಸಮುದಾಯಗಳು ತಮ್ಮ ಸಮಪಾಲು ಪಡೆದು ಮುಖ್ಯವಾಹಿನಿಗೆ ಇಡೀ ನಾಗರಿಕ ಜೀವನ ಸಾಗಿಸುವುದು ತುಂಬ ಮಹತ್ವದ್ದಾಗಿದೆ.

ಅಧ್ಯಯನಕ್ಕೆ ಆಯ್ದುಕೊಂಡ ಅಲಕ್ಷಿತ ಸಮುದಾಯಗಳು ಕರ್ನಾಟಕದ ವಿವಿಧ ಭಾಗಗಳಲ್ಲಿ ವಾಸಿಸುತ್ತಿದ್ದಾರೆ. ಆದ್ದರಿಂದ ಉತ್ತರ ಕರ್ನಾಟಕದಲ್ಲಿ ಕೆಲವು (ಹುಬ್ಬಳ್ಳಿ-ಧಾರವಾಡ, ಕುಂದಗೋಳ, ಗದಗ), ಕರಾವಳಿ ತೀರ/ಮಲೆನಾಡಿನಿಂದ ಕೆಲವು (ಉತ್ತರ ಕನ್ನಡ ಜಿಲ್ಲೆಯ ಸಿರಸಿ, ಸಿದ್ದಾಪುರ, ಕುಮಟಾ, ಹೊನ್ನಾವರ, ಅಂಕೋಲ ಹಾಗೂ ಉಡುಪಿ ಜಿಲ್ಲೆಯ ಕುಂದಾಪುರ) ಹಾಗೂ ಬೆಂಗಳೂರಿನ ಆಯ್ದ ಸಮುದಾಯಗಳನ್ನು ಆಯ್ಕೆ ಮಾಡಲಾಗಿದೆ. ಇದರಿಂದ ಕರ್ನಾಟಕದ ಎಲ್ಲಾ ಭೌಗೋಳಿಕ ಪ್ರದೇಶದ ಅಲಕ್ಷಿತರ ಜೀವನ ವಿಧಾನ, ವೃತ್ತಿ, ಆಹಾರ ಪದ್ಧತಿ, ಭಾಷೆ, ಕಲೆ ಮುಂತಾದ ಮಾಹಿತಿಯನ್ನು, ಸಮಸ್ಯೆಗಳನ್ನು ಅಧ್ಯಯನಕ್ಕೆ ಒಳಪಡಿಸಿ ಚರ್ಚಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಸಮೂಹ ಮಾಧ್ಯಮದ ಪರಿಕಲ್ಪನೆಗಳಿವೆ. ಮನುಷ್ಯ ಸಂಘಜೀವಿ, ಒಬ್ಬಂಟಿಯಾಗಿ ಬದುಕಲಾರ, ಸಂಘಜೀವಿಯಾಗಿ ಬದುಕಲು ಮನುಷ್ಯನಿಗೆ ಸಂಪರ್ಕ ಬೇಕೆ ಬೇಕು. ಹೀಗಾಗಿ ಮನುಷ್ಯ ಹೊಸ ಸಂಪರ್ಕ ಸಾಧನಗಳನ್ನು ಅರಸುತ್ತಲೇ ಇದ್ದಾನೆ. ತನ್ನ ಭಾವನೆಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ಮನುಷ್ಯ ಮೊದಲು ಕಂಡುಕೊಂಡಿದ್ದು ಸನ್ನೆ ಮಾತುಗಾರಿಕೆ. ಮನುಷ್ಯನ ಬುದ್ಧಿವಂತಿಕೆ ಬೆಳೆದಂತೆ ಸಂವಹನಕ್ಕಾಗಿ ಮನುಷ್ಯ ಬೇರೆ ಬೇರೆ ಸಾಧನೆಗಳನ್ನು ಬಳಸತೊಡಗಿದ. ತಂತ್ರಜ್ಞಾನದ ಕೊರತೆ ಇದ್ದ ಕಾಲದಲ್ಲೂ ಸಮೂಹ ಮಾಧ್ಯಮಗಳ ಅಸ್ತಿತ್ವವನ್ನು ಅಲ್ಲಗಳೆಯುವಂತಿಲ್ಲ. ಪುರಾತನ ಕಾಲದಲ್ಲಿ ಮಾತುಗಾರಿಕೆ, ಡಂಗೂರ, ನಗಾರಿ ಗಂಟೆಗಳೂ ಮಾಧ್ಯಮಗಳಾದ್ದವು. ಸಾಹಿತ್ಯ, ಜನಪದ ಸಾಹಿತ್ಯ, ರಂಗಭೂಮಿ ನಂತರದ ಸೇರ್ಪಡೆಗಳಾದರೆ ಇತ್ತೀಚಿಗೆ ವೃತ್ತ ಪತ್ರಿಕೆಗಳು, ನಿಯತಕಾಲಿಗಳು, ಬಾನುಲಿ, ದೂರದರ್ಶನ ಸೇರ್ಪಡೆಗೊಂಡಿವೆ. ದಿನೇ ದಿನೇ ಸಮೂಹ ಮಾಧ್ಯಮಗಳ ವ್ಯಾಪ್ತಿ ವಿಸ್ತೀರ್ಣಗೊಳ್ಳುತ್ತಲೇ ಇದೆ. ಕಂಪ್ಯೂಟರ್, ಇಂಟರ್ನೆಟ್, ಮೊಬೈಲ್, ಫೇಸ್‌ಬುಕ್‌ನಂತಹ ಸಾಮಾಜಿಕ ತಾಣಗಳೂ ಸಮೂಹ ಮಾಧ್ಯಮಗಳ ಸಾಲಿಗೆ ಸೇರುತ್ತವೆ. ಇದೀಗ ಸಮೂಹ ಮಾಧ್ಯಮಗಳ ವ್ಯಾಪ್ತಿ ದೊಡ್ಡದಾಗಿದೆ. ಸಮೂಹ ಮಾಧ್ಯಮಗಳು ಒಂದು ವ್ಯವಸ್ಥೆ ಹಾಗೂ ಮತ್ತೊಂದು ವ್ಯವಸ್ಥೆಯ ಸಂಪರ್ಕದ ಕೊಂಡಿಯಾಗಿರುತ್ತವೆ. ಸಮೂಹ ಮಾಧ್ಯಮಗಳು ಸರಕಾರ ಹಾಗೂ ಜನರ ನಡುವೆ, ಆಡಳಿತ ಹಾಗೂ ಜನರ ನಡುವೆ ಸಂಪರ್ಕದ ಕೊಂಡಿಗಳಾಗಿ ನಿಲ್ಲುತ್ತವೆ. ಸಮೂಹ ಮಾಧ್ಯಮಗಳ ವ್ಯಾಪ್ತಿ ಬಹಳ ವಿಶಾಲವಾಗಿರುವುದರಿಂದ ಅಧ್ಯಯನದಲ್ಲಿ ಪತ್ರಿಕೆ, ರೇಡಿಯೋ, ಟೆಲಿವಿಷನ್

ಮತ್ತು ಚಲನಚಿತ್ರ, ಅಂತರ್ಜಾಲಗಳೆಂದು ಕೇವಲ ನಾಲ್ಕು ಮಾಧ್ಯಮಗಳನ್ನು ಮಾತ್ರ ಈ ಸಮೂಹ ಮಾಧ್ಯಮಗಳ ವ್ಯಾಪ್ತಿಗೆ ಸೇರಿಸಲಾಗಿದೆ. ಅಂದರೆ ಸಮೂಹ ಮಾಧ್ಯಮಗಳೆಂದರೆ ಇಲ್ಲಿ ಉಲ್ಲೇಖಿಸಿದ ಕೇವಲ ನಾಲ್ಕು ಮಾಧ್ಯಮಗಳಿಗೆ ಮಾತ್ರ ಅನ್ವಯಿಸುತ್ತದೆಂದು ಅರ್ಥೈಸಲಾಗಿದೆ. ಸಾಮಾಜಿಕ ಕಳಕಳಿ ಹೊಂದಿರುವ ಸಮೂಹ ಮಾಧ್ಯಮಗಳು ಸ್ವತಂತ್ರವಾಗಿ ಕಾರ್ಯನಿರ್ವಹಿರುವುದು ಪ್ರಜಾಪ್ರಭುತ್ವದ ಮೂಲಕ ಸಮಾಜದ ಉಳಿವಿಗೆ ಕಾರಣವಾಗಿದೆ. ಸಾಮಾಜಿಕ ಕಳಕಳಿಯೇ ಸಮೂಹ ಮಾಧ್ಯಮಗಳ ಮುಖ್ಯ ಗುರಿಯಾಗಿದೆ.

ಜಾತಿ ವ್ಯವಸ್ಥೆಯು ಭಾರತೀಯ ಸಾಮಾಜಿಕ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಹಾಸುಹೊಕ್ಕಾಗಿದೆ. ಅಂದರೆ, ರೂಢಿ, ಸಂಪ್ರದಾಯ, ಆಚಾರ–ವಿಚಾರ, ವೇಷ–ಭೂಷಣ, ಆಹಾರ–ಅಭ್ಯಾಸ, ವ್ಯಾಪಾರ–ವ್ಯವಹಾರ, ಉದ್ಯೋಗ, ವಿವಾಹ–ಕುಟುಂಬ, ಹುಟ್ಟು–ಸಾವು, ಮುಂತಾದವುಗಳಲ್ಲಿ ಸೇರಿಹೋಗಿದೆ. ಸಾಮಾಜಿಕ ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಆಳವಾಗಿ ಬೇರೂರಿರುವ ಜಾತಿ ಪದ್ಧತಿಯು ಬಹು ದೀರ್ಘವಾದ ಹಿನ್ನೆಲೆಯನ್ನು ಹೊಂದಿದೆ. ಇದು ಪ್ರತ್ಯೇಕವಾದ ಸಂಗತಿಯಾಗಿರದೆ, ವ್ಯಾಪಕವಾಗಿ ಎಲ್ಲೆಡೆ ಕಂಡುಬರುವ ವ್ಯವಸ್ಥೆಯಾಗಿದೆ. ಜಾತಿಗೆ ಇರುವ ಕೆಲವು ಆಚರಣೆ, ಪದ್ಧತಿ, ನಂಬಿಕೆ, ಆಲೋಚನೆ ಮುಂತಾದವುಗಳ ಹಿನ್ನೆಲೆಯಲ್ಲಿ ಜಾತಿಯನ್ನು ವ್ಯವಸ್ಥೆ ಎಂದು ವಸಾಹತು ಕಾಲದಿಂದಲೇ ಕರೆಯಲಾಗಿದೆ. ೪೦೦೦ಕ್ಕೂ ಅಧಿಕ ಜಾತಿ ಉಪಜಾತಿಗಳನ್ನು ಹಾಗೂ ಅವುಗಳ ವಿಶಿಷ್ಟತೆಯನ್ನು ಹೊಂದಿರುವ ಭಾರತವು ಜಾತಿ ವ್ಯವಸ್ಥೆಯ ಏಕಮಾತ್ರ ದೇಶವಾಗಿದೆ.

ಪ್ರತಿಯೊಂದು ಅಲಕ್ಷಿತ ಸಮುದಾಯಗಳಿಗೆ ಅವರ ವೃತ್ತಿಯನ್ನಾಧರಿಸಿ ಹೆಸರು ಬಂದಿರುವುದನ್ನು ಗಮನಿಸಬಹುದಾಗಿದೆ. ಸಮುದಾಯದ ಹೆಸರು ಇವರ ಕಾಯಕ ಜೀವನವನ್ನು ನಿರ್ಣಯಿಸುತ್ತದೆ. ಅಲಕ್ಷಿತರು ಮೌಖಿಕವಾಗಿ ಬಂದಂತಹ ಪೌರಾಣಿಕ ಕಥನವನ್ನು ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಿಕೊಂಡು ಬಂದಿರುತ್ತಾರೆ. ಪೌರಾಣಿಕ ಕಥನಕ್ಕೆ ಹೆಚ್ಚಿನ ಮಹತ್ವವನ್ನು ನೀಡುತ್ತಾರೆ. ಇವರ ಮೂಲಸ್ಥಾನ ಒಂದು ಕಡೆಯಾದರೆ ಪರಿಸರದ ಸನ್ನಿವೇಶ ಹಾಗೂ ಜೀವನಾಧಾರಕ್ಕಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ವಲಸೆ ಬಂದಿರುತ್ತಾರೆ. ಇವರು ಹೆಚ್ಚಾಗಿ ಕಾಡುಗಳು, ಕಾಡಿನ ಅಂಚು, ಮೈದಾನ, ಊರಿನ ಹೊರಗೆ ನದಿ ಸಮೀಪ ವಾಸ್ತವ್ಯ ಮಾಡುತ್ತಾರೆ. ಮೇಲ್ವರ್ಗದ ಸಮುದಾಯಗಳು ವಾಸಿಸುವ ಪ್ರದೇಶದಿಂದ ದೂರದಲ್ಲಿ ಜೀವನ ನಿರ್ವಹಣೆ ಮಾಡುತ್ತಾರೆ. ಇವರ ಜನಸಂಖ್ಯಾ ಪ್ರಮಾಣ ಕಡಿಮೆ ಇದ್ದು, ಅಲ್ಲಲ್ಲಿ ಹರಿದು ಹಂಚಿಹೋಗಿರುತ್ತಾರೆ. ಇವರು ಭೌಗೋಳಿಕ ಹಿನ್ನೆಲೆ, ಕಾಲಮಾನವನ್ನು ಆಧರಿಸಿ ಅಲೆಮಾರಿತನವನ್ನು ನಡೆಸುತ್ತಾ ಜೀವಿಸುತ್ತಾರೆ. ಈ ಮೂರನೇ ಅಧ್ಯಾಯದಲ್ಲಿ ಅಲಕ್ಷಿತ ಸಮುದಾಯಗಳ ವಿಕಾಸದ ನೆಲೆ, ಅಲಕ್ಷಿತರ ಬದುಕಿನ ಹರವುಗಳು, ಗುಣಲಕ್ಷಣಗಳು, ಅಲಕ್ಷಿತ ಸಮುದಾಯ ಮತ್ತು ಜಾಗತೀಕರಣ ಪ್ರಜ್ಞೆ ಹಾಗೂ ಆಯ್ದ ಅಲಕ್ಷಿತ ಸಮುದಾಯಗಳ (ಚಪ್ಪರಬಂದ್, ಬಿಲ್ಲವ, ಚೆನ್ನದಾಸರ್, ಮೊಗವೀರ, ಮುಕ್ರಿ,

ಶೀಲಿಗರು ಮತ್ತು ಆಗೇರ ಸಮುದಾಯಗಳು) ಹುಟ್ಟು ಪದದ ಅರ್ಥ, ಉಡುಗೆ ತೊಡುಗೆ, ಒಳಗಳು, ಶಾರೀರಿಕ ದೇಹದಾಢ್ಯತೆ, ವೃತ್ತಿ, ವಸತಿ ವ್ಯವಸ್ಥೆ, ನಂಬಿಕೆ ಮತ್ತು ಆಚರಣೆಗಳು, ಸಾಮಾಜಿಕ ವ್ಯವಸ್ಥೆ, ರಾಜಕೀಯ ವ್ಯವಸ್ಥೆ, ಶೈಕ್ಷಣಿಕ ಸ್ಥಿತಿಗತಿಗಳು ಮುಂತಾದವುಗಳ ಮೇಲೆ ಬೆಳಕು ಚೆಲ್ಲಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳ ಮುಖಾಮುಖಿ, ಮಾಧ್ಯಮದ ಹೊಣೆಗಾರಿಕೆ, ಆಶಯಗಳು ಮತ್ತು ಅಲಕ್ಷಿತ ಸಮುದಾಯಗಳನ್ನು ಮುಖ್ಯವಾಹಿನಿಗೆ ಪರಿಚಯಿಸುವಲ್ಲಿ ಸಮೂಹ ಮಾಧ್ಯಮದ ಪಾತ್ರವೇನು ಎಂಬುದನ್ನು ವಿವರಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಸಾಮಾಜಿಕ ಮಾಧ್ಯಮಗಳು ಬಂದ ಹೊಸದರಲ್ಲಿ, ಅಂದರೆ ಸುಮಾರು ೮-೧೦ ವರ್ಷಗಳಿಂದ ಕಳೆದ ನಾಲ್ಕೈದು ವರ್ಷಗಳವರೆಗೆ ಎಲ್ಲವೂ ಸರಿಯಾಗಿತ್ತೆಂದೇ ಹೇಳಬಹುದು. ಏಕೆಂದರೆ ಆಗ ಸಾಮಾಜಿಕ ಮಾಧ್ಯಮಗಳು ಸಮೂಹ ಮಾಧ್ಯಮಗಳನ್ನೇ ಅನುಸರಿಸುತ್ತಿದ್ದವು. "ಮಾಧ್ಯಮಗಳಲ್ಲಿ ಬಂದದ್ದು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರತಿಧ್ವನಿಸುತ್ತಿತ್ತು. ಆದರೆ ಈಗ ನಾಲ್ಕೈದು ವರ್ಷಗಳಿಂದ ಈ ಕ್ರಮ ಬದಲಾಗಿ ಬೇರೆಯದೊಂದು ಹೊಸ ಕ್ರಮ ಹುಟ್ಟಿಕೊಂಡಿದೆ. ಅದೇನೆಂದರೆ ಮಾಧ್ಯಮಗಳು ಕುರುಡು-ಕುರುಡಾಗಿ ಸಾಮಾಜಿಕ ಮಾಧ್ಯಮಗಳನ್ನು ಅನುಸರಿಸುವುದು. ಅದರಲ್ಲಿ ಬಂದಿದ್ದೇ ಸುದ್ದಿ ಅಥವಾ ಸುದ್ದಿಗೆ ಮೂಲದ್ರವ್ಯ ಎನ್ನುವಂತೆ ವರ್ತಿಸುವುದು". ಇದರಿಂದಾಗಿ ಅನೇಕ ವಿವಿಧ ಕಷ್ಟಗಳು, ಸವಾಲುಗಳು ಎದುರಾಗಿವೆ. ಹಾಗೆಯೇ ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳ ನಡುವಿನ ಸಮಸ್ಯೆಗಳು, ಪರಿಣಾಮಗಳು ಹಾಗೂ ಪರಿಹಾರದ ಸಾಧ್ಯತೆಯ ಬಗ್ಗೆ ಚರ್ಚಿಸಲಾಗಿದೆ.

ಆರನೇ ಅಧ್ಯಾಯದಲ್ಲಿ ಸಮೂಹ ಮಾಧ್ಯಮ ಮತ್ತು ಅಲಕ್ಷಿತ ಸಮುದಾಯಗಳ ನಡುವಿನ ವರ್ತಮಾನದ ಪಲ್ಲಟಗಳ ಬಗ್ಗೆ ಮತ್ತು ಆಧುನಿಕ ಜಗತ್ತು ಮತ್ತು ಸಮೂಹ ಮಾಧ್ಯಮಗಳ ಬಗ್ಗೆ ಚರ್ಚಿಸಲಾಗಿದೆ.

ಏಳನೇ ಅಧ್ಯಾಯ ಸಮಾರೋಪವನ್ನು ಹೊಂದಿದ್ದು, ಅಧ್ಯಯನದ ಫಲಿತಗಳನ್ನು ನೀಡಲಾಗಿದೆ.

ಅನುಬಂಧದಲ್ಲಿ ಪರಾಮರ್ಶನ ಗ್ರಂಥಗಳು, ವಕ್ತೃ ವಿವರ, ಛಾಯಾಚಿತ್ರಗಳನ್ನು ನೀಡಲಾಗಿದೆ.

ಅಧ್ಯಯನದ ಫಲಿತಗಳು

೧. ಅಲಕ್ಷಿತ ಸಮುದಾಯಗಳು ಶತಶತಮಾನಗಳಿಂದ ಭಾರತದಲ್ಲಿ ವಾಸಿಸುತ್ತಿದ್ದಾರೆ. ಈ ಎಲ್ಲಾ ಅಲಕ್ಷಿತ ಸಮುದಾಯಗಳನ್ನು ನೋಡಿದಾಗ ಇವರ ಆಚರಣೆಗಳಲ್ಲಿ, ಜೀವನ ಪದ್ಧತಿಗಳಲ್ಲಿ ಬುಡಕಟ್ಟು ಲಕ್ಷಣಗಳು ಎದ್ದು ಕಾಣುತ್ತದೆ.

೨. ಅಲಕ್ಷಿತ ಸಮುದಾಯದಲ್ಲಿ ಬಡತನ ಸರ್ವೆಸಾಮಾನ್ಯವಾಗಿದೆ. ಕೂಲಿಯೇ ಜೀವನಕ್ಕೆ ಮೂಲಾಧಾರವಾಗಿದೆ. ಇವರು ಹೆಚ್ಚಾಗಿ ಜನಪದ ವೈದ್ಯ ಪದ್ಧತಿಯ ಮುಖಾಂತರ

ರೋಗಗಳನ್ನು ಗುಣಪಡಿಸಿಕೊಳ್ಳುತ್ತಾರೆ. ಹಾಗೂ ಅಲಕ್ಷಿತ ಸಮುದಾಯದಲ್ಲಿ ಅನೇಕ ಬಗೆಯ ಮೌಢ್ಯಗಳ ಆಚರಣೆ ಇಂದಿಗೂ ಜೀವಂತವಾಗಿದೆ.

೩. ಇಂದಿನ ಸಮೂಹ ಮಾಧ್ಯಮಗಳು ತಮ್ಮ ಹೊಣೆಗಾರಿಕೆಯನ್ನು ಮರೆತು ಲಾಭದ ಆಸೆಯತ್ತ ಸಾಗುತ್ತಿದೆ. ಕೇವಲ ಟಿ.ಆರ್.ಪಿ.ಗಾಗಿ ಸತ್ಯ ಸುದ್ದಿಗಳನ್ನು ತಿರುಚಿ ಚಿತ್ತರಿಸುತ್ತಿವೆ. ಇದರಿಂದಾಗಿ ಇಂದಿನ ಯುವ ಪೀಳಿಗೆಯ ಮೇಲೆ ತುಂಬಾ ದುಷ್ಪರಿಣಾಮವಾಗುತ್ತಿದೆ. ಮತ್ತು ಸಮೂಹ ಮಾಧ್ಯಮಗಳು ಅಲಕ್ಷಿತ ಸಮುದಾಯಗಳನ್ನು ಅಲಕ್ಷಿಸುವುದರಿಂದ ಇಂದು ಅಲಕ್ಷಿತ ಸಮುದಾಯಗಳು ಮುಖ್ಯವಾಹಿನಿಗೆ ಬರಲಾಗದೇ ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ದುರ್ಬಲರಾಗುತ್ತಿದ್ದಾರೆ.

೪. ಸಮೂಹ ಮಾಧ್ಯಮಗಳು ಇಂದು ಶ್ರೀಮಂತರ, ಪ್ರಭಾವಿ ರಾಜಕೀಯ ವ್ಯಕ್ತಿಗಳ ಹಿಡಿತದಲ್ಲಿದ್ದು, ಅವರ ಪರವಾಗಿಯೇ ನಿಂತಿವೆ. ಅಲಕ್ಷಿತ ಸಮುದಾಯಗಳ ಅಭಿವೃದ್ಧಿಗೆ ಸರ್ಕಾರ ರೂಪಿಸುವ ಯೋಜನೆಗಳು ಅವರನ್ನು ತಲುಪದೇ ಭ್ರಷ್ಟ ಅಧಿಕಾರಿಗಳ ಪಾಲಾಗುತ್ತಿದ್ದರೂ ಸಮೂಹ ಮಾಧ್ಯಮಗಳು ಅದನ್ನು ಸರ್ಕಾರದ ಗಮನಕ್ಕೆ ತರುತ್ತಿಲ್ಲ.

೫. ಅಲಕ್ಷಿತ ಸಮುದಾಯಗಳನ್ನು ಮುಖ್ಯವಾಹಿನಿಗೆ ತರುವ ಯೋಜನೆಗಳು ಇಂದು ವಿಫಲವಾಗಿ, ಅಲಕ್ಷಿತರು ಸಮಾಜದಿಂದ ದೂರವಾಗಿ ಎರಡು ಹೊತ್ತಿನ ಊಟಕ್ಕೆ ಕಷ್ಟಪಡುತ್ತಿದ್ದರೂ ಸಮೂಹ ಮಾಧ್ಯಮಗಳು ಇವರತ್ತ ಹೋಗದೆ, ರಾಜಕೀಯ ಕ್ಷೇತ್ರದಲ್ಲಿ ನಡೆಯುವ ವಿಚಾರಗಳು, ಚಲನಚಿತ್ರಗಳ ನಟ-ನಟಿಯರು (ಸೆಲಿಬ್ರಿಟಿಗಳು), ವಿದೇಶಗಳ ಸುದ್ದಿ, ಕ್ರೀಡೆ, ಮನರಂಜನೆಯತ್ತ ಮಾತ್ರ ಗಮನಹರಿಸುತ್ತಿವೆ (ಲಾಭ ಬರುವ ಹಾಗೂ ಜನಪ್ರಿಯತೆ ಗಳಿಸುವ ವಿಷಯಗಳತ್ತ ಮಾತ್ರ).

೬. ಸಂಘೇ ಶಕ್ತಿ ಕಲಿಯುಗೇ ಎಂಬ ಉಕ್ತಿಯಂತೆ ಅಲಕ್ಷಿತರು ಸಂಘಟನೆಯಾಗಲು ಸಮೂಹ ಮಾಧ್ಯಮಗಳು ಸಹಕರಿಸಿದರೆ ಖಂಡಿತವಾಗಿಯೂ ಅಲಕ್ಷಿತ ಸಮುದಾಯಗಳು ಮುಖ್ಯವಾಹಿನಿಯತ್ತ ಬರಲು ಸಾಧ್ಯವಾಗುತ್ತದೆ.

೭. ಸಮೂಹ ಮಾಧ್ಯಮಗಳು ಅನುಸರಿಸುವ ಸಾಂಪ್ರದಾಯಿಕ ನೀತಿಯಿಂದಾಗಿ ಅಲಕ್ಷಿತ ಸಮುದಾಯಗಳ ಶಿಕ್ಷಿತ ಜನರಿಗೆ ಸಮೂಹ ಮಾಧ್ಯಮಗಳಲ್ಲಿ ಪ್ರವೇಶಿಸಲು ಕಷ್ಟಸಾಧ್ಯವಾಗುತ್ತಿದೆ. ದೇಶದ ನಾಲ್ಕನೆಯ ಅಂಗವೆಂದೇ ಹೆಸರಾದ ಸಮೂಹ ಮಾಧ್ಯಮಗಳು ತಮ್ಮ ಹೊಣೆಗಾರಿಕೆ ಅರಿತು, ಧ್ಯೇಯನಿಷ್ಠೆಗಳನ್ನು ಅಳವಡಿಸಿಕೊಂಡು ನಡೆದರೆ ನಮ್ಮ ದೇಶವು ಅಭಿವೃದ್ಧಿಯಾಗಿ, ದೇಶದ ಭ್ರಷ್ಟಾಚಾರ ತೊಲಗಿ, ರಾಜಕೀಯ ಪಕ್ಷಗಳು ನಿಷ್ಪಕ್ಷಪಾತ ಆಡಳಿತ ನಡೆಸಿ, ದೇಶದ ಅಭಿವೃದ್ಧಿಗೆ ಸಹಾಯಕಾರಿಯಾಗಿ, ಅಲಕ್ಷಿತ ಸಮುದಾಯಗಳು ಅಭಿವೃದ್ಧಿ ಹೊಂದಿ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತದೆ.

ಸಾಧ್ಯತೆಗಳು

೧. ಅಲಕ್ಷಿತ ಸಮುದಾಯಗಳ ಅಭಿವೃದ್ಧಿಗೆ ಸರ್ಕಾರ ರೂಪಿಸುವ ಯೋಜನೆಗಳು ಅವರನ್ನು ತಲುಪದೇ ಇರಲು ಕಾರಣಗಳನ್ನು ತಿಳಿಯಲು ಸಮೂಹ ಮಾಧ್ಯಮಗಳು ಅಲಕ್ಷಿತ ಸಮುದಾಯಗಳ ಬಗ್ಗೆ ಹೆಚ್ಚು ಆಸಕ್ತಿ ತೋರಿಸಿ, ಸಂಶೋಧನೆಗಳನ್ನು ನಡೆಸಿ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ.

೨. ಅಲಕ್ಷಿತ ಸಮುದಾಯಗಳ ಜನರು ಸ್ವಯಂ ಉದ್ಯೋಗ ಮಾಡುವಂತೆ ಪ್ರೋತ್ಸಾಹಿಸಲು ಅಲಕ್ಷಿತರಲ್ಲೇ ಶಿಕ್ಷಣ ಹೊಂದಿದವರಿಗೆ ತರಬೇತಿ ಕೊಟ್ಟು, ಸರ್ಕಾರದ ಇಲಾಖೆಯಿಂದ ಕಾರ್ಯಾಗಾರ ನಡೆಸಲು ಮಾಧ್ಯಮಗಳು ಮುಂದಾದರೆ ಅಲಕ್ಷಿತರ ಆರ್ಥಿಕ ಸ್ಥಿತಿ ಸುಧಾರಿಸಲು ಸಾಧ್ಯವಾಗುತ್ತದೆ.

೩. ದೌರ್ಜನ್ಯಕ್ಕೆ ಒಳಗಾದ ಅಲಕ್ಷಿತ ಸಮುದಾಯಗಳ ವಾಸ್ತವ ಸ್ಥಿತಿಯನ್ನು ಸಮೂಹ ಮಾಧ್ಯಮಗಳ ಮುಖಾಂತರ ಅಧ್ಯಯನ ಮಾಡಿ ಸೂಕ್ತ ಪರಿಹಾರ ಕಂಡುಕೊಳ್ಳಬಹುದಾಗಿದೆ.

೪. ಅಲಕ್ಷಿತರನ್ನು ಮುಖ್ಯವಾಹಿನಿಗೆ ತರುವಲ್ಲಿ ಇರುವ ತೊಡಕುಗಳನ್ನು ಅಧ್ಯಯನ ಮಾಡಿ ಸಮೂಹ ಮಾಧ್ಯಮದ ಮುಖಾಂತರ ಸರ್ಕಾರಕ್ಕೆ ತಿಳಿಸಿ, ಸಮಸ್ಯೆಗಳಿಗೆ ಪರಿಹಾರ ಯೋಜನೆಗಳನ್ನು ಸರ್ಕಾರದಿಂದ ರೂಪಿಸುವಂತೆ ಮಾಡಬಹುದಾಗಿದೆ.

♦♦♦

ಅನುಬಂಧ

೧. ಪರಾಮರ್ಶನ ಗ್ರಂಥಗಳು
೨. ವಕ್ತೃಗಳ ವಿವರ
೩. ಛಾಯಾಚಿತ್ರಗಳು

ಅನುಬಂಧ

೧. ಪರಾಮರ್ಶನ ಗ್ರಂಥಗಳು

೧. ಅರುಣ ಜೋಳದಕೂಡ್ಲಿಗಿ, ೨೦೧೬, **ಗಂಟಚೋರ್ ಸಮುದಾಯ**, ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ, ಬೆಂಗಳೂರು.

೨. ಅಪ್ಪಾಜಿ ಎಸ್.ಸಿಂಧೆ., ಕೆ. ಚಾವಡಿ ಲೋಕೇಶ್, ೨೦೦೮, **ಗೋಸಂಗಿ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೩. ಉಷಾರಾಣಿ ಎನ್., ೨೦೧೫, **ಸಂವಹನ ಕ್ರಿಯೆ-ಪ್ರಕ್ರಿಯೆ**, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು.

೪. ಕೃಷ್ಣಪ್ಪ ಕೆ., ೨೦೧೬, **ದಕ್ಕಲಿಗರು ಸಮುದಾಯ**, ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ, ಬೆಂಗಳೂರು.

೫. ಕೊಸಾಂಬಿ ಡಿ.ಡಿ., ಟಿ.ಎಸ್. ವೇಣುಗೋಪಾಲ್, ಶೈಲಜಾ, ೨೦೦೩, **ಪುರಾಣ ಮತ್ತು ವಾಸ್ತವ**, ಚಿಂತನ ಪ್ರಕಾಶನ, ಉತ್ತರ ಕನ್ನಡ.

೬. ಗೋಪಾಲಕೃಷ್ಣ ಪಿ. ನಾಯ್ಕ, ೧೯೯೨, **ಉತ್ತರ ಕನ್ನಡ ದರ್ಶನ**, ವಿಜಯ ಭಾರತಿ ಪ್ರಕಾಶನ, ಗೋಕರ್ಣ, ಉತ್ತರ ಕನ್ನಡ.

೭. ಗಂಗಾಧರಪ್ಪ ಎಂ., ೧೯೯೬, **ಗ್ರಾಮೀಣ ಅಭಿವೃದ್ಧಿಯಲ್ಲಿ ಪತ್ರಿಕೋದ್ಯಮಗಳ ಪಾತ್ರ**, ಉಪನ್ಯಾಸ ಗ್ರಂಥ ೪೪೪, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೮. ತಿಪ್ಪೇಸ್ವಾಮಿ ಡಿ.ಎನ್., ೨೦೧೬, **ಶಿಳ್ಳೆಕ್ಯಾತರು ಸಮುದಾಯ**, ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ, ಬೆಂಗಳೂರು.

೯. ದ್ವಾರಕಾನಾಥ್ ಸಿ.ಎಸ್., ೨೦೧೨, **ಹಿಂದುಳಿದ ವರ್ಗಗಳ ಆಯೋಗದ ತೆರೆದ ವರದಿಯ ಆಯ್ದ ಭಾಗಗಳು**, ಅವಿರತ ಪುಸ್ತಕ ಪ್ರಕಾಶನ.

೧೦. ನಾಗಮೋಹನ್‌ದಾಸ್ ಎಚ್.ಎನ್., ೨೦೧೫, **ಮಾಧ್ಯಮದಿಕ್ಕು**, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು.

೧೧. ನಾಗಭೂಷಣ ಬಗ್ಗನಾಡು, ೨೦೧೬, **ಸುಡುಗಾಡು ಸಿದ್ದ ಸಮುದಾಯ**, ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ, ಬೆಂಗಳೂರು.

೧೨. ನಾಗರಾಜ ಕುಪ್ಪೆ, ೨೦೧೩, **ಅಲೆಮಾರಿಯ ಅಂತರಂಗ**, ನವಕರ್ನಾಟಕ ಪುಸ್ತಕ ಪ್ರದರ್ಶನ, ಬೆಂಗಳೂರು.

೧೩. ನಾಗೇಶ ಕೆ. ಹೆಬ್ಬಾಲೆ, ೨೦೧೧, **ದಲಿತ ಸ್ತ್ರೀ ದೈವಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೪. ನಾಡಿಗ ಕೃಷ್ಣಮೂರ್ತಿ, ೧೯೯೬, **ಭಾರತೀಯ ಪತ್ರಿಕೋದ್ಯಮ**, ಮಂಗಳ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೫. ನಾಯಕ ಹಾ.ಮಾ., ೨೦೧೫, **ಜಾನಪದ ಸ್ವರೂಪ**, ಗೀತಾಂಜಲಿ ಪುಸ್ತಕ ಪ್ರಕಾಶನ, ಬೆಂಗಳೂರು.

೧೬. ನಾಯಕ್ ಎನ್.ಆರ್., ೧೯೮೯, **ಉತ್ತರಕನ್ನಡ ಜಿಲ್ಲೆಯ ಬುಡಕಟ್ಟು ಜನಾಂಗದ ಜಾನಪದ**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೭. ನಾಯಕ್ ಎನ್.ಆರ್., ೧೯೯೨, **ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗ**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೮. ನಾಯಕ್ ಎನ್.ಆರ್., ೨೦೦೧, **ನಾಡವರ ಸಂಸ್ಕೃತಿ**, ಜಾನಪದ ಪ್ರಕಾಶನ ಹೊನ್ನಾವರ.

೧೯. ನಿರಗುಡಿ ಎಚ್.ಬಿ., ೨೦೧೨, **ಮಾಧ್ಯಮಲೋಕ**, ರೇಣುಕಾ ಪ್ರಕಾಶನ, ಗುಲಬರ್ಗಾ.

೨೦. ರಾಜಣ್ಣ ಜಾನಕಲ್ ಎಂ., **ದಕ್ಕಲಿಗ**, ೨೦೦೮, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೨೧. ರಾಜಶೇಖರ ಜಿ.ಎಂ., ೨೦೦೨, **ಪತ್ರಿಕೋದ್ಯಮ ವರ್ಸಸ್ ಪತ್ರಿಕೋದ್ಯಮ**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೨. ರಾಮಯ್ಯ ಕೋಟಗಾನಹಳ್ಳಿ, ೧೯೯೩, **ಸಿಂಧ್ ಮಾದಿಗರ ಸಂಸ್ಕೃತಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೩. ರಮೇಶ ಸ.ಚಿ. (ಸಂ), ೨೦೦೫, **ಅಲೆಮಾರಿಗಳ ಸ್ಥಿತಿಗತಿ**, ಪ್ರಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೪. ಪರಶಿವಮೂರ್ತಿ ಡಿ.ವಿ., ೧೯೯೨, **ಸಂವಹನ ಕನ್ನಡ**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೨೫. ಪುರುಷೋತ್ತಮ ಬಿಳಿಮಲೆ (ಸಂ), ೧೯೯೪, **ಸಂವಹನ**, ಜಾನಪದ ಮಾದರಿಗಳು, ಕನ್ನಡ ಅಧ್ಯಯನ-೨, ಪು. ೨೦-೨೧.

೨೬. ಪೂರ್ಣಿಮಾ ಟಿ.ಸಿ., ೨೦೦೩, **ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡ ಅಭಿವೃದ್ಧಿ**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೭. ಪೃಥ್ವಿರಾಜ್ ಲಕ್ಕಿ, ಶಿಕಾರಿರಾಮು ಪಿ.ಎಚ್., ೨೦೦೮, **ಪಾರ್ಧಿ**, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.

೨೮. ಬೋರಲಿಂಗಯ್ಯ ಹಿ.ಚಿ., ಪ್ರಭಾಕರ್ ಎಸ್.ಎ., ೨೦೧೨, **ಕರ್ನಾಟಕ ಬುಡಕಟ್ಟು ಚಿತ್ರ ಸಂಪುಟ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೯. ಭೈರಪ್ಪ ಕೆ., ೨೦೦೬, **ಭಾರತದ ಸಮಾಜದ ಪರಂಪರೆ ಮತ್ತು ಪರಿವರ್ತನೆ**, ಸಪ್ನ ಬುಕ್‌ಹೌಸ್, ಬೆಂಗಳೂರು.

೩೦. ಭೈರೇಗೌಡ ಎಂ., ೨೦೦೨, **ಇರುಳಿಗರು ಜಾನಪದ ಅಧ್ಯಯನ**, ಸಿ.ವಿ.ಜಿ ಪ್ರಕಾಶಕರು, ಬೆಂಗಳೂರು.

೩೧. ಬೋರಲಿಂಗಯ್ಯ ಹಿ.ಚಿ., ೧೯೯೩, **ಸಿದ್ದಿಯರ ಸಂಸ್ಕೃತಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.

೩೨. ಮಧು ಗುಂಡ್ಲಪೇಟೆ, ೨೦೦೨, **ಕರ್ನಾಟಕ ಬುಡಕಟ್ಟು ಜನಾಂಗಗಳ ಅಭಿವೃದ್ಧಿ**, ಅಕ್ಷತಾ ಪ್ರಕಾಶನ, ಮೈಸೂರು.

೩೩. ಮಲ್ಲಿಕಾರ್ಜುನ ಬಿ. ಮಾನ್ಪಡೆ, ೨೦೧೬, **ಚೆನ್ನದಾಸರ್ ಸಮುದಾಯ**, ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ, ಬೆಂಗಳೂರು.

೩೪. ಮುನಿರಾಜು ಎಸ್.ಬಿ., ೨೦೦೮, **ಬುಡಕಟ್ಟು ಅಭಿವೃದ್ಧಿ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೫. ಮೇತ್ರಿ ಕೆ.ಎಂ., ೨೦೦೨: **ಬುಡಕಟ್ಟು ಕುಲಕಸುಬುಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೩೬. ಲೋಕರಾಜ ದೊಡ್ಡಮನಿ, ೨೦೦೮, **ರಾವುಲೋಳ್ ಎಸ್. ಶ್ರೀನಿವಾಸ್**, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.

೩೭. ವಡ್ಡಗೆರೆ ನಾಗರಾಜಯ್ಯ, ೨೦೧೬, **ಬುಡ್ಗ ಜಂಗಮ ಸಮುದಾಯ**, ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ, ಬೆಂಗಳೂರು.

೩೮. ವಿಶ್ವನಾಥ್ ಭಟ್, ೨೦೧೫, **ಸಂಪ್ರದಾಯ ಸೌರಭ**, ಲಕ್ಷ್ಮೀವೆಂಕಟರಮಣ ದೇವಸ್ಥಾನ, ಉಡುಪಿ.

೩೯. ವಿಶ್ವನಾಥ್ ಭಟ್, ೨೦೧೫, **ಸಂಸ್ಕೃತಿ ಸೌರಭ**, ಲಕ್ಷ್ಮೀವೆಂಕಟರಮಣ ದೇವಸ್ಥಾನ, ಉಡುಪಿ.

೪೦. ಶ್ರೀಧರ್ ದೀಕ್ಷಿತ್, ೨೦೦೪, **ಇಂಟರ್‌ನೆಟ್ ಪತ್ರಿಕೋದ್ಯಮ**, ಕರ್ನಾಟಕ ಮಾಧ್ಯಮ ಅಕಾಡೆಮಿ ಬೆಂಗಳೂರು.

೪೧. ಸವಿತಾ ನಾಯಕ (ಸಂ): ೨೦೦೦, **ಉತ್ತರ ಕನ್ನಡ ಜಿಲ್ಲೆಯ ಕೆಲವು ಬುಡಕಟ್ಟುಗಳ ಪ್ರಸಾಧನ ಕಲೆ**, ಜಾನಪದ ಪ್ರಕಾಶನ, ಹೊನ್ನಾವರ.

೪೨. ಸುಬ್ಬಣ್ಣ ರೈ ಎ., (ಸಂ), ೨೦೦೧, **ದ್ರಾವಿಡ ನಿಘಂಟು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೪೩. ಹಂಪ ನಾಗರಾಜಯ್ಯ, ೧೯೯೧, **ದ್ರಾವಿಡ ಭಾಷಾವಿಜ್ಞಾನ**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೪೪. ಹುಚ್ಚಪ್ಪ ಮಾಸ್ತರ ಕುಗ್ವೆ ಎನ್., ೨೦೧೬, **ದೀವರ ಸಾಂಸ್ಕೃತಿಕ ಸಂಕಥನ**, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.

ಇಂಗ್ಲೀಷ್ ಗ್ರಂಥಗಳು

1. Anantakrishna Iyer L.K, 1930, **The Mysore Tribes and Castes,** New Delhi Mittal Publications, Mysore University.

2. Enthoven R E: 1922, **The Tribes and Castes of Bombay,** Cosmo Publication Delhi, Vol 3.

3. Havanur L G: 1975, **The Karnataka State Commission for Backward Classes Special Report,** Govt. Press Bangalore.

4. Nagan Gowda R: 1979, **Mysore Backward Classes Committee Report**, Govt. Press Bangalore.

5. Nagan Gowda R: 1979, **Mysore Backward Classes Commission Report,** Govt. Press Bangalore.

6. Nanjundayya, H V: 1906, **The Ethnographic Survey of Mysore,** Govt. Press Bangalore.

7. Reddy O Chinnappa: 1990, **Report Of the Karnataka Third Backward Classes Commission,** Bangalore Govt. Press, Vol 2.

8. Ravivarma Kumar: 2000, **The Karnataka State Commission for Backward Classes Special Report,** Govt. Press Bangalore.

9. Shashi S S: 2006, **The World of Nomads,** Lotus Press Delhi.

10. Venkataswamy T, 1986, **Report of the Karnataka Second Backward Classes Commission,** Govt. Press Bangalore, Vol 3.

ಲೇಖನಗಳು

೧. **ಉದಯವಾಣಿ,** ದಿನ ಪತ್ರಿಕೆ, ೩೧-೦೩-೨೦೧೫.

೨. **ಪ್ರಜಾವಾಣಿ,** ೨೨-೦೩-೨೦೧೬.

೩. ಪ್ರಭಾಕರ ಎನ್.ಎಸ್. ಅವರ ಲೇಖನ **ಆದಿವಾಸಿಗಳ ಆರ್ಥಿಕತೆ ಮತ್ತು ಮುಖ್ಯವಾಹಿನಿ,** ಅನಿಕೇತನ, ದಿ.೧೦-೧೨-೨೦೧೫.

೪. ಪ್ರಭಾಕರ ಎನ್.ಎಸ್. ಅವರ ಲೇಖನ **ಬುಡಕಟ್ಟು ಅಭಿವೃದ್ಧಿ, ಮಹಾಶ್ವೇತಾದೇವಿಯವರ ಚಿಂತನೆಗಳು-೧,** ಅನಿಕೇತನ, ದಿ.೨೩-೧೨-೨೦೧೬.

೫. ರವಿಶಂಕರ್ ಎನ್., **ವಿಜಯವಾಣಿ,** ದಿನಪತ್ರಿಕೆ, ದಿನಾಂಕ ೧೭-೧೨-೨೦೧೭.

೬. ರವಿಶಂಕರ್ ಎನ್., ಲೇಖಕರು, **ಸಂವಹನ ಸಲಹೆಗಾರರು,** ವಿಜಯವಾಣಿ ಪತ್ರಿಕೆ, ೨೬-೧೧-೨೦೧೭.

೭. **ವಿಜಯವಾಣಿ,** ದಿನ ಪತ್ರಿಕೆ, ೧೭-೧೨-೨೦೧೭.

೮. **ಸಿಂಚನ,** ವಿಶೇಷಾಂಕ ೨೦೧೩, ಗುಣವತಿ ರಮೇಶ.

◆◆◆

೨. ವಕ್ತೃಗಳ ವಿವರ

ಚಪ್ಪರಬಂದ್ ಸಮುದಾಯ

೧. ಮಹಮ್ಮದ್ ಅಲಿ ವಡ್ಡೋಡಗಿ, ೫೫ ವಯಸ್ಸು, ಧಾರವಾಡ.

೨. ಉಮರ್ ಎಂ. ಬಿಜಾಪೂರ್, ೪೬ ವಯಸ್ಸು, ಧಾರವಾಡ.

೩. ಶರೀಫ. ಬಿ. ಬಳಬಟ್ಟಿ, ೪೩ ವಯಸ್ಸು, ಧಾರವಾಡ.

೪. ಮೌಲಾಸಾಬ ಎಂ.ಅಭ್ಯಾಳ, ೩೭ ವಯಸ್ಸು, ಧಾರವಾಡ.

೫. ಶಹಾಜಹಾನ್ ಆರ್.ಅಗಸಬಾಳ, ೨೭ ವಯಸ್ಸು, ಧಾರವಾಡ.

೬. ಮಾಸೂಮಸಾಬ ಹನಮಕಟ್ಟಿ, ೪೫ ವಯಸ್ಸು, ಧಾರವಾಡ.

೭. ಅಲ್ಲಾಭಕ್ಷ. ಬಿ ಕೋಡಿಹಾಳ, ೬೬ ವಯಸ್ಸು, ಧಾರವಾಡ.

೮. ನವಾಜಸಾಬ ಕವಜಗನೂರ್, ೨೮ ವಯಸ್ಸು, ಧಾರವಾಡ.

೯. ಹುಸೇನಸಾಬ ಎಂ. ಬ್ಯಾಕೋಡ, ೨೬ ವಯಸ್ಸು, ಧಾರವಾಡ.

೧೦. ಖಲಂದರ್ ಎಚ್. ಹುಲ್ಲೂರ, ೪೨ ವಯಸ್ಸು, ಧಾರವಾಡ.

೧೧. ಸಲೀಮ್ ಪೀರ್‌ಜಾಡೆ, ೪೫ ವಯಸ್ಸು, ಗದಗ.

೧೨. ರಾಜೇಸಾಬ್.ಐ. ಚಪ್ಪರ್‌ಬಂದ್, ೨೬ ವಯಸ್ಸು, ಗದಗ.

೧೩. ರಾಜಮಾ ಬಳಬಟ್ಟಿ, ೩೫ ವಯಸ್ಸು, ಧಾರವಾಡ.

೧೪. ಹಸನ ಸಾಬ ಬಳ್ಳಾರಿ, ೨೬ ವಯಸ್ಸು, ಧಾರವಾಡ.

೧೫. ಹಲೀಮಾ ಮವಲಾಸಾಬ, ೪೪ ವಯಸ್ಸು, ನಂದಿಹಾಳ, ಗದಗ.

೧೬. ಗೌಸ್‌ಪಾಕ್ ಹಸನಸಾಬ ರಾಜನಾಳ, ೪೯ ವಯಸ್ಸು, ಗದಗ.

೧೭. ಸುಲ್ತಾನಸಾಬ ಬುಡನ್‌ಸಾಬ, ೪೭ ವಯಸ್ಸು, ಹುನಗುಂದ, ಧಾರವಾಡ.

೧೮. ಜನತ್ ಬೀ ಮಹ್ಮದಅಲಿ ಬಳಬಟ್ಟಿ, ೫೮ ವಯಸ್ಸು, ಧಾರವಾಡ.

೧೯. ರಫೀಕ್ ಮೌಲಾ ಸಾಬ ಕಂದಗಲ್, ೭೨ ವಯಸ್ಸು, ಧಾರವಾಡ.

೨೦. ಮೌಲಾಲಿ ಪುಂಗೊವಾಲೆ, ೩೭ ವಯಸ್ಸು, ಧಾರವಾಡ.

೨೧. ಮಹ್ಮದ್ ಹುಸೇನ ಜ್ಯಾಕೋಡ್, ೪೩ ವಯಸ್ಸು, ಧಾರವಾಡ.

೨೨. ಸಲೀಂ ಪೀರಜಾದೆ, ೪೭ ವಯಸ್ಸು, ಧಾರವಾಡ.

೨೩. ಜಾಕೀರ ಹುಸೇನ ಮುನ್ನಾ, ೪೧ ವಯಸ್ಸು, ಧಾರವಾಡ.

೨೪. ಮೌಲಾಲಿ ಪುಂಗಿಮಲೆ, ೩೬ ವಯಸ್ಸು, ಧಾರವಾಡ.

೨೫. ಝಾಕೀರ ಹು ಬಳಬಟ್ಟಿ, ೨೫ ವಯಸ್ಸು, ಧಾರವಾಡ.

ಶೀಲಿಗರು

೧. ಗಣಪತಿ ಪುಟ್ಟ ಗೌಡ, ೩೬ ವಯಸ್ಸು, ಕವಲದ್ದ.

೨. ವೀರಭದ್ರ ಹುಲಿಯಾ ಗೌಡ, ೩೫ ವಯಸ್ಸು, ಕವಲದ್ದ.

೩. ಗಿರಿಯಾ ಶಿವು ಗೌಡ, ೨೬ ವಯಸ್ಸು, ಕವಲದ್ದ.

೪. ಸೀತೆ ದ್ಯಾವ ಗೌಡ, ೪೭ ವಯಸ್ಸು, ಕವಲದ್ದ.

೫. ಮಾದೇವಿ ಗಣಪ ಗೌಡ, ೫೮ ವಯಸ್ಸು, ಕವಲದ್ದ.

೬. ಈಶ್ವರ ತಿಮ್ಮಾ ಗೌಡ, ೬೩ ವಯಸ್ಸು, ಕವಲದ್ದ.

೭. ಕೆರಿಯಾ ಸುಬ್ಬ ಗೌಡ, ೬೮ ವಯಸ್ಸು, ಅಡೆಗದ್ದೆ.

೮. ಹುಲಿಯಾ ಬೀರಾ ಗೌಡ, ೨೭ ವಯಸ್ಸು, ಅಡೆಗದ್ದೆ.

೯. ಕಮಲಾಕರ ಮರಿಯಾ ಗೌಡ, ೩೮ ವಯಸ್ಸು, ಶೀರ್ಲಬೈಲ್.

೧೦. ರಾಮಚಂದ್ರ ತಿಮ್ಮಾ ಗೌಡ, ೩೫ ವಯಸ್ಸು, ಶೀರ್ಲಬೈಲ್.

೧೧. ಸುಬ್ಬಾ ದ್ಯಾವ ಗೌಡ, ೪೬ ವಯಸ್ಸು, ಶೀರ್ಲಬೈಲ್.

೧೨. ಬೀರಾ ಪುಟ್ಟ ಗೌಡ, ೪೯ ವಯಸ್ಸು, ಶೀರ್ಲಬೈಲ್.

ಚೆನ್ನದಾಸರ್ ಸಮುದಾಯ

೧. ದಶವಂತ ಚಂದ್ರಶೇಖರ ಕಲ್ಲಪ್ಪ, ೫೩ ವಯಸ್ಸು, ಬೆಂಗಳೂರು.

೨. ದಾಸರ ಟಿ.ಕೆ., ೬೩ ವಯಸ್ಸು, ಬೆಂಗಳೂರು.

೩. ಗಣೇಶದಾಸ್, ೨೭ ವಯಸ್ಸು, ಬೆಂಗಳೂರು.

೪. ಭಾಸ್ಕರದಾಸ್, ೩೮ ವಯಸ್ಸು, ಬೆಂಗಳೂರು.

೫. ಏಕನಾಥ ದಾಸರ, ೪೯ ವಯಸ್ಸು, ಬೆಂಗಳೂರು.

೬. ಹುಲ್ಲೆನ್ನವರ ಯಲ್ಲಪ್ಪ ಹನುಮಂತ, ೫೩ ವಯಸ್ಸು, ಬೆಂಗಳೂರು.

೭. ತಿಪ್ಪಣ್ಣ, ೬೧ ವಯಸ್ಸು, ಬೆಂಗಳೂರು.

೮. ಜಯಣ್ಣ, ೩೯ ವಯಸ್ಸು, ಬೆಂಗಳೂರು.

೯. ರೇಣುಕಾ ಅಶೋಕ ಚಿಮ್ಮಲ್, ೪೦ ವಯಸ್ಸು, ಬೆಂಗಳೂರು.

೧೦. ಸತ್ಯಾನಂದ, ೨೮ ವಯಸ್ಸು, ಬೆಂಗಳೂರು.

ಮೊಗವೀರ ಸಮುದಾಯ

೧. ಮಹೇಂದ್ರ ಕಂಚನ್, ಹಂದಟ್ಟು, ೨೯ ವಯಸ್ಸು, ಕೋಟಾ.

೨. ಗುರುವಾ ಶಿರಿಯನ್, ಹಂದಟ್ಟು, ೩೨ ವಯಸ್ಸು, ಕೋಟಾ.

೩. ಸಂತೋಷ ಕೆ. ಕೋಟೇಶ್ವರ, ೩೬ ವಯಸ್ಸು, ಕುಂದಾಪುರ.

೪. ಮಂಜುನಾಥ ಮೊಗವೀರ, ೬೫ ವಯಸ್ಸು, ಹಂದಟ್ಟು, ಕೋಟಾ.

೫. ದಾಸ ಶಿರಿಯಾನ್, ೩೫ ವಯಸ್ಸು, ಪಾರಂಪಳ್ಳಿ, ಕೋಟಾ.

೬. ರಮೇಶ ಶಿರಿಯಾನ್, ೪೬ ವಯಸ್ಸು, ಕೋಟ, ಪಡುಕೆರೆ.

೭. ಗಣೇಶ ಶಿರಿಯಾನ್, ೪೮ ವಯಸ್ಸು, ಕೋಟ, ಪಡುಕೇರೆ.

೮. ಅಣ್ಣು ಕಾಂಚನ್, ೬೧ ವಯಸ್ಸು, ಕೋಟ, ಪಡುಕೇರೆ.

೯. ಶಾರದಾ ಮೊಗ್ಯಾರ್ತಿ, ೩೮ ವಯಸ್ಸು, ಹಂದಟ್ಟು, ಕೋಟಾ.

೧೦. ಸಂಕಿ ಮೊಗ್ಯಾರ್ತಿ, ೫೨ ವಯಸ್ಸು, ಹಂದಟ್ಟು, ಕೋಟಾ.

೧೧. ಲಕ್ಷ್ಮೀ ಮೊಗ್ಯಾರ್ತಿ, ೫೬ ವಯಸ್ಸು, ಹಂದಟ್ಟು, ಕೋಟಾ.

೧೨. ಸುರೇಶ ಶಿರಿಯಾನ್, ೨೩ ವಯಸ್ಸು, ಮಣೂರು, ಕೋಟಾ.

೧೩. ಸುಜೇಂದ್ರ ಶಿರಿಯಾನ್, ೩೧ ವಯಸ್ಸು, ಮಣೂರು, ಕೋಟಾ.

೧೪. ಶೈಲಜಾ ಕಾಂಚನ್ ಪಾರಂಪಳ್ಳಿ, ೨೮ ವಯಸ್ಸು, ಕೋಟಾ.

೧೫. ಶಾಲಿನಿ ಕಾಂಚನ್ ಪಾರಂಪಳ್ಳಿ, ೩೫ ವಯಸ್ಸು, ಕೋಟಾ.

ಮುಕ್ರಿ ಸಮುದಾಯ

೧. ನಾಗು ಮುಕ್ರಿ, ೪೨ ವಯಸ್ಸು, ದೀವಗಿ, ತಾ., ಕುಮಟಾ.

೨. ನಾರಾಯಣ ಮುಕ್ರಿ, ೩೪ ವಯಸ್ಸು, ದೀವಗಿ, ತಾ., ಕುಮಟಾ.

೩. ಮಂಜುನಾಥ ಮುಕ್ರಿ, ೪೫ ವಯಸ್ಸು, ಕಡತೋಕ, ತಾ ಹೊನ್ನಾವರ.

೪. ರಾಮ ಮುಕ್ರಿ, ೩೩ ವಯಸ್ಸು, ಕರ್ಕಿ ಕಡತೋಕ, ತಾ ಹೊನ್ನಾವರ.

೫. ನಾಗರತ್ನ ಮುಕ್ರಿ, ೨೮ ವಯಸ್ಸು, ಕಡತೋಕ, ತಾ ಹೊನ್ನಾವರ.

೬. ಸರೋಜ ಮುಕ್ರಿ, ೫೨ ವಯಸ್ಸು, ಹೆಗಡೆ ತಾ ಕುಮಟಾ.

೭. ಕೃಷ್ಣ ನಾಗು ಮುಕ್ರಿ, ೩೮ ವಯಸ್ಸು, ಹೆಗಡೆ ತಾ ಕುಮಟಾ.

೮. ಸೀತಾ ಮುಕ್ರಿ, ೩೧ ವಯಸ್ಸು, ಮಿರ್ಜಾನ್ ತಾ ಕುಮಟಾ.

೯. ಕಮಲಾ ಮುಕ್ರಿ, ೫೨ ವಯಸ್ಸು, ಮಿರ್ಜಾನ್ ತಾ ಕುಮಟಾ.

೧೦. ವಾಸುದೇವ ಮುಕ್ರಿ, ೬೧ ವಯಸ್ಸು, ಮಿರ್ಜಾನ್ ತಾ ಕುಮಟಾ.

ಬಿಲ್ಲವ ಸಮುದಾಯ

೧. ಲಕ್ಷ್ಮಣ ಪೂಜಾರಿ, ೩೫ ವಯಸ್ಸು, ಹಂದಟ್ಟು, ಕೋಟಾ.

೨. ಸಂಜೀವ ಪೂಜಾರಿ, ೩೯ ವಯಸ್ಸು, ಪಾರಂಪಳ್ಳಿ, ಕೋಟಾ.

೩. ತೌಡ ಬಿಲ್ಲವ, ೫೮ ವಯಸ್ಸು, ಪಡುಕೆರೆ, ಕೋಟಾ.

೪. ಸೀತು ಪೂಜಾರ್ತಿ, ೪೩ ವಯಸ್ಸು, ಕದ್ರಿಕಟ್ಟು, ಕೋಟಾ.

೫. ರಾಧ ಪೂಜಾರ್ತಿ, ೫೫ ವಯಸ್ಸು, ಹಂದಟ್ಟು, ಕೋಟಾ.

೬. ನರಸಿ ಪೂಜಾರ್ತಿ, ೪೧ ವಯಸ್ಸು, ಹಂದಟ್ಟು, ಕೋಟಾ.

೭. ಗಣೇಶ ಪೂಜಾರಿ, ೨೬ ವಯಸ್ಸು, ಹಂದಟ್ಟು, ಕೋಟಾ.

೮. ಕೇಶವ ಪೂಜಾರಿ, ೩೨ ವಯಸ್ಸು, ಹಂದಟ್ಟು ಕೋಟಾ.

೯. ರಾಘು ಪೂಜಾರಿ, ೩೯ ವಯಸ್ಸು, ಪಡುಕೆರೆ, ಕೋಟಾ.

೧೦. ಚಾಂಪ ಬಿಲ್ಲವ, ೪೭ ವಯಸ್ಸು, ಪಡುಕೆರೆ, ಕೋಟಾ.

೧೧. ನರಸಿಂಹ ಕೋಟ್ಯಾನ್, ೩೧ ವಯಸ್ಸು, ಪಾರಂಪಳ್ಳಿ, ಕೋಟಾ.

೧೨. ಲಕ್ಷ್ಮೀ ಸಾಲಿಯಾನ್, ೪೬ ವಯಸ್ಸು, ಕದ್ರಿಕಟ್ಟು, ಕೋಟಾ.

೧೩. ಗಿರಿಜಾ ಪೂಜಾರ್ತಿ, ೨೩ ವಯಸ್ಸು, ತೋಡಕಟ್ಟು, ಕೋಟಾ.

ಅಗೇರ ಸಮುದಾಯ

೧. ಶ್ರೀ ಸುರೇಶ ಸುಬ್ರಾಯ ಅಗೇರ, ೫೮ ವಯಸ್ಸು, ಕರಿಕಲ್ಲಬೊಳೆ.

೨. ಶ್ರೀ ಶೀವು ಪೊಕ್ಕ ಅಗೇರ, ೪೪ ವಯಸ್ಸು, ಹಿಲ್ಲೂರು.

೩. ಶ್ರೀಮತಿ ಶಾಂತಾ ಬುದ್ಧ ಅಗೇರ, ೪೨ ವಯಸ್ಸು, ಸುರ್ವೆ.

೪. ಶ್ರೀ ಸುಕ್ರು ಬರಮು ಅಗೇರ, ೪೧ ವಯಸ್ಸು, ಸುರ್ವೆ.

೫. ಶ್ರೀ ನಾಗೇಶ ಬೊಮ್ಮಯ್ಯ ಅಗೇರ, ೫೩ ವಯಸ್ಸು, ಕರಿಕಲ್ಲಬೊಳೆ.

೬. ಶ್ರೀ ಗಣಪತಿ ದಾನು ಅಗೇರ, ೬೨ ವಯಸ್ಸು, ಹಿಲ್ಲೂರು.

೭. ಶ್ರೀ ಗಿರಿಯಾ ಜಾರು ಅಗೇರ, ೬೭ ವಯಸ್ಸು, ಕರಿಕಲ್ಲಬೊಳೆ.

೮. ಶ್ರೀ ರಮೇಶ ಓಬು ಅಗೇರ, ೨೮ ವಯಸ್ಸು, ಕಣಗಿಲ.

೯. ಶ್ರೀ ಹಿರಿಯಾ ಜಾರು ಅಗೇರ, ೫೭ ವಯಸ್ಸು, ಕಣಗಿಲ.

೧೦. ಶ್ರೀ ವೆಂಕಪ್ಪ ಬೀರ ಅಗೇರ, ೫೧ ವಯಸ್ಸು, ಕಣಗಿಲ.

◆◆◆

೩. ಛಾಯಾಚಿತ್ರಗಳು

ಚಪ್ಪರಬಂದ್ ಸಮುದಾಯ



ಚಪ್ಪರ್‌ಬಂದ್ ಸಮುದಾಯದ ಮನೆ



ಮನೆಕೆಲಸದಲ್ಲಿ ನಿರತಳಾದ ಚಪ್ಪರ್‌ಬಂದ್ ಮಹಿಳೆ




ಚಪ್ಪರ್‌ಬಂದ್ ಮಹಿಳೆ ತನ್ನ ಮನೆಯ ಮುಂದೆ



ಚಪ್ಪರ್‌ಬಂದ್ ಜನಾಂಗದ ಆಧುನಿಕ ಮನೆ

ಶೀಲಿಗ ಸಮುದಾಯ



ವನದೇವಿ ಹಬ್ಬದ ಆಚರಣೆ



ಶೀಲಿಗ ಸಮುದಾಯದ ಹಿರಿಯ (ಗುರಿಕಾರ)



ಶೀಲಿಗ ಮಹಿಳೆ ತನ್ನ ಮನೆಯ ಮುಂದೆ



ಶೀಲಿಗ ಮಕ್ಕಳು



ವನದೇವಿ ಹಬ್ಬದ ದೇವತೆ

ಚೆನ್ನದಾಸರ ಸಮುದಾಯ



ಸಾಂಪ್ರದಾಯಿಕ ಕಾರ್ಯಕ್ರಮದಲ್ಲಿ ಚೆನ್ನದಾಸರು



ವೃತ್ತಿನಿರತ ಚೆನ್ನದಾಸರು



ಚೆನ್ನದಾಸರ ಸಮುದಾಯದ ಮಕ್ಕಳು ತಾಯಿಯೊಂದಿಗೆ



ಚೆನ್ನದಾಸರ ಸಮುದಾಯದ ಮಕ್ಕಳು ತಾಯಿಯೊಂದಿಗೆ

ಮೊಗವೀರ ಸಮುದಾಯ




ಮೊಗವೀರರ ಮನೆ



ಸಮುದ್ರದಿಂದ ಮೀನು ತಂದು ದಡದಲ್ಲಿ ಆರಿಸುತ್ತಿರುವುದು



ಮೊಗವೀರರ ಬಯಲು ಸ್ನಾನ ಗೃಹ



ದೈವಕ್ಕೆ ಇಟ್ಟ ಎಡೆ




ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮುಕ್ರಿಯರು



ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮುಕ್ರಿಯರು



ಮುಕ್ರಿ ವೃದ್ಧ ತನ್ನ ಮೊಮ್ಮಗುವಿನೊಂದಿಗೆ



ಕೆಲಸಕ್ಕೆ ತೆರಳುತ್ತಿರುವ ಮುಕ್ರಿ ಸ್ತ್ರೀಯರು

ಬಿಲ್ಲವ ಸಮುದಾಯ



ಬಿಲ್ಲವರ ದೇವಸ್ಥಾನ



ಬಿಲ್ಲವ ಗುರಿಕಾರರ ಮನೆ



ಬಿಲ್ಲವರ ಮನೆ



ಬಿಲ್ಲವರ ಹಿರಿಯ ವ್ಯಕ್ತಿಯ ಸಮಾಧಿ

ಅಗೇರ ಸಮುದಾಯ



ಉಪ್ಪು ತಯಾರಿಕೆಯಲ್ಲಿ ನಿರತ ಅಗೇರರು



ಉಪ್ಪು ತಯಾರಿಕೆಯಲ್ಲಿ ನಿರತ ಅಗೇರರು



ಉಪ್ಪು ತಯಾರಿಕೆಯಲ್ಲಿ ನಿರತ ಅಗೇರರು



ಉಪ್ಪು ತಯಾರಿಕೆಯಲ್ಲಿ ನಿರತ ಅಗೇರರು



ಮಾಧ್ಯಮದವರೊಂದಿಗೆ ಚರ್ಚೆ ನಡೆಸುತ್ತಿರುವುದು
(ಕನ್ನಡಪ್ರಭ ಸಂಪಾದಕರಾದ ರವಿ ಹೆಗಡೆಯವರೊಂದಿಗೆ)

